ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಶೋಭಾ ಚಪ್ಪರದಳ್ಳಿಮಠ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೦

ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಶೋಭಾ ಚಪ್ಪರದಳ್ಳಿಮಠ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ದೃಢೀಕರಣ ಪತ್ರ

ಶ್ರೀಮತಿ ಶೋಭಾ ಚಪ್ಪರದಳ್ಳಿಮಠ ಇವರು ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

3/3/10

(ಡಾ. ಎಫ್. ಟಿ. ಹಳ್ಳಿಕೇರಿ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೩.೦೩.೨೦೧೦

ಪ್ರಮಾಣ ಪತ್ರ

ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಎಫ್.ಟಿ.ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೩.೦೩.೨೦೧೦

(ಶ್ರೀಮತಿ ಶೋಭಾ ಚಪ್ಪರದಳ್ಳಿಮಠ)
ಸರ್ಕಾರಿ ಪದವಿಪೂರ್ವ ಕಾಲೇಜು
ಹೊನ್ನಾಳಿ ೫೭೭೨೧೭

ಅರಿಕೆ

ಸ್ವಲ್ಪವಾದರೂ ಹೊಸದೆನ್ನಿಸುವ ಸಂಶೋಧನ ಕೆಲಸ ಮಾಡಬೇಕೆಂಬ ಹಂಬಲ ನನ್ನೊಳಗೆ ಯಾವತ್ತೂ ತುಡಿಯುತ್ತಲೇ ಇತ್ತು. ಅದಕ್ಕೆ ಜೀವ ತುಂಬಿದಂತೆ ೨೦೦೫ನೆಯ ಇಸ್ವಿಯ ಒಂದು ದಿನ ಸಹೋದರ ಡಾ. ಬಿ.ಜಿ.ಬಿರಾದಾರ ಅವರು ದೂರವಾಣಿಯ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಕುರಿತು ತಿಳಿಸಿದರು. ನನ್ನ ಮಗ ಚಿಕ್ಕವನಾದ್ದರಿಂದ ಹಿಂಜರಿಕೆಯ ಮಾತುಗಳನ್ನಾಡಿದೆ. ಇದೇ ಸಕಾಲವೆಂದು ಭಾವಿಸಿ ಮುನ್ನುಗ್ಗಬೇಕೆಂದು ಪ್ರೇರೇಪಿಸಿದರು. ಅವರ ಒತ್ತಾಸೆಯ ಮೇರೆಗೆ ಅವರು ಸಂಶೋಧನಾಕಾರ್ಯ ಕೈಗೊಂಡಿದ್ದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಹೋದೆ. ಆಗ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ ಎಫ್.ಟಿ.ಹಳ್ಳಿಕೇರಿಯವರು ಕೋಳೂರ ಶಂಕರ ಕವಿಯ ಸಮಗ್ರ ಸಾಹಿತ್ಯ ಎಂಬ ವಿಷಯವನ್ನು ಸೂಚಿಸಿ, ಮಾರ್ಗದರ್ಶಕರಾಗಲು ಒಪ್ಪಿಗೆ ನೀಡಿದರು. ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಮೇಲೆ ನವಮೋಹನ ತರಂಗಿಣಿ ಮತ್ತು ಬೆಜ್ಜವಾಡಿ ಮಾಧವಾಂಕ ಕಾವ್ಯಗಳನ್ನು ನೀಡಿ ಮೊದಲು ಪ್ರತಿ ಮಾಡಿಕೊಳ್ಳಲು ಸೂಚಿಸಿದರು. ಗ್ರಂಥ ಸಂಪಾದನೆಯ ಕುರಿತಾಗಿ ಕೆಲವು ಸಲಹೆಗಳನ್ನು ನೀಡಿದರು. ಈ ಕೃತಿಗಳ ಪ್ರತಿಯ ಕಾರ್ಯದಲ್ಲಿ ತೊಡಗಿಕೊಂಡಾಗ ಕೆಲಸದ ಗಂಭೀರತೆಯ ಅರಿವಾಗತೊಡಗಿತು. ಮಾಧವಾಂಕ ಕಾವ್ಯವನ್ನು ಪ್ರತಿ ಮಾಡುವ ಸಂದರ್ಭದಲ್ಲಂತೂ ಕಾಲೇಜು, ಮನೆ ಎರಡನ್ನೂ ನಿಭಾಯಿಸಿಕೊಂಡು ಸಂಶೋಧನಾಕಾರ್ಯ ನಿರ್ವಹಿಸುವ ಬಗ್ಗೆ ಅಳುಕುಂಟಾಗತೊಡಗಿತು. ಆದರೆ ಪ್ರಗತಿ ಪರಿಶೀಲನ ಸಭೆಗೆ ಹೋದಾಗ ನನ್ನ ಮಾರ್ಗದರ್ಶಕರನ್ನೊಳಗೊಂಡು ಹಸ್ತಪ್ರತಿಶಾಸ್ತ್ರ ವಿಭಾಗದ ಎಲ್ಲಾ ಪ್ರಾಧ್ಯಾಪಕರು ಮೆಚ್ಚುಗೆ ಸೂಚಿಸಿ ಆಡಿದ ಮಾತುಗಳು ನನ್ನಲ್ಲಿ ಆಶಾಭಾವ ಮೂಡಿಸಿದವು. ಸಂಗ್ರಹ ಕಾರ್ಯ ಮುಗಿಯುತ್ತಲೇ ಮಾರ್ಗದರ್ಶಕರ ಸಲಹೆಯಂತೆ ವರ್ಗೀಕರಣ ಮಾಡಿಕೊಂಡು ಬರವಣಿಗೆಗೆ ತೊಡಗಿದೆ. ಆರಂಭದಲ್ಲೇ ವಿಘ್ನಗಳು ಎದುರಾದವು. ನೂರರ ಅಂಚಿನಲ್ಲಿದ್ದ ಪ್ರೀತಿಯ ಅಜ್ಜನ ಸಾವು. ಅತ್ತೆಯ ತೀವ್ರ ಅನಾರೋಗ್ಯ, ಕೆಲವು ತಿಂಗಳುಗಳ ಅಂತರದಲ್ಲಿಯೇ ಕಿರುಹರೆಯದ ಇಬ್ಬರು ಪ್ರೀತಿಯ ತಮ್ಮಂದಿರ ಸಾವಿನ ಆಘಾತದಿಂದ ತತ್ತರಿಸಿ ಹೋದೆ. ಈ ಸಂದರ್ಭದಲ್ಲಿ ನನ್ನ ಮಾರ್ಗದರ್ಶಕರಾದ ಡಾ. ಹಳ್ಳಿಕೇರಿಯವರು ಜೀವನ ಅಂದ್ರ ಇದssರೀ ಮೇಡಂ, ಇದಕ್ಕೆಲ್ಲ ಹೆದರ್ಕೊಬಾರ್ದು, ಇಷ್ಟು ವರ್ಷ ಶ್ರಮ ಹಾಕೀರಿ, ೬ ತಿಂಗಳು ಅವಧಿ ವಿಸ್ತರಣೆಗೆ ಅನುಮತಿ ಕೇಳೋಣ. ಕೆಲ್ಸ ನಿಲ್ಲಿಸಬ್ಯಾಡ್ರಿ ಎಂದು ಧೈರ್ಯ ತುಂಬಿದರು. ಅವರ ಅಪಾರ

ತಾಳ್ಮೆ, ಮಾರ್ಗದರ್ಶನ, ಸೂಕ್ತ ಸಲಹೆ-ಸಹಕಾರ ಮಾನವೀಯ ಅಂತಃಕರಣಗಳೇ ಈ ಮಹಾಪ್ರಬಂಧ ರೂಪುಗೊಳ್ಳಲು ಕಾರಣವೆಂದರೆ ಅತಿಶಯೋಕ್ತಿಯಾಗದು. ಅವರಿಗೆ ನನ್ನ ಕೃತಜ್ಞತೆಗಳು.

ಪಿಎಚ್.ಡಿ ಅಧ್ಯಯನಕ್ಕೆ ಅವಕಾಶಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಹಾಗೂ ಇಂದಿನ ಕುಲಪತಿಗಳಾದ ಡಾ. ಎ.ಮುರಿಗೆಪ್ಪ, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ, ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರಿಗೆ ವಂದನೆಗಳು.

ಈ ಮಹಾಪ್ರಬಂಧ ರೂಪುಗೊಳ್ಳುವಲ್ಲಿ ಸಲಹೆ ಸಹಕಾರ ನೀಡಿ ಪ್ರೋತ್ಸಾಹಿಸಿದ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಸ್.ಎಸ್.ಅಂಗಡಿ, ಡಾ. ಕೆ.ರವೀಂದ್ರನಾಥ, ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಆರ್. ಚನ್ನವೀರಪ್ಪ ಹಾಗೂ ಇತರ ಸಿಬ್ಬಂದಿಯವರಿಗೆ ಕೃತಜ್ಞತಾಪೂರ್ವಕ ನಮಸ್ಕಾರಗಳು.

ವಿಶೇಷ ಕೃತಜ್ಞತೆಯಿಂದ ನೆನಯಲೇಬೇಕಾದ ಇಬ್ಬರು ಮಹನೀಯರೆಂದರೆ ನನ್ನ ವಿದ್ಯಾಗುರುಗಳೂ ಹಾಗೂ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಬಸವ ಅಧ್ಯಯನ ಪೀಠದ ಮುಖ್ಯಸ್ಥರೂ ಆದ ಡಾ. ವೀರಣ್ಣ ರಾಜೂರ ಮತ್ತು ಸಹೋದರ ಡಾ ಬಿ.ಜಿ.ಬಿರಾದಾರ ಅವರು. ಡಾ. ವೀರಣ್ಣ ರಾಜೂರ ಅವರು ಅಗತ್ಯ ಸಲಹೆ ಸೂಚನೆಗಳೊಂದಿಗೆ ಮಾರ್ಗದರ್ಶನ ನೀಡಿ ನನ್ನ ಮಹಾಪ್ರಬಂಧಕ್ಕೊಂದು ನಿಶ್ಚಿತರೂಪ ಬರಲು ಕಾರಣರಾದವರು ಅವರಿಗೆ ಭಕ್ತಿಪೂರ್ವಕ ನಮನಗಳು. ಡಾ. ಬಿ.ಜಿ.ಬಿರಾದಾರ ಅವರು ಅನೇಕ ಅಮೂಲ್ಯ ಆಕರಗ್ರಂಥಗಳನ್ನು ಒದಗಿಸಿದ್ದಲ್ಲದೆ, ಹೆಜ್ಜೆ ಹೆಜ್ಜೆಗೆ ಎಲ್ಲ ಸಂದರ್ಭಗಳಲ್ಲೂ ಸೂಕ್ತ ಸಲಹೆ ನೀಡಿ ಪ್ರೋತ್ಸಾಹಿಸಿದ್ದಾರೆ. ಹಾಗೆಯೇ ಸಹೋದರ ಡಾ. ಜಿನದತ್ತ ಹಡಗಲಿ, ಸುಜಾತಾ ಹಡಗಲಿ, ಡಾ. ಓಂಕಾರ ಕಾಕಡೆ, ಶ್ರೀಮತಿ ಕಾಕಡೆ, ಶ್ರೀಮತಿ ಯಶೋದಾ ಹಳ್ಳಿಕೇರಿ, ಶ್ರೀಮತಿ ಅಕ್ಕಮಹಾದೇವಿ ಬಿರಾದಾರ ಇವರೆಲ್ಲರಿಗೆ ವಂದನೆಗಳು.

ನನ್ನ ಸಂಶೋಧನ ಕಾರ್ಯಕ್ಕೆ ಒಪ್ಪಿಗೆಯಿತ್ತು ಪ್ರೋತ್ಸಾಹಿಸಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಂದಿನ ಪ್ರಾಚಾರ್ಯರಾದ ಶ್ರೀ ಬಿ.ಎನ್.ಮೂರ್ತಿ, ತಮ್ಮಲ್ಲಿದ್ದ ಇತಿಹಾಸ ಪುಸ್ತಕಗಳನ್ನಿತ್ತು ಸಹಕರಿಸಿದ ಉಪನ್ಯಾಸಕರಾದ ಶ್ರೀ ಕೆ.ಸಿದ್ದಪ್ಪ ಮತ್ತು ಸಮಸ್ತ ಸಿಬ್ಬಂದಿ ವರ್ಗದವರಿಗೆ ವಂದನೆಗಳು.

ನನ್ನ ಅಧ್ಯಯನಕ್ಕೆ ಸಂಬಂಧಿಸಿದ ಆಕರಗ್ರಂಥಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಗ್ರಂಥಾಲಯ, ಬಸವೇಶ್ವರ ಪೀಠದ ಗ್ರಂಥಾಲಯ, ಕನ್ನಡ ಸಂಶೋಧನ ಸಂಸ್ಥೆ ಹಾಗೂ ಹೊನ್ನಾಳಿಯ ಮೃತ್ಯುಂಜಯ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯಗಳಿಂದ ಪಡೆದಿದ್ದೇನೆ. ವಿಶೇಷವಾಗಿ ಕೇಳಿದ ಪುಸ್ತಕಗಳನ್ನೆಲ್ಲಾ ಒದಗಿಸಿಕೊಟ್ಟು ಸಹಕರಿಸಿದ ಕನ್ನಡ ಅಧ್ಯಯನ ಪೀಠದ ಗ್ರಂಥಾಲಯಾಧಿಕಾರಿಗಳಾದ ಡಾ. ಮಲ್ಲಿಕಾರ್ಜುನ ಮತ್ತು ಮೃತ್ಯುಂಜಯ, ಪ್ರಥಮ ದರ್ಜೆ ಕಾಲೇಜಿನ ಪ್ರಧಾನ ಗ್ರಂಥಪಾಲಕರಾದ ಡಾ. ಕೊಟ್ರೇಶ್ ಉತ್ತಂಗಿ ಅವರ ಸಹಕಾರವನ್ನು ಇಲ್ಲಿ ನೆನೆಯುತ್ತೇನೆ.

ನನ್ನ ಜೀವನದಲ್ಲಿ ಮರೆಯಲಾಗದ ಗುರುಗಳೆಂದರೆ ಡಾ. ಎಂ.ಎಂ.ಕಲಬುರ್ಗಿ, ದಿ. ಡಾ. ಬಿ.ಆರ್. ಹಿರೇಮಠ, ಡಾ. ಎ.ಮುರಿಗೆಪ್ಪ, ಡಾ. ಹೆಚ್.ಎಂ.ಮಹೇಶ್ವರಯ್ಯ, ರಾಜೇಶ್ವರಿ ಮಹೇಶ್ವರಯ್ಯ, ಡಾ. ಪಂಚಾಕ್ಷರಿ ಹಿರೇಮಠ, ಡಾ. ಶಾಂತಾ ಸಣ್ಣೆಲ್ಲಪ್ಪನವರ, ಕರ್ನಾಟಕ ಕಾಲೇಜಿನ ಗುರುಗಳಾದ ಪ್ರೊ. ಬಿ.ವಿ.ಗುಂಜೆಟ್ಟಿ, ಪ್ರೊ. ಹೆಚ್.ಎಂ.ಬೀಳಗಿ, ಪ್ರೊ. ಸಂಗೊಂದಿಮಠ, ಡಾ. ಆರಾಧ್ಯಮಠ ಎಲ್ಲರ ವಾತ್ಸಲ್ಯ ಹಾರೈಕೆಗಳಿಗೆ ಮನದಲ್ಲೇ ಮಣಿಯುವೆ. ಪದೇ ಪದೇ ನನ್ನ ಕೆಲಸದ ಕುರಿತು ವಿಚಾರಿಸಿ ಪ್ರೋತ್ಸಾಹಿಸಿದ ಹೊನ್ನಾಳಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಕೆ.ರುದ್ರಪ್ಪ, ನಿವೃತ್ತ ಪ್ರಾಚಾರ್ಯರಾದ ಪ್ರೊ. ಡಿ. ಶಿವರುದ್ರಪ್ಪ, ಪ್ರೊ. ಸಚ್ಚಿದಾನಂದಸ್ವಾಮಿ, ನಿವೃತ್ತ ವಾಣಿಜ್ಯ ತೆರಿಗೆ ಆಯುಕ್ತರಾದ ಶ್ರೀ ಬಸವರಾಜ ನಿಂಬಾಳ, ಪ್ರಾಚಾರ್ಯರಾದ ಶ್ರೀಮತಿ ಗಿರಿಜಾ ಕಾಡಯ್ಯನಮಠ, ಉಪನ್ಯಾಸಕರಾದ ಶ್ರೀಮತಿ ವಿಜಯಾ ಆನಂದ್ ಎಲ್ಲರಿಗೂ ವಂದನೆಗಳು.

ನನ್ನ ಶೈಕ್ಷಣಿಕ ಚಟುವಟಿಕೆಗಳಿಗೆ ಸದಾ ಬೆಂಬಲವಾಗಿ ನಿಂತು ಪ್ರೋತ್ಸಾಹಿಸಿದ ತಂದೆ-ತಾಯಿ, ಸಹೋದರರಾದ ಪಂಚಾಕ್ಷರಿ, ಹಾಲಾರಾಧ್ಯ, ಚಿಕ್ಕಪ್ಪ-ಚಿಕ್ಕಮ್ಮಂದಿರು, ನನ್ನ ಮೇಲೆ ಅಪಾರ ಪ್ರೀತಿ-ಅಭಿಮಾನಗಳನ್ನಿಟ್ಟುಕೊಂಡಿದ್ದ ನನ್ನ ತಮ್ಮಂದಿರಾದ ದಿ. ರಾಜಶೇಖರ, ದಿ. ಸಿದ್ದೇಶ, ದಿ. ವೀರೇಶ ಹಾಗೂ ದಿವಂಗತರಾದ ನನ್ನ ಅಜ್ಜ-ಅಜ್ಜಿಯರನ್ನು ಸ್ಮರಿಸಿಕೊಳ್ಳದೇ ಇರಲಾರೆ.

ಈ ಮಹಾಪ್ರಬಂಧ ಸಿದ್ಧಗೊಳ್ಳುವಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವು ನೀಡಿ ಸಹಕರಿಸಿದ ಎಲ್ಲ ಸ್ನೇಹಿತರು, ಬಂಧುಗಳಿಗೆ, ನಿಯಮಿತ ಅವಧಿಯೊಳಗೆ ಡಿ.ಟಿ.ಪಿ. ಕಾರ್ಯ ಮುಗಿಸಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಹಾಗೂ ಗಣೇಶ್ ಯಾಜಿ ದಂಪತಿಗಳಿಗೆ ಹೃತ್ಪೂರ್ವಕ ವಂದನೆಗಳು.

ಎಲ್ಲ ಸಂದರ್ಭಗಳಲ್ಲಿ ಸ್ನೇಹಿತನಂತೆ ಸಹಕರಿಸಿದ ನನ್ನ ಪತಿ ಶ್ರೀ ಜಗದೀಶ ಹಿರೇಮಠ ಹಾಗೂ ನನ್ನ ಮಗ ಚಿ. ಚಿನ್ಮಯರಿಗೆ ವಿಶೇಷ ಕೃತಜ್ಞತೆಗಳು.

ಶೋಭಾ ಚಪ್ಪರದಳ್ಳಿಮಠ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಆಕರಗಳು ಮತ್ತು ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಆಕರಗಳು ಮತ್ತು ಸ್ವರೂಪ

ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಹಾಗೂ ತಮಿಳಿನ ತರುವಾಯದ ಅತ್ಯಂತ ಪ್ರಾಚೀನವಾದ ಸಾಹಿತ್ಯವೆಂದರೆ ಕನ್ನಡ ಸಾಹಿತ್ಯ. ಭಾಷಿಕ ದೃಷ್ಟಿಯಿಂದ ಕನ್ನಡಕ್ಕೆ ಕನಿಷ್ಠ ಎರಡು ಸಾವಿರ ವರ್ಷಗಳಷ್ಟು ಸುದೀರ್ಘವಾದ ಇತಿಹಾಸವಿದೆ. ಸು. ೧೫೦೦ ವರ್ಷಗಳಷ್ಟು ಪ್ರಾಚೀನವಾದ ಸಾಹಿತ್ಯಿಕ ಇತಿಹಾಸವನ್ನು ಹೊಂದಿರುವ ಕನ್ನಡ ವಾಙ್ಮಯವು ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದುದು. ಉಪಲಬ್ಧವಾಗಿರುವ ಗ್ರಂಥಗಳ ದೃಷ್ಟಿಯಿಂದ ಹೇಳುವುದಾದರೆ ಕನ್ನಡ ಸಾಹಿತ್ಯವು ಒಂದು ಸಾವಿರ ವರ್ಷಕ್ಕೂ ಮಿಗಿಲಾದ ಹಳಮೆಯನ್ನು ಹೊಂದಿರುವುದು ತಿಳಿದುಬರುತ್ತದೆ. ಈ ಅವಧಿಯಲ್ಲಿ ನೂರಾರು ಕವಿಗಳು ಜನಿಸಿ, ಸಾವಿರಾರು ಕೃತಿಗಳನ್ನು ರಚಿಸಿ ತಮ್ಮ ಹಿರಿಮೆಯನ್ನು ಮೆರೆದಿರುವುದು ಸರ್ವವಿದಿತ ಸಂಗತಿ.

ಆದರೆ ಇನ್ನೂ ಅನೇಕ ಕೃತಿಗಳು, ಕವಿಗಳು ಅಜ್ಞಾತರಾಗಿಯೇ ಉಳಿದಿದ್ದಾರೆ. ಕಾಲಗರ್ಭದಲ್ಲಿ ಕಾರಣಾಂತರಗಳಿಂದ ಮರೆಯಾಗಿ ಹೋಗಿದ್ದಾರೆ. ಇನ್ನು ಕೆಲವರು ನಿರ್ಲಕ್ಷಿತರಾಗಿದ್ದಾರೆ. ಅಂಥ ನಿರ್ಲಕ್ಷಿತ ಕವಿಗಳ ಗುಂಪಿಗೆ ಕೋಳೂರು ಶಂಕರಕವಿ ಸೇರಿದವರಾಗಿದ್ದಾರೆ. ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿದ ಈತನು 'ಚೋರಬಸವೇಶ್ವರ ಕಾವ್ಯ'ವನ್ನು ಮಾತ್ರ ಬರೆದಿದ್ದಾನೆಂದು ''ಇಲ್ಲಿಯವರೆಗೆ ತಿಳಿಯಲಾಗಿತ್ತು. ೧೯೭೧ರಲ್ಲಿ ಈ ಕಾವ್ಯವನ್ನು ಪರಿಷ್ಕರಿಸಿದ ಎಂ.ಎಸ್.ಸುಂಕಾಪುರ ಮತ್ತು ಪಂಡಿತನಾಗಭೂಷಣ ಶಾಸ್ತ್ರಿಗಳು 'ಚೋರಬಸವೇಶ್ವರ ಕಾವ್ಯ'ದ ಪ್ರಸ್ತಾವನೆಯಲ್ಲಿ ಶಂಕರಕವಿಯು ಚೋರಬಸವೇಶ್ವರ ಕಾವ್ಯವೊಂದನ್ನೇ ರಚಿಸಿರಬೇಕೆನಿಸುತ್ತದೆ. ಮತ್ತಾವ ಕೃತಿಯನ್ನೂರಚಿಸಿದಂತೆ ಕಾಣುವುದಿಲ್ಲ. ಈ ವಿಷಯದಲ್ಲಿ ಉಳಿದ ಕವಿಗಳೂ ಮೌನ ತಾಳಿದ್ದಾರೆ''[೧] ಎಂದು ಹೇಳಿರುವರು. ಕವಿಚರಿತೆಕಾರರಾದ ಆರ್.ನರಸಿಂಹಾಚಾರ್ ಅವರನ್ನೊಳಗೊಂಡಂತೆ ಇನ್ನೂ ಅನೇಕ ವಿದ್ವಾಂಸರು ಇದೇ ಅಭಿಪ್ರಾಯ ತಳೆದಿದ್ದರು. ಆದರೆ ತಾಳೆಗರಿ ಪ್ರತಿ ಕಲ್ಲಚ್ಚಿನ ಪ್ರತಿಯ ಶೋಧದಿಂದ ಶಂಕರಕವಿಯು ಒಟ್ಟು ಆರು ಕೃತಿಗಳನ್ನು ರಚಿಸಿದ್ದಾನೆಂದು ಈಗ ತಿಳಿದುಬಂದಿದೆ.[೨] ಅವುಗಳೆಂದರೆ

೧. ಶರಣ ಮೋನಪ್ಪಯ್ಯ ಚರಿತೆ

೨. ಮಾಧವಾಂಕ ಕಾವ್ಯ

೩. ಚೋರಬಸವೇಶ್ವರ ಕಾವ್ಯ

೪. ನವಮೋಹನ ತರಂಗಿಣಿ

೫. ಸುಜ್ಞಾನ ಸುಧಾಕರ ಪಂಚವಿಂಶತಿ

೬. ಸ್ವರವಚನಗಳು

ಈ ಮೇಲೆ ಉಧೃತಗೊಂಡ ಕೃತಿಗಳ ವಿವರವಾದ ಸಮಗ್ರ ಅಧ್ಯಯನ ಇನ್ನೂ ನಡೆದಿಲ್ಲ. ಆದ್ದರಿಂದ ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯದ ಕುರಿತು ಅಧ್ಯಯನ ಕೈಗೊಳ್ಳುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ವಿಷಯದ ಮೇಲೆ ಇದುವರೆಗೆ ನಡೆದಿರುವ ಅಧ್ಯಯನ ತೀರ ಅಲ್ಪವಾಗಿದೆ. ಅದರ ವಿವರವನ್ನು ಹೀಗೆ ಸಂಗ್ರಹಿಸಬಹುದು. ಒಟ್ಟಾರೆ ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯದ ಕುರಿತು ಇಲ್ಲಿಯವರೆಗೆ ನೇರವಾದ ಬರಹ ಒಂದೂ ಬಂದಿಲ್ಲ. ಆದರೆ ಮಾಧವಾಂಕ ಕಾವ್ಯವೊಂದನ್ನು ಹೊರತುಪಡಿಸಿ ಉಳಿದ ಕೃತಿಗಳ ಕುರಿತಾಗಿ ಬೆರಳೆಣಿಕೆಯ ಲೇಖನಗಳು ರಚನೆಗೊಂಡಿವೆ.

ಡಾ. ಎಫ್.ಟಿ.ಹಳ್ಳಿಕೇರಿಯವರು 'ಶರಣ ಮೋನಪ್ಪಯ್ಯ ಚಾರಿತ್ರ'ವನ್ನು ಪ್ರಪ್ರಥಮವಾಗಿ ೨೦೦೭ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು ಇವರಿಂದ ಪ್ರಕಟವಾದ ಈ ಕೃತಿಯಲ್ಲಿ 'ಪ್ರಸ್ತಾವನೆ'ಯಲ್ಲಿ ಕೃತಿಯ ಸ್ಥೂಲ ಪರಿಚಯವನ್ನು ನೀಡಿದ್ದು, ಅಭ್ಯಾಸಿಗಳಿಗೆ ಮಾರ್ಗದರ್ಶಕವಾಗಿದೆ.

'ಮಾಧಾವಂಕ ಕಾವ್ಯ'ವು ಇನ್ನೂ ಹಸ್ತಪ್ರತಿರೂಪದಲ್ಲಿದೆ. ಡಾ. ಪಂಚಾಕ್ಷರಿ ಹಿರೇಮಠ ಮತ್ತು ಪಂಡಿತ ನಾಗಭೂಷಣ ಶಾಸ್ತ್ರಿಗಳಿಂದ ಸಂಗ್ರಹಿಸಲ್ಪಟ್ಟ ಈ ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿ ಲಭ್ಯವಿದೆ. ಇದನ್ನು ನಾನು ಪ್ರತಿ ಮಾಡಿಕೊಂಡು ಅಧ್ಯಯನಕ್ಕೆ ಬಳಸಿ ಕೊಂಡಿದ್ದೇನೆ. ಈ ಕೃತಿಗೆ ಸಂಬಂಧಪಟ್ಟಂತೆ ಯಾವ ಅಧ್ಯಯನವೂ ಇದುವರೆಗೆ ನಡೆದಿಲ್ಲ.

'ಚೋರಬಸವೇಶ್ವರ ಕಾವ್ಯ'ವನ್ನು ೧೯೭೧ರಲ್ಲಿ ಮೊಟ್ಟಮೊದಲ ಬಾರಿಗೆ ಡಾ. ಎಂ.ಎಸ್.ಸುಂಕಾಪುರ ಮತ್ತು ಪಂಡಿತ ನಾಗಭೂಷಣ ಶಾಸ್ತ್ರಿಗಳು ಪರಿಷ್ಕರಿಸಿದ್ದಾರೆ. ಶ್ರೀಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ(ಮುರುಘಾಮಠ, ಧಾರವಾಡ)ಯಿಂದ ಪ್ರಕಟವಾದ ಈ ಕೃತಿಯಲ್ಲಿ ಬೆಲೆಯುಳ್ಳ ಪ್ರಸ್ತಾವನೆ ಹಾಗೂ ಕಥಾಸಾರವನ್ನು ನೀಡಲಾಗಿದೆ. ಕೊನೆಯಲ್ಲಿ ಶಬ್ದಕೋಶವನ್ನು ಕೊಟ್ಟಿದ್ದು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾಗಿದೆ.

'ನವಮೋಹನ ತರಂಗಿಣಿ'ಯನ್ನು ಬಳ್ಳಾರಿಯ ಮಾಣಿಕ್ಯಮಂದಿರ ಬುಕ್ ಡಿಪೋ ಪ್ರೊಪ್ರೈಟರ್ ಆಗಿದ್ದ ಟಿ.ಎ.ಮಾಣಿಕ್ಯಂ ಶೆಟ್ಟಿ ಅವರು ೧೯೧೩ರಲ್ಲಿಯೇ ಇದನ್ನು ಮುದ್ರಿಸಿದ್ದಾರೆ. ಹೀಗೆ ೧೯೧೩ರಲ್ಲಿಯೇ ಈ

ಕೃತಿ ಬೆಳಕು ಕಂಡಿದ್ದರೂ ಆರ್.ನರಸಿಂಹಾಚಾರ್ ಅವರ ಕವಿಚರಿತೆಯಲ್ಲಿ ಇದು ದಾಖಲುಗೊಂಡಿಲ್ಲ. ಅಲ್ಲದೇ ಎನ್.ಅನಂತರಂಗಾಚಾರ್ ಅವರು ಮೈಸೂರು ಪ್ರಾಚ್ಯಕೋಶಾಗಾರದಲ್ಲಿದ್ದ ನವಮೋಹನ ತರಂಗಿಣಿಯ ಹಸ್ತಪ್ರತಿಯೊಂದನ್ನು ಪರಿಶೀಲಿಸಿ ೧೯೪೦ ಪ್ರಬುದ್ಧ ಕರ್ನಾಟಕ ೨೧-೪ ಪತ್ರಿಕೆಯಲ್ಲಿ ಪರಿಚಯಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ. ಆದರೆ ಅವರೂ ಸಹಿತ ಚೋರಬಸವೇಶ್ವರ ಕಾವ್ಯವನ್ನು ರಚಿಸಿದ ಕೋಳೂರು ಶಂಕರಕವಿಯೇ ಈ ಕಾವ್ಯದ ಕರ್ತೃ ಎಂಬುದನ್ನು ಹೇಳಿಲ್ಲ. ಹೀಗಾಗಿ ಇಲ್ಲಿಯವರೆಗೂ ಈತ ಚೋರಬಸವೇಶ್ವರ ಕಾವ್ಯವೊಂದನ್ನು ಮಾತ್ರ ರಚಿಸಿದ್ದಾನೆಂದು ಭಾವಿಸಲಾಗಿತ್ತು ಡಾ. ಎಫ್.ಟಿ. ಹಳ್ಳಿಕೇರಿಯವರು ಕನ್ನಡ ವಿಶ್ವವಿದ್ಯಾಲಯದ, 'ಪುಸ್ತಕ ಮಾಹಿತಿ'ಯಲ್ಲಿ ಹಳೆಯ ಪುಸ್ತಕ ಶೀರ್ಷಿಕೆಯಡಿಯಲ್ಲಿ ನವಮೋಹನ ತರಂಗಿಣಿಯನ್ನು ಪರಿಚಯಿಸಿದ್ದಾರೆ.

'ಸುಜ್ಞಾನ ಸುಧಾಕರ ಪಂಚವಿಂಶತಿ'ಯು ಇನ್ನೂ ಹಸ್ತಪ್ರತಿಯ ರೂಪದಲ್ಲಿರುವ ಕೃತಿ. ಕಾಗದ ಪ್ರತಿಯಾಗಿದ್ದು ಹಾಸನ ಜಿಲ್ಲೆ ಚೆಲುವನಹಳ್ಳಿಯ ರಾಜಶೇಖರ ಅವರ ಒಡೆತನದಲ್ಲಿದೆ.[೬] ಇದರ ಸಂಕ್ಷಿಪ್ತ ಪರಿಚಯವನ್ನು ಡಾ. ಎಫ್.ಟಿ.ಹಳ್ಳಿಕೇರಿಯವರು ತಮ್ಮ ಕಂಠಪತ್ರ-೨(ಪು.ಸಂ. ೫೫-೫೬)ರಲ್ಲಿ ಮಾಡಿ ಕೊಟ್ಟಿದ್ದಾರೆ. ಹಾಗೆಯೇ ಕೋಳೂರೇಶ ಎಂಬ ಅಂಕಿತದ ಸ್ವರವಚನಗಳಿರುವ ಕುರಿತೂ ಸಂಕ್ಷಿಪ್ತ ಪರಿಚಯ ನೀಡಿದ್ದಾರೆ.

ಹೀಗೆ ಇದುವರೆಗೆ ದೊರೆತ ಈ ಎಲ್ಲ ಬಿಡಿಯಾದ ಆಕರ ಸಾಮಗ್ರಿಯ ಜೊತೆಗೆ ವಿದ್ವಾಂಸರ ಸಂದರ್ಶನ, ಚರ್ಚೆಗಳ ಮೂಲಕ ಸಂಗ್ರಹಿಸಿದ ಸಾಮಗ್ರಿಯನ್ನು ಬಳಸಿಕೊಂಡು ಈ ಅಧ್ಯಯನಕ್ಕೆ ಸಮಗ್ರತೆಯನ್ನು ತಂದುಕೊಡಲು ಪ್ರಯತ್ನಿಸಿದ್ದೇನೆ.

ಪ್ರಸ್ತುತ ಪ್ರಬಂಧವು ೮ ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯದಲ್ಲಿ ಪ್ರಬಂಧದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿಯನ್ನು ತಿಳಿಸಲಾಗಿದೆ. ಪ್ರಸ್ತುತ ವಿಷಯದ ಮೇಲೆ ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ ಹಾಗೂ ಈಗ ನಾನು ಕೈಗೊಳ್ಳುವ ಅಧ್ಯಯನದ ಸ್ವರೂಪವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕೋಳೂರು ಶಂಕರಕವಿಯು ಬದುಕಿದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಪರಿಸರವನ್ನು ಕುರಿತು ವಿವೇಚಿಸಲಾಗಿದೆ. ೧೫ನೆಯ ಶತಮಾನದಿಂದ ೧೯ನೆಯ ಶತಮಾನದ ಕೊನೆಯವರೆಗಿನ ಅವಧಿಯನ್ನು ಡಾ.ರಂ.ಶ್ರೀ ಮುಗಳಿಯವರು -ಕುಮಾರವ್ಯಾಸಯುಗ'ವೆಂದು ಗುರುತಿಸಿದ್ದಾರೆ. ಈ ಅವಧಿಯು ವಿವಿಧ ಘುಟನೆಗಳಿಂದ ಜಟಿಲವಾಗಿದೆ. ಈ ಕಾಲದಲ್ಲಿ ಕರ್ನಾಟಕವು ಉಳಿದ ದಕ್ಷಿಣ ಭಾರತದೊಡನೆ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಹಿಂದೆಂದೂ ಕಾಣದ ಉನ್ನತಿಯ ಶಿಖರವನ್ನೇರಿತು. ಹಿಂದೆಂದೂ ತೋರದ ಅವನತಿಯ ಕಂದರದಲ್ಲಿಳಿಯಿತು.[೭]

ರಾಜಕೀಯವಾಗಿ ವಿಜಯನಗರದ ಅರಸರು, ಮೈಸೂರಿನ ಒಡೆಯರು, ದಳವಾಯಿಗಳ ಆಡಳಿತ, ಹೈದರಾಲಿ ಮತ್ತು ಆಂಗ್ಲರ ನಡುವಣ ತಿಕ್ಕಾಟಗಳು ಕರ್ನಾಟಕದಲ್ಲಿ ಸಾಕಷ್ಟು ಏಳು-ಬೀಳುಗಳಿಗೆ ಕಾರಣವಾದವು. ಈ

ಕಾಲದ ಧಾರ್ಮಿಕ ಪರಿಸರ ಒಳಗೊಳಗೇ ಅತ್ಯಂತ ಸಂಘರ್ಷಮಯವಾಗಿತ್ತು. ಶೈವ, ವೈಷ್ಣವ, ವೀರಶೈವ, ಜೈನ, ಇಸ್ಲಾಂ ಧರ್ಮಗಳು ಹಾಗೂ ಆಂಗ್ಲರ ಆಗಮನದೊಂದಿಗೆ ಕಾಣಿಸಿದ ಕ್ರೈಸ್ತಧರ್ಮ ಪರಸ್ಪರ ತಮ್ಮ ತಮ್ಮ ಮೇಲ್ಮೆಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ತೊಡಗಿದವು. ಅನಿವಾರ್ಯವಾಗಿ ಸಂಘರ್ಷವೇ ಸಮನ್ವಯಕ್ಕೆ ದಾರಿ ಮಾಡಿಕೊಟ್ಟಿತು. ಸಾಹಿತ್ಯಿಕವಾಗಿ ಎಲ್ಲ ಮತದ ಎಲ್ಲ ಪ್ರಕಾರಗಳ ಗ್ರಂಥಗಳು ರಚನೆಯಾದವು. ಕೆಳದಿ ಮುಂತಾದ ಸಣ್ಣ ರಾಜ್ಯಗಳಲ್ಲಿಯೂ ಕನ್ನಡ ಪ್ರತಿಭೆ ಬೆಳಗಿತು. ದೇಸಿ ನಿಷ್ಠವಾದ ಯುಗವಾದ ಕಾರಣ ಷಟ್ಪದಿ ಸಾಂಗತ್ಯ ತ್ರಿಪದಿ ಕೀರ್ತನೆಗಳ ಪ್ರಸಾರವು ಈ ಯುಗದಲ್ಲಿ ಹೆಚ್ಚಿದೆ ಚಂಪೂರೂಪವು ಮತ್ತೆ ತಲೆಯೆತ್ತಿದೆ. ಕವಿಗಳು ಮಹಾಭಾರತ, ರಾಮಾಯಣಗಳಂಥ ಸಿದ್ಧವಸ್ತುಗಳನ್ನು ಕೈ ಬಿಟ್ಟು ಶಿವಶರಣರ ಬದುಕನ್ನು ತಮ್ಮ ಕಾವ್ಯಕ್ಕೆ ವಸ್ತುವಾಗಿಸಿಕೊಂಡರು. ವೀರಶೈವ ಪುನರುಜ್ಜೀವನ ಕಾಲದಲ್ಲಿ ವೀರಶೈವ ಪುರಾಣ ರಚನೆಯ ಪರಂಪರೆ ಮತ್ತೆ ತಲೆಯೆತ್ತಿತ್ತು. ಉತ್ತರ ಕರ್ನಾಟಕದ ಬಹುಭಾಗದಲ್ಲಿ ಕತ್ತಲೆ ಕವಿದ ವಾತಾವರಣವಿತ್ತು. ೧೮-೧೯ನೆಯ ಶತಮಾನಗಳಲ್ಲಿ ಉಜ್ವಲವಾದ ಸಾಹಿತ್ಯ ನಿರ್ಮಾಣದ ಅಭಾವ ತಲೆದೋರಿತು. ಇಂಥ ಪರಿಸರದಲ್ಲಿ ಕೋಳೂರು ಶಂಕರಕವಿಯು 'ನಿಸ್ತೇಜ ಕಾಲದ ಬೆಳ್ಳಿಕಿರಣ'ದಂತೆ ಬದುಕಿದವನಾಗಿದ್ದಾನೆ ಎಂಬುದನ್ನು ವಿವರಿಸಲಾಗಿದೆ "ಮೂರನೆಯ ಅಧ್ಯಾಯದಲ್ಲಿ" ಕೋಳೂರು ಶಂಕರಕವಿಯ ಮೊದಲಕಾವ್ಯ ಶರಣಮೋನಪ್ಪಯ್ಯ ಚಾರಿತ್ರವನ್ನು ಕುರಿತು ವಿಸ್ತೃತ ಅಧ್ಯಯನ ಕೈಗೊಳ್ಳಲಾಗಿದೆ. ಪ್ರಧಾನವಾಗಿ ತಿಂಥಿಣಿ ಮೋನಪ್ಪಯ್ಯನ ವಚನಗಳು ಹಾಗೂ ತಿಂಥಿಣಿ ಮೋನಪ್ಪಯ್ಯನನ್ನು ಕುರಿತು ಅಧ್ಯಯನ ಮಾಡಿರುವ ಡಾ. ಎಂ.ಎಂ. ಪಡಶೆಟ್ಟಿವರ ಅಧ್ಯಯನದ ವಿವರಗಳನ್ನು[೫] ಆಧಾರವಾಗಿಟ್ಟುಕೊಂಡು ಅಭ್ಯಾಸ ಕೈಗೊಳ್ಳಲಾಗಿದೆ. ಇದರ ಅಧ್ಯಯನ ಕೃತಿಯ ಸ್ವರೂಪ, ಕಥಾಸಾರ, ಕೃತಿ ವಿಮರ್ಶೆ ಎಂಬ ವಿಭಾಗಗಳಲ್ಲಿ ಸಾಗಿದೆ. ಜೊತೆಗೆ ತಾತ್ವಿಕವಾಗಿ, ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಈ ಕೃತಿಯ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬೆಜ್ಜವಾಡಿ ಮಾಧವಾಂಕ ಕಾವ್ಯದ ಸ್ವರೂಪ, ಕಥಾವಸ್ತು, ವಿಮರ್ಶೆಯೊಂದಿಗೆ ಸಾಮಾಜಿಕವಾಗಿ ತಾತ್ವಿಕವಾಗಿ ಆ ಕೃತಿಯು ಪಡೆದಿರುವ ಮಹತ್ವ, ಛಂದಸ್ಸು, ಭಾಷಾಶೈಲಿಯನ್ನು ಕುರಿತು ವಿವೇಚಿಸಲಾಗಿದೆ. ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ಮತ್ತು ಷಡಕ್ಷರದೇವನ ರಾಜಶೇಖರ ವಿಳಾಸಗಳೊಂದಿಗೆ ತೌಲನಿಕವಾಗಿ ವಿವೇಚಿಸಿ, ಇದರ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕನ್ನಡ ವೀರಶೈವಪುರಾಣ ಪರಂಪರೆಯಲ್ಲಿ ಬಂದ ವಿಶಿಷ್ಟ ಕೃತಿ ಶಂಕರಕವಿಯ ಚೋರಬಸವೇಶ್ವರ ಕಾವ್ಯ ಎಂಬುದನ್ನು ಗುರುತಿಸಲಾಗಿದೆ. ಅದರ ಸ್ವರೂಪ, ಸಾರ, ವಿಮರ್ಶೆಯೊಂದಿಗೆ ಭೀಮಕವಿಯ ಬಸವ ಪುರಾಣದೊಂದಿಗೆ ತೌಲನಿಕವಾಗಿ ವಿವೇಚಿಸಲಾಗಿದೆ. ಇದರ ತಾತ್ವಿಕ ಸಾಮಾಜಿಕ, ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಎತ್ತಿ ಹೇಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ನವಮೋಹನ ತರಂಗಿಣಿಯ ಸ್ವರೂಪ, ಕಥಾಸಾರವನ್ನು ತಿಳಿಸಿ ಸಾಮಾಜಿಕವಾಗಿ, ತಾತ್ವಿಕವಾಗಿ, ಸಾಹಿತ್ಯಿಕವಾಗಿ ಇದರ ವಿಶೇಷತೆಗಳನ್ನು ವಿಮರ್ಶೆಯ ಭಾಗದಲ್ಲಿ ಚರ್ಚಿಸಲಾಗಿದೆ. ಜೊತೆಗೆ 'ಮೋಹನತರಂಗಿಣಿ'ಯೊಂದಿಗೆ ತೌಲನಿಕವಾಗಿ ಅಭ್ಯಸಿಸಿ ವೈಶಿಷ್ಟ್ಯಗಳನ್ನು ಹೇಳಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸುಜ್ಞಾನಸುಧಾಕರ ಪಂಚವಿಂಶತಿಯ ಸ್ವರೂಪ ಮತ್ತು ಸಾರವನ್ನು ತಿಳಿಸಿ ವಿಮರ್ಶೆ ಮಾಡಿ ಅದರ ವಿಶೇಷತೆಯನ್ನು ಗುರುತಿಸಲಾಗಿದೆ. ಮತ್ತು ಲಭ್ಯವಾಗಿರುವ ಒಂದು ಸ್ವರವಚನವನ್ನು ಕುರಿತು ಅದರ ಮಹತ್ವವನ್ನು ವಿವರಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಕೋಳೂರು ಶಂಕರಕವಿಯ ಕೃತಿಗಳ ವೈಶಿಷ್ಟ್ಯಗಳನ್ನು ಕ್ರೋಢೀಕರಿಸಿ, ಕನ್ನಡ ಸಾಹಿತ್ಯಕ್ಕೆ ಶಂಕರಕವಿಯ ಕೊಡುಗೆ ಏನೆಂಬುದನ್ನು ವಿವೇಚಿಸಲಾಗಿದೆ.

ಅನುಬಂಧದಲ್ಲಿ ಈ ಪ್ರಬಂಧಕ್ಕೆ ಬಳಸಿಕೊಂಡ ಗ್ರಂಥಸೂಚಿ, ಲೇಖನ ಸೂಚಿ, ಸಂಕ್ಷೇಪಗಳನ್ನು ಕೊಡಲಾಗಿದೆ. ಒಟ್ಟಿನಲ್ಲಿ ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯವನ್ನು ಕುರಿತು ಈ ಪ್ರಬಂಧದಲ್ಲಿ ವ್ಯವಸ್ಥಿತವಾಗಿ ಅಧ್ಯಯನ ಕೈಕೊಳ್ಳಲಾಗಿದೆ.

ಕೊನೆಟಿಪ್ಪಣಿಗಳು

೧. ಚೋ.ಬ., ಪ್ರಸ್ತಾವನೆ, ಪು.೩

೨. ಡಾ. ಎಫ್.ಟಿ.ಹಳ್ಳಿಕೇರಿ, ಕಂಠಪತ್ರ-೨ ಪು. ೫೩

೩. ಅದೇ, ಪು. ೫೫

೪. ಡಾ. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ ಪು. ೧೩೮

೫. ವಿವರಗಳಿಗೆ: ಡಾ. ಎಂ.ಎಂ. ಪಡಶೆಟ್ಟಿ ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ

ಅಧ್ಯಾಯ ೨

ಪರಿಸರ ಮತ್ತು ಇತಿವೃತ್ತ

ಅಧ್ಯಾಯ ೨

ಪರಿಸರ ಮತ್ತು ಇತಿವೃತ್ತ

"ಕೃತಿಯ ರಚನೆಯು ಅಂತರಂಗದ ಅಭಿವ್ಯಕ್ತಿಯಾಗಿದ್ದರೂ ಅದರ ಜೊತೆಯಲ್ಲಿ, ಸಾಮಾಜಿಕ, ರಾಜಕೀಯ, ಆರ್ಥಿಕ ಸಂಗತಿಗಳು ಅಡಕವಾಗಿರುತ್ತವೆ. ಯಾಕೆಂದರೆ ಕಲಾವಿದನೊಬ್ಬನು ಈ ರೀತಿಯ ನಿರ್ದಿಷ್ಟ ಸಂದರ್ಭಗಳಲ್ಲಿ ಬದುಕುತ್ತಿರುತ್ತಾನೆ. ಹೀಗಾಗಿ ಕಲಾವಿದನ ಬದುಕು ಸಮಾಜದ ಒಟ್ಟು ಸಂದರ್ಭಗಳಿಂದ ನಿರ್ಮಿತವಾಗಿರುತ್ತದೆ. ಇದರರ್ಥ ಕವಿಯಾಗಲೀ, ಕಲಾವಿದನಾಗಲೀ, ನೇರವಾಗಿ ಚರಿತ್ರೆಗೆ ಬದ್ಧನಾಗಿರುತ್ತಾನೆಂದಲ್ಲ. ಅದರ ಬದಲಾಗಿ ಚರಿತ್ರೆಯಲ್ಲಿ ಕಲಾವಿದನು ತೀರ ಸಹಜವಾಗಿ ರೂಪುಗೊಂಡಿರುತ್ತಾನೆಂದಷ್ಟೆ"[೧] ಇದರರ್ಥ ಕವಿಯಾಗಲೀ, ದಾರ್ಶನಿಕನಾಗಲೀ, ಸಂತನಾಗಲೀ, ಆಯಾ ಯುಗಮಾನದ ಧ್ವನಿಯಾಗಿ ನಿಲ್ಲುತ್ತಾನೆ. ಈ ಮಾತು ಶಂಕರಕವಿಗೂ ಅನ್ವಯಿಸುತ್ತದೆ. "ಬದ್ಧತೆಯೆನ್ನುವುದು ಕವಿಗೂ ಕಾವ್ಯಕ್ಕೂ ಇರುವಂತೆ ಕವಿಗೂ ಪರಿಸರಕ್ಕೂ ಇರುತ್ತದೆ. ಹೀಗಾಗಿ ಪರಿಸರ-ಕವಿ-ಕಾವ್ಯಗಳಲ್ಲಿ ಅನ್ಯೋನ್ಯ ಸಂಬಂಧವೇರ್ಪಟ್ಟಿರುತ್ತದೆ. ನಿಜವಾದ ಕವಿ ತನ್ನ ಕಾಲ-ದೇಶಗಳ ಬದ್ಧತೆಯಲ್ಲಿಯೇ ದೇಶಕಾಲಾತೀತ ಮೌಲ್ಯಗಳನ್ನು ಕಟ್ಟಿಕೊಡುತ್ತಾನೆ. ಆದುದರಿಂದ ಅಂಥ ಕವಿಯ ಕಾವ್ಯಾಭ್ಯಾಸ ಪ್ರಸಂಗದಲ್ಲಿ ಪರಿಸರದ ಅಭ್ಯಾಸ ಆಳವಾದಷ್ಟು ಆ ಕಾವ್ಯದ ಅರ್ಥ ಇನ್ನೂ ಬಿಚ್ಚಿಕೊಳ್ಳುತ್ತದೆ."[೨] ಈ ಹಿನ್ನೆಲೆಯಲ್ಲಿ "ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ"ದ ಅಧ್ಯಯನದ ಸಂದರ್ಭದಲ್ಲಿ ಕವಿಯು ಬಾಳಿಬದುಕಿದ ಪರಿಸರದ ಕುರಿತ ಅರಿವು ಅತ್ಯಗತ್ಯವಾಗುತ್ತದೆ.

ಕೋಳೂರು ಶಂಕರಕವಿಯು ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿ ಹೋದ ಕವಿ ಡಾ.ರಂ.ಶ್ರೀ.ಮುಗಳಿಯವರು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ೧೫ನೆಯ ಶತಮಾನದಿಂದ ೧೯ನೆಯ ಶತಮಾನದ ಕೊನೆಯ ಅವಧಿಯವರೆಗೆ ಅಂದರೆ ಆಧುನಿಕ ಕಾಲದವರೆಗಿನ ಅವಧಿಯನ್ನು ಕುಮಾರವ್ಯಾಸ ಯುಗವೆಂದು ಪರಿಗಣಿಸಿದ್ದಾರೆ. ಅತ್ಯಂತ ವಿಸ್ತೃತವಾದ ಈ ಅವಧಿಯು ವಿವಿಧ ಘಟನೆಗಳಿಂದ ಜಟಿಲವಾಗಿದೆ. ಅದರಲ್ಲೂ ೧೮ ಮತ್ತು ೧೯ನೆಯ ಶತಮಾನಗಳು ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಮಹತ್ತರ ಬದಲಾವಣೆಗಳನ್ನು ಕಂಡಕಾಲ. ಡಾ. ಜಿ.ಎಸ್.ಶಿವರುದ್ರಪ್ಪನವರು ಹೇಳುವಂತೆ

''ಚರಿತ್ರೆಯ ಗತಿ ಯಾವಾಗಲೂ ಪ್ರಗತಿಗಾಮಿಯಾಗಿರುತ್ತದೆ ಎಂದು ಹೇಳಲುಬಾರದು. ಸಾಂಪ್ರದಾಯಿಕವಾದ ಹಾದಿಯನ್ನು ತಿರಸ್ಕರಿಸಿ, ತನ್ನ ಕಾಲವನ್ನೂ ಮೀರಿ ಅದ್ಭುತವಾದ ಪ್ರಗತಿಪರ ಮನೋಧರ್ಮಕ್ಕೆ ಹೊರಳಿದ ಚರಿತ್ರೆ ಇದ್ದಕ್ಕಿದ್ದ ಹಾಗೆ ಮತ್ತೆ ಹಿಮ್ಮರಳಿ ಸಂಪ್ರದಾಯಕ್ಕೆ ಜೋತು ಬೀಳುವ ಸಂದರ್ಭಗಳೂ ಉಂಟು''[೩] ಶಂಕರಕವಿಯು ಉದಯವಾದದ್ದು ಇಂಥ ಸಂದರ್ಭದಲ್ಲಿ. ಅಲ್ಲಮಪ್ರಭುಗಳು ತಮ್ಮದೊಂದು ವಚನದಲ್ಲಿ ಹಿಂದಣ ಹೆಜ್ಜೆಯನರಿತಲ್ಲದೆ ಮುಂದಣ ಹೆಜ್ಜೆಯನರಿಯಬಾರದು'' ಎನ್ನುತ್ತಾರೆ. ಅಂತೆಯೇ, ಶಂಕರಕವಿಯು ಬಾಳಿ ಬದುಕಿರಬಹುದಾದ ಪರಿಸರದ ಭೂತ-ವರ್ತಮಾನಗಳ ರಾಜಕೀಯ ವಾತಾವರಣ, ಧಾರ್ಮಿಕ ಪರಿಸ್ಥಿತಿ, ಸಾಮಾಜಿಕ ಪರಿಸರ, ಸಾಹಿತ್ಯಿಕ ಸ್ವರೂಪವನ್ನು ಕುರಿತು ಮುಂದೆ ಸ್ಥೂಲವಾಗಿ ಅವಲೋಕಿಸಲಾಗಿದೆ.

೨.೧. ರಾಜಕೀಯ ವಾತಾವರಣ

''೧೪ನೆಯ ಶತಮಾನದಿಂದ ೧೯ನೆಯ ಶತಮಾನದ ಕೊನೆಯವರೆಗಿನ ಕಾಲಾವಧಿಯಲ್ಲಿ ಕರ್ನಾಟಕವು ಉಳಿದ ದಕ್ಷಿಣ ಭಾರತದೊಡನೆ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಹಿಂದೆಂದೂ ಕಾಣದ ಉನ್ನತಿಯ ಶಿಖರವನ್ನೇರಿತು. ಹಿಂದೆಂದೂ ತೋರದ ಅವನತಿಯ ಕಂದರದಲ್ಲಿಳಿಯಿತು. ೧೪ನೆಯ ಶತಮಾನದಲ್ಲಿ ಉದಯ ಹೊಂದಿದ ವಿಜಯನಗರ ಸಾಮ್ರಾಜ್ಯವು ೧೪ನೆಯ ಶತಮಾನದಿಂದ ೧೬ನೆಯ ಶತಮಾನದ ಮಧ್ಯದವರೆಗೆ ಸಂಗಮ, ಸಾಳುವ, ತುಳುವ, ಅರವೀಡು ಈ ನಾಲ್ಕು ವಂಶಗಳ ಕೈಯಿಂದ ಕೈಗೆ ಹೋಗಿ ಹೊರಹಗೆ, ಒಳಜಗಳಗಳ ಕಾರಣದಿಂದ ಕಾಲಕಾಲಕ್ಕೆ ಹತಬಲವಾದರೂ ಹತಾಶವಾಗದೆ ದಕ್ಷಿಣ ಭಾರತಕ್ಕೆ ಉಜ್ವಲವಾದ ಪ್ರಭುತ್ವ ಶಕ್ತಿಯಕೇಂದ್ರವಾಗಿತ್ತು. ಬುಕ್ಕರಾಯ, ಪ್ರೌಢದೇವರಾಯ, ಕೃಷ್ಣದೇವರಾಯ, ರಾಮರಾಯನಂಥ ಶೂರರೂ ಮುತ್ಸದ್ಧಿಗಳೂ ಆದ ಅರಸರು ಅದರ ಏರಿಕೆಗೆ ಕಾರಣರಾದರು. ೧೬ನೆಯ ಶತಮಾನದ ಮೊದಲಲ್ಲಿ ಮೆರೆದ ಕೃಷ್ಣದೇವರಾಯನಂತೂ ಅವರಲ್ಲಿ ಶ್ರೇಷ್ಠನಾಗಿ ಅಂದಿನ ಭಾರತದ ಪ್ರಖ್ಯಾತ ರಾಜನೆಂದು ಕರೆಯಿಸಿಕೊಂಡನು. ಪರದೇಶದ ಪ್ರವಾಸಿಗಳ ಮತ್ತು ವ್ಯಾಪಾರಿಗಳ ಕಣ್ಣುಕುಕ್ಕಿಸುವಂಥ ರಾಜಧಾನಿ. ಸಂಪತ್ತು, ಸೈನ್ಯ, ಸೌಖ್ಯಸಾಮಗ್ರಿ ಇವುಗಳಿಂದ ವಿಜಯನಗರ ಸಾಮ್ರಾಜ್ಯವೆಂದರೆ ದಂತಕಥೆಯಲ್ಲಿಯ ಒಂದು ರೋಮಾಂಚಕಾರಿ ಸ್ವಪ್ನವು ಮೂರ್ತರೂಪ ತಾಳಿದಂತಾಯಿತು. ರಕ್ಕಸ ತಂಗಡಗಿಯ ಕಾಳಗದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಈ ಸ್ವಪ್ನವು ಕ್ಷಣದಲ್ಲಿ ಒಡೆದುಹೋಯಿತು.

ಮಹಮ್ಮದೀಯ ವಿಘಾತಕ ಶಕ್ತಿಗಳನ್ನೂ ಅಂತಃಕಲಹದ ಪ್ರಬಲಪ್ರವೃತ್ತಿಗಳನ್ನೂ ತಡೆಗಟ್ಟಿದ ಸಾಮ್ರಾಜ್ಯ ಶಕ್ತಿ ನಷ್ಟವಾಗಿ ನಿರಂಕುಶತ್ವವು ತಲೆಯೆತ್ತಿತು. ಸಂಯೋಜಕವೂ ಸಂರಕ್ಷಕವೂ ಆದ ಏಕ ಪ್ರಭುತ್ವದ ಸ್ಥಾನದಲ್ಲಿ ದಕ್ಷಿಣ ಭಾರತದಲ್ಲೆಲ್ಲ ವಿಘಟನಕಾರಿಯಾದ ಸಂಕುಚಿತ ಸ್ವಾರ್ಥ ಪರವಾದ ಶಕ್ತಿಗಳು ತಲೆದೋರಿದವು[೪] ವಿಜಯನಗರದ ಮತ್ತು ಬಿಜಾಪುರದ ಪತನಾನಂತರ ಕರ್ನಾಟಕ ಪ್ರದೇಶದಲ್ಲಿ ರಾಜಕೀಯ ಸಂದಿಗ್ಧತೆಯನ್ನು ಕಾಣಬಹುದು. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಭಾರತದಲ್ಲಿ ಮೊಘಲರು ಉತ್ಕರ್ಷಕ್ಕೆ ಹೋಗುತ್ತಿದ್ದ ಕಾಲ. ಬಿಜಾಪುರ ಗೋಲ್ಕಂಡಗಳೆಲ್ಲ ಮೊಘಲರ ಆಳ್ವಿಕೆಗೆ ಒಳಪಟ್ಟಿತು. ಮತ್ತೊಂದು ಕಡೆ

ದಖ್ಖನ್ನಿನ ಉತ್ತರದಲ್ಲಿ ಆರಂಭವಾದ ಮರಾಠ ಶಕ್ತಿ ಇವೆರಡೂ ಆಗಾಗ್ಗೆ ಕರ್ನಾಟಕ ರಾಜಕೀಯವನ್ನು ಚದುರಿಸಿ ಹೋಗುತ್ತಿದ್ದವು. ಬಹುಮುಖ್ಯವಾಗಿ ಯುರೋಪಿಯನ್ನರ ಆಗಮನ ಈಗಾಗಲೇ ಪೋರ್ಚುಗೀಸರು ಕರ್ನಾಟಕದ ಕರಾವಳಿಯಲ್ಲಿ ರಾಜಕೀಯ ಪ್ರವೇಶ ಮಾಡಿದ್ದು ತಮ್ಮ ಆಸ್ತಿತ್ವವನ್ನು ತೋರ್ಪಡಿಸಿದ್ದರು.

ಈ ಹಂತದಲ್ಲಿ ವಿಜಯನಗರದ ಪತನವಾದ ಕೂಡಲೇ ಷಾಹಿದೊರೆಗಳು ವಿಜಯನಗರಕ್ಕೆ ಒಳಪಟ್ಟ ಪ್ರದೇಶಗಳ ಮೇಲೆ ಹಿಡಿತ ಸಾಧಿಸುವ ಪ್ರಯತ್ನವನ್ನೇನೋ ಮಾಡಿದರು. ಆದರೆ ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವಹಿಸಿದ ನಾಯಕರು, ಅಮರ ನಾಯಕರು, ನಾಡಗೌಡರು, ನಾಡಪ್ರಭುಗಳು, ಆಡುಭಾಷೆಯಲ್ಲಿ ಪಾಳೆಯಗಾರರೆನ್ನಿಸಿಕೊಂಡಿದ್ದವರೆಲ್ಲ ಸ್ವತಂತ್ರರಾಗಲು ಪ್ರಯತ್ನಿಸಿದರು.''[೫] ಹದಿನೇಳನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅರವೀಡುವಂಶದ ಪತನವಾದ ಮೇಲೆಎಲ್ಲ ಪಾಳೆಯಗಾರರೂ ಸ್ವತಂತ್ರರಾದರು.[೬] ಮಧ್ಯಕಾಲೀನ ಯುಗದಿಂದ ಆಧುನಿಕತೆಯ ಕಡೆಗೆ ಕೊಂಡೊಯ್ದು ಪ್ರಮುಖ ರಾಜಕೀಯ ಬದಲಾವಣೆ ಮೈಸೂರಿನಲ್ಲಿ ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದಲ್ಲಿ ಆರಂಭವಾಯಿತು. ಅಂತಹ ಬದಲಾವಣೆಗೆ ಕಾರಣ ಕರ್ತನಾದ ಟಿಪ್ಪುವಿನ ಇತಿಹಾಸಕ್ಕೆ ಹಿನ್ನೆಲೆಯಾಗಿ ಮೈಸೂರಿನ ಇತಿಹಾಸವನ್ನು ಗಮನಿಸುವುದಾದರೆ ವಿಜಯನಗರ ಪತನಾನಂತರ ರಾಜ ಒಡೆಯರು (೧೫೭೮-೧೬೧೭) ಮೈಸೂರಿನ ರಾಜ್ಯವಿಸ್ತರಣೆಯನ್ನು ಕೈಗೊಂಡರು. ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರ ಪ್ರತಿನಿಧಿ ತಿರುಮಲನನ್ನು ಓಡಿಸಿ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದು ಅದು ೧೮೦೦ರ ವರೆಗೆ ರಾಜಧಾನಿಯಾಗಿ ಮುಂದುವರೆಯಿತು. ಆಡಳಿತದಲ್ಲಿ ದಳವಾಯಿಗಳನ್ನು ನಿರ್ದೇಶಿಸಿದನು. ಮುಂದಿನ ಪ್ರಬಲದೊರೆ ಕಂಠೀರವ ನರಸರಾಜ. (೧೬೩೮-೫೯) ಬಿಜಾಪುರದ ಮುಗಲ್ ಸೇನಾನಿಷಾಜಿಯೊಂದಿಗೆ ೧೬೩೮ರಲ್ಲಿ ಮೈಸೂರಿನ ಮೇಲೆ ಆಕ್ರಮಣ ಮಾಡಿದಾಗ ಅವರನ್ನು ಹಿಂದಕ್ಕೆ ಓಡಿಸಿದನು. ಮೈಸೂರಿನ ಎಲ್ಲೆ ಇಕ್ಕೇರಿ, ಚಿತ್ರದುರ್ಗ ಮತ್ತು ಶಿರಾದ ಗಡಿಯುವರೆಗೆ ವಿಸ್ತರಿಸಿತು. ದೊಡ್ಡದೇವರಾಜನ (೧೬೫೯-೭೩) ಆಸ್ಥಾನಕ್ಕೆ ಫ್ರೆಂಚರ ಪ್ರತಿನಿಧಿ ಫಾಲ್ಕನ್‌ನು ಭೇಟಿ ನೀಡಿ ಒಪ್ಪಂದವನ್ನು ಮಾಡಿಕೊಂಡನು.[೭]

ಮೈಸೂರು ರಾಜ್ಯವನ್ನು ದಕ್ಷಿಣ ಭಾರತದ ಒಂದು ಪ್ರಬಲ ಶಕ್ತಿಯನ್ನಾಗಿ ಮಾಡುವಲ್ಲಿ ಬಹಳ ಮುಖ್ಯವಾದ ಅರಸನೆಂದರೆ ಚಿಕ್ಕದೇವರಾಜ(೧೬೭೨-೧೭೦೪)[೮] ಮುಘಲ್ ಮತ್ತು ಮರಾಠ ಶತೃತ್ವವನ್ನು ಬಳಸಿಕೊಂಡು ಮರಾಠರನ್ನು ಬಿಜಾಪುರದ ಆಕ್ರಮಣಗಳನ್ನು ಎದುರಿಸಲು ನಿರ್ಧರಿಸಿದನು. ಈಗಾಗಲೇ ಬೆಂಗಳೂರು ಷಾಜಿಯ ಜಹಗೀರಾಗಿತ್ತು. ಶಿವಾಜಿಯು ಶ್ರೀರಂಗಪಟ್ಟಣವನ್ನು ಗೆಲ್ಲಲು ಪ್ರಯತ್ನಿಸಿದಾಗ ಅದನ್ನು ಪ್ರಬಲವಾಗಿ ಎದುರಿಸಿದನು. ಮರಾಠರ ವಿರುದ್ಧದ ಘರ್ಷಣೆಗಿಂತ ಮುಘಲರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವುದು ಉತ್ತಮವಾಗಿತ್ತು. ಹಾಗಾಗಿ ಔರಂಗಜೇಬನ ಆಸ್ಥಾನಕ್ಕೆ ರಾಯಭಾರಿಯನ್ನು ಕಳುಹಿಸಿ ''ಜಗದೇವ'' ಎಂಬ ಬಿರುದನ್ನು ಪಡೆದನು. ಆಡಳಿತದಲ್ಲೂ ಹಲವು ಸುಧಾರಣೆಗಳನ್ನು ತಂದನು.[೯] ಚಿಕ್ಕದೇವರಾಜನ ಉತ್ತರಾಧಿಕಾರಿಗಳು ಅಂತಹ ಸಮರ್ಥರಿರಲಿಲ್ಲ. ಅವ್ಯವಸ್ಥೆ ತಲೆಹಾಕಿತು. ದಳವಾಯಿಗಳ

ಕೈಗೆ ಅಧಿಕಾರ ಹೋಯಿತು. ೧೭೧೪ರಿಂದ ೧೭೬೦ರವರೆಗಿನ ಕಾಲವನ್ನು ದಳವಾಯಿಗಳ ರಾಜ್ಯಭಾರವೆಂದು ಕರೆಯಬಹುದು. ಈ ಪರಿಸ್ಥಿತಿ ಬಹುಮಟ್ಟಿಗೆ ಭಾರತದ ಎಲ್ಲ ಕಡೆಗಳಲ್ಲಿಯೂ ಇತ್ತು. ಹೈದರನ ಉದಯವರೆಗೆ ಮೈಸೂರಿನ ಸ್ಥಿತಿ ಬದಲಾಗಲಿಲ್ಲ.[೧೦] ಅನಂತರ ಹೈದರ್ ಸರ್ವಾಧಿಕಾರಿಯಾದ, ಹೈದರಾಬಾದಿನ ನಿಜಾಮ, ಮರಾಠರು ಹಾಗೂ ಬ್ರಿಟೀಷರೊಡನೆ ಅವ್ಯಾಹತವಾಗಿ ಸೆಣಸಿ ಮೈಸೂರಿನ ಸ್ವಾತಂತ್ರ್ಯವನ್ನುಳಿಸಿಕೊಂಡ ಹಿರಿಮೆ ಈತನದು. ಎರಡು ದಶಕಗಳ ಕಾಲ ಅಧಿಕಾರ ಸೂತ್ರಗಳನ್ನು ಪಡೆದಿದ್ದ ಈತನು ಆಡಳಿತವನ್ನು ಬಿಗಿಗೊಳಿಸಿ ದಂಗೆಗಳನ್ನು ಅಡಗಿಸಿ, ಪ್ರಜಾ ಸೌಕರ್ಯಕ್ಕಾಗಿ ಶ್ರಮಿಸಿದ. ಪರಮತ ಸಹಿಷ್ಣುತೆಯನ್ನು ಸಾಧಿಸಿದುದಲ್ಲದೆ ಜಾತ್ಯತೀತ ನೀತಿಯನ್ನು ಪಾಲಿಸಿದ.

ಈತನ ನಂತರ ಅಧಿಕಾರ ಸೂತ್ರಗಳನ್ನು ವಹಿಸಿದ ಈತನ ಮಗ ಟಿಪ್ಪುವಿನ ಮನೋಭಾವ ಬೇರೆಯಾದ್ದು ಈತ ಆಂಗ್ಲದ್ವೇಷಿಯಾಗಿ ಅವರನ್ನು ತೊಲಗಿಸಲು ಫ್ರೆಂಚರ ನೆರವನ್ನು ಬಯಸಿದ. ಸಕಾಲದಲ್ಲಿ ಬೆಂಬಲದೊರೆಯದೆ, ಹೂಡಿದ ಎರಡು ಕದನಗಳಲ್ಲೂ ಬ್ರಿಟೀಷರಿಂದ ಸೋಲನನ್ನುಭವಿಸಿ, ಎರಡನೇ ಬಾರಿಗೆ (ಮೇ ೪, ೧೭೯೯) ತಾನೆ ಹತನಾದ. ಸ್ವಧರ್ಮಾಭಿಮಾನಿ ಯಾದರೂ ಪರಧರ್ಮಗಳನ್ನು ತೃಣೀಕರಿಸಲಿಲ್ಲ.

ಟಿಪ್ಪುವಿನ ಪತನಾನಂತರ ಬ್ರಿಟೀಷರ ಅಧೀನಕ್ಕೊಳಗಾದ ರಾಜ್ಯಕ್ಕೆ ನ್ಯಾಯ ದೊರಕಲಿಲ್ಲ. ಪಶ್ಚಿಮತೀರ ಪ್ರದೇಶಗಳೆಲ್ಲ ಅವರಿಗೆ ಸೇರಿದವು. ಈಶಾನ್ಯದ ಭಾಗ ನಿಜಾಮನಿಗೆ ದೊರೆಯಿತು. ಪೂರ್ವದ ಭಾಗಗಳೂ ಬ್ರಿಟೀಷರಿಗೆ ಸೇರಿ ಕಡಲಿನ ಸಂಪರ್ಕ ತಪ್ಪಿತು. ಸಹಾಯಕ ಸೈನ್ಯ ಪದ್ಧತಿ ಮೈಸೂರಿನಲ್ಲೂ ಅಸ್ತಿತ್ವಕ್ಕೆ ಬಂದು. ಬ್ರಿಟೀಷರ ಸೈನ್ಯವನ್ನು ಒಡೆಯರ ಸರ್ಕಾರ ಸಾಕಬೇಕಾಯಿತು. ಕರ್ನಾಟಕ ಜನತೆ ಈಗ ಮರಾಠರ, ಮುಸ್ಲಿಮರ, ತೆಲುಗರ, ತಮಿಳರ, ಕ್ರೈಸ್ತರ ಪ್ರಭಾವಕ್ಕೊಳಗಾಗಿ ಅಲ್ಲಿನ ಜನ ತಮ್ಮ ಭಾಷೆಯನ್ನಂತಿರಲಿ, ತಾವು ಕನ್ನಡಿಗರೆಂಬುದನ್ನೇ ಮರೆಯುವಂತಹ ಪರಿಸ್ಥಿತಿಗೊಳಗಾದರು.[೧೧] ಹೀಗೆ ೧೯ನೆಯ ಶತಮಾನದ ಕೊನೆಯವರೆಗೆ ಅನ್ಯೋನ್ಯ ಕಲಹದಿಂದ ಅಲ್ಪ ಲಾಭ ಬುದ್ಧಿಯಿಂದ ಬ್ರಿಟಿಷರ ಕುಟಿಲ ತಂತ್ರಕ್ಕೆ ಒಳಗಾಗಿ ಕರ್ನಾಟಕದ ದೊರೆಗಳು ಸ್ವತ್ವವನ್ನು ಕಳೆದುಕೊಂಡರು. ನಾಡಿನ ಬಹುಭಾಗವನ್ನು ಪರಕೀಯರ ಆಧಿಪತ್ಯಕ್ಕೆ ಬಿಟ್ಟುಕೊಟ್ಟರು. ಸುದೈವದಿಂದ ಮೈಸೂರ ರಾಜ್ಯವು ವಿಜಯನಗರದ ರತ್ನ ಸಿಂಹಾಸನವನ್ನೂ ಕನ್ನಡ ಸಂಸ್ಕೃತಿ ಪರಂಪರೆಯನ್ನೂ ಕಾಯ್ದುಕೊಂಡು ಬಂದಿತು. ಮೈಸೂರಿನ ಒಡೆಯರಲ್ಲಿ ರಾಜನೃಪ, ಕಂಠೀರವ ನರಸರಾಜ, ಚಿಕ್ಕದೇವರಾಜ ಇವರು ತಮ್ಮ ಶೌರ್ಯ-ಸಾಹಸಗಳಿಂದಲೂ ಮುತ್ಸದ್ಧಿತನದಿಂದಲೂ ದಕ್ಷಿಣ ಕರ್ನಾಟಕವನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಂಡರು. ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಪೋಷಿಸಿದರು. ಮುಸ್ಲಿಂ ಮರಾಠಾ ಪರಾಕ್ರಮ, ಬ್ರಿಟಿಷ್ ಪ್ರಭುತ್ವ ಇವುಗಳಿಂದ ಆಗಾಗ ಮೈಸೂರು ಆಧಿಪತ್ಯಕ್ಕೆ ಬಂದ ಕುತ್ತು ಅಂತಿಂಥವಲ್ಲ. ಆದರೆ ಅವನ್ನು ಕನ್ನಡ ಕಲಿತನವು ಹಿಮ್ಮೆಟ್ಟಿಸಿತು. ಹೈದರ್ ಟಿಪ್ಪುವಿನಂಥ ಸ್ವಧರ್ಮಾಭಿಮಾನಿಗಳು ಮೈಸೂರು ರಾಜ್ಯವನ್ನು ಆಳಿದರೂ ಅವರು ವಿಶಾಲವಾದ ಕನ್ನಡ ಧರ್ಮಕ್ಕೆ ಬಹುಶಃ ಹೊಂದಿಕೊಂಡರು. ವಿದೇಶೀಯರಂತೆ ವಿನಾಶಪರರಾಗಲಿಲ್ಲ. ೧೯ನೆಯ ಶತಮಾನದ ಕೊನೆಯಷ್ಟು ಹೊತ್ತಿಗೆ ಮೈಸೂರು ರಾಜ್ಯವೊಂದನ್ನು ಬಿಟ್ಟರೆ

ಉಳಿದರ್ಧ ಕರ್ನಾಟಕವು ಹೆಚ್ಚಾಗಿ ಬ್ರಿಟೀಷರ ವಶವಾಗಿತ್ತು. ಇನ್ನುಳಿದ ಭಾಗವು ಹಲವಾರು ತುಂಡುಗಳಾಗಿ ಸಣ್ಣ-ಪುಟ್ಟ ಸಂಸ್ಥಾನಗಳಲ್ಲಿ ಹಾಗೂ ನಿಜಾಮರಾಜ್ಯದಲ್ಲಿ ಹರಿ ಹಂಚಾಗಿತ್ತು.[೧೨] ಇಂಥ ರಾಜಕೀಯ ವಾತಾವರಣದಲ್ಲಿ 'ಕೋಳೂರು ಶಂಕರಕವಿ'ಯು ಸಮನ್ವಯದ ಹಂಬಲ ಮತ್ತು ವೀರಶೈವ ನಿಷ್ಠೆಯನ್ನು ಪ್ರತಿಪಾದಿಸುವ ಕೃತಿ ರಚನೆಯಲ್ಲಿ ತೊಡಗಿ ಸಾಧನೆ ಮಾಡಿದ್ದಾನೆ.

೨.೨. ಧಾರ್ಮಿಕ ಪರಿಸ್ಥಿತಿ

ಕರ್ನಾಟಕದ ಜನಜೀವನವನ್ನು ನಿಜವಾಗಿಯೂ ಆಳುತ್ತ ಬಂದಿರುವುದು ಧರ್ಮವೇ. ವೇದಕಾಲಕ್ಕಿಂತ ಪ್ರಾಚೀನವಾದ 'ನಾಗಧರ್ಮ'ದಿಂದ ಹಿಡಿದು ಕಾಲಕಾಲಕ್ಕೆ ಬಂದ ಎಲ್ಲ ಧರ್ಮಗಳೂ ಇಲ್ಲಿ ಆಶ್ರಯ ಪಡೆದವು. ಧರ್ಮ ಸಮನ್ವಯದ ಆದರ್ಶಕ್ಕೆ ಸಮೃದ್ಧವಾದ ರಂಗಭೂಮಿಯಾಗಿ ಪರಿಣಮಿಸಿತು ಕರ್ನಾಟಕ[೧೩] ೧೫ ಶತಮಾನದಿಂದ ೧೯ನೆಯ ಶತಮಾನದ ಕಾಲಾವಧಿಯು ಧಾರ್ಮಿಕವಾಗಿ ಹಿಂದೂ-ಮುಸ್ಲಿಂ ಧರ್ಮಗಳ ಜೊತೆ ಜೊತೆಗೆ ಸ್ವಲ್ಪಮಟ್ಟಿಗೆ ಕ್ರೈಸ್ತ ಧರ್ಮವೂ ಕರ್ನಾಟಕದಲ್ಲಿ ನೆಲೆಯೂರಲು ಹವಣಿಸಿದ ಅವಧಿ ಪ್ರಸಕ್ತ ವಿವೇಚನೆಯ ಕಾಲಖಂಡದ ಧಾರ್ಮಿಕ ಇತಿಹಾಸದಲ್ಲಿ ಎದ್ದು ಕಾಣುವ ಒಂದು ಅಂಶ ಧರ್ಮ ಪಂಥೀಯ ಸಂಘರ್ಷಣೆ. ಹಿಂದೆ ಕೇವಲ ಸ್ಥಳೀಯ ಧರ್ಮ ಪಂಥಗಳಷ್ಟೇ ಈ ಧಾರ್ಮಿಕ ಸಂಘರ್ಷಣೆಯಲ್ಲಿ ಪಾತ್ರ ವಹಿಸುತ್ತಿದ್ದರೆ, ಈಗ ವಿದೇಶೀ ನೆಲದಿಂದ ಬಂದು ನೆಲೆಗೊಂಡ ಇಸ್ಲಾಂ ಧರ್ಮಸಹ ಇವುಗಳ ಜೊತೆಗೂಡಿತು.[೧೪] ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಭುಶಕ್ತಿಯೊಡನೆ ಆಗಮಿಸಿದ ಇಸ್ಲಾಂ ಧರ್ಮ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಹೊಸ ತಿರುವಿಗೆ ಕಾರಣವಾಯಿತು. ಕೃಷ್ಣಾ ನದಿಯ ಉತ್ತರ ಭಾಗದಲ್ಲಿ ಪರಂಪರಾಗತ ಹಿಂದೂಧರ್ಮದ ಪಂಗಡಗಳಾದ ಶೈವ-ವೈಷ್ಣವ-ವೀರಶೈವಗಳು ಹೊಸದಾಗಿ ಆಗಮಿಸಿದ ಇಸ್ಲಾಂಧರ್ಮ, ಪರಸ್ಪರ ತಮ್ಮ ತಮ್ಮ ಮೇಲ್ಮೆಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ತೊಡಗಿದವು. ತತ್ಫಲವಾಗಿ ಕೃಷ್ಣೆಯ ಉತ್ತರಭಾಗದಲ್ಲಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಹೊಯ್ಸಳರ ಕಾಲದಿಂದಲೂ ಹಿಂದೂಧರ್ಮದ ಸಾಕಾರ ಸ್ವರೂಪಗಳಾಗಿ ನಿಂತಿದ್ದ ಅವೆಷ್ಟೋ ದೇವಾಲಯಗಳು ನೆಲಕಚ್ಚಿದವು. ಇದೇ ಸಮಯಕ್ಕೆ ಉತ್ತರ ಭಾರತದಿಂದ ಅನೇಕ ಸೂಫಿಸಂತರು ತಮ್ಮ ಪ್ರಭುಗಳ ಜೊತೆಗೆ ಇಲ್ಲಿಗೆ ಆಗಮಿಸಿದುದು ಈ ಕಾಲದ ವಿಶೇಷವೆಂದೇ ಹೇಳಬೇಕು.ಇದೇ ಸಂದರ್ಭದಲ್ಲಿ ರಾಷ್ಟ್ರೀಯ ದೊರೆ 'ಜಗದ್ಗುರು' ಎಂಬ ಬಿರುದನ್ನು ಪಡೆದ ಮೊಗಲ್ ಸಾಮ್ರಾಟ 'ಅಕ್ಬರ್'ನು ಸ್ಥಾಪಿಸಿದ 'ದೀನ್ ಇಲಾಹಿ- ಎಂಬ ದೈವಿ ಮತವನ್ನು ಸ್ಮರಿಸಿಕೊಳ್ಳಬೇಕು. ಸರ್ವಧರ್ಮದ ಅನುಭಾವಿಗಳು ಇದರ ಸದಸ್ಯರು. ಇವರು ಇಸ್ಲಾಂ ತತ್ವಗಳೊಡನೆ ಹಿಂದೂ ತತ್ವಗಳನ್ನು ಬೆರೆಸಿ ತಮ್ಮ ಬೋಧನೆಯನ್ನು ಮುಂದುವರೆಸಿದರು. ಈ ಕ್ರಮ ಇಲ್ಲಿಯ ಅನುಭಾವಿಗಳ ಮೇಲೂ ಪ್ರಭಾವ ಬೀರಿತು. ಈ ಸೂಫಿ ಸಂತರ ಬೋಧನೆಗಳು ಅಂದಿನ ಧಾರ್ಮಿಕ ಘರ್ಷಣೆಯ ಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ತಿಳಿಗೊಳಿಸಲು ಸಹಕಾರಿಯಾದವು. ಇಸ್ಲಾಂಧರ್ಮ ಏಕದೇವತಾನಿಷ್ಠೆಯನ್ನು ಸಾರುವ ಧರ್ಮ ಆ ದೇವರು ಅಲ್ಲಾ. ಅಲ್ಲಾನಲ್ಲಿ ನಂಬಿಕೆಯುಳ್ಳ ಎಲ್ಲರೂ ಸಮಾನರು. ಯಾರೂ ಮೇಲು ಕೀಳು ಅಲ್ಲ ಇವೇ ಮುಂತಾದವುಗಳು ಇಸ್ಲಾಂ ಧರ್ಮದ ಪ್ರಮುಖತತ್ವಗಳು.

ಆದರೆ ಏಕದೇವೋಪಾಸನೆ, ನಿರಾಕಾರ ದೇವತಾಪೂಜೆ, ಜಾತಿ ಭೇದ ನಿರಸನ ಮೊದಲಾದ ಸಮಾನಾಂಶಗಳನ್ನು ಹೊಂದಿದ ತತ್ವಗಳು ಆಗಲೇ ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರ ಕಾಲದಲ್ಲಿ ಅನುಷ್ಠಾನಕ್ಕೆ ಬಂದು ಒಂದು ಪರಂಪರೆಯಾಗಿ ಮುನ್ನಡೆದಿದ್ದವು. ಸೂಫಿಸಂತರ ವಿಚಾರಗಳು ವಚನಗಳಲ್ಲಿಯೂ ಇರುವುದರಿಂದ ಕನ್ನಡ ನಾಡಿನಲ್ಲೂ ಸೂಫಿ ಮಾದರಿಯ ಸಂತರು ಕಂಡುಬರುತ್ತಾರೆ. ಅವರೇ ಕೊಡೇಕಲ್ಲ ಬಸವಣ್ಣ, ಸಾವಳಗಿ ಶಿವಲಿಂಗೇಶ್ವರ, ಶಿರಹಟ್ಟಿ ಫಕೀರೇಶ್ವರ, ತಿಂಥಿಣಿ ಮೋನಪ್ಪಯ್ಯ ಮುಂತಾದವರು. ಕನ್ನಡನಾಡಿನ ಇಂಥಸಂತರಿಗೆ ಮುಸ್ಲಿಂ ಅರಸರು ಆಶ್ರಯಕೊಟ್ಟು ಇವರನ್ನು ಧರ್ಮ ಜಗತ್ತಿನ ಪಾಶ್ಚಾ (ಬಾದಶಹ- ಪ್ರಭು) ಎಂದು ಕರೆದು ಗೌರವಿಸಿದ್ದು ಇವರ ಚರಿತ್ರೆಯಿಂದ ತಿಳಿದುಬರುತ್ತದೆ.[೧೫] ವಿಜಯನಗರ ಧಾರ್ಮಿಕ ಜೀವನದಲ್ಲಿ ತಲೆದೋರಿದ ಒಂದು ಮಹತ್ತರವಾದ ಅಂಶವೆಂದರೆ ದಾಸಕೂಟದ ಉಗಮ. ೧೫-೧೬ನೆಯ ಶತಮಾನದಲ್ಲಿ ವ್ಯಾಸರಾಯ ನೇತೃತ್ವದಲ್ಲಿ ಪುರಂದರ ಕನಕ ಮೊದಲಾದ ದಾಸರು ತಮ್ಮ ಕೀರ್ತನೆಗಳ ಮೂಲಕ ಧರ್ಮವನ್ನು ಮನೆಮನೆಗೆ ಕೊಂಡೊಯ್ದರು[೧೬] ವಿಜಯನಗರದ ಅರಸು ೨ನೆಯ ಪ್ರೌಢದೇವರಾಯನ ಕಾಲದಲ್ಲಿ ವೀರಶೈವದ ವಚನ ಸಾಹಿತ್ಯದ ಪುನರುಜ್ಜೀವನವಾದದ್ದು ಸರ್ವವಿದಿತ ಸಂಗತಿ. ತದನಂತರ ಕೃಷ್ಣದೇವರಾಯನ ಕಾಲದಲ್ಲಿ ದಾಸಸಾಹಿತ್ಯ ಅತ್ಯುನ್ನತಿಗೇರಿತು. ಹರಿದಾಸರು ಮೂಲತಃ ಮಧ್ವಸಿದ್ಧಾಂತದ ಅನುಯಾಯಿಗಳಾದರೂ, ಅವರು ಹೆಚ್ಚಾಗಿ ಹರಿ-ಹರಸಾಮ್ಯತೆಯ ಭಾಗವತ ಧರ್ಮದ ಅನುಯಾಯಿಗಳು ಎಂಬುದು ಗಮನಾರ್ಹ. ವಿಜಯನಗರ ಅರಸರ ಕಾಲದಲ್ಲಿಯೇ ಕ್ರಿಶ್ಚಿಯನ್ ಧರ್ಮ ಕೂಡ ಕಾಲಿಟ್ಟು ಬೇರೂರುವ ಸನ್ನಾಹವನ್ನು ನಡೆಸಿತ್ತೆಂಬುದನ್ನು ಆ ಕಾಲದ ಚರಿತ್ರೆ ತಿಳಿಸುತ್ತದೆ. ಹೀಗೆ ಹಿಂದೂ ಮುಸ್ಲಿಂ ರಾಜಕೀಯ ಸಂಘರ್ಷ ನಂತರ ಅವೆರಡನ್ನೂ ಬದಿಗೊತ್ತಲು ಪ್ರಯತ್ನಿಸಿದ ಆಂಗ್ಲರ ಆಗಮನ ಮತ್ತು ಹೋರಾಟಗಳು ಧಾರ್ಮಿಕ ಕ್ಷೇತ್ರದಲ್ಲಿ ಸಂಘರ್ಷವನ್ನುಂಟು ಮಾಡಿದವು. ಅಸ್ತಿತ್ವದ ಪ್ರಶ್ನೆ ಬಂದಾಗ ಸಮನ್ವಯತೆಗೆ ದಾರಿಮಾಡಿಕೊಟ್ಟವು ''ನುಂಗಲೂ ಆಗದ ಉಗುಳಲೂ ಆಗದ ಸಮಾಜೋ ಧಾರ್ಮಿಕ ವಾತಾವರಣ ನಿರ್ಮಾಣವಾಗಿ ಹಿಂದೂಗಳು ದಿಕ್ಕು ತೋಚದ ವಾತಾವರಣದಲ್ಲಿ ಬಾಳುವ ಪರಿಸರ ಉಂಟಾಯಿತು.''[೧೭] ಇಂಥ ಸಂದರ್ಭದಲ್ಲಿ ಶೈವ ಮತ್ತು ವೀರಶೈವದ ಸಮ್ಮಿಶ್ರತೆಯ ಸಂಕೇತವಾಗಿ ಹರಿ-ಹರ ಸಾಮ್ಯತೆಯನ್ನು ಸಾರುವ ವಿಶಾಲ ದೃಷ್ಟಿಕೋನದ 'ವೀರಶೈವನಿಷ್ಠ ಕವಿ'ಯಾಗಿ ಶಂಕರಕವಿಯು ಕೃತಿರಚನೆ ಮಾಡಿದ್ದಾನೆ.

೨.೩. ಸಾಮಾಜಿಕ ಪರಿಸರ

೧೫ನೆಯ ಶತಮಾನದಿಂದ ಮುಂದೆ ಕರ್ನಾಟಕದ ಜನಜೀವನವು ತನ್ನ ಅದ್ಭುತವಾದ ಸಾಮರ್ಥ್ಯವನ್ನು ಅತ್ಯಂತವಾದ ದೌರ್ಬಲ್ಯವನ್ನೂ ತುತ್ತತುದಿಯಲ್ಲಿ ತೋರಿಸಿದೆ. ೧೫ನೆಯ ಶತಮಾನಕ್ಕಿಂತ ಹಿಂದೆ ಜನ ಜೀವನವನ್ನು ತಿಳಿಯಲು ಶಾಸನ, ಗ್ರಂಥಗಳ ಆಕರಗಳು ಮಾತ್ರ ಇದ್ದರೆ ೧೫ನೆಯ ಶತಮಾನದಿಂದ ಮುಂದೆ ಅವುಗಳ ಜೊತೆಗೆ ವಿದೇಶೀಯ ಪ್ರವಾಸಿಕರ ಮತ್ತು ವ್ಯಾಪಾರಿಗಳ ವರ್ಣನೆಗಳೂ ಚರಿತ್ರ ಲೇಖಕರ

ಬಖೈರುಗಳೂ ದೊರೆಯುತ್ತವೆ.ವಿಜಯನಗರ ಕಾಲದಲ್ಲಿ ದೊರೆಯುವ ವಿಪುಲ ಸಾಮಗ್ರಿಯಿಂದ ಕನ್ನಡ ರಾಜರ ಮತ್ತು ಪ್ರಜೆಗಳ ಶೌರ್ಯ, ಸಂಘಟನ ಶಕ್ತಿ, ಸರ್ವಧರ್ಮಪ್ರೇಮ, ಉಪಕಾರ ಬುದ್ಧಿ, ರಸಿಕತೆ ಇವನ್ನು ತಿಳಿದುಕೊಳ್ಳುವಂತೆ ಪರಿಸ್ಥಿತಿಯೊಡನೆ ಬದಲಾಗದ ಅವರ ಸ್ಥಿತಿಪ್ರಿಯತೆ, ಅಂಧವಾದ ವ್ಯಕ್ತಿ ಪೂಜೆ ಲೋಭಪೂರ್ವಕವಾದ ಅಂತಃಕಲಹ, ಅನೈಕ್ಯ, ಭೋಗಾತಿರೇಕ ಈ ಮುಂತಾದ ದೌರ್ಬಲ್ಯದರ್ಶಕ ದೋಷಗಳನ್ನು ತಿಳಿಯಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ಇವೆರಡೂ ಸಂಮಿಶ್ರವಾಗಿ ತೋರಿದುವು. ತನ್ನ ಉತ್ತಮಿಕೆಯಲ್ಲಿ ವಿಜಯನಗರವು ದಕ್ಷಿಣ ಭಾರತದ ಕನ್ನಡ-ತಮಿಳು-ತೆಲುಗು ಮುಂತಾಗಿ ಎಲ್ಲ ಭಾಷೆಗಳ ಹಾಗೂ ಶೈವ, ವೈಷ್ಣವ, ವೀರಶೈವ, ಜೈನ, ಮುಸ್ಲಿಂ ಮುಂತಾದ ಎಲ್ಲ ಮತಗಳ ಆಶ್ರಯ ಸ್ಥಾನವಾಯಿತು. ಕನ್ನಡಿಗರ ಸಮನ್ವಯ ಬುದ್ಧಿ ಈ ಕಾಲದಲ್ಲಿ ಕಳಸಕ್ಕೆ ಮುಟ್ಟಿತು. ಸಮಾಜದಲ್ಲಿ ಸಮಾನತೆ ಸ್ಥಾಪಿಸಲೆಂದೇ ಉದಯವಾದದ್ದು ವೀರಶೈವ ಮತ ಕೆಲವೇ ಕಾಲದಲ್ಲಿ ''ನುಂಗಿದ ಅಮೃತವನ್ನು ಉಗುಳಿದಂತೆ ಸಾಂಪ್ರದಾಯಿಕ ಸಮಾಜವು ಮತ್ತೆ ತನ್ನ ದಾರಿಯನ್ನು ಹಿಡಿದಿತ್ತು. ಇದರಿಂದಾಗಿ ಕೆಲಕಾಲ ಶರಣ ಮಾರ್ಗವು ಹಿಮ್ಮೆಟ್ಟಿದಂತಾಯಿತು. ಮಹಮ್ಮದೀಯರ ಆಘಾತಕ್ಕೆ ಸಿಲುಕಿದ ಜನಸಾಮಾನ್ಯವು ಕಂಗೆಟ್ಟು ಹೋದರೂ ಪೂರ್ವಪುಣ್ಯದಿಂದ ಮತ್ತೆ ಜಾಗ್ರತವಾಗಿ ವಿಜಯನಗರದ ಏಕಚ್ಛತ್ರದ ಕೆಳಗೆ ನೆರೆಯಿತು ವೈದಿಕ ಜೈನ ವೀರಶೈವಗಳ ಜೊತೆಗೆ ಮುಸ್ಲಿಂ ಪ್ರಭಾವವೂಸೇರಿಕೊಂಡು ಸಮನ್ವಯತೆ ಸಾಮರಸ್ಯಕ್ಕೆ ದಾರಿಯಾಯಿತು. ವೈವಿಧ್ಯದಲ್ಲಿ ಐಕ್ಯವನ್ನು ತನ್ನ ಬಗೆಯಲ್ಲಿ ಕನ್ನಡ ಸಂಸ್ಕೃತಿ ಸಾಧಿಸಿ ತೋರಿಸಿತು.''[೧೮] ಹೀಗೆ ಧರ್ಮವೇ ಸಮಾಜವನ್ನು ನಿಯಂತ್ರಿಸುವ ಪ್ರಧಾನ ಶಕ್ತಿಯಾಗಿತ್ತು. ವಿವಿಧ ವರ್ಣ-ವರ್ಗ-ಜಾತಿಗಳಿಂದ ಲಿಂಗಭೇದದ ತರತಮ ನೀತಿಯಿಂದ ತುಂಬಿದ ಸಮಾಜದಲ್ಲಿ ಒಳಗೊಳಗೇ ಮುಸುಕಿನ ಗುದ್ದಾಟವನ್ನು ಎದುರಿಸುತ್ತಿದ್ದರೂ ಕಾಲಕಾಲಕ್ಕೆ ಏಳು-ಬೀಳುಗಳನ್ನು ಕಾಣುತ್ತಾ ಬಂದಿದೆ. ಪಾಶ್ಚಾತ್ಯರ ಸಂಪರ್ಕಗಾಢವಾಗಿ ಆಗುವವರೆಗೂ ಸಾಮಾಜಿಕ ಪರಿಸ್ಥಿತಿಯು ಹೆಚ್ಚೇನೂ ಬದಲಾವಣೆ ಕಾಣಲಿಲ್ಲ. ಇಂಥ ಸಾಮಾಜಿಕ ವಾತಾವರಣದಲ್ಲಿ ಕೋಳೂರು ಶಂಕರ ಕವಿಯು ವೀರಶೈವ ಧರ್ಮತತ್ವಗಳ ಪ್ರಸಾರ-ಪ್ರಚಾರಗಳ ಜೊತೆಗೆ 'ಸಾಮರಸ್ಯ'ದ ಪ್ರತೀಕವಾದ ಕೃತಿಗಳ ರಚನೆಯಲ್ಲಿ ತೊಡಗಿದ್ದು ತಿಳಿದು ಬರುತ್ತದೆ.

೨.೪. ಸಾಹಿತ್ಯಿಕ ಸ್ವರೂಪ

ಸಾಹಿತ್ಯವು ಸಮಾಜದ ಪಡಿನೆಳಲು ಎಂಬುದು ಪ್ರಚಲಿತವಾದ ಮಾತು. ''ಯಾವುದೇ ದೇಶದ ಸಾಹಿತ್ಯಿಕ ಬದಲಾವಣೆಗೆ ಆನೆಲದ ಸಾಮಾಜಿಕ ಚಲನವಲನಗಳು ಪ್ರೇರಣೆ ನೀಡುವಂತೆ, ಸಾಹಿತ್ಯಿಕ ಚಲನವಲನಗಳೂ ಸಾಮಾಜಿಕ ಬದಲಾವಣೆಗೆ ಪ್ರೇರಣೆ ನೀಡುತ್ತವೆ.''[೧೯] ಅಂದರೆ ಸಾಮಾಜವನ್ನು ರೂಪಿಸುವ ಸಾಧನಗಳಲ್ಲಿ ಸಾಹಿತ್ಯವೂ ಒಂದಾಗಿದೆ. ಪ್ರಾಚೀನ ಕರ್ನಾಟಕದ ಶಿಷ್ಟಪದ ಸಾಹಿತ್ಯವು ಪ್ರೌಢ ಕಾವ್ಯದಿಂದ ಪ್ರಚುರವಾಗಿದ್ದು ಅರಮನೆಗೆ ಮೀಸಲಾಗಿತ್ತು. ವಿದ್ವಜ್ಜನ ಮಾನ್ಯವಾಗಿತ್ತು. ಆದರೆ ಮಧ್ಯಯುಗೀನ ಕರ್ನಾಟಕವು ರಾಜಪ್ರಭುತ್ವಕ್ಕೆ ಕ್ರಮೇಣ ಬೆನ್ನು ತಿರುಗಿಸುತ್ತಾ ಸಾಮಾನ್ಯನಿಗೆ ಧ್ವನಿ ನೀಡುವ, ಮಾರ್ಗದಿಂದ ದೇಸಿಗೆ ಸಂಕ್ರಮಣವಾಗುತ್ತಿರುವ

[illegible]

ಸಾಹಿತ್ಯದಿಂದ ಪ್ರಚುರವಾಗಿತ್ತು. ವಚನಸಾಹಿತ್ಯವನ್ನು ತಮ್ಮ ಸಮಗ್ರಕ್ರಾಂತಿಯ ಪ್ರಬಲ ಅಸ್ತ್ರವನ್ನಾಗಿಸಿಕೊಂಡು ಶಿವಶರಣರು ಸಾಹಿತ್ಯ ರಚನೆಮಾಡಿದರು. ವಸ್ತು-ಭಾಷೆ-ತಂತ್ರ ಧೋರಣೆಗಳಲ್ಲಿ ಹೊಸತನವನ್ನು ತುಂಬಿ ಕನ್ನಡ ಸಾಹಿತ್ಯಕ್ಕೆ ಹೊಸ ಜೀವಕಳೆಯನ್ನು ತಂದಿತ್ತರು. ಶಿವಶರಣರ ತರುವಾಯ ಬಂದ ಶಿವಕವಿಗಳಾದ ಹರಿಹರ, ರಾಘವಾಂಕ, ಭೀಮಕವಿ, ಚಾಮರಸ, ವಿರೂಪಾಕ್ಷ ಪಂಡಿತ. ಲಕ್ಕಣ್ಣದಂಡೇಶ, ಷಡಕ್ಷರಿ ಮುಂತಾದವರ ಕೃತಿಗಳಲ್ಲಿ, ಪ್ರೌಢದೇವರಾಯನ ಕಾಲದಲ್ಲಿ ನಡೆದ ವೀರಶೈವಪುನರುಜ್ಜೀವನ ಸಂದರ್ಭದ ನೂರೊಂದು ವಿರಕ್ತರ ವಚನ ಸಂಕಲನ ಸಂಪಾದನೆಗಳಲ್ಲಿ, ಎಡೆಯೂರು ಸಿದ್ಧಲಿಂಗನ ಕಾಲದ ಏಳನೂರೊಂದು ವಿರಕ್ತರ ಬದುಕು ಬರಹಗಳಲ್ಲಿ ಬಸವಾದಿ ಶಿವಶರಣರ ದಟ್ಟವಾದ ಪ್ರಭಾವವನ್ನು ಗುರುತಿಸುತ್ತೇವೆ. ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಕೃತಿ ರಚಿಸದೆ ಗಿರೀಶನಿಗೆ ತನ್ನನಾಲಿಗೆಯನ್ನು ಮಾರಿ, ಹಂಪೆಯಾಳ್ದನನ್ನು ಕುರಿತು ಕಾವ್ಯರಚಿಸುವ ಹರಿಹರನ ಧೋರಣೆಯನ್ನೇ ಶಂಕರಕವಿಯೂ ಅನುಸರಿಸಿದ್ದಾನೆ. ವಿಜಯನಗರ ಸಾಮ್ರಾಜ್ಯವು ಇಳಿಮುಖವಾಗಿ ವೈದಿಕ ಜೈನ ಧರ್ಮಗಳಂತೆ ವೀರಶೈವವೂ ತನ್ನ ಅಸ್ತಿತ್ವಕ್ಕಾಗಿ ಹೋರಾಡಬೇಕಾಯಿತು. ಇಂಥ ಪುನರುಜ್ಜೀವನ ಕಾಲದಲ್ಲಿ ಬಾಳಬೇಕಾದ ವೀರಶೈವ ಕವಿಗಳು, ವಿದ್ವಾಂಸರು ಮತ್ತೆ ಜನಸಾಮಾನ್ಯರಲ್ಲಿ ತಮ್ಮ ಧರ್ಮ ತತ್ವಗಳನ್ನು ಬಿತ್ತಿದ ನಾಯಕರ ಚರಿತ್ರೆಗಳನ್ನು, ತಮಗಿಂತಲೂ ಪ್ರಾಚೀನ ಪರಂಪರೆಯುಳ್ಳ ವೈದಿಕ, ಜೈನ ಪುರಾಣ ಕವಿಗಳೊಂದಿಗೆ ಸ್ಪರ್ಧಿಸಿ, ಕೆಲವೆಡೆ ಅವರನ್ನು ಅನುಕರಿಸಿ ಅವರಿಗೆ ಸರಿಮಿಗಿಲೆನ್ನುವಂತೆ ಪವಾಡ ಕಥೆಗಳನ್ನು ಆಯ್ದುಕೊಂಡು ಪುರಾಣ ಕಾವ್ಯಗಳನ್ನು ಬರೆಯಲು ಪ್ರಾರಂಭಿಸಿದರು. ಹೀಗೆ ಮಾಡುವಾಗ ಅನೇಕ ವೀರಶೈವವಲ್ಲದ ಅಂಶಗಳೂ ಬಂದು ಸೇರಿದುವು ಸರಿಯಾಗಿ ಅವಲೋಕಿಸಿದರೆ ವಚನಕಾರರ ಸಂದರ್ಭದಲ್ಲಿಯೇ ಶೈವ ವೀರಶೈವದ ಸಮ್ಮಿಶ್ರಣ ಸ್ಥಿತಿಯು ಕಂಡುಬರುತ್ತದೆ. ಆದ್ದರಿಂದ ಅನಂತರ ಬಾಳಿದ ವೀರಶೈವ ಪುರಾಣ ಕವಿಗಳಲ್ಲಿ ಈ ಸಂಮಿಶ್ರಣ ಅಧಿಕವಾಗಿ ಕಂಡರೆ ಆಶ್ಚರ್ಯವಿಲ್ಲ"[೨೦] ಕನ್ನಡ ಬಸವಪುರಾಣ ಕಾವ್ಯಗಳ ರಚನಾ ಸ್ವರೂಪಕ್ಕೆ ಹರಿಹರನೇ ಮೊದಲಿಗನೆನ್ನಬಹುದು. ಶಂಕರಕವಿಯ ಕೃತಿಗಳೂ ಶೈವ-ವೀರಶೈವದ ಸಮ್ಮಿಶ್ರಣ ಕಾಲದ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತವೆಂಬುದು ಗಮನಿಸಬೇಕಾದ ಸಂಗತಿ.

ಮಧ್ಯಕಾಲೀನ ಕರ್ನಾಟಕದಲ್ಲಿ ಉದ್ಭವಿಸಿದ ಇನ್ನೊಂದು ಭಕ್ತಿ ಪಂಥವೆಂದರೆ ಹರಿದಾಸರದ್ದು. ಇದೂ ಜನಸಂಸ್ಕಾರಕವಾದ ಆಂದೋಲನದ ಸ್ವರೂಪವನ್ನು ತಾಳಿ ಮಾಧ್ವತತ್ವ ಹಾಗೂ ಆಚಾರ ಧರ್ಮವನ್ನು ಕೀರ್ತನೆಗಳ ಮೂಲಕ ಕನ್ನಡದ ಮನೆ ಮನೆಗಳಲ್ಲಿ ಸಾರಿತು. ಮಾತ್ರವಲ್ಲ ಹರಿ-ಹರ ಸಾಮ್ಯತೆಯ ಭಾಗವತ ಧರ್ಮವನ್ನೂ ಸಾಮಾಜಿಕ ನೀತಿಯನ್ನೂ ಬೋಧಿಸಿತು. ಪ್ರಧಾನವಾಗಿ 'ಕನಕದಾಸರ' ಕೃತಿಗಳಲ್ಲಿ ಇಂಥ ದರ್ಶನವನ್ನು ಕಾಣುತ್ತೇವೆ. ಶಂಕರಕವಿಯ ಮೇಲೆ ಕನಕದಾಸರ ಪ್ರಭಾವವಾಗಿರುವುದನ್ನು ಗುರುತಿಸಬಹುದು.

ವಿದೇಶೀ ನೆಲದಿಂದ ಕರ್ನಾಟಕಕ್ಕೆ ಆಗಮಿಸಿದ ಇಸ್ಲಾಂ ಧರ್ಮ ಉತ್ತರ ಭಾರತದಿಂದ ತಮ್ಮ ಪ್ರಭುಗಳೊಂದಿಗೆ ಆಗಮಿಸಿದ ಸೂಫಿ ಸಂತರುಗಳ ಪ್ರಭಾವದಿಂದಾಗಿ ಕನ್ನಡ ನಾಡಿನಲ್ಲಿಯೂ ಅನೇಕ ಸೂಫಿಸಂತರು

ಉದಯಿಸಿದರು ಅವರಲ್ಲಿ ತಿಂಥಿಣಿ ಮೋನಪ್ಪಯ್ಯ ಕೂಡ ಹೆಸರಾಂತ ಸೂಫಿಸಂತರಾಗಿದ್ದಾರೆ. ಅವರ ಪ್ರಭಾವಕ್ಕೊಳಗಾದ ಶಂಕರಕವಿಯು ಅವರ ಕುರಿತಾಗಿ ಒಂದು ಸಾಂಗತ್ಯ ಕಾವ್ಯವನ್ನು ರಚಿಸಿದ್ದಾನೆ.

ಡಾ. ರಂ.ಶ್ರೀ.ಮುಗಳಿಯವರು ೧೫ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ವಿಸ್ತಾರವಾಗಿರುವ 'ಕುಮಾರವ್ಯಾಸಯುಗ'ವನ್ನು 'ದೇಸಿಪ್ರಚುರ'ವೆಂದು ಗುರುತಿಸಿದ್ದಾರೆ. ಅವರೇ ಹೇಳುವಂತೆ ಎಲ್ಲಮತದವರೂ ಹಳೆಯ ಹೊಸ ವಿಷಯ ರೂಪ-ಶೈಲಿಗಳನ್ನು ಬಳಸಿ ಬರೆದಿದ್ದಾರೆ. ಸಂಕೀರ್ಣತೆಯೇ ಈ ಯುಗದ ವೈಶಿಷ್ಟ್ಯವೆನ್ನುವಂತೆ ಪರಿಸ್ಥಿತಿಯಿದೆ. ಅಲ್ಲದೆ ರಾಜಾಶ್ರಯದ ದೃಷ್ಟಿಯಿಂದ ವಿಜಯನಗರದ ರಾಯರು, ಮೈಸೂರಿನ ಒಡೆಯರು ಹಾಗೂ ಕಿರುದೊರೆಗಳು ಇವರೆಲ್ಲರ ಆಶ್ರಯದಲ್ಲಿ ಮತ್ತು ಪ್ರೇರಣೆಯಿಂದ ಕನ್ನಡ ಸಾಹಿತ್ಯವು ಅನೇಕ ಮುಖವಾಗಿ ಈ ಯುಗದಲ್ಲಿ ಹೊಮ್ಮಿದೆ. ಇಷ್ಟಿದ್ದರೂ ಸಹ ಚಾರಿತ್ರಿಕವಾಗಿ ಸ್ಥೂಲಮಾನದಿಂದ ನೋಡಿದರೆ, ದೇಸಿಯ ಮುಖ್ಯ ತತ್ವಗಳಾದ ಅಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ಜನತಾದೃಷ್ಟಿ ಇವು ಈ ಯುಗದಲ್ಲಿ ಹೆಚ್ಚು ಪ್ರಮಾಣದಲ್ಲಿ ತೋರಿದ್ದು ಬಹುಶಃ ಎಲ್ಲ ಗ್ರಂಥಕಾರರ ಮೇಲೆ ದೃಢವಾದ ಪರಿಣಾಮ ಬೀರಿದೆ. ಷಟ್ಪದಿಯೇ ಈ ಯುಗದ ಪ್ರಧಾನ ಕಾವ್ಯರೂಪವಾಯಿತು. ಅದರಲ್ಲಿಯೂ ಭಾಮಿನಿ, ತರುವಾಯ ವಾರ್ಧಕಗಳು ಲೋಕಪ್ರಿಯವಾದವು ದೇಶ್ಯ ಛಂದಸ್ಸಿನ ಇತರ ರೂಪಗಳಲ್ಲಿ ಸಾಂಗತ್ಯವು ಬಹುಶಃ ಇದೇ ಯುಗದಲ್ಲಿ ಸಾಹಿತ್ಯ ಮಂದಿರವನ್ನು ಪ್ರವೇಶಿಸಿ ಏರೇರುತ್ತ ಹೋಗಿ 'ರತ್ನಾಕರವರ್ಣಿ'ಯ ಭರತೇಶ ವೈಭವದಲ್ಲಿ ಕಳಸವನ್ನು ಮುಟ್ಟಿತು.

ಈ ಮಧ್ಯೆ ೧೭ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಕಾಲಿಟ್ಟ ಕ್ರೈಸ್ತ ಮಿಶನರಿಗಳು ಕರ್ನಾಟಕದಲ್ಲಿ ತಮ್ಮ ಆಳ್ವಿಕೆಯನ್ನು ನೆಲೆಯೂರಿಸಲು, ಕ್ರೈಸ್ತಮತ ಪ್ರಚಾರ ಮಾಡಲು ಕನ್ನಡವನ್ನು ಕಲಿಯತೊಡಗಿದರು ೧೮ನೆಯ ಶತಮಾನದಲ್ಲಿ ಕಿರುತೊರೆಯೋಪಾದಿಯಲ್ಲಿ ನಡೆದ ಸೇವೆ ೧೯ನೆಯ ಶತಮಾನದಲ್ಲಿ ಮಹಾನದಿಯಂತೆ ಕನ್ನಡ ಸಾಹಿತ್ಯದತ್ತ ಹರಿದು ಬಂತೆಂಬುದನ್ನೂ ಗಮನಿಸಬೇಕು. ಇಪ್ಪತ್ತನೇ ಶತಮಾನಕ್ಕೆ ಹಿಂದಿನ ಮೂರು ಶತಮಾನಗಳ ಕನ್ನಡ ಸಾಹಿತ್ಯದಲ್ಲಿ ಯಾವ ಪ್ರಕಾರಗಳಲ್ಲಿಯೂ ಕಣ್ಣುಕುಕ್ಕುವಂತಹ ಸಾಧನೆ ಇಲ್ಲ ಕನ್ನಡ ನಾಡಿನ ರಾಜಕೀಯ ಇತಿಹಾಸದಲ್ಲಿಯೂ ಹದಿನೆಂಟು ಹತ್ತೊಂಭತ್ತನೆಯ ಶತಮಾನಗಳು ಅತ್ಯಂತ ದುರ್ದೆಸೆಯ ದಿನಗಳು. ವಿದೇಶೀಯರ ಸಾಮ್ರಾಜ್ಯದಾಹಕ್ಕೆ ಕರ್ನಾಟಕದವರ ಪರಸ್ಪರ ಕಚ್ಚಾಟಗಳೇ ಅನುಕೂಲವನ್ನು ಕಲ್ಪಿಸಿಕೊಟ್ಟವು. ಜನಜೀವನದಲ್ಲಿದ್ದ ಈ ಅಸ್ಥಿರತೆ ಸಹಜವಾಗಿಯೇ ಅಂದಿನ ಸಾಹಿತ್ಯ ದಲ್ಲಿಯೂ ಪ್ರತಿಬಿಂಬಿಸಿದೆ.[೨೧] ಹದಿನೆಂಟನೆಯ ಶತಮಾನ ಮತ್ತು ಹತ್ತೊಂಭತ್ತನೆಯ ಶತಮಾನದ ಬಹುಭಾಗದಲ್ಲಿ, ಕನ್ನಡ ಸಾಹಿತ್ಯ ರಚನೆಯು ನಿಂತುಹೋಯಿತು ಎನ್ನುವಂತಿಲ್ಲವಾದರೂ ಶ್ರೇಷ್ಠ ಸಾಹಿತ್ಯ ಕಾಣಿಸಿಕೊಳ್ಳಲಿಲ್ಲ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ ಇಂಥ ನಿಸ್ತೇಜಕಾಲದಲ್ಲಿ ಕೋಳೂರು ಶಂಕರಕವಿಯು ಉತ್ತಮ ಪುರಾಣ ಕಾವ್ಯಗಳ ಸಾಲಿಗೆ ಸೇರಬಹುದಾದ ಚೋರಬಸವೇಶ್ವರ ಕಾವ್ಯವನ್ನು ವಾರ್ಧಕ ಷಟ್ಪದಿಯಲ್ಲಿ, ಸಮನ್ವಯ ಪಂಥದ ಪ್ರತಿಪಾದಕ ಸೂಫಿ ಸಂತ ಶರಣ ಮೋನಪ್ಪಯ್ಯನನ್ನು ಕುರಿತು

ಮೊಟ್ಟಮೊದಲ ಶಿಷ್ಟಕಾವ್ಯವನ್ನು ಸಾಂಗತ್ಯದಲ್ಲಿ. ಹರಿ-ಹರ ಸಮನ್ವತೆಯ ಭಾಗವತ ಧರ್ಮದ ದೃಷ್ಟಿಕೋನವನ್ನು ಸಾರುವ 'ನವಮೋಹನ ತರಂಗಿಣಿ'ಯನ್ನು ವಾರ್ಧಕ ಷಟ್ಪದಿಯಲ್ಲಿ ವೀರಶೈವ ಧರ್ಮದ ಸರಳ ಪುಟ್ಟ ಕೈಪಿಡಿಯಂತೆ ತೋರುವ ಮಾಧವಾಂಕ ಕಾವ್ಯವನ್ನು ವಾರ್ಧಕ ಷಟ್ಪದಿಯಲ್ಲಿ, ಗಾತ್ರದಲ್ಲಿ ಕಿರಿದಾದರೂ ಸತ್ವದಲ್ಲಿ ಹಿರಿದಾಗಿರುವ ಸುಜ್ಞಾನಸುಧಾಕರ ಪಂಚವಿಂಶತಿ ಮತ್ತು ಸ್ವರವಚನಗಳು ಸೇರಿ ಒಟ್ಟು ಆರು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ನೀಡಿದ್ದಾನೆ. ಉತ್ತಮ ಷಟ್ಪದಿಕಾರನ ಲಕ್ಷಣಗಳುಳ್ಳ ಶಂಕರಕವಿಯನ್ನು 'ನಿಸ್ತೇಜಕಾಲದ ಬೆಳ್ಳಿ ಕಿರಣ' ಎಂದರೆ ಅತಿಶಯೋಕ್ತಿ ಆಗದೇನೋ.

ಇತಿವೃತ್ತ : ಕೋಳೂರು ಶಂರಕವಿ ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದ ಅವಧಿಯಲ್ಲಿದ್ದ ಒಬ್ಬ ವಿಶಿಷ್ಟಕವಿ.

ಗುರುಪರಂಪರೆ : ಕುಪ್ಪಸಕಂಥೆ ಗುರುವರ್ಯರ ಅಮಳಕರಸರಸಿರುಭವನಾದ ಈತ 'ಗುರುಬಸವ'ನಿಂದ ಲಿಂಗದೀಕ್ಷೆಯನ್ನು ಪಡೆದವನು.

ಎನ್ನ ಪರಿಭವಲತೆಯ ಪರಿದು ಪಾವನ ಮಾಡಿ
ತನ್ನ ಚಿತ್ಕಳೆ ಜ್ಯೋತಿಯಿಂದೆ ಮದ್ ಹೃದಯ
ದುನ್ನತ ಜ್ಞಾನ ತಾಮಸವ ಪರಿಹರಿಸಿ ಸುಜ್ಞಾನ ಪ್ರಭಾಮಯದೊಳು
ಚನ್ನಾಗಿ ತೊಳಪಚಿಲ್ಲಿಂಗ ಮತ್ಕರಪೀಠ
ದಿನ್ನಿಲಿಸಿ ಲಿಂಗಾಂಗ ಸಮರಸಂ ಗೊಳಿಸಿನಿ
ರ್ಭಿನ್ನತ್ವದಿಂದ ನಿಜಸುಖದೋಳೋಲಾಡಿಸಿದ ಗುರುಬಸವರಡಿಗೆ ಶರಣು

(ಚೋರಬಸವೇಶ್ವರ ಕಾವ್ಯ ಸಂಧಿ ೧೩೩೭ಪ)

ಎಂದು 'ಗುರಬಸವ'ರಿಗೆ ಭಕ್ತಿಯಿಂದ ನಮಿಸಿದ್ದಾನೆ. ಪರಮಶಂಕರನ ಚಿತ್ಕಳೆಯೇ ಗುರುರೂಪವನ್ನು ಧರಿಸಿ ಚರಚಕ್ರವರ್ತಿಯೆಂದು ಮೆರೆದು ನಿಜಲೀಲಾಮೃತವನುಂಡು ಸುಖಿಪ ಪರತರ ಕೊಂಡ ಕುಂದೆ ಕರಿಬಸವರಾಜ ಯೋಗೀಂದ್ರರನ್ನು ಭಕ್ತಿ ಪೂರ್ವಕವಾಗಿ ತನ್ನ ಕಾವ್ಯಗಳಲ್ಲಿ ಸ್ತುತಿಸಿದ್ದಾನೆ. ಈ ಕರಿಬಸವರಾಜ ಯೋಗೀಂದ್ರರು ಉರುವಕೊಂಡದ ಜಗದ್ಗುರುಗಳು.

ಸ್ಥಳವಿವೇಚನೆ

''ಶಂಕರಕವಿಯ ಊರು ಕೋಳೂರು. ಈ ವಿಷಯವಾಗಿ ಡಾ. ಎಂ.ಎಸ್.ಸುಂಕಾಪುರ ಅವರು ಎರಡು ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೧. ಈ ಹೆಸರಿನ ಗ್ರಾಮಗಳು ಕನ್ನಡ ನಾಡಿನಲ್ಲಿ ಅನೇಕ ಇವೆ. ಹಂಪೆಯ ವಿರೂಪಾಕ್ಷನನ್ನು, ತುಂಗಭದ್ರಾ ನದಿಯನ್ನೂ ಈತ ಉತ್ಕಟ ಅಭಿಮಾನದಿಂದ ತನ್ನ ಕಾವ್ಯದಲ್ಲಿ ಬಣ್ಣಿಸಿರುವುದರಿಂದ ಹಂಪೆಯ ಸಮೀಪದವನೆಂದು ಕಂಡುಬರುತ್ತದೆ.

೨. ಯಾದಗಿರಿ ತಾಲೂಕಿನಲ್ಲಿರುವ ಕೋಳೂರು ಆತನ ಸ್ಥಳವಿದ್ದರೂ ಇರಬಹುದು. ಅಲ್ಲಿರುವ ರಾಮೇಶ್ವರ ಪ್ರಸಿದ್ಧ ದೇವನೆಂದು ವಾಡಿಕೆ ಇದೆ. ಮೊದಲ ಅಭಿಪ್ರಾಯಕ್ಕೆ ಪೂರಕವೆಂಬಂತೆ ಹಂಪೆಯ ವಿರೂಪಾಕ್ಷನನ್ನು ತುಂಗಭದ್ರಾ ನದಿಯನ್ನು ಕವಿ ತನ್ನ ಕಾವ್ಯದಲ್ಲಿ ಮನದುಂಬಿ ವರ್ಣಿಸಿದ್ದಾನೆ.

> ವರಕೃತಿಯ ಮಿದರ ಪ್ರಾರಂಭಮೆಂತೆನೆ ಸಪ್ತ
> ಶರಧಿ ಮಧ್ಯದೊಳಿಹುದು ಜಂಬುದ್ವೀಪದ ಮಧ್ಯ
> ದುರೆಕನಕಚಲಮಿಹುದುಮದರ ದಕ್ಷಿಣದಿ ಭರತಾಖ್ಯಖಾಂಡಮದಿರ್ಪುದು
> ಮೆರೆವುತದರೊಳಗೆ ಛಪ್ಪನ್ನ ದೇಶಂಗಳಂ
> ಪರತರಂತದರೊಳಂ ಕುಂತಳಾಹ್ವಯದೇಶ
> ಕರಮೆಸೆಗು ಮತ್ತಲ್ಲಿ ದಕ್ಷಿಣಸುಕಾಶಿ ಶಿವವಾಸಿ ಮುಕ್ತಿಯ ನಿವಾಸಿ

(ಚೋರಬಸವೇಶ್ವರ ಕಾವ್ಯ ಸಂ-೧ ಪು-೧೫)

ಎಂದು ಹೇಳವುದರ ಜೊತೆಗೆ ಸಕಲಕ್ಷೇತ್ರಗಳಿಗೆ ಗುರುನೆಲೆ, ಭೂಮಿಯೊಳಗಿರುವ ಎಲ್ಲ ಕ್ಷೇತ್ರಗಳೂ ಪಂಪಾಕ್ಷೇತ್ರಕ್ಕೆ ಗುಂಜೀತೂಕ, ತುಂಗಭದ್ರೆಯನ್ನು ಕಂಡರೆ, ಸ್ಪರ್ಶಿಸಿದರೆ ಮಹಾಪುಣ್ಯ ಅದರಲ್ಲಿ ಸ್ನಾನಮಾಡಿ ಪಾನಗೈದವರಿಗೆ ಪಾವನತೆ ಪ್ರಾಪ್ತ. ಪಾಪಿಗಳ ಪಾಪವನ್ನು ತೊಳೆಯುವ ಶಕ್ತಿ ಇದಕ್ಕಿದೆ ಎಂದು ಹೇಳುವ ರೀತಿಯನ್ನು ಗಮನಿಸಿದರೆ ಹಂಪೆಯನ್ನು ತುಂಬ ಹತ್ತಿರದಿದಂ ಕವಿ ನೋಡಿರಬೇಕೆನಿಸುತ್ತದೆ."[೨೨] ಈ ಅಂಶವನ್ನು ಆಧಾರವಾಗಿಟ್ಟುಕೊಂಡು ವಿದ್ವಾಂಸರು ಹಂಪೆಯ ಪ್ರದೇಶದಲ್ಲಿ ನಡೆಸಿದ ಶೋಧದಿಂದ ಬೆಳಕಿಗೆ ಬಂದಿರುವ ಹೊಸ ಸಂಗತಿಗಳು ಹೀಗಿವೆ. ''ಬಳ್ಳಾರಿಯಿಂದ ಸಿರುಗುಪ್ಪ ರಸ್ತೆಗುಂಟ ೨೦ ಕಿ.ಮೀ. ಕ್ರಮಿಸಿದರೆ ಎಡಭಾಗದಲ್ಲಿ 'ಕೋಳೂರು' ಎಂಬ ಚಿಕ್ಕಗ್ರಾಮವೊಂದು ಬರುತ್ತದೆ. ಆ ಗ್ರಾಮದ ಮೇಲ್ಭಾಗದಲ್ಲಿ 'ರಾಮಲಿಂಗೇಶ್ವರ' ಹೆಸರಿನ ದೇವಸ್ಥಾನವೊಂದು ಕಾಣುತ್ತದೆ. ಅದರ ಶಿಲ್ಪರಚನೆಯನ್ನು ನೋಡಿದರೆ ಅದು ೪೦೦ ವರ್ಷಗಳಷ್ಟು ಪ್ರಾಚೀನವೆಂಬುದು ಸ್ಪಷ್ಟವಾಗುತ್ತದೆ. ಆ ದೇವಸ್ಥಾನದ ಬಲಭಾಗಕ್ಕೆ ಹೊಂದಿ ಕೊಂಡಿರುವ ಕೋಣೆಯ ಬಾಗಿಲ ಮೇಲೆ" ಹರಿಶಂಕರ ದೇವಸ್ಥಾನ ಎಂಬ ನಾಮಫಲಕವನ್ನು ತೂಗು ಹಾಕಲಾಗಿದೆ. ಆ ಕೋಣೆಯ ಒಳಗಡೆ ಒಂದು ಗದ್ದುಗೆಯಿದೆ. ಇದು ನಿಜ ಸಮಾಧಿಯೋ ಅಥವಾ ಜ್ಞಾಪಕ ಸಮಾಧಿಯೋ ಎಂಬುದರ ಕುರಿತು ಸ್ಪಷ್ಟವಾದ ಮಾಹಿತಿ ಇಲ್ಲ. ಬಹುಶಃ ಇದು ಶಂಕರಕವಿಯ ವಾಸಸ್ಥಳವೆಂದು ತೋರುತ್ತದೆ. ಈ ಕೋಣೆಯಲ್ಲಿಯೇ ಕುಳಿತುಕೊಂಡು ಕವಿ ಕಾವ್ಯವನ್ನು ರಚಿಸುತ್ತಿದ್ದಿರಬಹುದೆಂದು ಅಂದಾಜಿಸಲಾಗಿದೆ.

ಅಲ್ಲದೆ ರಾಮಲಿಂಗೇಶ್ವರ ಈತನ ಆರಾಧ್ಯ ದೈವ ತನ್ನ ಪ್ರತಿಯೊಂದು ಕೃತಿಯಲ್ಲಿಯೂ ಶ್ರೀಕೋಳೂರು ರಾಮೇಶ ನುಡಿಸಿದೊಡೆ ಪೇಳ್ದಶಂಕರನು ಒಲಿದು, ಈ ಧರೆಯೊಳಧಿಕ ಶ್ರೀಕೋಳೂರವಾಸ ರಾಮೇಶನಾಸಾರಿದೇ, ರಾಮೇಶನೆನಗೆ ವರವಿತ್ತಿಹನು ಬಾಲ್ಯದೊಳು, ಭವವಿಮೋಚ ರಾಮೇಶ ಎಂದು ವಿಧವಿಧವಾಗಿ ಅತ್ಯಂತ

ಭಕ್ತಿಯಿಂದ ಪ್ರಾರ್ಥಿಸಿದ್ದಾನೆ. ಶಂಕರಕವಿಯು ಸ್ಮರಿಸಿದ ಕರಿಬಸವರಾಜೇಂದ್ರರು ಉರವಕೊಂಡವರು. ಇದು ಬಳ್ಳಾರಿಯಿಂದ ಅನಂತಪುರಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಬರುತ್ತದೆ. ಒಂದು ಕಾಲಕ್ಕೆ ಇದು ಕರ್ನಾಟಕಕ್ಕೆ ಸೇರಿದುದಾಗಿತ್ತು. ಈ ಎಲ್ಲ ಆಧಾರಗಳಿಂದ ಬಳ್ಳಾರಿ ಜಿಲ್ಲೆಯ ಕೋಳೂರು ಶಂಕರಕವಿಯ ಸ್ಥಳವೆಂಬುದು ಖಚಿತವಾಗಿ ಹೇಳಬಹುದು."[೨೩]

ಕಾಲ : ಸಾಮಾನ್ಯವಾಗಿ ಕವಿಗಳ ಕಾಲ ಮಿತಿಯ ಕುರಿತಾಗಿ ಸಾಕಷ್ಟುವಾದ ವಿವಾದಗಳು ಬೆಳೆಯುವುದುಂಟು. ಆಯಾ ಕವಿಗಳು ತಮ್ಮ ಕಾವ್ಯಗಳಲ್ಲಿ ಕೃತಿರಚನಾ ಕಾಲವನ್ನು ಹೇಳದೇ ಇರುವುದೇ ಅದಕ್ಕೆ ಕಾರಣ ಆದರೆ ಶಂಕರಕವಿಯ ಕಾಲದ ಬಗೆಗೆ ಯಾವ ತೊಡಕೂ ಇಲ್ಲ. ಅವನು ತನ್ನ ಕೃತಿಗಳ ಅಂತ್ಯಭಾಗದಲ್ಲಿ ರಚನಾ ಕಾಲವನ್ನು ತಪ್ಪದೇ ತಿಳಿಸಿದ್ದಾನೆ. ಶಾಲಿವಾಹನ ಶಖ ಸಾವಿರದ ಆರನೂರ ಎಪ್ಪತ್ತಾರರಲ್ಲಿ ಶರಣ ಮೋನಪ್ಪಯ್ಯ ಚರಿತೆಯನ್ನು, ೧೬೭೪ರಲ್ಲಿ ಮಾಧವಾಂಕ ಕಾವ್ಯವನ್ನು, ೧೬೮೫ರಲ್ಲಿ ಚೋರಬಸವೇಶ್ವರ ಕಾವ್ಯವನ್ನು, ೧೬೯೬ ನವಮೋಹನ ತರಂಗಿಣಿಯನ್ನು ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ. ಹೀಗೆ ಕ್ರಿ.ಶ. ೧೭೫೪ರಿಂದ ಕ್ರಿ.ಶ. ೧೭೭೪ರವರೆಗೆ, ಅಂದರೆ ಎರಡು ದಶಕಗಳ ಅವಧಿಯಲ್ಲಿ ಕಾವ್ಯರಚನೆ ಮಾಡಿದ್ದಾನೆಂದು ತಿಳಿದು ಬರುತ್ತದೆ. ಹೀಗಾಗಿ ಕೋಳೂರು ಶಂಕರ ಕವಿಯ ಕಾಲ ಸು.೧೮ನೆಯ ಶತಮಾನದ ಉತ್ತರಾರ್ಧ ಎಂಬುದು ಸ್ಪಷ್ಟವಾಗುತ್ತದೆ.

ತಂದೆ-ತಾಯಿ

"ನವಮೋಹನ ತರಂಗಿಣಿ"ಯಲ್ಲಿ ಶಂಕರಕವಿಯು

"ವಸುಧೆಯೊಳು ಹೊನ್ನ ಕೋಳೂರ ರಾಮೇಶ್ವರನ
ಬೆಸನ ಮುಮನಾಂತುಯತಿ ಪುಣ್ಯದಂಪತಿಗಳಹ
ಬಸವರಸ ನಾಗಾಂಬೆಯರಗರ್ಭ ಸುಕ್ಷೀರವಾಧಿವರ್ಧಿಸುವಪೂ
ರ್ಣಾಶಶಿಧರನುಯೆನಿಪ ಶಂಕರನುಸುರ್ದನೀ ನವ
ಪೆಸರಾಂತ ಮೋಹನ ತರಂಗಿಣಿ ಸತ್ಕಾವ್ಯ"

(ನವಮೋಹನ ತರಂಗಿಣಿ ಸಂ-೩೩- ಪ. ೪೬)

ಎಂದು ಹೇಳಿಕೊಂಡಿದ್ದಾನೆ. ಈ ಹೇಳಿಕೆಯಿಂದ ಕೋಳೂರ ಶಂಕರಕವಿಯ ತಂದೆ ಬಸವರಸ ಮತ್ತು ತಾಯಿನಾಗಾಂಬೆ ಎಂಬ ಸಂಗತಿ ತಿಳಿಯುತ್ತದೆ. ಹೀಗೆ ಶಂಕರಕವಿಯು ತನ್ನ ಕೃತಿಗಳಲ್ಲಿ ತನ್ನ ವೈಯಕ್ತಿಕ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿರುವುದು ಆತನ ಚಾರಿತ್ರಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಬಳ್ಳಾರಿ ಜಿಲ್ಲೆಯ ಕೋಳೂರಿನ ಬಸವರಸ ನಾಗಾಂಬೆಯರ ಪುಣ್ಯಗರ್ಭದಲ್ಲಿ ಜನಿಸಿದ ಶಂಕರ ಕವಿಯು ಮತದಿಂದ ವೀರಶೈವ. ಕುಪ್ಪಸಕಂಥೆಯ

ಗುರುವರ್ಯರ ಶಿಷ್ಯನಾಗಿದ್ದ ಈತನು ಗುರುಬಸವರಿಂದ ಲಿಂಗದೀಕ್ಷೆ ಪಡೆದಿದ್ದಾನೆ. ರಾಜಕೀಯವಾಗಿ ಜಟಿಲವಾಗಿದ್ದ ಸಾಮಾಜಿಕವಾಗಿ, ಧಾರ್ಮಿಕವಾಗಿ ಸಂಘರ್ಷ ಹಾಗೂ ಸೌಹಾರ್ದತೆಗಳೆರಡೂ ನೆಲೆಸಿದ್ದ ಸಾಹಿತ್ಯಿಕವಾಗಿ ಜನಸಂಮುಖ ಧೋರಣೆಯು ಪ್ರಚಲಿತವಾಗಿದ್ದ ಕಾಲದಲ್ಲಿ ಶಂಕರಕವಿಯು ಕೃತಿರಚನೆಗೆ ತೊಡಗಿದ್ದು ತಿಳಿದುಬರುತ್ತದೆ. ಸ್ವಧರ್ಮನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆಗಳ ಸಂಕೇತವಾಗಿ ನಿಲ್ಲುವ ಆರು ಕೃತಿಗಳನ್ನು ಕನ್ನಡ ದೇವಿಯ ಸಿರಿಮುಡಿಗೆ ಅರ್ಪಿಸಿರುವ ಶಂಕರಕವಿಯು ಸಮಕಾಲೀನ ಸಂದರ್ಭದ ಅಗತ್ಯಕ್ಕೆ ಧ್ವನಿ ನೀಡುವ ಮೂಲಕ 'ಸಮನ್ವಯಕವಿ'ಯಾಗಿ ನಿಲ್ಲುತ್ತಾನೆ.

ಕೊನೆಟಿಪ್ಪಣಿಗಳು

೧. ಡಾ. ಕೆ.ಕೇಶವಶರ್ಮ ಕಿಂಡಿಯಲ್ಲಿ ನೋಡಿದ ಕವಿತೆಗಳು ಕನಕಸಾಹಿತ್ಯ ದರ್ಶನ ಸಂಪುಟ-೧, ಪು. ೪೯೬

೨. ಡಾ. ಎಫ್.ಟಿ.ಹಳ್ಳಿಕೇರಿ, ಕೆರೆಯ ಪದ್ಮರಸ ಮತ್ತು ಆತನ ವಂಶಜರು, ಒಂದು ಅಧ್ಯಯನ, ಪು. ೮. ಮೂಲ: ಡಾ. ಎಂ.ಎಂ.ಕಲಬುರ್ಗಿ, ಮಾರ್ಗ, ಸಂಪುಟ-೧, ಪು. ೩೩

೩. ಡಾ. ಜಿ.ಎಸ್.ಶಿವರುದ್ರಪ್ಪ ಕನಕದಾಸರು ಕೆಲವು ಚಿಂತನೆಗಳು ಕನಕ ಸಾಹಿತ್ಯ ದರ್ಶನ ಸಂಪುಟ-೧, ಪು. ೮೦೯

೪. ಡಾ. ರಂ.ಶ್ರೀ.ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ ಪು. ೧೩೮

೫. ಡಾ. ವಸು.ಎಂ.ವಿ., ಕರ್ನಾಟಕದ ಸ್ವಾತಂತ್ರ್ಯಪೂರ್ವ ಇತಿಹಾಸ, ಕರ್ನಾಟಕ ಸಂಗಾತಿ, ಪು. ೧೦೮

೬. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೧೬

೭. ಡಾ. ವಸು ಎಂ.ವಿ., ಕರ್ನಾಟಕ ಸ್ವಾತಂತ್ರ್ಯಪೂರ್ವದ ಇತಿಹಾಸ, ಕರ್ನಾಟಕ ಸಂಗಾತಿ, ಪು. ೧೦೫

೮. ಡಾ. ಬಿ.ಷೇಕ್ಆಲಿ, ಕರ್ನಾಟಕದ ಇತಿಹಾಸ: ವಿಜಯನಗರ ಅರಸರ ಆಳ್ವಿಕೆಯ ಬಳಿಕ, ಪು. ೮೧ ಸಂ: ಎಚ್ಎಸ್ಕೆ, ಅವಲೋಕನ

೯. ಡಾ. ವಸು ಎಂ.ವಿ., ಕರ್ನಾಟಕ ಸ್ವಾತಂತ್ರ್ಯ ಪೂರ್ವದ ಇತಿಹಾಸ, ಕರ್ನಾಟಕ ಸಂಗಾತಿ, ಪು. ೧೦೫

೧೦. ಡಾ. ಬಿ.ಷೇಕ್ ಆಲಿ, ಕರ್ನಾಟಕ ಇತಿಹಾಸ ವಿಜಯನಗರ ಅರಸರ ಆಳ್ವಿಕೆಯ ಬಳಿಕ, ಪು. ೮೧ ಅವಲೋಕನ, ಸಂ: ಎಚ್ಎಸ್ಕೆ.

೧೧. ಡಾ. ಬಾ.ರಾ.ಗೋಪಾಲ, ರಾಜಕೀಯ ಚರಿತ್ರೆ ಪು. ೪೬೮, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಮೊದಲನೆಯ ಸಂಪುಟ (ಸಂ) ಹಾಮಾನಾ.

೧೨. ಡಾ. ರಂ.ಶ್ರೀಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೧೨೮-೩೯

೧೩. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೮೬

೧೪. ಡಾ.ಎಸ್.ನಾಗರಾಜ ಕರ್ನಾಟಕದ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜನಜೀವನ, ಪು. ೨೦೧, ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ ೫ನೆಯ ಸಂಪುಟ, (ಸಂ) ಡಾ. ಹಾ.ಮಾ.ನಾಯಕ ಮತ್ತು ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ

೧೫. ವಿವರಗಳಿಗೆ: ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೧೯

೧೬. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೨೦೭

೧೭. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೧೯

೧೮. ವಿವರಗಳಿಗೆ: ಡಾ. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೧೮ ಮತ್ತು ೧೩೯

೧೯. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೨೦

೨೦. ವಿವರಗಳಿಗೆ ಬಸವಪುರಾಣ ಪರಂಪರೆ (ಸಂ) ಡಾ. ವೀರಣ್ಣ ರಾಜೂರ (ಬಸವ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ, ೧೯೯೪) ಕನ್ನಡ ಬಸವಪುರಾಣಗಳು, ಡಾ. ಸಿ.ವಿ.ಪ್ರಭುಸ್ವಾಮಿಮಠ, ಪು. ೧೫

೨೧. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂಪುಟ-೬, (ಸಂ) ಡಾ. ಜಿ.ಎಸ್.ಶಿವರುದ್ರಪ್ಪ, ಡಾ. ಚಿದಾನಂದಮೂರ್ತಿ ಎಂ.

೨೨. ಡಾ. ಎಫ್.ಟಿ. ಹಳ್ಳಿಕೇರಿ, ಕೋಳೂರು ಶಂಕರಕವಿ ಹೊಸ ಶೋಧಗಳು, ಕಂಠಪತ್ರ-೨, ಪು. ೫೧ ಮತ್ತು ೫೨

೨೩. ವಿವರಗಳಿಗೆ: ಅದೇ ಪು. ೫೨ ಮತ್ತು ೫೩

ಅಧ್ಯಾಯ ೩

ಶರಣ ಮೋನಪ್ಪಯ್ಯ ಚಾರಿತ್ರ

ಅಧ್ಯಾಯ ೩

ಶರಣ ಮೋನಪ್ಪಯ್ಯ ಚಾರಿತ್ರ

೩.೧. ಕೃತಿಯ ಸ್ವರೂಪ

ಕೋಳೂರು ಶಂಕರ ಕವಿ ಬರೆದ 'ಶರಣ ಮೋನಪ್ಪಯ್ಯ ಚಾರಿತ್ರ' ಕಾವ್ಯವು ೧೧ ಸಂಧಿ, ೧೧೨೦ ಸಾಂಗತ್ಯ ಪದ್ಯಗಳನ್ನೊಳಗೊಂಡಿದೆ. ಮಧ್ಯಯುಗೀನ ಕರ್ನಾಟಕದಲ್ಲಿ ಧರ್ಮ ಸಮನ್ವಯಕಾರನೆಂದು ಖ್ಯಾತಿವೆತ್ತ ತಿಂಥಿಣಿ ಮೋನಪ್ಪಯ್ಯನನ್ನು ಕುರಿತು ರಚನೆಗೊಂಡ ಮೊಟ್ಟ ಮೊದಲ ಕಾವ್ಯವಿದು. ಕವಿಯು ಈ ಕೃತಿಯ ರಚನಾಕಾಲವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ.

> ಶಾಲಿವಾಹನ ಶಖ ಸಾವಿರದೈನೂರ
> ಮೇಲೆ ಎಪ್ಪತ್ತಾರನೆಯ
> ಸಾಲು ಸದ್ಭಾವ ಸಂವತ್ಸರದ ಮಾಘದೊಳು
> ಶುದ್ಧಾಷ್ಟಮಿ ತಿಥಿಯೊಳು (ಶರಣಮೋನಪ್ಪಯ್ಯ ಚಾರಿತ್ರ ಸಂ ೧೧-೧೨೮)
> ಸುಧಾಕರವಾಸರೆ ಅಶ್ವಿನಿ ನಕ್ಷತ್ರ (೧೧-೧೨೯)

ಇದರಿಂದ ಶರಣ ಮೋನಪ್ಪಯ್ಯ ಚರಿತ್ರೆಯು ಕ್ರಿ.ಶ. ೧೭೫೪ರಲ್ಲಿ ರಚನೆಯಾಗಿರುವುದು ತಿಳಿದು ಬರುತ್ತದೆ.

ಪ್ರತಿಯೊಂದು ಸಂಧಿಯ ಪ್ರಾರಂಭದಲ್ಲಿ ಕಥೆಗೆ ಪೂರಕವಾಗುವಂತೆ ಬಸವಣ್ಣ ಅಲ್ಲಮಪ್ರಭುದೇವ ಚನ್ನಬಸವಣ್ಣ, ಮಡಿವಾಳ ಮಾಚಿದೇವ, ಮುಂತಾದ ಶಿವಶರಣರ ೨೯ ವಚನಗಳನ್ನು ಕವಿ ಉಲ್ಲೇಖಿಸಿದ್ದಾನೆ. ನಂತರ ಪಲ್ಲವಿಯಲ್ಲಿ ಆಯಾ ಸಂಧಿಯ ಕಥಾಸಾರವನ್ನು ಸಂಕ್ಷಿಪ್ತವಾಗಿ ಎರಡು ಸಾಲಿನಲ್ಲಿ ತಿಳಿಸಲಾಗಿದೆ. ಆನಂತರ 'ಪದನು' ಎಂದು ಸೂಚಿಸಿ ಸಾಂಗತ್ಯ ಪದ್ಯಗಳಲ್ಲಿ ಕಥೆಯನ್ನು ನಿರೂಪಿಸಲಾಗಿದೆ. ಪ್ರತಿಯೊಂದು ಸಂಧಿಯ ಕೊನೆಯಲ್ಲಿ-

> "ಇಂತಿ ಶಿವಶರಣರ ಸಂತತ ಸತ್ಕಥೆಯ
> ಮುಂಚೆ ಬರದೋದಿ ಕೇಳುವರ

ಸಂತೋಷ ಸೌಭಾಗ್ಯಯಂತಾದಡಿತ್ತುವೋ

ರಂತೆ ರಕ್ಷಿಸುವ ರಾಮೇಶ"

ಎಂದು ತನ್ನ ಆರಾಧ್ಯ ದೈವ 'ಶ್ರೀ ಕೋಳೂರು ರಾಮೇಶ'ನನ್ನು ಶಂಕರ ಕವಿಯು ಸ್ಮರಿಸಿದ್ದಾನೆ. ಚಾಮರಸನು ತನ್ನ ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ಚಿತ್ರಿಸಿದ ಮಾದರಿಯಲ್ಲಿಯೇ ಮೋನಪ್ಪಯ್ಯನ ವ್ಯಕ್ತಿತ್ವ ಮತ್ತು ಸಾಧನೆಯನ್ನು ಈ ಕೃತಿಯಲ್ಲಿ ನಿರೂಪಿಸಲಾಗಿದೆ. ಪ್ರತಿ ಸಂಧಿಯ ಅಂತ್ಯದಲ್ಲಿ ಒಬ್ಬೊಬ್ಬ ಮಹಾತ್ಮನ ಪವಾಡದ ಸ್ಮರಣೆ ಇರುವುದು ವಿಶೇಷ.

ಡಾ. ಎಫ್.ಟಿ.ಹಳ್ಳಿಕೇರಿಯವರು ೨೦೦೭ರಲ್ಲಿ ಈ ಕಾವ್ಯವನ್ನು ಎರಡು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ. ಅಮೂಲ್ಯವಾದ ಪ್ರಸ್ತಾವನೆ ಅಭ್ಯಾಸಿಗಳಿಗೆ ಮಾರ್ಗದರ್ಶಕವಾಗಿದೆ.

೩.೨. ಕಥಾಸಾರ

೧ನೆಯ ಸಂಧಿ : ಶಿವಸೂತ್ರ ರಾಮೇಶ ಜಯತು ಎಂಬ ಶೀರ್ಷಿಕೆಯಡಿಯಲ್ಲಿ ಅಲ್ಲಮಪ್ರಭುವಿನ ವಚನದೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ. ಪ್ರಭುವಿನ ವ್ಯಕ್ತಿತ್ವದಿಂದ ಪ್ರೇರಿತವಾದ ಮೌನಯ್ಯನ ಚರಿತೆಯನ್ನೊರೆಯುವ ಮುನ್ನ ಬಂದಿರುವ ಈ ವಚನ ಮಾರ್ಮಿಕವಾಗಿದೆ.

"ತತ್ವವನರಿಯದೆ ಮಿಥ್ಯವನೆ ಹಿಡಿದು

ಮಿಥ್ಯವನೆ ಪೂಜಿಸಿ ವ್ಯರ್ಥರಾಗಿ ಹೋದವರ ತಮ್ಮ ತಾವರಿಯದೆ ಕೆಟ್ಟವರ"

ಕುರಿತು ಅನುಕಂಪ ಸೂಚಿಸುವ ಅರ್ಥದ ವಚನದ ಮೂಲಕ ಸಾಂಕೇತಿಕವಾಗಿ ಭವದ ಹಂಗು ಹರಿದುಕೊಂಡು ನಿಜದ ನೆಲೆಕಂಡು ಕೊಂಡು ಬಾಳಿ, ಬೋಧಿಸಿದ ಮೋನಪ್ಪಯ್ಯನ ವ್ಯಕ್ತಿತ್ವ ನಿರೂಪಣೆಗೊಂದು ಸಮರ್ಥ ಭೂಮಿಕೆಯನ್ನೊದಗಿಸುತ್ತಾನೆ ಶಂಕರ ಕವಿ.

ಪಲ್ಲದಲ್ಲಿ ದಯಾಸಾಗರನಾದ ರಾಮೇಶನ ಸ್ಮರಣೆಯೊಂದಿಗೆ ಶಿವಶಕ್ತಿ, ಭೃಂಗಿ, ವೃಷಭೇಶ, ಷಣ್ಮುಖ ಮೊದಲಾದವರು ತನ್ನನ್ನು ರಕ್ಷಿಸಲಿ ಎಂದು ಶಂಕರ ಕವಿಯು ಪ್ರಾರ್ಥಿಸುತ್ತಾನೆ. ತದನಂತರದಲ್ಲಿ ಶಿವನಾಜ್ಞೆಯಂತೆ ಭೂಲೋಕಕ್ಕೆ ಬಂದು ವಿವಿಧ ಕುಲದಲ್ಲಿ ಜನಿಸಿ ಭವಿಗಳನ್ನು ಭಕ್ತರನ್ನಾಗಿ ಪರಿವರ್ತಿಸಿ ಶಿವಮತವನ್ನು ಉದ್ಧರಿಸಿದ ಅವಿರಳ ಶರಣರನ್ನು ಹೊಗಳುತ್ತಾನೆ. ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಿದೇವ, ಕಿನ್ನರ ಅಪ್ಪಣ್ಣ, ಸೊಡ್ಡಳ, ಮುಗ್ಧ ಸಂಗಯ್ಯ, ಮರುಳಶಂಕರ, ಕಕ್ಕಯ್ಯ, ಕಲಕೇತ ಬ್ರಹ್ಮಯ್ಯ, ಚಿಕ್ಕಯ್ಯ, ಕೂಲಿಚಾಮಯ್ಯ, ಜಕ್ಕಯ್ಯ, ಬೊಮ್ಮಯ್ಯ, ಶಂಕರದಾಸಿಮಯ್ಯ, ಢಕ್ಕೆ ಮಾರಯ್ಯ, ಮೋಳಿಗೆಮಾರಯ್ಯ, ಕೋಡಗದ ಮಾರಯ್ಯ, ಕೂಗಿನ ಮಾರಯ್ಯ, ನಗಿಯ ಮಾರಯ್ಯ, ಹರಳಯ್ಯ, ಕಲಿತಂದೆ ಸಿದ್ಧರಾಮ, ಉರಿಲಿಂಗಪೆದ್ದಿ, ಘಟ್ಟಿವಾಳಯ್ಯ ಮುಂತಾದ ಸಿದ್ಧರ ಪಾದಕ್ಕೆ ಎರಗುವೆನು. ಈ ತೆರನಾದ ಪುರಾತನರನ್ನು ಸ್ಮರಿಸಿ ನೂತನ ಶಿವಗೆ ಸಂಪ್ರೀತ ಮೌನಯ್ಯನ ನೂತನ ಚರಿತ್ರೆಯನ್ನೊರೆವೆನೆಂದು ಹೇಳುತ್ತ

ಹರಿಹರ, ಕೆರೆಯ ಪದ್ಮರಸ, ರಾಘವಾಂಕ, ಭೀಮರಸ, ಜಕ್ಕಣ್ಣ, ಪಾಲ್ಕುರಿಕೆ ಸೋಮನಾಥ, ಚಿಕ್ಕನಂಜೇಶ ಮೊದಲಾದ ಶಿವಕವಿಗಳಿಗೆ ವಂದಿಸುತ್ತಾನೆ.

ಛಂದಸ್ಸು ವ್ಯಾಕರಣ ಶಬ್ದ ನಾನಾರ್ಥವ
ವಂದೊದಿಲ್ಲವು ನಾನರಿಯೆ
ಮಂದನಾಗಿರೆ ಶಿವ ಬಂದೆನ್ನ ಜಿಹ್ವೆಯೊಳ್
ನಿಂದು ನುಡಿಸಲುಸುರುವೆನು (೧-೨೫)

ಅಡಿಪ್ರಾಸಗುರು ಲಘು ಅಡಿಗಣನಾಮವು
ಬೆಡಗು ಸ್ತ್ರೀ ಲಿಂಗ ಪುಲ್ಲಿಂಗ
ಗೊಡವೆ ಮುನ್ನಾರಿಯೆನು (೧-೨೬)

ಮೃಡರೂಪ ಶ್ರೀ ರಾಮೇಶನು ನುಡಿಸಿದಂತೆ ನುಡಿಯುವೆನೆಂದು ಹೇಳುತ್ತಾನೆ.

ನೂತನರೊಳಗತಿ ನೂತನ ಮೌನಯ್ಯ
ನಾತಿಶಯದ ಕಥೆಯನು
ಪ್ರೀತಿಯಿಂದ ಪೇಳೆಂದು ಓತು ಭಿನ್ನೈಸಲು
ನಾ ತೊಡಗಿದೆ ಶಿವನೊರದಿ (೧-೩೦)

ಎಂದು ಸ್ಪಷ್ಟಪಡಿಸುತ್ತಾನೆ.

ನರಸ್ತುತಿಯಂದಿದ ಜರಿದರ್ಗೆಪಾತಕ
ಗುರು ಅಲ್ಲ ಮಹಪ್ರಭು ಎಂದು
ಕರದುಪದೇಶಿಸಿ ಮೆರೆವ ಪವಾಡವ
ಹರನೊಳು ಬಯಲು ಕೂಡಿಸಿದ (೧-೩೧)

ಮಹಾತ್ಮನ ಕಥೆಯಿದು ಎಂದು ಹೇಳುವಲ್ಲಿ 'ಹರಿಹರ'ನ ಕಾವ್ಯ ಧೋರಣೆಯ ಛಾಯೆಯನ್ನು ಗುರುತಿಸಬಹುದು.

ಭೂಕಾಂತೆಯ ಮೇಖಲೆಯಾಕಾರದ ಸಮುದ್ರದಿಂದ ಪರಿವೇಷ್ಠಿತವಾದ ಕನಕಾದ್ರಿ, ಆಸುರಗಿರಿಯ ದಕ್ಷಿಣಕ್ಕೆ ಭರತಖಂಡ, ಪುಣ್ಯನದಿ, ಪುಣ್ಯಕ್ಷೇತ್ರ, ಘಟಿಕಾಸ್ಥಾನಗಳು (೧-೨೯) ಅಲ್ಲಿಗಲ್ಲಿಗೆ ಮಹಾನಗರ, ಗ್ರಾಮ, ಪುರ, ಹಳ್ಳಿಗಳಿಂದ ಶೋಭಿಸುತ್ತಿತ್ತು. ಈ ಭರತಖಂಡದ ತೆಂಕಣಭಾಗದ ತುರಕಾರಣ್ಯ, ಸಮೃದ್ಧವಾದ ಪ್ರದೇಶ ಅಲ್ಲಿ ಹರಿಯುವ ಕೃಷ್ಣಾನದಿಯ ಉತ್ತರಕ್ಕೆ ಸುರಪುರದಲ್ಲಿ ಶಿವಭಕ್ತಿಯನ್ನು ಮೆರೆಯುತ್ತ ಅಲ್ಲಮ ಪ್ರಭುವಿನ

ದಯದಿಂದ ಮೌನಯ್ಯನಿದ್ದನು. ಈತ ಸಜ್ಜನ, ಶುದ್ಧಾಚಾರಿ, ಸನ್ಮಾರ್ಗಿ, ಸತ್ಯವಂತನು, ಸದ್ಗುಣಾನ್ವಿತ, ಸದಾ ಶಿವಶಾಸ್ತ್ರದಲ್ಲಿ ಪ್ರವೀಣನಾಗಿ ಶಿವಶರಣರ ಸಂಗದಲ್ಲಿದ್ದು ಶಿವಲಿಂಗ ಪೂಜೆಯಲ್ಲಿ ಸದಾ ನಿರತನಾಗಿದ್ದನು. ಈತನಿಗೆ ಪತಿವ್ರತೆಯಾದ ಸುಜ್ಞಾನಿಯೆಂಬ ಸತಿಯಿದ್ದಳು. ಈಕೆ ಮಹಾ ಸಜ್ಜನ ಶೀಲೆ.

ಹೀಗೆ ರೂಪು ಯೌವನ ವಿದ್ಯೆ ಗುಣಗಳಿಂದ ಕೂಡಿದ ದಂಪತಿಗಳೂ ಗುರು ಪೂಜೆಯನ್ನು ಭಕ್ತಿಯಿಂದ ಸಮರ್ಪಿಸುತ್ತ ತಮ್ಮ ಕುಲಕಸುಬಾದ 'ಕಂಚು' ಕೆಲಸವನ್ನು ನಿರ್ವಂಚನೆಯಿಂದ ಮಾಡುತ್ತ ಜೀವನ ಸಾಗಿಸುತ್ತಿದ್ದರು.

ಪ್ರತಿಯೊಂದು ಸಂಧಿಯ ಕೊನೆಗೆ ಬರುವಂತೆ ಇಲ್ಲಿ ತುರುಕರು ಕಳುಹಿದ ಸುರೆಮಾಂಸವನ್ನು ಫಲವಾಗಿಸಿದ ಹರಶರಣನ ಶರಣ್ಗೊಂಡ, ಸಾವಳಗಿ ಗುರುಶಿವಲಿಂಗಪ್ಪ ಶರಣನನ್ನು ಪ್ರಸ್ತಾಪಿಸುತ್ತಾನೆ.

೨ನೆಯ ಸಂಧಿ : ಸಜ್ಜನರಾದವರು ಸುಗುಣಸಂಪನ್ನನೂ ಉನ್ನತೋನ್ನತ ಜ್ಞಾನಿಯೂ ಆದ ಮೌನಯ್ಯನ ಕಥೆಯನ್ನು ಕೇಳಿರೆಂದು ಕವಿಯು ಆತನ ಚಾರಿತ್ರ್ಯವನ್ನು ವಿಸ್ತರಿಸುತ್ತಾನೆ. ನಿತ್ಯವೂ ಲಿಂಗವಂತರ ಸಂಗದಲ್ಲಿದ್ದುಕೊಂಡು ಲಿಂಗಪೂಜೆ-ಜಂಗಮ ಸೇವೆಗಳನ್ನು ಚ್ಯುತಿಯಿಲ್ಲದೆ ಮಾಡುತ್ತಿದ್ದ ಮೌನಯ್ಯನು ಊರವರಿಗೆಲ್ಲ ಉಪಕಾರ ಮಾಡುತ್ತಿದ್ದನು. ತನ್ನ ಕೇರಿಯ ಜನರ ಸೇವಾಕಿಂಕರನಾಗಿ ದಾರಿಯಲ್ಲಿದ್ದ ಕಲ್ಲುಗಳನ್ನು ತೆಗೆದು ಬದಿಗೆ ಹಾಕುತ್ತಿದ್ದನು. ಹಸಿದವರಿಗೆ ಅನ್ನ-ನೀರು ನೀಡುತ್ತಿದ್ದನು. ಯಾರೇನೇ ಅಂದರೂ, ಬೈದರೂ ಸದಾ ನಗುನಗುತ್ತಿರುತ್ತಿದ್ದನು. ಕಾಯಕ ನಿಷ್ಠನಾಗಿದ್ದ ಮೌನಯ್ಯನು ವಿಶೇಷವಾಗಿ ಚಿನ್ನದ ಕುಸುರಿ ಕೆಲಸದಲ್ಲಿ ಅಪಾರ ನೈಪುಣ್ಯವನ್ನು ಸಂಪಾದಿಸಿದ್ದನು. ಸದ್ಭಕ್ತನಾದ ಮೌನಯ್ಯನು ಪ್ರತಿನಿತ್ಯ ಬಾವಿಗೆ ಹೋಗಿ ತೆಲಿಸ್ನಾನ ಮಾಡಿ ಭಾವ ಶುದ್ಧದಿ ಮಡಿಯನುಟ್ಟು ಹೂವು, ಪತ್ರೆಗಳಿಂದ ದೇವತಾರ್ಚನೆಯ ಮಾಡಿ ಕಾಯಕದಲ್ಲಿ ನಿರತನಾಗುತ್ತಿದ್ದನು.

ಇತ್ತ ಸುಜ್ಞಾನಿಯು ಅಂಗಡಿಸಾರಿಸಿ ರಂಗವಲ್ಲಿಯನಿಟ್ಟು ಗಂಡನಿಗೆ ಕಾಯಕದಲ್ಲಿ ಸಹಾಯ ಮಾಡುತ್ತಿದ್ದಳು, ಈರ್ವರೂ ಪರಸ್ಪರರಿಗೆ ಸಹಕರಿಸುತ್ತಾ ಕಾಯಕದಲ್ಲಿ ನಿರತರಾದ ದೃಶ್ಯ ಮಾರ್ಮಿಕವಾಗಿದೆ.

ಉದಾಹರಣೆಗೆ

ಕಾಯದಾಗುಣದಗ್ಗುಷ್ಟದಲಿ ಅಜ್ಞಾನದ
ಮಾಯಾ ಚಿನ್ನಿಯಯಿದ್ದಿಲಿಟ್ಟು
ಸ್ವಾಯತ ಚಿದ್ಯನ್ನಿಯಿಟ್ಟು ಸುಮನಸವೆಂಬ
ಊವಿಯ ಕೋವಿಯಲೂದಿ (೨-೧೬)

ತೆಗೆದು ಸದ್ ಭಕ್ತ ದದ್ದಾಣಿಯ ಮೇಲಿಟ್ಟು
ನೆಗಹಿ ದೃಢ ಸತ್ತಿಗೆಯ ಪಿಡಿದು (೨-೨೦)

ತಾಳಿ, ಓಲೆ, ಕಂಕಣ, ಚಿಂತಾಕು, ಸರಿಗೆ, ಕಟ್ಟಾಣಿ, ಮೂಗುತಿ, ತೋಳಬಂದಿ, ಒಡ್ಯಾಣ, ಅರಳೆಲೆ, ಹಾರಾವಳಿ ಮುಂತಾದ ಆಭರಣಗಳನ್ನು ಸಿದ್ಧಪಡಿಸುವ ಕಾಯಕದಲ್ಲಿ ಕೈಲಾಸವನ್ನು ಕಾಣುತ್ತಲಿದ್ದರು.

ಕಾಯದ ಗುಣಗಳ ಕಳೆದು ಸರ್ವಾಂಗಕ್ಕೆ
ಸ್ವಾಯತ ಭರಣವನಿಟ್ಟು ಮಾ
ರಾರಿ ಭಕ್ತ ಮೌನಯ್ಯ ಮುಕ್ತಾಯ ನಿ
ರಾಯಾಸದಿದಿರ ನೋಡಿದನು (೨-೩೬)

ಹೀಗಿರುವಾಗ ಒಂದು ಶುಭದಿನದಂದು 'ಪ್ರಭುಲಿಂಗ ಲೀಲೆ'ಯ ಪುಣ್ಯ ಚರಿತ್ರೆಯನ್ನು ಕೇಳಿ ಆ ಪ್ರಭುವಿನ ಸಾಕ್ಷಾತ್ಕಾರಕ್ಕಾಗಿ ಮೌನಯ್ಯ ಹಂಬಲಿಸುತ್ತಾನೆ.

ನಡಿವಾಗ ನುಡಿವಾಗ ಉಡುವಾಗ ಉಂಬಾಗ
ಹಿಡಿದ ಕಾಯಕದಲ್ಲಿ ಮಡದಿ ಸಹಮಲಗೂತೆ
ಲ್ಲೆಡಿಯಲ್ಲಿ ಪ್ರಭುವಿನದೇ ಸ್ಮರಣೆ ಮೌನಯ್ಯನಿಗೆ (೨-೮೫)

ತಾಯಿ ಇಲ್ಲದ ಕೂಗು ಹಸಿದು ಹಂಬಲಿಸುವಂತೆ, ಪ್ರಭುವಿನ ಸಾಕ್ಷಾತ್ಕಾರ ವಿಳಂಬವಾಗುವುದನ್ನು ಸಹಿಸದೆ ತನ್ನ ಕೊರಳನ್ನು ಕತ್ತರಿಸಿಕೊಳ್ಳಲು ಅಣಿಯಾಗುತ್ತಾನೆ. ಆಗ ಗುರುಮೂರ್ತಿ ಪ್ರಭುವು ನಿಜರೂಪುದೋರಲು ಪುಳಕಗೊಂಡು ಮೌನಯ್ಯನು ಶ್ರೀ ಗುರುವೆ, ಮದ್ಗುರುವೆ, ಸದ್ಗುರುವೆ, ಪರಮಾನಂದಗುರುವೆ, ಎನ್ನಭಾಗ್ಯದ ನಿಧಿಯೆ ಎಂದು ಮುಂತಾಗಿ ಉಲ್ಲಾಸದಿಂದ ಸ್ತುತಿಸುತ್ತಾನೆ. ಆಗ ಪ್ರಭುದೇವನು ಹಸ್ತಮಸ್ತಕ ಸಂಯೋಗದಿಂದ ಅಂಗದ ಗುಣಗಳ ಹಿಂಗಿಸಿ ನಿನಗೆ ಸರ್ವಾಂಗ ಲಿಂಗೋಪದೇಶವನು ಸಂಗ ಮಾಡುವೆ ಎಂದು ಮನ್ನಿಸುತ್ತಾನೆ.

೩ನೆಯ ಸಂಧಿ : ಶ್ರೀ ಗುರು ಅಲ್ಲಮನು ಮೌನಯ್ಯನಿಗೆ ಶಿವಯೋಗ ಲಿಂಗಾಂಗ ಬೋಧಿಸಿದ ವಿವರಗಳು ಈ ಸಂಧಿಯಲ್ಲಿವೆ. ಮೌನಯ್ಯನನ್ನು ಶಿವಯೋಗ ಪೀಠದಲ್ಲಿ ಕಳ್ಳಿರಿಸಿ-'ಮಗನೆ, ನಿನ್ನಯ ಮನ ಜಗದ ಮಾಯೆಯ ಕೂಡಿ ತನ್ನ ತಾ ಮರೆತಿದೆ, ನಿಜವನ್ನು ಅರಿತು ನಡೆದರೆ ಮಾಯೆ ತೊಲಗುವುದು, ಬಹಿರಂಗದಲ್ಲಿ ತೊಳಲುವ ಮನದ ಭ್ರಾಂತಿಯೇ ಮಾಯೆ, ಶಾಂತ ಸದ್ಗುರುವಿನಿಂದ ಅಂತರಂಗದ ನಿಜವನ್ನು ತಿಳಿದವನೇ ನಿರ್ಮಾಯ ಸ್ವರೂಪನು ಎಂದು ತಿಳಿಸುತ್ತಾ ಭಾವಲಿಂಗ, ಕ್ರಿಯಾಲಿಂಗ, ಆಚಾರಲಿಂಗ, ಪ್ರಾಣಲಿಂಗಗಳ ಲಕ್ಷಣಗಳನ್ನು ಸ್ಪಷ್ಟಪಡಿಸಿ, ಭಕ್ತ ಮಾಹೇಶ, ಪ್ರಸಾದಿ ಸ್ಥಲಗಳಾದಿಯಾಗಿ ಅನೇಕ ವೀರಶೈವ ತತ್ವಗಳನ್ನು ಪ್ರಭುದೇವನು ವಿವರಿಸುತ್ತಾನೆ. ಶಂಕರ ಕವಿಯು ಇದನ್ನು ತುಂಬ ದೀರ್ಘವಾಗಿ ನಿರೂಪಿಸಿದ್ದಾನೆ. ಕೊನೆಗೆ ಆ ಉಪದೇಶದಿಂದ ನೀನೆನ್ನ ಒಲಿಸಿದ ಬಳಿಕ ನಾನಾರು ನೀನಾರು ಎಂಬ ಭೇದವಿಲ್ಲ. ನಾನು ನೀನಲ್ಲಾದೆ ನೀನು ನಾನಲ್ಲವೇ ಇದಕ್ಕೆ ಅನುಮಾನ ಬೇಡವೆಂದು ಹೇಳಿ- 'ಹಾಲೊಳು ಹಾಲು ತುಪ್ಪದಿ ತುಪ್ಪ ಬೆರೆದಂತೆ' ಮೌನಯ್ಯನೊಳಗೆ ಪ್ರಭುದೇವನು ಒಂದಾಗಿ ಬೆರೆತನು.

೪ನೆಯ ಸಂಧಿ : ಮೋನಪ್ಪಯ್ಯನು ವಿರತಿಯ ಕೈಗೊಂಡು ದೇಶಾಂತರ ಹೊರಟ ವಿವರಗಳು ಇಲ್ಲಿ ಚಿತ್ರಿಸಲ್ಪಟ್ಟಿವೆ.

ಪ್ರಭುದೇವನಿಂದ ಲಿಂಗೋಪದೇಶ ಪಡೆದ ಬಳಿಕ ಮೌನಯ್ಯನು ನಿತ್ಯದಂತೆ ಸತಿಯೊಂದಿಗೆ ಕಾಯಕ ನಿರತನಾಗಿ ಶಿವಸುಖದಿಂದಿದ್ದನು. ಹೀಗಿರಲೊಂದು ದಿನ ಒಬ್ಬ ಶಿವ ಜಂಗಮನು ಬಂದು ಮೌನಯ್ಯ ನೀನು-

"ಇಂದು ಧರನ ಮೆಚ್ಚಿನವನು
ಹೊಂದಿ ಈ ಸಂಸಾರ ಬಂಧದೊಳಿಪ್ಪುದು
ಛಂದದೋರುವುದಿಲ್ಲ ಮಗನೇ (೪-೮)

ಬಾರೋ ದೇಶಾಂತ್ರದಿ ತೋರುವೆ ಪವಾಡ ವ
ಮೀರಿದ ಶರಣ ನೀನಾಗಿ
ಸೇರಿ ಕುಗ್ರಾಮದಿ ಆರು ಅರಿಯದಂತ್ತೆ
ತೋರದು ಶಿವಸುಖ ಮಗನೆ (೪-೯)

ಎಂದು ಉಪದೇಶಿಸುತ್ತಾನೆ. ಆಗ ಮೋನಪ್ಪಯ್ಯನು

'ದೇವ ದೇಶಾಂತ್ರಾದಿ ಜೀವಕ್ಕೆ ಸುಖವೇನು
ಭಾವೆ ಮಕ್ಕಳು ಮನಿಯೊಳಗೆ
ಸಾವಧಾನದೊಳಿರ್ದು ಭಾವಶುದ್ಧದಿ ಗುರು
ದೇವನ ಧ್ಯಾನವೆ ಸಾಕು (೪-೧೦)

ಎಂದು ನಿರಾಕರಿಸುತ್ತಾನೆ. ಆದರೂ ಶಿವಜಂಗಮನು ಪಟ್ಟು ಬಿಡದೆ ಮೌನಯ್ಯನ ಮನಃ ಪರಿವರ್ತನೆ ಮಾಡಲು ಪುರಾಣೋಕ್ತ ಕಥೆಗಳನ್ನೆಲ್ಲ ಉದಾಹರಿಸಿ ನಾನಾ ರೀತಿಯಾಗಿ ಉಪದೇಶಿಸುತ್ತಾನೆ. ಎಷ್ಟೆಲ್ಲ ತಿಳಿ ಹೇಳಿದರೂ ಮೋನಯ್ಯನು ಕೇಳದಾದಾಗ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಶಿವಜಂಗಮನು ಮರಳಿ ಹೋಗುತ್ತಾನೆ.

ನಂತರ ಒಂದು ದಿನ ಎಂದಿನಂತೆ ಮೌನಯ್ಯನು ಹರಪೂಜೆ ಮಾಡಿ ಹರುಷದಿಂದ ನಿತ್ಯಕಾಯಕದಲ್ಲಿ ನಿರತನಾಗಿರುವಾಗ ಊರಗೌಡ ಆಗಮಿಸುತ್ತಾನೆ. ಆತನು ತಂದ ಆರು ತೊಲಿ ಬಂಗಾರವನ್ನು ತೂಕಮಾಡಿ ಅದರಿಂದ ಆಭರಣ ಸಿದ್ಧಪಡಿಸಲು ತೊಡಗುತ್ತಾನೆ. ಕರಗಿಸಿದ ಬಂಗಾರವನ್ನು ಸುತ್ತಿಗೆಯಿಂದ ಮರ್ದಿಸುವಾಗ ಸುತ್ತಿಗೆಯ ಪೆಟ್ಟಿಗೆ ಬಂಗಾರದ ಘಟ್ಟಿ ಎರಡೂ ಪುಟನೆಗೆದು ಆಕಾಶದಲ್ಲಿ ಮಾಯವಾದವು. ಆಗ ಗೌಡನು

ಸಿಟ್ಟು ಮನದಲಿ ತಾಳಿ ಬಿಟ್ಟ ಕಂಗಳವನು
ಕೊಟ್ಟದಲ್ಲದೆ ಬಿಡನೆಂದ (೪-೪೭)

ಕೊನೆಗೆ ಅಕ್ಕಸಾಲಿಕೆಯನ್ನು ಧಿಕ್ಕರಿಸಿ ಮೌನಯ್ಯ ತವರದ ಬಳೆಮಾಡಿ ಊರೂರು ಅಲೆದು ಮಾರಾಟ ಮಾಡಿ ಉಪಜೀವನವನ್ನು ಸಾಗಿಸುತ್ತಿರುತ್ತಾನೆ. ಒಂದು ಬಿಡಿಸಿದರೆ ಮತ್ತೊಂದು ಮಾಡುವನೀತ ಎಂದು ಶಿವನು ಯೋಚಿಸಿ, ದೇವದೂತರನ್ನು ಮಾಯದಿಂದ ಗಗನಮಾರ್ಗದ ಮೂಲಕ ಮೌನಯ್ಯನಿದ್ದಲ್ಲಿಗೆ ಕಳುಹಿಸುತ್ತಾನೆ. ಆ ದೇವದೂತರು ಮೌನಯ್ಯನ ಹೆಗಲ ಹಸುಬೆಯನ್ನು ಕೊಂಡೊಯ್ಯುತ್ತಾರೆ. ಮೌನಯ್ಯನು ಆ ಕಾಯಕವನ್ನು ಬಿಟ್ಟು ಮೂರ್ತಿ ಶಿಲ್ಪಗಳನ್ನು ಮಾಡಿ ಜೀವನ ನಡೆಸುತ್ತಿರುವಾಗ ಇದ್ದಕ್ಕಿದ್ದಂತೆ ಆತನ ಮಡದಿ, 'ಸುಜ್ಞಾನಿ' ಸಾವನ್ನಪ್ಪುತ್ತಾಳೆ. ಇದರಿಂದ ನೊಂದು ವೈರಾಗ್ಯ ತಾಳಿ ಮತ್ತೆ ಗುರು ಪ್ರಭುವಿನ ದರುಶನಕ್ಕೆ ಹಂಬಲಿಸುತ್ತಾನೆ.

ಆಗ ಅಲ್ಲಮಪ್ರಭು ಮೌನಯ್ಯನಿಗೆ ದರುಶನವಿತ್ತು ಅಭಯ ಹಸ್ತವನಿಟ್ಟು ಕೊಡಲಿಯೊಂದನ್ನು ಕೊಟ್ಟು ಅದೃಶ್ಯನಾಗುತ್ತಾನೆ. ಆ ಕೊಡಲಿಯನ್ನು ತೆಗೆದುಕೊಂಡು ಪಟ್ಟದಾನೆಯಂತೆ ಮೌನಯ್ಯ ಮತ್ತೆ ದೇಶ ಸಂಚಾರಕ್ಕೆ ಹೊರಡಲು ಸಿದ್ಧನಾಗುತ್ತಾನೆ. ಆಗ ಊರಗೌಡನು ಬಂದು ಬಂಗಾರ ಕೇಳುತ್ತಾನೆ. ಅದು ಗೌಡನ ಮನೆ ಯಲ್ಲಿಯೇ ಇರುವುದಾಗಿ ಮೌನಯ್ಯ ಹೇಳುತ್ತಾನೆ. ಅಲ್ಲಿಗೆ ಹೋಗಿ ನೋಡಲಾಗಿ ಕಳೆದು ಹೋದ ಬಂಗಾರ ಗೌಡನ ಮನೆಯಲ್ಲಿಯೇ ದೊರಕುತ್ತದೆ. ಇದರಿಂದ ಆ ಊರ ಪ್ರಜೆಯೆಲ್ಲ ಗವುಡ ತಾನಡ್ಡ ಬಿದ್ದಿರಲು ಸಾವಧಾನದಿ ಮೌನ ತಾ ಒಲಿದೆತ್ತುತ್ತ ದೇವ ರಕ್ಷಿಸೆಂದು ಹರಸುತ್ತಾನೆ. ಪುರ ಜನರೆಲ್ಲ ಕೊಂಡಾಡುತ್ತಾರೆ.

"ಕೆಸರೊಳು ಕುಂಬಾರ ಹೆಸರಿನ ಹುಳವಿದ್ದು
ಕೆಸರು ಹತ್ತದೆ ಹೊರಟಂತೆ
ಹುಸಿ ಮನುಜರ ಬಿಟ್ಟು ಅಸಮ ಸುಜ್ಞಾನಿಯು" (೪-೯೪)

ಆ ಪುರವನ್ನು ಬಿಟ್ಟು ತೆರಳಿದನೆಂದು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

೫ನೆಯ ಸಂಧಿ : ಶರಣ ಮೌನಯ್ಯನು ಪುರವನ್ನಗಲಿ ತುಂಬಿದ ತೊರೆಯನ್ನು ದಾಟುತ ಮಹಿಮೆ ಮೆರೆದ ಪವಾಡವಿಲ್ಲಿ ಚಿತ್ರಿತವಾಗಿದೆ.

ಶರಣ ಮೌನಯ್ಯನು ಜಂಗಮ ವೇಷಧರಿಸಿ ದೇಶ ಸಂಚಾರಕ್ಕೆ ಹೊರಡುವ ಸಂದರ್ಭದಲ್ಲಿ ಪುರಜನರು ಹಿರಿಯರು ಅವರನ್ನು ಅಡ್ಡಗಟ್ಟಿ ಪಾದಕ್ಕೆರಗಿ ಕೈ ಮುಗಿದು ನಮ್ಮ ಗ್ರಾಮದೊಳಿರ್ದ ಧರ್ಮ ಸ್ವರೂಪನೆ ನಿಮ್ಮ ಮಹಿಮೆ ತಿಳಿಯದಾಯ್ತು ಎಂದು ಪರಿಪರಿಯಾಗಿ ಪ್ರಾರ್ಥಿಸಿ ಮೌನಯ್ಯನಿಗೆ ಗೌಡನು ಅಡ್ಡಬಿದ್ದು

"ಮಾನ್ಯವು ಮಠಗಳ ಕೊಡುವೆ
ನಾನು ಅರಿಯದಿರ್ದೆನ್ನೆನುಧಾವತಿಯಿಲ್ಲ
ಸ್ವಾನುಭವಿಯೆ ಹೋಗಬ್ಯಾಡ (೫-೬)

ಎಂದು ಎಷ್ಟೇ ಬಿನ್ನವಿಸಿಕೊಂಡರೂ ಮೌನಯ್ಯನು ನಿಲ್ಲದೆ ದೇಶಸಂಚಾರಕ್ಕೆ ಅಣಿಯಾಗುತ್ತಾನೆ.

'ಪಂಜರವಗಲಿದ ಗಿಳಿ ಮಂಜುಳ ನರ

ರಂಜನಿವಳಗೆ ನಿಲ್ಲುವದೆ' (೫-೯)

ಎಂದು ಗೌಡನನ್ನು ಸಂತೈಸಿ ಹೊರಡುವಷ್ಟರಲ್ಲಿ ಒಬ್ಬ ತಾಯಿಯು ಮಡಿದ ಮಗುವನ್ನು ತಂದು ಮೌನಯ್ಯನ ಪಾದದಡಿಯಲ್ಲಿ ಹಾಕಿ, ಜೀವದಾನ ನೀಡಬೇಕೆಂದು ಪ್ರಾರ್ಥಿಸುತ್ತಾಳೆ. ಆಗ ಗುರು ಕರುಣಿಸಿದ ಕೊಡಲಿಯಿಂದ ಸತ್ತ ಮಗುವಿಗೆ ಸ್ಪರ್ಶಿಸುತ್ತ

'ಯಾಕೆ ಅತ್ತಪೆ ತಾಯಿ ಈ ಕೂಸಿಗೆ ದೀರ್ಘಾಯು

ವಾ ಕರುಣಿಸುವನಲ್ಲಮನು

ಶೋಕವ ಮಾಣೆಂದು ಆ ಕಾಂತೆಗುಸುರಲು (೫-೧೨)

ಆ ಶಿಶುವು ಕಣ್ದೆರೆಯುತ್ತದೆ. ಕಂಡವರೆಲ್ಲರೂ ಕೊಂಡಾಡುತ್ತಿರಲು ಮೌನಯ್ಯನು ದಕ್ಷಿಣಾಭಿಮುಖವಾಗಿ ದೇಶ ಸಂಚಾರಕ್ಕೆ ಹೊರಡುತ್ತಾನೆ. ಗುರುಧ್ಯಾನ ಮನನಾಗಿ ಬರುತ್ತಿರಲು ದಾರಿಕಾರರನ್ನು ಅಡ್ಡಗಟ್ಟಿ ತೊಂದರೆ ಕೊಡುತ್ತಿದ್ದ ಸರ್ಪಗಳೆರಡು ಮೌನಯ್ಯನನ್ನು ಕಾಣುತ್ತಲೇ ದಾರಿಬಿಟ್ಟು ಕೊಡುತ್ತ

"ವಂದಿಸಿ ಎರಡು ಸರ್ಪಗಳು

ಮಂದಿ ನೋಡುತಲಿರೆ ಸಂದು ನೆಲಕೆಸಾರ

ಲಂದು ಸರ್ವರು ಪೊಗಳಿದರು"

ಹಳ್ಳಿಪಳ್ಳಿಗಳಲ್ಲಿರ್ದ್ದ ಜನಕ್ಕೆ ಸಲ್ಲೀಲೆಯಿಂದ ಸಿದ್ಧವಾಣಿಯನ್ನು ನೀಡಿ ಮುಂದೆ ಸಾಗುತ್ತ ಕೃಷ್ಣ ನದಿ ತೀರಕ್ಕೆ ಬರುತ್ತಾನೆ. ತುಂಬಿ ಹರಿಯುತ್ತಿರುವ ನದಿಯನ್ನು ದಾಟಿಸಲು ಅಂಬಿಗರು ನಿರಾಕರಿಸುತ್ತಾರೆ. ಆಗ ಮೋನಯ್ಯ ಶ್ರೀ ಗುರುವಿತ್ತ ಪರುಷವ ಆಗ ಗಂಗಿಯೊಳದ್ದಿ ಮ್ಯಾಗೆ ಕಾಟಿಯ ಹಾಸಿ (೫-೩೮) ಕುಳಿತು ಜನರೆಲ್ಲರನ್ನು ನದಿದಾಟಿಸಿ ದೇವದುರ್ಗ ಪಟ್ಟಣಕ್ಕೆ ಆಗಮಿಸುತ್ತಾನೆ.

ವಿಭೂತಿ, ರುದ್ರಾಕ್ಷಿ, ಕಾವಿ, ಮುಂಡಾಸ, ಕಂಬಳಿ, ಕಂಥೆ, ಕೈಯಲ್ಲಿ ಹಿಡಿದ ಕೊಡಲಿ ಇಂಥ ವಿಲಕ್ಷಣ ವೇಷ ಹೊಂದಿದ ಮೌನಯ್ಯನನ್ನು ಕಂಡು ದೇವದುರ್ಗದ ಜನ ನಿಬ್ಬೆರಗಾಗುತ್ತಾರೆ. ಈತ ಗೊರವನೋ, ಫಕೀರನೋ ಜಂಗಮನೋ ಎಂದು ಸಂದೇಹ ತಾಳುತ್ತ 'ಕಂತುಮರ್ದನನೆ ನೀನಹುದು (೫-೫೩) ಮಳೆ ತರಿಸಿ ನಮ್ಮನ್ನು ರಕ್ಷಿಸೆಂದು ಬೇಡುತ್ತಾರೆ. ಅಲ್ಲಮನನ್ನು ಧ್ಯಾನಿಸುತ್ತ ಮಳೆಬರಿಸುತ್ತಾನೆ. ಆ ಹೆಮ್ಮಳೆಯಿಂದ ಹಳ್ಳ-ಕೊಳ್ಳವು ಹರಿದು ಅಲ್ಲಿ ಕೆರೆಗಳು ತುಂಬಿ ಮನೆ ಮಾರುಗಳು ನಾಶವಾಗತೊಡಗಿದವು. ಆಗ ಪುರಜನರು "ಗುರುರಾಯ ನಿಮ್ಮೊಳು ಸರಸ ನಮಗೆಯಿಲ್ಲ" (೫-೯೦) ಸಕಲಕೂ ಕಾರಣಕರ್ತರು ತಾವು ಎಂದು ವಂದಿಸಿ ಹೊಗಳಿದರು. ಹೀಗೆ ದೇವದುರ್ಗದ ಜನರಿಂದ ಪೂಜೆಗೊಂಡು ಪಶ್ಚಿಮ ಮಾರ್ಗವಿಡಿದು ಮೌನಯ್ಯ 'ಮೇಧಿರಾಯನ ಕೋಟೆ'ಗೆ ಆಗಮಿಸಿ ರಾಜಬೀದಿಯ ನೋಡುತ್ತಾ ಬೇಡಿದ ಭಕ್ತರಿಗೆ ವರವ ನೀಡುತ್ತ

ಸಾಧು ಸಜ್ಜನರವಾಸದಲ್ಲಿದ್ದನು. ಹೀಗಿರಲೊಂದು ದಿನ ಶ್ರೀಶೈಲ ಮಲ್ಲಿಕಾರ್ಜುನನ ಪರಿಷೆಯವರು ಆ ಊರಿಗೆ ಬಂದಾಗ ಅಲ್ಲಿ ಲಿಂಗ ಪವಾಡ ಮಾಡಿ ಅವರನ್ನು ಬೆರಗುಗೊಳಿಸುತ್ತಾನೆ. ಇಲ್ಲಿ ಆನುಷಂಗಿಕವಾಗಿ ನುಲಿಯ ಚಂದಯ್ಯ, ಕೋಡಗದ ಮಾರಯ್ಯ, ಕರಸ್ಥಲದ ನಾಗಲಿಂಗಯ್ಯ ಮುಂತಾದ ಪುರಾತನರ ಸತ್ಕಥೆಗಳನ್ನು ಸೂಚಿಸಿ ಶಿವನಾಗಪ್ಪ ಶರಣನನ್ನು ಸ್ಮರಿಸುತ್ತಾನೆ.

೬ನೆಯ ಸಂಧಿ : ಮೇಧಿನಿರಾಯನ ಕೋಟೆಯ ಪುರಜನರಿಂದ ಬೀಳ್ಕೊಂಡು ತಾವರಗೇರಿ ಗಡಿದುರ್ಗ ನೋಡುತ ಕನಕಗಿರಿಯೆಂಬ ಘನದುರ್ಗಕ್ಕೆ ಬರುತ್ತಾನೆ. ಅಲ್ಲಿಯ ಕನಕಸಿದ್ದೇಶನ ದೇವಾಲಯಕ್ಕೆ ಆಗಮಿಸಿ ಆ ಶಿಲಾಮೂರ್ತಿಯೊಂದಿಗೆ ವಿನಯದಿ ಮಾತನಾಡಿ ವಿಶ್ರಮಿಸುತ್ತಾನೆ. ಆ ಊರದೊರೆಸಾನಿ ಕಾಟಮ್ಮ, ಅವಳ ಮಗ ಉಡಚನಾಯಕರಿಂದ ಪೂಜೆಗೊಳ್ಳುತ್ತಾನೆ. ಸಂಪ್ರೀತನಾದ ಮೌನಯ್ಯನು ಪ್ರಭುದೇವ ದಯಪಾಲಿಸಿದ 'ಭರ್ಚಿ'ಯನ್ನು 'ಅರಿಗಳ ಜೈಸೆಂದು ಪರಸಿ' ಉಡಚನಾಯಕನಿಗೆ ನೀಡಿ ಭಕ್ತಿಯ ನೆಲೆವೀಡಾದ ಲಿಂಗನಬಂಡಿ ಕ್ಷೇತ್ರಕ್ಕೆ ಆಗಮಿಸುತ್ತಾನೆ.

ಲಿಂಗಬಂಡಿಯ ಪುರಜನರೆಲ್ಲ .....ಸಾನಂದದಿ
ಸಾಷ್ಟಾಂಗದಿಂದ ವಂದಿಸಿ ಕರಮುಗಿದು
ಸಂದಿಸಿ ಕರಡಿ ಸಮ್ಮೇಳ ಭಜಂತ್ರಿಗ
ಳಿಂದ ಸುನಾದದೋಲಗವ (೬-೬೫)

ಮಾಡುತ್ತಾ ಪರಮ ಆರೂಢಮೂರ್ತಿಯನೊಡಗೂಡಿ ಪುರಕ್ಕೆ ಕರೆತಂದರು. ಅಲ್ಲಿನ ಭಕ್ತರಿಗೆ ಗುರು ಪ್ರಭುದೇವ ಮಹಿಮೆಗಳನ್ನು ಹೇಳುತ್ತ ಶರಣರು ತಮ್ಮ ತಾವರಿಯುತ್ತ ನಿಜ ಲೀಲೆಯೊಳಿರುತಿಹರೆಂದು ಬೋಧಿಸಿ ಸಂತಸದಿಂದಿರುತ್ತಾನೆ. ಆಗ ಒಬ್ಬ ಭಕ್ತನು ಬಂಡಿಯ ಮೇಲೆ ಬೀಜ ಬಿತ್ತಿ ಬೆಳೆಯಬೇಕೆಂದು ಸವಾಲು ಹಾಕುತ್ತಾನೆ. ಆಗ ಮೌನಯ್ಯನು 'ಒಳ್ಳಿತಾಯಿತು ನೀನೆ ಬೀಜವ ತಂದು ಕಲ್ಲು ಭಂಡಿಯ ಮೇಲೆಯವನು ಚೆಲ್ಲಿದರೆ (೯-೪೨) ನೆಲದ ಮೇಲಿಗಿಂತ ಸತ್ವಯುತವಾಗಿ ಬೆಳೆಯುತ್ತವೆ ಎಂದು ಅರುಹುತ್ತಾನೆ. ಪ್ರಭುವಿನ ಸ್ಮರಣೆ ಮಾಡಿದ್ದೇ ತಡ ಕಲ್ಲ ಮೇಲೆ ಬಿತ್ತಿದ ಬೀಜಗಳು ಮೊಳಕೆಯೊಡೆದು ಹಸುರಿನಿಂದ ಕಂಗೊಳಿಸುತ್ತವೆ. ಹಾಗೆಯೇ ಬಂಡಿಯ ಮೇಲೆ ಗೂಟನೆಡುವ ಕಲ್ಲಿನಲ್ಲಿ ನೆಲ್ಲು ಬೆಳೆಯುವ ಸವಾಲುಗಳನ್ನು ಸ್ವೀಕರಿಸಿ ಸಾಧಿಸಿ ತೋರಿಸುತ್ತ ಲಿಂಗನಬಂಡಿಯಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ಆ ನೆಲವನ್ನು ಪುಣ್ಯಕ್ಷೇತ್ರವನ್ನಾಗಿಸುತ್ತಾನೆ. ಅಲ್ಲಿಂದ ಲಕ್ಷ್ಮೇಶ್ವರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಬರುವ ವರವಿ ಗ್ರಾಮದಲ್ಲಿ ಅಂಬಲಿ ಗುಂಡದ ಪವಾಡ ಮೆರೆದು 'ತಾನು ಎಡವಿದ ಕಲ್ಲಿನಲ್ಲಿ ಲಿಂಗದ ಕುರುಹು ತೋರಿ' ಅದನ್ನು ಪೂಜೆ ಮಾಡಬೇಕೆಂದು ಜನರಿಗೆ ತಿಳಿಸಿ 'ಲಕ್ಷ್ಮೇಶ್ವರ' ಎಂಬ ಸುಸ್ಥಳದತ್ತ ತೆರಳುತ್ತಾನೆ.

೭ನೆಯ ಸಂಧಿ : ಲಕ್ಷ್ಮೇಶ್ವರದಲ್ಲಿ ಅಂಕುಶಖಾನನ ಆಡಳಿತವಿತ್ತು. ಅಲ್ಲಿ ಕುಡಿಯುವ ನೀರಿನ ತೊಂದರೆ ವಿಪರೀತ. ಪ್ರಜೆಗಳು ಬೊಬ್ಬಿಡುತ್ತ ಅಂಕುಶಖಾನನ ಬಳಿಗೆ ಬಂದು ಮೊರೆಯಿಡುತ್ತಾರೆ. ನೀರಿನ ಬವಣೆ

ನೀಗಿಸಲು ಅರಸನು 'ಬಾವಿ ತೋಡಿಸಲು ಆದೇಶವೀಯುತ್ತಾನೆ. ಎಷ್ಟೇ ಆಳವಾಗಿ ತೋಡಿಸಿದರೂ ನೀರು ಬರಲಿಲ್ಲ. ಮೌನಯ್ಯನು ಅಲ್ಲಿಗೆ ಬಂದು ನೀರ ಪವಾಡ ಮೆರೆದು ದೊರೆಯ ಗೌರವಕ್ಕೆ ಪಾತ್ರನಾಗುತ್ತಾನೆ. ಕೆಲವರು ಮೌನಯ್ಯನಿಗೆ ಬೇಕಂತಲೇ ಮದ್ಯ ಮಾಂಸಗಳನ್ನು ನೀಡುತ್ತಾರೆ.... ಮದ್ಯವಕ್ಷೀರವಾಗಿರೆ ನರುಗಂಪಿನರಳಾಗೆ ಮಾಂಸಾ ಶರಣನಲ್ಲಿರ್ದಂಥವರಿಗೆ ಪಾಲೆರೆವುತ ವರಪುಷ್ಪಗಳ ಸರಗಟ್ಟಿ (೭-೬೦) ನೃಪತಿಗೆ ಕಳಿಸುತ್ತಾನೆ.

ತಲೆಗೆ ಸುತ್ತಲು ಕೊಟ್ಟ ಹೊರಸಿನ ನುಲಿ ಜರತಾರಿ ಮುಂಡಾಸವಾಗುತ್ತದೆ. ಆ ಪುರದಲ್ಲಿದ್ದ ಸುಶೀಲೆ ವೀರಮ್ಮಳಿಗೆ ಮೌನಯ್ಯನು ಲಿಂಗದ ಹಸುವಿಗೆ ನಿಜದ ಭಿಕ್ಷವ ನೀಡಿ ಲಿಂಗತೃಪ್ತಿಯ ಮಾಡು ತಾಯಿ (೭-೬೭) ಎಂದು ಬೇಡಿಕೊಳ್ಳುತ್ತಾನೆ. ಆಗ ವೀರಮ್ಮಳು ದಾಸ, ಫಕೀರ, ಗೊರವ ಜೋಗಿಯೊಂದಿಗೆ ನಮ್ಮ ಭಿಕ್ಷವ ನೀಡಿ ಬಂದು ಬೇಡುವದಿಲ್ಲ. ಇಂದು ನಿನ್ನಯ ರೂಪು ಒಂದಕ್ಕೆ ಅನುಸರಿಸಿಲ್ಲ (೭-೯೮) ಎನ್ನುತ್ತಾಳೆ. ಆಗ ಮೌನಯ್ಯನು

"ಮೂರು ಬೆರಕಿಯಿಂದಾಕಾರವಾದನು ಶಿವ
ಮೂರು ಬೆರಿಯೆ ಲಿಂಗವಾಯಿತು
ಮೂರು ಬೆರಕಿಯಿಂದಲಖಿಳ ಬ್ರಹ್ಮಾಂಡವು
ಮೂರು ಬೆರಕಿಯ ಪಿಂಡಾಂಡ" (೭-೭೦)

ಎಂಬಿತ್ಯಾದಿಯಾಗಿ ಶಿವಮಹಿಮೆಗಳನ್ನು ತಿಳಿಹೇಳುತ್ತಾನೆ.

ಅನೆಯ ಸಂಧಿ : ಶರಣ ಮೌನಯ್ಯನು ಜನರಿಗುಪದೇಶಗಳನ್ನು ನೀಡುತ್ತಾ ಪವಾಡ ಮೆರೆದ ಚಿತ್ರಣ ಇಲ್ಲಿದೆ. ಲಕ್ಷ್ಮೇಶ್ವರದಲ್ಲಿ ಗಾಣಿಗ ಶೆಟ್ಟಿಯೊಬ್ಬನ ಎತ್ತು ಮರಣ ಹೊಂದುತ್ತದೆ ಆ ಶೆಟ್ಟಿಯು ತುಂಬಾ ಚಿಂತಿಸುತ್ತಾ ಆ ಎತ್ತನ್ನು ಶೃಂಗರಿಸಿ ಸಂಸ್ಕಾರಮಾಡಲು ಅಣಿಯಾಗುತ್ತಾನೆ. ಸತ್ತ ಎತ್ತನ್ನು ತಾನು ಬದುಕಿಸುವೆನೆಂದು ಮೌನಯ್ಯ ಹೇಳಿದಾಗ ಶೆಟ್ಟಿಯು-

"ಸತ್ತ ಎತ್ತನು ನಾವು ಹೊತ್ತೊಯ್ಯುತಿರ್ದರೆ
ಎತ್ತಣಿಂದಲಿ ಬಂದ ಹುಚ್ಚ
ಹೊತ್ತು ಮುಳುಗುತಲಿದೆ ಹಾದಿಯಬಿಡು" (೮-೭೧)

ಎಂದು ನುಡಿದನು. ಮರು ಮಾತನಾಡದೆ ಮೌನಯ್ಯನು ಸತ್ತ ಎತ್ತಿನ ಬೆನ್ನಿನ ಮೇಲೆ ತನ್ನ ಹಸ್ತವನ್ನಿಟ್ಟು ನೇವರಿಸಿದನು. ಆಗ ಎತ್ತು ಮೆಲ್ಲನೆ ಕಣ್ತೆರೆದು ಬಾಲವ ಝಾಡಿಸಿ ಮೌನಯ್ಯನ ಕಡೆಗೆ ನೋಡಿ ಮುದ್ದಿಸ ತೊಡಗಿತು. ಅಚ್ಚರಿಗೊಂಡ ಜನರು ಭೈರವರಾಜ, ಕೊಟ್ಟೂರು ಬಸವೇಶನಂಥ ಶರಣರು ಗೈದ ಪವಾಡ ಮಾಡಿದ ಮೌನಯ್ಯನೇ ಶಿವನೆಂದು ಕೊಂಡಾಡಿದರು. ಲಿಂಗಮ್ಮ ಎಂಬ ಭಕ್ತೆಗೆ ಮೌನಯ್ಯನು ಬಸವಾಂಕಿತ

ಕಾಲಜ್ಞಾನ ವಚನಗಳನ್ನು ಹೇಳುತ್ತಾನೆ. ಅವಳು 'ದಮ್ಮಯ್ಯ ಕಾಯಕವ ನಮ್ಮ ಕೀಳನು ಮಾರಿ ನಿಮಗಿತ್ತಪೆ ಸಂತಿ ದಿವಸ' ಎಂದು ವಚನ ನೀಡಿದಾಕೆ ಹಠಾತ್ತನೆ ರೋಗಬಂದು ಸಾವನ್ನಪ್ಪುತ್ತಾಳೆ. ಪುರಜನರು ಆಕೆಯ ಶವ ಹೊತ್ತುಕೊಂಡು ನಡುಬೀದಿಗೆ ಬರುತ್ತಿದ್ದಾರೆ. ಮೌನಯ್ಯನು ನೋಡಿ 'ಒಂದು ನ್ಯಾಯವುಂಟು (ಅದೇ ೮-೧೩೦) ವಿಮಾನ ಯಿಳುಹಿರಿ ಎನ್ನುತ್ತಾನೆ. ಆಗ ಜನರು 'ಶವದಕೂಡ ಇಂದು ನ್ಯಾಯವಾಡುವ ಮಂದಿಗಾರು ಯುಂಟೆ' ಎಂದು ಆಶ್ಚರ್ಯಚಕಿತರಾಗುತ್ತಾರೆ. ಮೌನಯ್ಯ ಅವಳಿಗೆ ದಕ್ಷಿಣೆ ಕೇಳಲಾಗಿ ಲಿಂಗಮ್ಮ ಜೀವ ಪಡೆದು ತನ್ನ ಮನೆಯ ನೆಲವಿಗೆ ಕಟ್ಟಿರುವುದಾಗಿ ಹೇಳಲು ಮೌನಯ್ಯನು ಅವಳ ಮನೆಗೆ ತಾನು ಹೋಗುವುದಿಲ್ಲವೆನ್ನುತ್ತಾನೆ. ಲಿಂಗಮ್ಮ ಭರದಿಂದ ಎದ್ದು ನಡೆದು ಹೋಗಿ ದಕ್ಷಿಣೆಯ ತಂದೊಪ್ಪಿಸಿ ಮತ್ತೆ ಶವವಾಗುತ್ತಾಳೆ. ಇಂಥ ಅನೇಕ ಮಹಿಮೆಗಳನ್ನು ನಡೆಸಿದ ಮೌನಯ್ಯನನ್ನು ಪರೀಕ್ಷಿಸಬೇಕೆಂದು ಒಬ್ಬ ಸತ್ತ ಹಾಗೆ ನಟಿಸುತ್ತಾನೆ. ಆತನಿಗೆ, ಜೀವದಾನ ಬೇಡಲು 'ಸತ್ತವರ ಬದುಕಿಪ ಸತ್ಯರಿಳೆಯೊಳಗುಂಟೇ' ಎಂದು ಹೇಳಿ ಹೊರಡುತ್ತಾನೆ. ನಟಿಸಿದವನು ನಿಜವಾಗಿಯೂ ಸಾಯುತ್ತಾನೆ. ಹೀಗೆ ಮೌನಯ್ಯನು ಮಹಿಮೆಗಳನ್ನು ತೋರುತ್ತಿರಲು ಇಂತಿಷ್ಟು ಸಾಕು ನರರಂತೆಯಾಗಲಿ ಬೇಡ

ತಿಂಥಿಣಿ ಸ್ಥಳದಿ ನಿನಗಾಗಿ ,
ಮುಂಚೆ ಮಾಡಿದ ಬಯಲ ಸಮಾಧಿ ಬಾ

ಎಂದು (೮-೧೯೮) ಪ್ರಭುದೇವನು ಕರೆಯಲು ಹೊರಡಲಣಿಯಾಗುತ್ತಾನೆ.

೯ನೆಯ ಸಂಧಿ : ಪ್ರಭುವಿನಾಜ್ಞೆಯ ಮೇರೆಗೆ ತಿಂಥಿಣಿಗೆ ಹೊರಟ ಮೋನಯ್ಯನ ದರ್ಶನಕ್ಕೆ ಪ್ರಜೆಗಳೆಲ್ಲ ಬರುತಿರಲು ಅವರನ್ನು ಹರಸಿ ಕಳುಹಿಸುತ್ತಿದ್ದನು. ಎತ್ತೆತ್ತಣದ ಪ್ರಜೆಯೆಲ್ಲ ಮೊತ್ತಮೊತ್ತದಿ ಬಂದು ದರ್ಶನ ಪಡೆಯುತ್ತಿದ್ದರು. ತೊಡಕಿ ಕ್ಷೇತ್ರದಲ್ಲಿ ಪ್ರಭುವು ಶರಣ ಮೋನಯ್ಯನಿಗೆ ವಂದಿಸುತ್ತ-

"ದೇವ ಬಿತ್ತಿದ ಬೆಳೆ ತಾ ಒಣಗಿದವೀಗ
ಭೂವಳಿಯೊಳು ಮಳೆಯಿಲ್ಲ
ನೀವು ಪಾಲಿಪುದು" (೯-೨೨)

ಎಂದು ಬಿನ್ನವಿಸಲು ಮೋನಯ್ಯನ ಕರುಣಾವಲೋಕನ ಮಾತ್ರದಲ್ಲೇ ಹೆಮ್ಮಳೆ ಸುರಿಯುತ್ತದೆ. ಹೀಗೆ ಪವಾಡಗಳನ್ನು ಮೆರೆಯುತ್ತ ಪುರಜನ ಪರಿಜನ ಧರೆಜನರಿಂದ ಪರಿಪರಿ ಪೂಜೆ, ಕೈಕೊಂಡು ಕೃಷ್ಣಾನದಿಯ ಉತ್ತರಕ್ಕಿರುವ 'ತಿಂಥಿಣಿ' ಕ್ಷೇತ್ರಕ್ಕೆ ಆಗಮಿಸುತ್ತಾನೆ. ಸಮೃದ್ಧವಾದ ಪ್ರಕೃತಿಯ ಮಧ್ಯದಲ್ಲಿದ್ದ ಶಿವಾಲಯ ದಲ್ಲಿದ್ದುಕೊಂಡು 'ತನ್ನಿಚ್ಛೆಯಂತೆ ಸಂಪೂರ್ಣಮಾದುದನಾಗ ತನ್ನ ಲಿಂಗದಿ ತಾ ತಿಳಿದು' 'ಸಾಕಾರಲೀಲೆಯು ಸಾಕು ನಿಮ್ಮೊಳಗೆನ್ನ ಏಕ ಮಾಡಿಕೊಳ್ಳೆಂದು ಪ್ರಭುವಿನಲ್ಲಿ ಬಿನ್ನಹಮಾಡಿಕೊಳ್ಳುತ್ತಾನೆ.

'ನಿನ್ನೊಳು ನಾನೀಗ ಭಿನ್ನವಿಲ್ಲದೆ ಕೂಡಿ
ಶೂನ್ಯ ಮಹಲಿಂಗವಾಗಿಹೆನು' (೯-೫೯)

'ಬಾ ಮುನ್ನ ನಿನಗಾಗಿ ನಾ ಮಾಡಿಸಿಹೆನೆಂದು' (೯-೯೮) ಪ್ರೇಮದಿಂದ ಮೌನಯ್ಯನನ್ನು ಬೆಟ್ಟದ ಹತ್ತಿರ ಕರೆದುಕೊಂಡು ಹೋಗಿ 'ಇದೇ ನಿನ್ನ ಮಹಾಸುಸ್ಥಳ' ಎಂದು ತೋರಿಸಿ ಸಮಾಧಿಯೊಳು ಬಯಲಾಗು ಎಂದು ಹೇಳಿ ಅದೃಶ್ಯನಾಗುತ್ತಾನೆ. ತದನಂತರದಲ್ಲಿ ಪ್ರಭುದೇವನಾಜ್ಞೆಯಂತೆ ಮೌನಯ್ಯನು 'ತಿಂಥಿಣಿ'ಯ ಸಮೀಪದ ಮೊರಡಿಯಲ್ಲಿ ತನ್ನ ಸಮಾಧಿಯ ಸ್ಥಳದ ನಿರ್ದೇಶನ ಮಾಡುತ್ತಾನೆ. ಆ ಊರದೊರೆ 'ಲಿಂಗಪ್ಪ ಸಾಹೇಬ'ನ ಬಳಿಗೆ ಅಧಿಪತ್ಯರು ಬಂದು ಮೋನಯ್ಯ ಮೆರೆದ ಪವಾಡಗಳನ್ನುಸುರಿ ಮಹಿಮೆಯನ್ನು ತಿಳಿಸುತ್ತಾರೆ. ಮಂಡಲೇಶ್ವರನು ಮೌನಯ್ಯನ ಶ್ರೀ ಪಾದ ದರ್ಶನಕ್ಕೆ ಸಕಲ ಸಮ್ಮೇಳದೊಂದಿಗೆ ಬರುತ್ತಾನೆ.

೧೦ನೆಯ ಸಂಧಿ : ಶರಣ ಮೌನಯ್ಯನ ಮಹಿಮಾ ಪೂರ್ಣಚರಿತ್ರೆಯನ್ನು ಕೇಳಿ ಧರಣೇಶನು ಭಕ್ತಿಯಿಂದ ಬರುತ್ತಾನೆ. ಶಿವಬರುವಾಗ ಸುಂದರವಾದ ಮಲ್ಲಿಗಿ, ಮುಡಿವಾಳ, ಕೇತಕಿ, ಚಂಪಕ, ಸುರಗಿ, ಗೋರಂಟೆ ಮೊದಲಾದ ಸೌಂದರ್ಯಲಂಕಾರವಾದ ಹೂ ಗಿಡಗಳು ಸ್ವಾಗತಿಸಲು ಸಿದ್ಧವಾಗಿದ್ದವು. ಅರಸನು ತನ್ನ ಪರಿವಾರದೊಂದಿಗೆ ಸಂಭ್ರಮದಿಂದ, ವಿನಯದಿಂದ ಮೌನಯ್ಯನ ದರ್ಶನಕ್ಕೆ ಭಕ್ತಿಯಿಂದ ಬಂದ ರೀತಿಯನ್ನು ಕವಿ ಇಲ್ಲಿ ವಿವರವಾಗಿ ಚಿತ್ರಿಸಿದ್ದಾನೆ. ಈ ಸನ್ನಿವೇಶ ಚಿತ್ರಣಕ್ಕೆ ಇಡೀ ಸಂಧಿಯನ್ನು ಮೀಸಲಾಗಿರಿಸಿದ್ದಾನೆ. ಹೃದ್ಯವಾದ ಪ್ರಕೃತಿ ಚಿತ್ರ, ರಾಜ-ರಾಣಿಯರ ಜಲಕೇಳಿ, ಶಿವಾಲಯಕ್ಕೆ ಬರುವ ಸಂಭ್ರಮಗಳೆಲ್ಲ ಚಿತ್ರವತ್ತಾಗಿ ಮೂಡಿ ಬಂದಿದೆ.

೧೧ನೆಯ ಸಂಧಿ : ಪರಧರ್ಮ ಪರಿಪಾಲಕನಾದ ದೊರೆ ಲಿಂಗಣ್ಣನಾಯಕನು ಮಂತ್ರಿ ಸಮೇತ ಸಚ್ಚಿದಾನಂದ ರೂಪಿ ಮೋನಯ್ಯ ಶರಣರಿಗೆ ಭಯ ಭಕ್ತಿಯಿಂದ ಸಾಷ್ಟಾಂಗ ಪ್ರಣಾಮಮಾಡುತ್ತಾನೆ. ತನ್ನಿಂದಾಗಬಹುದಾದ ಸೇವೆಗೆ ಅಪ್ಪಣೆ ಬೇಡುತ್ತಾನೆ. ಮೌನಯ್ಯನು ಅರಸನನ್ನು ಹರಸಿ, ತಾಮಸ, ರಾಜಸ, ಸಾತ್ವಿಕ ಗುಣಗಳ ಪರಿಚಯ ಮಾಡಿಸಿ ಉಪದೇಶಿಸುತ್ತಾನೆ. ಇಲ್ಲಿ ಶಂಕರ ಕವಿಯ ಆಳವಾದ ಅನುಭವ ಅಭಿವ್ಯಕ್ತಗೊಂಡಿದೆ. ಶರಣ ಮೋನಯ್ಯನು ತನ್ನ ಸಮಾಧಿಯ ಮಹಾಸುಸ್ಥಳವನ್ನು ಜನಪನಿಗೆ ತೋರಿಸುತ್ತಾನೆ. ಮೌನಯ್ಯನ ಅಭಿಲಾಷೆಯಂತೆ ಲಿಂಗಪ್ಪ ಸಾಹೇಬನು ಮೊರಡಿಯ ಸಮೀಪ ಸಮಾಧಿಯನ್ನು ಸಿದ್ಧಗೊಳಿಸುತ್ತಾನೆ. ಇದರ ಸಂಕೇತವೆಂಬಂತೆ ಮುಕ್ಕಾಲು ಉಕ್ಕಿನ ಹೂಜಿ ಅಲ್ಲಿ ಗೋಚರಿಸುತ್ತದೆ. 'ಈತನಿಳೆಗೆ ಎರಡನೆ ಶಂಭು'ವೆಂದು ಧರಣೇಶ ಮುಖ್ಯರು ಮೌನಯ್ಯನ ಚರಣಗಳಿಗೆ ವಂದಿಸುತ್ತಾರೆ. ಒಂದು ಶುಭಮುಹೂರ್ತದಲ್ಲಿ ಸಮಾಧಿ ಪ್ರವೇಶಕ್ಕೆ ಮುನ್ನ ಶರಣ ಮೋನಯ್ಯನು 'ಭೂಮೀಶ'ನನ್ನು ಕರೆದು ಹರಸುತ್ತ ತನಗೆ ಶ್ರೀರಕ್ಷೆಯಾಗಿ ನೀಡಿದ್ದ ಅಲ್ಲಮನ ಕೊಡಲಿಯನ್ನು ದೊರೆ ಲಿಂಗಪ್ಪ ಸಾಹೇಬನಿಗೆ ನೀಡುತ್ತಾ-

> 'ಕೊಡಲಿದು ಆಯುರಾರೋಗ್ಯಭಿವೃದ್ಧಿಯ (೧೧-೭೭)
> ಕೊಡಲಿ ಕಲಿತನ ದಯಗುಣವ
> ಕೊಡಲಿದು ದೇಶದ ಜನಧರ್ಮ ಪಾಲನೆ' (೧೧-೭೮)

ಕೊಡಲಿದು ಇಹಪರದಿ ಸತ್ಕೀರ್ತಿ ಪದ್ಧತಿಯ ಎಂದು ಹರಸುತ್ತಾನೆ. ಗುರು ಅನಿಮಿಷನಸಮಾಧಿಯನ್ನು ಪ್ರಭುವು ಗೊಗ್ಗಯ್ಯನಿಂದ ತೆಗೆಸಿದಂತೆ ಆ ನೃಪನಿಂದ ತೆಗೆಸಿದ ಮೋನಯ್ಯನು 'ಕಾರಣ ಸಮಾಧಿ'ಯೊಳಗೆ ಪ್ರವೇಶಿಸಿದನು. ಶಿವಲಿಂಗದೊಳಗೆ ಮೋನಯ್ಯನು ಬೆರೆಯಲು ಆ ಲಿಂಗ ಪರಂಜ್ಯೋತಿಯು ಕೂಡಿ ಬೆಳಗಿ ಧರೆಗಗನದುದ್ದಕ್ಕೆ ಹೊರಸೂಸಿತು. ಹೇಳಿದ ಗಡುವಿಗೆ ಅಳೆದೆಗೆದು ನೋಡಲು ಶರಣ ಮೋನಯ್ಯನು ಗುರು ಪ್ರಭು ಪ್ರಭೆಯೊಳು ಬೆರಸಿದುದು ಸತ್ಯವಾಯಿತು. ಹರ ಹರ ಮಹದೇವ, ಜಯ ಯುಘೇಯೆಂದು ಪರಮ ಪುರುಷರು ಹೊಗಳಿದರು.

ನೂತನರೊಳಗತಿ ನೂತನ ಮೌನಯ್ಯ
ಭೂತಳದಲಿ ಪವಾಡವನು
ತಾ ತೋರಿ ಮೆರೆದ ವಿಖ್ಯಾತನ
ಸತ್ಕಥೆಯ ಪ್ರೀತಿಯಿಂಕೇಳಿ ಸಜ್ಜನರು (೧೧-೧೦೨)

ಇದು ನರಕೃತಿಯಲ್ಲ ಗುರು ಪ್ರಭು ಸ್ವಾಮಿಯ ಮುದದಿಂದೆ ಒಲಿಸಿ ಉಪದೇಶವದವಿ ತಾ ಪಡೆದು ಪವಾಡವ ತೋರಿದ ಸದಮಲ ಶರಣನ ಕೃತಿ ಎಂದು ಹೆಮ್ಮೆಯಿಂದ ಹೇಳುತ್ತಾನೆ ಶಂಕರಕವಿ.

ಶರಣನ ಚರಿತೆಯ ಬರದೋದಿ ಕೇಳಲು
ವರ ಭಕ್ತಿಜ್ಞಾನ ದೊರಕುವದು

ಎಂದು ಸತ್ಫಲವನ್ನೊರೆದು ಧರೆಯೊಳಗಧಿಕ ಕೋಳೂರ ರಾಮೇಶ್ವರ ಕರುಣದಿಂದಿನಿತು ರಕ್ಷಿಸಲಿ ಎಂದು ಹರಸಿ ಗುರು ಕರಿಬಸವೇಶ, ಗುರುನಂಜಪ್ಪಯ್ಯ, ಸತ್ಯನಿಧಿ ಶಿವಲಿಂಗಪ್ಪ ಹೆಗ್ಗಪ್ಪರಿಗೆ ಶರಣು ಸಮರ್ಪಿಸುತ್ತಾನೆ. ಕವಿಯು ಈ ಕೃತಿಯನ್ನು ಶಾಲಿವಾಹನ ಶಕ ಸಾವಿರದೈನೂರ ಮೇಲೆ ಎಪ್ಪತ್ತಾರನೆಯ ಸಾಲು ಸದ್ಭಾವಸಂವತ್ಸರದ ಮಾಘದೊಳು ಶುದ್ಧಾಷ್ಟಮಿ ತಿಥಿಯಂದು ಮುಕ್ತಾಯಗೊಳಿಸಿದನೆಂದು ತಿಳಿಸುತ್ತಾನೆ.

೩.೩. ಕೃತಿ ವಿಮರ್ಶೆ

ಜನಸಮೂಹದ ಮಧ್ಯದಲ್ಲಿದ್ದುಕೊಂಡು ತಮ್ಮ ಅಗಾಧ ವ್ಯಕ್ತಿತ್ವದ ಮೂಲಕ ಲೋಕಕಲ್ಯಾಣಕ್ಕಾಗಿ ಸೇವೆಗೈದು ಕೆಲವರು ಜನಮಾನಸದಲ್ಲಿ ಮಹಾಪುರುಷರಾಗಿ ಬಾಳಿ ಬದುಕಿ ಅಜರಾಮರರಾಗಿದ್ದಾರೆ.[೧] ಇವರು ತಾವು ಕಂಡುಕೊಂಡ ತತ್ವಗಳನ್ನು ತಾವೂ ಆಚರಿಸಿ, ಜನತೆಗೂ ಬೋಧಿಸಿದರು. ತಮ್ಮ ಆತ್ಮೋನ್ನತಿ ಯೊಂದಿಗೆ ಸಮಾಜದ ಉನ್ನತಿಯನ್ನೂ ಬಯಸಿದರು. ಇಂಥ ಮಹಾಪುರುಷರು ಲೋಕ ಪೂಜ್ಯರೆನಿಸಿದರು.[೨]

ಉತ್ತರ ಭಾರತದ ಕಬೀರದಾಸ, ಮಹಾರಾಷ್ಟ್ರದ ತುಕಾರಾಮ, ಉತ್ತರ ಕರ್ನಾಟಕದ ಕೊಡೇಕಲ್ಲು ಬಸವಣ್ಣ, ಎಮ್ಮೆ ಬಸವಣ್ಣ, ತಿಂಥಿಣಿ ಮೋನಪ್ಪಯ್ಯ ಪ್ರಮುಖರು. ಸಗರನಾಡಿನ ಶರಣ ಮೋನಪ್ಪಯ್ಯನವರಂತೂ ಧಾರ್ಮಿಕವಾಗಿ ಸೂಫಿ ಮಾದರಿಯ ಸಂತ, ಸಾಹಿತ್ಯಿಕವಾಗಿ ವಚನಕಾರ, ಸಾಮಾಜಿಕವಾಗಿ ಜನಪರ ಕಾಳಜಿಯುಳ್ಳ

ಮಹಾಮಾನವತಾವಾದಿ. 'ಮೌನೇಶ್ವರರು ಮುಖ್ಯವಾಗಿ ಹಿಂದೂ ಮುಸ್ಲಿಮ್ ಅರಸರಿಗೆ ಧಾರ್ಮಿಕ ಸಮನ್ವಯತೆಯನ್ನು ಬೋಧಿಸಿದರು. ರಾಜರ ಅರಮನೆಗಳಲ್ಲಿ, ಸಮಾಜದಲ್ಲಿ ಅನೇಕ ತೀರ್ಥ ಕ್ಷೇತ್ರಗಳಲ್ಲಿ ಪ್ರಸಿದ್ಧ ಸ್ಥಳಗಳಲ್ಲಿ ತಮ್ಮ ದಿವ್ಯವಾದ ಮಹಿಮೆಗಳನ್ನು ತೋರಿದ್ದಾರೆ.[೩]

ಹೀಗೆ ತಮ್ಮ ಅಸಾಮಾನ್ಯ ಪೂಜಾರ್ಹ ವ್ಯಕ್ತಿತ್ವದ ಮೂಲಕ ಅಂದು ಜೀವಂತ ದಂತಕಥೆಯಾಗಿ ಹೋದ ಮಹಾನ್ ಶರಣ ಮೋನಪ್ಪಯ್ಯನವರನ್ನು ಕುರಿತು ಕನ್ನಡದಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯಗಳೆರಡರಲ್ಲೂ ಕಾವ್ಯ, ಪುರಾಣ, ಗೀತೆ, ಕಥೆ, ನಾಟಕಗಳು ರಚನೆಯಾಗಿವೆ. ಅವುಗಳಲ್ಲಿ ಕೋಳೂರು ಶಂಕರ ಕವಿಯ 'ಶರಣ ಮೋನಪ್ಪಯ್ಯ ಚಾರಿತ್ರ'ವು ತಿಂಥಿಣಿ ಮೋನಪ್ಪಯ್ಯನನ್ನು ಕುರಿತು ರಚನೆಗೊಂಡ ಮೊದಲ ಕಾವ್ಯ. ಶಂಕರ ಕವಿ ರಚಿಸಿದ ಮೊದಲ ಕಾವ್ಯವೂ ಹೌದು. ಪ್ರಧಾನವಾಗಿ ಮೋನಪ್ಪಯ್ಯನವರ ವಚನಗಳನ್ನು ಆನುಷಂಗಿಕವಾಗಿ ಅಂದು ಮೋನಪ್ಪಯ್ಯನವರನ್ನು ಕುರಿತು ಜನಜನಿತವಾಗಿದ್ದ ಸಂಗತಿಗಳನ್ನು ಆಧರಿಸಿ ಶಂಕರಕವಿಯು 'ಸಾಂಗತ್ಯ ಛಂದಸ್ಸಿ'ನಲ್ಲಿ ಈ ಕಾವ್ಯವನ್ನು ರಚಿಸಿದ್ದಾನೆ.

'ಹರಿದೇವ ಕೆರೆಯ ಪದ್ಮರಸ ರಾಘವನು ಭೀ
ಮರಸ ಚಾಮರಸ ಜಕ್ಕಣ್ಣ
ವರ ಪಾಲುಕುರಿಕೆ ಸೋಮರಸನು ಚಿಕ್ಕನಂ
ಜರಸಾನುಸಾಹ ಶಿವಕವಿಯೋ.....(೧-೨೨)

ಎಂದು ಹರಿಹರ, ಕೆರೆಯ ಪದ್ಮರಸ, ರಾಘವಾಂಕ, ಭೀಮಕವಿ, ಚಾಮರಸ ಜಕ್ಕಣ್ಣ, ಪಾಲ್ಕುರಿಕೆ ಸೋಮನಾಥ, ಚಿಕ್ಕನಂಜರಸ ಮುಂತಾದ ಶಿವಕವಿಗಳಿಗೆ ವಂದಿಸುತ್ತಾ, ಅವರ ಕೃಪೆ ತನ್ನ ಕಾವ್ಯವನ್ನು ಮುನ್ನಡೆಸುವ ಶಕ್ತಿ ಎಂದು ತಿಳಿಸುತ್ತಾನೆ.

'ಇದು ನರಕೃತಿಯಲ್ಲ ಗುರುಪ್ರಭುಸ್ವಾಮಿಯ
ಮುದದಿಂದ ಒಲಿಸಿ ಉಪದೇಶ
ವದವಿ ತಾ ಪಡದು ಪವಾಡವ ತೋರಿದ
ಸದಮಲ ಶರಣನ ಕೃತಿಯು' (೧೧-೧೦೭)

ಎಂದು ಹೇಳುವಲ್ಲಿ ತನ್ನದು ಶಿವಕವಿ 'ಹರಿಹರನುದಿತ ಮಾರ್ಗ' ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಆದ್ದರಿಂದ ಈ ಕಾವ್ಯ ಪ್ರಧಾನವಾಗಿ ವಸ್ತುವಿನ ದೃಷ್ಟಿಯಿಂದ ಹರಿಹರನನ್ನು ನಿರೂಪಣೆಯ ದೃಷ್ಟಿಯಿಂದ ಚಾಮರಸನನ್ನು ಅನುಸರಿಸಿರುವುದು ತೋರುತ್ತದೆ. ಚಾರಿತ್ರಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಹೀಗೆ ಹಲವು ಅಂಶಗಳಿಂದ ಈ ಕೃತಿ ಗಮನಾರ್ಹವಾಗಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸಬಹುದು.

ಸಾಮಾಜಿಕ ಅಂಶಗಳು

ಕವಿ ಪರಿಸರದ ಶಿಶು. ಯಾವುದೇ ಕವಿ, ಸಂತ, ದಾರ್ಶನಿಕನು ತನ್ನ ಕಾಲದ ಮುಖವಾಣಿಯಾಗುತ್ತಾನೆ. ಪ್ರಜ್ಞಾವಂತ ಕವಿಯು ತನ್ನ ಸಮಕಾಲೀನ ಸಮಾಜಕ್ಕೆ ತನ್ನ ಕೃತಿಯಲ್ಲಿ ಧ್ವನಿ ನೀಡುವ ಪ್ರಯತ್ನ ಮಾಡುತ್ತಾನೆ. ಶಂಕರ ಕವಿಯ 'ಶರಣ ಮೋನಪ್ಪಯ್ಯ ಚಾರಿತ್ರ'ವು ೧೨ನೆಯ ಶತಮಾನದ ಶಿವಶರಣರ ಪ್ರಭಾವದ ನೆರಳಲ್ಲೇ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡ ಶರಣನ ಚರಿತ್ರೆ. ಸಮಾಜದ ಉದ್ಧಾರವೇ ಶಿವಪೂಜೆ ಎಂದು ಭಾವಿಸಿದ ಸಂತನ ಕಥೆ. ಹೀಗಾಗಿ ಈ ಕೃತಿಯಲ್ಲಿ ಅನೇಕ ಸಾಮಾಜಿಕ ಅಂಶಗಳನ್ನು ಗುರುತಿಸಬಹುದು.

೧. ಕುಲ : ಶರಣರ ಆಂದೋಲನ ಜಾತಿನಿರಸನ ಸಿದ್ಧಾಂತವನ್ನು ಒಪ್ಪಿಕೊಂಡು ವರ್ಗ-ವರ್ಣ-ಜಾತಿ ರಹಿತ ಸಮಾಜದ ಕನಸನ್ನು ನನಸು ಮಾಡಲು ಪ್ರಯತ್ನಿಸಿದ್ದು ಐತಿಹಾಸಿಕ ಸತ್ಯ. ದುರಂತವೆಂದರೆ ಗೂಡಿಸುತ್ತ ಹೋದಂತೆಲ್ಲ ಮತ್ತೆ ಮತ್ತೆ ಕಸ ಬೀಳುವಂತೆ ಈ ಸಮಾಜದಲ್ಲಿ ಇಂದಿಗೂ 'ಜಾತಿ' ತನ್ನ ಕಬಂಧಬಾಹುಗಳನ್ನು ಚಾಚುತ್ತಲೇ ಇರುವುದು. ಶರಣ ಮೋನಪ್ಪಯ್ಯನು ಈ ಕಾವ್ಯದಲ್ಲಿ 'ಕುಲ'ದ ಕುರಿತಾಗಿ ಆಡುವ ಮಾತುಗಳು ಅಂದು ಹಾಗೂ ಇಂದಿನ ಸಮಾಜಕ್ಕೆ ಕನ್ನಡಿ ಹಿಡಿಯುತ್ತವೆ.

ಶರಣ ಮೋನಪ್ಪಯ್ಯನು ಶಿವಶರಣರಿಗೆ ಕುಲದ ಹಂಗಿಲ್ಲವೆಂಬುದನ್ನು ತಿಳಿಸುತ್ತಾ ಹೀಗೆ ಹೇಳುತ್ತಾನೆ.

"ಮದನಾರಿ ಶರಣರು ಅಧಮಕುಲದೊಳಗಿರೆ
ಮದನಾರಿಯಂದು ಕಾಣುವುದು
ಮದನಾರಿ ಭಜಿಸದ ಮದಮುಖರು ಸತ್ಕುಲ
ದೊದವಿದರವನೇ ಅಕ್ಕುಲಿಜ" (೮-೧೩)

ಅಧಮಕುಲದವನಾದರೂ ಮದನಾರಿಯ ಭಕ್ತನಾಗಿದ್ದರೆ ಅವನು ಸತ್ಕುಲಜನೆನಿಸುವನು.

ಕುಲವಿಲ್ಲ ಶರಣಗೆ ಮಲವಿಲ್ಲ ಯೋಗಿಗೆ
ಹೊಲಗೇರಿಯಿಲ್ಲ ಶಿವಪುರದಿ
'ಹರ ಶರಣರ ಕುಲ ಪರಿಭೇದ ಮಾಡುವ
ನರರಿಗೆ ನಾಯಕ ನರಕ' (೮-೪೪)

ಶರಣರಿಗೆ ಕುಲ ಭೇದವಿಲ್ಲ, ಭೇದಂಗೈದರಿಗೆ ಅಂಥವರು ನರಕ ಭಾಜನರಾಗುತ್ತಾರೆಂದು ಎಚ್ಚರಿಸುತ್ತಾ ಶಂಕರ ಕವಿಯು ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದಾನೆ.

೨. ಹೊನ್ನು-ಹೆಣ್ಣು-ಮಣ್ಣು: ಮನದ ಮುಂದಣ ಆಸೆಯೇ ಮಾಯೆ. ಆದರೆ ಅಳಿಮನಸ್ಸಿನವನಿಗೆ ಹೊನ್ನು-ಹೆಣ್ಣು-ಮಣ್ಣುಗಳು ದಿಕ್ಕು ತಪ್ಪಿಸುತ್ತವೆ. ಭಕ್ತಿ ಪಥದಿಂದ ದೂರಸರಿಯುವಂತೆ ಆಕರ್ಷಿಸುತ್ತವೆ. ಈ ಕಾವ್ಯದಲ್ಲಿ ಭಕ್ತನಾದ ಮೋನಪ್ಪಯ್ಯನು 'ಶಿವ ಜಂಗಮ'ನು ಕರೆದರೂ ದೇಶಾಂತರ ಹೋಗಲು ನಿರಾಕರಿಸುತ್ತಾನೆ.

"ಸಾವಧಾನದೊಳಿರ್ದು ಭಾವಶುದ್ಧದಿ ಗುರು
ದೇವನ ಧ್ಯಾನವೆ ಸಾಕು" (೪-೧೦)

ಎಂದುತ್ತರಿಸುತ್ತಾನೆ. ಆದರೂ ಛಲಬಿಡದ ಶಿವಜಂಗಮನು ಪುರಾಣೋಕ್ತ ಕಥೆಗಳನ್ನು ತಿಳಿಸಿ ನಾನಾ ರೀತಿಯಾಗಿ ಉಪದೇಶಿಸುತ್ತಾನೆ.

ಹೊನ್ನು ಹೆಣ್ಣು ಮಣ್ಣು ಚಿನ್ನ ಬಳಗವೆಲ್ಲ
ತನ್ನವೆನಬೇಡ ನೆರೆನಂಬಿ
ಮುನ್ನ ಸಮರ್ಥರು ಬನ್ನವ ಬಟ್ಟರು (೪-೧೯)

ಹೆಣ್ಣಿನಿಂದಲಿ ವಾಲಿ ಹತವಾದ ರಾಮನು
ಹೆಣ್ಣಿನಿಂದಲಿ ಭಂಗವ ಪಟ್ಟ
ಹೆಣ್ಣಿನಿಂದಪಕೀರ್ತಿ ಮುನ್ನಲಿಪಡದವರ
ಇನ್ನು ಹೇಳಲು ಅಸದಳವು (೪-೨೬)

ಹೊನ್ನಿಗಾಸೆಯ ಮಾಡಿ ಹರಿಶ್ಚಂದ್ರ ರಾಯನು
ಬನ್ನ ಬಡಿಸಿ ಧನವಕೊಂಡು
ತನ್ನಾತಪಸಿನ ಫಲವನ್ನು ವಶಿಷ್ಟಗೆ
ಮುನ್ನಿತ್ತು ಕೊಟ್ಟ ವಿಶ್ವಾಮಿತ್ರ (೪-೨೭)

ಕುರುರಾಯ ಭೂಮಿಯ ವರ ಸಹೋದರರನು
ನೆರೆ ಸೇರಗೊಡದೆ ಅಟ್ಟುತ್ತ
ಯಿರೆ ಹರಿ ಸಹಯಾದಿ ಭರದಿ ಸೈನ್ಯವ ಕೂಡಿ
ಹರಿಸಿದರವನೆಲ್ಲರರಿಯೆ (೪-೩೩)

೩. ಶೀಲ : ಸಾಮಾನ್ಯವಾಗಿ ಶೀಲವೆಂದರೆ ಗಂಡು-ಹೆಣ್ಣಿನ ಸಂಬಂಧದ ನೆಲೆಯಲ್ಲಿಯೇ ವ್ಯಾಖ್ಯಾನಿಸಲ್ಪಡುವುದನ್ನು ಶರಣರು ಒಪ್ಪುವುದಿಲ್ಲ. ಶಂಕರ ಕವಿಯು 'ಮೋನಪ್ಪಯ್ಯ'ನ ಮೂಲಕ ತುಂಬ ಮಾರ್ಮಿಕವಾಗಿ 'ಶೀಲ'ದ ಕುರಿತು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾನೆ.

"ಶೀಲ ಶೀಲೆಂಬುದು ಹಾಳ ಸಂಕಲ್ಪವು" (೮-೬)
"ಅಜ್ಞಾನಿಗಳ ಸಂಗ ಮಾಡದಿಪ್ಪದೆ ಶೀಲ
ಹಿಗ್ಗಿ ಪರಮತ ಪರದೈವ
ಮಗ್ಗಿ ಬೆರಿಯದೆ ಶೀಲ ಪರನಾರಿ ಪರವಸ್ತು

ತಗ್ಗುಣಿಸದಿದೆ ಸುಶೀಲ" (೮-೧೯)
"ಕಿವಿಯಲ್ಲಿ ದುರ್ಗೋಷ್ಟಿ ಕಣ್ಣಿಲಿ ಪರದೃಷ್ಟಿ
ಸವಿನಾಲಿಗಿಯಲಿ ದುರ್ಭಾಷೆ
ತವೆ ಅಂಗಪರ ಸೋಂಕು ನವವಸ್ತ್ರ ಪರದ್ರವ್ಯ
ಇವರಿಗಿನ್ನೆಲ್ಲಿಯ ಶೀಲ (೮-೨೦)
ಆ ಮಹಾಲಿಂಗದ ಪ್ರೇಮದಿಂದಲಿ ಧರಿಸೆ
ತಾ ಮೋಹಿಸದೆ ಬಂದವಸ್ತು
ತಾ ಮೋದದಿಂದಲಿ ಸರ್ವ ಲಿಂಗಕ್ಕೀವ
ಪ್ರೇಮಿಯು ಸುಶೀಲವಂತ" (೮-೨೨)

೪. **ಕಾಯಕ :** ಮಾಡುವ ಕಾರ್ಯವು ಕಾಯಕವಾದಾಗ ಸಾಮಾನ್ಯ ಮಾನವನೂ ಶರಣನ ನೆಲೆಗೇರುವ ನೆಂಬುದನ್ನು ಇಡೀ ಜಗತ್ತಿಗೆ ಸಾರಿದ್ದೇ ಶರಣರ ಕಾಯಕ ಸಿದ್ಧಾಂತ. ತನುವನ್ನು ಕಾಯಕದಲ್ಲಿ ತೊಡಗಿಸಿ, ಮನವನ್ನು ಲಿಂಗದಿ ನೆಲೆಸಿ, ಕಾಯಕದಿಂದ ಬಂದ ಧನವನ್ನು ದಾಸೋಹದ ಮೂಲಕ ಜಂಗಮಕ್ಕೆ ಅರ್ಪಿಸ ಬೇಕು. ಆಗ ಮಾತ್ರ ಸಮಾಜ ಸ್ವರ್ಗವಾಗುತ್ತದೆ ಎಂಬ ಶರಣರ ನಿಲುವನ್ನು ಶಂಕರ ಕವಿಯು ಈ ಕಾವ್ಯದಲ್ಲಿ ತುಂಬ ಅರ್ಥಪೂರ್ಣವಾಗಿ ಅಲ್ಲಲ್ಲಿ ವಿವರಿಸುತ್ತಾನೆ.

ಶರಣ ಮೋನಪ್ಪಯ್ಯ, ಸುಜ್ಞಾನಿ ದಂಪತಿಗಳು ಕಾಯಕ ನಿಷ್ಠರು. ಈರ್ವರೂ ಪರಸ್ಪರರಿಗೆ ಸಹಕರಿಸುತ್ತ ಕಾಯಕದಲ್ಲಿ ನಿರತರಾದ ದೃಶ್ಯವನ್ನು ಕವಿ ಮನಂಬುಗುವಂತೆ ಚಿತ್ರಿಸಿದ್ದಾನೆ.

ಕಾಯದಾ ಗುಣದಗ್ಗುಷ್ಟದಲಿ ಅಜ್ಞಾನದ
ಮಾಯಾ ಚಿನ್ನಿಯ ಯಿದ್ದಿಲಿಟ್ಟು
ಸ್ವಾಯತ ಚಿದ್ರನ್ನಿಯಿಟ್ಟು ಸುಮನಸವೆಂಬ
ಊವಿಯ ಕೋವಿಯಲೂದಿ (೨-೧೯)

ತೆಗೆದು ಸದ್ ಭಕ್ತದದ್ಧಾಣೆಯ ಮೇಲಿಟ್ಟು
ನೆಗಹಿ ದೃಢಸುತ್ತಿಗೆಯ ಪಿಡಿದು
ಮಿಗೆ ಮಾಯಾಬದ್ಧದ ಘಟ್ಟಿಯ ಮರ್ದಿಸು
ಜಗಿಶ ನಾಗಿಶ ಸುಜನಚೆದುರ (೨-೧೭)

ತಾಳಿ ಗುರುಲಿಂಗ ಜಂಗಮಕೆ ದಾಸೋಹವ
ತಾಳಿ ತಾಳಿಯನು ಮಾಡದನು (೨-೧೮)

ಎಂಬಿತ್ಯಾದಿಯಾಗಿ ಆ ದಂಪತಿಗಳು ಕಾಯಕ ಯೋಗಿಗಳಾಗಿ ಅನುಭಾವದ ಬದುಕಿಗೆ ಮಾದರಿಯಾಗಿದ್ದನ್ನು ಕವಿ ಚಿತ್ರಿಸುವ ಮೂಲಕ 'ಕಾಯಕದಿಂದಲೇ ಜೀವನ್ಮುಕ್ತಿ' ಎಂಬುದನ್ನು ಸಾರುತ್ತಾನೆ.

೫. **ಸಮಾಜ ವಿಡಂಬನೆ :** ಪ್ರಭುವಿನ ಸಾಕ್ಷಾತ್ಕಾರ ಪಡೆದ ಮೋನಪ್ಪಯ್ಯನು 'ಹಿಂಡನಗಲಿದ ಗಜದಂತೆ' ಊರೂರು ತಿರುಗುತ್ತಾ, ಜನರಿಗೆ ಉಪದೇಶಗಳನ್ನು ನೀಡುತ್ತಾ ಪವಾಡಗಳನ್ನು ಮೆರೆಯುತ್ತ ಸಾಗುತ್ತಿರುತ್ತಾನೆ. ಕವಿ ಸರ್ವಜ್ಞನಂತೆ ಕಂಡದ್ದನ್ನು ಕಂಡಂತೆ ಖಂಡಿಸುವ ಗುಣ ಮೋನಪ್ಪಯ್ಯನದು. ಅರಿವಿನ ಕೊರತೆಯ ರೋಗ ಎಲ್ಲ ಕಾಲದ ಎಲ್ಲ ಸಮಾಜದ ಜನರಲ್ಲೂ ಕಾಣುವಂಥದ್ದು. ಆತ್ಮೋನ್ನತಿಯೊಂದಿಗೆ ಸಮಾಜೋನ್ನತಿ ಯನ್ನೂ ಬಯಸಿದ ಶರಣ ಮೋನಪ್ಪಯ್ಯನಿಗೆ ಅಲ್ಲದ್ದನ್ನು, ಸಲ್ಲದ್ದನ್ನು ಕಂಡು ಸುಮ್ಮನಿರಲಾಗಲಿಲ್ಲ. ಅನೇಕ ಕಡೆಗಳಲ್ಲಿ ಲೋಕದ ಸಾಮಾನ್ಯ ಜನರ ಮೂಢ ವರ್ತನೆಯನ್ನು ನೇರವಾಗಿ ಖಂಡಿಸುತ್ತಾನೆ. ಶಂಕರ ಕವಿಯ ಲೋಕಾನುಭವಕ್ಕೆ ಇಂಥವುಗಳು ನಿದರ್ಶನವಾಗಿ ನಿಲ್ಲುತ್ತವೆ.

ಉದಾ: ಹೊರವೇಷಕ್ಕೆ ಮಾರು ಹೋಗುವ ಡಾಂಭಿಕರನ್ನು ಕುರಿತು ಹೀಗೆ ಲೇವಡಿ ಮಾಡುತ್ತಾನೆ.

"ಡಂಭಕ ವೇಷಕ್ಕೆ ಕುಂಭಿನಿ ಮನುಜರು
ನಂಬಿ ಭಜಿಸಿ ಬೇಡಿದಿತ್ತು
ಶಂಭು ತನ್ನಯ ನಿಜಮಂ ಬಿಟ್ಟುಬಂದರೆ
ಅಂಬಲಿ ಹಾಕರು ನರರು" (೮-೯)

ಕಲ್ಲನಾಗರ ಕಂಡರೆ ಹಾಲೆರೆಯುವ ಜನರು ದಿಟದನಾಗರ ಕಂಡರೆ ಕೊಲ್ಲೆಂಬುವ ಸ್ವಭಾವದವರು. ಹಾಗೆ ಡಾಂಭಿಕ ವೇಷಧಾರಿ ಭಕ್ತರಿಗೆ ಮರುಳಾಗಿ ಬೇಡಿದ್ದನ್ನು ನೀಡುತ್ತಾರೆಯೇ ಹೊರತು ಸಾಕ್ಷಾತ್ ಶಂಭುವೇ ತನ್ನ ರೂಪ ಬದಲಿಸಿಕೊಂಡು ಬಂದರೆ ಅಂಬಲಿಯನ್ನೂ ಹಾಕದೆ ಮುಂದಟ್ಟುತ್ತಾರೆ.

"ದೊಡ್ಡ ವೇಷವ ಕಂಡು ಅಡ್ಡಡ್ಡ ಬೀಳುತ
ವಡ್ಡಿಕಾರವ ಮಾತನಾಡಿ
ಗುಡ್ಡದ ಮಗಳರಸ ಮಡ್ಡಾಗಿ ಬಂದರೆ
ಯಡ್ಡಿಸಿ ನಗುವರು ನರರು" (೮-೧೦)

"ಹಸಿವಿಗನ್ನವನುಂಡು ವ್ಯಸನದಿ ಕುದಿವುತ
ಪಿಸುಣರ ಸಂಗವ ಮಾಡಿ
ಹಸಗೆಟ್ಟು ಶರಣರ ಹಳಿವಂತ ಮೂರ್ಖರಿಗೆ
ಪಶುಪತಿಯೆಂತೊಲಿವನು" (೮-೫೬)

ಲೌಕಿಕ ಸುಖ-ಭೋಗಗಳಲ್ಲಿ ಮೈಮರೆತ ಭವಿಗಳು ಶಿವನನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ.

ರೂಪು ನಿರೂಪುನರಸಲಿಕ್ಕೆ ಸೂಳಿಯ
ವ್ಯಾಪಾರವೆ ಭಕ್ತರ್ಗಳಿಗೆ
ರೂಪವನಡಗಿಸಿ ತಾ ಪ್ರಭುಬಂದರೆ
ಈ ಪರಿ ಬಸವ ಕೇಳಿದನೆ (೮-೫೭)

ಶಿವನನ್ನೊಲಿಸಲು ಅಂತರಂಗ ಶುದ್ಧಿಯೊಂದೇ ಮಾರ್ಗ. ಅರಿವಿನ ಕಣ್ಣಿಗೆ ಮಾತ್ರ ಅವನನ್ನು ಗುರುತಿಸುವ ಸಾಮರ್ಥ್ಯ ಇರುವುದು ಎಂದು ಪ್ರಭುವನ್ನು ಮಾರು ವೇಷದಲ್ಲಿಯೂ ಗುರುತಿಸಿ ಪೂಜಿಸಿದ ಬಸವಣ್ಣನ ದೃಷ್ಟಾಂತವನ್ನು ನೀಡುತ್ತಾನೆ ಕವಿ. ಹೀಗೆ ನ್ಯಾಯ ನಿಷ್ಠುರಿಯಾದ ಮೋನಪ್ಪಯ್ಯನು ನೇರ, ನಿರ್ಭಿಡೆಯ ಮಾತುಗಳಿಂದ ಡಾಂಭಿಕರನ್ನು ಚುಚ್ಚುತ್ತಾ, ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡುತ್ತಾನೆ.

೬. ಏಕೇಶ್ವರವಾದ : ಕರ್ನಾಟಕ "ಸರ್ವಧರ್ಮಧೇನು ನಿವಹಕ್ಕಾಡುಂಬೊಲಂ" ಎಲ್ಲ ಧರ್ಮಗಳ ಕ್ರೀಡಾಂಗಣವಾಗಿತ್ತು. ಆದರೆ ಕೆಲವೊಮ್ಮೆ 'ರಣಾಂಗಣವಾಗಿ' ಮಾರ್ಪಟ್ಟಿರುವ ಉದಾಹರಣೆಗಳೂ ಇಲ್ಲದಿಲ್ಲ. ಮಧ್ಯಕಾಲೀನ ಭಾರತದ ಚರಿತ್ರೆಯ ಪ್ರಧಾನ ಅಂಶವೆಂದರೆ ಇಸ್ಲಾಂ ಧರ್ಮದ ಪ್ರವೇಶ, ಪ್ರಸಾರ ಹಾಗೂ ಪ್ರಭುತ್ವವೇ ಆಗಿದೆ.[೪]

ಆ ಸಂದರ್ಭದಲ್ಲಿ ವೀರಶೈವ ಸಂಸ್ಕೃತಿಯು ಅನಿವಾರ್ಯವಾಗಿ ಮುಸಲ್ಮಾನರ ಸಾಂಸ್ಕೃತಿಕ ಧಾಳಿಯನ್ನು ಸಂಘರ್ಷದ ರೂಪದಲ್ಲಿ ಎದುರಿಸುತ್ತಲೇ ಸಂಧಾನ ರೂಪದಲ್ಲಿ ಒಪ್ಪಿಕೊಳ್ಳಬೇಕಾಯಿತು. ಈ ಪ್ರಯತ್ನವು 'ವೀರಶೈವ' ಸಂಸ್ಕೃತಿಗೆ ಸಮನ್ವಯ ಸ್ವರೂಪವನ್ನು ತಂದುಕೊಟ್ಟಿತು. ಈ ಪ್ರಯತ್ನದ ಹೊಣೆ ಹೊತ್ತುಕೊಂಡು ಅನುಪಮಸಾಧನೆಗೈದ ಪುಣ್ಯ ಪುರುಷರಲ್ಲಿ ಶರಣ ಮೋನಪ್ಪಯ್ಯನವರದು ಜನಪ್ರಿಯ ಹೆಸರು.

ಈಶ್ವರ ಮತ್ತು ಅಲ್ಲಾ ಎಲ್ಲಾ ಒಂದೇ ಎಂಬ ತತ್ವ ಮೋನಪ್ಪಯ್ಯನದು. ದೇಶಸಂಚಾರ ಹೊರಡುತ್ತಾ ಅಲ್ಲಲ್ಲಿ ಭಿಕ್ಷೆ ಬೇಡುತ್ತಾ ಜನರನ್ನು ತಿದ್ದುತ್ತಾ ಹೊರಟ ಮೋನಪ್ಪಯ್ಯನದು ವಿಚಿತ್ರ ವೇಷ!

ಲಕ್ಷ್ಮೇಶ್ವರದಲ್ಲಿ ನಡೆದ ಘಟನೆ. ಒಂದು ಸಾರೆ ಆ ಪುರದಲ್ಲಿಯೇ ಇದ್ದ ಸುಶೀಲೆ ವೀರಮ್ಮಳಿಗೆ ಮೌನಯ್ಯನು-

"ಲಿಂಗದ ಹಸುವಿಗೆ ನಿಜದ ಭಿಕ್ಷವ ನೀಡಿ
ಲಿಂಗ ತೃಪ್ತಿಯ ಮಾಡು ತಾಯಿ" (೦೭-೬೭)

ಎಂದು ಬೇಡಿಕೊಳ್ಳುತ್ತಾನೆ. ಆಕೆಯೋ ಲಿಂಗಧಾರಿಯಲ್ಲದವರಿಗೆ ಭಿಕ್ಷೆ ನೀಡದ ನಿಯಮ ಪಾಲಿಸುತ್ತಿದ್ದವಳು. ನಿಜವನ್ನರಿಯದೆ ಆಕೆಯು

ಎಂದರೆ ದಾಸ ಫಕೀರಗೊರವ ಜೋಗಿ
ಯಂದಿಗೆ ನಮ್ಮ ಭಿಕ್ಷವ ನೀಡಿ

ಬಂದು ಬೇಡುವದಿಲ್ಲ ಇಂದು ನಿನ್ನಯ ರೂಪು
ವಂದಕ್ಕೆ ಅನುಸರಿಸಿಲ್ಲ (೭-೬೮)

"ಮೂರು ಬೆರಕಿಯವನಾರೊ ನೀ ಪೋಗೆಂದು" (೭-೬೯)

ಸಿಟ್ಟು ಮಾಡುತ್ತಾಳೆ. ಮಾರಾರಿ ಶರಣ ಮೋನಪ್ಪಯ್ಯನು

"ಮೂರು ಬೆರಕಿಯಿಂದಾಕಾರವಾದನು ಶಿವ
ಮೂರು ಬೆರಿಯೆ ಲಿಂಗವಾಯಿತು
ಮೂರು ಬೆರಿಕಿಯಿಂದಲಖಿಳ ಬ್ರಹ್ಮಾಂಡವು
ಮೂರು ಬೆರಕಿಯ ಪಿಂಡಾಂಡ"

ಎಂದು ತಿಳಿ ಹೇಳುತ್ತಾನೆ.

ದೇವನೊಬ್ಬ ನಾಮಹಲವು, ವೇಷ ಕಂಡು ಮೋಸ ಹೋಗಬಾರದು ಮಾನವ ಎಂಬ ನೀತಿ ಇಲ್ಲಿದೆ.

ತಾತ್ವಿಕ ವಿವೇಚನೆ

ಶಂಕರ ಕವಿಯು ಶರಣ ಪರಂಪರೆಯಲ್ಲಿ ಬಂದ ಒಬ್ಬ ವೀರಶೈವ. ಈತನ ಎಲ್ಲ ಕಾವ್ಯಗಳಲ್ಲಿ ವೀರಶೈವ ತತ್ವಗಳ ಬಗ್ಗೆ ಕಥಾನಾಯಕರ ಮೂಲಕ ಅನುಸಂಧಾನ ನಡೆಸಿರುವುದನ್ನು ಧಾರಾಳವಾಗಿ ಗುರುತಿಸಬಹುದು.[೫]

ಪ್ರಸ್ತುತ ಕೃತಿಯಲ್ಲಿಯೂ ವೀರಶೈವ ತತ್ವಗಳ ವಿವರಣೆ, ಅನೇಕ ಶಿವಶರಣರ ಶಿವಕವಿಗಳ ಮತ್ತು ಶಿವಭಕ್ತರ ಸಾಧನೆ ಸಿದ್ಧಿಗಳನ್ನು ಕಥಾರೂಪದಲ್ಲಿ ನಿರೂಪಿಸಲಾಗಿದೆ.

ಶ್ರೀ ಗುರು ಅಲ್ಲಮನು ಮೌನಯ್ಯನಿಗೆ ಶಿವಯೋಗ ಲಿಂಗಾಂಗ ಬೋಧಿಸಿದ ವಿವರಗಳಿಗೇ ಶಂಕರ ಕವಿಯು ೩ನೆಯ ಸಂಧಿಯನ್ನು ಮೀಸಲಾಗಿರಿಸಿದ್ದಾನೆ. ಸುಮಾರು ೬೦ ಸಾಂಗತ್ಯ ಪದ್ಯಗಳಲ್ಲಿ ಪ್ರಭುದೇವರು ನಾನಾ ರೀತಿಯಾಗಿ ವೀರಶೈವ ತತ್ವಗಳಾದ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರ, ಇನ್ನೂರ ಹದಿನಾರು ಸಕೀಲಗಳು, ಇಷ್ಟಲಿಂಗ, ಆಚಾರಲಿಂಗ, ಪ್ರಾಣಲಿಂಗ ಇತ್ಯಾದಿಗಳ ಕುರಿತು ಉಪದೇಶ ನೀಡುತ್ತಾರೆ. ಮಜ್ಜನಗೈದು ಮಡಿಯುಟ್ಟು ಬಂದ ಮೌನಯ್ಯನನ್ನು ಶಿವಯೋಗ ಪೀಠದಲ್ಲಿ ಕುಳ್ಳಿರಿಸಿ ಈ ರೀತಿ ಉಪದೇಶಿಸುತ್ತಾನೆ.

"ಮಗನೆ ನಿನ್ನಯ ಮನಸ್ಸು ಈ ಜಗತ್ತಿನ ಮಾಯೆಯನ್ನು ಕೂಡಿ ತನ್ನನ್ನು ತಾನು ಮರೆತಿದೆ. ನಿಜವನ್ನು ಅರಿತರೆ, ಅರಿತು ನಡೆದರೆ ಮಾಯೆ ತೊರೆದೋಡುವುದು.

"ಮನ ತನ್ನ ನಿಜವನು ಮರೆದ ಕಾರಣಮಾಯೆ
ಮನೆಗಟ್ಟುವುದು ಮನೋಮಧ್ಯ

ಮನದಲ್ಲಿ ಸದ್ಗುರುವಿನ ಕೃಪಾಯುಲಿಂಗ

ವನುಗೊಳಿಸಲು ಮಾಯಿಯಳಿಗು (೩-೫)

ಭಿನ್ನಭಾವಗಳಿಂದ ತನ್ನ ನಿಜವನ್ನು ಮರೆತು ಅನ್ಯಕೆ ಹರಿದಿರುವೆ. ತನ್ನನ್ನು ತಾನು ತಿಳಿಯಲು ಜ್ಞಾನ ವುದಿಸುವುದು. ಮನದ ಮಾಯೆ ಶೂನ್ಯವಾಗುವದು. ಬಹಿರಂಗದಲ್ಲಿ ತೊಳಲುವ ಮನದ ಭ್ರಾಂತಿಯೇ ಮಾಯೆ. ಶಾಂತ ಸದ್ಗುರುವಿನಿಂದ ಅಂತರಂಗದ ನಿಜವನ್ನು ತಿಳಿದವನೇ ನಿರ್ಮಾಯ ಸ್ವರೂಪನು.

ಮನದಲ್ಲಿ ಮಹಲಿಂಗವನ್ನು ಅನುಗೊಳಿಸುವ ಬಗೆಯನ್ನು ನಿನಗೆ ಬಿತ್ತರಿಸುವೆ ಕೇಳುಮಗನೆ ಎಂದು ಹಸ್ತ ಮಸ್ತಕ ಸಂಯೋಗದಿಂದ ಮೋನಯ್ಯನ ಕರದೊಳಗೆ ಇಷ್ಟಲಿಂಗವನ್ನಿರಿಸಿ

"ಕರದಲ್ಲಿ ಸುಸ್ಥಿರ ವರ ಇಷ್ಟಲಿಂಗವು

ನೆರೆಮನದಲ್ಲಿ ಆವರಿಸಿ

ಪರಿಪೂರ್ಣ ಸತ್ಪ್ರಾಣ ಲಿಂಗತಲ್ಲಿಂಗೊಡ

ವೆರದು ಭಾವದಿ ಭಾವಲಿಂಗ (೨-೧೦)

ಲಿಂಗವು ಭಾವದಿ ಬೆರೆತ ಮೇಲೆ ಮಾಯೆಯು ತಾನಾಗಿಯೇ ಓಡಿ ಹೋಗುವುದು. ಭಕ್ತನಾದವನು ಕಾಯದ ಗುಣಗಳನ್ನು ಕಳೆದುಕೊಂಡು ಶಿವನ ಕಳೆಯನ್ನು ಸ್ವಾಯತ ಮಾಡಿಕೊಳ್ಳಬೇಕು. ಆಧಾರ ಚಕ್ರವೆ ಆದಿಭಕ್ತನ ಸ್ಥಲ. ಸ್ವಾದಿಷ್ಠಾನ ಚಕ್ರವೇ ಮಾಹೇಶಸ್ಥಲ. ಮಣಿಪೂರ ಚಕ್ರವೆ ಪ್ರಸಾದಿ ಸ್ಥಲ ಅನಾಹತ ಚಕ್ರವೆ ಪ್ರಾಣಲಿಂಗಿಸ್ಥಲ. ವಿಶುದ್ಧಿ ಚಕ್ರ ಶರಣಸ್ಥಲ. ಅಗ್ನಿ ಚಕ್ರವೇ ಐಕ್ಯ ಸ್ಥಲ ಎಂದು ಮುಂತಾಗಿ ಷಟ್ ಸ್ಥಲಗಳನ್ನು ವಿವರಿಸುತ್ತಾನೆ.

"ಲಿಂಗದಿಂದೊಗೆದಂಥ ಲಿಂಗ ದ್ರವ್ಯವನೆಲ್ಲ

ಲಿಂಗನೆನಹಿಲಿ ಲಿಂಗಕ್ಕಿತ್ತು" (೨-೪೧)

ಲಿಂಗಾಂಗ ಸಾಮರಸ್ಯ ಸಾಧಿಸುವ ಬಗೆಯನ್ನು ಸವಿಸ್ತಾರವಾಗಿ ತಿಳಿಸಿಕೊಡುತ್ತಾನೆ.

ಅಂತರಂಗ ಬಹಿರಂಗಗಳಲ್ಲೆಲ್ಲ ಶಿವನ ಕಳೆ ಹೊಳೆದು ಸರ್ವಾಂಗವನ್ನೂ ಆವರಿಸಿ ಬೆಳಗುವ ಮಹಾಲಿಂಗ ವನ್ನು ನಿನ್ನೊಳು ನೀನು ತಿಳಿದು ನೋಡು ಮಗನೆ ಎಂದು ಗುರುರಾಯ ಅಲ್ಲಮನು ಒಲಿದು ನಿರೂಪಿಸಲು ತನ್ನೊಳಗೆ ದೀಪಿಸುತಿರ್ದ ಸ್ವಯಂಜ್ಯೋತಿ ಬೆಳಗ ಸ್ವಸ್ವರೂಪ(೩-೪೩)ವನ್ನು ಕಾಣಲು ಶಕ್ತನಾಗುತ್ತಾನೆ.

ಮನೋಮಧ್ಯದಲ್ಲಿ ಮಹಾಲಿಂಗವನ್ನು ದರ್ಶಿಸಿ ಚಿದಾನಂದಾಮೃತವನುಂಡು, ಪ್ರಭುರಾಯನನ್ನು ಭಾವಪರವಶನಾಗಿ ಸ್ತುತಿಸುತ್ತಾನೆ. ಗುರುವಿನ ಶ್ರೀಪಾದದಡಿ ಶಿರವಿಟ್ಟು ಏಳದೆ ಇರಲು(೩-೫೮) "ಏಳೆನ್ನ ತತ್ವರೂಪನೆಯಂದು" (೩-೫೯) ಕರವನ್ನು ಶಿರದ ಮೇಲಿಟ್ಟು-

"ಏನಿಲ್ಲದಾಗಳು ನಾನಾರು ನೀನಾರು
ನೀನೆನ್ನನೊಲಿಸಿದ ಬಳಿಕ
ನಾನು ನೀನಲ್ಲಾದೆ ನೀನು ನಾನಲ್ಲವೆ
ಏನನು ಮೌನಿಸಬ್ಯಾಡ" (೩-೬೦)

"ಮೊದಲಿರ್ದೆ ನಾ ನಿನ್ನ ಹೃದಯ ಕಮಲದಲ್ಲಿ
ಪುದುಗಿ ಇನ್ನೆರವಿಲ್ಲದಿರ್ಪೆ
ಸದಾ ಸನ್ನಿಹಿತನಾಗಿ ಇದಕಂಜಬ್ಯಾಡೆಂದು" (೩-೬೧)

ಅಭಯವಿತ್ತು ಮೌನಯ್ಯನ ಹೃದಯ ಪೀಠದೊಳಗೆ-

"ಹಾಲೊಳು ಹಾಲು ತುಪ್ಪದಿ ತುಪ್ಪ ಬೆರದಂತೆ
ಮೇಲೆ ನೀರಿಗೆ ನೀರು ಬೆರದ
ವೊಲು ಕರ್ಪೂರ ಉರಿ ಅರ್ಪಿಸಿದಂದದಿ ಅಲ್ಲಮನು ಬೆರೆಸಿದನು (೩-೬೨)

ಕವಿಯ ದೃಷ್ಟಿಯಲ್ಲಿ-

'ಭಕ್ತನಾದರೆ ಭವಿಪಾಶ ವರ್ಜಿಸಬೇಕು
ಮುಕ್ತಿರೂಪರ ತಿಳಿಯಬೇಕು
ಭಕ್ತಿಯೆ ಮುಕ್ತಿಗೆ ಉಪಯೋಗವೆಂಬಂಥ
ಭಕ್ತಿಲಿ ನಿಜವರಿಯಬೇಕು' (೦೮-೧೫)

'ಭವಿ ಸಂಗವನು ಬಿಡಬೇಕು
ಸತ್ಪುರುಷರ ಸಂಗತೀವಿ ಮಾಡುವನೆ ಸದ್ಭಕ್ತ' (೮-೧೮)

ಎಂಬಂಥ ಮಾತುಗಳಲ್ಲಿ ವೀರಶೈವ ಧರ್ಮದ ತತ್ವ ಆಚರಣೆಗಳನ್ನು ಕಾಣಬಹುದು.

ಸಾಂಸ್ಕೃತಿಕ ಅಂಶಗಳು

ಪ್ರತಿಯೊಂದು ಸಾಹಿತ್ಯ ಕೃತಿಯೂ ತನ್ನ ಕಾಲದ ಸಂಸ್ಕೃತಿಯ ಪಡಿನೆಳಲು ಎಂದೇ ಹೇಳಬಹುದು. ಒಟ್ಟಾರೆ ತತ್‌ಕಾಲದ ಜನ ಜೀವನದ ಸಮಗ್ರ ಸ್ವರೂಪವನ್ನು ಸಂಕ್ಷಿಪ್ತವಾಗಿಯಾದರೂ ಕಟ್ಟಿಕೊಡಲು ಪ್ರತಿಯೊಂದು ಕೃತಿಯೂ ಪ್ರಯತ್ನಿಸುತ್ತಿರುತ್ತದೆ. ಅಂಥಕೃತಿ ಮಾತ್ರ ಬಹುಕಾಲ ಬೆಲೆಬಾಳುವಂಥದ್ದಾಗುತ್ತದೆ. ಶಂಕರ ಕವಿಯು ಪ್ರಸ್ತುತ ಕೃತಿಯಲ್ಲಿ ಸಂದರ್ಭ ದೊರೆತಾಗಲೆಲ್ಲ ತುಂಬ ಸಹಜವಾಗಿ ನಮಗೆ ಆ ಕಾಲದ ಸಂಸ್ಕೃತಿಯ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನಮಾಡಿದ್ದಾನೆ. ಕೆಲವೊಂದನ್ನು ನಾವಿಲ್ಲಿ ಗಮನಿಸಬಹುದು.

ಅಧಿಕರಲ್ಲಿಯೇ ಅತ್ಯಧಿಕ ಜ್ಞಾನಿಯಾದ ಮೌನಯ್ಯ ಮತ್ತು ಆತನ ಪತ್ನಿ ಸುಜ್ಞಾನಿಯರ ದಿನಚರಿಯನ್ನು ವಿಸ್ತಾರವಾಗಿ ತಿಳಿಸುತ್ತಾ ಶಂಕರ ಕವಿಯು ತಿಳಿಸುವ ಆಂಶಗಳು ಮೌನಯ್ಯನ ಕುಲದ, ಸಮಾಜದ ಸಂಸ್ಕೃತಿಯ ಪ್ರತೀಕವಾಗಿವೆ.

"ಪಂಚಾನನದವರೆಂದು ವಂಚನೆ ಮೊದಲಿಲ್ಲ
ಪಂಚಮುಖನ ಶರಣರು
ಅಂಚಿಡಿದಾಚರಿಸಿದಮಳ ಶಿವೈಕ್ಯರ
ಮುಂಚಿನ ಸಂಪ್ರದಾಯಕನು" (೨-೯)

ಮೌನಯ್ಯನು ವಿಶ್ವಕರ್ಮ ಜನಾಂಗಕ್ಕೆ ಸೇರಿದವನಾಗಿದ್ದನು. ಸದಾ ಲಿಂಗವಂತರ ಸಂಗದಲ್ಲಿದ್ದುಕೊಂಡು, ಲಿಂಗಪೂಜೆ ಮಾಡುತ್ತಾ "ಜಂಗಮದಾರ್ಚನೆ ಹಿಂಗದೆ ನಡೆಸುವ" ಮಂಗಳ ಹೃದಯನಾಗಿದ್ದನು. (೨-೭)

'ಚಿನ್ನದ ಕುಸುರಿಗೆಲಸದಲತಿಜಾಣನು
ರನ್ನ ಕುಂದಣದ ಕುಸಲಿಗನು
ಸಾನ್ನೆವ ಮಾಡುವವುತ್ಪನ್ನತಿ ಕೆತ್ತಿಗೆ
ಉನ್ನತ ಕೆಲಸ ಕೋವಿದನು' (೨-೧೧)

ಅಕ್ಕಸಾಲಿಕೆ, ಶಿಲ್ಪಕಲೆ, ಕುಸುರಿ ಕಲೆಗಾರಿಕೆಗಳು ವಿಶ್ವಕರ್ಮ ಸಮುದಾಯದವರ ವೃತ್ತಿ ಕಾಯಕಗಳಾಗಿದ್ದು ಮೌನಯ್ಯನು ಎಲ್ಲದರಲ್ಲೂ ಕುಶಲಿಗನಾಗಿದ್ದ ವಿವರಗಳು ಈ ಕೃತಿಯಲ್ಲಿ ಕಾಣಸಿಗುತ್ತವೆ. ವಿಶೇಷವಾಗಿ ತಾಳಿ, ಓಲೆ, ಹಚ್ಚೆನಾಲಿಗೆ, ಕಂಕಣ, ಚಿಂತಾಕು, ಸರಿಗೆ, ಕಟ್ಟಾಣಿ ಮೂಗುತಿ, ತೋಳಬಂದಿ, ಒಡ್ಯಾಣ, ಅರಳೆಲೆ, ಹಾರಾವಳಿ, ಹೂ ಮುಂತಾದ ಆಭರಣಗಳನ್ನು ಸಿದ್ಧಪಡಿಸುತ್ತ ದಂಪತಿಗಳೀರ್ವರು ಲೌಕಿಕ ಕಾಯಕದಲ್ಲಿ ಪಾರಮಾರ್ಥಿಕ ಸುಖ ಪಡೆಯುತ್ತಿದ್ದರು.

ಮೌನಯ್ಯನು ವಿರತಿ ಕೈಗೊಂಡು ದೇಶ ಪರ್ಯಟನೆ ಮಾಡುತ್ತಾ ಲಕ್ಷ್ಮೇಶ್ವರಕ್ಕೆ ಬರುತ್ತಾನೆ. ಆ ಪುರದ ವರ್ಣನೆ ಹೀಗಿದೆ.

"ಅಲ್ಲಿಯ ಜನರೆಲ್ಲ ಒಳ್ಳೆ ಸಂಪನ್ನರು
ಬಲ್ಲಿದ ಧನಿಕ ಸಜ್ಜನರು
ಎಲ್ಲ ಕಾಲದಿ ದಯ ಧರ್ಮ ಸದ್ಗುಣಿಗಳು
ಸಲ್ಲೀಲೆ ಸುಖದಿಂದಲಿಹರು" (೭-೧೮)

ಸಂಸ್ಕೃತಿಯ ಔನ್ನತ್ಯಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕಿಲ್ಲವೆನಿಸುತ್ತದೆ.

ಚಾರಿತ್ರಿಕ ವಿವೇಚನೆ

ಶರಣ ಮೋನಪ್ಪಯ್ಯನ ಜೀವನ, ವ್ಯಕ್ತಿತ್ವ ಸಾಧನೆ-ಸಿದ್ಧಿಗಳನ್ನು ಕುರಿತು ರಚನೆಗೊಂಡ ಶರಣ ಮೋನಪ್ಪಯ್ಯ ಚರಿತೆಯು ಚರಿತ್ರೆಯ ಪುರಾಣೀಕೃತ ಕೃತಿಯಾಗಿದ್ದು ಇದರ ಒಡಲಿನಲ್ಲಿ ಕೆಲವು ಚಾರಿತ್ರಿಕ ಸಂಗತಿಗಳು ತುಂಬಿಕೊಂಡಿವೆ.[೬]

ಆದ್ದರಿಂದ ಈ ಕೃತಿಯು ತುಂಬ ಮಹತ್ವದ ಸ್ಥಾನವನ್ನು ಪಡೆಯುತ್ತದೆ. "ಮೋನಪ್ಪಯ್ಯನದು ಚರ ವ್ಯಕ್ತಿತ್ವ. ಅಲ್ಲಮಪ್ರಭು, ಸರ್ವಜ್ಞರಂತೆ ಈತನೂ ಲೋಕಸಂಚಾರಿ. ಸಂಚಾರದ ಉದ್ದೇಶ ಪುಣ್ಯಕ್ಷೇತ್ರಗಳ ದರ್ಶನ, ದರ್ಶನದಿಂದ ಆತ್ಮ ಕಲ್ಯಾಣ ಮತ್ತು ಲೋಕ ಕಲ್ಯಾಣ, ಮೋನಪ್ಪಯ್ಯನು ಸಂದರ್ಶಿಸಿದ ಸ್ಥಳಗಳು ಪೌರಾಣಿಕ ಮತ್ತು ಐತಿಹಾಸಿಕ ಪ್ರಸಿದ್ಧ ಕ್ಷೇತ್ರಗಳಾಗಿವೆ. ಆತನು ಅಲ್ಲಿ ಕಂಡ ವ್ಯಕ್ತಿಗಳು ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕವಾಗಿ ಪ್ರತಿಷ್ಠಿತರಾದವರಾಗಿದ್ದಾರೆ. ಸಂಚಾರದ ವೇಳೆಯಲ್ಲಿ ವೀರ ವಿರಕ್ತನಾಗಿ, ಪೀರಫಕೀರ ನಾಗಿ ಕಂಗೊಳಿಸಿ, ಅಲ್ಲಲ್ಲಿಯ ಘಟನೆಗಳಿಗೆ ಸ್ಪಂದಿಸಿ ಮಾನವೀಯತೆಯನ್ನು ಮೆರೆದಿದ್ದಾನೆಂಬುದು ಅವನ ಕುರಿತಾದ ಕಾವ್ಯಗಳಿಂದ ತಿಳಿದು ಬರುತ್ತದೆ.[೭]

ಶಂಕರ ಕವಿಯು ಮೋನಪ್ಪಯ್ಯನ ಚರಿತ್ರೆಯನ್ನು ಅವನ ದಾಂಪತ್ಯ ಜೀವನದ ಘಟ್ಟದಿಂದ ಪ್ರಾರಂಭಿಸು ತ್ತಾನೆ. ಗೋನಾಳದಿಂದ ದಕ್ಷಿಣಾಭಿಮುಖವಾಗಿ ದೇಶ ಪರ್ಯಟನೆ ಹೊರಟು ಕೃಷ್ಣಾ ನದಿಯನ್ನು ದಾಟಿ, ದೇವದುರ್ಗ, ಮೇಧಿರಾಯನಕೋಟೆ, ತಾವರಗೇರಿ, ಕನಕಗಿರಿ, ಲಿಂಗನಬಂಡಿ, ವರವಿ, ಲಕ್ಷ್ಮೇಶ್ವರ ಮಾರ್ಗ ವಾಗಿ ತಿಂಥಿಣಿಗೆ ಆಗಮಿಸಿ ಐಕ್ಯನಾಗುತ್ತಾನೆ. ಈ ಕಾವ್ಯದಲ್ಲಿ ತುಂಬಿ ಹರಿಯುತ್ತಿದ್ದ ಕೃಷ್ಣಾನದಿಯನ್ನು ಪ್ರಣವ ಪಂಚಾಕ್ಷರ ಜಪಿಸುತ್ತ ಶ್ರೀ ಗುರುವಿತ್ತ ಪರುಷವನ್ನು ಗಂಗಿಯೊಳದ್ದಿ ಮೇಲೆ ಕಾಟಿಯ ಹಾಸಿ ಬೇಗ ಕುಳಿತು ಜನರನ್ನೆಲ್ಲರನ್ನು ದಾಟಿಸಿ ಮೊದಲು ಬರುವುದು ದೇವದುರ್ಗಕ್ಕೆ ಎಂದು ಕವಿ ತಿಳಿಸುತ್ತಾನೆ.

> "ಭಾರ್ಗವವತಾರ ಮೌನಯ್ಯ
> ದಿರ್ಗಿಯ ದಾಟುತ ಮಾರ್ಗವಿಡಿದು ದೇವ
> ದುರ್ಗಕ್ಕೆ ಬಂದ ಲೀಲೆಯಲಿ" (೫-೪೭)

ವಿಭೂತಿ, ರುದ್ರಾಕ್ಷಿ, ಕಾವಿ, ಮುಂಡಾಸ, ಕಂಬಳಿ, ಕಂಥೆ ಕೈಯಲ್ಲಿ ಹಿಡಿದ ಕೊಡಲಿ ಇಂಥ ವಿಲಕ್ಷಣ ವೇಷದ ಮೌನಯ್ಯನನ್ನು ಕಂಡು ದೇವದುರ್ಗದ ಜನ ನಿಬ್ಬೆರಗಾಗುತ್ತಾರೆ. ಆಗ ಬರಗಾಲದ ಬವಣೆಯಿಂದ ಜನರೆಲ್ಲ ಬೇಸತ್ತು ಹೋಗಿದ್ದರು.

> 'ಕಂತು ಮರ್ದನನೇ ನೀನಹುದು
> ಎಂತು ಮಾಡುವೆನೆಂದು ಚಿಂತಿಸುತವೆ ಮಳೆ
> ಯಂ ತರಿಸೆಮ್ಮ ರಕ್ಷಿಸುವುದು" (೫-೫೩)

ಎಂದು ಶೆಟ್ಟಿಗಳು, ಗುರಿಕಾರರಾದಿಯಾಗಿ ಬಹುಜನರು ನೆರೆದು ನಮಿಸಿ "ಕರುಣಸಾಗರ ಮಳೆ ಕರುಣಿಸು ಬೆಳೆಯಿಲ್ಲ ಬರಳುತಿವೆಂದು ಬಿನ್ನೈಸಿ"(೫-೫೪)ಕೊಂಡರು. ಅಲ್ಲಮನನ್ನು ಧ್ಯಾನಿಸುತ್ತ ಹೆಮ್ಮೆಳೆಯನ್ನು ತರಿಸುತ್ತಾನೆ. ಪ್ರಳಯ ಸದೃಶ ಮಳೆಗೆ ಹಳ್ಳಕೊಳ್ಳ ಕೆರೆಗಳೆಲ್ಲ ತುಂಬಿ ಮನೆಗಳು ನಾಶವಾಗಹತ್ತಿದವು. ಆಗ ಪುರಜನರು-

"ಗುರುರಾಯ ನಿಮ್ಮೊಳು ಸರಸ ನಮಗೆಯಿಲ್ಲ
ಧರೆ ಮೂರು ಲೋಕ ಸ್ಥಿತಿಗತಿಯ" (೫-೬೦)

ಆರೈದು ನಡೆಸುವ ಕಾರಣಕರ್ತರಿಗೆ
ದೂರಿದೆವೆಂದು ವಂದಿಸುತ
ಧಾರುಣಿರುದ್ರ ಅಪಾರ ಮಹಿಮನೆಂದು" (೫-೬೧) ಸ್ತುತಿಸುತ್ತಾರೆ.

"ಭೌಗೋಳಿಕವಾಗಿ ರಾಯಚೂರು ಜಿಲ್ಲೆಯ ತಾಲ್ಲೂಕು ಸ್ಥಳವಾದ ದೇವದುರ್ಗವು ಬೆಟ್ಟಗಳ ಮಧ್ಯದಲ್ಲಿದೆ. ಇಲ್ಲಿಯ ಕೋಟೆಯಿಂದಾಗಿ ಇದಕ್ಕೆ 'ಕಿಲ್ಲೆದೇವದುರ್ಗ' ಎಂಬ ಹೆಸರೂ ಇದೆ. ಇದು ಬೇಡದೊರೆಗಳ ಪ್ರಮುಖ ಕೋಟೆಯಾಗಿದ್ದಿತು. ವಿಜಾಪುರದ ಎರಡನೆಯ ಅಲಿ ಆದಿಲ್‌ಷಹನ ಮರಣದ ನಂತರ ಈ ಕಿಲ್ಲೆ ಮತ್ತು ಅದರ ಸುತ್ತಣ ಪ್ರದೇಶಗಳನ್ನು ಶತ್ರುಗಳಿಂದ ರಕ್ಷಿಸಲು ಪಾಮನಾಯಕನಿಗೆ ಕೊಡಲ್ಪಟ್ಟವು. ಆದ್ದರಿಂದ ಸುರಪುರ ಮತ್ತು ದೇವದುರ್ಗದವರಿಗೂ ನಿಕಟ ಸಂಬಂಧವಿದ್ದಾಗ್ಯೂ ಮೇಲಿಂದ ಮೇಲೆ ಕಲಹಗಳು ನಡೆಯುತ್ತಿದ್ದವು. ಪಿಡ್ಡನಾಯಕನು ಔರಂಗಜೇಬನೊಡನೆ ವಾಗಣಗೇರಿಯಲ್ಲಿರುವಾಗ ದೇವದುರ್ಗದ ವಾಸುದೇವ ನಾಯಕನು ಔರಂಗಜೇಬನ ಪಕ್ಕಕ್ಕೆ ಸೇರಿ ಅವನಿಗೆ ಸಹಾಯಮಾಡಿದನು.[೮] ಅದರ ಫಲವಾಗಿ ರಾಯಚೂರು ಪ್ರಾಂತದ ಜಮೀನುದಾರಿಯು ದೇವದುರ್ಗದ ದೊರೆಗೆ ಲಭಿಸುತ್ತದೆ. ಹೀಗಾಗಿ ಸುರಪುರ ಮತ್ತು ದೇವದುರ್ಗದ ದೊರೆಗಳ ನಡುವಿನ ಕಲಹ ಶಾಂತವಾದ ಅಂಶ ಚರಿತ್ರೆಯಿಂದ ತಿಳಿದುಬರುತ್ತದೆ.[೯]

ದೇವದುರ್ಗದ ಜನರಿಂದ ಬೀಳ್ಕೊಂಡು, ಮೋನಪ್ಪಯ್ಯನು ಪಶ್ಚಿಮ ಮಾರ್ಗವಿಡಿದು 'ಮೇಧಿರಾಯನ ಕೋಟೆ'ಗೆ ಆಗಮಿಸುತ್ತಾನೆ. 'ಮೇಧಿನಿಗಧಿಕವಾದ ಮೇಧಿರಾಯನ ಕೋಟೆ'(೫-೭೮)ಗೆ ಆಗಮಿಸಿ ಭಕ್ತರಿಗೆ ವರಗಳನ್ನು ದಯಪಾಲಿಸುತ್ತ ಸಾಧುಸಜ್ಜನರ ವಾಸದಲ್ಲಿದ್ದನು. ಹೀಗಿರಲೊಂದು ದಿನ ಶ್ರೀಶೈಲ ಮಲ್ಲಿಕಾರ್ಜುನ ಪರಿಷೆಯವರು ಊರಿಗೆ ಬಂದಿರುತ್ತಾರೆ. ಅಲ್ಲಿ ಲಿಂಗಪವಾಡ ಮಾಡಿ ಅವರನ್ನು ಬೆರಗುಗೊಳಿಸುತ್ತಾನೆ. ಮಾದರಾಯನ ಕೋಟೆ ಒಂದು ಪರಗಣೆಯಾಗಿದ್ದಿತು. ಇದಕ್ಕೆ ಕೋನವಾರವೆಂದೂ ಹೆಸರುಂಟು. ಈ ಗ್ರಾಮ ಗುಡಗುಂಟಿ ಸಂಸ್ಥಾನಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.[೧೦]

ಮೇಧಿರಾಯನ ಕೋಟೆಯ ಭಕ್ತರಿಂದ ಬೀಳ್ಕೊಂಡು ತಾವರಗೇರಿ ಗಡಿದುರ್ಗ ನೋಡುತ ಭಕ್ತರಿಗೆ ಇಷ್ಟಾರ್ಥಗಳನ್ನು ಸಲ್ಲಿಸುತ್ತಾ ಕನಕಗಿರಿಯಂಬ ಘನದುರ್ಗಕ್ಕೆ ಬರುತ್ತಾನೆ. (ಸಂ.೯ ಮತ್ತು ೫)

ಅಲ್ಲಿ ಕನಕಸಿದ್ಧೇಶನ ದೇವಾಲಯಕ್ಕೆ ಆಗಮಿಸುತ್ತಾನೆ

ಕನಕ ಸಿದ್ಧೇಶನ ಕೂಡ ಮೌನಯ್ಯನು
ವಿನಯದಿಂ ಮಾತಾಡುವಾಗ ಸೂರ್ಯಾಸ್ತವಾಗುತ್ತದೆ(೯-೨೩).

ಈ ವಿಷಯವನ್ನು ತಿಳಿದು ದೊರೆಸಾನಿ ಕಾಟಮ್ಮ ಸಕಲ ವೈಭವದೊಂದಿಗೆ ಬಂದು ಮೋನಪ್ಪಯ್ಯನನ್ನು ಭಕ್ತಿಯಿಂದ ಪೂಜಿಸಿ ಗೌರವಿಸುತ್ತಾಳೆ. ಇದರಿಂದ ಪ್ರಸನ್ನನಾಗಿ ಮೌನಯ್ಯನು-

"ಹಿರಿಯ ವುಡುಚಯ್ಯಗೆ ಭರ್ಚಿ ಆಯುಧವಿತ್ತು
ಅರಿಗಳ ಜೈಸೆಂದು ...... (೬-೫೭)

ಹರಸುತ್ತಾನೆ.

ಇಲ್ಲಿ ಉಲ್ಲೇಖಗೊಂಡ ಕನಕಗಿರಿಯು ರಾಯಚೂರು ಜಿಲ್ಲೆ ಗಂಗಾವತಿ ತಾಲೂಕಿನಲ್ಲಿದೆ. ಇದಕ್ಕೆ ಕನಕಗಿರಿ ಕನಕಾಚಲವೆಂದು ಕರೆಯುತ್ತಾರೆ. ಹದಿನೇಳನೆಯ ಶತಮಾನದಲ್ಲಿ ಈ ಊರು ಒಂದು ಪಾಳೆಪಟ್ಟಿನ ಕೇಂದ್ರ ವಾಗಿದ್ದು ಉಡಚನಾಯಕನು ಈ ಊರನ್ನು ಆಳುತ್ತಿದ್ದನೆಂದು ತಿಳಿಯುತ್ತದೆ. ಈತನು ಅತ್ಯಂತ ಪ್ರಭಾವಶಾಲಿ ಯಾಗಿದ್ದನೆಂದು ಸುರಪುರ ಸಂಸ್ಥಾನದ ದೊರೆಯಾದ ಗಡ್ಡಿ ಪಿಡ್ಡನಾಯಕನ ಮಗ ಪಾಮನಾಯಕನ (ಕ್ರಿ.ಶ. ೧೯೭೨) ಪತ್ರದಿಂದ ತಿಳಿದುಬರುತ್ತದೆ.[೧೧]

ಅಲ್ಲಿಂದ ಪರಮ ವಿರಕ್ತ ಮೌನಯ್ಯನು "ಲಿಂಗನಭಂಡಿಯೆಂದೆಂಬ ಭಕ್ತಿಯ ಬೀಡಿನ ಸ್ಥಲಕ್ಕೆ" (೯-೯೨) ಆಗಮಿಸುತ್ತಾನೆ. ಲಿಂಗನಭಂಡಿಯ ಸರ್ವ ಭಕ್ತ ಜನರಿಗೆ ಗುರುಪ್ರಭು ದೇವನ ಮಹಿಮೆಗಳನ್ನು ಹೇಳುತ್ತ, ಶರಣರ ಸ್ವರೂಪವನ್ನು ಬೋಧಿಸುತ್ತಿರುತ್ತಾನೆ. ಆ ಸಂದರ್ಭದಲ್ಲಿ ಕೆಲವು ಕುಟಿಲವ್ಯಕ್ತಿಗಳು.

....ಇಂದು ನೀ ನೆಲ್ಲಿನ ಬೀಜ
ತಂದು ಭಂಡಿಯ ಮೇಲೆ ಛಂದದಿ ಬೆಳೆದರೆ
ಸಂದೇಹ ಬಿಡುವೆ ವೆಂದೆನಲು (೯-೮೧)

ಮೌನಯ್ಯನು-

"ಒಳ್ಳಿತಾಯಿತು ನೀನೆ ಬೀಜವ ತಂದು
ಕಲ್ಲ ಭಂಡಿಯ ಮೇಲೆಯವನು
ಚೆಲ್ಲಿ ನೀನರಿಯನೆ....

ನೆಲಕ್ಕಿಂತ ಸತ್ವಯುತವಾಗಿ ಬೆಳೆದು ನಿಲ್ಲಲು 'ಸಾಕ್ಷಾತ್ ಇಳೆಯ ಪ್ರಭು ನೀನೆಂದು' ಮೌನಯ್ಯನಿಗೆ ನಮಿಸುತ್ತಾರೆ.

ಹಾಗೆಯೇ 'ಬಂಡಿಯ ಮೇಲೆ ಗೂಟನೆಡುವ' ಕಲ್ಲಿನಲ್ಲಿ ನೆಲ್ಲು ಬೆಳೆಯುವ ಸವಾಲುಗಳನ್ನು ಸ್ವೀಕರಿಸಿ ಸಾಧಿಸಿ ತೋರಿಸುತ್ತ ಲಿಂಗನ ಭಂಡಿಯಲ್ಲಿ ಲಿಂಗ ಪ್ರತಿಷ್ಠಾಪಿಸಿ ಆ ನೆಲವನ್ನು ಪುಣ್ಯಕ್ಷೇತ್ರವಾಗಿಸುತ್ತಾನೆ(೯-೯೦).

ಈ ಲಿಂಗನಬಂಡಿಯು ರಾಯಚೂರು ಜಿಲ್ಲೆಯ ಯಲಬುರ್ಗ ತಾಲೂಕಿನ ಒಂದು ಗ್ರಾಮ. ಇದು ಮೋನಪ್ಪಯ್ಯನ ಜಾಗೃತಿ ಸ್ಥಳವೆಂದು ಹೆಸರಾಗಿದೆ. ಮೋನಪ್ಪಯ್ಯನ ಹೆಸರಿನಲ್ಲಿರುವ ಅನೇಕ ಕುರುಹುಗಳು ಈ ಗುಡ್ಡದ ಮೇಲ್ಭಾಗದಲ್ಲಿ ಇಂದಿಗೂ ಕಾಣಸಿಗುತ್ತದೆ.[೨]

ಇಲ್ಲಿಂದ ಲಕ್ಷ್ಮೇಶ್ವರಕ್ಕೆ ಬರುವ ದಾರಿಯಲ್ಲಿ 'ವರವಿ' ಗ್ರಾಮಕ್ಕೆ ಬಂದು ಅಲ್ಲಿ ಅಂಬಲಿಗುಂಡದ ಪವಾಡ ಮೆರೆದು, ತಾನು ಎಡವಿದ ಕಲ್ಲಿನಲ್ಲಿ ಲಿಂಗದ ಕುರುಹು ತೋರಿ ಅದನ್ನು ಪೂಜಿಸಬೇಕೆಂದು ತಿಳಿಸಿ ಲಕ್ಷ್ಮೇಶ್ವರವೆಂಬ ಸುಸ್ಥಳದತ್ತ ಬರುತ್ತಾನೆ.

ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲೂಕಿನ 'ವರವಿಗ್ರಾಮ'ವು ಮೋನಪ್ಪಯ್ಯನ ಜಾಗ್ರತ ಸ್ಥಳಗಳಲ್ಲಿ ಒಂದಾಗಿದ್ದು, ಹಿಂದೂ ಮುಸ್ಲಿಮ್ ವಾಸ್ತುಶಿಲ್ಪದ ಮೋನಪ್ಪಯ್ಯನ ವಿಶಾಲ ಮಂದಿರವಿರುವುದು ತಿಳಿದು ಬರುತ್ತದೆ. ವಿಜಾಪುರದ ಬಾದಶಹನೇ ಇದರ ನಿರ್ಮಾತೃವೆಂದು ಜನರು ಹೇಳುತ್ತಾರೆ.[೩]

ಲಕ್ಷ್ಮೇಶ್ವರದಲ್ಲಿ ಅಂಕುಶಖಾನನ ಆಡಳಿತವಿರುತ್ತದೆ. ಅಲ್ಲಿ ಕುಡಿಯುವ ನೀರಿನ ತೊಂದರೆ ವಿಪರೀತ ವಾಗಿತ್ತು. ಬಾವಿ ತೋಡಿಸುವ ಕೆಲಸ ನಡೆದಿರುತ್ತದೆ. ಬಾವಿಯಲ್ಲಿ ನೀರಿನ ಸೆಲೆ ಚಿಮ್ಮುವುದೇ ಇಲ್ಲ. ಸ್ವತಃ ಮೋನಪಯ್ಯನೇ ಗುದ್ದಲಿ-ಸಲಕಿ ಹಿಡಿದು ಬಾವಿ ತೋಡಲು ನೀರು ಹೊರ ಚೆಲ್ಲುತ್ತದೆ.

"ಪಾತಾಳ ಗಂಗಿಯ ಕರಿಯಲೊಯ್ಯನೆ ಬಂದು
ತಾ ತುಂಬಿ ಭಾವಿಯ ಸೂಸಿ
ಭೂತಾಳ ಕೆಡುವದೆಂದೆನುತ ಶ್ರೀ ಗಂಗಿಯು
ಆತುನಿಂದಳು ಪೂರ್ಣಮಾಗಿ" (೭-೨೬)

ಹೀಗೆ ನೀರ ಪವಾಡ ಮಾಡಿದ ಮೋನಪ್ಪಯ್ಯನಲ್ಲಿಗೆ

"ಬಂದು ಅಂಕುಶಖಾನ ಅಂದು ಭಾವಿಯ ನೋಡಿ
ನಿಂದು ಸಂಪೂರ್ಣ ತುಂಬಿರಲು
ಬಂದು ಆನಂದದಿ ಸಂದು ಮೌನಯ್ಯಗೆ
ದ್ವಂದ್ವ ಕರಕಮಲವ ಮುಗಿದು" (೭-೪೧)

ಭಕ್ತಿಯಿಂದ ವಂದಿಸುತ್ತಾನೆ. ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಮಸೀದೆಯೊಂದಕ್ಕೆ ಕರೆದೊಯ್ದು ಗೌರವಿಸು ತ್ತಾನೆ.

ತೆರಳಿ ಸರ್ವರು ನೋಡುತಿರಲು ವೈರಾಗ್ಯದಿ
ತಿರುಗಿ ಬಂದೊಂದು 'ಮಸೂತಿ'ಯ
ನೆರೆಕಂಡ ಪರಿಪರಿ ಕೆಲಸ ಚಿತ್ರಂಗಳ
ವಿರಚಿಸಿ ಅತಿರಮ್ಯವೆತ್ತು (೭-೫೫)

ಕಲ್ಲಿನ ಜಂಗುಗಳ ಕಲ್ಲಿನ ಸರಪಳಿ
ಅಲ್ಲಿ ಅನೇಕ ಕುಶಲದಿ
ಚೆಲ್ವಾಗಿ ತೋರಲು ಅಲ್ಲಿಗೆ ನಡೆತಂದು
ಸಲ್ಲೀಲೆಯಿಂದ ಮಂಡಿಸಿದ (೭-೫೬)

ಇದು ಅಂಕುಶಖಾನನು ಕಟ್ಟಿಸಿದ 'ಜುಮ್ಮಾ ಮಸೀದೆ' ಎಂದು ತಿಳಿದು ಬರುತ್ತದೆ. ಲಕ್ಷ್ಮೇಶ್ವರದ ಬಾಜಾರ ರಸ್ತೆಯಲ್ಲಿರುವ 'ಜುಮ್ಮಾ ಮಸೀದೆಯನ್ನು ಎರಡನೆಯ ಇಬ್ರಾಹಿಂ ಅಲಿ ಆದಿಲ್‌ಶಾಹಿಯ ಅಧಿಕಾರಿ ಅಂಕುಶಖಾನನು ಕ್ರಿ.ಶ. ೧೬೧೨ರಲ್ಲಿ (ಹಿಜರಿಶಕೆ ೧೬೩೬) ಕಟ್ಟಿಸಿದ್ದಾನೆಂದು ಜುಮ್ಮಾ ಮಸೀದೆಯ ಎರಡೂ ಮೂಲಿ ಕಂಬಗಳ ಕೆಳಭಾಗದಲ್ಲಿರುವ ಪರ್ಷಿಯನ್ ಹಾಗೂ ಅರಬ್ಬಿ ಭಾಷೆಯ ಶಾಸನಗಳು ತಿಳಿಸುತ್ತವೆ.[೧೪]

ಅನೇಕ ಮಹಿಮೆಗಳನ್ನು ತೋರುತ್ತಿದ್ದ ಮೌನಯ್ಯನನ್ನು ಪ್ರಭುದೇವನು-

"ಇಂತಿಷ್ಟು ಸಾಕು ನರರಂತೆಯಾಗಲಿಬೇಡ
ತಿಂಥಿಣಿ ಸ್ಥಳದಿ ನಿನಗಾಗಿ
ಮುಂತೆ ಮಾಡಿದ ಬಯಲ ಸಮಾಧಿ ಬಾರೆನೆ" (೮-೧೯೮)

ಎಂದು ಕರೆಯುತ್ತಾನೆ. ಶ್ರೀ ಗುರುವಿನಾಣತಿಯಂತೆ ಹೊರಡಲಣಿಯಾಗುತ್ತಾನೆ. ಮಾರ್ಗ ಮಧ್ಯದಲ್ಲಿ 'ತೊಡಕಿ ಕ್ಷೇತ್ರ'ದಲ್ಲಿ ಬರಗಾಲ ನಿವಾರಿಸಲು ಮಳೆ ಬರಿಸುವ ಪವಾಡ ಮೆರೆಯುತ್ತಾನೆ. ಆ ಪುರಜನರಿಂದ ಪೂಜೆ ಕೈಕೊಂಡು ಕೃಷ್ಣ ನದಿಯ ಉತ್ತರಕ್ಕಿರುವ 'ತಿಂಥಣಿ ಕ್ಷೇತ್ರ'ದ ಶಿವಾಲಯಕ್ಕೆ ಬಂದು ತನ್ನ ಪ್ರಭುವಿನೊಂದಿಗೆ ಆತ್ಮಾನುಸಂಧಾನ ನಡೆಸುತ್ತಾನೆ. ಆ ಊರ ದೊರೆ 'ಲಿಂಗಪ್ಪ ನಾಯಕ'ನನ್ನು ಕರೆಸಿ ತಿಂಥಣಿಯ ಸಮೀಪದ ಮೊರಡಿಯಲ್ಲಿ ತನ್ನ ಸಮಾಧಿಯ ಸ್ಥಳದ ನಿರ್ದೇಶನ ಮಾಡುತ್ತಾನೆ.

"ಹರಕಾರಿ ಮೃಗರಾಜ ಪರಬಲಾಂತಕ ಪ್ರಜಾ
ಪರಧರ್ಮ ಪ್ರತಿಪಾಲನಾದ
ದೊರೆ ಲಿಂಗಣ ನಾಯ್ಕ ವರಮಂತ್ರಿಗಳು ಸಹ
ವರಲೂತ ಲಿಂಗದಾಲಯಕೆ" (೧೧-೩)

ಬಂದು ಕಂಡನು ಸಚ್ಚಿದಾನಂದ ರೂಪನ
.... (೧೧-೪)

ಪ್ರಭುದೇವನ ಆಜ್ಞೆಯಂತೆ, ಮೌನಯ್ಯನ ಅಭಿಲಾಷೆಯಂತೆ ಲಿಂಗಪ್ಪ ಸಾಹೇಬನು ಮೊರಡಿಯ ಸಮೀಪ ಸಮಾಧಿಯನ್ನು ಸಿದ್ಧಗೊಳಿಸುತ್ತಾನೆ. ತಾನು ಸಮಾಧಿ ಪ್ರವೇಶ ಮಾಡುವ ಮುನ್ನ ತನಗೆ ಶ್ರೀರಕ್ಷೆಯಾಗಿ ಅಲ್ಲಮನು ನೀಡಿದ್ದ ಕೊಡಲಿಯನ್ನು ಲಿಂಗಪ್ಪ ಸಾಹೇಬನಿಗೆ ನೀಡಿ ಆಶೀರ್ವದಿಸುತ್ತಾನೆ(೧೧-೮೦).

ಕಲುಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಕೃಷ್ಣಾತೀರದ ತಿಂಥಿಣಿಯಲ್ಲಿ ಆತನ ಸಮಾಧಿ ಸ್ಥಳದಲ್ಲೇ ಭವ್ಯವಾದ ಮಂದಿರ ನಿರ್ಮಾಣವಾಗಿದ್ದು, ಜನರು ಮೋನಪ್ಪಯ್ಯನ ಮಂದಿರವೆಂದೂ ದರ್ಗಾವೆಂದೂ ಕರೆಯುತ್ತಾರೆ. ಮೋನಪ್ಪಯ್ಯನಿಂದಾಗಿ ತಿಂಥಿಣಿ ಕ್ಷೇತ್ರ ದಕ್ಷಿಣ ಕಾಶಿಯೆಂದು ಹೆಸರಾಗಿದ್ದು, ಹಿಂದೂ-ಮುಸ್ಲಿಂ ಭಾವೈಕ್ಯದ, ಧರ್ಮ ಸಮನ್ವಯದ ಸಂದೇಶವನ್ನು ಸಾರುವ ಜಾಗ್ರತ ಸ್ಥಳವಾಗಿದೆ. ಹೀಗೆ ಹಲವು ಚಾರಿತ್ರಿಕ ಸಂಗತಿಗಳನ್ನು ಈ ಕಾವ್ಯವು ಸ್ಥೂಲವಾಗಿ ನಿರೂಪಿಸುತ್ತದೆ.

ಸಾಹಿತ್ಯಿಕ ವಿವೇಚನೆ

೧. **ವರ್ಣನೆಗಳು :** ಕಾವ್ಯದಲ್ಲಿ ವರ್ಣನೆಗೆ ಉನ್ನತವಾದ ಸ್ಥಾನವಿದೆ. ವಸ್ತುಗಳಲ್ಲಿ ಹುದುಗಿರುವ ಸೌಂದರ್ಯ ಸಾರವನ್ನು ಎತ್ತಿ ತೋರಿಸುವ ಕವಿಯ ಸೂಕ್ಷ್ಮ ದೃಷ್ಟಿಯು ವರ್ಣನೆಯಲ್ಲಿ ಗೋಚರವಾಗುತ್ತದೆ. ಕಾವ್ಯದ ಜೀವವಾದ ರಸಕ್ಕೆ ವರ್ಣನೆಗಳು ಪೋಷಕವಾಗಿರಬೇಕು. ಆಗ ಮಾತ್ರ ಕಾವ್ಯ ಪರಿಣಾಮಕಾರಿಯಾಗಬಲ್ಲದು. ಶಂಕರ ಕವಿಯ 'ಶರಣ ಮೋನಪ್ಪಯ್ಯ ಚರಿತೆ'ಯು ವರ್ಣಕ ಕಾವ್ಯ 'ವಸ್ತುಕ' ಕಾವ್ಯಗಳೆನಿಸಿದ ಚಂಪೂ ಕಾವ್ಯಗಳಲ್ಲಿ ಕಥಾವಸ್ತುವಿಗೆ ಪ್ರಾಧಾನ್ಯತೆಯಿದ್ದರೆ, ವರ್ಣಕ ಕಾವ್ಯಗಳಾದ ರಗಳೆ, ಷಟ್ಪದಿ ಸಾಂಗತ್ಯಗಳಲ್ಲಿ ರಚಿತವಾದ ಕಾವ್ಯಗಳಲ್ಲಿ ವರ್ಣನೆಗಳೇ ಪ್ರಧಾನಪಟ್ಟ ಪಡೆಯುತ್ತವೆ. ಅಂತೆಯೇ ಈ ಕಾವ್ಯದಲ್ಲಿಯೂ ಹೇರಳವಾದ ವರ್ಣನೆಗಳು ಕಾಣಸಿಗುತ್ತವೆ. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಗಮನಿಸಬಹುದು. ಶಂಕರ ಕವಿಯು ಸಾಂಪ್ರದಾಯಿಕ ವರ್ಣನೆಗಳ ಹಾದಿಯಲ್ಲಿಯೇ ನಡೆದು ಸಮುದ್ರ, ನಗರ, ವನ, ಕೋಟೆ ಇತ್ಯಾದಿಗಳ ವರ್ಣನೆ ಮಾಡುತ್ತಾನೆ. ಕನಕಾದ್ರಿಯು-

"ಭೂಕಾಂತೆ ತಳಿದ ಮೇಖಲಿಯಾ
ಆಕಾರದಂತೆ ರತ್ನಾಕರ ಪರಿವೇಷ್ಟಿ
ಸಿ................................ (೧-೩೭)

ರಾರಾಜಿಸುತ್ತಿದೆ. ಅಂಗ, ವಂಗ, ತೆಲುಂಗಾದಿ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿಯೇ ಅಧಿಕ 'ತುರುಕಾಣ್ಯ' (೧-೪೦).

"ಗಿರಿಗಳು ಧೊರಿಗಳು ತುರುಗಳು ಕುರಿವಾಜಿ
ಕರುಗಳು ವಜ್ರದ ಸಂದಣಿಯ
ಪರಿಪರಿವಾಟಿಯು ಪರಿಪರಿಪುಲದ
ಪಾಮರಿಯರಿಂ ದೇಶವಪ್ಪುವುದು" (೧-೪೨)

ಅಲ್ಲಿ-

"ತಳಿರ ಮಾಮರ ತೆಂಗುಯಳಿಯ ಕಿತ್ತಾಳೆ ಬಾಳೆ
ಫಲವಂತ್ತ ದಾಳಿಂಬ್ರ ದ್ರಾಕ್ಷಾ
ನಳಿನ ತೀವಿದ ಕೊಳ ಸುಳಿದ ಹಂಸವು ಗಿಳಿ
ವುಲಿವ ಕೋಗಿಲೆಯು ಪುರಾಳಾ" (ಅದೇ ೧-೪೩)

ಇವುಗಳಿಂದ ಸಮೃದ್ಧವಾದ ಪ್ರಕೃತಿಯ ಮಡಿಲಲ್ಲಿ

"ಕಂತ್ತುಹರನು ವಲಿಂವತ್ತೆಲ್ಲಿವಿರುತಿರ
ಲಂತಾದು ನಮ್ಮ ಕಲ್ಯಾಣ"

-ಎಂದು ತಿಳಿಸಿ ಅದು-

"ಪರಮ ಮುಕ್ತಿಯ ಬೀಡು ನೆರೆಜ್ಞಾನ ನೆಲೆದಾಣ
ಲ್ಲಿರುತ ವೈರಾಗ್ಯದಾಭರಣ
ವರಪುಣ್ಯದಾಗಾರ ಪರಮೋಕ್ಷ ಕುಕ್ಷಿಯೊ
ಶರಣರ್ಗಂಗಳ ಸದನ" (೧-೪೬)

"ಭಕ್ತರ ಭವನ" (೧-೮೩)

ಅದರ ತೆಂಕಣದಲ್ಲಿ ಕೃಷ್ಣವೇಣಿ ಹರಿಯುತ್ತಿದ್ದಾಳೆ.

"ಧರೆಯಿಂದ ನೊರೆಯಿಂದೆ ಮೊರೆದೆದ್ದು ಬಿಳ್ಪಾತುಂ
ತುರಿಯಿಂದೆ ಪರಿವಾ ಕೆನ್ನೀರ
ಭರದಿಂದೆ ಸುಳಿಗಾಳಿ ಹಾರಿಯಿಂದೆ ಕೂಡುವ
ತೊರೆಯಿಂದೆ ಮೆರೆದು ರಾಜಿಪುದು" (೧-೪೯)

"ಆ ನಾಡಿನಲ್ಲಿ ನರಪಶುಗಳ ಕೂಡ ಸುರಧೇನು" (೧-೪೯)

ವಿನಂತೆ ಮೌನಯ್ಯ ಪ್ರಭುವಿನ ದಯದಿಂದ ಸತಿ ಸುಜ್ಞಾನಿಯೊಡಗೊಂಡು ಬಾಳುತ್ತಲಿದ್ದ. ಆ ದಂಪತಿಗಳೀರ್ವರು ಕಾಯಕ ನಿರತವಾದ ಸಂದರ್ಭವನ್ನು ವರ್ಣಿಸಿರುವ ರೀತಿ ಅದ್ಭುತ. ಅವರ ಅನುಭಾವದ ಬದುಕಿಗೆ ಸಾಕ್ಷಿಯಾಗಿ ನಿಲ್ಲುವ ಆ ಸುಧೀರ್ಘ ವರ್ಣನೆ ಮತ್ತೆ ಮತ್ತೆ ಓದುವಂತಿದೆ. ಚಿನ್ನದ ಕುಸುರಿ ಕುಶಲ ಕೆಲಸಗಾರನಾದ ಮೌನಯ್ಯನು ತಾಳಿ, ಓಲೆಕಂಕಣ, ಒಡ್ಯಾಣ ಅರಳೆಲೆ, ಚಿಂತಾಕು, ಸರಿಗೆ, ಬಂದಿಗೆ, ಹೂವ್ವು ಕೂಡರ ಕಟ್ಟಾಣಿಗಳನ್ನು ಮಾಡುವಲ್ಲಿ ಕವಿಕೊಡುವ ವಿವರಗಳು ಹೃದ್ಯವಾಗಿದೆ.

ಉದಾಹರಣೆಗೆ

“ಕಟ್ಟಾಣಿಗಾರ ಸದ್ಗುರು ನರರೊಳಗೆಲ್ಲ
ಕಟ್ಟಾಣಿ ಭವಿಗಳೊಳ್ ಭಕ್ತ
ಕಟ್ಟಾಣಿ ಮುತ್ತು ಸುಜ್ಞಾನಿ ತ್ರಿಜಗಕೆಂದು
ಕಟ್ಟಾಣಿಯನ್ನು ಮಾಡಿದನು” (೨-೨೫)

ಮೌನಯ್ಯ ದೇಶಾಂತರ ಹೊರಟು ನಿಂತ ಸಂದರ್ಭ ಹೀಗಿದೆ-

ಕೆಸರೊಳು ಕುಂಬಾರ ಹೆಸರಿನ ಹುಳವಿದ್ದು
ಕೆಸರು ಹತ್ತದೆ ಹೊರಟಂತೆ
ಹುಸಿಮನುಜರ ಬಿಟ್ಟು ಅಸಮ ಸುಜ್ಞಾನಿಯು
ಸಸಿನೆ ಆ ಪುರವ ಹೊರ ಹೊರಟು (೪-೯೪)

ಕನಕಗಿರಿ ‘ಸುರಪುರ’, ಲಿಂಗನ ಬಂಡಿ, ಮೇಧಿರಾಯನಕೋಟೆ, ಲಕ್ಷ್ಮೀಶ್ವರ ಮೊದಲಾದ ಪಟ್ಟಣಗಳನ್ನು ವೈವಿಧ್ಯಮಯವಾಗಿ ವರ್ಣಿಸುವ ರೀತಿ ಕವಿಯ ಪ್ರತಿಭೆಯ ದ್ಯೋತಕವಾಗಿವೆ.

“ಮೇಧಿನಿಗಧಿಕವಾದ ಮೇಧಿರಾಯನ ಕೋಟೆ” (೫-೭೪)

“......................
ಪೊಡವಿಗೆ ವದನವೆಂಬತೆ” (೬-೪)

“ಕನಕಗಿರಿಯುಯೆಂಬ ಘನದುರ್ಗ ಬಾಹ್ಯಾದಿ
ವನ ವಿರ್ದುದೆ ನಾಂ ಬಣ್ಣಿಸುವೆ
ವೆನುತ ಸುಮಾವು ನೇರಲು ನೆಲ್ಲಿ ಬೆಳೆವಲಾ
ತನಿನೀರ ತೆಗುದು ಆಲರಳೆ” (೬-೫)

“ಚಿತ್ತವಿಟ್ಟನು ಲಿಂಗನ ಭಂಡಿಯೆಂದೆಂಬ
ಭಕ್ತಿಯ ಬೀಡಿನ ಸ್ಥಲಕೆ” (೬-೬೨)

“ಸಿರಿದೇವಿ ಮುನಿವುತ ಪರಗಾಮಿಯಪ್ಪೊಳು
ಚರಿಸದಿಂದದಿ ದುರ್ಗ ರಚಿಸಿ
ಸೆರೆಯಿಕ್ಕಿ ತಾ ಪೀಠ ವರಲಕ್ಷ್ಮೀಶ್ವರನೆಂಬ
ಪರಿಯಿಂದೆ ಪೊಂಗೊಟ್ಟೆಯಸಿಯೆ” (೭-೧೪)

"ಅಲ್ಲಮ ಪ್ರಭುವಿನ ಅಮಳ್ಯೈಕ್ಯ ಮಾಡಿಹ
ಬಲ್ಲಿದ ಶರಣನಾ ನಗರ
ನಿಲ್ಲದೆ ಗರ್ಭೀಕರಿಸುವರೆ ಬಾಯ್ದೆರದಂತೆ
ಚೆಲ್ವ ತಾ ಹೆದ್ದೊರವೆಸಿಯೆ" (೭-೧೫)

ಎಂಬಿತ್ಯಾದಿಯಾಗಿ ವರ್ಣಿಸುತ್ತಾನೆ.

೨. ಅಲಂಕಾರಗಳು : 'ಶರಣ ಮೋನಪ್ಪಯ್ಯ ಚರಿತೆ'ಯಲ್ಲಿ ವರ್ಣನೆಗಳಂತೆ ಅಲಂಕಾರಗಳೂ ಹೇರಳವಾಗಿ ಬಳಕೆಯಾಗಿವೆ. ಉಪಮೆ, ದೃಷ್ಟಾಂತ, ರೂಪಕ, ಸ್ವಭಾವೋಕ್ತಿಗಳು ಸಂದರ್ಭೋಚಿತವಾಗಿ ಎಡೆ ಪಡೆದಿವೆ. ಕೆಲವು ಪಾರಂಪರಿಕ ವರ್ಣನೆಗಳ ಜಾಡನ್ನೇ ತುಳಿದರೆ, ಕೆಲವು ನೂತನ ಕಲ್ಪನೆಗಳಿಂದ ಗಮನ ಸೆಳೆಯುತ್ತವೆ. ಅಲಂಕಾರಗಳಲ್ಲಿ 'ಉಪಮೆ'ಗೆ ಪ್ರಧಾನ ಪ್ರಾಶಸ್ತ್ಯ ಶಂಕರಕವಿಯ ಕಾವ್ಯಗಳೂ ಉಪಮೆಗಳಿಂದ ಶೋಭಿಸುತ್ತವೆ.

"ಕವಿಯು ಕನಕಾದ್ರಿಯು
ಭೂಕಾಂತೆ ತಳಿದ ಮೇಖಲಿಯಾ
ಆಕಾರದಂತೆ ರತ್ನಾಕರ ಪರಿವೇಷ್ಟಿ
ಸಿ................................." (೧-೩೭)

ರಾರಾಜಿಸುತ್ತದೆ ಎಂದು, ಸಾಂಪ್ರದಾಯಿಕ ರೀತಿಯಲ್ಲಿಯೇ ವರ್ಣಿಸುತ್ತಾನೆ.

ಶರಣ ಮೌನಯ್ಯನು
ನರಪಶುಗಳ ಕೂಡಿ ಸುರಧೇನುಯಿದ್ದಂತೆ
ಪುರುಷ ಪಾಷಾಣ ಕೂಡಿರ್ದ
ಪರಿಯಂತೆ" (೧-೫೫)

ಶೋಭಿಸುತ್ತಿದ್ದನಂತೆ.

"ತಾಯಿಯಿಲ್ಲದ ಕೂಸು ಹಸಿದು ಹಂಬಲಿಪಂತೆ
ಮೌನಯ್ಯನು ಪ್ರಭುವಿಗಾಗಿ ಕಾತರಿಸುತ್ತಾನೆ" (೨-೫೫)

"ಕಮಲಕ್ಕೆ ತುಂಬಿಯು ಭ್ರಮಿಸಿಕೊಂಡಿರ್ದಂತೆ ಪ್ರಭುವೂ
ಶಿಷ್ಯನ ಹಂಬಲದಲ್ಲಿದ್ದನಂತೆ" (೨-೯೭)

"ಲಿಂಗನಾಯಕನು 'ಮೌನಯ್ಯ'ನ ದರ್ಶನಕ್ಕೆ
ಥಟ್ಟನೆ ಉದಯಾದ್ರಿಯಲ್ಲಿ ಸೂರ್ಯನು ಪೊರಮಟ್ಟಂತೆ" (೧೦-೨೨)

ಮದಗಜವೇರಿ ಸಕಲ ವೈಭವಗಳೊಂದಿಗೆ ಹೊರಡುತ್ತಾನೆ. ಇಲ್ಲೆಲ್ಲ ಉಪಮೆಗಳಲ್ಲಿ ಕೇವಲ ಪಾರಂಪರಿಕ ಹೋಲಿಕೆಗಳೂ ಕಂಡರೂ ಸಂದರ್ಭೋಚಿತವಾಗಿ ಬಂದಿರುವುದನ್ನು ಗಮನಿಸಬಹುದು.

ರೂಪಕಗಳೂ ಇದೇ ಜಾಡಿನಲ್ಲಿ ಬಳಕೆಯಾಗಿವೆ.

ಉದಾಹರಣೆಗೆ

'ಪಕ್ಷಿಯ ಪಂಜರ ಅಕ್ಕರಿಂ ತೆರೆದಂತೆ' ಇತ್ಯಾದಿ (೪-೯೯)

ಸ್ವಭಾವೋಕ್ತಿಗಳೂ ಹೆಚ್ಚಿನ ಪ್ರಮಾಣದಲ್ಲಿ ಎಡೆ ಪಡೆದಿವೆ.

ಉದಾಹರಣೆಗೆ ಕನಕಾದ್ರಿಯ ಪರಿಸರದ ಚಿತ್ರಣದಲ್ಲಿ

"ಅಲ್ಲಿಗಲ್ಲಿಗೆ ಪುಣ್ಯ ನದಿಪುಣ್ಯ ಕ್ಷೇತ್ರಂಗ
ಳಲ್ಲಿಗಲ್ಲಿಗೆ ಘುಟಿಕಾಸ್ಥಾನ
ಅಲ್ಲಿಗಲ್ಲಿಗೆ ಮಹಾನಗರ ಗ್ರಾಮಪುರ
ಪಳ್ಳಿಗಳಿಂದೊಪ್ಪುತಿಹುದು" (೧-೩೯)

"ಬೀಸುವ ತಂಗಾಳಿ ಸೂಸುವ ಪರಿಮಳ
ವಾಸರಿಸುವ ಫಲ ಲತೆಯು
ಬೇಸಿಗೆಯೊಳು ತಂಪು ವಾಸಾರವಂಟಿಗಿ
ದೇಶದೊಳನ್ನ ಛತ್ರಗಳು" (೧-೪೪)

"ಹಳ್ಳ ಕೊಳ್ಳವು ಹರಿದು ಅಲ್ಲಿ ಕೆರಿಗಳು ತುಂಬಿ
ಒಳ್ಳೊಳ್ಳೆ ಮನೆಗಳು ಕೆಡದು
ಹುಲ್ಲುಕಟ್ಟಿಗೆ ಹಾರಿ ತಲ್ಲಣಗೊಳೆ ಪ್ರಜಾ
ನೆಲ್ಲದೆ ನುರಿವುತಲಿರಲು" (೫-೫೭)

ಕವಿ ಇಲ್ಲಿ ತಿಳಿಸಿರುವುದು ಕೇವಲ ವಸ್ತುಸ್ಥಿತಿ, ಆದರೆ ಇದೊಂದು ಧ್ವನಿಪೂರ್ಣ ಚಿತ್ರಣ. ಪ್ರಳಯದ ಭೀಕರತೆಯನ್ನು ಕಣ್ಣೆದುರು ತಂದು ನಿಲ್ಲಿಸುತ್ತದೆ.

ದೃಷ್ಟಾಂತಗಳು 'ಉಪಮೆ'ಗಳಿಗೆ ಪೈಪೋಟಿ ನೀಡುವಂತೆ ಬಳಕೆಯಾಗಿವೆ.

ಉದಾಹರಣೆಗೆ "ಹೊನ್ನಿಗಾಸೆಯ ಮಾಡಿ ಹರಿಶ್ಚಂದ್ರರಾಯನು
ಬನ್ನ ಬಡಿಸಿ ಧನವಕೊಂಡು
ತನ್ನಾತಪಸಿನ ಫಲವನ್ನು ವಶಿಷ್ಟಗೆ
ಮುನ್ನಿತ್ತು ಕೊಟ್ಟಾ ವಿಶ್ವಾಮಿತ್ರ" (೪-೩೭)

"ತಮ್ಮ ಹಿತ್ತಲಗಿಡ ಒಮ್ಮೆ ಔಷಧಕ್ಕೆ
ಕೆಮ್ಮಿಗಿಲ್ಲದೆ ಬಾರದಂತೆ
ನಮ್ಮ ಗ್ರಾಮುದೊಳಿರ್ದ ಧರ್ಮ ಸ್ವರೂಪನೆ
ನಿಮ್ಮ ಮಹಿಮೆ ತಿಳಿಯದಾಯ್ತು" (೫-೫)

ಎಂದು ಮೌನಯ್ಯನಿಗೆ ಗೌಡನು ಪರಿಪರಿಯಿಂದ ತನ್ನ ಪುರವನ್ನಗಲಿ ಹೋಗದಿರೆಂದು ಬೇಡಿಕೊಳ್ಳುವಲ್ಲಿ ಬಳಕೆಯಾಗಿರುವ ದೃಷ್ಟಾಂತ ಮಾರ್ಮಿಕವಾಗಿದೆ.

೩. **ರಸ ಪ್ರತಿಪಾದನೆ :** ರಸವೇ ಕಾವ್ಯದಲ್ಲಿ ಪ್ರಧಾನವಾದ ಸ್ಥಾನವನ್ನು ಪಡೆಯುತ್ತದೆಂಬ ಅಂಶ ವಿದಿತವೇ ಆಗಿದೆ. ಹತ್ತನೆಯ ಶತಮಾನದ ಕನ್ನಡ ಕಾವ್ಯಗಳು 'ವೀರರಸ' ಪ್ರಧಾನವಾಗಿದ್ದರೆ ಹನ್ನೆರಡನೆಯ ಶತಮಾನದ ಮತ್ತು ತದನಂತರದ ಕಾವ್ಯಗಳು 'ಭಕ್ತಿರಸ' ಪ್ರಧಾನವಾಗಿ ಮೂಡಿಬಂದಿವೆ. ಕೋಳೂರು ಶಂಕರ ಕವಿಯು ಶಿವಶರಣರ ಪ್ರಭಾವಕ್ಕೆ ಪಕ್ಕಾದ ಕವಿಯಾದುದರಿಂದ ಅವನ ಎಲ್ಲ ಕೃತಿಗಳು ಭಕ್ತಿರಸಪ್ರಧಾನವಾದವುಗಳೇ.

ಶರಣ ಮೋನಪ್ಪಯ್ಯ ಚರಿತೆಯಲ್ಲಿ ನವರಸಗಳ ಬಳಕೆಯಿಲ್ಲ. ಮಹಾಶಿವಶರಣ, ಸಮನ್ವಯಪಂಥದ ಅನುಯಾಯಿ ಮೋನಪ್ಪಯ್ಯನ ಚರಿತೆಯನ್ನು ಹೇಳಹೊರಟಿರುವ ಈ ಕೃತಿ ಸಹಜವಾಗಿಯೇ ಭಕ್ತಿರಸ ಪ್ರಧಾನವಾಗಿದೆ. ಆನುಷಂಗಿಕವಾಗಿ ಮತ್ತು ಕ್ವಚಿತ್ತಾಗಿ ಕರುಣ ಹಾಗೂ ಶೃಂಗಾರರಸಗಳು ಅಭಿವ್ಯಕ್ತಗೊಂಡಿವೆ.

ಉದಾಹರಣೆಗೆ ಶರಣಮೋನಪ್ಪಯ್ಯನ ಅಪ್ಪಣೆಯ ಮೇರೆಗೆ ದೊರೆ ಲಿಂಗಪ್ಪನಾಯಕನು ಪಟ್ಟದ ರಾಣಿಯೊಡಗೂಡಿ ಮೌನಯ್ಯನ ದರ್ಶನಕ್ಕೆ ಶೃಂಗಾರಗೊಂಡು ಹೊರಟ ಸಂದರ್ಭ. ಅಲ್ಲಿಯ ಜಲಕ್ರೀಡೆಯ ಸನ್ನಿವೇಶಗಳು ಶೃಂಗಾರ ರಸಕ್ಕೆ ನಿದರ್ಶನಗಳು. ಇಲ್ಲಿ ಕಾಣಸಿಗುವ ವರ್ಣನೆಗಳು, ದೃಷ್ಟಾಂತಗಳು ಕವಿಯ ರಸಿಕತೆಯನ್ನು ಎತ್ತಿ ತೋರಿಸುತ್ತವೆ. (ಸಂಧಿ ೧೦)

ಶರಣ ಮೋನಪ್ಪಯ್ಯನು ಊರೂರು ಸಂಚರಿಸುತ್ತಾ ಪವಾಡಗಳನ್ನು ಮೆರೆಯುತ್ತಾ ಲಕ್ಮೇಶ್ವರಕ್ಕೆ ಬರುತ್ತಾನೆ. ಕೆಲವು ಕುಟಿಲ ಜನರು ಒಬ್ಬ ಗೃಹಸ್ಥನನ್ನು 'ಶವ'ದಂತೆ ಮಲಗಿಸಿಕೊಂಡು ಮೌನಯ್ಯನಲ್ಲಿಗೆ ಬಂದು .... ದಯದಿಂದ ಸತ್ತವನ ಜೀವವನು ಕೊಟ್ಟು ರಕ್ಷಿಸುಯೆಂದು ಕುಟಿಲದಿ ... (೮-೧೪೯) ನಗುತ್ತಾರೆ. 'ಸತ್ತವರ ಬದುಕಿನ ಸತ್ಯರಿಳೆಯೊಳಗುಂಟೆ ಎಂದು ಮೋನಯ್ಯನು ಮುಂದೆ ಸಾಗುತ್ತಾನೆ. ಇತ್ತ ಅವನೊಡನಾಡಿಗಳೆಲ್ಲ ಎಚ್ಚರಿಸ ಹೋದರೆ ಅವನ ಪ್ರಾಣಪಕ್ಷಿ ಹೊರಟೇ ಹೋದ ಸಂದರ್ಭದಲ್ಲಿ ಆತನ ಪತ್ನಿ ಪ್ರಲಾಪಿಸುವ ಸನ್ನಿವೇಶದಲ್ಲಿ 'ಕರುಣ ರಸ' ಉಕ್ಕಿದೆ.

"ಮಕ್ಕಳುಳ್ಳವಳೆನ್ನ ರಕ್ಷಿಸುವರಾರೆಂದು
ದುಃಖವ ಮಾಡಿ ಬಸುರ್ಬಡಿದು
ಮುಕ್ಕಣ್ಣ" (೮-೧೫೩)

ರಕ್ಷಿಸೆಂದು ಭೋರ್ಗರೆದು ಅಳುತ್ತಾಳೆ.

ಶರಣ ಮೋನಪ್ಪಯ್ಯನು ಈ ಕಾವ್ಯದಲ್ಲಿ ಶ್ರೀ ಪ್ರಭುವಿನ ಪ್ರತಿರೂಪವೇ ಆಗಿದ್ದ. ಮಹಾಭಕ್ತ, ಪ್ರಭುವಿಗಾಗಿ ಆತನು ಹಂಬಲಿಸುವ ರೀತಿ, ಅವನ ಕಾಯಕ ನಿಷ್ಠೆಯನ್ನು ಪ್ರತಿಬಿಂಬಿಸುವ ಸನ್ನಿವೇಶಗಳು ಶ್ರೀ ಪ್ರಭುವು ಸ್ವತಃ ತಾನೇ ಮೌನಯ್ಯನಿಗೆ ವೀರಶೈವ ತತ್ವಗಳನ್ನು ದೀರ್ಘವಾಗಿ ಬೋಧಿಸುವ ಪ್ರಸಂಗಗಳಲ್ಲಿ 'ಭಕ್ತಿರಸ' ಭೋರ್ಗರೆದಿರುವುದನ್ನು ಗುರುತಿಸಬಹುದು. ಈ ಕಾವ್ಯದಲ್ಲಿ ಶೃಂಗಾರವೇ ಇರಲಿ, ಕರುಣವೇ ಇರಲಿ ಅದು 'ಭಕ್ತಿರಸ'ಕ್ಕೆ ಪೂರಕವಾಗಿಯೇ ಅಭಿವ್ಯಕ್ತಿಸಲ್ಪಟ್ಟಿವೆ.

೪. **ಸನ್ನಿವೇಶ ಸೃಷ್ಟಿ :** ಉತ್ತಮ ಕಥನಕಾರನ ಲಕ್ಷಣಗಳುಳ್ಳ ಶಂಕರ ಕವಿಯದು ಸನ್ನಿವೇಶ ಸೃಷ್ಟಿಯಲ್ಲಿ ಎತ್ತಿದ ಕೈ. ನಾಟಕೀಯತೆಯ ಒಂದು ಪ್ರಧಾನ ಲಕ್ಷಣವೆಂದರೆ ದೃಶ್ಯ ನಿರ್ಮಾಣ ಶಕ್ತಿ. ಬಹುಶಃ ರಾಘವಾಂಕನ ಪ್ರಭಾವ ಶಂಕರಕವಿಯ ಮೇಲಾಗಿರುವುದರಿಂದ ಕೃತಿಗಳಲ್ಲಿ ಸಹಜವಾಗಿಯೇ ಈ ನಾಟಕೀಯ ಗುಣ ಮೈದೋರಿದೆ ಎನಿಸುತ್ತದೆ. ಈ ಕಾವ್ಯದಲ್ಲಿ ಮೋನಪ್ಪಯ್ಯನು ಮೆರೆಯುವ ಪವಾಡದ ಸಂದರ್ಭಗಳೆಲ್ಲ ಇದಕ್ಕೆ ಉದಾಹರಣೆಗಳಾಗಿ ನಿಲ್ಲುತ್ತದೆ.

ಉದಾ: ಮರಣ ಹೊಂದಿದ ಎತ್ತನ್ನು ಶೃಂಗರಿಸಿ ಸಂಸ್ಕಾರ ಮಾಡಲು ಗಾಣಿಗ ಶೆಟ್ಟಿಯೊಬ್ಬನು ಪುರ ಜನರೊಂದಿಗೆ ಹೊರಟಿದ್ದಾನೆ. ಆಗ ಅಲ್ಲಿಗೆ ಬಂದ ಮೌನಯ್ಯನು- "ನಮ್ಮ ಬಸವಯ್ಯನ ಸುಮ್ಮನೆ ನೀವೆಲ್ಲ ಘಮ್ಮನೆ ಎಲ್ಲಿಗೋಯ್ಯಿಪಿರಿ" (೮-೭೦) ಎಂದು ಅಡ್ಡಗಟ್ಟುತ್ತಾನೆ.

"ಸತ್ತ ಎತ್ತನು ನಾವು ಹೊತ್ತೊಯ್ಯುತಿರ್ದರೆ
ಎತ್ತಣಿಂದಲಿ ಬಂದ ಹುಚ್ಚ
ಹೊತ್ತು ಮುಳುಗುತಲಿದೆ ಹಾದಿಯ ಬಿಡುಯೆಂದು" (೮-೭೧)

ಅಸಮಾಧಾನದಿಂದ ನುಡಿಯುತ್ತಾನೆ. ತಾನು ಆ ಎತ್ತನ್ನು ಬದುಕಿಸುವೆನೆಂದ ಮೌನಯ್ಯನಿಗೆ ಶೆಟ್ಟಿಯು "ಸತ್ತ ಎತ್ತಿಗೆ ಪ್ರಾಣ ನೀಡಿದರೆ ಆ ಎತ್ತನ್ನೇ ನಿನಗೆ ಬಿಟ್ಟುಕೊಡುವೆನೆಂದು- ಎತ್ತನ್ನು ಹೊತ್ತಿದ್ದ ಮಂಚವನ್ನು ಪೃಥ್ವಿಗೆ ಇಳಿಸುತ್ತಾನೆ. ಸತ್ಯನಿಧಿ ಮೌನಯ್ಯ ಸುಚಿತ್ತದಿಂದ "ಬಸವ ಬಾ ಇತ್ತಪೆ ಮುಕ್ತಿಯ ಮುಂದೆ" ಇನ್ನೂ ನಿನಗೆ ಹನ್ನೆರಡು ವರುಷ ಆಯುಷ್ಯವಿದೆ (೮-೭೩) ಎಂದು ಹೇಳುತ್ತಾ ತನ್ನ ಹಸ್ತದಿಂದ ನಂದಿಯ ಬೆನ್ನ ಮೇಲೆ ನೇವರಿಸುತ್ತಾನೆ. ಆ ಎತ್ತು

"ಮೆಲ್ಲನೆ ಕಂಗಳ ತೆರೆದೆ ಕಿವಿ ಝಾಡಿಸಿ
ಚಲ್ವ ಬಾಲವ ಸೆಳದೆಳದು
ಘಲ್ಲುಘಣ ಘಣರೆನೆ ಘಂಟಿಜಂಗಿನನಾದ
ಮೆಲ್ಲಡಿಯಿಟ್ಟು ಪರಸುತಲಿ" (೮-೭೫)

ಎದ್ದು ಢುರಿಕಿಯ ಹೊಡಿದು ಮುದ್ದು ಶ್ರೀ ಬಸವೇಶ
ಸಿದ್ಧ ಶರಣ ಮೌನಯ್ಯಗಳು

ಇದ್ದ ಕಡಿಗೆ ತಿರಿಗಿ ಮುದ್ದಿಸುತ್ತಿರಲು

ಚೋದ್ಯವಾದರು ಜನರೆಲ್ಲ (೮-೭೬)

ಇಲ್ಲಿನ ಸಹಜ ನಾಟಕೀಯತೆಯಿಂದ ಕಣ್ಣೆದುರು ಕಟ್ಟಿನಿಲ್ಲುವ ಸನ್ನಿವೇಶ ದೃಶ್ಯವು ಶಂಕರಕವಿಯ ಚಿತ್ರಕ ಶಕ್ತಿಗೆ ಒಂದು ಚಿಕ್ಕ ಉದಾಹರಣೆ ಮಾತ್ರ. ಇಂಥ ಅನೇಕ ನಿದರ್ಶನಗಳು ಕಾವ್ಯದ ಒಡಲಿನಲ್ಲಿ ಅಡಗಿ ಕೊಂಡಿವೆ.

೫. **ಭಾಷಾಶೈಲಿ :** ಶರಣ ಸಂಪ್ರದಾಯದಲ್ಲಿಯೇ ಸಾಗಿ ಬಂದಿರುವ ಶಂಕರ ಕವಿಯು ಭಾಷಾ ಶೈಲಿಯ ದೃಷ್ಟಿಯಿಂದ ಸರಳತೆ, ಸ್ಪಷ್ಟತೆಯನ್ನು ಸಾಧಿಸಿಕೊಂಡಿದ್ದಾನೆ. ಎಲ್ಲಿಯೂ ದೀರ್ಘವಾದ ಸಮಾಸಗಳು, ಚಮತ್ಕಾರಿಕ ಉಕ್ತಿಗಳು, ಕಠಿಣತಮ ಪದಗಳು ಇಲ್ಲಿ ಕಾಣಸಿಗುವುದಿಲ್ಲ. ಸುಲಭವಾಗಿ ಅರ್ಥಕ್ಕೆ ನಿಲುಕುವ ಸರಳ ಕನ್ನಡ ಪದಗಳ ಬಳಕೆಗೆ ಹೆಚ್ಚಿನ ಆದ್ಯತೆ ಇಲ್ಲಿದೆ. ತಾತ್ವಿಕ ವಿಚಾರಗಳ ಪ್ರತಿಪಾದನೆಯಲ್ಲಿಯೂ ಸಹ ಅರ್ಥವ್ಯಕ್ತಿಗೇ ಪ್ರಾಧಾನ್ಯತೆ ದೊರೆತಿದೆ.

ಈ ಕಾವ್ಯವು ಬಿಗುವಾದ ಬಂಧ, ಸಂಗ್ರಹಗುಣ, ಔಚಿತ್ಯ, ಸರಳತೆ ಉತ್ತಮ ಕಥನ ತಂತ್ರಗಳಿಂದ ಹೃದ್ಯವಾಗಿದ್ದು ತನ್ನ ದೇಶೀಯತೆಯಿಂದ ಗಮನ ಸೆಳೆಯುತ್ತದೆ.

ಈ ಕಾವ್ಯದಲ್ಲಿ ಸೂಕ್ತಿಗಳು, ಗಾದೆಗಳನ್ನು ನೆನಪಿಸುವ ನುಡಿಗಟ್ಟುಗಳು ಅಲ್ಲಲ್ಲಿ ಬಳಕೆಯಾಗಿದ್ದು ಎಲ್ಲಿಯೂ ಹೊಸತನ ಅಷ್ಟಾಗಿ ಕಂಡು ಬರುವುದಿಲ್ಲ.

ಉದಾಹರಣೆಗೆ:

'ನೆನೆದವರ ಮನಸಿನ ಕೊನಿಯಲ್ಲಿ ಶಿವನಿರ್ಪ' (೨-೫೩)

'ತಾಯಿ ಇಲ್ಲದ ಕೂಸು ಹಸಿದು ಹಂಬಲಿಪಂತೆ' (೨-೫೮)

'ಹರಗಿಂಥ ಪರಮ ಸದ್ಗುರುವಧಿಕ' (೨-೭೧)

'ಬಿತ್ತಿ ಬೆಳೆದ ಫಲ ಮತ್ತೆ ಕೊಯ್ದುಂಬಂತೆ' (೪-೧೩)

'ಹದ್ದು ಹಾವು ವೈದಂತೆ' (೪-೬೧)

'ನಂಬಿದವರಿಗೆ ಶಿವ ಬೆಂಬಳಿಗೊಂಡಿಹ' (೫-೪೪)

'ಬೇಡುವರಿಲ್ಲದ ನಾಡದು ಸುಡುಗಾಡು' (೭-೭೩)

'ಹುಲ್ಲೆಯೊಳು ಹುಲಿಯು ಚಲ್ಲವಾಡಿದವೊಲು' (೧೦-೩೭) ಇತ್ಯಾದಿ.

ಈ ಕಾವ್ಯದ ಇನ್ನೊಂದು ವಿಶೇಷತೆಯೆಂದರೆ ಆಡುಮಾತಿನ ರೂಪಗಳು ಹೇರಳವಾಗಿ ಬಳಕೆಯಾಗಿರುವುದು.

ಉದಾಹರಣೆಗೆ:

ಸರಸಿಜ ತೇಲಿರ್ದ ಕೆರಿಯು ತಾಕಿರಿದಲ್ಲಾ
ಹರನಿರ್ದ ಪಳ್ಳಿ ಪಳ್ಳೆಲ್ಲ (೧-೫೪)

ಯಾರೆಂದರೇನೆನ್ನಾನು ಯಾರು ನುಡಿಸಲು ನುಡಿವ
ಯಾರ್‍ಯಾರು ಹೇಳಲು ಮೀರದೆ ಕೇಳುವ (೨-೯)

ಬಾವಿಗೆ ನಡೆತಂದು ತೆಲಿ ಸ್ನಾನವ ಮಾಡಿ
ಬಾವಾ ಶುದ್ಧದಿ ಮಡಿಯನುಟ್ಟು (೨-೧೩)

ಹೂವ್ವು ಪತ್ರಿಯ ತಂದು .... (೨-೧೩)

ಕೂಡರೆ ನಾನಾ ಭವ ಲತಿಯೊಳಗೆ ಹೆಜ್ಜೆಯನಿಟ್ಟು (೨-೨೬)

ಇತ್ಯಾದಿ ಇಲ್ಲೆಲ್ಲ ಉತ್ತರಕರ್ನಾಟಕದ ಭಾಷಾ ಶೈಲಿಯಲ್ಲಿ ಸಹಜವಾಗಿ ಇಣುಕುವ 'ಇ' ಕಾರಂತ ಪದಗಳು (ಉದಾ: ಕೆರೆ, ತೆಲಿ, ಲತಿ, ಇತ್ಯಾದಿ) ಬಳಕೆಯಾಗಿರುವುದನ್ನು ಸಾಕಷ್ಟು ಪ್ರಮಾಣದಲ್ಲಿ ಕಾಣಬಹುದು. ಮೋನಪ್ಪಯ್ಯನು ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದ್ದುಕೊಂಡು ವಚನಗಳನ್ನು ರಚಿಸಿದವನು. ಕನ್ನಡ ಭಾಷೆಯಲ್ಲಿ ಪರ್ಶಿಯನ್ ಪದಗಳ ಬಳಕೆಯನ್ನು ಸಮರ್ಥವಾಗಿ ಮಾಡಿಕೊಟ್ಟವನು.[೧೫] ಹೀಗಾಗಿ ಇಲ್ಲಿ ಮಸೂತಿ, ಬಂದಿಖಾನೆಯಂಥ ಪ್ರಯೋಗಗಳು ಎಡೆ ಪಡೆದಿವೆ.

೬. ಛಂದಸ್ಸು : ಶರಣ ಮೋನಪ್ಪಯ್ಯ ಚರಿತವು 'ಸಾಂಗತ್ಯ' ಛಂದಸ್ಸಿನಲ್ಲಿ ರಚಿತವಾಗಿದ್ದು ೧೧ ಸಂಧಿ, ೧೧೩೦ ಪದ್ಯಗಳನ್ನೊಳಗೊಂಡಿದೆ. ಪ್ರತಿಯೊಂದು ಸಂಧಿಯ ಆರಂಭದಲ್ಲಿ ಮೋನಪ್ಪಯ್ಯನ ವ್ಯಕ್ತಿತ್ವ ನಿರೂಪಣೆಗೆ ಪೂರಕವಾಗುವಂತೆ ವಿವಿಧ ವಚನಕಾರರ 'ವಚನ'ಗಳಿವೆ. ಪದ ಭಾಗದಲ್ಲಿ 'ರಾಗ ತಮ್ಮಿಚ್ಛೆ ಸಾಂಗತ್ಯ' ಎಂದು ಪ್ರಥಮ ಸಂಧಿಯಲ್ಲಿ ಕಾವ್ಯಾರಂಭಕ್ಕಿಂತ ಮುನ್ನವೇ ಸೂಚನೆಯಿದೆ. ಸಾಂಗತ್ಯವೆಂದರೆ ಗೇಯತೆಯನ್ನೇ ಮುಖ್ಯ ಲಕ್ಷಣವಾಗಿ ಉಳ್ಳದ್ದು ಎಂಬುದನ್ನು ಮನದಂದರೆ 'ವಾಚಕರು' ಇಚ್ಛಿಸಿದ ರಾಗದಲ್ಲಿ ಈ ಸಾಂಗತ್ಯ ಕೃತಿಯನ್ನು ಹಾಡಬಹುದು ಎಂದು ತಿಳಿಯುತ್ತದೆ. 'ಪಲ್ಲ' ಎಂದು ಸೂಚಿಸಿ ಸಂಸ್ಕೃತ ಕನ್ನಡಗಳ ಹಿತಮಿತ ಮಿಶ್ರಣದ ಸ್ತುತಿ ಪದ್ಯಗಳನ್ನು ವಿರಚಿಸಿದ್ದಾನೆ. ಈ ಕಾವ್ಯದಲ್ಲಿ ಆದಿಪ್ರಾಸವು ನಿಯತವಾಗಿ ಪಾಲಿಸಲ್ಪಟ್ಟಿದೆ. 'ಸಾಂಗತ್ಯವು ವರ್ಣನೆಗೆ ಅಪ್ರತಿಮವಾದ ಮಟ್ಟು'[೧೬] ಎಂಬ ಮಾತು ಶಂಕರ ಕವಿಯ ಈ ಕಾವ್ಯದಲ್ಲಿ ನಿಜವಾಗಿದೆ. 'ಮೃದುಭಾವವನ್ನು ಬಳ್ಳಿಯಂತೆ ಬಳುಕಿಸುವ' ಸೌಕುಮಾರ್ಯ ಗುಣದ ಸಾಂಗತ್ಯದ ಬಂಧದಲ್ಲಿ ಶಂಕರ ಕವಿಯ ವರ್ಣನೆಗಳು ಮನಾನಂದಕರವಾಗಿ ಮೂಡಿ ಬಂದಿವೆ.

ಉದಾಹರಣೆಗೆ:

“ಬೀಸುವ ತಂಗಾಳಿ ಸೂಸುವ ಪರಿಮಳ
ವಾಸರಿಸುವ ಫಲಲತೆಯು
ಬೇಸಿಗೆಯೊಳು ತಂಪುವಾಸಾರವಂಟಗಿ
ದೇಶದೊಳನ್ನ ಛತ್ರಗಳು” (೧ ಪ ೪೪)

ಇಲ್ಲಿ ಶೃಂಗಾರದ ಭಾವಾಭಿವ್ಯಕ್ತಿಗೆ ಅನೇಕ ಉದಾಹರಣೆ ದೊರೆಯುತ್ತವೆ

ಉದಾಹರಣೆಗೆ:

“ಲಲನಿಯರಮಳ ಸಂಚಲ ಕಟಾಕ್ಷವನು
ಸಲೆ ನೋಡಿ ತಮ್ಮ ಸಂಚಲಕೆ
ಗೆಲುವೆಂದು ಸೋತು ನೀರ್ಭಾಗುವಂತೆ ಮಥ್ಯಾಳಿ
ಮುಳುಗಿದವು ನೀರೊಳಗೆ” (೧೦-೩೫)

‘ತ್ರಿಪದಿಯ ಸ್ವರದಂತೆ ಸಾಂಗತ್ಯದ ಸ್ವರವೂ ಕನ್ನಡದ ಜೀವಸ್ವರ’[೧೭]

ಅದಕ್ಕೆ ಉಸಿರು ತುಂಬುವ ಪ್ರಯತ್ನದಲ್ಲಿ ಶಂಕರ ಕವಿಯು ತಕ್ಕಮಟ್ಟಿಗೆ ಯಶಸ್ವಿಯಾಗಿದ್ದಾನೆಂದು ಹೇಳಬಹುದು.

ವೀರಶೈವ ಪುರಾಣವಾಗಿ ಶರಣ ಮೋನಪ್ಪಯ್ಯ ಚಾರಿತ್ರ

ವೀರಶೈವ ಪುರಾಣಗಳು ಹನ್ನೆರಡನೆಯ ಶತಮಾನದಿಂದ ಆರಂಭಗೊಂಡು ಇಂದಿನವರೆಗೂ ಅವ್ಯಾಹತ ವಾಗಿ ಬೆಳೆದುಬಂದಿವೆ. ವಿಶೇಷವಾಗಿ ಷಟ್ಪದಿ ಸಾಂಗತ್ಯಗಳಲ್ಲಿ ವೀರಶೈವ ಪುರಾಣಗಳು ಮೂಡಿ ಬಂದಿದ್ದು ಅವು ತಮ್ಮ ಗೇಯತೆಯ ಮೂಲಕ ಜನಮನವನ್ನು ಸೆಳೆದಿವೆ. ವೀರಶೈವ ಕವಿಗಳು ತಮ್ಮ ಪುರಾಣಕೃತಿಗಳ ಮೂಲಕ ‘ಅಳಿದರೂ ಉಳಿದರೂ ದಾರಿ ತೋರುವ ಐತಿಹಾಸಿಕ ಪುರುಷರೂ ಆದರ್ಶ ಜೀವಿಗಳೂ ಆದ ಮಹಂತರ ಬದುಕನ್ನೂ ಅವರ ಚರಿತ್ರಗಳನ್ನೂ ಜನಸಾಮಾನ್ಯರಿಗೆ ತಿಳಿಯುವಂತೆ ಹೇಳಿದರು.[೧೮]

ವೀರಶೈವ ಪುರಾಣ ರಚಕರಲ್ಲಿ ಕೆಲವರು ಜೈನ ಹಾಗೂ ಪೆರಿಯ ಪುರಾಣಗಳಿಂದ ಸ್ಫೂರ್ತಿ ಪಡೆದರೆ ಮತ್ತೆ ಕೆಲವರು ವೈದಿಕ ಪುರಾಣಗಳಿಂದ ಪ್ರಭಾವಿತರಾದರು.[೧೯] ಆದರೂ ವೀರಶೈವ ಪುರಾಣಗಳಿಗೇ ವಿಶಿಷ್ಟವಾದ ಕೆಲವು ಲಕ್ಷಣಗಳನ್ನು ಗುರುತಿಸಲಾಗಿದೆ. ಅವುಗಳ ಹಿನ್ನೆಲೆಯಲ್ಲಿ ‘ಶಂಕರ ಕವಿ’ಯ ‘ಶರಣ ಮೋನಪ್ಪಯ್ಯ ಚಾರಿತ್ರ’ವು ವೀರಶೈವ ಪುರಾಣವಾಗಿ ಪಡೆಯುವ ಸ್ಥಾನವನ್ನು ಪರಿಶೀಲಿಸೋಣ.

೧. ವೀರಶೈವ ಪುರಾಣಗಳ ಪ್ರಧಾನ ವ್ಯಕ್ತಿಗಳು ಗುರುವು ತ್ರಿವಿಧ ದೀಕ್ಷೆಯಿಂದ ಮಲತ್ರಯಗಳನ್ನು ನಾಶಗೊಳಿಸಿ ಪಶ್ಚಿಮ ಶಿಖಾಚಕ್ರದಲ್ಲಿ ಬೆಳಗುವ ಚಿತ್ಕಳೆಯನ್ನು ಮೈಗೂಡಿಸಿ ಅನುಗ್ರಹಿಸುವ ಇಷ್ಟಲಿಂಗವನ್ನು ಸದಾ ಶರೀರದ ಮೇಲೆ ಧರಿಸಿ ಆರಾಧಿಸುವವರಾಗಿರುತ್ತಾರೆ.[೨೦]

ಶಂಕರ ಕವಿಯು ಪ್ರಸ್ತುತ ಕಾವ್ಯದಲ್ಲಿ ಈ ತಂತ್ರವನ್ನು ಸ್ವಲ್ಪ ಮಾರ್ಪಾಟು ಮಾಡಿಕೊಂಡಿದ್ದನ್ನು ಗುರುತಿಸಬಹುದು. ಪುರಾಣ ರಚಕರ ರುಚಿಗನುಗುಣವಾಗಿ.... ಕೆಲವು ಅಂಶಗಳು ಭಾಗಶಃ ಬಂದಿರುವುದೂ ಉಂಟು. ಉದಾಹರಣೆಗೆ ೬೩ ಮಂದಿ ಶೈವ ಪುರಾತನರ ವಿಷಯಗಳೂ ಪರಶಿವನ ೨೫ ಲೀಲೆಗಳೂ ಕೆಲವು ಪುರಾಣಗಳಲ್ಲಿ ಸೂಕ್ಷ್ಮವಾಗಿರುತ್ತವೆ. ಹಲವು ಪುರಾಣಗಳಲ್ಲಿ ಬರುವುದೇ ಇಲ್ಲ[೨] ಎಂಬ ಮಾತನ್ನು ಮನದಂದರೆ ಶಂಕರ ಕವಿಯು ವಹಿಸಿರುವ ಸ್ವಂತಿಕೆ ಅರಿವಿಗೆ ಬರುತ್ತದೆ.

ಶರಣ ಮೋನಪ್ಪಯ್ಯನ ಜನನ ತಂದೆ-ತಾಯಿಗಳ ಕುರಿತು ಶಂಕರ ಕವಿಯು ಮೌನವಹಿಸಿದ್ದಾನೆ. ಈ ಕಾವ್ಯ ಪ್ರಾರಂಭವಾಗುವುದೇ ಮೋನಪ್ಪಯ್ಯನ ದಾಂಪತ್ಯ ಘಟ್ಟದಿಂದ. ಪ್ರಭುಲಿಂಗಲೀಲೆಯನ್ನು ಕೇಳಿ ಭಕ್ತಿ ಪರವಶನಾಗಿ ಅಲ್ಲಮನ ದರ್ಶನದ ಹಂಬಲದಲ್ಲಿರುವಾಗ ಪ್ರಭು ದರ್ಶನ ನೀಡುತ್ತಾನೆ. "ವೀರಶೈವ ತತ್ವಗಳನ್ನು ಉಪದೇಶ ಮಾಡುತ್ತಾನೆ. ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ. ಅಂತ್ಯದಲ್ಲಿ "ಹಾಲೊಳು ಹಾಲು ತುಪ್ಪದಿ ತುಪ್ಪ ಬೆರದಂತೆ" (೩-೬೨) ಕರ್ಪುರವು ಉರಿ ಅರ್ಪಿದಂದದಿ ಮೌನನೊಳು ಅಲ್ಲಮ ಬೆರೆಸಿದನು ಎಂಬಲ್ಲಿ ಕವಿಯು 'ಮೌನಯ್ಯನು ಅಲ್ಲಮನ ಪ್ರತಿರೂಪವೇ ಆದ' ಅಸಾಮಾನ್ಯತೆಯನ್ನು ಪಡೆದ ಎಂಬುದನ್ನು ತಿಳಿಸುತ್ತಾನೆ.

೨. ಶಿವಭಕ್ತರ ಕಥೆ : ವೀರಶೈವ ಧರ್ಮದ ಮಹಾಪುರುಷರ ಚರಿತ್ರೆ ಪ್ರಧಾನವಾಗಿ ಬಂದು, ಪುರಾತನ ಶೈವಸಂತರು, ಪುರಾತನ ನೂತನ ಶಿವಶರಣರ ಕಥೆಗಳು ಸಾಂದರ್ಭಿಕವಾಗಿ ಉಕ್ತವಾಗಿರುತ್ತವೆ.

ನೂತನರೊಳಗತಿ ನೂತನನಾದ ಮೌನಪ್ಪಯ್ಯ ಶರಣರ ಚರಿತ್ರೆಯನ್ನು ಪ್ರಧಾನವಾಗಿ ತಡೆಯಿಲ್ಲದಂತೆ ನಿರೂಪಿಸುತ್ತಾ ಹೋಗುವ ಶಂಕರ ಕವಿಯು ಸೂಜಿಗೆ ಮುದ್ದುಕೊಟ್ಟಂತೆ ತುಂಬ ಕಿರಿದಾಗಿ ಶಿವಭಕ್ತರ ಬದುಕಿನ ಮಹತ್ವದ ಘಟ್ಟಗಳನ್ನು ಚಿತ್ರಿಸುತ್ತಾನೆ. ಪ್ರಭುವಿನ ದರ್ಶನವನ್ನು ಹಾರೈಸುತ್ತಿದ್ದ ಮೋನಪ್ಪಯ್ಯನು ಬಸವಣ್ಣ, ಮಾತಂಗ, ಸಿದ್ಧರಾಮ, ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ, ಮರುಳಶಂಕರ, ಚನ್ನಬಸವಣ್ಣ, ಮಡಿವಾಳ ಅಪ್ಪಣ್ಣ, ಕಿನ್ನರಿ ಬ್ರಹ್ಮಯ್ಯ, ಅಕ್ಕಮಹಾದೇವಿ, ಗೋರಕ್ಷ, ಮುಂತಾದ ಶರಣರಿಗೆ ಶಿವನೊಲಿದ ಕಥೆಯನ್ನು ನೆನಪಿಸಿಕೊಂಡು ಪ್ರಾರ್ಥಿಸುತ್ತಾನೆ. ಅಲ್ಲಮನ ಶಿವಯೋಗಿ ಜಂಗಮನ ರೂಪ ಧರಿಸಿ ದೇಶಾಂತರ ಹೊರಡಲು ಮೌನಯ್ಯನಿಗೆ ಕರೆ ನೀಡಿದಾಗ ಆತ ನಿರಾಕರಿಸುತ್ತಾನೆ. ಆಗ ಇಂದ್ರ, ಅಹಲ್ಯೆ, ಗೌತಮ, ವಾಲಿ, ರಾಮ, ಹರಿಶ್ಚಂದ್ರ, ಜಲಂಧರ, ತಾರಕಾಸುರ, ಪರಶುರಾಮ, ದುರ್ಯೋಧನ, ಮುಂತಾದವರ ಕಥೆಗಳನ್ನು ಮರಳಿ ಸ್ಮರಿಸಿಕೊಳ್ಳುವಂತೆ ಹೇಳುತ್ತಾನೆ. ಮೋನಪ್ಪಯ್ಯನ ಸಾಧನೆಗಳನ್ನು ನಿರೂಪಿಸುವಾಗ ಕಥೆಗೆ ಪೂರಕವಾಗುವಂತೆ ಅನೇಕ ಶಿವಶರಣರ ಪವಾಡಮಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.

ಉದಾಹರಣೆಗೆ ಜಲದಲ್ಲಿ ಬಿದ್ದ ಲಿಂಗ ನುಲಿಯ ಚಂದಯ್ಯನ ಕೊರಳಲ್ಲಿ ಬಂದದ್ದು(೫-೮೬), ಕೆಂಭಾವಿ ಭೋಗಣ್ಣ ಲಿಂಗಗಳನ್ನು ಮರಳಿ ಗ್ರಾಮಕ್ಕೆ ತರಿಸಿದ್ದು(೫-೮೮), ವೈಷ್ಣವವಾದಿಗಳೊಂದಿಗೆ ಶಿವಲೆಂಕ

ಮಂಚಣ್ಣ ವಾದಿಸಿ ಹರಪೂಜೆಯನ್ನು ಮೆರೆದದ್ದು(೬-೪೨), ಕೆರೆಯ ಪದ್ಮರಸ ವಿಭೂತಿ ಮತ್ತು ಪಾದೋದಕ ದಿಂದ ವಿಶಾಲವಾದ ಕೆರೆಯನ್ನು ನಿರ್ಮಿಸಿದ್ದು (೭-೩೭) ಇತ್ಯಾದಿ.

೩. ವೀರಶೈವ ತತ್ವ ನಿರೂಪಣೆ : ಕಥಾನಾಯಕನಾದ ವೀರಶೈವ ಧರ್ಮಾನುಯಾಯಿಯ ಚರಿತ್ರೆಗೆ ಪೂರಕ ವಾಗಿ 'ವೀರಶೈವ ತತ್ವಗಳನ್ನು' ನಿರೂಪಿಸುವುದು ವೀರಶೈವ ಪುರಾಣದ ಮುಖ್ಯ ಲಕ್ಷಣ. ಈ ಕಾವ್ಯದಲ್ಲಿ ಮೂರನೆಯ ಸಂಧಿಯ ಸುಮಾರು ೬೦ ಸಾಂಗತ್ಯ ಪದ್ಯಗಳಲ್ಲಿ ಪ್ರಭುವು ಮೌನಯ್ಯನಿಗೆ ಇಷ್ಟಲಿಂಗ ದೀಕ್ಷೆಮಾಡಿ ವೀರಶೈವ ಷಟ್ಸ್ಥಲ ಅಷ್ಟಾವರಣ, ಪಂಚಾಚಾರ, ಇನ್ನೂರ ಹದಿನಾರು ಸಕೀಲಗಳು ಇತ್ಯಾದಿಗಳನ್ನು ಕುರಿತು ದೀರ್ಘವಾಗಿ ಉಪದೇಶಿಸುತ್ತಾನೆ.

೪. ರಾಜಕೀಯ ಅಂಶಗಳು : ಸಮಕಾಲೀನ ರಾಜಕೀಯ, ಸಾಮಾಜಿಕ, ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುವುದು ವೀರಶೈವ ಪುರಾಣಗಳ ಲಕ್ಷಣ. 'ಶರಣ ಮೋನಪ್ಪಯ್ಯ ಚಾರಿತ್ರ'ವು ಚಾರಿತ್ರಿಕವಾಗಿ, ರಾಜಕೀಯವಾಗಿ ತುಂಬ ಶ್ರೀಮಂತವಾಗಿ ನಿಲ್ಲುವ ಕಾವ್ಯ. ಆತ್ಮೋದ್ಧಾರದೊಂದಿಗೆ ಸಮಾಜೋದ್ಧಾರವನ್ನೂ ಪ್ರಮುಖವೆಂದು ಪರಿಗಣಿಸಿದ ಮೋನಪ್ಪಯ್ಯನು ಪ್ರಭುವಿನಾದೇಶದಂತೆ ದೇಶಪರ್ಯಟನೆಗೆ ಹೊರಡುತ್ತಾನೆ. ಆಗ ಮೌನಪ್ಪಯ್ಯನ ಮಹಿಮೆಯ ದರ್ಶನ ಪಡೆದ ರಾಜಕೀಯನಾಯಕ-ನಾಯಕಿಯರು ಕರ್ನಾಟಕದ ಐತಿಹಾಸಿಕ ಪುರುಷರು ಉದಾ: ಕನಕಗಿರಿಯ ದೊರೆಸಾನಿ 'ಕಾಟಮ್ಮ'ನ ಭಕ್ತಿಗೆ ಮೆಚ್ಚಿ ಅವಳ ಮಗ ಉಡಚನಾಯಕನಿಗೆ ಮೋನಪ್ಪಯ್ಯನು ಭರ್ಚಿ ಆಯುಧವನ್ನು ಕೊಟ್ಟ ಸನ್ನಿವೇಶ ಹದಿನೇಳನೆಯ ಶತಮಾನದಲ್ಲಿ ಆ ಊರು ಪಾಳೆಪಟ್ಟಿನ[೨೨] ಕೇಂದ್ರವಾಗಿದ್ದು ಉಡಚನಾಯಕನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಲಕ್ಷ್ಮೇಶ್ವರದಲ್ಲಿ ಮೋನಪ್ಪಯ್ಯನು ನೀರ ಪವಾಡ ಮೆರೆದು ಜನರಿಗಿದ್ದ ಕುಡಿಯುವ ನೀರಿನ ತೊಂದರೆಯನ್ನು ಪರಿಹರಿಸುತ್ತಾನೆ. ಅಲ್ಲಿ ಎರಡನೆಯ ಇಬ್ರಾಹಿಂ ಆಲಿ ಆದಿಲ್ ಶಾಹಿಯ ಅಧಿಕಾರಿ ಅಂಕುಶಖಾನನು ಮೋನಪ್ಪಯ್ಯನನ್ನು ಭಕ್ತಿಯಿಂದ ಗೌರವಿಸಿದ ಉಲ್ಲೇಖ ಬರುತ್ತದೆ.(ಸಂ.೭)

ತನ್ನಾಜ್ಞೆಯನ್ನು ಪಾಲಿಸಿದ 'ಲಿಂಗಪ್ಪನಾಯಕನಿಗೆ' ಸಮಾಧಿ ಪ್ರವೇಶಿಸುವ ಮುನ್ನ ಮೋನಪ್ಪಯ್ಯನು ಪ್ರಭು ಶ್ರೀರಕ್ಷೆಯಾಗಿ ತನಗೆ ನೀಡಿದ್ದ 'ಕೊಡಲಿ'ಯನ್ನು ಹರಸಿಕೊಡುತ್ತಾನೆ. ಇದೂ ಕೂಡ ಐತಿಹಾಸಿಕ ಸತ್ಯವೆಂದು ತಿಳಿದು ಬರುತ್ತದೆ. ಹೀಗೆ, ಕನಕಗಿರಿ, ಸುರಪುರ, ಲಿಂಗನಬಂಡಿ, ಮೇಧಿರಾಯನಕೋಟೆ, ಲಕ್ಷ್ಮೇಶ್ವರ, ವರವಿ, ತೊಡಕಿ ಮೊದಲಾದ ಪಟ್ಟಣಗಳನ್ನು ಸಂದರ್ಶಿಸಿ ಪವಾಡಗಳನ್ನು ಮೆರೆದು ತಿಂಥಿಣಿಯಲ್ಲಿ ಐಕ್ಯನಾದದ್ದರ ಕುರಿತು ಇಂದಿಗೂ ಕುರುಹುಗಳಿದ್ದು ಸಾಕ್ಷಿ ನುಡಿಯುತ್ತವೆ. ಹೀಗೆ ಶಂಕರಕವಿಯು ಸಾಮಾನ್ಯವಾಗಿ ಕವಿಗಳಿಗೆ ವಿರಳವೆಂದು ಹೇಳಬಹುದಾದ ಚಾರಿತ್ರಿಕ ಪ್ರಜ್ಞೆಯನ್ನು ಮೆರೆದಿರುವುದು ಹೆಮ್ಮೆಯ ವಿಷಯ.

೫. ವೀರಶೈವ ಮತಾಧಿಕ್ಯ ಸ್ಥಾಪನೆ : ಈ ಲಕ್ಷಣವನ್ನು ಕುರಿತಂತೆ ಶಂಕರಕವಿಯ ಕಾವ್ಯವೂ ವಿಭಿನ್ನವೂ, ವಿಶಿಷ್ಟವೂ ಆಗಿ ನಿಲ್ಲುತ್ತದೆ.

"ಯುಗಧರ್ಮ ಬೇರೆಯಾದಾಗ ಆ ಯುಗದಲ್ಲಿ ಬದುಕಿದ ಜನರ ಅನುಭವ-ಅಭಿರುಚಿಗಳೂ ಸಹಜವಾಗಿ ಬದಲಾಗುತ್ತವೆ. ಇವುಗಳಿಗನುಗುಣವಾಗಿ ಅಭಿವ್ಯಕ್ತಿ ಮಾಧ್ಯಮ ರೂಪಗೊಳ್ಳುತ್ತದೆ.[೨೩] ಮಧ್ಯಕಾಲಿನ ಕರ್ನಾಟಕದಲ್ಲಿ ವೀರಶೈವ ಧರ್ಮವು ಶೈವ, ವೈಷ್ಣವ, ಜೈನ ಮತಗಳ ಜೊತೆಗೆ ಮಾತ್ರವಲ್ಲ ಪ್ರಬಲವಾಗಿ ಇಸ್ಲಾಂಮತದ ಪ್ರಭಾವವನ್ನು ಎದುರಿಸಬೇಕಾಗಿ ಬಂದದ್ದು ಇತಿಹಾಸ. ಅಂಥ ಯುಗದಲ್ಲಿ ಜನ್ಮತಾಳಿದ ವೀರಶೈವ ಧರ್ಮಾನುಯಾಯಿಯಾದ ಮೋನಪ್ಪಯ್ಯನಿಗೆ ತನ್ನ ಪೂರ್ವದ ಕೊಡೇಕಲ್ಲು ಬಸವಣ್ಣ, ಎಮ್ಮೆ ಬಸವಣ್ಣನವರ ಸಮನ್ವಯ ಪಂಥವನ್ನು ಅನುಸರಿಸುವುದು ಅನಿವಾರ್ಯವಾಯಿತು. ಹಿಂದೂ-ಮುಸ್ಲಿಂ ಸಮನ್ವಯ ಪಂಥದ ಅನುಯಾಯಿಯಾಗಿ ಪವಾಡಗಳನ್ನು ಮೆರೆಯುತ್ತ ಮೋನಪ್ಪಯ್ಯನು ಹಿಂದೂ ಮತ್ತು ಮುಸ್ಲಿಂ ಅರಸರುಗಳಿಂದ ಪೂಜಿಸಿಕೊಂಡ ವಿವರಗಳು ಈ ಕಾವ್ಯದಲ್ಲಿ ವ್ಯಕ್ತಗೊಂಡಿವೆ. ಆದ್ದರಿಂದ "ವೀರಶೈವ ಪುರಾಣ ಲಕ್ಷಣ"ಗಳಿಗೆ ಭಿನ್ನವಾಗಿ "ಇಸ್ಲಾಂ-ವೀರಶೈವ ಸಮನ್ವಯ ಸಂಸ್ಕೃತಿ ಧರ್ಮ"ದ ಅನಿವಾರ್ಯತೆಯನ್ನು ತಿಳಿಸಿ ಮಾನವತಾವಾದವನ್ನು ಎತ್ತಿ ಹಿಡಿಯಲು ಶ್ರಮಿಸಿದ ಮೋನಪ್ಪಯ್ಯನ ವ್ಯಕ್ತಿತ್ವವು ನಿಜಕ್ಕೂ ದೈವೀ ಸದೃಶವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಮೂಲಕ ಶಂಕರಕವಿಯ ಪರಧರ್ಮ ಸಹಿಷ್ಣತೆ, ಸ್ವಧರ್ಮನಿಷ್ಠೆ ಯಿಂದಾಗಿ 'ಶರಣ ಮೋನಪ್ಪಯ್ಯ ಚಾರಿತ್ರ'ವು ಕಾವ್ಯಾತ್ಮಕ ಅಂಶಗಳಿಗಿಂತಲೂ ತನ್ನ ಗುಣಾತ್ಮಕತೆಯಿಂದ ಎತ್ತರಕ್ಕೇರುತ್ತದೆ.

೬. ಪವಾಡಗಳು : ಪುರಾಣಗಳು ಪವಾಡ ಭೂಯಿಷ್ಠವಾಗಿರುತ್ತವೆ. ಪುರಾಣಗಳಲ್ಲಿ 'ಅತಿಮಾನುಷ'ತ್ವಕ್ಕೆ ಪ್ರಧಾನ ಸ್ಥಾನ. ಆದ್ದರಿಂದ ಕಥಾನಾಯಕನ ವ್ಯಕ್ತಿತ್ವವನ್ನು ದೈವತ್ವದ ಅಸಾಮಾನ್ಯ ನೆಲೆಗೇರಿಸಲು ಪವಾಡಗಳನ್ನು ಹೆಣೆಯುವುದು ವೀರಶೈವ ಪುರಾಣಗಳಲ್ಲಿ ಒಂದು ಪದ್ಧತಿ ನಿಯಮದಂತೆ ರೂಢಿಯಾಗಿ ಬಂದಿರುತ್ತದೆ.. 'ಶರಣ ಮೋನಪ್ಪಯ್ಯ ಚಾರಿತ್ರ'ವೂ ಕೂಡ ಅನೇಕ ಪವಾಡಗಳನ್ನು ಮೋನಪ್ಪಯ್ಯನು ಮೆರೆದನೆಂಬುದನ್ನು ನಿರೂಪಿಸುತ್ತದೆ. ತುಂಬಿ ಭೋರ್ಗರೆಯುತ್ತಿದ್ದ ಕೃಷ್ಣಾನದಿಯನ್ನು 'ಕಾಟಿ'ಯ ಹಾಸಿ ಅದರ ಮೇಲೆ ಕುಳಿತು ಕುಣಿಯುತ್ತ ದಾಟಿದ್ದು, ಜನರನ್ನು ದಾಟಿಸಿದ್ದು, ಗೌಡನ ಬಂಗಾರ ಮನೆಯಲ್ಲೇ ದೊರೆತದ್ದು, ಸತ್ತಮಗುವನ್ನು ಬದುಕಿಸಿದ್ದು, ಘೋರ ಸರ್ಪಗಳು ದಾರಿಬಿಟ್ಟುಕೊಟ್ಟದ್ದು, ದೇವದುರ್ಗದಲ್ಲಿ ಹೆಮ್ಮಳೆಯನ್ನು ತರಿಸಿದ್ದು, ಮೇಧಿರಾಯನಕೋಟೆಯಲ್ಲಿ ಲಿಂಗ ಪವಾಡ ಮೆರೆದದ್ದು, ಶಿಲಾಮೂರ್ತಿಯಾದ ಕನಕ ಸಿದ್ಧೇಶನೊಂದಿಗೆ ಮಾತನಾಡಿದ್ದು, ಕಲ್ಲುಬಂಡಿಯ ಮೇಲೆ ಬೀಜ ಬೆಳೆದದ್ದು, ಶಿಲೆಯಲ್ಲಿ ಗೂಟನೆಟ್ಟದ್ದು, ಕಲ್ಲಿನಲ್ಲಿ ನೆಲ್ಲು ಬೆಳೆದದ್ದು, ವರವಿಯಲ್ಲಿ ಅಂಬಲಿ ಗುಂಡದ ಪವಾಡ ಮೆರೆದದ್ದು, ಎಡವಿದ ಕಲ್ಲಿನಲ್ಲಿ ಲಿಂಗದ ಕುರುಹು ತೋರಿದ್ದು, ಲಕ್ಷ್ಮೇಶ್ವರದಲ್ಲಿ ನೀರ ಪವಾಡ ಮೆರೆದದ್ದು, ತಿಂಥಿಣಿಯಲ್ಲಿ ಸಮಾಧಿಗೆಂದು ಅಗೆದ ಸ್ಥಳದಲ್ಲಿ ಉಕ್ಕಿನ ಹೂಜಿ, ಮುಕ್ಕಾಲುಮಂಚ ಗೋಚರಿಸಿದ್ದು, ಜೀವಂತ ಸಮಾಧಿ ಹೊಂದಿದ್ದು ಇತ್ಯಾದಿ. ಹೀಗೆ ಪವಾಡಗಳ ಮೂಲಕ ಮೋನಪ್ಪಯ್ಯನ ಲೋಕ ಕಲ್ಯಾಣ ಕಾರ್ಯ ಕೊನೆಗೆ ಆತ್ಮಕಲ್ಯಾಣ ಸಿದ್ಧಿಯ ಸಾಧನೆಗೆ ಸಾಕ್ಷಿಯಾಗಿ, 'ಜೀವಂತ ಸಮಾಧಿ' ನಿಲ್ಲುತ್ತದೆ.

'ಪಾರ್ಗಿಟರ್' ಹೇಳುವಂತೆ ಪುರಾಣಗಳನ್ನು "ಪ್ರಾಚೀನ ಮಧ್ಯಕಾಲೀನ ಹಿಂದೂ ಧರ್ಮದ- ಅದರ ದಾರ್ಶನಿಕ, ಚಾರಿತ್ರಿಕ, ವೈಯಕ್ತಿಕ, ಸಾಮಾಜಿಕ ಮತ್ತು ರಾಜಕೀಯ ಮುಖಗಳ ಜನಪ್ರಿಯ ವಿಶ್ವಕೋಶವೆಂದು ಕರೆಯಬಹುದು"[೨೪] ಎನ್ನುವ ಮಾತು ಶಂಕರ ಕವಿಯ "ಶರಣ ಮೋನಪ್ಪಯ್ಯ ಚರಿತ್ರೆ"ಗೆ ಅಕ್ಷರಶಃ ಒಪ್ಪುತ್ತದೆ.

ಒಟ್ಟಿನಲ್ಲಿ ಈ ಕಾವ್ಯವು ವೀರಶೈವ ಪುರಾಣ ಲಕ್ಷಣಗಳನ್ನನುಸರಿಸಿ ರಚಿತವಾಗಿದ್ದರೂ ಭಿನ್ನವಾಗಿ ನಿಲ್ಲುತ್ತದೆ. ಕಥಾನಾಯಕನು ಅವತಾರ ಪುರುಷನಂತೆ ಚಿತ್ರಣಗೊಳ್ಳದೆ, ಸಾಮಾನ್ಯ ಮಾನವನಾಗಿ ಜನಿಸಿ ಅಸಾಮಾನ್ಯ ವ್ಯಕ್ತಿತ್ವ ಪಡೆದಂತೆ ಚಿತ್ರಿತವಾಗಿರುವುದು ಹಾಗೂ ಸಮಕಾಲೀನ ಸಮಾಜದ ಮುಖವಾಣಿಯಾಗಿ ಶಂಕರಕವಿಯು 'ಕಥಾನಾಯಕ ಮೋನಪ್ಪಯ್ಯ'ನನ್ನು ಕೇವಲ ವೀರಶೈವನಿಷ್ಠನನ್ನಾಗಿ ಮಾತ್ರವಲ್ಲ ಸಮನ್ವಯ ಪಂಥದ ಸಂತನನ್ನಾಗಿ ಕಂಡರಿಸಿರುವುದು.

೩.೫. ಕೃತಿಯ ವೈಶಿಷ್ಟ್ಯ

ಶಂಕರ ಕವಿಯ 'ಶರಣ ಮೋನಪ್ಪಯ್ಯ ಚಾರಿತ್ರ'ವು ಮೋನಪ್ಪಯ್ಯನನ್ನು ಕುರಿತು ರಚನೆಯಾದ ಮೊದಲ ಶಿಷ್ಟ ಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಕವಿಯ ಮೊದಲ ಕಾವ್ಯವೂ ಇದಾಗಿದ್ದು 'ಸಾಂಗತ್ಯ'ದ ಸುಕೋಮಲ ಗುಣದ ಅಭಿವ್ಯಕ್ತಿಯನ್ನು ತಕ್ಕಮಟ್ಟಿಗೆ ಸಾಫಲ್ಯಗೊಳಿಸಿದೆ. ಶಿವಕವಿ ಹರಿಹರನ ಮಾರ್ಗದಲ್ಲೇ ಸಾಗಿರುವ ಕವಿ ಈ ಕಾವ್ಯದಲ್ಲಿ 'ಹರಿಹರ'ನ 'ಪ್ರಭು'ವಿನಂತೆ ಪ್ರಾರಂಭದಲ್ಲಿ ಲೌಕಿಕ ಸಂಬಂಧದ ಮೌನಯ್ಯನನ್ನು ಕಂಡರಿಸಿ ತದನಂತರದಲ್ಲಿ 'ಚಾಮರಸ'ನ ಪ್ರಭುವಿನಂತೆ, ಸಿದ್ಧಿಯ ಹಾದಿ ಹಿಡಿದು ಹೊರಟ ಅಲೌಕಿಕ ವ್ಯಕ್ತಿತ್ವವನ್ನು ಕಟೆದಿದ್ದಾನೆ. ತನ್ಮೂಲಕ ನಿಜವಾದ 'ಶರಣತ್ವ'ಕ್ಕೆ ತಕ್ಕ ಮಾದರಿಯನ್ನು ರೂಪಿಸಿದ ಕೀರ್ತಿಗೆ ಪಾತ್ರನಾಗುತ್ತಾನೆ. ಕನ್ನಡದ ವೀರಶೈವ ಪುರಾಣಗಳ ಹಿನ್ನೆಲೆಯಲ್ಲಿ ನೋಡಿದಾಗ 'ಶರಣ ಮೋನಪ್ಪಯ್ಯ ಚಾರಿತ್ರ'ವು ಸಾಧಿಸಿರುವ ಅನನ್ಯತೆ, ಸ್ವಂತಿಕೆಗಳು ಪ್ರಶಂಸಾರ್ಹ. ಚಾರಿತ್ರಿಕವಾಗಿ, ರಾಜಕೀಯ ವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಈ ಕಾವ್ಯ ಗಮನ ಸೆಳೆಯುತ್ತದೆ. "ಕವಿತ್ವದ ದೃಷ್ಟಿಯಿಂದ ಸಾಮಾನ್ಯ ಸಂಸ್ಕೃತಿಯ ದೃಷ್ಟಿಯಿಂದ ವಿಶಿಷ್ಟ ಕೃತಿ"[೨೫] ಎಂಬ ಮಾತು ಒಪ್ಪತಕ್ಕದ್ದೆ. ಇಷ್ಟೆಲ್ಲ ವಿಶೇಷತೆಗಳನ್ನು ತನ್ನೊಡಲಲ್ಲಿ ಅಡಗಿಸಿಟ್ಟುಕೊಂಡಿದ್ದರೂ ಈ ಕಾವ್ಯವು ಮುಂಬರುವ ಕವಿಗಳ, ಕೃತಿಕಾರರ ಮೇಲೆ ಪ್ರಭಾವ ಬೀರದೇ ಇರುವುದು ಅಚ್ಚರಿ ಮೂಡಿಸುತ್ತದೆ.

ಕೊನೆಟಿಪ್ಪಣಿಗಳು

೧. ಡಾ. ಎಫ್.ಟಿ.ಹಳ್ಳಿಕೇರಿ, (ಸಂ), ಕೋಳೂರು ಶಂಕರಕವಿಯ ತಿಂಥಿಣಿ ಮೋನಪ್ಪಯ್ಯನ ಚಾರಿತ್ರ, ಪ್ರಸ್ತಾವನೆ, xvi, ೨೦೦೭

೨. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೩

೩. ಡಾ. ಎಂ.ಬಿ.ಕೊಟ್ರುಶೆಟ್ಟಿ, (ಪ್ರ.ಸಂ), ತಿಂಥಿಣಿ ಮೌನೇಶ್ವರರ ವಚನಗಳು, ಮುನ್ನುಡಿ ಪು. ೧

೪. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೧೩

೫. ಡಾ. ಎಫ್.ಟಿ.ಹಳ್ಳಿಕೇರಿ, (ಸಂ) "ಶರಣ ಮೋನಪ್ಪಯ್ಯ ಚಾರಿತ್ರ" ಪ್ರಸ್ತಾವನೆ ಪು. ೨೮

೬. ಡಾ. ಎಫ್.ಟಿ.ಹಳ್ಳಿಕೇರಿ (ಸಂ), ಶರಣ ಮೋನಪ್ಪಯ್ಯ ಚಾರಿತ್ರ, ಪ್ರಸ್ತಾವನೆ, ಪು. ೨೬

೭. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೮೩

೮. ಡಾ. ಕಪಟರಾಳ ಕೃಷ್ಣರಾಯರು, ಸುರಪುರ ಸಂಸ್ಥಾನದ ಇತಿಹಾಸ, ಪು. ೧೧೮

೯. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು. ೯೬

೧೦. ಅದೇ, ಪು. ೯೬

೧೧. ಅದೇ, ಪು. ೬೭

೧೨. ಅದೇ, ಪು. ೬೩

೧೩. ಅದೇ, ಪು. ೯೨

೧೪. ಮೂಲ: ಅ.ಸುಂದರ, ಸಂಯುಕ್ತ ಕರ್ನಾಟಕ (೧-೮-೧೯೮೯) ಇತಿಹಾಸ ಮರೆತ ಪುಟಗಳು.

೧೫. ಸಿ.ಬಿ.ಕಡಕೋಳ, ಕೆ.ಪಿ.ಈರಣ್ಣ (ಸಂ) ತಿಂಥಿಣಿ ಮೋನಪ್ಪಯ್ಯನ ವಚನಗಳು, ಪ್ರಸ್ತಾವನೆ, ಪು. ೧೮

೧೬. ಡಾ. ಡಿ.ಎಸ್.ಕರ್ಕಿ, ಕನ್ನಡ ಛಂದೋವಿಕಾಸ, ಪು. ೨೧೦

೧೭. ಡಾ. ಡಿ.ಎಸ್.ಕರ್ಕಿ, ಛಂದೋವಿಕಾಸ, ಪು. ೨೧೨

೧೮. ಡಾ. ಎಸ್.ವಿದ್ಯಾಶಂಕರ ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೧೧೩

೧೯. ಅದೇ, ಪು. ೧೨೦

೨೦. ಅದೇ, ಪು. ೧೨೦

೨೧. ಅದೇ, ಪು. ೧೨೧

೨೨. ಡಾ. ಎಂ.ಎಂ.ಪಡಶೆಟ್ಟಿ, ತಿಂಥಿಣಿ ಮೋನಪ್ಪಯ್ಯ, ಪು. ೯೭

೨೩. ಡಾ. ಬಿ.ಆರ್.ಹಿರೇಮಠ, ಹರಿಹರನ ಭಕ್ತಿ ತರಂಗಿಣಿ, ಪ್ರಸ್ತಾನವೆ, ಪು. ೨೪

೨೪. ಡಾ. ಸಿ.ಪಿ.ಕೃಷ್ಣಕುಮಾರ್, ಪುರಾಣಗಳ ಸ್ವರೂಪ, ಪು. ೨

೨೫. ಡಾ. ಎಫ್.ಟಿ.ಹಳ್ಳಿಕೇರಿ, (ಸಂ), ತಿಂಥಿಣಿ ಮೋನಪ್ಪಯ್ಯ ಚಾರಿತ್ರ, ಪ್ರಸ್ತಾವನೆ, ಪು. ೨೯

ಅಧ್ಯಾಯ ೪

ಬೆಜ್ಜವಾಡಿ ಮಾಧವಾಂಕ ಕಾವ್ಯ

ಅಧ್ಯಾಯ ೪

ಬೆಜ್ಜವಾಡಿ ಮಾಧವಾಂಕ ಕಾವ್ಯ

೪.೧. ಕೃತಿಯ ಸ್ವರೂಪ

ಕೋಳೂರು ಶಂಕರಕವಿ ವಿರಚಿತ ಬೆಜ್ಜವಾಡಿಮಾಧವಾಂಕ ಕಾವ್ಯವು ೨೪ ಸಂಧಿ ೧೫೧೧ ವಾರ್ಧಕ ಷಟ್ಪದಿಗಳನ್ನೊಳಗೊಂಡ ಕಾವ್ಯ. ಅತ್ಯಂತ ಪುರಾತನವಾದ ಸತ್ಯೇಂದ್ರಚೋಳ ಚಾರಿತ್ರದ ಕಥೆಯನ್ನು ವಸ್ತುವಾಗಿರಿಸಿಕೊಂಡು ರಚನೆಗೊಂಡಿರುವ ಕೃತಿ.

ಶಂಕರ ಕವಿಯು ಈ ಕೃತಿಯ ರಚನಾ ಕಾಲವನ್ನು ಸ್ಪಷ್ಟವಾಗಿ ಹೀಗೆ ತಿಳಿಸಿದ್ದಾನೆ.

"ನೆರೆಶಾಲಿವಾಹನಶಖ ಸಹಸ್ರದಾನೂರೊ
ಪರಿಯಯಪ್ಪತ್ತುವಂಭತ್ತನೆಯಮೀಶ್ವ
ವರನಾಮಸಂವತ್ಸರದ ಜ್ಯೇಷ್ಠ ಬಹುಳ ಸಪ್ತಮಿಯ ಬುಧವಾರ
ನಿರುತಸ್ಸುಶ್ರವಣನಕ್ಷತ್ರ ಶುಭಲಗ್ನದೊಳುಮೆಸೆವಾ
ಪರಮ ಶ್ರೀ ಮಾಧವಾಂಕನ ಕಾವ್ಯ ಸಂಪೂರ್ಣ"
.... (ಸಂ. ೨೪, ಪ. ೭೬)

ಅಂದರೆ ಶಾಲಿವಾಹನಶಕ ೧೬೭೯ನೆಯ ಈಶ್ವರನಾಮ ಸಂವತ್ಸರದಲ್ಲಿ ಈ ಕಾವ್ಯ ಸಂಪೂರ್ಣವಾಗಿದೆ. ಮೊದಲ ಸಂಧಿಯಲ್ಲಿ 'ಪಲ್ಲ' ಎಂದು ಸೂಚಿಸಿ

ಶ್ರೀವಿಮಲಸತ್ಯದಾಗರ ಬೆಜ್ಜವಾಡಿಯೊಳು
ಭೂಮಿಸುತ ಮಾಧವಾಂಕನು ಕೊಲೆಗೆ ಕೊಲೆಯಿತ್ತು
ದೇವ ದೇವೇಶನಂ ಮೆಚ್ಚಿಸಿದ ಸತ್ಕಥೆಯ ಕೇಳಿ ಸುಜನರು ಒಲವಿನಿಂ (೧ ಪಲ್ಲ)

ಎಂದು ವಿನಂತಿಸಿಕೊಳ್ಳುತ್ತಾ ತನ್ನ ಕೃತಿಯ ವಸ್ತುವಿನ ನಿರ್ದೇಶನ ಮಾಡುತ್ತಾನೆ. ತದನಂತರದ ಸಂಧಿಗಳ ಆದಿಯಲ್ಲಿ 'ಪದನೂ' ಎಂಬಲ್ಲಿ ಆಯಾ ಸಂಧಿಯು ಒಳಗೊಳ್ಳುವ ಕಥಾಂಶವನ್ನು ಸಂಕ್ಷಿಪ್ತವಾಗಿ ಹೇಳುತ್ತಾನೆ.

"ಪ್ರತಿಯೊಂದು ಸಂಧಿಯ ಕೊನೆಯಲ್ಲಿ
ಯೀ ಸತ್ಕಥೆಯನಮಲಶರಣ ಕೋಮಲಪಾದ
ಶ್ರೀ ಶತದಳಾಂಕಮಸ್ತಕನೆನಿಪ ಬಸವರಸ
ನಾ ಸತ್ಕುಮಾರಭೂರುದ್ರಕುಲಗಗನ ಮಣಿಯೆನಿಪ ಕುಪ್ಪಸ ಕಂಥೆಯಾ ||
ಪಾಶಜಿತ ಗುರುವಾರ್ಯ ಕರಕಮಲಸಂಜಾತ
ಭೂಪತಿಗೆ ವದನವೆಂದೆನಿಪ ಕೋಳೂರ ರಾ
ಮೇಶನೊಲವಿಂ ಪೇಳ್ದಸತ್ಯಚಿಂತಾಮಣಿಯು ಶಂಕರಸುಜನಕಿಂಕರಂ"

ಎಂದು ತಾನು 'ಕುಪ್ಪಸಕಂಥೆ ಗುರುವರ್ಯರ ಕರಕಮಲ ಸಂಜಾತನೆಂದೂ ತನ್ನ ಆರಾಧ್ಯದೈವ 'ಕೋಳೂರು ರಾಮೇಶ' ನೆಂದೂ ಸ್ಮರಿಸುತ್ತಾನೆ.

ಕಥಾಸಾರ ಸಂಧಿ ೧ : ಕವಿಯು ಆರಾಧ್ಯದೈವ ಶ್ರೀಕೋಳೂರು ರಾಮೇಶನು ಕೃತಿಗವಿಘ್ನವನು (೧-೫) ಕೊಡಲೆಂದು ಪ್ರಾರ್ಥಿಸುತ್ತಾನೆ. ಶ್ರೀಗೌರಿ, ಗಣೇಶ, ಷಣ್ಮುಖ, ವೃಷಭೇಶ, ಭೃಂಗೀಶ ವೀರಭದ್ರರು ತನ್ನ ಜ್ಞಾನದೆಡರನ್ನು ಪರಿಹರಿಸಲೆಂದು ಬೇಡುತ್ತಾನೆ. ಬಸವೇಶ, ಧೂಳಯ್ಯ, ಘಟ್ಟಿವಾಳಯ್ಯ, ಸೊಡ್ಡಳಬಾಚರಸ, ಮಡಿವಾಳ ಮಾಚಿದೇವ ಮುಗ್ಧಗೊಲ್ಲಾಳ, ಕಿನ್ನರಯ್ಯ, ಚನ್ನಬಸವಣ್ಣ, ಚೀಲಾಳ ಮುಂತಾದ ಶರಣರನ್ನು ಸ್ತುತಿಸಿ "ವಾಕ್ಚತುರತೆ"ಯನ್ನು ಬೆಸಗೊಳ್ಳುತ್ತಾನೆ. (೧-೧೨, ೧೩) 'ಬಾಣ' ಮಲುಹಣ, ಮಲೆಯರಾಜ, ಗುರ್ಜ್ಜರ, ಮಯೂರ, ಪದ್ಮರಸ, ಕೇಶಿರಾಜ, ಉದ್ಭಟ, ಪಾಲ್ಕುರಿಕೆ ಸೋಮನಾಥ, ಹರಿಹರ, ರಾಘವಾಂಕ, ಚಾಮರಸ, ಭೀಮಕವಿ (೧-೧೪) ಮೊದಲಾದ ಶಿವಕವಿಗಳನ್ನು ಸ್ಮರಿಸುತ್ತಾನೆ.

ಛಂದಸ್ಸು ವ್ಯಾಕರಣ ಶಬ್ದ ನಾನಾರ್ಥ ಪ್ರ
ಬಂಧಾದಿಲಕ್ಷಣಾಲಂಕೃತಿ ಚಮತ್ಕೃತಿಯು
ಬಿಂದುವಡಿ ಪ್ರಾಸಗುರುಲಘು ಪದಛ್ಛಾಯೆ ಗಣನಾಮ ವಿಷವಮೃತಾಕ್ಷರಾ
ಒಂದೊಂದು ಭೇದಗಳನೋದಿ ಕಲಿತವನಲ್ಲ ತನಗೆ ರಾಮೇಶ್ವರನ
.... (೧-೧೫)

ಕೃಪೆಯೇ ಈ ಕಾವ್ಯರಚನೆಗೆ ಪ್ರೇರಣೆ ಎಂದು ತಿಳಿಸುತ್ತಾನೆ.
ಪಾಡುವೆನೆ ನರರ ಕೊಂಡಾಡುವೆನೆ ಜಡರುಗಳ (೧-೧೭)
ಪಾಡಿಕೊಂಡಾಡಿ ಬೇಡುವೆ ಶಿವನೆ ನಾ ನಿಮ್ಮ (೧-೧೭)

ಎಂದು ಭಜಿಸುತ್ತಾ ತಾನು 'ಹರಿಹರ'ನ ಕಟ್ಟಾನುಯಾಯಿ ಎಂಬುದನ್ನು ಸಾರುತ್ತಾನೆ. ಸಮುದ್ರವರ್ಣನೆಯೊಂದಿಗೆ ಕಾವ್ಯವು ವಿದ್ಯುಕ್ತವಾಗಿ ಆರಂಭಗೊಳ್ಳುತ್ತದೆ. ಭರತಖಂಡದ ವಂಗ ಕಳಿಂಗ ಬರ್ಬ್ಬರ ಕಾಂಬೋಜ ಕಾಶ್ಮೀರ ಸೌರಾಷ್ಟ್ರಾದಿ ಛಪ್ಪನ್ನ ದೇಶಾಳಿಯೊಳಗೆ ಆಂಧ್ರದೇಶ(೧-೨೭)ವು ಸಜ್ಜನನಿವಾಸವಾಗಿ ಮೆರೆಯುತ್ತಿತ್ತು.

ಸಕಲಸೌಭಾಗ್ಯಗಳಿಗೆ ಮೈಯಾಂತು ರಾರಾಜಿಸುತ್ತಿದ್ದ ಅಲ್ಲಿನ 'ಬೆಜ್ಜವಾಡಿ'ಯು ಸತ್ಯಕ್ಕೆ ನೆಲೆವನೆಯಾಗಿತ್ತು,[೧೦] (೧-೨೯) ಲಿಂಗಾಲಯವೆನಿಸಿತ್ತು (೧-೩೨) ತ್ರಿಜಗಕ್ಕೆ ತಾಯಿವನೆಯೆನಿಸಿ ಚೆಲುವಾಂತ ಬೆಜ್ಜವಾಡಿಯ ಸಂಪತ್ತು, ಸಮೃದ್ಧಿ ಬಣ್ಣಿಸಲಸದಳ! ಕ್ಷಿತಿಗೆ ಅಮರಾವತಿಯಂತಿದ್ದ ಆ ಪಟ್ಟಣವನ್ನು ಆಳುತ್ತಿದ್ದವನು, 'ಹರಿಹರರಾಯ'ನೆಂಬ ಕ್ಷತ್ರಿಯೋತ್ತಮ. ಅತಿನೀತಿಧರ್ಮ ಸಂಮ್ಮತನೂ ಉನ್ನತ ಶೈವಸಂಪನ್ನನೂ, ಅಪ್ರತಿಮ ಗಂಭೀರನೂ ಶೂರನೂ ಆಗಿದ್ದನು. ಆತನ ಪತ್ನಿ ತರುಣಿಯರ ಕುಲಶಿರೋಮಣಿ(೧-೧೪)ಯೆನಿಸಿದ್ದ ಪತಿಭಕ್ತೆ ರಾಣಿ ಲಲಿತಾಂಗಿ, ಈರ್ವರೂ ದೇಹವೆರಡು ಜೀವ ಒಂದೆಂಬಂತೆ ಬಾಳುತ್ತಿದ್ದರು. ಅವರಿಗೆ ಅವರ ಸಂತತಿಯಲ್ಲಿಯೇ ಅಧಿಕ ಮಂದಮತಿಯೆನಿಸಿದ ಒಬ್ಬ ಮಗ ಮತ್ತು 'ಸಕಲಕಲಾನ್ವಿತೆ'ಯಾಗಿದ್ದ 'ಮಾದಾಂಜ' (೧-೪೩) ಎಂಬ ಹೆಸರಿನ ಮಗಳಿದ್ದಳು. ಹರಿಹರರಾಯನು ಸಕಲದೇಶದ ಕಪ್ಪಕಾಣಿಕೆಗಳನ್ನು ಸ್ವೀಕರಿಸುತ್ತ ಸುಖದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು.

ಸಂಧಿ ೨ : ದ್ವಿಜರ ಪೋಷಣೆ ಶರಣರ ಆರಾಧನೆ ಶಿವಭಜನೆ ಶಿವಗೋಷ್ಠಿಗಳನ್ನು ನಡೆಸುತ್ತ ಹರಿಹರರಾಯನು ಧರ್ಮವನ್ನು ಪಾಲಿಸುತ್ತಲಿದ್ದನು. (೨-೩) ಹೀಗಿರಲು ಒಂದು ದಿನ ಮಂತ್ರಿಮನ್ನೆಯರೊಡನೆ ಸಭೆಯಲ್ಲಿ ಕುಳಿತಿರುವಾಗ ಆಡುತ್ತಬಂದ ಮಗನನ್ನು ಕಾಣುತ್ತಾನೆ. ಪರಮ ಸಂತೋಷದಿಂದ ಅರಸನು ಈ ತರಳನಿಗೆ ವೇದ ವಿದ್ಯೆ ಕಲಿಸಲು ತಕ್ಕ ಪಂಡಿತರನ್ನು ಹುಡುಕಿರಿ ಎಂದು ಮಂತ್ರಿಗೆ ಆದೇಶಿಸುತ್ತಾನೆ. ಸಚಿವರ ಆಣತಿಗೆ ಓಗೊಟ್ಟು ಸಿರಮೂರಿಲ್ಲದ ಅಬ್ಜಸಂಭವನಂತಿದ್ದ ಭಸ್ಮಧಾರಿ ಪುಸ್ತಕವನಾಂತು (೨-೫ ಮತ್ತು ೬) ಗುರುವರ್ಯರು ಆಗಮಿಸುತ್ತಾರೆ. ಅವರಿಗೆ ವಿಮಲಾಸನವನ್ನಿತ್ತು ವಿನಯೋಪಚಾರಗಳಿಂದ ತಣಿಸಿ.... ನಂಮ ಸಂತತಿಗೆಲ್ಲವೋರ್ವ್ವಕುವರಾ ಪುಟ್ಟಿಹನುವಲಿದು ವಿದ್ಯವನರುಹಬೇಕೆಂದು (೨-೯) ಪಟ್ಟದರಸನು ತನ್ನ ಪುತ್ರನನ್ನು ಕರೆದು ಗುರುವಿನ ಪದತಲಕ್ಕೆ ಕೆಡಹುತ್ತಾನೆ. ಗುರುಗಳು ತಮ್ಮ ಹಸ್ತವನ್ನು ಆ ಮಗುವಿನ ಮಸ್ತಕಾಗ್ರದಲ್ಲಿರಿಸಿ ಹಿಗ್ಗಿನಿಂದ 'ವಿದ್ಯಾರಂಭ'ಕ್ಕೆ ವರಗಣಪತಿಯ ಆರಾಧನೆಗೆ ಶುಭಲಗ್ನವನ್ನು ನಿಯಮಿಸುತ್ತಾರೆ. ಅತ್ಯುತ್ಸಾಹ, ಭಕ್ತಿ, ವೈಭವಗಳಿಂದ ಗಣಪತಿಯ ಪೂಜೆ ನೆರವೇರುತ್ತದೆ. ಸಕಲರ ಸಮ್ಮುಖದಲ್ಲಿ ಪಂಡಿತರು ರಾಜಸುತನ ಕೈವಿಡಿದು ಸಕಲ ಮಂತ್ರವೇದ ಶಾಸ್ತ್ರಗಳಿಗಾದಿಯಾದ ಪ್ರಣಮವೆರಸಿದ ಓಂ ನಮಃ ಶಿವಾಯ ಎಂಬ ಷಡಕ್ಷರವನ್ನು ಬರೆಸುತ್ತಾರೆ. ಹೀಗಿರಲು ಒಂದು ದಿನ ಪಂಡಿತರು ಮುಖ್ಯಾಕ್ಷರಂಗಳನ್ನು ಬರೆಸುತ್ತಿರುವ ಸಂದರ್ಭ, ಬಡತನವೇ ಮೈವೆತ್ತಂತಿದ್ದ ಒಬ್ಬವಿಧವೆ ಸೋಮಲೆ ಎಂಬುವವಳು ಭಸ್ಮಧರಿಸಿದ ಚಿಂದಿಯುಟ್ಟ 'ಮಾಧವ'ನೆಂಬ ಮಗನೊಂದಿಗೆ ಆಸ್ಥಾನಕ್ಕೆ ಬರುತ್ತಾಳೆ ತನ್ನ ವೃತ್ತಾಂತವನ್ನೆಲ್ಲವನ್ನು ಹೀಗೆ ನಿವೇದಿಸಿಕೊಳ್ಳುತ್ತಾಳೆ. ಆಕೆಯ ಪತಿ ಮುಕ್ತಿಯನ್ನು ಬಯಸಿ ವಾರಣಾಸಿಗೆ ಹೋದದ್ದು ಮಾತಾ ಪಿತೃಗಳಾದಿಯಾಗಿ ಬಂಧುಮಿತ್ರರೆಲ್ಲರೂ ದೂರಸರಿದದ್ದು ಆಕೆಯ ಬಡತನವನ್ನು ಲೇವಡಿ ಮಾಡಿದ್ದು,

ಶರಧಿಯ ಮುಳುಗಬಹುದು, ಗರಳವಕುಡಿಯಬಹುದು
ಹರಣಮಂ ಬಿಡಲಿಬಹುದು.........

ನೆರೆ ದರಿದ್ರತ್ವವೆಡೆಗೊಂಡಾಗ ನಂಟರೊಳು
ತಿರಿದುಂಡು ಜೀರ್ಣವಸ್ತ್ರವನುಟ್ಟಿಹುದೆ ಕಷ್ಟ
ತರಳನಿರ್ದ್ದಪನು ನಿಮಗೊಪ್ಪಿಸಿಯೆ ಹರಣಮಂ ಬಿಡುವೆನೆಂದೊರಲ್ದು (೨-೪೮)
ರೋದಿಸುತ್ತಾಳೆ. ಅವಳ ದುಃಖವನ್ನಾಲಿಸಿದ ಭೂಸುರನು ಕರುಣಾನ್ವಿತನಾಗಿ
ಯಾಕೆ ಅತ್ತಪೆತಾಯೆ ಮುಂನ ವಿಧಿಬರದಿರ್ಪ್ಪ
ವಾಕು ತಪ್ಪಿದದಾರಿಗಿದು ನಿಂನ್ನ ಪಾಡೇನು (೨-೪೯)

ಎಂದು ಕಂಬನಿದೊಡೆದು ಶೋಕಸೈರಿಸೆಂದು ಸಂತೈಸುತ್ತಾನೆ. ಈ ಮೊದಲು ವಿಧಿವಶದಿಂದ ಬಳಲಿದ ಹರಿಶ್ಚಂದ್ರ ಚಂದ್ರಮತಿ ಸೀತೆ ರಾಮರು ನಳ ದಮಯಂತಿಯರು, ರತಿ ಮನ್ಮಥರು ಕುಂತಿಯಾದಿಯರ ವೃತ್ತಾಂತಗಳನ್ನು ಕಣ್ಕಟ್ಟುವಂತೆ ತಿಳಿಸಿ ಅತಿಕಷ್ಟ ಬಂದಾಗ ದ್ರುತಿವಿಡಿಯೆ ಶಿವನು ಶಾಶ್ವತವಲಿವನಲೆ ಕೇಳಾ (೨-೫೪) ಎಂದು ಉಪದೇಶಿಸಿದನು. ದಾರಿದ್ರ್ಯವೆಂದು ಚಿಂತಿಸದಿರು, ಈ ಗಂಡುಮಗ ಬೆಳೆದು ಬಡತನವನ್ನೆಲ್ಲ ನೀಗಿಸುವನು. ಕುಸುಮದ ಮೊಗ್ಗೆಯೊಳಗೆ ಪರಿಮಳ ಮರೆಗೊಂಡಂತೆ (೫೮) ನಿನ್ನ ಮಗನಿದ್ದಾನೆ. ಇವನ ಮಹಿಮೆಯನ್ನು ಆ ಪರಶಿವನೆಬಲ್ಲ, ಪ್ರಕಟದಿಂ ಭ್ರಷ್ಟ ಗುಪ್ತದಿಮುಕ್ತ.... (೨-೫೯) ಎಂಬ ನೀತಿಯನ್ನರಿತು ನಿಶ್ಚಿಂತೆ ಯಾಗಿ ತೆರಳು. ನಿನ್ನ ಪುತ್ರನು ''ಐಶ್ವರ್ಯಕರಸಹನು... ಪರರಿಗುಸುರಲಿಬೇಡ''ವೆಂದು (೨-೬೦) ಆಕೆಯನ್ನು ಬೀಳ್ಕೊಡುತ್ತಾನೆ. ರಾಜಪುತ್ರನೊಂದಿಗೇ 'ಮಾಧವ'ನಿಗೂ ವಿದ್ಯೆಗಲಿಸಲಣಿಯಾಗುತ್ತಾನೆ.

ಸಂಧಿ ೩ : ಒಂದು ದಿನ ಪಂಡಿತನು ಅರಸುಕುವರನನ್ನೂ ಮಾಧವನನ್ನೂ ಪರೀಕ್ಷೆಗೊಳಪಡಿಸುತ್ತಾನೆ. ಅರಸುಕುಮಾರನು ಪಂಡಿತರು ಕೇಳಿದ್ದಕ್ಕೆಲ್ಲ ಉತ್ತರಿಸದೆ ಕಪಿಚೇಷ್ಟೆಗೈಯುತ್ತಾನೆ. ಅರಸನಿಗೊಬ್ಬನೇ ಸುತನಿವನು ಬಡಿದುಕಲಿಸಲಾಗದು ಎಂದು ಚಿಂತಿಸುತ್ತಾನೆ. ಮಾಧವನು ಕಿಂಕರಭಾವದಿಂದ ಕಲಿಸಿದ್ದೆಲ್ಲವನ್ನೂ ಚಾಚೂತಪ್ಪದೆ ಒಪ್ಪಿಸುತ್ತಾನೆ. ಮಮತೆಯುಕ್ಕಿ ಹರಿಹರನು ರಾಘವಾಂಕನಿಗೆ ಕಲಿಸಿದಂತೆ ಪಂಡಿತನು ಶಬ್ದಾದಿಶೃತಿ ತತ್ವಾರ್ಥಮು ಮನುತಾನೊಂದುಳಿಯದಂತೆ... (೩-೯) ಕಲಿಸಿಕೊಡುತ್ತಾನೆ.

ಇಂಥದೇ ಒಂದು ಹಗಲಿನಲ್ಲಿ ಅರಸನು ಮಂತ್ರಿ ಸಕಲರೊಡಗೂಡಿ ವಿಘ್ನರಾಜನಾಲಯಕ್ಕೆ ಬರುತ್ತಾನೆ. ಪಂಡಿತರು ನಮಸ್ಕರಿಸಿ ಕುಳ್ಳಿರೆಂದು ಹರಸುತ್ತಾರೆ. ರಾಜನು ಪ್ರೀತಿಯಿಂದ ಮಗನನ್ನು ಕರೆದು ಬಲದೊಡೆಯ ಮೇಲೆ ಕುಳ್ಳಿರಿಸಿಕೊಂಡು ನೀ ಕಲಿತುದುಚ್ಚರಿಸಿಂದು ವಲವಿನಿಂ.... (೩-೧೧) ಎಂದು ಕೇಳುತ್ತಾನೆ. ಗೃಹಸೋಂಕಿ ದವರಂತೆ ಆ ನೃಪಸುತನು ತುಟಿ ಮಿಸುಕದೇ ನಿಂತುಬಿಡುತ್ತಾನೆ. ಮತ್ತೆ ಮತ್ತೆ ಕೇಳಿದರೂ ಅದೇ ಪ್ರತಿಕ್ರಿಯೆ. ಕೋಪದಿಂದ ಮಗನನ್ನು ಜರಿದು ಇತರರನ್ನು ಒಬ್ಬೊಬ್ಬರಾಗಿ ಕರೆದು ಪರೀಕ್ಷಿಸುತ್ತಾನೆ. ಮಾಧವನು ತುಂಬ ಚಟುಲತ್ವದಿಂದ ಉತ್ತರಿಸುತ್ತಾನೆ.

ಆರಮಗನಿವನಖಿಲವಿದ್ಯಮುಮನೆಲ್ಲಕೈ

ಸೂರೆಗೊಂಡಿಹನೆಂದು (೩-೧೩) ಧಾರುಣೇಶ್ವರನು ಪ್ರಶ್ನಿಸಲು ಪಂಡಿತನು ರಾಹು ಸೋಕಿದ ಚಂದ್ರನಂತಾಗುತ್ತಾನೆ. ಕುಂದಿದಮುಖದಿಂದ ಬಡವಿಭಿಕ್ಷುಕಿಯೊಬ್ಬಳ ಮಗನಿವನೆಂದುತ್ತರಿಸುತ್ತಾನೆ..... ಮಿಗೆ

ಮಂದಮತಿಮಕ್ಕಳೆನಿಬರಿರ್ದ್ದಡೇನು....(೩-೧೪) ಎಂದು, ನಿಡುಸುಯ್ಯುತ್ತಾ ಮಾಧವನನ್ನು ನೋಡಿ...... ಮಗನೊಬ್ಬನಿಂತು ಸತ್ಪ್ರೌಢಕೋವಿದಚೆಲ್ವನಿರಲವರಕುಲಪಾವನಂ (೩-೧೪) ಎಂದು ಮೆಚ್ಚುಗೆಯಿಂದ ಹೊಗಳುತ್ತಾನೆ. ಈ ಬ್ರಾಹ್ಮಣನಿಗೆ ನಾನು ಹೊನ್ನು, ವಸ್ತ್ರ, ಮಣಿಹಾರ, ವಿಮಲಾಶ್ವಕೃಷಿ ಮುಖ್ಯವಾದವು ಗಳನ್ನೆಲ್ಲ ಇತ್ತೆ ಕುಮಾರಂಗೆ ವಿದ್ಯೆಗಲಿಸಲಿ ಎಂದು ಮಾಧವಂಗಿಂದ ಕಡೆಯಾಯಿತೇ ಎಂದು ಕೋಪಾಗ್ನಿ ಉಕ್ಕಿ ಹಲ್ಲುಕಡಿದು ವಿಪ್ರನನ್ನು ಜರಿಯುತ್ತಾನೆ. ತಿದ್ದುವದು ಸಹಜ ಫಲಿಸುವುದುಮವರವರ ಪ್ರಾಪ್ತಾನು ಸಾರಣೆಯಬಲದಿಂ (೩-೨೪) ಎಂದು ಪುರಜನರು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಾರೆ.

ಇತ್ತ ಆ ಬ್ರಾಹ್ಮಣ ಪಂಡಿತನು... ಮಾಧವನುಮಿಗೆ ಸಸಿನೆ ಬಹುವಿದ್ಯೆಯಂಕಲಿತಕಾರಣದಿ ತನಗಿನಿ ತುಸಿಕ್ಷೆಯಾದುದೂ (೩-೨೫) ಯಿವನಿಂದ ಬಹುದೇನು (೩-೨೬) ಇವನನ್ನು ಕೊಂದರೂ ವಿಚಾರಿಸುವವರು ಯಾರೂ ಇಲ್ಲ. ಕೊಲ್ಲುವುದೇ ಸರಿ (೩-೨೬) ಎಂದು ತನ್ನ ಮನದೊಳಗೆ ನಿಶ್ಚಯಿಸುತ್ತಾನೆ. ಉಪಾಯ ಹುಡುಕುತ್ತಾನೆ. ಸೂರ್ಯಾಸ್ತವಾಗಲೆಂದು ಕುಟಿಲಸರ್ಪದಂತೆ ಹೊಂಚುಹಾಕುತ್ತಾ ಕುಳಿತುಕೊಳ್ಳುತ್ತಾನೆ.

ಸಂಧಿ ೪ : ......ದುರ್ಜನರ ಸರ್ವಾಂಗ ವಿಷಮಯ ಎಂಬಂತೆ ಧೂರ್ತತ್ವದಿಂದ ಆ ಬ್ರಾಹ್ಮಣಪಂಡಿತನು ಕಣ್ಮುಚ್ಚಿಕುಳಿತ ಬಕನಂತೆ ದುರುಳಯೋಚನೆಗೈದು ''ಆಮಾಧವನನ್ನು ಕೊಲ್ಲಬೇಕೆಂದು ಯೋಚಿಸು ತ್ತಿರಲು''.... ತರಳನಂ ಕೊಲ್ಲುವುದು ಅನ್ಯಾಯಮೆಂದಿರದೆ (೪-೪) ಸೂರ್ಯನು ಪಶ್ಚಿಮಕ್ಕಿಳಿಯುತ್ತಾನೆ. ಆ ಕಾಲದಲ್ಲಿ ಓದಿನಲ್ಲಿ ನಿರತರಾದ ಬಾಲಕರನ್ನು ಬೀಳ್ಕೊಟ್ಟು ಕಪಟತನದಿಂದ ಎಲವೋ ಮಾಧವಾ...

''........... ಶಿಶ್ರೂಷೆಗೈವರೊಳು
ಪರಮವಿಶ್ವಾಸಿಗಳ್ ನಿನಗಧಿಕರೆನಗಿಲ್ಲ
ಗುರುವಿನಾಜ್ಞೆಯಮೀರದವನು ಸದ್ಭಕ್ತಿಭಾವಜ್ಞ ಸುಜ್ಞಾನಮನೂ || (೪-೧೧)

ನಾನು ಈ ಹೊತ್ತು ಹಗಲಿನಲ್ಲಿ 'ಶಕ್ತಿಯಾಲಯ'ದಲ್ಲಿ ಪುಸ್ತಕವೊಂದನ್ನು ಮರೆತು ಬಂದಿರುವೆ. ಈ ಊರಿಗೆ ತುಂಬ ದೂರವಿದೆ ಆ ಮಾರಿಗುಡಿ. ವೇಳೆ ಮೀರಿದೆ, ಘೋರಾಂಧಕಾರ ಕವಿದಿದೆ ನನಗೆ ದಾರಿಕಾಣದು, ಹಿಂದೆಗೆಯದೆ ನೀನುಪುಸ್ತಕವ ತರುವೆಯಾದೊಡೆ ಮುಕ್ತಿಗೆ ಪಾತ್ರನಾಗುವೆ ಎಂದು ಆ ಕ್ರೂರಿ ಬ್ರಾಹ್ಮಣನು ಹೇಳಿದ ಮಾತನ್ನು ಮಾಧವನು ನಿಜವೆಂದೇ ನಂಬುತ್ತಾನೆ. ಗುರುವಾಕ್ಯಗಳನ್ನು ಪಾಲಿಸಿ ಮುಕ್ತಿ ಪಡೆದವರುಂಟು. ಮೀರಿಶಾಪಕ್ಕೊಳಗಾದವರೂ ಉಂಟು. ''ಪರಮ ಪಾತಕವುಮವರಾಜ್ಞೆಯಂ ಮೀರಿದಡೆಯಕ್ಷದನರಕ ಮೆಂದೂ'' (೪-೧೫) ಅರಿತುಕೊಂಡು ಭಾವದೊಳು ಶಿವನನಿರಿಸಿ, ಗಣಪತಿಗೆ ವಂದಿಸುತ್ತ, ಗುರುವಿನಿಂದ ಬೀಳ್ಕೊಂಡು ಮಾರಿಗುಡಿಗೆ ಹೊರಡುತ್ತಾನೆ.

ಚಾರುಸದ್ಭಕ್ತಿಭಾವದೊಳು ಸುಜ್ಞಾನಮಯನಿರ್ಮಲಸುಚಿತ್ತನಾಗಿ
ಮಾರಾರಿಯೊಲವಿನಿಂ ಮುಂನಶೂಲಕೆನಡೆದ
ಸಾರಗುಣನಿಧಿಗುಂಡ ಬ್ರಹ್ಮಯ್ಯನಂತೆ....(೪-೧೯)

ಪರಶಿವನು ಅವನ ಮನಸ್ಸನ್ನು ಪರೀಕ್ಷಿಸಲುದ್ಯುಕ್ತನಾಗುತ್ತಾನೆ. ಘೋರಾಂಧಕಾರ ಕವಿದ ರಾತ್ರಿ, ಶಮೆಗೆಡಿಪಗುಡುಗಿನಬ್ಬರ, ಸಿಡಿಲಗರ್ಜ್ಜನೆ, ದ್ರುಮಗಿರಿಗಳಂ ಕಿತ್ತುಯೀಡಾಡುತ್ತಿರ್ಪ ಬಿರುಗಾಳಿ, ಪೇರ್ವನಿಯ ದಾಳಿ (೪-೨೨) ಇದಾವುದಕ್ಕೂ ಅಂಜದೆ ದಿಟ್ಟತನದಿಂದ ಬರುತ್ತಿದ್ದ ಮಾಧವನಿಗೆ ಅಂಜದಿರೆಂದು ತೋಳೆತ್ತಿ ಅಭಯಕೊಡುವಂತೆ ಬಸವೇಶನಾಲಯದ ಮುಂದೆ ಮೆರೆಯುತ್ತಿದ್ದ ವೃಷಭಧ್ವಜ ಗೋಚರಿಸುತ್ತದೆ, ವೃಷಭರಾಜನನ್ನು ಭಕ್ತಿಯಿಂದ ವಂದಿಸಿ ಪರದೈವ ನೀನಲ್ಲದಿಂನಾರು (೪-೨೮) ಮದ್ಗುರುವರನ ಪುಸ್ತಕವತರಲು ನಿರ್ವಿಘ್ನತೆಯೆನಿತ್ತು ಪಾಲಿಪುದೆಂದನು. (೪-೨೮) ಇದನ್ನೆಲ್ಲ ವೀಕ್ಷಿಸುತ್ತಿದ್ದ ಅಭವನು ಇವನ ಮನದಳವನ್ನು ಪರೀಕ್ಷಿಸಲು ಭೂತಗಣವನ್ನು ಕಳುಹಿಸುತ್ತಾನೆ. ಬಲುಭೀಕರವಾಗಿ ಅಬ್ಬರಿಸಿಬೊಬ್ಬಿರಿದು, ಮೇಲ್ವರಿದು ನುಗ್ಗುತ್ತವೆ. ಕೊಬ್ಬಿ ಪೊಗೆವರೆಸಿ ಕೆಂಗಿಡಿಕೆದರಿ ಕಂಣ್ಬುಡುತ (೪-೩೩) ಕೆಡೆಮೆಟ್ಟಿ ಇವನನ್ನು ಇಬ್ಭಾಗಮಾಡಿ ಪಿಂಡವ ತುಂಡಿಸುವೆವೆಂದು ಆರ್ಭಟಿಸುತ್ತವೆ. ಕುಲಗಿರಿಗಳು ಉರುಳಿದರೂ, ವುತ್ಪಾತಗಳು ತೋರಿದರೂ ಧೃತಿಗೆಡದೆ ಪೆರ್ಭೂತ ರಕ್ಕಸ, ದುರ್ಗಿಯರ ಬಲವನ್ನು ಗೆದ್ದು ಗುರುಭಕ್ತಿವೀರನು ಮಾರಿಗುಡಿಯ ಬಾಗಿಲನ್ನು ಪ್ರವೇಶಿಸುತ್ತಾನೆ. ಪುಸ್ತಕಮದೇನಾಯ್ತೊವಳಗರಸಿತರೆಬಲು ಸಂದಣಿ (೪-೪೨) ಎಂದು ಆ ಲೋಚಿಸುತ್ತಿರು ವಷ್ಟರಲ್ಲಿ ಆಗಸದಲ್ಲಿ ಬಯಲು ನುಡಿಯಿತು

> ಯಲೆಹಸುಳೆ ನೀನಿದಕೆ ಹೆದರಿ ಹಿಮ್ಮೆಟ್ಟದಿರು
> ಪಲವಂದದಿಂ ತುತಿಸುಮೆಚ್ಚದಿರೆ ನೀ ನಿಂನ್ನ
> ಚೆಲುವತಲೆಯಂ ಸಮರ್ಪ್ಪಿಸುಮಾಕೆ ವಲಿಯೆಜಯವಂತನಹೆ ಧರೆಯೊಳೆಂದೂ (೪-೪೪)

ಇದನ್ನಾಲಿಸಿ ನಲವೇರಿ ಧೃತಿದಳೆದು ನಿಶ್ಚಲಾತ್ಮಕನಾಗಿ ಮಾಧವನು ಗ್ರಂಥವನೊಯ್ಯದಿರಬಾರದೆಂದು ನಿಶ್ಚೈಸಿ (೪-೪೪) ದೇವಿಯ ಸಮ್ಮುಖದಲ್ಲಿ ನಿಂತು ಭಕ್ತಿಯಿಂದಸ್ತುತಿಸಿ ಪುಸ್ತಕವದಯಪಾಲಿಸು, (೪-೪೮) ಯಿಂನುಮದನುಳಿದುನಾಂಪೋಗೆಗುರುತಲ್ಪನಹೆ (೪-೪೯) ನೀಡದಿರೆ ನನ್ನ ಶಿರನರ್ಪಿಸುವೆ ಎಂದು ನಿಜಮಸ್ತಕಕೆ ಗಂಡಗತ್ತರಿ (೪-೫೦) ಯಿಕ್ಕಲು ಚಕ್ಕನೆ ನಿಮಿರ್ದಭೂಗತಚಂದ್ರಗಗನ ಪಥಕಡರ್ದಂತೆ (೪-೫೦) ಶಿರನೆಗೆಯಿತು, ದೇವಿ ಪ್ರಸನ್ನಳಾಗಿ ಶಿರವನ್ನು ಮುಂಡಕ್ಕಿಟ್ಟು ಪ್ರಾಣ ನೀಡುತ್ತಾಳೆ. ನೀನು ಬೇಡುವ ವಸ್ತುವಾವುದುಯಿತ್ತಪೆನೆನ್ನು ತ್ತಾಳೆ. ಬೇರೆನನ್ನು ಬೇಡುವೆನೆ? ನನ್ನ ಗುರುವರನು ಕಳುಹಿಸಿದ ಪುಸ್ತಕದ ನಿಮಿತ್ಯ ಬಂದಿರುವೆನೆಂದು ಕರಮುಗಿದು ಬೇಡಲು ನಸುನಗುತದೇವಿಯು ವಿಕ್ರಮಕಾಳಿದಾಸರೊಲು ನೀಂವಲಿಸಿದೆ(೪-೫೩)ಯೆಂದು ಮಸ್ತಕವನ್ನು ನೇವರಿಸಿ ಪ್ರೀತಿಯಿಂದ ಮುದ್ದಿಸಿ ಆ ಬ್ರಾಹ್ಮಣನು ಇಲ್ಲಿಗೆ ಆತನನ್ನು ಕಳುಹಿಸಿದ ಉದ್ದೇಶವನ್ನು ತಿಳಿಸಿ, ಪುಟ್ಟಕುವರನಂತೆ ಎತ್ತಿ ಅವಚಿಕೊಂಡು ಆಗಸಕ್ಕಡರುವಳು ಅನೇಕಾನೇಕ ದಿವ್ಯಕ್ಷೇತ್ರ, ಪುಣ್ಯಕ್ಷೇತ್ರಗಳನ್ನು, ಸೂರ್ಯಮಂಡಲ ತಾರಾಮಂಡಲ, ವಿಂಧ್ಯಾದ್ರಿ ಹಿಮಗಿರಿಗಳನ್ನೆಲ್ಲ ಪರಿಚಯಿಸುತ್ತ ಶಿವನ ಸಭೆಗೆ ಕರೆತಂದು ಶಂಕರನ ದರ್ಶನ ಮಾಡಿಸಿದಳು. ಅವನ ಮುಗ್ಧತೆಗೆ ಮಾರು ಹೋದ ಶಿವನು..

ಕುವರ ಶತವತ್ಸರಂಬರಂಬಾಳ್ವುಧರೆಸಿರಿಸತಿಯು

ಸುತರಪ್ಪುಭೋಗದಿಗ್ವಿಜಯನಾಗೀ

ನಂಬಿಸಂನುತ ಸತ್ಯ ಶರಣ ಸದ್ಗೋಷ್ಠಿಯೊಡ

ನಿಂಬುಗೊಂಡಿರಲು ತತ್ಕಾಲಕ್ಕೆ ಗಣಸಮೇತ ಬಂದು ನಾನು ಕರತಹೆನು....(೪-೭೪)

ಎಂದು ಹರಸಿ ಶ್ರೀಕರವನ್ನು ಆತನ ಶಿರದೊಳಿಟ್ಟು ಉಪಮನ್ಯು ಮಾರ್ಕಂಡೇಯರನ್ನು ಕೃಪೆಯಿಂದಸಲಹಿದಂತೆ ಕುವರ ಕಂಣ್ಮುಚ್ಚೆನುತ್ತ ಮಾಧವನು ನೇತ್ರದ್ವಯಗಳನ್ನು ಮುಚ್ಚಿ ತೆರೆಯಲು ಶ್ರೀಬೆಜ್ಜವಾಡಿ ಮುಂದಿನ 'ವೃಷಭಾಲಯ'ದೊಳಗೆ ನಿಂತಿದ್ದಾನೆ. ರೋಮಾಂಚಿತನಾಗಿ ಇದೇನು ಮನದಸುಪ್ತ ಕಳವಳವೋ, ಸ್ವಪ್ನ ತೋರಿತೋ, ಇಲ್ಲಿಗೇತಕೆ ಬಂದೆ ಎಂದು ಅಚ್ಚರಿಯೊಳಗಿರಲು ನಂದಿವೀರನು 'ಮಾಹೇಶ್ವರಾಕೃತಿ'ಯ ತಾಳಿ ಅಂಜದಿರುಕುವರ ಕಳವಳವುಮಲ್ಲ ಮಿದುಸತ್ಯ ಶಿವನೊಲಿದುದು (೪-೭೬) ಅಭವನೆಂದಂತೆ ದೊರೆಯು ತನ್ನ ಮಗಳನ್ನು ನಿನಗಿತ್ತು ಲಗ್ನಮಾಡಿ ದೇಶಾಧಿಪತಿಪಟ್ಟ ಕಟ್ಟುವನು, ನಿನ್ನ ಅರಸಿಯಳ ಉದರದಲ್ಲಿ ನಾನು ಉದಿಸಿ ಬರುವೆ, 'ಬಸವ'ನೆಂಬ ಅಭಿದಾನದಿಂದ ಕರೆ, ಅವನಿಂದ ಶಿವನೊಲಿಯುವನು ಎಂದು ಅಭಯವಿತ್ತು ವೃಷಭನ ಮೂರ್ತಿಯೊಳಗೊಂದಾಗುವನು. ತನಗಾದ ಅನುಭವ ಸತ್ಯವೆಂದು ಮುದದಿಂದ ನಂದಿಕೇಶನಿಗೆ ನಮಿಸಿ ಗ್ರಾಮಕ್ಕೆ ಬರುತ್ತಿರುವಾಗ "ತತ್ಪುರದಿ ಚಿಕ್ಕಮಾಧವನ ಭವನೊಲವಾಂತು ಬಹಸೂಚನೆಯನು ಸಾರುವಂತೆ" (೪-೭೮) ಬೆಳಗಾಯಿತು. ಭಕ್ತಮಾಧವನು ಪುರಪ್ರವೇಶಿಸಿ ಬ್ರಾಹ್ಮಣಗುರುವಿಗೆ ವಂದಿಸಿ ನಿಲ್ಲಲು ಆ ಗುರುವು ವಿಸ್ಮಯಾವಹಭಾವದಲ್ಲಿದ್ದನು.

ಸಂಧಿ ೫ : ಪರಶಿವನಿಂದ ಬೀಳ್ಕೊಂಡು ಭೂಲೋಕಕ್ಕೆ ಬಂದು ತನ್ನ ಗುರುಬ್ರಾಹ್ಮಣನಿಗೆರಗಿ ಕರಮುಗಿದು ನಿಲ್ಲಲು ಕಡುಕೋಪದಿಂದ ಕಶಾದಂಡವನ್ನೆತ್ತಿಕೊಂಡು......

"ಕ್ಷಿತಿಯೊಳಗೆ ವಡೆಯನವಸರಕೆಯಿಲ್ಲದ ಬಂಟನಿರ್ದು ಫಲವೇನು ಮತ್ತೆ

ಸತತ ಸದ್ಗುರುವಿನಾಜ್ಞೆಯ ಮೀರಿ ತಿರುಗುತಿಹ

ಮತಿಹೀನ ಶಿಷ್ಯನಿರ್ದೇನು ಫಲಮ......" (೫-೬)

ಎಂದು ಹೊಡೆಯಲು, ಒಡನೆಯೇ ತ್ರಿಪುರಾರಿಯನ್ನು ಕಿರೆಗೆಲಸದೊಳು ಬಡಿಯಲು ನೃಪಮುಖ್ಯರೊಳು ಆ ಕೊಲೆಯು ಮೂಡಿದಂತೆ 'ಕಪಟ ವಿಪ್ರನ ಬೆನ್ನಿನಲಿ ಮೂಡೆ ಬೆರಗಾಗಿ' ಕ್ರೋಧವನ್ನು ಬಿಟ್ಟು ಯೋಚಿಸುತ್ತಾನೆ.

ಆಮಾರಿ ಬಡವಿಯ ಕುವರನೆಂದು ಕೊಲ್ಲದಲೆ ಕುರುಣದಿಂದಾ ರಾಗದಿಂಕಾಳಿದಾಸಂಗೆ ವಲಿದದರಂತೆ (೫-೧೦) ಬೆಸನಿತ್ತು ಕಳುಹಿದ್ದಾಳೆ. ನಾನು ಹಸುಳೆಯೆಂದು ಭಾವಿಸಿಬಿಟ್ಟೆ ಎಂದು ಪಶ್ಚಾತ್ತಾಪಪಟ್ಟು "ಕುವರ ಬಾರೆಂದಪ್ಪಿಬೋಳೈಸಿ ಕುಳ್ಳಿರಿಸಿ" (೫-೧೧) ರಾತ್ರೆಯೊಳಾದುದೆಲ್ಲವನು ವಿವರಿಸಿ ಹೇಳು ಶಿವನಾಣೆ ಎಂದು ಕೇಳುತ್ತಾನೆ. ಮಾಧವನು ತನಗಾದುದೆಲ್ಲವನ್ನು ಹೇಳಲು, ಅವಿವೇಕಿಯಾದೆನು, ಅಪರಾಧರಹಿತರನ್ನು

ಕೊಲ್ಲಲೆಳಸಿದರೆ ಅದು ಬೆಂಬತ್ತಿ ಪೀಡಿಸದಿರದೇ? ಭಕ್ತಿಯಿಂದ ಶಿವನನ್ನೊಲಿಸಿಕೊಂಡವರು ಅಗಣಿತರು ಇವಗೆ ಶಂಕರನೊಲಿದುದೇ ಸತ್ಯ (೫-೧೪) ಎಂದು ನಿಶ್ಚೈಸಿ, 'ದೈವಪುರುಷನುಯೆಂದು ಮುಂನ ನಿಂನಯಲಕ್ಷಣಾವಳಿಯ ನೋಡಿದಾಗಳೆನಿಂಮ ಮಾತೆಯೊಡ'(೫-೧೫)ನೆ ನಾವು ಹೇಳಿದ್ದೆವು. ಆ ಮಾತು ನಿಜವಾಯಿತೆಂದು ಆ ಬ್ರಾಹ್ಮಣನು ಮಾಧವನ ಮೇಲೆ ಪ್ರೀತಿವರ್ಷಕರೆಯುತ್ತಿರುವ ವಾರ್ತೆ 'ಬೆಜ್ಜವಾಡಿ'ಯ ಪುರಗಳಲ್ಲೆಲ್ಲ ಆವರಿಸಿತು. ಜನರು ತಂಡೋಪತಂಡವಾಗಿ 'ಭಾಳಲೋಚನನನ ಕಿಂಕರನನ್ನು ಕಾಣುವಾಕಾಂಕ್ಷೆಯಿಂದಾಗಿ ಬರಲು ಅವರ ಕಂಣಪುಂಣ್ಯವೇ ಪಂಣುಮಾದ ತೆರದಿ' (೫-೧೮) ಮಾಧವನು ವಿರಾಜಿಸುತ್ತಿದ್ದನು. ಈ ವಾರ್ತೆಯನ್ನು ಓರ್ವನು ಒಡ್ಡೋಲಗದಲ್ಲಿ ಬಿತ್ತರಿಸುತ್ತಾನೆ. 'ನಾಗಸರದಾರವಕೆವ್ಯಾಳೇಶ ಹೆಡೆಯ ಕೊಡಹಿದ ತೆರದೆ' (೫-೨೦) ಅವನೀಶನು ತನ್ನ ಮಂತ್ರೀಶನಿಗೆ ತನಗಾದ ಸ್ವಪ್ನ ನಿಜವಾಯಿತೆಂದು ತಿಳಿಸುತ್ತಾನೆ. 'ಪರಶಿವನು ಮಾಧವಾಂಕನಿಗೆ ಮಾಧವಿಯನ್ನಿತ್ತು ಮದುವೆಯ ಮಾಡು' ಎಂದು ಸೂಚಿಸಲು, ಎಚ್ಚೆತ್ತು ನೋಡಿದರೆ ಮಾಯವಾಗಿ ಬಿಟ್ಟನು. ನಡೆನೋಡೋಣ ಎಂದು ಸಕಲರೊಡಗೂಡಿ ಬರುತ್ತಾನೆ.

'ಎಲೆ ವಿಪ್ರ ನಿನಗೆ ನಾಂ ಕೋಪಿಸಲ್ಕಿ ಸುತನಂ ಕೊಲಲೆಳಸಿ ಕಳುಹುವರೆ.......'(೫-೨೬) ಎಂದು ಗದರಿಸುತ್ತಾನೆ. ಮಾಧವನು '......ಮದ್ಗುರುವನದೆಸಿಯಿಂದಲಭವನಡಿಯಂ ಕಂಡೆನೂ ಸುಲಭವೆ ಕೋಪವಂಮಾಣೆಂದು' (೫-೨೬) ಬೇಡಿಕೊಳ್ಳುತ್ತಾನೆ. ಸ್ವಪ್ನದಲ್ಲಿ ಶಿವಹೇಳಿದಂತೆ ನನ್ನ ಮಗಳನ್ನೀತ ನಿಗಿತ್ತು ಧಾರೆಯೆರೆವೆ ಎಂದು ಮಂತ್ರಿಮುಖ್ಯರಿಗೆಲ್ಲ ತಿಳಿಸಿ 'ಪಟ್ಟದಾನೆಯ ಶೃಂಗಾರ ಮಾಡಿಸಿ ಮಾಧವನನ್ನು ಅದರ ಮೇಲೆ ಕುಳ್ಳಿರಿಸಿ ತಾನು ಪೊನ್ನಂದಣವನೇರಿಕೊಂಡು ಸಕಲ ವಾದ್ಯಂಗಳೊಂದಿಗೆ ಅರಮನೆಗೆ ಉತ್ಸವದಿಂದ ಕರೆತಂದು, ವಿವಾಹಕ್ಕೆ ಸಕಲ ಸಿದ್ಧತೆಗಳನ್ನು ಮಾಡಲು ಆಜ್ಞಾಪಿಸುತ್ತಾನೆ.

ಸಂಧಿ ೬ : ವಿವಾಹ ವೈಭವಕ್ಕೆ ಸಡಗರದ ಸಿದ್ದತೆಗಳು ನಡೆದವು. ಹರಿಹರನೃಪನು ಅಖಿಲ ಬಂಧು-ಬಾಂಧವರನ್ನು ಕರೆಸಲು ಭೂಮಿಯೇ ಬೆಸಲಾದಂತಾಯಿತು. ಧರಣೀಶನಾಜ್ಞೆಯಂತೆ ಮಂತ್ರಿಯು ಪುರದ ಶೃಂಗಾರದ ಹೊಣೆಹೊತ್ತುಕೊಂಡನು.

ಲಾಳಾಂಗವಂಗಮತಿಯೊಳಕೊಂಕಣಕುಕುರು
ಚೋಳ ಬರ್ಬರ ಮೆಸೆವಮಾಳವಂಮಗಧಪಾಂ
ಚಾಲಕರ್ನ್ನಾಟ ದ್ರಾವಿಡವತುಳಕೇರಳವು ಮಹಾರಾಷ್ಟ್ರಲಾಟಭಾಷಾ
ಕಾಳಿಂಗ ಸಾವಿರ ಗೌಳಗುರ್ಜ್ಜರಸುದೇ
ಶಾಳಿ ಮಧ್ಯದಧರೆಯನಾಳುತಿಹಭೂಪಕುಲ ಮೌಳಿಗಳು (೬-೧೦) ಆಗಮಿಸುತ್ತಿದ್ದರು.

ಅವರನ್ನೆಲ್ಲ ಸತ್ಕರಿಸುತ್ತ ಬುಧಕುಲಾಗ್ರಣಿಯೆನಿಪ ಶೈವಸಂಪನ್ನನಾದ ಜೋಯಿಸನನ್ನು ಕರೆಸಿ ವಿಮಲಾಸನವನ್ನಿತ್ತು ಕಾಣಿಕೆಯರ್ಪಿಸಿ ಶುಭಲಗ್ನವನ್ನು ಬೆಸಸಿರೆಂದು ಅರಸನು ಕರಮುಗಿದು ಕೇಳಿಕೊಂಡನು. ಸತಿರಾಣಿ ಲಲಿತಾಂಗಿಯು 'ಮದುವಣಿಗನ ತಾಯಿ'ಯನ್ನು ಕರೆಸಿರೆನ್ನಲು 'ಸ್ತ್ರೀಜನವನೀಂ ಕರೆಸೆಂದು ನುಡಿದು

ಮಂತ್ರಿವರ್ಯರಿಗೆ 'ಮಾಧವನ ತಾಯಿ'ಯನ್ನು ಕರೆತರಲು ಅಪ್ಪಣೆ ಮಾಡುತ್ತಾನೆ. ಮಂತ್ರಿಯು ತನ್ನ ದೂತರನ್ನಟ್ಟಿ ಹುಡುಕಿಸಿಕೊಂಡು ಆಕೆಗೆ ದಿವ್ಯಾಂಬರವನ್ನಿತ್ತು ಕನಕಮಯ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವೈಭವದಿಂದ ಕರೆದೊಯ್ಯುತ್ತಾರೆ. ನೆರೆದ ಪುರಜನರೆಲ್ಲ

> 'ಬಡವಿಗೆತ್ತಣ ಭಾಗ್ಯಬಂದುದಿದು ಪೃಥೆಯ ಸುರಕರಿಯ ನೊಂಪಿಯಲಾದುದೂ
> ಪೊಡವಿಯೊಳು ಸುತರಿಂದ ಸದ್ಗತಿಯಹುದೆಂಬ
> ನುಡಿ ಪುಸಿಯಹುದೆ.........'(೬-೧೪)

ಸಿರಿಯಾಳ ಚಂಗಳೆಯರು ನಿಲ್ಲೂರ ನಿಂಬವ್ವೆಯರು ಸುತರಿಂದ ಶಿವಪುರಕ್ಕೆ ಸಾರ್ದ್ದರು ಎಂದು ಬೆರಗಾಗಿ ತಂಮತಂಮೊಳಗೆ ಮಾತನಾಡಿಕೊಳ್ಳುತ್ತಿದ್ದರು.

ಸಂಧಿ ೭ : ಇತ್ತ ನೃಪನರಸಿ ತನ್ನ ಕುವರಿ ಮಾಧವಿಯನ್ನು ಶೃಂಗರಿಸಿರೆಂದು ಚಪಲಾಕ್ಷಿಯರಿಗೆ ನಿರೂಪಿಸುತ್ತಾಳೆ. ಅಪ್ರತಿಮ ರೂಪವತಿಯಾದ 'ಮಾಧವಿ'ಯನ್ನು ಸುಶೀಲೆಯರೂ ರತಿಕಲಾವಿಶಾಲೆಯರೂ ಆದ ಮುತ್ತೈದೆಯರು ಹೊಸ ಹಸೆಯ ಮೇಲೆ ಕರೆತಂದು ಕುಳ್ಳಿರಿಸುತ್ತಾರೆ. ಮಲ್ಲಿಕಾಲತೈಲವನ್ನು ಕೇಶಕ್ಕೆ ಪೂಸಿ ಮಜ್ಜನಕ್ಕೆ ಪನ್ನೀರು ಬೆರೆಸಿದ ಬಿಸಿನೀರನ್ನು ಹೊನ್ನ ತಂಬುಗೆಗಳೊಳಗೆ ತುಂಬಿ ಎರೆಯುತ್ತಾರೆ. ದಿವ್ಯಾಂಬರವನುಡಿಸಿ ಮೊಗ್ಗೆಗಂಟು ತೊಡಿಸಿ ರತ್ನ ಖಚಿತ ಕಟಿಯನ್ನು ತೊಡಿಸುತ್ತಾರೆ. ಮುಕ್ತಾವಳಿ, ಮುತ್ತಿನ ಬೊಟ್ಟು, ಮೂಗುತಿ ರನ್ನಗೆಲಸದ ಕಂಠಮಾಲೆ, ತೋಳಭಾಪುರಿ, ಕಂಕಣ, ಉಂಗುರ, ಮಣಿ, ದೊಡರು ಪಿಲ್ಲಿ ಇತ್ಯಾದಿ ತೊಡವುಗಳಿಂದ ಶೃಂಗರಿಸಲು...

'ಚೆಂನಾಗಿ ಮೆರೆವ ಷೋಡಶಕಲಾಭರಿತದಿಂ ಪೊಂನ ಪುತ್ಥಳಿಯಂತೆ' (೭-೩೯) ಪರಿರಾಜಿಸುತ್ತಿದ್ದಳು. ಸಖಿಯರು ಕನ್ನಡಿಯ ತಂದು ನಿಲಿಸಲು 'ಶಿತಾಂಶುಮಲಕೋಮಲದೊಳಗೆ ಥಳಥಳಸಿದೊಲು ಪೊತು ಬೆಳ್ಮುಗಿಲ ಮಧ್ಯದಿ ಮಿಂಚು ಪೊಳೆದಂತೆ' (೭-೪೨) ಯೋಗಿ ಹೃಜ್ಯೋತಿಯಂತೆ ವಿಜೃಂಭಿಸಿತು.

ಸಂಧಿ ೮ : ಇತ್ತ ಮದನನ ಬಾಣದಂತಿದ್ದ 'ಮಾಧವ'ನಿಗೂ ವಿಮಲತರಜದಿಂದ ಮಜ್ಜನ ಮಾಡಿಸಿ ದಿವ್ಯಾಂಬರವನ್ನಿತ್ತು ಲಲಿತಗಂಧಾಕ್ಷತೆಯನ್ನು ಹಣೆಯಲ್ಲಿ ಧರಿಸಿ, ಮಣಿದೊಡವುಗಳಿಂದ ಶೃಂಗರಿಸುತ್ತಾರೆ. ವಿವಾಹ ಮಂಟಪದಲ್ಲಿ ಮಾಧವನ ಸಂಮುಖದಿ ತೆರೆವಿಡಿದು (೮-೫) ಮಾಧವಿಯನ್ನು ತಂದುನಿಲ್ಲಿಸುತ್ತಾರೆ. ಭೂಸುರರು ಶ್ರುತಿಘೋಷದಿಂದ ಮಂತ್ರಾಕ್ಷತೆಯನ್ನು ಸುರಿಸಿ ಸುಮುಹೂರ್ತದಲ್ಲಿ ಲಗ್ನವನ್ನು ನೆರವೇರಿಸುತ್ತಾರೆ. ಹರಿಹರನೃಪನು ಒಲುಮೆಯಿಂದ ಪರಿಪರಿಯ ಅಂನಪಾನಗಳಿಂದ ಶರಣಗಣ ಕಾರಾಧನೆಯಗೈಸಿ ಭೂಸುರರಿಗೆ ಸಂತಸವನೀಡಿ ವಿದ್ವಾಂಸ ಯಾಚಕಜನವತೃಪ್ತಿಪಡೆಸಿ ಪರಮಬಾಂಧವರಿಗೆ ನೃಪರಿಗೆ ವಸ್ತ್ರಾವಳಿಗಳನ್ನಿತ್ತು ಬೀಳ್ಕೊಡುತ್ತಾನೆ. ಮಾಧವಿಮಾಧವೇಶ ದಂಪತಿಗಳು ಅತಿವಿನಯದಿಂದ ಉಸುರು ಒಡಲಿನಂತಿರುತ್ತಿದ್ದರು. ಈ ವಾರ್ತೆಯನ್ನು ಕೇಳಿ ಪುರಜನರು ಪೂರ್ವಕುಲಗೋತ್ರ ಸೂತ್ರವ ಪರೀಕ್ಷೆಯ ಮಾಡಿತರ್ವಾಯ ಮೀವರಲ್ಲದೆಯಿಂತು ನಿರ್ಗುಣೆಗೆ ಆವಸುಕೃತದ ಸಿದ್ಧಿಯೋ ಪೂರ್ವಿಯೊಳುಪೊಸತೆಂದು ತಲೆದೂಗಿದರು.

ಅಲ್ಲೊಬ್ಬ ವಿಭುದಾಗ್ರಣಿಯು ಅವರನ್ನೆಲ್ಲ ಕರೆದು ಗುರುಮಹಿಮೆಯ ಕಥೆಯೊಂದನ್ನು ಹೇಳತೊಡಗುತ್ತಾನೆ. ಶ್ರೀಪ್ರಭಾವತಿಪಟ್ಟಣದೊಳಗೆ ಸುಪ್ರಭಾಕರನೆಂಬ ಶೆಟ್ಟಿಯು ಅಪ್ರತಿಮ ಸಿರಿವಂತನಾಗಿದ್ದನು. 'ದೀಪ್ತವತಿ' ಎಂಬ ಪಟ್ಟಣದಲ್ಲಿ 'ಸ್ವಪ್ರಕಾಶಾಚಾರ್ಯ'ನೆಂಬ ವೀರಶೈವ ಗುರುಗಳಿಗೆ 'ಸುಗ್ನಾನಿ' ಎಂಬಸುತನಿದ್ದ. ಆತನ ಪತ್ನಿ ದುರ್ಗುಣಿ, ದುಷ್ಟೆ, ಸೋಮಾರಿ, ನಿರತದಿಂದಖಿಳಸಿರಿಸಂಪತ್ತಿನಲ್ಲಿ ಬಾಳುತ್ತಿದ್ದರು. ಮಾತಾಪಿತೃಗಳು ಪರಲೋಕವಾಸಿಗಳಾಗಲು ಬಹಳ ದರಿದ್ರತೆಯು ಆವರಿಸಿತು. ಭಿಕ್ಷಾನ್ನವೂ ಸಾಕಾಗದಾಯಿತು. ಹೀಗಿರಲೊಂದು ದಿನ ಅವರ ಮನೆಗೆ ಆಗಮಿಸಿದ ಬಂಧುವೊಬ್ಬನು ತುಂಬನೊಂದುಕೊಂಡು

ಬೆಂದುಕೊಳದಿರು ನಿಂನ ಪಿತನಧಿಕಧನಿಕ ಶಿಷ್ಯಾಬೃಂದಮಂ ಪಡೆದಿಹನು....... (೮-೩೫) ಅವರಲ್ಲೊಬ್ಬ ಪ್ರಭಾಕರ ಶೆಟ್ಟಿ, ಅವನು ಏನು ಬೇಡಿದರೂ ನೀಡುವನು, ನೀನಲ್ಲಿಗೆ ಹೋಗೆಂದು ಸೂಚಿಸಿದನು. ತನ್ನ ತಂದೆಯಾದರೋ ನಿಗಮಾರ್ಥಕೋವಿದ ಶಿಷ್ಯಾಚಾರ ಬೋಧಕನಾಗಿದ್ದವನು. ನಾನಾದರೋ ಮುಗ್ಧಮಂದಮತಿ, ನಿರ್ಲ್ಲೇಖನಾಭ್ಯಾಸಿ ಅಷ್ಟಾವರಣ ಪಂಚಾಚಾರ ಪ್ರೇಮಿಯಲ್ಲ, ವಿದ್ಯಾವಿಹೀನರು ಪಶುಸಮಾನರೆನ್ನುವರು ಎಂದು ಚಿಂತಿಸುತ್ತಿರಲು ಪತ್ನಿಯ ಉಪಟಳವನ್ನು ತಾಳದೇ ದೇಶಾಂತರಹೊರಡುತ್ತಾನೆ.

ಸಂಧಿ ೯ : ಶಿವನಾಲಯದಂತಿದ್ದ 'ಪ್ರಭಾವತಿ' ಪಟ್ಟಣಕ್ಕೆ ಸುಗ್ನಾನಿಯು ಬರುತ್ತಾನೆ. ಪ್ರಭಾಕರಶೆಟ್ಟಿಯು ಅಪಾರ ಭಕ್ತಿಯಿಂದ ಗುರುವನ್ನು ತನ್ನ ನಿವಾಸಕ್ಕೆ ಕರೆದೊಯ್ದು ಅರ್ಘ್ಯಪಾದ್ಯಾಚಮನಗಳಿಂದುಪಚರಿಸುತ್ತಾನೆ. ಅಭ್ಯಂಗನ ಮಾಡಿಸಿ ಅಷ್ಟವಿಧಷೋಡಶಮಹೋಪಚಾರದಿಂದರ್ಚಿಸಿ ರಸರಸಾಯನವನ್ನಿತ್ತು ಸಾಷ್ಟಾಂಗ ಗೈಯುವನು. ವಸುಧಾಧಿಪತಿ 'ಮಿತ್ರಸೇನ'ನು ಅತಿನೇಹದಿಂದ ಎಡೆಬಡಿಸಲು ವಶಿಷ್ಟಗುರು ಶಾಪವಿತ್ತಂತೆ ಅಲ್ಲ ಎಂದು ಪಂಡಿತೋತ್ತಮನು ಹೇಳಲು, ಆ ವೃತ್ತಾಂತವೇನು ಹೇಳೆಂದು ಜನರು ಕಾತರಿಸುವರು. ಮಿತ್ರಸೇನನು ಇಕ್ಷ್ವಾಕುವಂಶದವನು, ಅಯೋಧ್ಯಾಪುರದ ಅಧಿನಾಥ, ಮದಯಂತಿ ಆತನ ಸತಿ, ಒಂದು ದಿನ ಸೈನ್ಯಸಮೇತ ಬೇಟೆಗೆಂದು ಅರಣ್ಯಕ್ಕೆ ಬರುತ್ತಾನೆ. ಅಲ್ಲಿ ರಾಕ್ಷಸನಿಗೂ ಬೇಡಪಡೆಗೂ ನಡೆದಕದನದಲ್ಲಿ ಮಿತ್ರಸೇನನಿಂದಾಗಿ ರಾಕ್ಷಸ ಅಸುನೀಗುತ್ತಾನೆ. ಇದನ್ನು ಕಣ್ಣಾರೆಕಂಡ ಅಸುರನ ಸಹೋದರನು ಬಾಡಿಸುವೆನಿವನ ಸಂತತಿಲತೆಯನೆಂದು (೯-೧೦) ಕಪಟಚರನಾಗಿ 'ಮಿತ್ರಸೇನ'ನೊಡನೆ ಅರಮನೆಗೆ ಬರುತ್ತಾನೆ.

ಸಂಧಿ ೧೦ : ಮಿತ್ರಸೇನನು ಆ ಕುಟಿಲರಕ್ಕಸನನ್ನು ಪರೀಕ್ಷಿಸದೇ ಆತನಿಗೆ ಬಾಣಸಿಗರೊಡೆತನವನ್ನೀಯುತ್ತಾನೆ. ಒಂದು ದಿನ ಅರಸನು ಪೈತ್ರುಕಕ್ಕೆಂದು ಬಿನ್ನವಿಸಲು ಗುರುವಶಿಷ್ಠರು ಶಿಷ್ಯವೃಂದದೊಡನೆ ಆಗಮಿಸುತ್ತಾರೆ. ಕ್ರಿಯಾವಿಧಿಗಳೆಲ್ಲ ಮುಗಿದ ಮೇಲೆ ಧಾತ್ರೀಶನು ಋಷಿಕುಲಕ್ಕೆ ನೈವೇದ್ಯ ಮಾಡಲಣಿಯಾಗುತ್ತಾನೆ. ಮಾರುವೇಷದ ಆ ರಕ್ಕಸನು ಶತ್ರುಭಾವದಿಂದ ತನ್ನ ಅಣ್ಣನ ಕೊಲೆಯಸೇಡು ತೀರಿಸಿಕೊಳ್ಳಲು ಸುಸಂಧಿಯೆಂದು ಬಗೆದ. ಶಾಖಾಹಾರದಲ್ಲಿ ನರಮಾಂಸವನ್ನು ಬೆರೆಸಿಬಿಟ್ಟ. ಇದು ನೃಪತಂತ್ರವೆಂದೇ ಬಗೆದ ವಶಿಷ್ಠರು ಘನಕೋಪದಿಂದ ತಮ್ಮ ತಪಸ್ಸಿಗೆ ಹಾನಿತರಲುಯೋಚಿಸಿದ ಮಿತ್ರಸೇನನೇ ನೀನು ಬ್ರಹ್ಮರಾಕ್ಷಸನಾಗು ಎಂದು ಶಪಿಸುತ್ತಾನೆ. ನೃಪನು ಕಂಪಿಸುತ್ತ ನಾನು ನಿರಪರಾಧಿ ಎಂದು ಬಿನ್ನವಿಸಿಕೊಳ್ಳುವನು.

ಮಂಗಳಾತ್ಮಕ ಋಷಿವರ್ಯರು ಮನದೊಳಗೆ ಚಿಂತಿಸಿ ಸತ್ಯವನ್ನರಿತುಕೊಳ್ಳುವರು. ವಿಧಿವಶದ ವಿಚಿತ್ರವನ್ನು ಒಳಗೊಂಡ ಒಂದು ಪ್ರಸಂಗವನ್ನು ಹೇಳುವರು. ಒಬ್ಬ ಶಿವಭಕ್ತೆಯು ಭಿಕ್ಷಾರ್ಥಿಯಾಗಿ ಬಂದ ಭಕ್ತನಿಗೆ ಆದರದಿಂದಲುಪಚರಿಸಿ ಉಣಬಡಿಸಿದಳು. ಆತನು ಬೇಡಿದ ಮಜ್ಜಿಗೆಯನ್ನು ತರಲು ನೆರೆಮನೆಗೆ ಹೋದಳು. ಅಲ್ಲಿಂದ ಬರುವಾಗ ಗಗನಮಾರ್ಗದಲ್ಲಿ ಸರ್ಪವನ್ನು ಕಚ್ಚಿ ಹದ್ದೊಂದು ಹೋಗುತ್ತಿರುವ ಸಂದರ್ಭದಲ್ಲಿ ಸರ್ಪದ ವಿಷದಹನಿಯು ಗಾಳಿಯೊಡನೆ ಬೆರೆತು ಮಜ್ಜಿಗೆಯ ಪಾತ್ರೆಯಲ್ಲಿ ಬಿತ್ತು. ಅದನ್ನು ಆಕೆ ನೋಡದೆ ತಂದು ಜಂಗಮನಿಗೆ ನೀಡುತ್ತಾಳೆ. ಅದನ್ನಾರೋಗಿಸಿ ಬಂದ ಜಂಗಮನು ಆಶ್ರಮದಲ್ಲಿ ಜೀವಬಿಡುತ್ತಾನೆ. ಯಮಲೋಕದಲ್ಲಿ ಈತನ ವೃತ್ತಾಂತವನ್ನು ಕೇಳಿ 'ಚಿತ್ರಗುಪ್ತ'ನು ಈ ದೋಷಯಾರದ್ದೆಂದು ಕೇಳುತ್ತಾನೆ. ಎಲ್ಲರೂ ನಿರುತ್ತರರಾಗಲು ಯಮನು ಈಶ್ವರನೆಡೆಗೈ ತಂದು ಇದನ್ನು ನೀವೇ ನಿರ್ಣಯಿಸಿರೆಂದು ಬಿನ್ನವಿಸಿ ಕೊಳ್ಳುತ್ತಾನೆ. ಶಿವನು ಇದನ್ನು ನಂದೀಶಾದಿ ಪ್ರಮಥರಿಗೆ ಒಪ್ಪಿಸುತ್ತಾನೆ. ಅವರ ಅಭಿಪ್ರಾಯದಂತೆ ನಾರದನು ಸ್ವರ್ಗ ಪಾತಾಳಗಳಲ್ಲಲೆದು ಭೂಲೋಕಕ್ಕೆ ಬರುತ್ತಾನೆ. ಅಲ್ಲಿ ವಟವೃಕ್ಷದಡಿ ಕುಳಿತ ಬ್ರಾಹ್ಮಣನನ್ನು ಪ್ರಶ್ನಿಸಲು ವಿಧಿವಶದಿಂದ ನಾರಿಗೀ ದೋಷ ಎಂದು ಹೇಳುತ್ತಾನೆ. ಆದ್ದರಿಂದ ವಶಿಷ್ಠರು ಮಿತ್ರಸೇನನಿಗೆ ಹನ್ನೆರಡು ವರ್ಷ ದೊರೆತದ್ದನ್ನು ಅನುಭವಿಸು ತದನಂತರ ಶುದ್ಧಗೈವೆನೆಂದು ಅಭಯ ನಿಡುತ್ತಾರೆ. ಶಾಪದ ದಿನಗಳು ಮುಗಿಯುತ್ತಬರುವಾಗ ಒಂದು ಸಾರೆ ವಿಪ್ರದಂಪತಿಗಳು ತೀರ್ಥಯಾತ್ರೆ ಮುಗಿಸಿಕೊಂಡು ಅಡವಿ ಮಾರ್ಗದಲ್ಲಿ ಬರುತ್ತಿರುವುದನ್ನು ಕಂಡು ಬ್ರಹ್ಮಾರಾಕ್ಷಸನ ರೂಪದ ಮಿತ್ರಸೇನನು ಆ ಬ್ರಾಹ್ಮಣನನ್ನು ಕೊಂದು ತಿನ್ನುತ್ತಾನೆ. ಶೋಕತಪ್ತಳಾದ ಆ ವಿಪ್ರ ಸತಿಯು ತನ್ನ ದಿವ್ಯಜ್ಞಾನದಿಂದ ಆ ರಕ್ಕಸನು ಮಿತ್ರಸೇನನೆಂದರಿತು 'ಬ್ರಾಹ್ಮಣ ದ್ರೋಹಿ ಮುನಿಶಾಪದ ನಂತರ ನಿನ್ನ ಪತ್ನಿಯ ಸಂಪರ್ಕಗೈಯಲು ಮರಣ ಹೊಂದು' ಎಂದು ಶಾಪವಿತ್ತಳು. ವಶಿಷ್ಠರ ಶಾಪದಿಂದ ಮುಕ್ತಗೊಂಡು ಅರಮನೆಗೆ ಬರಲು ಗುರುವಶಿಷ್ಠರು ಆಗಮಿಸಿ ಪಾಂಡುವಿಗಾದಶಾಪದ ಗತಿಯನ್ನು ತಿಳಿಸಿ, ಆತನ ರಾಣಿಗೆ ಪ್ರಣವ ಬಲದಿಂದ ಪುತ್ರನನ್ನುಕರುಣಿಸುತ್ತಾರೆ. ಮಿತ್ರಸೇನನು ವಿರತಿಕೈಕೊಂಡು ಮಿಥುಳಾಪುರದ ಬಾಹ್ಯವನದಲ್ಲಿ ಗೌತಮ ಮುನಿಗಳನ್ನು ಕಾಣುತ್ತಾನೆ. ಅವರು ಮರಗದಿರು ನಿನಗೆ ಬಿಡಗಡೆಯದಾರಿ ತೋರುವೆ ಎಂದು ಗೋಕರ್ಣದ ಮಹಾತ್ಮೆಯ ಕಥೆಯನ್ನು ಹೇಳುತ್ತಾರೆ.

ಸಂಧಿ ೧೧ : ಗೋಕರ್ಣ ಶಿವನ ಕರತಳಲಿಂಗ ನೆಲೆಸಿದ ಸುಸ್ಥಳ. ಮೋಕ್ಷದಾಗರ, ದೇವತೆಗಳೆಲ್ಲ ತಂತ್ರ ಮಾಡಿ 'ಗಣಪತಿ'ಯ ಸಹಾಯದಿಂದ ಶಿವನ ಆತ್ಮಲಿಂಗವನ್ನು ರಾವಣನಿಂದ ಬಿಡಿಸಿದ ಕಥೆಯನ್ನು ವಿವರವಾಗಿ ಹೇಳುವರು. ಈ ಗೋಕರ್ಣ ತೀರ್ಥದೊಳಗೆ ಮಿಂದು ಲಿಂಗದರ್ಶನವ ಕೈಕೊಂಡು ಸದ್ಭಕ್ತಿಯಿಂದ ಭಜಿಸಿದರೆ ಎಲ್ಲ ಪಾಪಗಳಿಂದ ಮುಕ್ತರಾಗಿ ಸದ್ಗತಿಯನ್ನು ಪಡೆಯುವರು ಎಂದು ಜಾತ್ಯಂಧರೆಯ ಕಥೆ ಹೇಳುವರು. ಅವಳು ಕುಷ್ಟಾಂಗಿ, ವೃದ್ಧೆ, ಹೊಲತಿ. ಪೂರ್ವಜನ್ಮದಲ್ಲಿ ಕೈಕಯ ದೇಶದಲ್ಲಿದ್ದ ಸೋಮಿನಿ ಎಂಬ ಬ್ರಾಹ್ಮಣ ವಿಧವೆ. ಗರ್ಭಿಣಿಯಾದ ಆಕೆಯನ್ನು ಬಾಂಧವರು ಹೊರಗಿಡಲು ಶೂದ್ರನೊಡನೆ ಸುಖಿಸಿ ಗೋಮಾಂಸ ತಿಂದು ಕಾಲಾನಂತರದಲ್ಲಿ ಅಸುನೀಗಲು ಯಮದೂತರು ವಿಚಾರಣೆ ನಡೆಸಿ ಚಾಂಡಾಲ ಜಠರದೊಳಗೆ ಜನಿಸು

ಅಂತ್ಯದಲ್ಲಿ ಶಿವಲಿಂಗ ಪೂಜೆದೊರಕೊಳ್ವದೆಂದರು. ಹಾಗೆಯೇ ಚಾಂಡಾಲರುದರದಲ್ಲಿ ಜಾತ್ಯಂಧರೆಯು ಜನಿಸಿ, ಬಾಲ್ಯದಲ್ಲೇ ಅನಾಥಳಾಗಿ ಸಹೋದರರು ಮನೆಯಿಂದ ಹೊರಹಾಕಿದರು. ತೊಂಭತ್ತು ವರ್ಷಗಳವರೆಗೆ ತಿರಿದುಂಡು. ಒಮ್ಮೆ ಪುಣ್ಯವಶದಿಂದ ಗೋಕರ್ಣಕ್ಕೆ ಹೋಗುತ್ತಿದ್ದ ಜನರೊಡನೆ ಅಲ್ಲಿಗೆ ಹೋಗುತ್ತಾಳೆ. ಅಲ್ಲಿನ ಜಾತ್ರೆಯಲ್ಲಿ ಅನ್ನದೊರೆಯದೆ ಹಸಿವಿನ ಉರಿ ಹೆಚ್ಚಿ ನಿದ್ರೆಗೆಡಲು, ಒಬ್ಬನು ಅವಳ ಕೈಯಲ್ಲಿ ಹಾಕಿದ ಬಿಲ್ವಪತ್ರೆಯನ್ನು ಕೋಪದಿಂದ ಬಿಸುಡಲು, ಅದು ಪರಶಿವನ ಆದಿ ಲಿಂಗದ ಮಸ್ತಕದ ಮೇಲೆ ಬೀಳುತ್ತದೆ. ಅಂದು ಶಿವರಾತ್ರಿ ಅವಳು ಮುಕ್ತಿಪಾತ್ರಳಾಗುವಳು. ಈ ಕಥೆ ಕೇಳಿದ ನೃಪನು ಗೋಕರ್ಣಕ್ಕೆ ಬಂದು ಮದಾಂತಕ ಮಹಾಬಲೇಶ್ವರ ದರ್ಶನ ಮಾಡಿ ಮಣಿಕಾಂತಿ ಕಿರೀಟವನ್ನರ್ಪಿಸಿ ತನ್ನ ನಗರಕ್ಕೆ ಮರಳುತ್ತಾನೆ. ಬುಧವರನು ಪ್ರಭಾಕರಶೆಟ್ಟಿಯ ಕಥೆಯನ್ನು ಮುಂದುವರಿಸುತ್ತಾನೆ. ಸುಗ್ನಾನಿಯು ಪ್ರಭಾಕರನ ಆತಿಥ್ಯವನ್ನು ಸ್ವೀಕರಿಸಿ ತನ್ನ ಪತ್ನಿಗೆ ಹೊಟ್ಟೆಗೂ ಇಲ್ಲದ ಸ್ಥಿತಿಯನ್ನು ವಿವರಿಸಲು ಶೆಟ್ಟಿಯು ಧನ-ಧಾನ್ಯ-ವಸ್ತ್ರಾಭರಣಗಳನ್ನು ಕಳಿಸಿಕೊಟ್ಟು ಗುರುಗಳನ್ನು ತನ್ನಲ್ಲೇ ಇರಿಸಿಕೊಳ್ಳುತ್ತಾನೆ. ಒಂದಿರುಳು ಶಿವಪೂಜೆಯ ನಂತರ ಶೆಟ್ಟಿಯು ತನಗೆ ದೀಕ್ಷೆ ನೀಡಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಏನೊಂದೂ ಅರಿಯದ ಸುಗ್ನಾನಿ ಚಿಂತಾಕ್ರಾಂತ ನಾಗುತ್ತಾನೆ. ತನ್ನ ನೆರೆಮನೆಯವನು ತನ್ನ ಆಕಳ ಕರುವನ್ನು ಪ್ರೀತಿಯಿಂದ ಕರೆಯುವ ಶಬ್ದವನ್ನು ನೆನೆದು ಇದುವೆ ಅಖಿಲ ಮಂತ್ರದ ಮೂಲವೆಂದು ನಿಶ್ಚೈಸಿ ನೆನೆದು ಶಿಷ್ಯೋತ್ತಮನಿಗೆ ಇದನ್ನೇ ಹಗಲಿರುಳು ಜಪಿಸು ನಂಬೆಂದು ನುಡಿಯುತ್ತಾನೆ. ಮುಗ್ಧವಾಗಿ ನಂಬಿದ ಪ್ರಭಾಕರ ಶೆಟ್ಟಿ ಮತ್ತು ಗುರು ಸುಗ್ನಾನಿಯರು ಶಿವಸಾಯುಜ್ಯ ಪಡೆಯುತ್ತಾರೆ.

ಸಂಧಿ ೧೨ : ಇತ್ತ ಹರಿಹರನೃಪನು ಸಕಲವೈಭವದಿಂದ ರಾಜ್ಯವಾಳುತ್ತಿರಲು ವೃದ್ಧಾಪ್ಯ ಆವರಿಸುತ್ತದೆ. ಒಂದು ದಿನ ಸಚಿವರು ಸಾಮಂತ, ಮನ್ನೆಯರು, ಪ್ರೌಢ ವಿದ್ವಾಂಸರನ್ನೆಲ್ಲ ಬರಹೇಳುತ್ತಾನೆ. ಅಕಲಂಕ ಮಾಧವನನ್ನೂ ಮಂದಮತಿ ಕುಮಾರನನ್ನೂ ಸಭಾಮಧ್ಯದಲ್ಲಿ ಕುಳ್ಳಿರಿಸಿ, ಈತ ಸದ್ಗುಣಿಯಾದ ಅಳಿಯ ಆತ ಅಜ್ಞಾನಿಯಾದ ಮಗ ಇವರಲ್ಲಿ ಪಟ್ಟಕ್ಕೆ ಯಾರು ಅರ್ಹರೆಂಬುದನ್ನು ತಾವು ನೀತಿಕೋವಿದರು ಹೇಳಿರಿ ಎಂದು ವಿನಂತಿಸಿಕೊಳ್ಳುತ್ತಾನೆ. ಎಲ್ಲರೂ ತಮ್ಮ ತಮ್ಮೊಳಗೆ ಚರ್ಚಿಸಿ ಗಂಡುಮಗನಿದ್ದರೂ ಪಟ್ಟವನಾರಿಗೆ ಕಟ್ಟಬೇಕೆನ್ನುತ್ತಿರುವನಲ್ಲ ಎಂದು ಒಬ್ಬ ಬೆರಗಾಗಿ ಕೇಳಲು 'ಮಂದಮತಿಗೆ ಪಟ್ಟವಾದರೆ ಭೂಬಾಲೆಪರರ ಪಾಲಾಗುವಳು' (೧೨-೮) ಎಂಬುದನ್ನರಿತೇ ಸರ್ವಧರ್ಮ ಪರೀಕ್ಷೆಯ ಬಲ್ಲ ಸದುಹೃದಯರಿಗೆ ನಿರ್ಣಯಿಸಲು ಕೇಳಿಕೊಂಡಿರುವನು ಎಂದೊಬ್ಬ ಸಮರ್ಥಿಸುವನು. ಅಷ್ಟರಲ್ಲಿ ನವಕಲಾಭಿಜ್ಞ, ಸರ್ವಜ್ಞನಾದ ಬುಧವರನು ನೃಪನಿಗೆ ಅಖಿಳ ನೀತಿಯನ್ನು ಬೋಧಿಸುವನು. ದಶರಥ ರಾವಣ, ಧೃತರಾಷ್ಟ್ರ, ಅಳಿಯ ಬಿಜ್ಜಳ ಮುಂತಾದವರ ನಿದರ್ಶನಕೊಟ್ಟು ಉತ್ತಮನಾದವನಿಗೆ ಪಟ್ಟಕಟ್ಟಬೇಕು ಎಂದು ಹೇಳಿದನು. ''ಸರ್ವಲಕ್ಷಣವಂತ, ಸದ್ಭಕ್ತ, ಸುಗ್ನಾನಚಿತ್ತಯುತ, ಸರ್ವಪ್ರಬುದ್ಧ, ಸದ್ವರ್ತಾನುರಾಗಪರನೂ, ವಿದ್ಯಾನ್ವಿತನೂ, ಗಂಭೀರನೂ ಕ್ಷಮೆ, ದಮೆ, ಶಾಂತಿ, ಸೈರಣೆಯುಳ್ಳ ಪ್ರೌಢನಿಗೆ ಪಟ್ಟಸಲ್ಲುವುದು, ಶತ್ರುಶಿಕ್ಷಕನಾಗಿ ಮಿತ್ರ ರಕ್ಷಕನಾಗಿರುವವನು

ಪಟ್ಟಕ್ಕೆ ಯೋಗ್ಯನೆಂದು ಶಾಸ್ತ್ರಗಳು ಸಾರುತ್ತವೆ. ಎಂಬುದನ್ನಾಲಿಸಿ ನಿಶ್ಚಯಮನನಾಗಿ ಮುದದಿಂದ ಅಳಿಯ ಮಾಧವನಿಗೆ ವಿಜೃಂಭಣೆಯಿಂದ ಪಟ್ಟಾಭಿಷೇಕ ಮಾಡುತ್ತಾನೆ. ಸ್ವಲ್ಪ ಕಾಲದಲ್ಲೆ ಹರಿಹರನೃಪನು ಸ್ವರ್ಗಸ್ಥನಾಗುತ್ತಾನೆ. ಮಾಧವಾಂಕನು ಭೂಗಗನ ದಿಕ್ತಟಗಳೊಳು ಕೀರ್ತಿಬೆಳಗುವಂತೆ ಧರ್ಮದಿಂದ ರಾಜ್ಯ ವಾಳುತ್ತಿದ್ದನು.

ಸಂಧಿ ೧೩ : ಒಂದು ದಿನ ಮಾಧವನು ಸನ್ಮಂತ್ರಿಯೊಡನೆ ''ನಾಬಾಲತನದಲ್ಲಿ ಶಿವನಂಘ್ರಿ ಕಂಡ ಕಾರಣ ಇಷ್ಟು ವೈಭವ ಕೈಸಾರ್ದುದು'' (೧೩-೯) ನಿಜತನುವಿಂದೆ ಶಿವನನ್ನು ಕಾಣುವ ಸುಖ ಯಾವ ನೆವದಿಂದ ದೊರೆಯುವುದು? ಎಂದು ಪ್ರಶ್ನಿಸುತ್ತಾನೆ. ವೃಷಭಾಲಯದೊಳಗೆ ತೋರಿದ ವೀರಮಾಹೇಶ್ವರನೇ ಶಂಭುದೇಶಿಕೇಂದ್ರನ ರೂಪ ಧರಿಸಿ ಮಾಧವಾಂಕನ ಸಭೆಗೆ ಅರಸನ ಭಾವವರಿತಂತೆ ಆಗಮಿಸುತ್ತಾನೆ. ಮಾಧವ ನೃಪನ ಬಯಕೆಯಂತೆ ಶೈವದ ಪರಿಯನ್ನು ಬೋಧಿಸಲನುವಾಗುವನು. ಶಿವನಂಘ್ರಿ ಗಂಡ ಸಗಣಿ ಹುಳುವಿನ ವೃತ್ತಾಂತ, ಶಿವಶಿವೆಯರ ಧ್ಯಾನದಿಂದ ಎಲ್ಲ ಪಾಪಗಳನ್ನು ನೀಗಿಕೊಂಡು ತನಗೆ ವಂಚಿಸಿದ ಪತಿಗೂ ಮುಕ್ತಿಸಿಗುವಂತೆ ಮಾಡಿದ ವಂಚುಳೆಯ ವೃತ್ತಾಂತವನ್ನು ಹೇಳುವ ಮೂಲಕ ಶಿವಮಹಿಮೆಯನ್ನು ತಿಳಿಸುವನು. ವೀರಶೈವ ಮಾರ್ಗದೊಳು ನಡೆಯಬಯಸುವವರು ಸದ್ಭಕ್ತಿ ಕವಚವನ್ನಳವಡಿಸಿಕೊಂಡು ಸುಜ್ಞಾನದಂಡವನ್ನು ಹಿಡಿದು ಕರಣೇಂದ್ರಿಯಗಳನ್ನು ಖಂಡಿಸಿ ಮಲತ್ರಯಗಳನ್ನು ಪರಿಹರಿಸಿಕೊಳ್ಳಬೇಕು, (೧೩-೩೦) ಜಾತಿ, ಕುಲಭೇದವೆಣಿಸಬಾರದು ಎಂಬಿತ್ಯಾದಿಯಾಗಿ ಬೋಧಿಸಲು ನೃಪನು ಹರ್ಷಚಿತ್ತನಾಗುವನು.

ಸಂಧಿ ೧೪ : ಮಾಧವಾಂಕನು ''ಗುರುದೇವ ನಿಂಮಕಾರುಣ್ಯರಸ ಪೂರಿತದ ಪರಶಿವನಲೀಲಾ ಚರಿತ್ರಕಾಸಾರ ದೊಳು ಪರಿಣತೆಯೊಳೆಂನ ಸುಮನೊಹಂಸಮುಮನುಂಯಿೀಜಾಡಿಸೆಂದು....''(೧೪-೫) ಅಡಿಗೆರಗಿದನು. ಅವನೀಶನ ದೈನ್ಯಭಾವಕ್ಕೆ ಮೆಚ್ಚಿ ಶಿವನ ಇಪ್ಪತ್ತೈದು ಲೀಲೆಗಳನ್ನು ಹೇಳಲು ಅಣಿಯಾದ ಶಂಭುದೇಶೀಕೇಂದ್ರ ಗುರುವು ''ಜಲಜಾಂಡದ ಕುರುಹ ಚಿತ್ರ ಪಟದೊಳುತೋರ್ವ'' (೧೪-೭) ಹಾಗೆ ಸಂಕ್ಷೇಪಗೊಳಿಸಿ ಹೇಳುವೆ ಎಂದು

೧. ಸೋಮಧರಲೀಲೆ	೨. ಉಮಾಮಹೇಶ್ವರಲೀಲೆ
೩. ವೃಷಭಾರೂಢಲೀಲೆ	೪. ತಾಂಡವಲೀಲೆ
೫. ಗಿರಿಜಾಕಲ್ಯಾಣಲೀಲೆ	೬. ಭಿಕ್ಷಾಟನಲೀಲೆ
೭. ಮಾರಹರಲೀಲೆ	೮. ಕಾಲಹರಲೀಲೆ
೯. ತ್ರಿಪುರದಹನಲೀಲೆ	೧೦. ಜಲಂಧರಲೀಲೆ
೧೧. ಅಜಾರಿಲೀಲೆ	೧೨. ವೀರಭದ್ರಲೀಲೆ
೧೩. ಶರಭಲೀಲೆ	೧೪. ಅರ್ಧನಾರೀಶ್ವರಲೀಲೆ
೧೫. ಕಿರಾತಲೀಲೆ	೧೬. ಕಂಕಾಳಲೀಲೆ

೧೭. ಚಂಡೇಶಾನುಗ್ರಹಲೀಲೆ

೧೮. ವಿಷಧರಲೀಲೆ

೧೯. ಚಕ್ರದಾನ ಲೀಲೆ

೨೦. ವಿಘ್ನಪ್ರಸಾದಲೀಲೆ

೨೧. ಉಮಾಸ್ಕಂದಲೀಲೆ

೨೨. ಏಕಪಾದಲೀಲೆ

೨೩. ಸುಖಾವಹ ಲೀಲೆ

೨೪. ದಕ್ಷಿಣಾಮೂರ್ತಿಲೀಲೆ

೨೫. ಲಿಂಗೋದ್ಭವಲೀಲೆ

ಈ ತೆರನಾಗಿ ಶಿವನ ಪಂಚವಿಂಶತಿ ಲೀಲೆಗಳನ್ನು ಒಲಿದು ಸುಶ್ರವಣ ಮಾಡವವರು ಮುನ್ನಿನಭವಗಳಲ್ಲಿ ತಿನ್ನಬಾರದ್ದನ್ನು ತಿಂದು ಕುಡಿಯಬಾರದ್ದನ್ನು ಕುಡಿದು ಅವ ಮಾರ್ಗದಲ್ಲಿ ನಡೆದು ಬಲುಪಾತಕಗಳನ್ನು ಮಾಡಿದ್ದರೂ ಅವನ್ನೆಲ್ಲ ನೀಗಿಕೊಂಡು ಲಲಿತಭಕ್ತಿ ಜ್ಞಾನ ವೈರಾಗ್ಯಮಯರೆನಿಸಿ ಮುಕ್ತರಾಗುವರೆಂದು ತಿಳಿಸಿದರು. ಮಾಧವಾಂಕನು ಧನ್ಯತಾಭಾವದಿಂದ ಕಣ್ಣೀರ್ಗರೆಯುತ್ತ ಕರಮುಗಿದು ಗುರುಸ್ತುತಿಗೈಯುವನು. ಪರಶಿವನತ್ರೈಗುಣಗಳ ವಿವರವನ್ನೂ ಗುರುವು ದಯಪಾಲಿಸಿ ಶಿಷ್ಯನಲ್ಲಿ ಭಕ್ತ್ಯಾಧಿಕ್ಯಮೂಡಿಸುವನು.

ಸಂಧಿ ೧೫ : ಶ್ರೀಗುರುದೇಶಿಕೇಂದ್ರನು ಅನಾದಿಶೈವ, ಆದಿಶೈವ, ಅನುಶೈವ, ಅವಂತರಶೈವ, ಪ್ರವರಸತ್ತೈವವಂತರ ಶೈವ, ಅಂತರಶೈವ, ಮಹಾಶೈವವೆಂದು ಸಪ್ತವಿಧಶೈವಗಳನ್ನು ಭಸ್ಮ-ರುದ್ರಾಕ್ಷಿಗಳ ಉತ್ಪತ್ತಿ, ಧಾರಣವಿಧಾನಗಳನ್ನು ವಿವರಿಸುತ್ತ ಜಪಮಾಡುವ ಪರಿಪರಿವಿಧಾನಗಳನ್ನು ಉಪದೇಶಿಸುವ ಸಂದರ್ಭ ಇಲ್ಲಿ ವಿಸ್ತೃತವಾಗಿದೆ.

ಸಂಧಿ ೧೬ : ಅವನೀಶ ಮಾಧವನಿಗೆ ಶಿವಲಿಂಗಪೂಜಾ ವಿಧಾನವನ್ನು ಬಿತ್ತರಿಸುತ್ತಾನೆ. ಸ್ಥಾನ ದ್ರವ್ಯಕಾಲದೇಶಾದಿ ಪ್ರಯೋಜನಗಳನ್ನರಿತುಕೊಂಡು ತಾಂತ್ರಿಕದ, ವೈದಿಕದ ಪೂಜಾವಿಧಂಗಳನ್ನು ತಿಳಿಯಬೇಕು. ಅಂತಶ್ಯೌಚಬಾಹ್ಯಶ್ಯೌಚಗಳೆರಡರ ಇಂಗಿತವನ್ನರಿತುಕೊಂಡು ಆತ್ಮಶುದ್ಧಿ, ಸ್ಥಾನಶುದ್ಧಿ, ದ್ರವ್ಯಶುದ್ಧಿ, ಲಿಂಗಶುದ್ಧಿ ಮತ್ತು ಮಂತ್ರಶುದ್ಧಿಗಳೆಂಬ ಪಂಚಶುದ್ಧಿಯಲ್ಲಿ ಪರಿಶೋಧಿಸಬೇಕು, ಆಚಮನೀಯ ವಸ್ತುಗಳು ಪಂಚಾಮೃತಾದಿಗಳ ಕುರಿತು ಅರಿತುಕೊಳ್ಳಬೇಕು. ಯೋಗ್ಯಜಲ, ನೈವೇದ್ಯಗಳ ಮಾಹಿತಿಯಿರಬೇಕು. ಲಿಂಗಮಜ್ಜನಗೈದು ವಿಭೂತಿಧಾರಣೆ, ವಸ್ತ್ರಧಾರಣೆ, ಆಭರಣಗಳಿಂದಲಂಕಾರ ಮಾಡಿ ಅಷ್ಟಗಂಧಧಾರಣೆಗೈದು ನವೀನಾಕ್ಷತೆಗಳು, ಪುಷ್ಪಗಳಿಂದರ್ಚಿಸಿ ದಶಾಂಗಧೂಪ ಬೆಳಗಿ, ಅನ್ನನೈವೇದ್ಯದ ನಂತರ ತಾಂಬೂಲವನ್ನು ಸಮರ್ಪಿಸಿ ಭಕ್ತಿಯಿಂದ ಭಜಿಸಬೇಕು. ಈ ಪೂಜಾದ್ರವ್ಯಗಳು ದೊರೆಯದಿದ್ದ ಪ್ರಸಂಗದಲ್ಲಿ ಜಲಗಂಧ ಪುಷ್ಪದಿಂದರ್ಚಿಸಲ್ಕಖಿಲವಿಧದ ಫಲವಹುದು ಎಲ್ಲಕ್ಕಿಂತ ಭಕ್ತನಿಗೆ ಶ್ರದ್ಧೆಯಿರಬೇಕು ಅದುವೇ ಶಿವನಿಗೆ ಪ್ರಿಯವಾದುದು.

ಸಂಧಿ ೧೭ : ತ್ರಿವಿಧವರ ವೀರಶೈವವನ್ನು ದೀಕ್ಷಾವಿಧಾನವನ್ನು ಮಾಧವಾಂಕನಿಗೆ ಶ್ರೀಗುರುವು ಒಲವಿನಿಂದ ವಿವರಿಸುತ್ತಾನೆ. ವೀರಶೈವದ ಮಾರ್ಗ ಅತ್ಯಂತ ದುಸ್ತರವಾದುದೆಂದು ಹೇಳಿ ಮಾಧವಾಂಕನ ಮನದ ದೃಢತೆಯನ್ನು ಪರೀಕ್ಷಿಸುತ್ತಾನೆ. ಅವನು ಮಹಾಯೋಗ್ಯ ಶಿಷ್ಯನೆಂಬುದನ್ನು ಮನಗಂಡು ವಿವರವಾಗಿ ವೀರಶೈವನ

ಸಲ್ಲಕ್ಷಣಗಳನ್ನು ತಿಳಿಸಿ ಕೊಡುತ್ತಾನೆ. ''ಗುರು-ಲಿಂಗ-ಜಂಗಮಗಳನ್ನರಿತು ತನಮನ ಧನಗಳನ್ನು ಅವುಗಳಿಗೆ ನಿರ್ವಂಚನೆಯಿಂದರ್ಪಿಸುವವನೇ ಸದ್ಭಕ್ತ'' (೧೭-೨೫) ಶಿವದೀಕ್ಷೆ ಪಡೆದ ನಂತರದಲ್ಲಿ ಸದಾ ಲಿಂಗಾಂಗ ಸಂಬಂಧದ ಭಾವದೊಳಿರಬೇಕು. ತ್ರಿಕಾಲವೂ ಲಿಂಗಪೂಜಾಸಕ್ತನಾಗಬೇಕು. ಶಿವನನ್ನೇ ನೆರೆನಂಬಿ, ಅನ್ಯದೈವ ಗಳಿಗೆಣಿಸದೆ, ಭವಿಗುಣರಹಿತನಾಗಿ, ಶಿವಮಹೇಶ್ವರರನ್ನು ವಂದಿಸಬೇಕು. ಪಂಚಸೂತಕವಳಿದು, ಪಂಚಾಚಾರ ಮಾರ್ಗದೊಳಗೆ ನಿಷ್ಠನಾಗಿ ಷಡ್ಗುಣಗಳನ್ನು ಹೊಂದಿರುವಾತನೇ ವೀರಶೈವನೆನಿಸುತ್ತಾನೆ.

''ಪರಮಶಿಷ್ಯೋತ್ತಮನ ಮಸ್ತಕಸ್ತಿತಮಾದ
ವರಮಹಾಗ್ನಾನ ಕ್ರಿಯಾತ್ಮಲಿಂಗವನು ಶ್ರೀ
ಗುರುತಂನ ಭಾವಂಮನೋದ್ರುಷ್ಟಿಗಂತಂದು ಕ್ರಮದಿಂದಲಾಕರ್ಷಿಸಿ
ನೆರೆತಂದು ತದ್ರುಷ್ಟಿಯಿಂ ಸ್ಪಟಿಕವಸುಶೀಲೆಯ
ವರರತ್ನವಾದಿಲಿಂಗಂಗಳಲಿ ತಲ್ಲಿಂಗಮಂ
ನೆರೆ ಪ್ರಮಾಣಿಸುವ .....'' (೧೭-೫೮)

ರೀತಿಯನ್ನು ಸವಿಸ್ತಾರವಾಗಿ ತಿಳಿಸುತ್ತಾನೆ.

ಸಂಧಿ ೧೮ : ಶ್ರೀಗುರುವು ನಿರಾಭಾರಿವೀರಶೈವರ ನಡೆಯನ್ನೂ, ಪರಮ ಲಿಂಗಗಳ ಸ್ಥೂಲ ಸೂಕ್ಷ್ಮಗಳನ್ನೂ ತಿಳಿಸಿ ಮಾಧವನೃಪನಿಗೆ ಶಿವದೀಕ್ಷೆ ನೀಡಿ ತನ್ನ ಆಶ್ರಮಕ್ಕೆ ಹೋದ ವಿವರಗಳು ಇಲ್ಲಿ ಚಿತ್ರಣಗೊಂಡಿದೆ.

''ಲಿಂಗಾಂಗ ಸಂಯೋಗಗ್ನಾನ ಕ್ರಿಯಾದಿಗಳ
ಸಾಂಗದಿಂಸಂಪಂನನಾಗಿರಸವಾದ ವಶ್ಯಂಗಳಂ
ಜ್ಯೋತಿಷ ಕ್ರಯವಿಕ್ರಯಾದಿ ಲೌಕಿಕದ ವ್ಯವಹಾರಗಳನೂ
ಹಿಂಗಿವನಿತಾದಿವಿಷಯದಿಂವಿರಕ್ತನಾಗಿ'' (೧೮-೧೨)

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಮೆಟ್ಟಿನಿಂತು 'ಸರ್ವಾವಧಾನಿಯಾಗಿರುತ್ತ', (೧೮-೧೪) ಸಚಿತ್ತದಿಂದ ಜಂಗಮ ಸ್ಥಲನಂಗಂಗೊಂಡು ಸಂಚರಿಸುತಿರ್ಪ್ಪಾತನೇ ಉತ್ತಮ ನಿರಾಭಾರ ವರ ವೀರಶೈವನೆನಿಸುವನು. ''ಯಲ್ಲರೊಳು ಪೂಜ್ಯಂನಿರಾಭಾರಿಯೆನಿಪ'' (೧೮-೧೫) ಎಂದು ತಿಳಿಸಿ ಲಿಂಗದ ಚಿಂನಭಿನ್ನ ಲಕ್ಷಣಗಳನ್ನು ವಿವರಿಸುತ್ತ ವಾರವಧು ನಿಂಬವ್ವೆ, ಗುಪ್ತಭಕ್ತೆ ಮಾಯಾದೇವಿ, ಕಲಿಗಣನಾಥ, ಶ್ರೀಸಿದ್ಧರಾಮ ಮುಂತಾದ ಸತ್ಪ್ರಮಥೇಂದ್ರ ಸಹಶರಣ ಸಂತತಿಯ ಸುಚರಿತ್ರೆಯನ್ನು ಹೇಳುತ್ತಾನೆ. ಇದನ್ನು ಕೇಳಿದ ನೃಪಮಾಧವನು ಸಂತೋಷದ ಕಡಲಲ್ಲಿ ಮುಳುಗುವನು. ಸಕಲ ಶರಣರನ್ನು, ವೇದಶಾಸ್ತ್ರಾಗಮಿಗಳನ್ನು ಗುರುಕುಲಾಢ್ಯರನ್ನು ಜಂಗಮರೆಲ್ಲರನ್ನು ಕರೆಸಿ ದೀಕ್ಷೆಗೆ ಅಣಿಗೊಳಿಸಲು ಆಜ್ಞಾಪಿಸುತ್ತಾನೆ. ಭೂಕಾಂತನ ನ್ನೊಳಗೊಂಡು ಸಚಿವರು, ಅಖಿಲಬಂಧುವರ್ಗದವರು ದಾಸ-ದಾಸಿಯರಿಗೆಲ್ಲ ವಿಧಿವತ್ತಾಗಿ ಮಂತ್ರ ಭಸಿತ,

ರುದ್ರಾಕ್ಷಿಗಳಿಂದ ದೀಕ್ಷೆಯಾಗಿ ಅಂತ್ಯದಲ್ಲಿ ತೀರ್ಥಪ್ರಸಾದಗಳನ್ನುಣಿಸಿ ಲಿಂಗದೇಹಿಗಳನ್ನಾಗಿಸಿ ಲಿಂಗಾಂಗ, ಭಕ್ತಿ, ಜ್ಞಾನ ಸಾಮರಸ್ಯವನ್ನು ಅರುಹಿ ಬೀಳ್ಕೊಡಲು ಮಾಧವಾಂಕನಿಗೆ ಗುರು ಶರಣರಿಗೆಲ್ಲವಂದಿಸಿ, 'ದಾಸೋಹ'ಕ್ಕೆ ನಿಲ್ಲುತ್ತಾನೆ. ಮಕ್ಕಳ ಬಯಕೆಯಲ್ಲಿದ್ದ 'ಮಾಧವಿಯ' ಮನದಿಂಗಿತವನ್ನರಿತು

"....................ನಿನಗೊಬ್ಬ
ಕಾಮ ಸಂನಿಭಪುತ್ರನಪ್ಪ ಶ್ರೀಬಸವಸುಕುಮಾರನೆಂಬಭಿಧಾನದಿ
ಕಾಮಹರ ನೊಲಿವನಾ ಪುತ್ರನಿಂ ಕೋಯನುತ" (೧೮-೯೫)

ತಾಂಬೂಲ ಪ್ರಸಾದವನ್ನು ದಯಪಾಲಿಸುತ್ತಾರೆ. ಗುರುಗಳನ್ನು ಭಕ್ತಿಪೂರ್ವಕವಾಗಿ ಬೀಳ್ಕೊಟ್ಟ ಮಾಧವನೃಪನು ತನ್ನ ಶಿವಭಕ್ತಿ ಸಾಮ್ರಾಜ್ಯವನ್ನು ಸುಸ್ಥಿರವಾಗಿ ಆಳತೊಡಗುತ್ತಾನೆ.

ಸಂಧಿ ೧೯ : ಅವನೀಶಮಾಧವನು ಅಷ್ಟವಿಧಾರ್ಚನೆಯ ಮಾಡಿ. ಷೋಡಶೋಪಚಾರಗಳಿಂದ ಶಿವಲಿಂಗವನ್ನು ಪೂಜಿಸಿ ಪರಮಶಿವಶರಣರಿಗೆಲ್ಲ ತೀರ್ಥಪ್ರಸಾದಗಳನ್ನು ಭೋಜನಗೈಸಿ, ಲಿಂಗಾರ್ಪಿತವ ಮಾಡಿ, ತಾನೂ ಭುಂಜಿಸಿ, ಶರಣರಿಗೆ ತಾಂಬೂಲಾದಿಗಳನ್ನರ್ಪಿಸಿ ಬೀಳ್ಕೊಡುತ್ತಾನೆ.

ಸಂಧಿ ೨೦ : ಒಂದು ಶುಭರಾತ್ರಿಯಲ್ಲಿ ನೃಪಮಾಧವನು ಅರಸಿ ಮಾಧವಿಯು ಸಮಾಗಮದಲ್ಲಿರಲು ಅಂಗಭವಕೇಳಿಯೆನಿಸದಲೆ.... ಲಿಂಗಭವಕೇಳಿಯ ಸುಖಗಳನನುಭವಿಸಿ ವಿರಮಿಸಲು ನೃಪನಿಗೆ ಸ್ವಪ್ನವಾಯಿತು. ಈಶ್ವರನಪರಾವತಾರ ದೇಶಿಕೋತ್ತಮನು ಬಂದು ಮಾಧವ ಮಹೀಶ ನಿಂನರಸಿ ಜಠರದಿ ಬರ್ಪಸತ್ಪುತ್ರ ನಾ ಶಿಶುವಿನಭಿದಾನ ಬಸವಸುಕುಮಾರನೆಂಬುತ ಕರೆವುದು...." (೨೦-೨೮) ಎಂದು ಆಶೀರ್ವದಿಸುತ್ತಾನೆ. ಅಂತೆಯೇ ಮಾಧವಿಯಪುಣ್ಯ ಗರ್ಭದಲ್ಲಿ ಶಿವಬೀಜವಂಕುರಿಸಿ ದಿನದಿನಕ್ಕೆ ಬೆಳೆಯುತ್ತಿರಲು ಬಯಕೆಗಳು ಕಾಡತೊಡಗುತ್ತವೆ. (೨೦-೩೯) ಭಸ್ಮ ತಿನ್ನುವ ಬಯಕೆ ಹಿರಿದಾಗುತ್ತದೆ. ನಡೆಮಂದವಾಗುತ್ತದೆ. ಮಾಧವಿಯು ಶ್ರೀಗುರುಪದಧ್ಯಾನದಲ್ಲಿರಲು ಶಿವನೆ ಪ್ರತ್ಯಕ್ಷವಾದಂತೆ ಪುರುಷ ಶಿಶು ಉದಯಿಸುತ್ತದೆ. ಎಲ್ಲರ ಸಡಗರ ಎಲ್ಲೆ ಮೀರಿತು ಅರಸನು ಆಗಮಿಕರನ್ನು ಕರೆಸಿ ಜಾತಕವನ್ನು ಬರೆಸುತ್ತಾನೆ. ಸಾಕ್ಷಾತ್ ಶಂಭುವಿನ ರೂಪವೇ ಈ ಕೂಸೆಂಬುದನ್ನು ತಿಳಿದು ಅಖಿಲರಿಗೆ ಸಂತಸವನಿತ್ತು ತೃಪ್ತಿಪಡಿಸಿದನು. ಪುರದ ಸಕಲ ಲಿಂಗಗಳಿಗೆ ಅಭಿಷೇಕ ಮಾಡಿಸಿದನು. ಬಂಡಿಗಳ ಮೇಲೆ ಸಕ್ಕರೆಯ ಹೇರಿಸಿ ನಗರದಲ್ಲಿ ಬೀರಿಸಿದನು. ಶಂಭುದೇಶಿಕೇಂದ್ರರು ಆಗಮಿಸಿ ಮಗುವಿಗೆ ಲಿಂಗಧಾರಣೆ ಮಾಡಿ ಬಸವಾಂಕನೆಂಬ ಹೆಸರನ್ನಿಟ್ಟರು. ಮಗುವಿಗೆ ಹನ್ನೆರಡನೆಯ ದಿನದಲ್ಲಿ ತೊಟ್ಟಿಲ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗುತ್ತದೆ. ಸಂಪ್ರದಾಯದ ಪ್ರಕಾರ ಶಿಶುವಿಗೆ ತೈಲ ಅಭ್ಯಂಗನಗೈಸಿ, ವಸ್ತ್ರಾಭರಣಗಳಿಂದಲಂಕರಿಸಿ, ತೊಟ್ಟಿಲಲ್ಲಿಟ್ಟು ಹರಸಿ ಮುತ್ತೈದೆಯರು ಶಿವಭಕ್ತೆಯರು ಜೋಗುಳಹಾಡಿ ತೂಗಿದರು. ಅವರಿಗೆಲ್ಲ ಫಲತಾಂಬೂದಿಗಳನ್ನಿತ್ತು ಮಾದಾಂಬೆಯು ಮನ್ನಣೆಯಿಂದ ಬೀಳ್ಕೊಡುವಳು.

ಸಂಧಿ ೨೧ : ''ಬಸವಕುಮಾರನು ದಿನದಿನಕೆ ಬಾಲಶಶಿಯಂತೆ ಬೆಳೆಯುತ್ತಲಿದ್ದನು. ನಾನಾ ವಿಧದ ಬಾಲಲೀಲೆಗಳಿಂದ ಮಾತಾಪಿತರಿಗೆ ಮುದ್ದಿನ ಸೋನೆಸುರಿಸುತ್ತಿದ್ದನು. ಹೀಗಿರಲು ವರುಷ ತುಂಬಿತು. ಒಂದು ದಿನ ಅರಸನು ಓಲಗದಲ್ಲಿರಲು ವನಪಾಲನು ಹೂ ಹಣ್ಣುಗಳನ್ನರ್ಪಿಸಿ ನಮಸ್ಕರಿಸಿ ವಸಂತ ಋತು ಆಗಮನ ವಾಗಿದೆ, ನಂದನದ ಬನದೊಳಗೆ ಮಂನ್ಮತ ಪಾಳ್ಯೆ ಬಿಟ್ಟಂತೆ ಉಪವನವು (೨೧-೧೭) ಶೋಭಿಸುತ್ತಿದೆ, ಸಖಿಜನವೆರಸಿ ಬರಬೇಕೆಂದು ಆಹ್ವಾನವೀಯುವನು. ಅರಸನು ಸಾತಿಶಯದಿಂದ 'ವನಕೇಳಿ'ಗೆ ಹೊರಡುವು ದೆಂದು ಸಖಿಗೆ ಸೂಚಿಸುವನು. ತೇರಾನೆ ತುರಗ ಅಂದಳ ಮಂಧಿರಾಹುತರು ವೀರಧೀರರು ಮಂತ್ರಿ ಆಪ್ತ ಕವಿಗಳು ನೆರೆಯಲು ಅರಸನು ತನ್ನ ಸತಿಗೆ ಹೇಳಿ ಕಳಿಸುವನು. ಅವಳು ಸಖೀಜನರೊಂದಿಗೆ ಬರಲು ಸರ್ವರೂ ಸಕಲವಾದ್ಯ ಘೋಷಗಳೊಂದಿಗೆ ಬನಕ್ಕೆ ಬಂದರು.

''ತಳಿತ ತಳಿರುಗುಂಪಿಂದೆಯಲರ್ದ ಪೂಗಂಪಿಂದೆ
ಕಳಿತ ಪಂಣ್ಣೆಂಪಿಂದೆ ಸುಳಿಗಾಳಿ ತಂಪಿಂದೆ
ಗಿಳಿ ಮಧುರಮಾತಿನಿಂ ಕೋಗಿಲೆಯ ಗೀತದಿಂ ಅಳಿಕುಲವ್ರಾತದಿಂದೆ
ನಳಿನ ಬಾಣನು ತಂನಫಳಿವಕಲ್ಲೆರ್ದೆಯ
ರ್ಗಳಿಗೆ ಜವ್ವನ ತುಂಬಿ ಮರುಳ್ಗೊಳಿ ಪೆನೆಂದು ತಂ
ನ್ನಳಗ ಸಮೇತದಿ ಬಂದು ವನ ಮಧ್ಯಮಿರ್ಪಂತೆ...'' (೨೧-೩೫)

ಆವನವು ಮೆರೆಯುತ್ತಿತ್ತು. ಎಲ್ಲರೂ ಜಲಕ್ರೀಡೆ, ಓಕುಳಿಯಾಟದಲ್ಲಿ ಮೈಮರೆತರು, ತದನಂತರ ವನ ವೀಕ್ಷಣೆಮಾಡುತ್ತ ಬರಲು ವಟ, ಬದರಿ, ಚೂತಕೇತಕಿ, ಬೆಳಲ, ನಾರೀಕೇಳ, ಅಶ್ವತ್ಥ ಮಾದಲ, ಹಲಸು, ಬಾಳೆ, ಕಿತ್ತಳೆ, ಕದಳಿ, ಕರ್ಜೂರ, ದ್ರಾಕ್ಷಿ ದಾಡಿಮ, ಜಂಬೀರ ಹೇರಳೆ, ನೆಲ್ಲಿ, ಬಿಲ್ವ ಮೊದಲಾದವು ಒಂದಕ್ಕಿಂತ ಒಂದು ಮಿಗಿಲಾಗಿ ಶೋಭಿಸುತ್ತಿದ್ದ ತರು ಲತೆವೃಕ್ಷಗಳು ಕಣ್ಣಿಗೆ ಹಬ್ಬವನ್ನುಂಟುಮಾಡಿದವು. ಮಾಧವನೃಪನು ಶಿವನ ಪೂಜಾ ಮಂಟಪವನ್ನು ಹೊಕ್ಕು ಲಿಂಗಾರ್ಚನೆಗೈದು ಶರಣಾಳಿ ಸಹಿತ ಹಣ್ಣುಗಳ ಸೇವನೆ ಮಾಡಿದನು. ಸಖೀಜನರನೊಡಗೊಂಡು ಅಖಿಳ ವಿನಿಯೋಗದವರೊಂದಿಗೆ ಆನಂದದಲ್ಲಿರುವ ಸಮಯ ತಳಿರು ಮಿಡಿಕಾಯಿ, ಹಣ್ಣುಗಳುಳ್ಳ ಮರಗಳನೇರಿ ತುಂಟಾಟವಾಡುತ್ತಾ ಕಪಿಗಳ ಸೈನ್ಯ ಮನಸ್ಸಿಗೆ ಮುದನೀಡುತ್ತಿತ್ತು. ಅವುಗಳಲ್ಲಿ ತಾಯ ಮೊಲೆಯುಣ್ಣುತ್ತ ತಿರುತಿರುಗಿ ನೋಡುತ್ತ ನಲಿಯುತ್ತಿದ್ದ ಕಪಿಯ ಮರಿಯನ್ನು ಕಂಡು ಮೋಹಗೊಂಡು ಮಾಧವಿಯು ಆ ಮರಿಯು ತನಗೆ ಬೇಕೆಂದು ಬಯಸುತ್ತಾಳೆ. ನೃಪನು ಬಿಲ್ಲಿಗೆ ಬಾಣಹೂಡಿ ಆ ತಾಯಿ ಕೋತಿಯಿಂದ ಮರಿಯನ್ನು ಬೇರ್ಪಡಿಸಲುದ್ಯುಕ್ತನಾಗುತ್ತಾನೆ. ಅಷ್ಟರಲ್ಲಿ ಮಾಧವನೃಪನ ಮಗನು ತಂದೆಯ ಹಿಡಿದು ತಡೆದು

''... ತಿಳಿದು ನಿಶ್ಚೈಸಯ್ಯಯಿದಬಲ್ಲೆಸರ್ವಜ್ಞರೊಳು ಶಿರೋಮಣಿ ನೀನು'' (೨೧-೬೭)

''ತರುಣಿಯರಸರಸವಾಕ್ಯವ ಕೇಳಿ ನಡವವಗೆ

ನೆರೆ ಆದಿಯಲ್ಲಿ ಸುಖ ಅಂತ್ಯಕ್ಕೆ ಯತಿದುಖ್ಖ'' (೨೧-೬೮)

ಕೈಕೇಯಿಯ ಮಾತು ಕೇಳಿದ ದಶರಥ, ವನವಾಸದಲ್ಲಿ ಸೀತೆಯ 'ಮಾಯಾಜಿಂಕೆ'ಯ ಅಪೇಕ್ಷಗೆ ಓಗೊಟ್ಟ ರಾಮಾದಿಗಳ ಉದಾಹರಣೆಯನ್ನಿತ್ತು ''ಕೊಂದರ್ಗೆಕೊಲೆತಪ್ಪದು'' (೨೧-೮೯) ಆದ್ದರಿಂದ ಜನನಿಯ ಮಾತನ್ನು ಕೇಳಿ ತಾಯಿ ಕೋತಿಯಿಂದ ಮರಿಕೋತಿಯನ್ನಗಲಿಸಬೇಡ ಎಂದ ಒಂದು ವರ್ಷದ ಕಂದನ ನೀತಿಮಾತಿಗೆ ಎಲ್ಲರೂ ಬೆರಗಾದರು. ತಾಯಿ ತನ್ನ ತಪ್ಪನ್ನೊಪ್ಪಿಕೊಳ್ಳುವಳು. ಆ ಸಾಕ್ಷಾತ್ ಸಂಗನ ಬಸವನೇ ತಮ್ಮುದರದಲ್ಲಿ ಪವಾಡಗಳ ಮೆರೆಯಲ್ಕೆತಂದಿರುವನೆಂದು ಮುದ್ದಿನಿಂದ ಬಸವಕುಮಾರನನ್ನಪ್ಪಿಕೊಂಡರು.

ಸಂಧಿ ೨೨ : ಅರಸು ಕುಮಾರ ಬಸವ ಕುಮಾರ, ಮಂತ್ರಿ ಕುಮಾರರು ಒಟ್ಟೊಟ್ಟಿಗೇ ಬೆಳೆದು ಏಳು ವರುಷಗಳಾಗಲು ಅಖಿಳ ವಿದ್ಯಾಭ್ಯಾಸಕ್ಕೆ ತೊಡಗಿ, ಧನುರ್ವಿದ್ಯೆ ಶಸ್ತ್ರಾಸ್ತ್ರಗಳಂ ಮಿಗಿಲೆನಿಸಿ ಸಾಧನೆ ಮಾಡಿ ಮಿತ್ರ ಭಾವದಲ್ಲಿ ಸುಖವಾಗಿದ್ದರು. ರಾಮಲಕ್ಷ್ಮಣ, ಕುಶಲವ, ನಕುಲಸಹದೇವರಿಗಿಂತ ಮಿಗಿಲಾಗಿ ಮಂತ್ರ ಲಕ್ಷ್ಯ ಮಿತವಚನರಂತೆ ಬಾಳುತ್ತಿದ್ದರು. ಅತಿರೂಪು, ಯೌವ್ವನ, ವಿದ್ಯೆ, ಪರಾಕ್ರಮ, ಸುಮತಿ, ಸತ್ಯವಾಕ್ಯ, ಸನ್ನಡತೆ, ತ್ಯಾಗ, ಭೋಗ, ಶಿವಪೂಜೆ, ಸದಾಚಾರಗಳಲ್ಲಿ ಈರ್ವರೂ ''ಪಿತನಾಜ್ಞೆಯಂ ಮೀರಿನಡೆಯಬಾರದ ವ್ರತದಿ'' (೨೨-೨೨) ಅತಿಶಯಾನಂದದಿಂದ ಕೀರ್ತಿ ಪ್ರತಾಪಗಳಿಗೆ ಹೆಸರಾಗಿದ್ದರು. ಹೀಗಿರಲು ಒಂದು ದಿನ ಉದಯಕಾಲದಲ್ಲಿ 'ಸುಬುದ್ಧ'ನ ಬಳಿ ''..... ದೆಲೆಯಂಣಯಿಂದು ಪಗಲೊಯ್ಯಾಳಿ ಪೋಗಿಬಹನೂ'' (೨೨-೨೩) ನಡೆ ಎಂದು ''ಬಸವಕುಮಾರನು ನಿಂನಿಂದಾದಮಪರಾಧ ನಾಂಪೊರುವೆನಳಕಬೇಡೆಂದ ಭಯಮಂಕೊಟ್ಟು....'' (೨೨-೨೩) ತಂದೆಯನೊಪ್ಪಿಸಿ ವೈಹಾಳಿಗೆ ಸಂತಸದಿಂದ ಅಣಿಯಾಗುವನು! ರಾಜ ನಾಜ್ಞೆಯಂತೆ ಚತುರಂಗಬಲಸಮೇತ ಸುಬುದ್ಧಿ ಬಸವಕುಮಾರರು ಸಲ್ಲಕ್ಷಣದ ಕುದುರೆಗಳನೇರಿ ಕುಣಿಸುತ್ತ ಹೊರಟಿರಲು ಸೂರೆಗೊಂಬರಕಂಣಪುಂಣ್ಯವೆ ಪಂಣಾದೊಲಿರೆ'' (೨೨-೪೨) ಪುರಜನರು ನೆರೆದು ವೀಕ್ಷಿಸಿದರು. ಪುರದ ಹೊರವಲಯದ ಬಯಲಿಗೆ ಬಂದು ಅತ್ಯುತ್ಸಾಹದಿಂದ ಕುದುರೆ ಸವಾರಿಯಲ್ಲಿ ನಿರತರಾಗಿ, ನಂತರ ಜಲಕ್ರೀಡೆಯಾಡಿ, ಶಿವ ಲಿಂಗಪೂಜೆಗೈದು ''ನೂತನದ ಬಸವೇಶ ಚಂನಬಸವರುಂಯೆನಲು ಪುಷ್ಪವಾಡಿಗೆ ಬಂದರು. ಅಲ್ಲಿ ವಿಧವಿಧದ ಪುಷ್ಪ ಫಲಗಳನ್ನು ಲಿಂಗಕ್ಕರ್ಪಿಸಿ ಎಲ್ಲರೊಂದಿಗೆ ತಾವೂಭುಂಜಿಸಿ ಮತ್ತೆ ಕುದುರೆಗಳನ್ನೇರಿ ಪುರದ ವೇಶ್ಯವಾಟಿಯೆಡೆಗೆ ಬಂದರು. ಅರಸ ಮಂತ್ರಿಗಳ ಪುತ್ರರ ಆಗಮನದ ವಾರ್ತೆಯನ್ನು ಕೇಳಿ ಅತಿಸಡಗರದಿಂದ ನೂತನ ವಸ್ತ್ರಾಭರಣ ಗಳಿಂದಲಂಕರಿಸಿಕೊಂಡು ಚೌಬಾರದುಪ್ಪರಿಗೆಗಳನ್ನೇರಿ ನೋಡಲು ಕಾತರರಾಗಿನಿಂತರು.

''ಯಿಂತು ಮೂಲೋಕ ಮೋಹಿಸಿ ಮೂರ್ಚ್ಚೆಗೊಳಿಸಲ್ಕೆ''.... (೨೨-೭೬) ಕಾಂತೆಯರು ತಮ್ಮ ನಳಿದೋಳು ಭುಜ, ಕಲಶಕುಚ ನುಣ್ಣದಪು ಧರಹಾಸಾಸ್ಯದಂತದ ಸುಕಾಂತಿಯ ಸಳ್ಗಂಣ ಕುಡಿನೋಟದಾಬೇಟ ದಾಟದೊಳಿರ್ಧರೂ'' (೨೨-೭೬) ಹೀಗೆ ಸೊಬಗಿನ ಸೋನೆಯನ್ನು ಸುರಿಸುತ್ತಲಿದ್ದ ಗಣಿಕೆಯರನ್ನು ನೋಡುತ್ತ

ಬರುತ್ತಿದ್ದ ನೃಪಸುತ ಮತ್ತು ಮಿತ್ರಸುಬುದ್ಧಿಯರನ್ನು ನೋಡಲು ಪುರಜನರು ಪರಿಜನರು ಪೆಣ್ಗಂಡು ಮುತ್ತಿವತ್ತರಿಸುತ್ತ ವೀಕ್ಷಿಸುತ್ತಿದ್ದರು'' (೨೨-೭೮) ಕರಿಘಟಾವಳಿಗಳು, ರಥವಿತತಿ, ತುರಗದ ಮೊತ್ತಗಳು ಭೇರಿ ಕಹಳೆಗಳ ಘೋಷದಿಂದ ತ್ವರಿತದಿಂದ ನುಗ್ಗುತ್ತಿವೆ. ದೊರೆಕುವರರು ಅತಿವೇಗದಿಂದ ದಿವ್ಯಾಶ್ವಗಳನ್ನು ಚರಣದಿಂದ ಮೀಟಲು ಭರದಿಂದ ಹೇಕರಿಸಿ ಕುಣಿದು, ಹಾರಿ ಕುಪ್ಪಳಿಸಿ ಬರುತ್ತಿರಲು

''ಮುತ್ತಿರ್ದಪುರದ ಪ್ರಜೆ ಅತ್ತತ್ತ ಸರಿಸರಿದು
ವೊತ್ತೊತ್ತೆ ಸಂದಣಿಸಿ ಯೆತ್ತೆತ್ತ ಮುರಿಮುರಿದು'' (೨೨-೮೦)

ಸಾರುತ್ತಿರಲು ಒಬ್ಬ ಬಡವಿಯ ಪುತ್ರ ಭಯವಿಹ್ವಲನಾಗಿ ಅಳುತ್ತ ಎಡವಿ ಬಿದ್ದುಬಿಟ್ಟ. ಮತ್ತೆದ್ದು ನಿಲ್ಲಲು ಎಷ್ಟು ಹಿಡಿದರೂ ನಿಲ್ಲದೆ ಕುಣಿಯುತ್ತಿದ್ದ ನೃಪಸುತನಶ್ವವು

''ಯವೆಯೆಯಾಟ ಮಾತ್ರದೊಳವರನಂಲಂಘಿಸಲು
ಅವನಿಗಬ್ಬರಿಸುತ್ತ ಕೆಡಿಯೆ ಮಂತ್ರಿಜನಶ್ವ
ತವೆಚರಣ ಮಸ್ತಕದಿ ಮೆಟ್ಟಿ ಕುಪ್ಪಳಿಸಲ್ಕೆ ಮಿದದೊಡದು ತರುಣನಳಿಯೆ'' (೨೨-೮೦)

ಸುತ್ತ ಕವಿದವರೆಲ್ಲ ಹಾ! ಎಂದು ಮರುಗುತ್ತಿರಲು ರಾಜಪುತ್ರರು ತುರಗಗಳನ್ನು ತಿರುವಿಕೊಂಡು ನೋಡಿ ಚಿಂತಿಸುತ್ತ ''ಶಿವಶಿವಾಶಿಶುಹತ್ಯ ಸಮನಿಸಿತು ಇನ್ನಿದಕ್ಕೆ ಉಪಾಯವೇನೆಂದು ಆಲೋಚಿಸಿ ಸತ್ಯತಪ್ಪಿದಡೆ ಶಿವ ಮುನಿಯನೆ'' (೨೨-೮೨) ನಿನ್ನಿಂದಾದ ಅಪರಾಧ ನನ್ನದು ಎಂದು ನೃಪಸುತನು ನೆರೆದ ಜನರೆದುರು ಮಂತ್ರಿಜನಿಗೆ ಅಭಯವಿತ್ತು ಅರಮನೆಗೈತಂದರು.

ಸಂಧಿ ೨೩ : ನೃಪಸುತರ ಕುದುರೆಯ ಕಾಲ್ತುಳಿತಕ್ಕೆ ಸಿಕ್ಕುಮಡಿದ ಬಡವಿಯಮಗನ ಸುತ್ತ ಮುತ್ತಿನೆರೆದು ದುಃಖಿಸುತ್ತಿರಲು ಕೊಡಹೊತ್ತು ಬರುತ್ತಿರುವ ಮಹಿಳೆಯೋರ್ವಳು ಕೇಳಿ ''ಸಿಡಿಲು ಶೈಲಕ್ಕೆರಗಿ ಪೊಡವಿಗಿಳಿದಂದದಲಿ'' (೨೩-೪) ಒಡಲೊಳಗೆ ಉರಿವಿದ್ದು ''ಮುತ್ತಿರ್ದ್ದ ಮಂದಿಯನು ವತ್ತಿಯಿಬ್ಬ ಗೆಮಾಡಿ'' (೨೨-೫) ಒಳಹೊಕ್ಕು ಸತ್ತುಬಿದ್ದ ಮಗನನ್ನು ಕಂಡು ಭೂಮಿಗೆ ಬಿದ್ದು ನೆತ್ತಿಯನ್ನು ನೆಲಕ್ಕಪ್ಪಳಿಸಿ ಹುಡಿಯೊಳಗೆ ಹೊರಳಾಡಿ ಅಳುವಳು. ಸುತ್ತಿ ಸೊರಗುತ್ತ ಬೀಳುತ್ತ ಹೊರಳುತ್ತ ಅಳುತ್ತಿರಲು ನೆರೆದ ಜನರು ''ದುಃಖದಿಂಬಡಿದುಕೊಳಲೇಕೆ ದುಂಡೀ'' ಮಡಿದ ಮಗನನ್ನು ರಾಜನಬಳಿಒಯ್ದರೆ ''ವಡಲಿಗಂನವ ನಿಕ್ಕಿ ಬಿಡದೆಸಲಹುವನು'' (೨೨-೬) ಕಡುಶೋಕದಿಂದ ಮಡಿದಣುಗ ಬದುಕಿಬರುವನೆ? ಎನ್ನಲು ನೆರೆದ ಜನರೆಲ್ಲರ ಕರುಳ ಕಿತ್ತು ಬರುವಂತೆ ರೋದಿಸುತ್ತ, ಮಗನಮುದ್ದಿಸುತ್ತ ತನ್ನ ಗತಬದುಕನ್ನು ನೆನೆನೆನೆದು ಮಗನಿಗಾಗಿ ಜೀವ ಹಿಡಿದಿದ್ದೆನೆಂದು ಪ್ರಲಾಪಿಸುತ್ತಾಳೆ. ಶಿವಧೋಯೆನುತ ಮೊರೆಯಿಡುತ ಮಾಧವಾಂಕ ನಾಸ್ಥಾನಕ್ಕೆ ''ಮೃತ್ಯುದೇವತೆಯಂತೆ'' (೨೩-೨೧) ಮಗನ ಶವದೊಂದಿಗೆ ಬರುತ್ತಾಳೆ. ಬಾಯ್ಬಡಿದುಕೊಳ್ಳುತ್ತ ಭೋರಿಡುತ್ತ ಧಾರುಣೀಶ್ವರ ಮೊರೆಯೋ ಕಾರುಣ್ಯ ಗುಣಿಮೊರೆಯೇ ಎಂದು ಆರ್ತನಾದವ ಕೇಳಿ ಸಚಿವನು

ಏನೆಂದು ವಿಚಾರಿಸುತ್ತಾನೆ. ತಾನು ಧನವಂತನೆಂಬ ಶೆಟ್ಟಿಯ ಪತ್ನಿ. ಒಂಭತ್ತು ಮಕ್ಕಳು ಮಡಿದರು. ಆರು ತಿಂಗಳ ಗರ್ಭಿಣಿಯಾಗಿರುವಾಗ ಪತಿ ಸ್ವರ್ಗಸ್ಥನಾಗಲು ಸಿರಿಮುನಿದು ಮನೆಬೆಂದು ಹೆತ್ತವರೂ ಮರಣವಾದರು. ಪರನೃಪನು ಪುರವನ್ನು ಮುತ್ತಿ ಸೂರೆಗೊಂಡನು. ಅನ್ನ ಬಟ್ಟೆಯಿಲ್ಲದೆ ಹೆತ್ತ ಮಗನನ್ನು ಪುಟ್ಟಿಯೊಳಗಿಟ್ಟು ತಿರಿದು ಬದುಕುತ್ತಿದ್ದೆ. ಹೆಸರು ದುಂಡಿ, ಈ ಪಟ್ಟಣದಲ್ಲಿ ಕೊಟ್ಟಣವಕುಟ್ಟಿ ಕೊಡನೀರ ಹೊತ್ತರೆ ಸಿಗುವ ಅಂಬಲಿ ನುಚ್ಚು, ತೌಡುಗಳೇ ಭಾಗ್ಯವೆಂದುಕೊಂಡು ಪಾಳುದೇಗುಲದಲ್ಲಿ ಶಿಶುವಿಗುಣಿಸಿ ಉಂಡು ಬಾಳುತ್ತಿದ್ದೆ. ನೃಪಕುಮಾರರು ವೈಹಾಳಿಯಿಂದ ಮರಳಿ ಬರುವಾಗ ನೃಪಸುತನ ಅಶ್ವ ನನ್ನ ಮಗನ ಕೊರಳ ಮೆಟ್ಟಿ ಪ್ರಾಣನೀಗಿತು. ಮಗನ್ನು ನಂಬಿ ಬದುಕಿದ್ದೆ, ಇನ್ನಾರುಗತಿ? ಎಂದು ಬಿಕ್ಕಿ ಬಿಕ್ಕಿ ಅಳುವಳು. ಸಚಿವನ ಸಂತೈಕೆಗೆ ಮತ್ತಷ್ಟು ದುಃಖಿತಳಾದ ದುಂಡಿಯನ್ನು ಕಂಡು ಮಾಧವನೃಪನು

"....... ಯೆಲೆಸಚಿವ ಅಂನರು ವೆಯಿತ್ತು ರಕ್ಷಿಸುವೆನೆಂಬುದುಧರ್ಮವೆ"

".........ಯೆಡೆ ಮಾಡಬೇಕರ್ಬ್ಭಕ ನಕೊಂದವನಯಸುವಶಿ |

ಚೂಡಮೆಚ್ಚುವನು...." (೨೩-೩೭)

ಪಕ್ಷಪಾತವ ಮಾಡಿದರೆ ಭೂತಾಯಿ ಮುನಿಯುವಳು ಎನ್ನಲು ಮಂತ್ರೀಶನು ಕರಿದಲೆಗೆ ಶ್ರೀಪಟ್ಟ | ದಾನೆಯನು ಬಲಿಗೊಡುವರುಂಟೆ ತಿರುಕಿಯ ಕೂಸಿಗರಸ ಪುತ್ರನ ಕೊಲಿಪರೆ ಆಗ ನೃಪನು "ಪರಮಶಿವಭಕ್ತ ರಿಡಿದಾಚರಣೆಗೆಡರು ತಹಸುತನೇನು ಶತ್ರುಯೇನೂ" (೨೩-೪೯) ಬಡವ ಬಲ್ಲಿದರೆಂಬ ಭೇದಸಲ್ಲದೆಂದು ಬೊಮ್ಮಯ್ಯನಿಗಾಗಿ ಅಸುವಿತ್ತ ಬಸವಣ್ಣ, ಜೇಡಕ್ಕಾಗಿ ಪ್ರಾಣವರ್ಪಿಸಿದ ಚೋಳರಾಯ ಗೋಗರುವಿನ ಪ್ರಾಣಕ್ಕೆ ಸುತನ ನರ್ಪಸಿದ ಚೋಳದೊರೆ ಕಿನ್ನರಿಬೊಂಮಯಾದಿಗಳು ಪರಹಿತಕೆ ಪ್ರಾಣವಿತ್ತ ಶರಣರೆಂದು ತಿಳಿಹೇಳಿ ಕೊಂದವರಿಗೆ ಕೊಲೆ ತಪ್ಪದೆನ್ನುತ್ತಾನೆ. ಮಂತ್ರಿಯು, ಸತ್ಯದಿಂದ ಭಂಗಪಟ್ಟ ಹರಿಶ್ಚಂದ್ರ ಬಲಿಪಾತಾಳಗತನಾದ, ಧರ್ಮರಾಯ ದುಃಖಿತನಾದ, ಕವಚತೆಗೆದು ಕರ್ಣ ಅಂತ್ಯವಾದ, ತಾಳ್ಮೆಯಿಂದ ವಿಚಾರಿಸಿರಿ ಎನ್ನಲು ನೃಪನು ಯೀಮನುಷ್ಯತನುವನಿತ್ಯಂಕೀರ್ತಿತಾನಿತ್ಯ ಕೂಮತಿಯು ನಾನಲ್ಲವೊ..... ಯಂನ ಸತ್ಯಕ್ಕೆ ಯಡರ ತಾಹಶತ್ರುಗಳು ನೀವು" (೨೩-೬೩) ನನ್ನ ಮಾತಿಗೆ ಪ್ರತಿಯಾಡೆ ಶಂಭುದೇಶಿಕ ನಂಘ್ರಿಯಾಣೆ ಎಂದು ಘರ್ಜಿಸಲು ಸರ್ವರೂ ಬೆದರಿ ಮೌನವಾದರು.

ಸಂಧಿ ೨೪ : ಕೋಪಾಗ್ನಿ ಹೊನಲೇರಿ ಕಡುದುರುಳರಾದ ದೂತರಿಗೆ ಆ ದುಷ್ಟ ಬಸವಕುಮಾರನನ್ನು ಎಳೆದು ತರಲು ಆಜ್ಞಾಪಿಸುವನು. ಶಿವಧ್ಯಾನದಲ್ಲಿದ್ದ ನೃಪಸುತನು ಸಂತಸದಿಂದ ವಿಷಯ ತಿಳಿದು ಲಿಂಗಧರಿಸಿ ಹೊರಡಲಣಿಯಾಗಲು ಸುಬುದ್ಧಿಯು ತಡೆಯುತ್ತಾನೆ. ಅಪರಾಧ ನನ್ನದು ನಿನ್ನಸುವಿತ್ತಡೆ ಎರಡು ಕೊಲೆಯ ಅಪರಾಧಿಯಾಗುತ್ತೇನೆ. ಆದ್ದರಿಂದ ನನ್ನ ತಲೆಗೊಡುವೆ, ನೀ ಹೋಗದಿರೆಂದು ಅಡ್ಡ ಬೀಳುತ್ತಾನೆ. ನಿನ್ನ ಅಪರಾಧ ನನ್ನದೆಂದು ನಾನು ಒಪ್ಪಿಕೊಂಡ ಮೇಲೆ ಇದು ನನ್ನದೇ ಅಪರಾಧ ನಿನ್ನದಲ್ಲ, ನಾನು ಮಾತಿಗೆ ತಪ್ಪಿದರೆ ಶಿವನಂಘ್ರಿಗತಿದೂರನಾಗುವೆ. ನನ್ನ ಸದ್ಗತಿಗೆ ಅವಕಾಶಕೊಡು ಎಂದು ಸಂತೈಸಿ ವಂದಿಸಿ ಸಭೆಗೆ

ಆಗಮಿಸುತ್ತಾನೆ. ಹುಸಿಯಬೇಡ ಮಗನೆ ಸತ್ಯದಿಂದ ಸದ್ಗತಿ ಪಡೆದವರು ಹಲವರುಂಟು, ಬಡವಿಯ ಮಗನನ್ನು ನೀನಲ್ಲವೆ ಕೊಂದದ್ದು ಎಂದು ಪ್ರಶ್ನಿಸಲು..... ಅಪಕೀರ್ತಿ ಭಾಜನನಾಗಿ ಬಾಳುವೆನೆಕೊಂದುದೆದಿಶಂ" (೨೪-೧೨) ಎಂದು ಬಸವಕುಮಾರನು ಸತ್ಯ ನುಡಿಯಲು ನೃಪನು ಅತ್ಯಾನಂದದಿಂದ ತನ್ನ ಗುರುವು ಹೇಳಿದ ಮಾತು ನಿಜವಾಯಿತೆಂದು ತಿಳಿದು ತನ್ನ ಸತಿಯ ಮತವರಿಯಲು ಬರ ಹೇಳುತ್ತಾನೆ. ಅವಳೋ ಪತಿಗೆತಕ್ಕ ಸತಿ | "ನೀವು ಪಿಡಿದಾಚರಣೆಯಂಪಿಡಿವೆ ಬಿಟ್ಟುದಂ ನಾವು ಬಿಡುವೆವು" .....ಎಂದು ಹೇಳಿ "ಜೀವಕ್ಕೆ ಜೀವಕೊಡುವುದೆ ಧರ್ಮ..." (೨೪-೧೭) ಎಂದು ಬಿನ್ನವಿಸುತ್ತಾಳೆ. ಹಾಗಾದರೆ ನಿನ್ನ ಮಗನಿಗೆ ಮಜ್ಜನ ಸುಭೋಜನಗೈಸಿ ಕಳುಹೆಂದು ನಿರವಿಸುವನು. ಆಕೆ ಮಗನೊಡಗೊಂಡು ಮಜ್ಜನಗೈಸಿ, ಶಿವಪೂಜೆಗೆಡೆ ಮಾಡಲು ಬಸವಕುಮಾರನು ಪೂಜೆಗೈದು, ಮಂತ್ರಸ್ತುತಿಸಿ, ನೈವೇದ್ಯಸಮರ್ಪಿಸಿ, ಭಜಿಸುತ್ತಿರಲು ಮಾತೆ ಮಾದಾಂಬೆ ಷಡ್ರಸಾಯನವ ನುಣಬಡಿಸಿ, ಮದುವಣಿಗನಂತಲಂಕರಸಿ ಹರಸಿ

"ಯಲೆಕುವರ ಭೂಪನವಿಮಳಸತ್ಯಕ್ಕೆ
ಕೊರತೆ ಬರದೆ ....ಯೇಕಭಾವದಿಂ ಪೋಗಿಪಡಿ
ಗೊಡಲು ಯಿಳೆ ಹೊಗಳುವದು ಮೃಡಮೆಚ್ಚಿ ವೀರಗಣ ಪದವಿಯನ್ನೀಯುವನು"(೨೪-೨೪)

ಎಂದು ಬುದ್ಧಿ ಹೇಳುವಳು. ತಾಯ ಅಡಿಗೆರಗಿ ದುಃಖದಿಂದ ತನ್ನನ್ನು ತಡೆಯುತ್ತಿದ್ದ ಪುರ ಜನರಿಗೆ ಶಿವನಾಣೆಯಿಟ್ಟು ಆಸ್ಥಾನಕ್ಕೆ ಬರುತ್ತಾನೆ. ನೃಪನು ದುಷ್ಟದೂತರಿಗೆ ಆಜ್ಞಾಪಿಸಲು ಅವರು ನೃಪಸುತನ ಕರೆದೊಯ್ಯುತಿರಲು "ಭೂಮಿ ಬೆಸಲಾದಂತೆ" (೨೪-೨೬) ಜನಬಂದರು. ಪರಿಪರಿಯಾಗಿ ರೋದಿಸಹತ್ತಿದರು. ತಾಯಿಯಾದರೂ ಹೇಗೆ ಒಪ್ಪಿಗೆಕೊಟ್ಟಳೋ ಕಣ್ಣರಿಯದಿದ್ದರೂ ಕರುಳರಿಯಲಿಲ್ಲವೇ? ಎಂದು ದುಃಖಿಸಿದರು. ವಧಾಸ್ಥಾನದಲ್ಲಿ ಕುಳ್ಳಿರಿಸಿ ದೂತನು "ನೆರೆಸ್ಮರಿಸು ಶಿವನ ಜಾನಿಸುಮಂತ್ರ ಮರೆಯದಿರು" (೨೪-೪೫) ಎನ್ನಲು ನೃಪಸುತನು ಶಿವಧ್ಯಾನಮನನಾಗಿ ಕೊರಳ ಕತ್ತರಿಸಿ ಭೂಪಾಲರಿಗೆ ಕಾಣಿಕೆಯನೊಯ್ಯೆಂದು ಹೇಳುತ್ತಾನೆ. ಸುರಗಿಯ ನೆತ್ತಿ ಹೆಡತಲೆಗೆ ಹೊಡೆಯಲು ಶಿವನಾಮ ಜಪಿಸುತ್ತ ಆ ತಲೆಯು ಅಂತರಿಕ್ಷದಲ್ಲೇ ನಿಲ್ಲಲು ಜನರೆಲ್ಲ ಬೆಕ್ಕಸ ಬೆರಗಾದರು. ದೂತ ಕೈಯೆತ್ತಿ ಕರೆಯಲು ಅವನ ಕರದೊಳು ಕುಳಿತು ಶಿವನಾಮ ಸ್ಮರಿಸ ತೊಡಗಿತು. ಆಸ್ಥಾನಕ್ಕೆ ಬರಲು ದೂತನು ದೊರೆಯ ಮಗನ ಕೊಲೆಯ ತೀರಿಸುವ ಪರಿಯ ಹಾಗೆ ತನ್ನ ಶಿರವನರಿದುಕೊಳ್ಳುವನು. ಮಂತ್ರಿಸುತನು ತನ್ನ ಅಪರಾಧಕ್ಕಿವರಳಿದರೆಂದು ತನ್ನ ಶಿರಗೊಡಲು ಬಡವಿಯು ತನ್ನಯ ಸುತನಿಗೆ ನೃಪಸುತನ ಶಿರ, ಮತ್ತೆರಡು ಕೊಲೆ, ಇದು ತನ್ನ ಬಿಡದೆಂದು ತನ್ನ ಮಸ್ತಕವನ್ನು ಕತ್ತರಿಸಿಡಲು, ಧರಣೀಶ ಬೆರಗಾಗಿ ತನ್ನ ಶಿರವನರಿದುಕೊಳ್ಳುಲುಜ್ಜುಗಿಸಲು ಶಿವನು ನಭದಿಂದ ತಿಳಿದು ಪರಿವಾರಸಹಿತ ಪ್ರತ್ಯಕ್ಷನಾಗಿ ಖಡ್ಗವಹಿಡಿದು "ಮೆಚ್ಚಿದೆನೆಲಾ ನೀನು ಬೇಡಿದುದನೀವೆ, ನಿನ್ನಂತೆ ಎನ್ನ ನೊಲಿಸಿದವರು ಯಾರೂ ಇಲ್ಲ"ವೆನಲು ಮಾನುಷ್ಯನಾಗಿ "ಮರ್ತ್ಯದಲಿಬಾಳ್ವುದೆ ಸಾಕು" (೨೪-೬೨) ಬಡವಿಸುತ ಸಹಿತ ಸರ್ವರಿಗೆ ಅಸುವನ್ನು ಕರುಣಿಸು, ನನಗೆ ಮುನ್ನ ನೀವೆಂದಂತೆ ಸಾಯುಜ್ಯವನ್ನಿತ್ತು ರಕ್ಷಿಸು ಎಂದು ಬೇಡಲು ಕರುಣಾಕರ ಶಿವನು ಕರುಣಾವ ಲೋಕನದಿ ವೀಕ್ಷಿಸುತ ಕರೆಯಲು

"......... ತಮತಮಗೆ ತವಕದಿಂದೆ

ಹರಣಕಳೆ ತುಂಬಿ ಚೇತರಿಸೆದ್ದು ಶಿವನಾಮ

ಸ್ಮರಿಸುತ್ತಲೈವರಂಬಂದು ಭವನಂಘ್ರಿಯುಗ

ಸರಸಿಜಕೆ ಮಸ್ತಕವ ಮಣಿದು ವಂದಿಸು"(೨೪-೬೩)ವರು

"ಆ ಸಮಯದಲ್ಲಿ ರಾಣಿ ಮಾದಾಂಬಿಕೆಯು ಹೊನ್ನ ಹರಿವಾಣದಲ್ಲಿ ಮಾಣಿಕ್ಯದಾರತಿಯ ತೀವಿ ಸಖಿಯರ ಸಮೇತ ಶಿವಶಿವೆಗೆ ಬೆಳಗುತ್ತ ಕೀರ್ತಿಸಿದರು. ಶಿವಮುಖ್ಯರ್ಗ್ಗಖಿಳರಿಗೆ ಷಡ್ರಸಯುಕ್ತ ರಸಾಯನವನ್ನು ಎಡೆಮಾಡಿ ತಾಂಬೂಲವನ್ನು ಸಮರ್ಪಿಸಿ ಸಡಗರದಿಂದ ಸತ್ಪ್ರಮಥಗಣಗಳ ದಿವ್ಯಪಾದಂಗಳಿಗೆ ಶಿರಬಾಗಿವಂದಿಸಿ ಆಶೀರ್ವಾದ ಪಡೆದರು. ಅಷ್ಟರಲ್ಲಿ...... "ಮೃಡನನೇಮದಿ ಸೂರ್ಯ್ಯಕೋಟಿ ಪ್ರಭಾಮಯದಿಕಡು ರಂಮ್ಯತರವೆತ್ತ ಪುಷ್ಪಕಂಗಳು ದೇವಸರಣಿಯಿಂದಿಳಿದು" (೨೪-೬೫) ಬಂದು ಮಾಧವಾಂಕ ಮಾಧವಿ, ಸುಬುದ್ಧಿ,ಬಸವಕುಮಾರ, ದುಂಢಿ ಮತ್ತು ಆಕೆಯ ಮಗ ಮತ್ತು ದೂತರನ್ನು ಸತ್ಪ್ರಮಥಗಣರೊಡನೆ ಕರೆದೊಯ್ಯುತ್ತಿರಲು ಕುಸುಮವೃಷ್ಟಿಯಾಯಿತು. ದೇವ ದುಂದುಭಿಗಳು ಮೊಳಗಿದವು. ಸೋಮಶೇಖರನು ಅವರಿಗೆಲ್ಲ ರುದ್ರಗಣಪದವಿತ್ತು ಕೊಂಡಾಡಿದನು.

ಈ ಕಾವ್ಯವನ್ನು ಬರೆದು, ಓದಿ, ಹೇಳುವವರಿಗೆ ಆಕೋಳೂರ ಪುರವರಾಧೀಶನು "ಕಾಮಿತಾರ್ಥ ವನಿತ್ತು ಸಲಹುವನು" (೨೪-೬೭) ಎಂದು ಹರಸುತ್ತಾ ಪುರಾತನ ನೂತನಶರಣರನ್ನು ಶಂಕರಕವಿಯು ಸ್ಮರಿಸಿ ಕೊಳ್ಳುತ್ತಾನೆ. ಶಾಲಿವಾಹನ ಶಖಸಾವಿರದ ಆರನೂರ ಎಪ್ಪತ್ತೊಂಭತ್ತನೆಯ ಈಶ್ವರವರ ನಾಮ ಸಂವತ್ಸರದ ಜ್ಯೇಷ್ಠ ಬಹುಳ ಸಪ್ತಮಿಯ ಬುಧವಾರ ಶ್ರವಣ ನಕ್ಷತ್ರದ ಶುಭಲಗ್ನದಲ್ಲಿ ಈ ಕಾವ್ಯರಚನೆ ಸಂಪೂರ್ಣ ವಾಯಿತೆಂದು ತಿಳಿಸುತ್ತಾನೆ.

೪.೩. ಕೃತಿ ವಿಮರ್ಶೆ

ತಮಿಳು ಸಾಹಿತ್ಯದಲ್ಲಿ ಪ್ರಚಲಿತವಾಗಿದ್ದ 'ಸತ್ಯೇಂದ್ರಚೋಳ'ನ ಕಥೆಯನ್ನು ಆಧರಿಸಿ ರಚಿತಗೊಂಡಿರುವ ಕೃತಿಯಿದು. ಕಥಾವಸ್ತುವಿನ ದೃಷ್ಟಿಯಿಂದ ಕನ್ನಡದಲ್ಲಿ ಇದುವರೆಗೆ ರಚನೆಗೊಂಡಿರುವ ಕೃತಿಗಳಲ್ಲಿ ಸ್ವಲ್ಪ ಭಿನ್ನವಾಗಿ ನಿಲ್ಲುವ ಕೃತಿ. ನ್ಯಾಯ, ಸತ್ಯಗಳೇ ಶಿವನಸಾಕ್ಷಾತ್ಕಾರದ ಸಾಧನಗಳೆಂದು ನಂಬಿ ಮಗನನ್ನು ಬಲಿಕೊಟ್ಟ ಅರಸ, ಮಹಾನ್ ಶೈವಭಕ್ತ ಮಾಧವಾಂಕ. ಆತನ ಮುಗ್ಧಗುರುಭಕ್ತಿ ಹಾಗೂ ಶಿವಾರ್ಪಿತವ್ಯಕ್ತಿತ್ವದ ಮೂಲಕ ಪಂಚಾಕ್ಷರಿಮಂತ್ರದ ಮಹಿಮೆಯನ್ನು ವಿಭಿನ್ನ ರೀತಿಯಲ್ಲಿ ಹೇಳುವ ಪ್ರಯತ್ನ ಮಾಡಿರುವ ಕಾವ್ಯ. ಇದು ವರ್ಣನಾ ಪ್ರಧಾನವಾದ ಕಾವ್ಯ. ಮಾಧವಾಂಕನ ವ್ಯಕ್ತಿತ್ವಕ್ಕೆ ಪೋಷಕವಾಗಲೆಂದು ಚಿತ್ರಿಸಲ್ಪಟ್ಟಿರುವ ಉಪಕಥೆಗಳು ಓದುಗನನ್ನು ಗೊಂದಲಕ್ಕೀಡು ಮಾಡುವಂತಿದ್ದು, ಕಥೆಯ ಮೂಲಕೊಂಡಿಯೇ ತಪ್ಪಿ ಹೋದ ಅನುಭವಕ್ಕೆ ತಂದು ನಿಲ್ಲಿಸುತ್ತವೆ. ಚೋರಬಸವೇಶ್ವರ ಕಾವ್ಯದಲ್ಲಿ ಕಾಣುವಷ್ಟು ಔಚಿತ್ಯಪ್ರಜ್ಞೆ, ಬಿಗುವಾದ ಬಂಧ ಇಲ್ಲಿಲ್ಲವೆಂದೇ ಹೇಳಬಹುದು. 'ರಾಜಶೇಖರ ವಿಳಾಸ'ದ ಅಷ್ಟಾದಶವರ್ಣನೆಗಳ ಪ್ರಭಾವಕಾರಣವಾಗಿ ಶಂಕರ

ಕವಿಯು ಈಕಾವ್ಯವನ್ನು ಇಪ್ಪತ್ನಾಲ್ಕು ಸಂಧಿಗಳ ಬೃಹತ್ ಗಾತ್ರದ ಕಾವ್ಯವಾಗಿಸಿದ್ದಾನೆ. ಕೆಲವು ಕೊರತೆಗಳ ಮಧ್ಯದಲ್ಲೂ ಹಲವಾರು ವೈಶಿಷ್ಟ್ಯಗಳನ್ನು ಈ ಕಾವ್ಯ ಒಳಗೊಂಡಿದೆ. ಅವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಬಹುದು.

೧. ಸಾಮಾಜಿಕ ವಿವೇಚನೆ : ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ. ಜನತೆ, ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದಕಲೆ, ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆದೇಶದ ಇತಿಹಾಸ.[೧] ಯಾವುದೇ ನಾಡಿನ ಜನಜೀವನವನ್ನು ಅರಿಯಲು ಮೊದಲ ಉತ್ತಮ ಸಾಧನಗಳ ಸಾಲಿನಲ್ಲಿ ಶಾಸನಗಳು ನಿಂತರೆ, ನಂತರದ ಸ್ಥಾನಸಲ್ಲುವುದು ಕಾವ್ಯಗಳಿಗೆ. ಪ್ರಧಾನವಾಗಿಯಲ್ಲದಿದ್ದರೂ ಆನುಷಂಗಿಕವಾಗಿ ತನ್ನ ಕಾಲದ ಜನಜೀವನವನ್ನು ಸಮಾಜದ ಆಲೋಚನಾವಿಧಾನಗಳನ್ನು, ಆಚಾರ, ವ್ಯವಹಾರ, ಸಂಪ್ರದಾಯಗಳನ್ನು[೨] ಕವಿಯು ಪ್ರತಿಬಿಂಬಿಸುತ್ತಾನೆ. ಪ್ರಸ್ತುತ ಮಾಧವಾಂಕ ಕಾವ್ಯದಲ್ಲಿ ಉಲ್ಲೇಖಗೊಂಡಿರುವ ಸಂಪ್ರದಾಯಗಳು, ಸ್ತ್ರೀಯರ ಸ್ಥಾನಮಾನ ಮುಂತಾದ ಸಾಮಾಜಿಕ ಅಂಶಗಳನ್ನು ಹೀಗೆ ಕ್ರೋಢೀಕರಿಸಬಹುದು.

ಸಂಪ್ರದಾಯಗಳು

೧. ಗಣಪತಿಯ ಆರಾಧನೆ : ಮಗುವಿಗೆ ವಿದ್ಯೆಕಲಿಸಲು ಆರಂಭಿಸುವುದಕ್ಕಿಂತ ಮೊದಲು ವಿಘ್ನೇಶ್ವರನ ಪೂಜೆಗೈದು ಶಿಕ್ಷಣ ನಿರ್ವಿಘ್ನವಾಗಿ ನೆರವೇರಲೆಂದು ಬೇಡುವುದು ಇಂದಿಗೂ ಅನೇಕ ಮನೆಗಳಲ್ಲಿ ಪ್ರಚಲಿತವಾಗಿರುವ ಸಂಪ್ರದಾಯ. ಈ ಕೃತಿಯಲ್ಲಿ ದೊರೆ ಹರಿಹರರಾಯನು ತನ್ನ ಪುತ್ರನಿಗೆ ವಿದ್ಯೆ ಕಲಿಸಲೆಂದು ಪಂಡಿತರಿಗೆ ಬರಹೇಳುತ್ತಾನೆ. ಆಸ್ಥಾನಕ್ಕೆ ಆಗಮಿಸಿದ ಪಂಡಿತರು ಅರಸನನ್ನು ಕುರಿತು

''ಅತಿನೇಮದಿಂ ಹಿಗ್ಗಿ ವಿದ್ಯದಾರಂಭಕ್ಕೆ
ನುತ ಗಣಪನಾರಾಧನೆಯ ಮಾಡುವರೆ ಶುಭೋಂ
ನ್ನತಿಯ ವರಲಗ್ನಮಂ ನೋಡಿ ನೇಮಂಗೈಯ್ಯೆ'' (೨-೩)

ಎಂದು ಸೂಚಿಸುತ್ತಾರೆ. ಅತಿಶಯದಾನಂದದಿಂದ ದೊರೆಯು ವೈಭವದ ಪೂಜಾ ಸಿದ್ಧತೆಗೆ ಸಚಿವೇಂದ್ರನನ್ನು ಕರೆದು ಆಜ್ಞಾಪಿಸುತ್ತಾನೆ. ಪೂಜಾರಿಗಳು ವೇದೋಕ್ತ ರೀತಿಯಲ್ಲಿ ವಿಘ್ನೇಶ್ವರನಿಗೆ ಪಂಚಾಮೃತ ಅಭಿಷೇಕಮಾಡಿ

....................ನೃಪವತ್ಸನಂ ಪಂಡಿತಂ (೨-೨೧)
ಕರವಿಡಿದು ಬೆರಳ್ಗೊನೆಯ ಸಾಚ್ಚ್ಯರ್ತೆಷಡಕ್ಷರವ ಬರಸಿದನು ಪೊಂಬಲಗೆಗೆ (೨ -೩೩)

ತಮ್ಮ ಸುಪುತ್ರನು ಬರೆಯುವುದನ್ನು ನೃಪನಾದಿಯಾಗಿ ಸರ್ವರೂ ವೀಕ್ಷಿಸುತ್ತಿರುವಾಗ ''ನಾರೀಮಣಿಗಳು ಗಣಪವಾಣಿಯರನ್ನು ಸ್ತುತಿಗೈಯುವ ಚೌಪದ''ವನ್ನು ಹಾಡುತ್ತಾರೆ. (೨-೩೩)

೨. ವಿವಾಹವಿಧಿ : ದೊರೆ ಹರಿಹರರಾಯನು ತನ್ನ ಮಗಳು ಮಾಧವಿಯನ್ನು ಅಕಳಂಕ ಶಿವಭಕ್ತ ಮಾಧವನಿಗೆ ಧಾರೆ ಎರೆದು ಕೊಡುವ ನಿರ್ಧಾರಕ್ಕೆ ಬಂದಾಗ ಶಂಕರಕವಿಯು ಸಾಮಾನ್ಯವಾಗಿ ಕನ್ನಡಿಗರ

[illegible]

'ವಿವಾಹ ಪದ್ಧತಿ'ಯ ಎಲ್ಲ ವಿಧಿವಿಧಾನಗಳನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಬೀಗರನ್ನು ಎದುರುಗೊಳ್ಳುವುದು. ವರನನ್ನು ಕರೆತರುವುದು, ಅಖಿಲಬಂಧುಗಳನ್ನು, ಸ್ನೇಹಿತರನ್ನು, ಸಾಮಂತರನ್ನು ಆಮಂತ್ರಿಸುವುದು. ಜೋಯಿಸರನ್ನು ಕರೆಸಿ ಶುಭಲಗ್ನ ನೋಡುವುದು, ಮುತ್ತೈದೆಯರು ಆಗಮಿಸುವುದು (೬-೨೬) ಇತ್ಯಾದಿಗಳ ವಿವರಣೆಗೆ ಒಂದು ಸಂಧಿಯನ್ನೇ ಮೀಸಲಾಗಿಟ್ಟಿದ್ದಾನೆ. ವಧುವಿನ ಶೃಂಗಾರಕ್ಕೆಂದೆ ಈ ಕಾವ್ಯದಲ್ಲಿ ಏಳನೆಯ ಸಂಧಿ ಮೀಸಲಾಗಿದ್ದು, ಕವಿಯ ಸೂಕ್ಷ್ಮನಿರೀಕ್ಷಣಾಪ್ರಜ್ಞೆ, ರಸಿಕತೆ, ಸೌಂದರ್ಯ ಪ್ರಜ್ಞೆಗಳು ಮುಪ್ಪುರಿ ಗೊಂಡದ್ದನ್ನು ಗುರುತಿಸಬಹುದು. ಮಾದಲಾಂಬಿಕೆಯ ಕೇಶಕ್ಕೆ ತರುಣಿಯರು ಮಲ್ಲಿಕಾತೈಲವನ್ನು ಪೂಸಿ ಮಜ್ಜನಮನೆಗೆ ಕರೆದೊಯ್ದು ವಿಮಲ ಪೀಠದಲ್ಲಿ ಕುಳ್ಳಿರಿಸಿ ಕೊಪ್ಪರಿಗೆಯೊಳಗೆ ಪಂನಿರ್ವೆರಸಿ ಘರ್ಮೋದಕವನು ಪೊಂದಬುಗೆಗಳೊಳ್ಮೊಗೆದು ಯರೆದರತ್ಯುತ್ಸವದೊಳೂ (೭-೧೨)

ನಂತರ ದಿವ್ಯಾಂಬರವನ್ನು ನಿರಿಗೊಳಿಸುತ ಉಡಿಸಿ ಆಭರಣಗಳನ್ನು ತೊಡಿಸುತ್ತಾರೆ. ರತ್ನಖಚಿತ ಕಟಿಯನ್ನು ಸೊಂಟಕ್ಕೆ, ಬೈತಲೆಯ ತುದಿಗೆ ಮೌಕ್ತಾವಳಿಯನ್ನು, ಮುತ್ತಿನ ಬೊಟ್ಟನ್ನು, ಮೂಗುತಿ, ರಂನಗೆಲಸದ ಕಂಠಮಾಲೆ, ಮಣಿಪದಕ, ತೋಳಭಾಪುರಿ, ಕಂಕಣ, ಉಂಗುರ,ವಡ್ಯಾಣ, ಹೊಂಗೆಜ್ಜೆ, ಪಿಲ್ಲಿಗಳನ್ನೆಲ್ಲ ಹಾಕಿ ಶೃಂಗರಿಸಲು ಆ ವಧು

> ಚೆಂನಾಗಿ ಮೆರೆವ ಷೋಡಶಕಲಾಭರಿತದಿಂ
>
> ಪೊಂನ ಪುತ್ಥಳಿಯಂತೆ ಪರಿರಾಜಿಸುತ್ತ (೭-೩೯)ಲಿದ್ದಳು. ವರನಾದ ಮಾಧವನನ್ನೂ
>
> ...... ವಿಮಲತರ | ಜಲದಿಂದ ಮೈದೊಳೆದು ದಿವ್ಯಾಂಬರವನಿತ್ತು
>
> ಲಲಿತಗಂಧಾಕ್ಷತೆಯ ಫಣೆಯಲ್ಲಿ ಧರಿಸಿ ಮಣಿದೊಡವುಗಳ ತೊಡರ್ಚಿ" (೮-೫)
>
> "ಕಗ್ಗಂಬಳಿಯಹಾಸಿ ಬಿಡಿಮುತ್ತಚೌಕಮಂತೀವಿ" (೮-೬)

ಕುಳ್ಳಿರಿಸುತ್ತಾರೆ. ನಂತರ ಲಿಂಗಪೂಜೆ ಮುಗಿಸಿಕೊಂಡು ಚಿನ್ನದಪಲ್ಲಕ್ಕಿಯಲ್ಲಿ ಕರೆತರುತ್ತಾರೆ ವಿವಾಹ ಮಂಟಪಕ್ಕೆ. "ಮಾಧವನ ಸಂಮುಖದಿ "ತೆರವಿಡಿದು" ತರುಣಿಯರು ಮಾಧವಿಯನ್ನು ಕರೆತಂದು ನಿಲ್ಲಿಸುತ್ತಾರೆ. (೮-೨೧) ಭೂಸುರರು ಶ್ರುತಿಘೋಷದಿಂದ 'ಮಂತ್ರಾಕ್ಷತೆ'ಯನ್ನು ಸುರಿಸುತ್ತಾರೆ. ನಂತರ.

> ಪರಿಪರಿಯ ಅಂನಪಾನಗಳಿಂದಲೊಲಿದುಶಿವ
>
> ಶರಣಗಣಕಾರಾಧನೆಯಗೈಸಿ ಭೂರಿಭೂಸುರ ಚಯಕೆಸಂತಸವನೆಸಗಿ
>
> ವಿದ್ವಾಂಸಯಾಚಕಜನವತ್ರುಪ್ತಿವಡಿಸೀ
>
> ಪರಮಬಾಂಧವನೃಪಾಲರ್ಗ್ಗೆವಸ್ತ್ರಾವಳಿಯನಿರದಿತ್ತು (೮-೨೩)

ಮನ್ನಣೆಯಿಂದ ಸರ್ವರನ್ನೂ ಅರಸನು ಬೀಳ್ಕೊಡುತ್ತಾನೆ.

ನಾಮಕರಣ : ಮಾದಲಾಂಬಿಕೆಯು ಗುರುಕೃಪೆಯಿಂದ ಸತ್ಪುತ್ರನನ್ನು ಪಡೆಯಲು ಅರಸನು 'ಆಗಮಿಕರನ್ನು ಕರೆಸಿ ಜಾತಕ'ವನ್ನು ಕೇಳುತ್ತಾನೆ. (೨೦-೫೧) ಬೇಡಿದವರಿಗೆಲ್ಲ ಅವರು ಬೇಡಿದ್ದನ್ನಿತ್ತು ಪುರದ

[illegible]

ಲಿಂಗಾಲಯಗಳಲ್ಲಿ ಅಭಿಷೇಕಮಾಡಿಸಿ "ಭಂಡಿಗಳ ಮೇಲೆ ಸರ್ಕರಿಯ ಹೇರಿ ನಗರದಲ್ಲಿ ಬೀರಿಸುತ್ತಾನೆ" (೨೦-೫೨) ಶ್ರೀ ಗುರುವಿಂದ ಮಗುವಿಗೆ ಲಿಂಗದೀಕ್ಷೆ ಮಾಡಿಸಿ, ನಾಮಕರಣ ಮಾಡಿಸುತ್ತಾರೆ.

ತೊಟ್ಟಿಲ ಕಾರ್ಯಕ್ರಮ : ಮಗು ಹುಟ್ಟಿದ ಹನ್ನೆರಡನೆ ದಿನಕ್ಕೆ 'ತೊಟ್ಟಿಲಿಗೆ ಹಾಕುವಕಾರ್ಯ' ವಿಜೃಂಭಣೆ ಯಿಂದ ಜರುಗುತ್ತದೆ. ಪುರದ ಮುತ್ತೈದೆಯರೆಲ್ಲ ಆಗಮಿಸಿ ಕಾಲ್ತೊಳೆದುಕೊಂಡು ತಾವು ತಂದ ಉಡುಗೊರೆ ಗಳನ್ನು ಮಗುವಿಗೆ ನೀಡುತ್ತಾರೆ. ರಾಣಿಯು ಅವರನ್ನೆಲ್ಲ ಸತ್ಕರಿಸಿ ತಾನೂ ಶೃಂಗರಿಸಿಕೊಂಡು ಅಣಿಯಾಗುತ್ತಾಳೆ. ಸರ್ವರೂ ತೊಟ್ಟಿಲನ್ನು ಶೃಂಗರಿಸಿ, ಮಗುವಿಗಭ್ಯಂಜನ ಮಾಡಿಸಿ, ಅಲಂಕರಿಸಿ ತೊಟ್ಟಿಲಲ್ಲಿಟ್ಟು ಜೋಗುಳ ಹಾಡುತ್ತ ತೂಗುತ್ತಾರೆ. ಅವರಿಗೆಲ್ಲ ಸಂತಸದಿ ಫಲತಾಂಬೂಲವಿತ್ತು (೨೦-೮೩) ಕಳುಹಿಸಿ ಕೊಡುತ್ತಾರೆ. ಈ ಎಲ್ಲ ಆಚರಣೆಗಳು ಇಂದಿಗೂ ಆಚರಿಸಲ್ಪಡುತ್ತವೆಂಬುದು ನಾವು ಗಮನಿಸಬೇಕಾದ ಅಂಶ.

ಸ್ತ್ರೀಯರ ಸ್ಥಾನಮಾನ : ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತು ಎಂದು ಹೇಳಿಕೊಳ್ಳಲು ಉಪನಿಷತ್ತಿನಲ್ಲಿ ಒಂದೆರಡು ನಿದರ್ಶನಗಳೇನೋ ದೊರೆಯುತ್ತವೆಂಬುದು ಸತ್ಯ. ಆದರೂ ವ್ಯಾಪಕವಾಗಿ ಎಲ್ಲ ವರ್ಗದ ಸ್ತ್ರೀಯರಿಗೂ ಅಂಥ ಅವಕಾಶವಿತ್ತೆಂದು ಹೇಳಲಾಗದು.[೩] ಶೂದ್ರರ ಮಟ್ಟದಲ್ಲೇ ಶೋಷಿಸಲ್ಪಡುತ್ತಿದ್ದ ಸ್ತ್ರೀಯರನ್ನು ಗುರುತಿಸಿ,ಎಲ್ಲಂದದ ಸ್ವಾತಂತ್ರ್ಯ ಅವರಿಗಿದೆ ಎಂಬುದನ್ನು ಸಿದ್ಧಮಾಡಿ ತೋರಿಸಿ ಸ್ತ್ರೀಯರ ಪರವಾಗಿ ಸುಧಾರಣೆಯ ಹೊಸಗಾಳಿ ಬೀಸಲು ಕಾರಣರಾದವರು ಬಸವಾದಿ ಶರಣರು. ಅವರ ಪ್ರಭಾವಕ್ಕೆ ಪಕ್ಕಾಗಿರುವ ಶಂಕರ ಕವಿಯು ಪ್ರಸಕ್ತ ಕಾವ್ಯದಲ್ಲಿ 'ಸ್ತ್ರೀಸಮಾನತೆ'ಯನ್ನು ಸಾರಲು ಒಂದು ಹೊಸ ಸನ್ನಿವೇಶ ವನ್ನು ಸೃಷ್ಟಿಸಿದ್ದಾನೆ. ಈ ಕೃತಿಗೆ ಮೂಲ ಆಕರವಾದ ಭಾವಚಿಂತಾರತ್ನ ಮತ್ತು ರಾಜಶೇಖರ ವಿಳಾಸದ ಗತಾನುಗತಿಕ ಚಿತ್ರಣವನ್ನು ಹೊರತುಪಡಿಸಿದ ಈ ಪ್ರಸಂಗವು ಶಂಕರ ಕವಿಯ ಸ್ತ್ರೀಪರನಿಲುವಿಗೆ ಮತ್ತು ಸ್ವಂತಿಕೆಗೆ ಸಾಕ್ಷ್ಯ ನುಡಿಯುತ್ತದೆ.

ನ್ಯಾಯನಿಷ್ಠುರಿಯಾದ ಅರಸ 'ಮಾಧವಾಂಕ'ನು 'ದುಂಡಿ'ಯ ಮಗನ ತಲೆಗೆ ತನ್ನ ಮಗನ ತಲೆಗೊಡಲು ನಿಶ್ಚಯಿಸುತ್ತಾನೆ. ಈ ನಿರ್ಣಯಕುರಿತಾಗಿ ತನ್ನ ಪತ್ನಿಯ ಅಭಿಪ್ರಾಯವನ್ನರಿಯಬೇಕೆಂದು ಆಕೆಯನ್ನು ಕರೆಕಳುಹಿಸಿ.

> "................... ಬಡವಿಸುತ
> ನಂತುಳಿಸಿ ಮಡುಹಿದನು ಕುದುರೆ ಕುರುಹತಿಯಿಂದ
> ನಿಂನ ಮೋಹದ ಕುವರನೂ
> ಬಂತು ಶಿಶುವಧೆಯಿದಕೆಯೆಂತು ಮಾಡುವೆಸತ್ಯ
> ವಂತೆ ಪೇಳನಲು....." (೨೪-೧೫)

ಆಕೆ ಕೊಡುವ ಉತ್ತರದಲ್ಲಿ ಕವಿಯು ಅಂದಿನಸಮಾಜದಲ್ಲಿ ಸ್ತ್ರೀಯರ ಸ್ಥಾನ ಹೇಗಿದ್ದಿತೆಂಬುದನ್ನು ಸೂಚ್ಯವಾಗಿ ತಿಳಿಸಿಕೊನೆಗೆ ಅರಸನನಿರ್ಣಯವನ್ನೇ ಆಕೆಯೂ ತಳೆಯುವಳು ಎಂಬಲ್ಲಿ ಆಕೆಯ ನ್ಯಾಯ ನಿಷ್ಠೆಯನ್ನು, ಭಾವುಕತೆಯಲ್ಲೂ ವೈಚಾರಿಕತೆಯನ್ನು ಪ್ರತಿಬಿಂಬಿಸುತ್ತಾನೆ.

....................ಪುರುಷಗಿದಿರುತ್ತರವ

ನಿರದೀವ ಸತಿಯಧೊಗತಿಗೆಯಿಳಿಯಳೆ" (೨೪-೧೬)

ನೀವು ಪಿಡಿದಾಚರಣೆಯಂ ಪಿಡಿವೆ ಬಿಟ್ಟುದಂ

ನಾವು ಬಿಡುವೆವು ನಿಂಮಮನಮೆಚ್ಚಿನಡೆದಪೆವು

ಜೀವಕ್ಕೆ ಜೀವಕೊಡುವುದೆ ಧರ್ಮ (೨೪-೧೭)

ಎಂದು ನಿಷ್ಠುರವಾಗಿ ತನ್ನ ನಿರ್ಣಯವನ್ನು ತಿಳಿಸುತ್ತಾಳೆ.

ಆಡಳಿತ ವ್ಯವಸ್ಥೆ : ರಾಜ್ಯದಲ್ಲಿ ಪರಮಾಧಿಕಾರವುಳ್ಳವನು ಅರಸನಾಗಿದ್ದನು. ಅವನ ಆಜ್ಞಾಪಾಲನೆಯೇ ಉಳಿದವರ ಕರ್ತವ್ಯವಾಗಿರುತ್ತಿತ್ತು. ಸಾಮಾನ್ಯವಾಗಿ ಅರಸುಪಟ್ಟ ಅನುವಂಶಿಕವಾಗಿ ಲಭಿಸುತ್ತಿತ್ತು. ಆದರೆ ಅರಸನಿಗೆ ಗಂಡುಮಕ್ಕಳು ಇಲ್ಲದೇ ಹೋದಾಗ, ಮಗಳ ಗಂಡನಿಗೆ ಆ ಅಧಿಕಾರ ಲಭಿಸುತ್ತಿತ್ತು. ಆದರೆ ಈ ಕಾವ್ಯವದಲ್ಲಿ ತನ್ನ ಮಗನು ಅನರ್ಹನಾಗಿದುದರಿಂದ ಹರಿಹರದೊರೆಯು ಅಳಿಯ ಮಾಧವಾಂಕನಿಗೆ ಪಟ್ಟಗಟ್ಟುತ್ತಾನೆ. ಉನ್ನತ ಶೈವ ಸಂಪನ್ನನಾಗಿದ್ದ ಹರಿಹರ ದೊರೆಯು ಸಕಲದೇಶದ ಕಪ್ಪಮಂಕೊಳುತ (ಅದೇ ೧-೪೩) ಪ್ರಜೆಯಂ ಪರೀಕ್ಷಿಸುತ ಧರ್ಮಮಂ ಪಾಲಿಸುತ ದ್ವಿಜರ ಪೋಷಣೆ, ಶರಣರಾರಾಧನೆಗಳಿಂದ, ಸುಜನರ ಗೋಷ್ಠಿಯನ್ನು ನಡೆಸುತ್ತ ಸುಖದಿಂದ ರಾಜ್ಯ ಪಾಲಿಸುತ್ತಿದ್ದನು. (೨-೩) ಅವನ ರಾಜ್ಯದಲ್ಲಿ ಗಜಹಯರತ್ನ ಕನ್ಯಾಪರೀಕ್ಷಕರು (೧-೩೮) ತುಂಬಿ ಚತುರತೆಯಿಂದ ವ್ಯಾಪಾರವಹಿವಾಟುಗಳನ್ನು ನಡೆಸುತ್ತಿದ್ದರು. ಎಂಬ ಅಂಶ ತಿಳಿಯುತ್ತದೆ. ಈತನ ಅಳಿಯ ಮಾಧವಾಂಕನ ಆಸ್ಥಾನದಲ್ಲಿ

ಮಂತ್ರಿಗಳು, ಸಾಮಂತರು ಮನ್ನೆಯರು, ಗಾನ, ಗೀತ, ನರ್ತನೀಕರು (೨೦-೧೫) ಅಮಿತಪಾಠಕರು, ಭವ್ಯ ವಿದ್ವಾಂಸರು, ಚತುರಗಮಕಿಗಳು, ಭರತನಾಟಕಗಾನ, ಸಂಗೀತ ರಚಕರು (೧೨-೪೩) "ಬಿರುದಬಿತ್ತರಿ ಪಭಟ್ಟಾಳಿ, ನಾಟಕದ ಬಾಲೆಯರು" (೨೦-೨೭) ರಾರಾಜಿಸುತ್ತಿದ್ದರು. ರಾಜ್ಯದಲ್ಲಿ ಚದುರಂಗ ಬಲವಿದ್ದು, ತೇರಾನೆ, ತುರುಗ, ಅಂದಳಮಂಧಿರಾಹುತರು, ವೀರರು ಅದರೊಳಗಿದ್ದರು." (೨೦-೧೮) ಇಂಥ ಸಮೃದ್ಧ ಶಿವಭಕ್ತ ಸಾಮ್ರಾಜ್ಯವನ್ನಾಳುತ್ತಿದ್ದ ಮಾಧವಾಂಕನು

"ಯಿರದೆ ಪಂಟಿಪವ್ವೆರಿಗಳನು ಸಿಕ್ಷಿಸಿತಂನ

ಶರಣುಹೊಕ್ಕರ ಕಾಯ್ದು ಅತಿ ಶೌರ್ಯಪರನಾಗಿ" (೧೨-೪೪) ರಾಜ್ಯನಾಳುತ್ತಿದ್ದ.

"ಹಸಿದವರ್ಗೆಮೃಷ್ಟಾಂನ ಶಿಶುಗಳಿಗೆ ಪಾಲ್ಬೆಂಣೆ

ಬಿಸಿಲಿನೊಳು ನಡವರಿಗೆ ಕೊಡೆಯುಬಿಜ್ಜಣಿಯುತಂ

ಪೆಸವೆಡೆಯು ಪಾದುಕೆಯು ಪಶುಗಳಿಗೆ ತ್ರುಣವು ಬಡವರಿಗೆಲ್ಲ

ಸಸಿನೆ ಬೇಳ್ಪರಿಗಿಲ್ಲವೆನದೆ ..." (೧೯-೫)

ಮದುವೆಮುಂಜಿ ಜನರ ಸುಖದುಃಖಗಳು ತನ್ನವೆಂದೇ ಭಾವಿಸಿ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ ನೆಂಬಲ್ಲಿ ಆದರ್ಶ ಆಡಳಿತದ ಮಾದರಿಯನ್ನು ಶಂಕರಕವಿಯು ಕಣ್ಣೆದುರು ನಿಲ್ಲಿಸುತ್ತಾನೆ.

ಜಾನಪದ ಆಟಗಳು : ಅಂದು ಪ್ರಚಲಿತವಾಗಿದ್ದ ಆಟಗಳ ಸಂಕ್ಷಿಪ್ತವಿವರಣೆ ಈ ಕಾವ್ಯದಲ್ಲಿ ಉಲ್ಲೇಖ ಗೊಂಡಿದೆ. ಚಿಣು ಚೆಂಡು, ಬೊಗರಿ, ಚಕ್ರ, ತಗರುಗಳ ಕಾದಾಟ, ತಾಮ್ರಚೂಡಗಳ ಕಾದಾಟ'' (೨೨-೨೦) ಇತ್ಯಾದಿ.

ವೇಶ್ಯಾವಾಟಿಕೆ : ಸಮಾಜ ಸೃಷ್ಟಿಸಿಕೊಂಡಿದ್ದ ಎರಡು ಗುಂಪುಗಳು ಎಲ್ಲಕಾವ್ಯಗಳಲ್ಲೂ ಪ್ರಮುಖವಾಗಿ ಕಾಣಬರುತ್ತವೆ. ಒಂದು ಕಳ್ಳರದು, ಮತ್ತೊಂದು ವೇಶ್ಯೆಯರದು. ವೇಶ್ಯೆಯರು ಸಮಾಜದ ಒಂದು ಅಗತ್ಯವಾದ ಭಾಗವಾಗಿ ಪರಿಗಣಿತರಾಗಿದ್ದರು.[೪] ಇಂದಿಗೂ ಪ್ರಚಲಿತವಿರುವ ಈ ಪದ್ಧತಿಯು ಶಂಕರಕವಿಯ ಕಾಲದಲ್ಲೂ ಇದ್ದಿತೆಂಬುದು ತಿಳಿದುಬರುತ್ತದೆ. ವೇಶ್ಯೆಯರಿಗಾಗಿಯೇ ಪ್ರತ್ಯೇಕವಾದ ವಾಸಸ್ಥಳವಿದ್ದಿತು. ಅದನ್ನೇ ವೇಶ್ಯವಾಟಿ ಎನ್ನುತ್ತಾರೆ. ಅವು ತುಂಬ ವೈಭವದ, ಸಿರಿವಂತ ಮನೆಗಳಾಗಿದ್ದವು. (೨೨-೬೧) ಅಲ್ಲಿನ ಮನೆಮನೆಗಳಲ್ಲಿ ವಿಟಗೋಷ್ಠಿಗಳು (೨೨-೬೨) ನಡೆಯುತ್ತಿದ್ದವು.

> 'ಯರಳೆಸುಕ ಪಿಕಹಂಸನವಿಲು ಸುರತಂಗಮಿವು
> ತರುಣಿಯರ ನಯನ, ನುಡಿಸ್ವರನಡೆಯುಮುಡಿ ಮೊಲೆಗ
> ಸರಿಯೆಂದು ವರ್ನಿಸುವಕವಿಯನ್ನು..... (೨೨-೬೫)

ಸರಸದಿಂದ ನೋಡಿಯೆ ಸೋಲಿಸುತ್ತಿದ್ದ ಗಣಿಕೆಯರಿದ್ದರು ತಮ್ಮ ಬಿಂಕ, ಬಿನ್ನಾಣ, ಚಮತ್ಕಾರಗಳಿಂದ ಧೀರವೀರರುಗಳೆರ್ದೆಗೆಡಿಸಿ ವಿತ್ತವಕೊಂಡು ತೋರಿನಯ ಸವಿಗಲೆಯ ಬರುಮಾತಿನಿಂದನೀ ಸ್ವಾರಮಂಮಾಡಿ ನಾಣ್ಚೆಸಿಮರಳಿ ಪೋಗುತಿರೆ (೨೨-೬೬) ಹಾಸ್ಯಮಾಡಿ ನಗುತ್ತಿದ್ದರು.

ಸಾಮಾಜಿಕ ವಿಡಂಬನೆ : ಸಮಾಜದಲ್ಲಿ ವೇಷಧಾರಿಡಂಭಕರು ಸಜ್ಜನರಿಗೆ ಕಂಟಕ ಪ್ರಾಯರಾಗುವುದು ಸರ್ವವಿದಿತ ಸಂಗತಿ, ಪ್ರಸಕ್ತ ಕಾವ್ಯದಲ್ಲಿ ನೀಚಸ್ವಾರ್ಥ ಬಯಸಿದ ಗುರುವು ತನ್ನ ಶಿಷ್ಯನನ್ನೇ ಬಲಿಗೊಡಲೆಳಸಿದ ಘಟನೆ ದಂಗುಬಡಿಸುವಂತಿದೆ. ಈ ಕಾವ್ಯದ ನಾಯಕ ಬಾಲ್ಯದಲ್ಲಿ ಅರಸು ಪುತ್ರನೊಂದಿಗೆ ವಿದ್ಯೆ ಪಡೆಯುವ ಸಂದರ್ಭದಲ್ಲಿ ಗುರುವು ಹೇಳಿ ಕೊಟ್ಟಿದ್ದನ್ನೆಲ್ಲ ಚೆನ್ನಾಗಿ ಕರಗತಮಾಡಿಕೊಳ್ಳುತ್ತಾನೆ. ಆದರೆ ಅರಸು ಪುತ್ರನು ಮಂದಮತಿಯಾಗಿಯೇ ಉಳಿಯುತ್ತಾನೆ. ಇದನ್ನು ಪರೀಕ್ಷಿಸಿದ ದೊರೆಯು ಗುರುವನ್ನು ಕೋಪದಿಂದ ನಿಂದಿಸುತ್ತಾನೆ. ಆಗ ಆ ಗುರುವು ಈ ಮಾಧವನಿಂದಾಗಿ ತನಗೆ ರಾಜನ ಕೋಪವನ್ನು ಎದುರಿಸುವ ಪ್ರಸಂಗ ಬಂತು. ''ಇವನನ್ನು ಕೊಂದರೂ ಕೇಳುವವರು ಯಾರೂ ಇಲ್ಲ'' (೩-೨೬) ಎಂದು ನಿಶ್ಚಯಿಸಿ ಉಪಾಯಕ್ಕೆ ತಡಕಾಡುತ್ತ ಸೂರ್ಯಾಸ್ತವಾಗುವುದನ್ನೇ ಕಾಯುತ್ತಿರುತ್ತಾನೆ. ಅವನು ''ಕುಟಿಲ ಭುಜಗನವೊಲು'' (೩-೨೬) ಹೊಂಚುಹಾಕುತ್ತಿದ್ದನೆಂದು ಕವಿ ಟೀಕಿಸುತ್ತಾನೆ.

"ಸರ್ಪ್ಪಂಗೆ ವಿಷವುಭಯದಾಡೆಯಲಿ ವೃಶ್ಚಿಕಗೆ
ಯಿರ್ಪ್ಪ ವಿಷವುದ್ಭದಗ್ರದಿ ಮಕ್ಷುಕಗೆ ನಂ
ಜೊರ್ಪುವದು ಶಿರದಿ ದುರ್ಜನರ ಸರ್ವಾಂಗ ವಿಷಯಮವೆಂಬರು ಪ್ರೌಢರೂ
ದರ್ಪ್ಪಣಂ ಪದ್ಮದಳವದನ ಚಂದನ ಸೀತ
ಮಿರ್ಪ್ಪನವವಿನಯವಾಕ್ಯಂ ಹೃದಯಕತ್ತರಿಯು
ಯೆರ್ಪ್ಪಡಿಸಿತಿಂತು ಗುಣಪೂರ್ವ್ವಕದಿದೂರ್ತತ್ವವಾವಿಪ್ರಸಂಗದಲ್ಲಿ" (೪-೩)

'ದುರ್ಜನರ ಮೈಯೆಲ್ಲ ವಿಷ' ಎಂಬಂತೆ ಗುರುವು ಧೂರ್ತನಾಗಿ ಕಪಟತನದಿಂದ ಮಾಧವನ ಮೇಲೆ ಅಪಾರ ಪ್ರೀತಿಯಿರುವಂತೆ ನಟಿಸಿ, ಮಾರಿಯಾಲಯಕ್ಕೆ ಪುಸ್ತಕವನ್ನು ತರಲು ಕಳುಹಿಸುತ್ತಾನೆ. ಇಂಥ ದುಷ್ಟರು ಅರೆಗಂಣ್ಮುಚ್ಚಿಕುಳಿತ ಬಕನಂತೆ (೪-೪) ಎಂದು ವಿಡಂಬಿಸುತ್ತಾನೆ. ಇಂಥ ಕಪಟಿಗಳೊಡನೆ ಎಚ್ಚರಿಕೆಯಿಂದರ ಬೇಕೆಂಬ ಸಂದೇಶವನ್ನು ಕವಿ ಸೂಚ್ಯವಾಗಿ ನೀಡುತ್ತಾನೆ. ಮಾಧವನು ಮರಳಿ ತನ್ನಲ್ಲಿಗೆ ಬಂದಾಗ ತನ್ನ ಕೆಲಸ ನೆರವೇರಿಲ್ಲವೆಂಬ ಅನುಮಾನದಿಂದ ಕೋಪಿಸಿಕೊಂಡು

"ಪತಿ ಭಕ್ತಿಯಿಲ್ಲದಿಹ ಸತಿಯಿರ್ದ್ದು ಫಲವೇನು
ಪಿತನರಕ್ಷಿಸದಿರ್ಪ್ಪಸುತನಿರ್ದು ಫಲವೇನು
ಕ್ಷಿತಿಯೊಳಗೆ ವಡೆಯನವಸರಕೆಯಿಲ್ಲದ ಬಂಟನಿರ್ದು ಫಲವೇನು ಮತ್ತೆ
ಸತತ ಸದ್ಗುರುವಿನಾಜ್ಞೆಯ ಮೀರಿತಿರುಗುತಿಹ
ಮತಿ ಹೀನ ಶಿಷ್ಯನಿರ್ದೇನುಫಲ" (೫-೬)

"ಪತಿಭಕ್ತಿಯಲಿ ಸತಿ ಅರುಂಧತಿಯೊಲಿರಬೇಕು
ಪಿತರಕ್ಷಣೆಗೆ ಬಭ್ರುವಾಹನನಂತಿರಬೇಕು
ಅತಿಶಯದ ಬಂಟ ಹನುಮಂತ ನಂತಿರಬೇಕು ಗುರುಭಕ್ತಿ ವಾತ್ಸಲ್ಯದೀ
ಕ್ಷಿತಿಪಬಿಲ್ಲಮರಾಯನಂತೆ ತಾನಿರಬೇಕು" (೫-೭)

ಎಂದು ಹೇಳುವ ಮಾತುಗಳಲ್ಲಿ ತತ್ಕಾಲದ ಸಾಮಾಜಿಕ ವಿಚಾರಗಳನ್ನು ಗುರುತಿಸಬಹುದು.

ರಾಜನೀತಿ : "ವೀರಶೈವ ಪುರಾಣಗಳಲ್ಲಿ ನೀತಿ ಪ್ರಧಾನವಾಗಿ ಬರದಿದ್ದರೂ ಪ್ರಾಸ್ತಾವಿಕವಾಗಿ ಅಲ್ಲಲ್ಲಿ ಬಂದಿರುವುದನ್ನು ನೋಡುತ್ತೇವೆ. ಬೆರಳೆಣಿಕೆಯ ವೀರಶೈವ ಕವಿಗಳು ತಮ್ಮ ಕೃತಿ 'ಮಹಾಕಾವ್ಯ'ವೆನ್ನಿಸಿ ಕೊಳ್ಳಬೇಕೆಂಬ ಹಂಬಲದಿಂದ ಹದಿನೆಂಟು ಬಗೆಯ ವರ್ಣನೆಗಳಲ್ಲಿ ಒಂದಾದ 'ರಾಜನೀತಿ'ಯನ್ನು ತಂದರೆ ಅಸಂಖ್ಯಾತ ವೀರಶೈವ ಕವಿಗಳು ಸಾಮಾಜಿಕ ನೀತಿ ನಿಯಮವನ್ನು ಹಿತಮಿತವಾಗಿ ಅಲ್ಲಲ್ಲಿ ಪುರಾಣದ ಮಧ್ಯೆ ಹೇಳಿರುವರು."[೫] ಶಂಕರಕವಿಯು 'ರಾಜನೀತಿ' ಬೋಧೆಗಾಗಿ ಒಂದು ಸಂಧಿಯನ್ನೇ ಮೀಸಲಾಗಿರಿಸಿದ್ದಾನೆ.

[illegible]

[illegible]

[illegible]

[illegible]

[illegible]

‘ಮಾಧವಾಂಕಕಾವ್ಯ’ದಲ್ಲಿ ಹರಿಹರ ನೃಪನು ಸಕಲವೈಭವದಿಂದ ಸಾಮ್ರಾಜ್ಯವನ್ನಾಳುತ್ತಿರಲು ವೃದ್ಧಾಪ್ಯ ಸಮೀಪಿಸುತ್ತದೆ. ಒಂದು ದಿನ ಒಡ್ಡೋಲಗದಲ್ಲಿ ಸಾಮಂತರು, ಮಂನೆಯರು,ಪ್ರೌಢವಿದ್ವಾಂಸರು, ಲೋಕಜ್ಞರನ್ನು ಕರೆಸಿ, ತನ್ನ ಮಗ ಮತ್ತು ಅಳಿಯನನ್ನೂ ಸಭಾಮಧ್ಯದಲ್ಲಿ ಕೂರಿಸಿ ಅರಸನು ಹೀಗೆಂದು ಭಿನ್ನವಿಸಿಕೊಳ್ಳುತ್ತಾನೆ.

‘‘ಇವನು ಅಳಿಯ, ಆತ ಮಗ, ಈತ ಸದ್ಗುಣಿ, ಆತ ಅಜ್ಞಾನಿ ನಾನು ಸಂನ್ಯಾಸಕ್ಕೆ ತೆರಳಲಿರುವವನು. ಇವರಲ್ಲಿ ಪಟ್ಟಕ್ಕೆ ಯಾರು ಅರ್ಹರು ಎಂಬುದನ್ನು ನೀತಿಕೋವಿದರು. ತಿಳಿಸಿ ಹೇಳಿರಿ’’ (೧-೨೭) ಎನ್ನಲು ಆಸ್ಥಾನದ ಬುಧವರನು ಅಖಿಳ ನೀತಿ ಪ್ರವರ್ತನೆಯೊಂದಿಗೆ ರಾಜಪಟ್ಟಾಭಿಷೇಕದ ಸಗುಣಗಳನ್ನು ವಿವರಿಸ ತೊಡಗುತ್ತಾನೆ. ಅಂಗವಿಕಲನಿಗೆ, ಜಾಣನಲ್ಲದವನಿಗೆ, ಅತಿಜಂಭವಂತನಿಗೆ, ನಿತ್ರಾಣನಾದವನಿಗೆ, ಭ್ರೂಣ ಹತ್ಯಾದಿದುರ್ದೋಷಕ್ಕೆ ಅಳುಕದವನಿಗೆ ದೊರೆಯಪಟ್ಟಸಲ್ಲದು. ಭೀತಿವಂತನಿಗೆ ದುರ್ಬುದ್ಧಿಯುಳ್ಳವನಿಗೆ, ನೀತಿಬಾಹಿರನಿಗೆ ಕಲಿಯಲ್ಲದವನಿಗೆ, ಕರುಣೆಯಿಲ್ಲದ ಕಠೋರ ಹೃದಯಿಗೆ ಪಾತಕಿಗೆ, ತನ್ನ ಜಾತಿಧರ್ಮವನ್ನು ಬಿಟ್ಟು ಕೆಟ್ಟಜಾತಿಯನ್ನು ಒಪ್ಪಿಕೊಂಡವನಿಗೆ ಕ್ಷಮೆದಮೆ ಶಾಂತಿರಹಿತರಿಗೆ ಪಟ್ಟಸಲ್ಲದು. ‘‘ಕ್ರೂರಿಗೆ ಕಪಟಿಗೆ, ಮಂತ್ರಿ ಗುರುವಾಕ್ಯಗಳನಾರೈದುಮಹುದೆಂದು ನೋಡಿನಡೆಯದಪೂಟ ಚೋರಂಗೆ ದುಷ್ಮದ ವಿಹಾರಿಗಿಂತೀ ರಾಜಪಟ್ಟಸಲ್ಲದು’’ (೧೨-೧೩)

ಹಿಂದೆ ದಶರಥನು ಕೈಕೇಯಿಯಮಾತುಕೇಳಿ ರಾಮನನ್ನು ವನವಾಸಕ್ಕಟ್ಟಿ ಭರತನಿಗೆ ಪಟ್ಟಗಟ್ಟಲು, ಭರತನೂ ಪಟ್ಟವನೊಲ್ಲದೆ ಆರಾಜ್ಯ ಅರಾಜಕವಾಯಿತು. ಪರನಾರಿಗಳುಪಿ ರಾವಣ ಹತನಾದ. ಪಾಂಡುತೊನ್ನ, ವಿದುರ ಹುಚ್ಚನೆಂದು

“ಕಂಣಿಲ್ಲದವಗೆ ಪಟ್ಟವಕಟ್ಟಲವನಂಶ
ಮುಂನನಿರ್ನಾಮಮಾದುದ ಕೇಳಿ ಬಲ್ಲೆ ಭೂವಲ್ಲಭ..... (೧೨-೧೫)
‘‘ಚಂನಬಸವ ಪ್ರಧಾನೋಕ್ತಿಯಂ ಬಿಜ್ಜಳನು
ನಂನಿಗೊಳದಿರೆ ಮುನಿದು ಪೋಗಿ ಶ್ರೀಕಲ್ಯಾಣ
ದುಂನತಿಕೆಗೆಟ್ಟು ಪಾಳಾಯ್ತು ಯಿಂತಿದ ತಿಳಿದುವುತ್ತಮಗೆ ಪಟ್ಟಗಟ್ಟಾ’’ (೧೨-೧೫)

ಸರ್ವಲಕ್ಷಣವಂತ ಸೌಂದರ್ಯವಂತ, ಸದ್ಭಕ್ತಿ, ಸುಜ್ಞಾನಚಿತ್ತಯುತನೂ ಸರ್ವಪ್ರಬುದ್ಧ, ಪ್ರಸಿದ್ಧ, ಸತ್ಕೀರ್ತಿ, ಸದ್ವರ್ತನಗಳುಳ್ಳ ಪ್ರೌಢನಿಗೆ ರಾಜಪಟ್ಟ ಸಲ್ಲುವುದು. ಶತ್ರುಶಿಕ್ಷಕನಾಗಿ ಮಿತ್ರರಕ್ಷಕನಾಗಿ, ಗೋತ್ರವರ್ತಕನಾಗಿ ಕ್ಷಾತ್ರಧರ್ಮವ ಬಿಡದೆ ಸ್ತೋತ್ರವರ್ಮಂಗೆಡದೆ, ಪಿತ್ರುವಾಕ್ಯಮೀರದೆ, ಪರಕಳತ್ರೆಯರನ್ನು ಮಾತೃಸಮವೆಂದು ಭಾವಿಸಿ, ಧಾತ್ರಿಯನ್ನು ಶಾಂತಿಯಿಂದ ಪಾಲಿಸುವಸುಜನ ಶೀಲಯುತನಿಗೆ ಅರಸು ಪಟ್ಟಸಲ್ಲುವುದು.

''ರಾಜರಾಕ್ಷಸನಂದದಲಿವರ್ತಿಸಿ ಮಂತ್ರಿ
ರಾಜಿಸುವ ವ್ಯಾಘ್ರರೂಪದಲಿ ಪರಿವಾರಸು ನಿ
ಯೊಜವಿಡಿದಿರೆ ಯಥಾರಾಜಾತಥಾಪ್ರಜಾಯನೆ ಬಾಳ್ಕುರಾಜ್ಯದಲ್ಲಿ'' (೧೨-೨೩)

"ಹವಿಯನಾರಿಸಬಹುದು ಫಣಿಗೆ ನಿರ್ವಿಷಮುಂಟು
ಅವಿರಳ ಮಹಾವ್ಯಾಘ್ರದುಗ್ರಮಂ ಗೆಲಬಹುದು
ಭುವನಾಧಿಪತಿ ನೀತಿದಪ್ಪಿ ನಡೆಯಲು ಪೇಳ್ವಶಾಸ್ತ್ರವುಳ್ಳವೆ ಧಾತ್ರೀಷಾ" (೧೨-೨೫)

ಜ್ಞಾನಿಯೂ, ಸುಜನ ಪೋಷಕನೂ ಯಜ್ಞಾದಿ ಸತ್ಕ್ರಿಯೆಗಳಲ್ಲಿ ನಿರತನೂ, ನಿತ್ಯ ವಿಧಿಗಳಿಗೆ ಕೊರತೆಯಾಗದಂತೆ ನಡೆಸುತ್ತ, ಫಲರಾಜವೃಕ್ಷಗುಣರಕ್ಷಕನಾಗಿ (೧೨-೨೮) ವರದಿಗ್ವಿಜಯದಿ ಮರೆಬೀಳೆಕಾಯ್ವವನಾಗಿ (೧೨-೨೮) ಪರಮಸಾತ್ವಿಕನಾದವನಿಗೆ ಸನ್ಮತಿಸತ್ಯವಂತನಿಗೆ ಜನರು ಒಲೈಸುವರು.

''ಭೂಬಾಲೆಪರಕೂಲೆಯಾಗುವಳುಮದರಿಂದೆ
ಭೂಭಾರಕರ್ಗೆ ಭೂಪರಪಟ್ಟ ಸಲ್ಲುವದೆ'' (೧೨-೨೯)

ಹಿಂದೊಬ್ಬ ಅರಸು ಮೂಲೋಕದಲ್ಲೂ ಬೆಲೆಬಾಳುವ ಖಡ್ಗವನ್ನು ತೆಗೆದುಕೊಂಡು ಕಾನನದಲ್ಲಿ ಬರುತ್ತಿರುವಾಗ, ಚೋರರು ತನ್ನನ್ನು ಕೊಲ್ಲುವರೆಂಬ ಭಯದಿಂದ ಖಡ್ಗವನ್ನು ಕಳೆದುಕೊಂಡಂತೆ ಮಂದಮತಿಗೆ ರಾಜಪಟ್ಟ ಕಟ್ಟಿದರೆ ಅದು ಬೇರೆಯವರ ಪಾಲಾಗುತ್ತದೆಂದು ತಿಳಿಸುವನು. ಹರಿಹರಾಯನು ಎಲ್ಲಂದದಿಂದ ಸುಯೋಗ್ಯನಾದ ಪರಾಕ್ರಮಿ ಶಿವಭಕ್ತ ಅಳಿಯ ಮಾಧವಾಂಕನಿಗೆ ಪಟ್ಟಗಟ್ಟಲು ನಿಶ್ಚಯಿಸುತ್ತಾನೆ. ಕವಿಯು ಆಳವಾದ ಲೋಕಾನುಭವ, ಆದರ್ಶಯುತ ಆಡಳಿತ ಜ್ಞಾನವನ್ನೊಳಗೊಂಡ ಸರ್ವರ ಬಾಳಿಗೆ ಬೆಳಕಾಗಬಲ್ಲ 'ನೀತಿ'ಯನ್ನು ಇಲ್ಲಿ ಬೋಧಿಸಿರುವನು. ಅನರ್ಹರೇ ಪಟ್ಟವೇರಿ ಅರಾಜಕತ್ವಕ್ಕೆ ಕಾರಣರಾಗಿ ಸ್ವಾರ್ಥಕ್ಕಾಗಿ ಲೋಕವನ್ನೇ ಬಲಿಗೊಡಲು ಹೇಸದ ಇಂದಿನ ನಾಯಕರುಗಳ ಕೆಟ್ಟ ಮಾದರಿಯ ಆಡಳಿತಕ್ಕೆ ಭಗವದ್ಗೀತೆಯಂತಿದೆ ಈ ಭಾಗ.

ಮರಗಿಡಗಳು : ''ವಟವೃಕ್ಷ, ಬದರಿ, ಆಮ್ಲ, ಚೂತ, ಕೇತಕಿ, ಬೆಳಲ, ನಾರೀಕೇಳ, ಅಶ್ವತ್ಥ, ಕಂಚಾಲ ಮಾದಲ, ಹಲಸು, ಪೊಂದಾಳ, ತಾಳೆ'' (೨೦-೫೨) ಮುಂತಾದ ವೃಕ್ಷಗಳು ನೋಟಕರ ಕಣ್ಣಿಗೆ ಸೊಗಸನ್ನು ಉಂಟುಮಾಡುತ್ತಿದ್ದವು.

ಹೂ, ಪತ್ರೆ, ಹಣ್ಣುಗಳು : ನಂದನದ ಬನದೊಳಗೆ ಮನ್ಮತಪಾಳ್ಯೆ ಬಿಟ್ಟಂತೆ ಮೊಲ್ಲೆ, ಮಲ್ಲಿಗೆ ಜಾಜಿ, ಕುಸುಮ, ಸುರಗಿ, ಶಾವಂತಿಗೆ, ಇರುವಂತಿಗೆ, ಕರವೀರ,ಬಕುಳ, ಚಂಪಕ, ಸರಸಿಜ, ಕುಮುದ, ಪಾದರಿ, ಪಾರಿಜಾತ, ಮುಡಿವಾಳ,ದಾಸವಾಳ ಹೂಗಳೂ, ಮರುಗ ಪಚ್ಚೆ, ದವನ, ಬಿಲ್ವ, ಕರಿಕೆ, ಮಾಂದಳಿರು ಮುಂತಾದ ಪತ್ರೆ(೨೧-೫೬)ಗಳೂ, ಕಿತ್ತಳೆ, ಕದಳಿ, ಕರ್ಜೂರ ದ್ರಾಕ್ಷಿ, ದಾಡಿಮ, ನೀರಲ, ಜಂಬೀರ ಹೇರಳೆ, ನೆಲ್ಲಿ, ಬಿಲ್ವದ ಫಲಗಳು ಶೋಭಿಸುತ್ತಿದ್ದವು.

ಪಶುಪಕ್ಷಿ ಪ್ರಾಣಿಗಳು : ಸ್ವರಗೊಡುವ ಕೋಗಿಲೆ, ಗರಿಗೆದರಿ ಕುಣಿವನವಿಲು ಕ್ರೀಡಿಸುತ್ತಿರುವ ಹಂಸ ಮಧುರ ಮಾತಿನಗಿಳಿ, ಝೇಂಕರಿಸುತ್ತಿರುವ ದುಂಬಿಗಳ ಗಡಣ ಅರಸನನ್ನು ಎದುರುಗೊಳ್ಳಲು ಬನಲಕ್ಷ್ಮಿ ಶೃಂಗರಿಸಿಕೊಂಡಂತೆ ಆ ವನವು ಮೆರೆಯುತ್ತಿತ್ತು.

ತಿಂಡಿ-ತಿನಿಸು : ವುಂಡಳಿಗೆ, ಚಿಗುಳಿ, ಕಡಲೆ, ನಾರಂಗದ ಕಡುಬು, ಕಜ್ಜಾಯ, ವಡೆ, ಪರಿಪರಿಯ ಪುಳ್ಳಿಮ್ರುತ ಸುಶಾಕಂಗಳು, ಪಲತೆರದ ಸಾರು, ಷಡ್ರುಚಿಯ ನೈವೇದ್ಯವನ್ನು ಸುಮಂಗಲೆಯರು ವಿಘ್ನೇಶ್ವರನಿಗೆ ಅರ್ಪಿಸುತ್ತಾರೆ. (೨-೩೭) ಮಾಧವಾಂಕನು ಲಿಂಗಪೂಜೆಗೈದ ತರುವಾಯ ಪರಿಪರಿಯ ಪರಮಾಂನ, ಭಕ್ಷ ಕಜ್ಜಾಯ, ತೋರೆ, ನೆರೆ ಫಲಾವಳಿಸಾರು, ಶಾಖಾದಿಗಳನ್ನೆಲ್ಲ ತರುಣಿಯರು ಬಹುವಿವರವಾಗಿ ಬಡಿಸುವರು (೧೯-೩೫) ದುಂಢಿಯ ಮಗನಿಗೆಪುರಜನರು ರೊಟ್ಟಿಮುಟ್ಟಿಗೆ (೨೩-೩) ದೋಸೆ(೨೩-೧೩)ಗಳನ್ನು ನೀಡು ತ್ತಿದ್ದರೆಂದು ತಿಳಿದುಬರುತ್ತದೆ. ಹೀಗೆ ಈ ಕಾವ್ಯದಲ್ಲಿ ಕಥಾನಾಯಕನ ಚರಿತ್ರೆಗೆ ಪೂರಕವಾಗಿ ಅನೇಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳು ಎಡೆಪಡೆದಿರುವುದರಿಂದ ಈ ಕೃತಿಯು ಸಾಂಸ್ಕೃತಿಕವಾಗಿ ಕೂಡ ಮಹತ್ವ ಪಡೆಯುತ್ತದೆ.

ತಾತ್ವಿಕ ವಿವೇಚನೆ : ಮಾಧವಾಂಕ ಕಾವ್ಯವು ಮಹಾನ್ ಶಿವಭಕ್ತ 'ಮಾಧವಾಂಕ'ನ ಭಕ್ತಿಪೂರ್ಣ ವ್ಯಕ್ತಿತ್ವವನ್ನು, ಪಂಚಾಕ್ಷರಿ ಮಂತ್ರಮಹಿಮೆಯನ್ನು ತಿಳಿಸುವ ಕೃತಿಯಾಗಿರುವುದರಿಂದ ವೀರಶೈವ ಮತ ತತ್ವಗಳು ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ.

ಸುಮಾರು ಆರು ಸಂಧಿಗಳಲ್ಲಿ ವೀರಶೈವನ ಲಕ್ಷಣಗಳು, ಅಷ್ಟವಿಧಪೂಜೆ, ಷೋಡಶೋಪಚಾರ, ದೀಕ್ಷೆ ಸಪ್ತವಿಧ ಶೈವಗಳು, ಲಿಂಗಾರ್ಚನಾವಿಧಿ, ಪರಶಿವನ ಪಂಚವಿಂಶತಿಲೀಲೆಗಳು, ಭಸ್ಮ, ರುದ್ರಾಕ್ಷಿ, ಮಂತ್ರ, ಜಪ, ನಿರಾಭಾರಿ ವೀರಶೈವ, ಶಿವಾಧಿಕ್ಯ ನಿರೂಪಣೆ ಮೊದಲಾದವುಗಳನ್ನು ವಿವರವಾಗಿ ಹೇಳಲಾಗಿದೆ. ಬಹುಶಃ ಗುಬ್ಬಿಯ ಮಲ್ಲಣಾರ್ಯರ 'ವೀರಶೈವಾಮೃತ ಪುರಾಣ' ಮತ್ತು ಕೆರೆಯ ಪದ್ಮರಸನ ದೀಕ್ಷಾಬೋಧೆಯನ್ನು ಅವಲೋಕಿಸಿ ಈ ಎಲ್ಲ ವಿಷಯಗಳನ್ನು ಸಂಗ್ರಹಿಸಿರುವವಂತೆ ತೋರುತ್ತದೆ. ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

ಒಂದು ಸಭೆಯಲ್ಲಿ ಅರಸಮಾಧವಾಂಕನು ಸನ್ಮಂತ್ರಿಯೊಡನೆ ನಾ ಬಾಲತನದಲ್ಲಿ ಶಿವನಂಘ್ರಿಕಂಡ ಕಾರಣ ಇಷ್ಟುವೈಭವ ಕೈಸಾರ್ದುದು ನಿಜತನುವಿಂದ ಶಿವನನ್ನು ಕಾಣುವ ಸುಖ ಯಾವ ನೆವದಿಂದ ದೊರೆಯುವುದು? ಎಂದು ಸಮಾಲೋಚಿಸುತ್ತಿದ್ದನು. ನೆನೆದವರ ಮನದಲ್ಲಿ ಎಂಬತೆ ವೀರಮಾಹೇಶ್ವರನೇ ಶಂಭುದೇಶಿಕನ ರೂಪದಲ್ಲಿ ಬಸವನ ಮನೆಗೆ ಪ್ರಭುಬಂದಂತೆ ಮಾಧವಾಂಕನಾಸ್ಥಾನಕ್ಕೈತಂದರು. ಮುಕ್ತಿಯ ಕಾರಣದಿಂದ ದೈನ್ಯಬಡುವ ಮಾಧವನಿಗೆ ಶ್ರೀಗುರು ಶೈವವನ್ನು ಬೋಧಿಸುವನು.

''ಯಾವ ವರ್ಣ, ಜಾತಿ ಕುಲದವರಾಗಲಿ, ದ್ವಿಜರಿರಲಿ, ಅಂತ್ಯಜರಿರಲಿ, ಶಿವನನ್ನು ನೆನೆಯುವ ಭಕ್ತರೆ ಸತ್ಕುಲಜರು'' (೧೩-೩೨)

[illegible]

"ಯಲ್ಲಜನ್ಮಂಗಳೊಳು ನರಜನ್ಮವೇಯಧಿಕ" (೧೩-೩೪) ಅವರಲ್ಲಿ ಹರನಸತ್ಕೃಪೆ ಪಡೆದವರು ಅತ್ಯಧಿಕ, ಚತುರ್ವೇದ, ಆರುಶಾಸ್ತ್ರ, ಹದಿನೆಂಟು ಪುರಾಣಗಳನ್ನು ಓದುವ ಶೌಚಯುತನು ಉತ್ತಮ ನೆನಿಸಿದರೂ, ಶಿವನಲ್ಲಿ ವಿಶ್ವಾಸ ಬಾಹಿರರಾದರೆ, ಅವರೇದುರ್ಜನರು (೧೩-೩೫) ಎಂದು ಶಿವಶರಣರ ಸಂಗ, ಶಿವಶಾಸ್ತ್ರ, ಶಿವಕಥನ, ಶಿವಚರಿತೆಗಳನ್ನು ಕೇಳಿ ಮುಕ್ತಿಪಡೆದವರ ಕಥೆಗಳನ್ನು ಹೇಳುತ್ತಾರೆ. ಪರಶಿವನ ಪಂಚವಿಂಶತಿ ಲೀಲೆಗಳಾದ ೧. ಸೋಮಧರ ಲೀಲೆ ೨. ಉಮಾಮಹೇಶ್ವರ ಲೀಲೆ ೩. ವೃಷಭಾರೂಢಲೀಲೆ ೪. ತಾಂಡವಲೀಲೆ ೫. ಗಿರಿಜಾಕಲ್ಯಾಣ ಲೀಲೆ ೬. ಭಿಕ್ಷಾಟನ ಲೀಲೆ ೭. ಮಾರಹರ ಲೀಲೆ ೮. ಕಾಲಹರ ಲೀಲೆ ೯. ತ್ರಿಪುರದಹನ ಲೀಲೆ ೧೦. ಜಲಂಧರ ಲೀಲೆ ೧೧. ಅಜಾರಿಲೀಲೆ ೧೨. ವೀರಭದ್ರಲೀಲೆ ೧೩. ಶರಭಲೀಲೆ ೧೪. ಅರ್ಧನಾರೀಶ್ವರ ಲೀಲೆ ೧೫. ಕಿರಾತ ಲೀಲೆ ೧೬. ಕಂಕಾಳ ಲೀಲೆ ೧೭. ಚಂಡೇಶಾನುಗ್ರಹ ಲೀಲೆ ೧೮. ವಿಷಧರ ಲೀಲೆ ೧೯. ಏಕಪಾದ ಲೀಲೆ ೨೦. ವಿಘ್ನಪ್ರಸಾದ ಲೀಲೆ ೨೧. ಉಮಾಸ್ಕಂದ ಲೀಲೆ ೨೨. ಏಕಪಾದ ಲೀಲೆ ೨೩. ಸುಖಾವಹ ಲೀಲೆ ೨೪. ದಕ್ಷಿಣಾಮೂರ್ತಿ ಲೀಲೆ ೨೫. ಲಿಂಗೋದ್ಭವ ಲೀಲೆಗಳನ್ನು ವಿವರಿಸಿ ಇವುಗಳನ್ನು ಆಲಿಸುವವರು ಮುಕ್ತರಾಗುವರೆಂದು ತಿಳಿಸುತ್ತಾರೆ.

ಭಕ್ತಿಮಾರ್ಗದುಸ್ತರವೆಂದು ಹೇಳಿ ಪರಧನ, ಪರವಧು, ಪರರಭೂಮಿಗಳಿಗೆಳಸದೆ, ಅರಿಷಡ್ವರ್ಗಗಳನ್ನು ಮೆಟ್ಟಿನಿಲ್ಲುವವನೇ ವೀರಶೈವ, ಅಷ್ಟವಿಧಪೂಜೆ, ಷೋಡಶ ಉಪಚಾರದ ವಿವರಗಳನ್ನು ನೀಡುತ್ತಾರೆ. ಶೆರ್ವನ ಕ್ರಿಯಾಶಕ್ತಿ ರೂಪನಾಂತುದೆದೀಕ್ಷೆ ಅದರಿಂವಿಶೇಷಮಾಗುತ್ತತೋರ್ಪುದೆ ಅನಾದಿಶೈವಮಾದಿಶೈವಂ ಮಹಾಶೈವ ಮನುಶೈವ ಮತ್ತೆ ವರಅವಂತರ ಶೈವ ಪ್ರವರಸತ್ಶೈವವಂತರ ಶೈವವೆಂಬಶೈವಂಸಪ್ತಮವರಲ್ಲಿ (೧೫-೫ ಮತ್ತು ೬) ಎಂದು ಸಪ್ತವಿಧ ಶೈವಗಳನ್ನು ಅವುಗಳ ಸಾದ್ಯಂತ ವಿವರಣೆಯನ್ನು ನೀಡುತ್ತಾನೆ. ಆ ಶೈವದಲ್ಲಿಯೇ ಶುದ್ಧ ಶೈವದ ವಿಧಗಳನ್ನು ೧. ವಾಮ ೨. ದಕ್ಷಿಣ ೩. ಮಿಶ್ರ ೪. ಸಿದ್ಧಾಂತಶೈವ ಎಂದು ನಾಲ್ಕು ಬಗೆಗಳೆಂದು ತಿಳಿಸಿ ವ್ಯಾಖ್ಯಾನಿಸುತ್ತಾನೆ. ಶಕ್ತಿಪರವಾದುದು ವಾಮಶೈವ ಉತ್ತುಂಗಭೈರವ ಪರವಾದುದು ದಕ್ಷಿಣಶೈವ ಮಾತೃಕಾಸಪ್ತಕವೇ ಮಿಶ್ರಶೈವ ಶಿವನ ಪರವಾದುದೇ ಸಿದ್ಧಾಂತಶೈವ ಬಳಿಕ ಆ ಶೈವಗಳಲ್ಲಿ ಮುಖ್ಯವಾಗಿ ಲಲಿತ, ಸಾಮಾನ್ಯ, ಮಿಶ್ರ, ಶುದ್ಧ, ವಿರಾಖ್ಯ, ವಲಿಘು ಎಂದು ಹದಿನಾಲ್ಕು ಭೇದಗಳನ್ನು ತಿಳಿಸಿ ಪರಶಿವನ ಪಂಚಸ್ವರೂಪವನ್ನು ವಿವರಿಸುತ್ತಾರೆ.

ಭಸ್ಮ ಉತ್ಪತ್ತಿ ಅದರ ವಿಧಗಳು ಧಾರಣೆಯ ವಿಧಾನ, ಪ್ರಮಾಣಗಳ ಕುರಿತು ಹೀಗೆ ವಿವರಣೆ ಬರುತ್ತದೆ.

> ಪಂಚವರ್ನದ ವಿಮಲಗೊಮಯಮನುಂತಂದು ಕಬಳಮಂರಚಿಸಿವಣಗಿಸಿ ದಹಿಸಿ
> ಸಂತಸದಿಶೋಧಿಸಿಯೆ ಮಾಡಲಾದುದು ಕಲ್ಪವೆಂಬವರಭೂತಿಬಳಿಕಾ
> ಮುಂತೆವನದಲ್ಲಿ ವಣಗಿರ್ದ್ದಗೋಮಯವ ತಂದಾಂತು ಚೂರ್ನವಮಾಡಿ
> ದಗ್ಧಕ್ರಿಯೆಯನೆಸಗಲಾಂತುದೆ ಅನುಕಲ್ಪಯೆಂಬನಾಮಂ
> ಬಳಿಕ ಪ್ರಥಮದಗ್ಧದ ಚೂರ್ನಮಂ

ಬಳಿಕ ವಸ್ತ್ರದಲಿ ಶೋಧಿಸುತ ಗೋಮೂತ್ರದಿಂ
ಕಲಸಿ ಪಿಂಡವ ರಚಿಸಿ ಪೂರ್ವೋಕ್ತದಿಂದಹಿಸಿ
ಲಲಿತೋಪಕಲ್ಪಮೆನಿಸುವದಂನ್ಯರಿಂದ ಮೂಡಿಸುವುದುಮಕಲ್ಪಮೆನಿಕೂ
ಸರ್ವರಿಗೆ ಯೋಗ್ಯದೈವಾಲಯ ಸ್ಥಿತಭಸಿತ ಸರ್ವಾಶ್ರಮಿಗಳು (೧೫-೨೬)

ಅದರ ಪೂರ್ವಾಪರಗಳನ್ನರಿತು ಧರಿಸುವುದೇ ಮಹಾಯೋಗ್ಯ. ಇದನ್ನಾಚರಿಸುವವನು ''ಶುಚಿರ್ಭೂತನಾಗಿ, ಕರಚರಣಂಗಳನು ಪ್ರಕ್ಷಾಳನಂಗೈದು ಸುರಚಿರಸ್ಥಳದಲ್ಲಿ ಸ್ವಸ್ಥವಾಗಿ ಕುಳಿತು ಪ್ರಾಣಾಯಾಮಮಂತ್ರವನ್ನು ವಿರಚಿಸುತ್ತ ಭಸ್ಮಸ್ನಾನಗೈವುದಕ್ಕೆ ಸ್ಮರಿಸಿಕೊಂಡು, ಕುರಂಗ ಮುದ್ರೆಯೊಳಗೆ ಭಸ್ಮವನ್ನು ಹಿಡಿದು ಅಲಘುಪಂಚಬ್ರಂಹ್ಮಮಂತ್ರವನ್ನು ಜಪಿಸುತ್ತ, ವಾಮಹಸ್ತಗೊಳಿಸಿ, ನಮಸ್ಕಾರ ಮಂತ್ರದಿಂದ ಮಂತ್ರಿಸಿ, ಬಲದ ಕೈಯ್ಯ ಮೇಲೆ ಮುಚ್ಚಿ, ಬಲದೊಡೆಯಲ್ಲಿ ಇಳುಹುತ್ತ ಮೂಲಮಂತ್ರವನ್ನು ಏಳುಬಾರಿ ನಿರ್ಮಲ ಚಿತ್ತದಿಂದ ಜಪಿಸಿ, ಮನಃಪೂರ್ವಕವಾಗಿ ಶಿರ, ಮುಖ, ಹೃದಯ, ಗುಂಹ್ಯ, ಪಾದ ಸರ್ವಾಂಗದೊಳಗಿರುವ ಆರು ಸ್ಥಳಗಳೊಳಗೆ ಆಯಾಯ ಮಂತ್ರೋಚ್ಚರಣೆಯಿಂದ ಅನುಲೇಪನಗೈಯ ಬೇಕು''(೧೫-೩೧)

ಸದ್ಬ್ರಾಹ್ಮಣರು ಆರಂಗುಲ ಪ್ರಮಾಣ, ಕ್ಷತ್ರಿಯರು ಮೂರೊಂದು ಬೆರಳಿನ ಪ್ರಮಾಣ, ವೈಶ್ಯರು ಎರಡಂಗುಲ ಪ್ರಮಾಣ, ಚಾರುಶೂದ್ರರಿಗೆ ಒಂದು ಬೆರಳಿನ ಪ್ರಮಾಣದಲ್ಲಿ ವಿಭೂತಿ ಧಾರಣಮಾಡಲು ತಿಳಿಸುತ್ತಾರೆ. (೧೫-೩೮) ಗೃಹಸ್ಥರು, ಸ್ತ್ರೀಯರು ತ್ರಿಕಾಲದಲ್ಲಿ ಜಲಮಿಶ್ರಮಾದ ವಿಭೂತಿಯನ್ನು ಧರಿಸಬೇಕು. ಯೋಗಿಗಳು ಸರ್ವಕಾಲದಲ್ಲೂ ಜಲಮಿಶ್ರಮಿಲ್ಲದೆ ಧರಿಸಬೇಕು. ವಾನಪ್ರಸ್ಥದಲ್ಲಿರುವವರು, ಕನ್ನಿಕೆಯರು, ದೀಕ್ಷೆಯಿಲ್ಲದವರು ಮಧ್ಯಾಹ್ನದವರೆಗೆ ಜಲಮಿಶ್ರಿತ ಭಸಿತವನ್ನೂ ನಂತರ ರಿಕ್ತ ಭಸಿತವನ್ನು ಧರಿಸಬೇಕು (೧೫-೩೯) ಇದರಧಾರಣೆಯಿಂದ ರೋಗಾದಿಭೀತಿಗಳು ಭೋಗಮೋಕ್ಷಗಳು ದೊರೆಯುತ್ತದೆಂದು ವೇದ, ಆಗಮ, ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ನಂತರ ಶಿವಾಕ್ಷಿಗಳೆನಿಸಿದ ರುದ್ರಾಕ್ಷಿಗಳನ್ನು ಧಾರಣೆ ಮಾಡಬೇಕು ಇದರ ವಿಧವನ್ನು ಬಲ್ಲವನೇ ಶುದ್ಧಶೈವನೆನಿಸಿಕೊಳ್ಳುತ್ತಾನೆ.

''..................ಹರಮುಂನ
ವಾತ ಪಥನಗರಮಂನಿಟ್ಟೆಸಲು ದೃಗ್ಗಿಂದು
ಭೂತಳಕುರುಳಲ್ಕೆ ತರುಗಳುದ್ಭವಿಸಿರುದ್ರಾಕ್ಷಿನಾಮಮನಾಂತವೂ'' (೧೫-೪೨)
''ತಿಂಗಳಂಬಕದಿ ಸಿತವರ್ನಷೋಡಶಭೇದ
ಪಿಂಗಳಾಕ್ಷಿಯಲಿ ಸಾವರ್ನ ದ್ವಾದಶಭೇದ
ಯಿಂಗಲದ ಲೋಚನದಿದಶವಿಧಂ ಕೃಷ್ಣವರ್ನಂಶಿವನ ಮೂರಕ್ಷಿಯಂ
ಸಾಂಗಮಾಗಿಯೆ ವುದಿಸಿ ತಂಮಮಲದಿವ್ಯನಾಮಂಗಳನು ಸ್ಮರಿಸಿದಡೆ ನೋಡಿದಡೆ
ಹಿಂಗದೆ ಧರಿಸುವರ ದೋಷಮಂದಹಿಸಲ್ಕೆಲೋಕೋಪಕಾರಾರ್ಥದಿ'' (೧೫-೪೨)

[illegible]

ರುದ್ರಾಕ್ಷಿಗಳು ಜನಿಸಿದವು. ಇದು ಮುನಿಗಳಿಗೆ ಮೋಕ್ಷ ಸಿದ್ಧಿಸಿಕೊಡುವ ಆಭರಣ. ಸುರಸಮೂಹಕ್ಕೆ ನಿತ್ಯತ್ವಸಾಧನದ ಆಭರಣ, ಮನುಜೋತ್ತಮರಿಗೆ ಸಂಶ್ರುತಿಬಂಧ ಹರದ ಆಭರಣ (೧೫-೪೪) ಇದರಲ್ಲಿ ಏಕಮುಖದಿಂದ ಪಿಡಿದು ಹದಿನಾಲ್ಕು ಮುಖದ ರುದ್ರಾಕ್ಷಿಗಳುಂಟು. ಕ್ರಮವರಿತು ಧರಿಸಲು ನಾನಾ ಫಲಗಳು ಲಭಿಸುವವು. ಏಕಮುಖದ ಮಣಿ 'ಬ್ರಹ್ಮಹತ್ಯಾಪಾಪವಿನಾಶಕ, ಎರಡು ಮುಖವುಳ್ಳದ್ದು ಸರ್ವಸಿದ್ಧಿಕಾರಕ, ತ್ರಿಮುಖಮಣಿಯು ಗೋಹತ್ಯಾ ಪಾಪನಿವಾರಕ, ಚತುರ್ಮುಖದ ರುದ್ರಾಕ್ಷಿಯು ಅಗ್ನಿ, ಸ್ತ್ರೀಹತ್ಯಹರ, ಪಂಚಾಸ್ಯ ರುದ್ರಾಕ್ಷಿಯು ಪುರುಷ ವಧೆತೊಲಗಿಸುವುದೆಂದು ನೂರೆಂಟು ಮಣಿಗಳ ಮಾಲೆಯ ಧಾರಣೆಯ ಫಲಗಳನ್ನು ತಿಳಿಸಿ, ಯಾವ ಬಗೆಯ ರುದ್ರಾಕ್ಷಿ ಉತ್ತಮವೆಂದು ತಿಳಿಸುತ್ತಾರೆ. ವೀರಾಸನ, ಗೋಮುಖಾಸನ, ಸುಖಾಸನಗಳೇ ಜಪಕ್ರಿಯೆಗೆ ಯೋಗ್ಯ'' (೧೫-೬೭) ಮನಬಂದ ಆಸನದಲ್ಲಿ ಜಪಗೈಯತಕ್ಕದ್ದು ಸುಸ್ಥಿರಶರೀರಿಯಾಗಿ, ನಿರ್ವಿಕಾರತ್ವದಿಂದ ಏಕಾಗ್ರತೆಯಿಂದ ಧ್ಯಾನಮಾಡಬೇಕು. (೧೫-೭೦) ಮಂತ್ರ ಜಪದಲ್ಲೂ ಅನೇಕ ಬಗೆಗಳಿವೆ. ಪರರಿಗೆ ಕೇಳಿಸುವಂತೆ ಮಾಡುವುದು ವಾಚಕ ಜಪ, ತನ್ನ ಕಿವಿಗೆ ಕೇಳಿಸುವಂತೆ ಜಪಿಸುವುದು ಉಪಾಂಸಕ ಜಪ, ಮಂತ್ರವಾಕ್ಯಾರ್ಥ ಚಿಂತನಗೈದರೆ ಮಾನಸ ಜಪ, ವಾಚಕ ಜಪವು ಕ್ಷುದ್ರಕಾರ್ಯಗಳಿಗೆ ಸರ್ವಸಿದ್ಧಿಗೆವುಪಾಂಸುಜಪ, ಪರಮ ಮುಕ್ತಿಗೆ ಮಾನಸ ಜಪಯೋಗ್ಯ, ಪರಮಮಂತ್ರಗಳಲಿ, ಪಂಚಾಕ್ಷರಿಯೆ ಸರ್ವೋತ್ತಮ, ಅದನ್ನು ಗುರುಮುಖದಿಂದಲೇ ಅರಿಯಬೇಕು (೧೫-೭೯) ಹೀಗೆ ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಪಂಚಾಕ್ಷರಿ ಜಪಮಾಲೆಯಾಂತು ವಿಧಿವತ್ತಾಗಿ ಜಪಿಸುವವನೆ ಶುದ್ಧಶೈವ. ಈತನ ಲಿಂಗಪೂಜಾ ವಿಧಾನ ಹೇಗೆಂಬುದನ್ನು ದೇಶಿಕೇಂದ್ರರು ಮಾಧವರಾಯನಿಗೆ ತಿಳಿಸುತ್ತಾರೆ. ''ಸಂತತ ಸಚ್ಚಿದಾನಂದಾತ್ಮಕಂವುಮಾಕಾಂತಂ ಸ್ವಯಂಭುಲಿಂಗಂ ಬಾಣ ಲಿಂಗಾಂಕ ವಾಂತಚಲಲಿಂಗ ಸಂಕೀರ್ಣಲಿಂಗಂ ಪ್ರಾಣಲಿಂಗಮಿವು ಪಂಚವಿಧದಾ'' (೧೬-೧೧) ಎಂದು ಪಂಚವಿಧದ ಲಿಂಗಗಳನ್ನರುಹಿ, ಈ ಲಿಂಗಗಳಲ್ಲಿ ಯಥಾಶಕ್ತಿ ವಿಶ್ವಾಸವಿಟ್ಟು ಸ್ಥಾನ, ದ್ರವ್ಯ, ಕಾಲದೇಶಾದಿ ಪ್ರಯೋಜನಗಳನ್ನರಿತುಕೊಂಡು ತಾಂತ್ರಿಕದ ವೈದಿಕದ ಶಿವಪೂಜಾವಿಧಗಳನ್ನರಿತು ಅಂತಶ್ಶೌಚ, ಬಾಹ್ಯಶೌಚಗಳೆರಡರ ಇಂಗಿತವನ್ನರಿತು ಆತ್ಮಶುದ್ಧಿ ಸ್ಥಾನಶುದ್ಧಿ, ಲಿಂಗಶುದ್ಧಿ, ದ್ರವ್ಯಶುದ್ಧಿ, ಮಂತ್ರಶುದ್ಧಿಗಳನ್ನು ಅರಿತು ಶೋಧಿಸಬೇಕು. ಉತ್ತಮ ಜಲವಿವರ ನೈವೇದ್ಯ, ಆಚಮನೀಯ ವಸ್ತುಗಳು, ಪಂಚಾಮೃತದ ಮಾಹಿತಿ ತಿಳಿದುಕೊಂಡು, ಲಿಂಗಮಜ್ಜನ, ವಿಭೂತಿಧಾರಣೆ, ವಸ್ತ್ರಧಾರಣೆ, ಆಭರಣಾಲಂಕಾರ, ಅಷ್ಟಗಂಧ ಧಾರಣೆ, ಅಕ್ಷತಾರ್ಚನೆ, ಪುಷ್ಪಾರ್ಚನೆ, ದಶಾಂಗಧೂಪ, ನೈವೇದ್ಯ ಸಮರ್ಪಣೆ ತಾಂಬೂಲ ಸಮರ್ಪಣೆಗಳನ್ನು ಕ್ರಮವರಿತು ಮಾಡಿ ಭಕ್ತಿಯಿಂದ ಭಜಿಸಬೇಕು. ಸಮಸ್ತ ಪೂಜಾದ್ರವ್ಯಗಳು ದೊರೆಯದಿದ್ದರೆ, ಜಲ, ಗಂಧ, ಪುಷ್ಪಗಳಿಂದರ್ಚಿಸಿದರೂ ಅಖಿಲ ವಿಧದ ಫಲ ಪ್ರಾಪ್ತಿಯಾಗುವುದು. ಶ್ರದ್ಧೆಯೆಂಬುದು ಈಶ್ವರನಿಗಿಷ್ಟ. ಆದ್ದರಿಂದ ಸುಶ್ರವಣ ಕೀರ್ತನೆ ಸ್ಮರಣೆ, ಪದಸೇವೆ, ಪೂಜೆ, ವಂದನೆ, ಧ್ಯಾನ, ಆತ್ಮಾರ್ಪಣೆಗಳಿಂದ ಇಹಪರದಲ್ಲಿ ಕಾಮಿಸಿದ ಫಲದೊರೆಯುವುದು. (೧೬-೨೯)

ಭವಿಗುಣಗಳನ್ನು ಬಿಟ್ಟವನೇ ವೀರಶೈವ. ತ್ರಿವಿಧವೀರಶೈವಗಳುಂಟು ೧. ಸಾಮಾನ್ಯವೀರಶೈವ, ೨. ವಿಶೇಷ ವೀರಶೈವ ೩. ನಿರಾಭಾರ ವೀರಶೈವದ ಕುರಿತು ಸವಿವರವಾಗಿ ತಿಳಿಸಿ ದೀಕ್ಷಾವಿಧಾನವನ್ನು ಶಾಸ್ತ್ರೀಯವಾಗಿ ವಿವರಿಸುತ್ತಾನೆ. ನಿರಾಭಾರಿ ವೀರಶೈವನ ನಡೆಯ ವಿವರಣೆಗೇ ಒಂದು ಸಂಧಿಯು ಮೀಸಲಾಗಿದ್ದು'' ಪರಮಲಿಂಗಗಳ ಸ್ಥೂಲ, ಸೂಕ್ಷ್ಮಗಳನ್ನರುಹಿ ಮಾಧವಾಂಕನಿಗೆ ಶಿವದೀಕ್ಷೆಯನ್ನಿತ್ತು ಶ್ರೀಗುರುವುತನ್ನಾಶ್ರಮಕ್ಕೆ ತೆರಳುತ್ತಾನೆ. ಹೀಗೆ ಮಾಧವಾಂಕ ಕಾವ್ಯದಲ್ಲಿ ತಾತ್ವಿಕ ವಿವೇಚನೆಯು ತುಂಬ ವಿಸ್ತೃತವಾಗಿದ್ದು, ಕವಿಯ ಧಾರ್ಮಿಕ ನಿಷ್ಠೆಯ ದ್ಯೋತಕವಾಗಿದೆ.

ಚಾರಿತ್ರಿಕ ವಿವೇಚನೆ : ''ನಮ್ಮ ಕಾವ್ಯಗಳು ಸಾಮಾನ್ಯವಾಗಿ ಪೌರಾಣಿಕ ವಿಷಯಗಳನ್ನು ಆರಿಸಿಕೊಂಡು ರಚಿತವಾದ ರಮ್ಯಾದ್ಭುತ ಕಥೆಗಳು[೬] ೧೧ನೆಯ ಶತಮಾನದ ಪ್ರವಾಸಿ ಅಲ್ಬೆರೂನಿ ಎಂಬ ಅರಬ್ಬೀವರ್ತಕ ಹೇಳುವಂತೆ ಸಂಗತಿಗಳ ಐತಿಹಾಸಿಕ ಅನುಕ್ರಮಣಿಕೆಯ ವಿಷಯದಲ್ಲಿ ಭಾರತೀಯರಿಗೆ ಆಸಕ್ತಿಯೇ ಇಲ್ಲ[೭] ಎನ್ನುವ ಮಾತು 'ಚಾರಿತ್ರಿಕ ವಿವೇಚನೆ'ಯ ಸಂದರ್ಭದಲ್ಲಿ ಮಾಧವಾಂಕ ಕಾವ್ಯಕ್ಕೆ ಅಕ್ಷರಶಃ ಅನ್ವಯಿಸುತ್ತದೆ.

ಇದು ಪೌರಾಣಿಕ ಕಥೆ, ತಾತ್ತ್ವಿಕ ವಿವೇಚನೆಯನ್ನು ಒಳಗೊಂಡ ಕಾವ್ಯವಾಗಿರುವುದರಿಂದ ಚಾರಿತ್ರಿಕ ಸಂಗತಿಗಳು ಅಷ್ಟಾಗಿ ಕಾಣಸಿಗುವುದಿಲ್ಲ. ಕೆಲವು ಶಿವಭಕ್ತರ ಕಥೆಗಳು, ಶರಣರ ಜೀವನದ ಕೆಲವು ಪ್ರಸಂಗಗಳ ಸಂಕ್ಷಿಪ್ತ ಉಲ್ಲೇಖ ಮಾತ್ರ ಇಲ್ಲಿ ದೊರೆಯುವುದನ್ನು ಗಮನಿಸಬಹುದು.

ಶಂಕರ ಕವಿಯು ಮಗಳು ಮಾಧವಿಯ ಮದುವೆಗೆ ಹರಿಹರದೊರೆಯ ಆಮಂತ್ರಣಕ್ಕೆ ಓಗೊಟ್ಟು

> ''ಲಾಳಾಂಗವಂಗಮತಿಯೊಳ ಕೊಂಕಣಕುಕುರು
> ಚೋಳಬರ್ಬರಮೆಸೆವ ಮಾಳವಂ ಮಗದಪಾಂ
> ಚಾಲ ಕರ್ನ್ನಾಟದ್ರಾವಿಡವತುಲಕೇರಳವು ಮಹಾರಾಷ್ಟ್ರ ಲಾಟಭಾಷಾ
> ಕಾಳಿಂಗಸಾವಿರ ಗೌಳಗುರ್ಜ್ಜರಸುದೇ
> ಶಾಳಿ ಮಧ್ಯದಧರೆಯ ನಾಳು ತಿಹಭೂಪ
> ಕುಲಮೌಳಿಗಳು'' (೫-೧೦)

ಆಗಮಿಸಿದ್ದರೆಂದು ತಿಳಿಸುತ್ತದೆ. ರಾಜನೀತಿ ಬೋಧೆಯ ಸಂದರ್ಭದಲ್ಲಿ ಬಸವಣ್ಣನು ಕೂಡಲಸಂಗಮ ರಲ್ಲಿ ಬೆರೆತದ್ದು, ಬಿಜ್ಜಳನು ತನ್ನ ಅಳಿಯ ಬಿಜ್ಜಳನಿಗೆ ಪಟ್ಟಗಟ್ಟಿದ್ದು ಅವನನ್ನು ಚನ್ನಬಸವೇಶನಾಳ್ಗಳು ಹರಿಸಿದ ಘಟನೆಯ ಉಲ್ಲೆಖವಿದೆ.'' (೧೨-೩೬) ನವಚೋಳರು, ಪ್ರಭುದೇವರು, ಬಲದೇವ, ಅಕ್ಕನಾಗಲೆ ಬೊಮ್ಮಯ್ಯ ವೀರಬಂಕಯ್ಯ, ಕಿನ್ನರಿ ಬೊಮ್ಮಯ್ಯ, ಗುಂಡದ ಬ್ರಹ್ಮಯ್ಯ ಚೋಳರಾಜರು (೨೦-೪೯ರಿಂದ ೫೯) ಗ್ರಂಥಾಂತ್ಯದಲ್ಲಿ ನೀಲಾಂಬಿಕೆ, ಮಡಿವಾಳ ಮಾಚರಸ, ಕಕ್ಕಯ್ಯ, ಮೋಳಿಗೆಯಮಾರಯ್ಯ..... ಮುಖ್ಯವಾದ ಸಮಯಯಳ್ಳೂರರೆಪ್ಪತ್ತರಡಿರಕ್ಷೆಯಂ ಪೊತ್ತು.... ವಿರಕ್ತರು ಸಾವಳಿಗೆ ಶಿವಲಿಂಗ ದೇವ ಮುರಿಗೆ ಸ್ವಾಮಿ, ತಿಪ್ಪೇರುದ್ರಸ್ವಾಮಿ, ಚಿಕ್ಕಂಣೊಡೆಯ ಶಿರಹಟ್ಟಿ ಫಕೀರಯ್ಯ, ಹುನಗುಂದೆ ನೋಣಮುತ್ತಿನ

[illegible]

ಪ್ರಭು, ತಾವರಗೆರೆಯ ಅಂಣೇಶ, ಮುದ್ದಪ್ಪ, ಮುದಳಿಮಹಾದೇವಿ, ಹೆಗ್ಗಪ್ಪ ಸಾಣ್ಬಾಳ, ಪ ಯ್ಯಯ್ಯ, ಮಧುರಗಾವಿಯ ಶಿವಲಿಂಗಾದಿ ನೂತನರ ಉಲ್ಲೇಖಮಾಡುತ್ತಾನೆ.

ಸಾಹಿತ್ಯಿಕ ವಿವೇಚನೆ

ವರ್ಣನೆಗಳು: "ಕಾವ್ಯವು ಸಂಕೀರ್ಣ ಮನೋಭಾವಗಳ ಓದುಗರ ಮನಸ್ಸಿಗೆ ರಂಜನೆಯಾಗಬೇಕಾದ್ದ ರಿಂದಲೂ, ಕಾವ್ಯದ ವಸ್ತುಗಹನವಾಗಿದ್ದಾಗ ಶಾಸ್ತ್ರೀಯವಾಗಿದ್ದಾಗ, ಓದುಗರ ಮನಸ್ಸು ಬೇಸರಗೊಳ್ಳದ ರೀತಿಯಲ್ಲಿ ಕೃತಿಯ ನಡೆ ಸಾಗಬೇಕಾದ್ದರಿಂದಲೂ ಕವಿಗಳು ಮಧ್ಯೆಮಧ್ಯೆ ವರ್ಣನೆಗಳನ್ನು ತಂದರು.[೮] ಮುಂದೆ ಮಹಾಕಾವ್ಯವಾದುದು ಹದಿನೆಂಟು ಬಗೆಯ ವರ್ಣನೆಗಳನ್ನು ಅವಶ್ಯ ಹೊಂದಿರಬೇಕೆಂಬ ನಿಯಮವಾಯಿತು.[೯] ವಸ್ತುಕ ಕಾವ್ಯಗಳಲ್ಲಿಯಂತೆ ಕಡ್ಡಾಯವಾಗಿ 'ವರ್ಣಕಕಾವ್ಯ'ಗಳಲ್ಲೂ ಕೆಲವು ವೀರಶೈವ ಕವಿಗಳು ಅನವಶ್ಯಕವಾಗಿ ವರ್ಣನೆ ಮಾಡಲೇಬೇಕೆಂಬ ಕಟ್ಟುಪಾಡಿಗೆ ಒಳಗಾದಂತೆ ಕಂಡುಬರುತ್ತದೆ."[೧೦] ಮಾಧವಾಂಕ ಕಾವ್ಯವು ವರ್ಣನಾ ಪ್ರಧಾನವಾದ ಷಟ್ಪದಿಕಾವ್ಯವಾಗಿದ್ದು, 'ರಾಜಶೇಖರ ವಿಳಾಸ'ದಂಥ ನಿಬಿಡವಾದ ವರ್ಣನೆಗಳುಳ್ಳ ಕಾವ್ಯದ ಜಾಡಿನಲ್ಲಿ ನಡೆಯ ಹೊರಟಿದ್ದರಿಂದ ಸಹಜವಾಗಿಯೇ ವರ್ಣನೆಗಳು ಇಲ್ಲಿ ಹೇರಳವಾಗಿ ದೊರೆಯುತ್ತವೆ.

ಮಹಾಕಾವ್ಯಗಳಲ್ಲಿಯಂತೆ ಈ ಕೃತಿಯೂ ಸಮುದ್ರವರ್ಣನೆಯೊಂದಿಗೆ ಆರಂಭವಾಗುತ್ತದೆ. ಆಂಧ್ರದೇಶವು ಛಪ್ಪನ್ನದೇಶಾಳಿಯೊಳು ಸಜ್ಜನನಿವಾಸ" (ಮಾಧವಾಂಕ ಕಾವ್ಯ ೧-೨೬)ವಾಗಿದ್ದು, ನವಗ್ರಹ ದೊಡಲೆನಿಸಿತ್ತು" (೧-೨೭) ಇಂಥ ಪುಣ್ಯದೇಶದಲ್ಲಿ "ಕ್ಷಿತಿಗೆ ಅಮರಾವತಿವೋಲ್ವ ಶ್ರೀಬೆಜವಾಡಿ" (೧-೪೧) ಪಟ್ಟಣವನ್ನು ಉನ್ನತ ಶೈವಸಂಪನ್ನನೂ, ಅಪ್ರತಿಮ ಗಂಭೀರನೂ ಆದ ಹರಿಹರರಾಯನೆಂಬ ಕ್ಷತ್ರಿಯೋತ್ತಮನು ಆಳುತ್ತಿದ್ದ ಆಪುರ ವೈಭವವು ಬಣ್ಣಿಸಲಸದಳವಾಗಿತ್ತು

"ದಿಗಧಿಪರು ವಸ್ತ್ರಮಣಿಭೂಷಣಾಲಂಕೃತದಿ
ದಿಗನೇಕವಗಳ ಶೃಂಗರಿಸುತಾರೋಪಣದಿ
ಮಿಗೆ ಸೀಘ್ರುದಿಂದ್ಯೆದಿ ಪುರವೈಭವವನೀಕ್ಷಿಪಂತೆ ಕೊತ್ತಳಗಳೆಸಿಯೇ" (೧-೩೦)

"ಹೊಂಜವನಿಕೆಯವಜ್ರಮೊಳೆಯ ಕೀಲಿತ ಬಿಲಿದ
ಮಂಜು ತರದುಭಯಭಾಗದಿ ಚಿತ್ರಚಾವಡಿಗ
ಳಿಂ ಜ್ಯೋತಿಮಯಮಾಗಿನಗರ ಲಿಂಗಾಲಯ ದ್ವಾರದಂತಗುಸಿಯೆಸಿಯೆ"(೧-೩೨)

ಹೀಗೆ ಸಲ್ಲಲಿತದಿಂದೊಪ್ಪುವ ಆಪುರದ ಬಾಹ್ಯದಲ್ಲಿ

"... ಗೆಲ್ಲಿ ನೋಡಿದಡೆ ಕಾಲುವೆ ಕೂಪಕೆರೆಕೊಳಗ
ಳೆಲ್ಲಿ ನೋಡಿದಡೆ ಯರವಟಿಗೆಯಂನ್ನದಚ್ಚತ್ರತಂಣ್ನೆಳಲತಾಣಂಗಳೂ" (೧-೩೪)

ಕುಸುಮವಾಟಿಗಳು, ಹೊಲಗದ್ದೆ, ಪಕ್ಷಿ ಸಂಪತ್ತು, ವೃಕ್ಷ ಸಂಪತ್ತು, ಪ್ರಾಣಿ ಸಂಪತ್ತಿನಿಂದ ಸಮೃದ್ಧವಾಗಿತ್ತು. ಶಂಕರ ಕವಿಯು ಕಥೆಗೆ ಪೂರಕವಾಗುವಂತೆ ತುಂಬ ಔಚಿತ್ಯಪೂರ್ಣವಾಗಿ ವರ್ಣನೆಗಳನ್ನು ತರುತ್ತಾನೆ.

ಉದಾಹರಣೆಗೆ: ಮಾಧವಿಗೆ ಶಿವನಂಶವೇ ಪುತ್ರರೂಪದಲ್ಲಿ ಉದಯಿಸುವ ಕನಸು ನನಸಾಗುವುದೆಂದು ಸಾರಲು ಸೂರ್ಯಾಸ್ತದ ವರ್ಣನೆ ಹೀಗೆ ಚಿತ್ರಣಗೊಂಡಿದೆ. ಮಾಧವಿಯು ಸಮಾಗಮಕ್ಕೆ ಸನ್ನದ್ಧಳಾಗುತ್ತಾಳೆ.

''ಆ ಸಮಯದೊಳ್ತಿಳಿದನಂತಮಣಿ ಚಿಂತಿಸು
ತ್ತಿ ಸತಿಗೆ ಸದ್ಗುಣಾಮಳ ಮಣಿಯುಯುದಿಸುವನು
ತಾಸಾಟಿಯಲ್ಲಮವಗೆನುತ ಭಾಸ್ಕರನ ಪರಕೂಪಾರದೊಳ್ಮುಳುಗಿದಂ'' (೨೦೮)
ಆಗ ಆ ದಂಪತಿಗಳೊಂದಾದ ದೃಶ್ಯವನ್ನು
''ಅಂಗಭವಕೇಳಿಯೆನಿಸದಲೆ ದಂಪತಿಗಳಂ
ಲಿಂಗಭವಕೇಳಿಯೊಳಗಾದ ಸುಖಗಳನೆಲ್ಲ
ಲಿಂಗ ಮುಖವರಿದು ಲಿಂಗದ ಹಸ್ತದಿಂದ ಲಿಂಗಕಿತ್ತು ಸಮರಸ....''(೨೦-೨೬)

ವಾದರೆಂದು ಬಣ್ಣಿಸುತ್ತಾನೆ.

ಇಲ್ಲಿ ಶಿವಮಯವರ್ಣನೆಗಳು ಕವಿಯ ಸದಭಿರುಚಿಗೆ ಸಾಕ್ಷ್ಯನುಡಿಯುತ್ತವೆ. ಮಾಧವ ಮಹೀಶನಿಗೆ ಕನಸಲ್ಲಿ ಗುರುಬಂದು ಆಶೀರ್ವದಿಸಿದ್ದು ನಿಜವೆಂಬಂತೆ ''ಕೋಳಿಕೂಗಿತಂತೆ'' ಅದನ್ನು ಕವಿಯ ಮಾತುಗಳಲ್ಲೇ ಕೇಳಬೇಕು.

''ನಿದ್ರೆಯಂ ತಿಳಿದೆದ್ದು ಕಂಣ್ದೆರೆದು ನೋಡಲ್ಕೆ
ಅದ್ರಿಜಾವರನಮರಪಗದ್ರುತನಯವತಾರ
ಅದ್ರುಶ್ಯಮಾಗಿರಲು ತಂನ ಚಿತ್ತೇಷ್ಮತೆಯ ನಿಮಳರಾಗದೊಳೆಬ್ಬಿಸಿ
ಚಿದ್ರೂಪನಿಂತೆಂದನೆನೆ ಕೇಳಿ ಹರುಷಾಸಮುದ್ರದೊಳ್ಮುಳಿಗಿ ಮೂಡುತ್ತಿರಲ್ಕಿದುವೆ ದಿಟ
ಖದ್ರುಜಾಭರಣ ಸ್ವಪ್ನದೊಳೆಂದು ದೆಂದು ಕೂಗಿತ್ತಾಗ ತಾಂಬ್ರಚೂಡಂ'' (೨೦-೨೯)

ಇಲ್ಲೆಲ್ಲ ಕವಿಯು ಸಾಂಪ್ರದಾಯಿಕತೆಗೆ ಶರಣು ಹೋಗಿದ್ದನ್ನು ಗುರುತಿಸಬಹುದು. ಬಸವಕುಮಾರನನ್ನು ತೊಟ್ಟಿಲಿಗೆ ಹಾಕುವ ಸಂದರ್ಭದಲ್ಲಿ ಬರುವ ವರ್ಣನೆ ತಾತ್ತ್ವಿಕವಾಗಿದೆ.

''ನಿರುಪಮ ನಿರಾಶ್ರಯ ನಿರಾಯದ ಮನೆಯಲ್ಲಿ
ಪರಮಪರತರ ವರಾಶ್ರಿತಮಾದಪೊಂದೊಲೆಗೆ
ಸುರಚಿರದನಾದಬಿಂಧುಗಳೆಂಬಯರಡು ಕೊಂಡಿಗಳಿಟ್ಟು ಕರಣನಾಲ್ಕಾ
ಭಾಸುರದ ಪೊಂನ ಸರಪಳೆಯ ತೊಡರಿಸುತಸ್ತು

[illegible]

ಲಾಸ್ಯರೂಪಾಧಾರಮಣಿ ದೊಟ್ಟಿಲನುಯಿಟ್ಟು

ಮಾಸದಿಹ ಸ್ವಸ್ತನಿರ್ಮಲದಕರದ ಮುಡಿಪಾಸಿಕೆಯ

ಪಾಸಿ ಶಶಿ ಮುಖಿಯರೂ" (೨೦-೭೧)

ಆ ಮಗುವಿನ ಬಾಲಲೀಲೆಯ ವರ್ಣನೆಗಳಂತೂ ತುಂಬ ಮಾರ್ಮಿಕವಾಗಿವೆ.

"ಚರಣ ಪೊಂಗೆಜ್ಜೆ ಘಿಲಿರೆನಲೆರಡು ಕಾಲಿಂದ

ಉರೆ ಭವವನೊದವಂತೆ ಯರಡು ಕಾಲ್ಗಳನೆಗಹಿ

ಯಿರದೆ ನಲಿವುತ ಮಾಯಶಕ್ತಿಮುಂದೆಲೆವಿಡಿದುಯಳದುನಾಚಿಕೆ ಕೊಂಬೊಲೂ

ಕರಗಳಿಂದಂ ಬಯಲ ಪಿಡಿಪಿಡಿದು ಲೋಕದಾ

ಮರುಳರಂ ನೋಡಿನಗುವಂತೆ ಗಹಗಹಿಸುತ್ತೆ

ಧರೆಯದುರ್ಜನರ ಸಂಗವನೊಲ್ಲದಳುವಂತೆ ಅಳಲವರಜನನಿ ನೋಡಿ" (೨-೧೬)

ಇಂಥ ಸಂದರ್ಭಗಳಲ್ಲಿ ಶಂಕರಕವಿಯು ಷಡಕ್ಷರದೇವನಿಂಗಿಂತ ಹೆಚ್ಚು ಔಚಿತ್ಯ ಪ್ರಜ್ಞೆಯನ್ನು ಮೆರೆದಿರುವುದು ಮಾತ್ರವಲ್ಲ, 'ಭೀಮಕವಿ'ಯ ಗಾಢ ಪ್ರಭಾವವಾಗಿರುವುದನ್ನು ಗುರುತಿಸಬಹುದು.

ಉದಾಹರಣೆಗೆ: ಬಾಲಕ ಬಸವೇಶನು

"ಒತ್ತರಿಪ ಸಂಸಾರವಂ ಬೆಂ

ಬತ್ತಿ ಪಾಜೆತಗುಳ್ದು ನಲಿದಾ

ಡುತ್ತಲಿಪ್ಪ ವೊಲೆರಡು ಕಯ್ಯಂಬಿಚ್ಚಿಯಾಡುವನು

ಮುತ್ತಿಬಹ ಮಾಯಾಪ್ರಪಂಚುವ

ನೊತ್ತಲೀಯದೆ ಬೀಳಲೊದೆವಂ

ತುತ್ತಮೋತ್ತಮನೊಡನೊಡನೆ ಪದಯುಗವನಾಡಿಸುವ"[೧೧]

ಶೃಂಗಾರದ ವರ್ಣನೆಗಳಲ್ಲಿ, ಷಡಕ್ಷರದೇವನನ್ನು ಅನುಸರಿಸುವ ಪ್ರಯತ್ನ ಮಾಡಿದ್ದರೂ ಅವನ ಎತ್ತರಕ್ಕೆ ಶಂಕರಕವಿಯು ಏರಿಲ್ಲವಾದರೂ ರಸಿಕತನಕ್ಕೇನೂ ಕೊರತೆಯಿಲ್ಲವೆಂಬಂತೆ ಚಿತ್ರಿಸುತ್ತಾನೆ. ವನಕೇಳಿಗೆ ಹೊರಟ ಮಾನಿನಿಯರ ಚಿತ್ರ ಸೊಗಸಾಗಿದೆ.

ಶುಕನುಡಿಯನತಿಗಳೆವನುಂಣಧ್ವನಿಯವಾತು

ಮಾಣಿಕದಮಳಮಂಜು ತಿಳಿಜೊಂನದತಿಬಿಂಣ್ಪನಂ

ಪ್ರಕಟಿತದಿಮವನು ಸೋಲಿಸುವಮುಗುಳ್ನಗೆಯ ಮಾನಿನಿರೈತಂದರೊಲವಿಂ" (೨೧-೨೧)

ತಳಿತತರುಗುಂಪಿಂದೆಯಲರ್ದಪೂಗಂಪಿಂದೆ

ಕಳಿತಪಣ್ಣ್ಪಿಂಪಿಂದೆ ಸುಳಿಗಾಳಿ ತಂಪಿಂದೆ

ಗಿಳಿಮಧುರಮಾತಿನಿಂ ಕೋಗಿಲೆಯ ಗೀತದಿಂ ಅಳಿಕುಲವ್ರಾತದಿಂದೆ

ನಳಿನಬಾಣನು ತಂನ ಘಳಿವಕಲ್ಲೆರ್ದೆಯ

ಗರ್ಳಿಗೆಜವ್ವನ ತುಂಬಿಮರುಳ್ಗೊಳಿಪೆನೆಂದುತಂ

ನ್ನಳಗಸಮೇತದಿ ಬಂದವನ ಮಧ್ಯಮಿರ್ಪಂತೆ ಮೆರೆದುದಾ ಉದ್ಯಾನವನಂ" (೨೧-೩೫)

ಎಂಬ ವರ್ಣನೆ ಓದುಗರ ಹೃದಯವನ್ನರಳಿಸದೇ ಇರದು. ಜಲಕ್ರೀಡೆಯ ವರ್ಣನೆಯೂ ಹೃದ್ಯವಾಗಿದೆ. 'ವೇಶ್ಯಾವಾಟ'ಯ ವರ್ಣನೆಯಲ್ಲಿ ಸಾಂಪ್ರದಾಯಿಕತೆ ಇಣುಕಿದ್ದರೂ ಕೆಲವು ಗಮನಸೆಳೆಯುತ್ತವೆ.

ಉದಾಹರಣೆಗೆ:

ಕಡುರಾಜಿಸುವ ಅಮ್ರುತ ಆಲತಿಳಿ ಜೊಂನಥುಳ

ಬಡ ಭಾಷೆ ಸರ್ಪ್ಪನಡೆಯಾಡುತಿಹಪುತ್ತು ಮ್ರುಗ

ದೊಡನೆ ಮೊಲಮಿರೆ ನಾಣ್ಚಿಕಳುಹಿದೊಲುವುಯ್ಯಾಲೆಯ ಝುಡಿದೊದರೊಂದೆಡೆಯೊಳೂ"

(೨೨-೬೪)

ಕರುಣರಸದ ವರ್ಣನೆಯಲ್ಲೂ ಕವಿಯದು ಎತ್ತಿದ ಕೈ. ತನ್ನ ಮಗನ ಶವವನ್ನು ಕಂಡು ದುಂಢಿಯು....

"ನಿಂನಿಂದಸದ್ಗತಿಯುಮಹುದೆಂದು ನಂಬಿರ್ದೆ

ನಂನನು ಅಧೋಗತಿಗೆಯಳದು ಪೋಪರೆತಂದೆ

ಮಂಣನುರೆ ಬಗದಿಕ್ಕಿ ಮುಚ್ಚಿವೂರೊಳಗೆನಾನಿಂನೆಲ್ಲಿನೋಡಲಣುಗಾ (೨೩-೧೬)

ವಡಲಿಗಂನವಾಕಾಣೆನೆಂದೆಂನನಗಲಿದಿಯೊ

ವುಡುವರರುವಿಯುಮಿಲ್ಲವೆಂದು ಮುನಿದಿಯೊಮಗನೆ

ಬಡುವಿಯೆಂದೆಂನಬಿಟ್ಟಗಲಿ ಬಲ್ಲಿದರಲ್ಲಿ ಪುಟ್ಟಿಸುಖಿಸಲ್ಕಗಲಿದೋ" (೨೩-೧೭)

ಎಂದು ಪ್ರಲಾಪಿಸುವಲ್ಲಿ ಕವಿಯು ಬಡತನಕ್ಕೆ ಬೇಸತ್ತು ಹೋದೆಯಾ ಮಗನೆ ಎಂಬ ಕಲ್ಪನೆಯಲ್ಲಿ ಇತರರಿಗಿಂತ ಭಿನ್ನನಾಗಿದ್ದಾನೆ. ಆದರೆ ಇಲ್ಲಿಯೂ ಷಡಕ್ಷರಿಯ ಕಲ್ಪನೆ ಚಿತ್ರಕಶಕ್ತಿಗಳನ್ನು ನಾವುಕಾಣಲಾರೆವು.

ಅಲಂಕಾರಗಳು : ಅಲಂಕಾರವೆಂದರೆ ಸಹೃದಯ ರಂಜಕ ಉಕ್ತಿಚಾತುರ್ಯ. ಕಾವ್ಯದಲ್ಲಿರಸವು ಪ್ರಧಾನ ಸ್ಥಾನಪಡೆದರೂ ಶಬ್ದಾರ್ಥಚಾತುರ್ಯಗಳು ತಿರಸ್ಕಾರ ಯೋಗ್ಯವಾಗುವುದಿಲ್ಲ. ಅವು ಕಾವ್ಯಶ್ರೀಯ ಸೌಂದರ್ಯ ವನ್ನು ಹೆಚ್ಚಿಸುವಂತಿದ್ದರೆ ಸ್ವಾಗತಾರ್ಹವೇ. ಈ ಭಾವನೆಯೇ ಕವಿಗಳು ತಮ್ಮ ಕೃತಿಗಳಲ್ಲಿ ಅಲಂಕಾರಗಳನ್ನು ತರಲು ಪ್ರೇರೇಪಿಸಿರಬೇಕು.[೨] ಈ ಮಾತು ಲೌಕಿಕ ಹಾಗೂ ಧಾರ್ಮಿಕ ಕಾವ್ಯಗಳೆರಡಕ್ಕೂ ಅನ್ವಯಿಸುತ್ತದೆ.

ಧಾರ್ಮಿಕ ಕಾವ್ಯವಾದ 'ಮಾಧವಾಂಕ ಕಾವ್ಯ'ದಲ್ಲಿ ಅಲಂಕಾರಗಳ ಬಳಕೆ ವೆಗ್ಗಳವಾಗಿದೆ. ಉಪಮೆ, ದೃಷ್ಟಾಂತಗಳು ಪ್ರಧಾನ ಸ್ಥಾನಪಡೆದರೆ, ರೂಪಕ, ಅತಿಶಯೋಕ್ತಿಗಳು ಅಲ್ಲೊಮ್ಮೆ ಇಲ್ಲೊಮ್ಮೆ ಇಣುಕುತ್ತವೆ.

ದೊರೆ ಹರಿಹರರಾಯನು ತನ್ನ ಕುಮಾರನನ್ನು ಪರೀಕ್ಷಿಸಿ ಪಂಡಿತನನ್ನು ಕೋಪದಿಂದ ಜರಿಯಲು ಅವನಸ್ಥಿತಿ "ರಾಹುಸೋಕಿದ ಚಂದ್ರನಂತೆ" ಆಯಿತು. (೩-೧೩) ಅದಕ್ಕವನು 'ಕುಟಿಲ ಭುಜಗವೊಲ್ (೩-೨೬) ಹೊಂಚು ಹಾಕುತ್ತಿದ್ದನಂತೆ. ಹೀಗೆ ಹೆಜ್ಜೆ ಹೆಜ್ಜೆಗೆ ಉಪಮೆಗಳ ಬಳಕೆ ಇಲ್ಲಿರುವುದನ್ನು ಕಾಣುತ್ತೇವೆ.

ಉದಾ: ವುತ್ತಮದವರ್ಗ್ಗೆ ಜಲಮುತ್ತಾದ ತೆರನಂತೆ (೪-೧೨)

ಸಂಜೀವನದ ಮರಿಯೊಲ್ (೪-೨೪)

ರಾಜೀವದೊಳು ಮಧುಪಾಳಿಸುಳಿವಂತೆ (೪-೫೧)

ಭೂಗತಚಂದ್ರಗಗನ ಪಥ ಕಡರ್ದಂತೆ (೪-೫೦)

ವಿಲಸಿತಕ್ಷೀರಾಬ್ಧಿಯಂತೆ

ವಸುಗಿರಿಯಂತೆ (೪-೬೪)

ಘನರವಗೇಳ್ದು ನವಿಲ ಮನವಲರ್ವಂತೆ (೫-೨೦)

ಬೆಳ್ಮುಗಿಲ ಮಧ್ಯದಿ ಮಿಂಚು ಪೊಳೆದಂತೆ

ಯೋಗಿ ಹೃಜ್ಯೋತಿಯಂತೆ (೭-೪೨)

ಗೋವಂಕಂಡ ಕರುವಿನಂತೆ (೯-೯)

ತಂನಕಿವಿಯೊಳ್ ತಪ್ತಶರಮಂ ಪವಣಿಸಿದವೊಲುಂ (೧೦-೫೧)

ಹಾದಿಗಾಣದ ಕುರುಡಗಕ್ಷಿ ಬಂದಂತೆ (೧೩-೧೫)

ಕಾಲ್ಪೊದಹಿಳವನತ್ರುಷೆಗೆ ಸುರನದಿಯು ಬಂದವೊಲು

ವ್ಯಾಧಿಯಿರ್ದೆಡೆಗೆ ವೈದ್ಯಂ ಬಂದವೊಲು (೧೩-೧೬)

ಪಾವಕನ ಸೋಂಕಿ ಕರ್ಪೂರ ಬಯಲಾದಂತೆ (೧೩-೫೭)

ಬಾಲಶಶಿಯಂತೆ (೨೧-೮)

ಇತ್ಯಾದಿ ಉಪಮಾಲಂಕಾರಗಳಿಲ್ಲಿ ಔಚಿತ್ಯ ಪೂರ್ಣವಾಗಿ ಬಳಕೆಯಾಗಿರುವುದನ್ನು ಬಿಟ್ಟರೆ ಹೊಸತೇನೂ ಇಲ್ಲ. ದೃಷ್ಟಾಂತಗಳೂ ಉಪಮಾಲಂಕಾರದಷ್ಟೇ ಪ್ರಮಾಣದಲ್ಲಿ ಬಳಕೆಯಾಗಿವೆ.

ಉದಾಹರಣೆಗೆ:

ಮಾರಾರಿಯೊಲವಿನಿಂ ಮುಂನಶೂಲಕೆ ನಡೆದ

ಸಾರಗುಣನಿಧಿ ಗುಂಡ ಬ್ರಹ್ಮಯ್ಯನಂತೆ ಮುದ

ವೇರಿ ಪೊದಲಿಗೆ ಪೋದಮಹಾದೇವಿಯಂತೆ ಬಳಿಸಂದ ತತ್ಸರಣಿವಿಡಿದು (೪-೧೯)

ಅನಘ ಬಲದೇವ ಬಸವೇಶರೊಳು ಆಕಾಶ
ಘನ ಘೋಷದಿಂದ ಬಿಜ್ಜಳನ ಸಭೆ ಕೇಳ್ವಂತೆ
ಧ್ವನಿಗೈದು ವೋಧಿಪೇಳಿರಿಯೆಂದುದಿಲ್ಲವೆ (೨೧-೯೦)

ನಾರಿಸ್ತ್ರೀಯಕ್ಕನಾಗಲೆಯ ಗರ್ಭದಲಿ ಮಾತಾಡನೆ ಚೆಂನಬಸವಾ (೨೧-೯೧) ರಾಜನೀತಿ ಬೋಧೆಯ ಸಂದರ್ಭದಲ್ಲಿನ ದೃಷ್ಟಾಂತಗಳು ಕವಿಯ ಉಚಿತಾನುಚಿತ ವಿವೇಕಕ್ಕೆ ಸಾಕ್ಷಿಯಾಗಿವೆ.

ಉದಾಹರಣೆಗೆ:

ಯಿದನರಿದು ಮುಂನದಶರಥನು ಜೇಷ್ಟಾತ್ಮಜನ
ಸುದತಿಯುಕ್ತಿ ಕೇಳಿವನವಾಸಗಳುಹಿದೆ
ಶದಪಟ್ಟಗಟ್ಟಲಾಭರತ ವರ್ಜಿಸಿದೆಶತಂಮಿಪ್ಪೆಯಾಯ್ತು ನರಪಾ (೧೨-೧೪)

ಇಲ್ಲಿ ಸ್ವಭಾವೋಕ್ತಿಗಳಿಗೂ ಕೊರತೆಯಿಲ್ಲ. ಉದಾಹರಣೆಗೆ,

ತಳಿತತರುಗಳ ಗುಂಪು ಪೂತಪುಷ್ಪದ ಕಂಪು
ತಳೆದ ಪಣ್ಣಾಯ್ಲೊಂಪುವುಲಿವಶುಖಪಿಕದಿಂಪು (೧೦-೬೩)

ಹಾಗೆಯೇ ಶಬ್ದಾಲಂಕಾರಗಳೂ ಬೇಕಾದಷ್ಟು ದೊರೆಯುತ್ತವೆ. ಉದಾಹರಣೆಗೆ

ಸ್ವರಗೈದು ವದರುತಿಹ ಕಾಳೆಗಳ ಸೂಳುಗಳ
ಭರದಿ ಬಲ್ದನಿಗೊಡುವ ಭೇರಿಗಳ ತೇರುಗಳ
ಖುರಪುಟದೊಳಾಡುತಿಹ ವಾಜಿಗಳ ರಾಜಿಗಳ ಆನೆಗಳ ಸೇನೆಗಳೊಳೂ (೧೦-೪೩)

ಅಲ್ಲಲ್ಲಿ ನಿಂಬೆ ನೇರಿಲು ಹೆರಳೆಯುಕದಳಿ
ಅಲ್ಲಲ್ಲಿ ತಳಿತ ಮಾಮರ ಚಂದನವಶೋಕೆ (ಅದೇ ೧-೩೪) ಇತ್ಯಾದಿ.

ರಸವಿವೇಚನೆ : ರಸವೇ ಕಾವ್ಯದ ಅಂತರಂಗದ ಸೌಂದರ್ಯವನ್ನು ಸತ್ವವನ್ನು ನಿರ್ಧರಿಸುವ ಪ್ರಮುಖ ಅಂಶ, ರಸವೇ ಕಾವ್ಯದ ಆತ್ಮವೆಂದು ಅಲಂಕಾರಿಕರು ಹೇಳಿದ್ದಾರೆ. ಶಂಕರಕವಿಯೂ ಸಹ ತನ್ನ ''ಕಾವ್ಯ ಸಕ್ಕರೆಯ ಸವಿಗಬ್ಬವರ್ಭಕನ ಮಾತಿನೊಲು'' (೯-೩) ಎಂಬಲ್ಲಿ ಕಾವ್ಯವು ರಸಭರಿತವಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಶಿವಭಕ್ತ ಸತ್ಯೇಂದ್ರನ ವ್ಯಕ್ತಿತ್ವ ಸಾದೃಶ್ಯವನ್ನು ಪಡೆದ ಮಾಧವಾಂಕನೂ ಮಹಾಶಿವಭಕ್ತ, ಮುಗ್ಧ ಗುರುಭಕ್ತ. ಆತನ ಚರಿತ್ರೆಯನ್ನು, ಪಂಚಾಕ್ಷರಿ ಮಹಿಮೆಯನ್ನೂ ತಿಳಿಸ ಹೊರಟಿರುವ ಈ ಕೃತಿಯಲ್ಲಿ 'ಭಕ್ತಿರಸ'ವೇ ಪ್ರಧಾನಸ್ಥಾನದಲ್ಲಿದ್ದು ಶೃಂಗಾರ, ಕರುಣೆ, ರೌದ್ರಗಳು ಪೂರಕವಾಗಿವೆ.

ಭಕ್ತಿರಸ : ಕೋಳೂರ ಶಂಕರಕವಿ ಪ್ರಥಮತಃ ಭಕ್ತ ಪ್ರಕೃತಿಯ ಕವಿ. ಹಂಪೆಯ ಹರಿಹರನ ಮಾರ್ಗವನ್ನೇ ಆದರ್ಶವಾಗಿಟ್ಟುಕೊಂಡು ''ಶಿವನೊಲಿದು ನಿತ್ಯದಲಿ ನಡೆಸಿದ ಪದಾರ್ತ್ಥಮುಮನುಂಡು ನಿಜಶಕ್ತಿಯಿಂದೀ

ಪ್ರಬಂಧಮನುಸುರಿದ ಕವಿ'' (೨೪-೯೯) ತನ್ನ ಸತ್ಕವಿತಾಮಾಲೆಯನ್ನು ಹರಶರಣರಾದ ವಿದ್ವದ್ಬುಧರು ಕೇಳಿ ಆನಂದಿಸಬೇಕೆಂಬುದು ಕವಿಯ ಅಪೇಕ್ಷೆ.'' (೧೭-೩) ಮಾಧವಾಂಕ ಕಾವ್ಯದಲ್ಲಿ 'ಭಕ್ತಿರಸ'ವೇ ಪ್ರಧಾನವಾಗಿರುವುದನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ.

ಶ್ರೀಗುರು ಮುಖದಿಂದ ಪಂಚವಿಂಶತಿಲೀಲೆಗಳನ್ನು ಕೇಳಿ ಲಲಿತ ಭಕ್ತಿ, ಜ್ಞಾನ, ವೈರಾಗ್ಯಮಯರೆನಿಸಿ ಮುಕ್ತರಾಗುವರೆಂದು ತಿಳಿದು ಮಾಧಾವಂಕನು ನಲಿದು ಕರಣಂಕರಗಿ ಹರ್ಷವರ್ಷಂಕರೆದು ಪುಳುಕಾಂಕುರಂ ಮೈಯೊಳಾವರಿಸಿ ಆನಂದ'' (೧೪-೩೬) ತುಂದಿಲನಾಗಿ ಗುರುವರನನ್ನು ಪರಿಪರಿಯ ಸ್ತೋತ್ರಗಳಿಂದ

ಗುರುವೆ ಮದ್ಗುರುವೆ ಚಿದ್ಗುರುವೆ ಘನ
ಗುರುವೆ ಮುಂನರಿಯದರೆ ಜೀವಿನಾಂಶಿವಲೀಲೆಯಮ್ರುತರಸ
ವೆರೆಯೆ ಮತ್ಕರ್ಣಗುಹೆಯಂಪೊಕ್ಕು ಸರ್ವಾಂಗಕಾವರಿಸಿ ಜೀವಿಸಿದೆನೊ'' (೧೪-೩೭)

ಲಿಂಗಪೂಜಾ ವಿಧಾನವನ್ನರಿತು ಶರಣಸಂದೋಹಕ್ಕೆ ಬೀಳ್ಕೊಡುಗೆಯನಿತ್ತು
ತಂನಗುರು ಶಂಭುದೇಶಿಕನ ಪಾದಾಬ್ಜಮಂ
ನಂನಿಯಿಂ ಮಸ್ತಕದಿಪೊತ್ತುಯಿಳುಹದಲಪ್ಪಿ
ಸಂನುತಿಸಿ ಹಿಗ್ಗಿಹರವರಿಯ ಸಾಖ್ಯಮ್ರುತದಮುಂನಿರೊಳಾಳ್ದುಮುದದಿ
ಯಂನಗುರುಯಂನ ಭವತಿಮಿರಾತುಳಾರ್ಯಮನೆ
ಯಂನಕುಲಕೋಟಿಯಪಶುಪ್ರಾಣಿಗಳಿಗೊಲಿದು
ನಿಂನದಯದಿಂ ಪರಮಶಿವಭಕ್ತರಂ ಮಾಡಿ ಲಿಂಗದೇಹಿಗಳೆನಿಸಿದೆ (೧೮-೭೫)

ಎಂದು ಪಾದಾಬ್ಜಕ್ಕೆರಗುತ್ತಾನೆ.

ಮೃಡಭಕ್ತಮಾಧವಾಂಕನು ಆಳುತ್ತಿದ್ದ ರಾಜ್ಯದುದ್ದಕ್ಕೂ
ಯೆಲ್ಲಿನೋಡಿದಡೆವೀರಮಾಹೇಶ್ವರರ ಮಠಗ
ಳೆಲ್ಲಿ ನೋಡಿದಡೆ ಶಿವಲಿಂಗಮುದ್ರಾಕ್ಷೇತ್ರ
ವೆಲ್ಲಿ ನೋಡಿದಡೆ ಲಿಂಗಾಂಕಿತದ ಕೆರೆಬಾವಿನಳಿನ ತೀವಿದಕೊಳಗಳೂ
ವೆಲ್ಲಿ ನೋಡಿದಡೆ ಭೂರುದ್ರಚಯ ಸಂದಣಿಗಳಲ್ಲದಿಲ್ಲಾನಾಡೊಳೂ (೧೯-೪)

ಈ ಕಾವ್ಯದಲ್ಲಿನ ಪ್ರತಿಯೊಂದು ಸನ್ನಿವೇಶವೂ ಭಕ್ತಿರಸದ ಸ್ಪರ್ಶದಿಂದ ಕಂಗೊಳಿಸುತ್ತದೆ. ಅದಕ್ಕೆ ಶೃಂಗಾರರಸ, ಕರುಣ, ರೌದ್ರರಸದ ಸನ್ನಿವೇಶಗಳೂ ಹೊರತಾಗಿಲ್ಲ. ಕೊನೆಯ ದೃಶ್ಯವಂತೂ ಭಕ್ತಿರಸದಮಡು. ಪಿತನಾಜ್ಞೆಗೆ ತಲೆಬಾಗಿ ಸತ್ಯನಿಷ್ಠೆಯಿಂದ ಬಸವಕುಮಾರನು ಬಡವಿಕುಮಾರನಿಗೆ ತನ್ನ ತಲೆಯನರ್ಪಿಸಲು ಅದು ''ಶಿವಮಹಾದೇವಶಂಕರಪಾರ್ವತಿಧವ'' (೨೪-೫೦) ಎಂದು ಮುಂತಾಗಿ ಶಿವನಾಮಸ್ತುತಿಸ

ತೊಡಗುತ್ತದೆ. ತದನಂತರದಲ್ಲಿ ತಲೆಗೊಟ್ಟವರ ಶಿರಗಳೂ, ಪಂಚಾಕ್ಷರಿ ಮಂತ್ರವನ್ನುಚ್ಚರಿಸತೊಡಗುತ್ತವೆ. ಕೊನೆಗೆ, ಮಾಧವಾಂಕನೇ ಶಿರವರ್ಪಿಸಲು ಸನ್ನದ್ಧನಾದಾಗ ಶಿವನು ಪ್ರತ್ಯಕ್ಷನಾಗಿ ಎಲ್ಲರಿಗೂ ರುದ್ರಗಣ ಪದವಿಯನ್ನು ನೀಡುತ್ತಾನೆ.

ಶೃಂಗಾರರಸ :

"ತರುಳ್ದಿಂದು ಸೊಕ್ಕಿ ಸ್ವರಗೈವ ಕೋಕಿಲಗಳಿಂ
ವರಕುಸುಮವಂ ಸವಿದುಕೊಬ್ಬಿದಾರಡಿಗಳಿಂ
ಪರಿಪಕ್ವಫಲಮಂಕದ್ರುಂಕಿರಸಪಾನದಿಂದುಬ್ಬಿ ನುಡಿವರೆಗಿಳಿಗಳಿಂ
ವರವಸಂತಾವನಿಪನಾಸ್ಥಾನ ಮಧ್ಯದೊಳ್
ಮೆರೆವಮಾಕಂಧ ವೃಕ್ಷದವೊಲು ಮತ್ಕಾವ್ಯ
ನೆರೆತಳಿತಲಂಕಾರ ಸದ್ವಾಸನೆಯ ಕಥೆಯ ಭಾವರಸದಿಂದೆಸೆದುದೂ" (೧೫-೩)

ಎಂದು ಹೇಳುವಲ್ಲಿನ ಶೃಂಗಾರಪೂರ್ಣ ಚಿತ್ರಣವೂ ಈ ಕಾವ್ಯದಲ್ಲಿ ಎಡೆಪಡೆದ ಶೃಂಗಾರರಸದ ದ್ಯೋತಕವಾಗಿ ನಿಲ್ಲುತ್ತದೆ. ಮಾಧವಿಯ ಸೌಂದರ್ಯ ವರ್ಣನೆಯಲ್ಲಿ ವೇಶ್ಯಾವಾಟಿಕೆಯ ಚಿತ್ರಣದಲ್ಲಿ, ವನಕೇಳಿಯ ಪ್ರಸಂಗ ದಲ್ಲಿನ ಜಲಕ್ರೀಡೆ, ಓಕುಳಿಯಾಟಗಳಲ್ಲಿ ಶೃಂಗಾರರಸದ ನಿರೂಪಣೆ ಕವಿಯ ರಸಿಕತೆಗೆ ಉದಾಹರಣೆ ಯಾಗಿ ನಿಲ್ಲುತ್ತದೆ.

ಕವಿಯು ಮಾಧವಿಯ ಶೃಂಗಾರಕ್ಕೆಂದೇ ಒಂದು ಸಂಧಿಯನ್ನು ಮೀಸಲಿರಿಸಿದ್ದಾನೆ. ಒಂದಕ್ಕಿಂತ ಒಂದು ಮನಂಬುಗುವ ವರ್ಣನೆಗಳು ಇಲ್ಲಿವೆ.

ಉದಾಹರಣೆಗೆ:

ಮಾಧವಿಯ ಸೌಂದರ್ಯದ ವರ್ಣನೆ;

"ವಸುಧೆಯೊಳು ಪೆಣ್ಗಳ ಶಿಖಾಮಣಿಯೆ ನಿಂನುರ
ಮಿಸುಪ ನಾಭಿಯತಲದೊಳಾರಭಯಮಿಲ್ಲೆಂದು
ಕುಸುಮಾಸ್ತ್ರತಂನ್ನ ಸಿಂಜಿನಿಯನಿಲಿಸಿಹತೆರದಿಯಳೆವಾಸಿ ರಾಜಿಸಿದುದೂ
ರಸಗೋಲ ಕಾರ್ಮುಕದಳವರತಿಯೇರಿ ನಿಟ್ಟಿಸುವ ಮೋಹನಮಣಿ ವಿಭಾಸಿತದಿಪಜ್ಜಳಿಸು
ತೆಸೆವಕೊತ್ತಳ ಯುಗಮಿವೆಂಬಂತೆ ವುಭಯಭುಜಮೊಪ್ಪಿರ್ದವಾಕಾಂತೆಯಾ" (೭-೨೧)
.......ಮದನನಿಜಮುಖವ ನೀಕ್ಷಿಸುವದರ್ಪಣಮಿದೆನೆ
ಕದಪುಗಳ್ ಕಂಗೊಳಿಸಿ ಸ್ಮರನು ತುಂಬಿದ ಸುಧೆಯಬಿಂದಿಗೆಯ ಬಾಯ್ಮೆರೆದದೂ" (೭-೨೪)
......ಮಾರತಂನನರ್ಚಿಪಮಂತ್ರದೇವತೆಯೊಲಾನ್ರುಪನಕುವರಿ ಸೌಂದರಿ ಮೆರೆದಳು"(೭-೪೩)
ಜಲಕ್ರೀಡೆಯಾಡುತ್ತಿದ್ದ

ಮಾನಿನಿಯರತಿಚಳಕದಿಂದ ಚೆಲ್ಲಿದರೊಲಿದು
ಮೀನಕೇತನುಯಿಕ್ಷುಚಾಪ ಪೂಶರಗಳಿಂ
ತಾನೆಳದುಕರ್ಣಪೂರಂ ತೆಗದು ಅನುಮಾನಮಿಲ್ಲದೆಗೊಲ್ಗರೆದೊಲೂ
ಭೂನಾಥನೆರ್ದೆಯಂಬಗದು ಬೆಂನೆಳ್ಪೊಂಪ್ಮೊಲೆನೆಂಬೆನವನಸುಗೆ ಕರೆದರುಂ ಕಾಂತೆಯರು
ಮಾನಭಂಗಿತನಾಗಿ ಮೊಗದೋರಲಳ್ಕಿದಂದದಿ ಜಲವ ಮುಳಿಗೇಳುತಾ" (೨೧-೪೨)

ವೇಶ್ಯಾವಾಟದ ಮನೆಮನೆಗಳಲ್ಲಿ
''ಮಾರನಂ ಜರಿಯೆ ಮತ್ತರಾಗೆಕುಡಿನೋಟ
ದಾರಿಗಡ್ಡಂಗಟ್ಟೆ ಸಾಂಧರಿಯ ಸುಂಡಲದಿ
ಮೀರದಂದದಿಪಿಡಿದು ವಿರಹ ಭಯಮಂತುಂಬಿ ಅಂಗಮಾರಣ್ಯಕೊಯಿದೂ
ಸೇರಿಸುವೆ ಸ್ತನವೆಂಬ ಮೇರುವಾಗ್ರದಿ ಸುರತ
ಸಾರಶರಧಿಯೊಳದ್ದಿಮೈಮರಸದಿರೆವೆಂದು
ಧೀರಸ್ಮರನ್ರುಪನಮದವಾರಣವುಮಲವಂತೆ ತೂಗುಮಂಚದೊಲೆದರೂ"

(೨೨-೬೩)

ಹೀಗೆ ಭಕ್ತಿರಸ ಪ್ರಧಾನ ಕಾವ್ಯವಾದರೂ ಮಾನವ ಸಹಜ ಲೌಕಿಕ ಭಾವಗಳನ್ನೂ ಕವಿ ತನ್ಮಯತೆಯಿಂದ ಚಿತ್ರಿಸುವಲ್ಲಿ ಷಡಕ್ಷರದೇವನ ಪ್ರಭಾವವನ್ನು ಕಾಣಬಹುದು. ಆದರೆ ಶೃಂಗಾರದ ವರ್ಣನೆಯಲ್ಲೂ ಶಂಕರ ಕವಿಯು ಷಡಕ್ಷರಿಯ ಮಟ್ಟಕ್ಕೇರಿ ವರ್ಣಿಸಲಾರನೆಂಬುದು ಎಷ್ಟು ಸತ್ಯವೋ, ಶೃಂಗಾರದ ವರ್ಣನೆಯಲ್ಲಿ ಷಡಕ್ಷರಿಯ 'ಅತಿತನ'ಕ್ಕಿಂತ ಹಿತಮಿತವಾದ ಶಂಕರಕವಿಯ ಔಚಿತ್ಯ ಮೀರದ ಚಿತ್ರಣವೇ ಆಪ್ತವಾಗುತ್ತದೆಂಬುದೂ ಅಷ್ಟೇಸತ್ಯ.

ಕರುಣರಸ : 'ರಾಜಶೇಖರ ವಿಳಾಸ'ಕ್ಕೆ ಹೋಲಿಸಿ ಹೇಳುವುದಾದರೆ ಕರುಣರಸದ ಅಭಿವ್ಯಕ್ತಿಯು ಮಾಧವಾಂಕ ಕಾವ್ಯದಲ್ಲಿ ಪರವಾಗಿಲ್ಲ ಎನ್ನುವಂತಿದೆಯೇ ಹೊರತು ಅತ್ಯುತ್ತಮ ಎನ್ನುವ ಹಾಗಿಲ್ಲ. ಷಡಕ್ಷರ ದೇವನ 'ರಾಜಶೇಖರ ವಿಳಾಸ'ದ 'ತಿರುಕೊಳವಿನಾಚಿಯ ಪ್ರಲಾಪ'ವು ಕರುಣರಸದ ಮಡು, ಕನ್ನಡ ಸಾಹಿತ್ಯದಲ್ಲೇ ಪ್ರಸಿದ್ಧವಾದ ಪ್ರಸಂಗ. ಅದರ ಔನ್ನತ್ಯ, ಕಲ್ಪಕತೆ, ಸಹಜ ಅಭಿವ್ಯಕ್ತಿಗಳನ್ನು ಇಲ್ಲಿ ನಿರೀಕ್ಷಿಸ ಲಾಗದು. ಆದರೂ ಶಂಕರಕವಿಯು ಕರುಣ ರಸದ ಅಭಿವ್ಯಕ್ತಿಯನ್ನು ಹೃದಯ ತಟ್ಟುವಂತೆ ಮಾಡಬಲ್ಲ ನೆಂಬುದಕ್ಕೆ 'ದುಂಢಿ'ಯ ಪ್ರಲಾಪದ ಪ್ರಸಂಗವನ್ನು ನಿಸ್ಸಂಶಯವಾಗಿ ಉದಾಹರಿಸಬಹುದು.

ಮಗನ ಸಾವಿನ ಸುದ್ದಿಯನ್ನು ಕೇಳಿ,

'ಸಿಡಿಲ ಶೈಲಕ್ಕೆರಗಿ ಪೊಡವಿಗಿಳಿದಂದದಲಿ
ಸುಡುವ ಸರಲ್ಕರ್ಣದಲಿವಡದಿರುಹಿದಿಂತೆ ತಂನೊಡಲೊಳಂ ವುರಿಯೆದ್ದು
ವಡೆಹಾಯ್ಕಿ ಕರಗಮಂವಡಲ ಬಡಿದಳು ಪರಿದೂ" (೨೩-೪)

.... ಪೃಥ್ವಿಯೊಳು ಪೊಡೆಗೆಡದು ನೆತ್ತಿ ನೆಲಕ್ಕಪ್ಪಳಿಸಿ ತತ್ತನುವಹುಡಿಗೆ ಹೊರಳ್ಚಿ

ಅತ್ತು ಅಬ್ಬರಿಸಿ ಅರಚುತ್ತ ಭೋರ್ಗರೆದು ಹಾಯಿವುತ್ತಯೆದೆಬಸುರ

...... ಸುತ್ತಿಸೊರಗುತ್ತ ಬೀಳುತ್ತ ಹೊರಳುತ್ತ ಅಳುತ್ತಿದ್ದಳು'' (೨೩-೫)

ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗನ ಶವವನ್ನು ಹಿಡಿದು .. ಘನಮರುಕದುಃಖದಿಂ

ಮಣಿದು ಮೇಲೊರಗಿಯದೆಗಪ್ಪಿಗಲ್ಲಕೆ ಬಾಯನಿಟ್ಟುಚುಂಬಿಸುತ್ತ ಬಿಡದೆ'' (೨೩-೮)

ತನ್ನ ತೊಡೆಯೆಡೆಯಲ್ಲಿ ಮಲಗಿಸಿಕೊಂಡು ಬಸಿದಲೆಯ ಜೊಲ್ಲುವರಸಿ ಮೈಧೂಳವಂಕೊಡಹಿ ಶೋಕದಿಂದ ಶೆರೆಬಿಗಿದು ಬಣ್ಣಿಸುತ್ತ ಕರಕರದು ಅತ್ತಳು'' (೨೩-೯) ಎಂಬಲ್ಲಿ ಎಂಥ ಕಟುಕನ ಕಣ್ಣಲ್ಲೂ ದಳದಳನೆ ನೀರು ಬರದೇ ಇರವು.

''ಪುರುಷನಳಿದಡೆ ಮನೆಯ ಸಿರಿದೇವಿ ಮುನಿದಡಂ

ವರನೆಲೆಯು ಬೆಂದಡಂ... ತರುಣ ನಿಂನಂ ನೋಡಿ ಮರೆದಿರ್ದೆ ನಕಟ ಹಾಹಾ'' (೨೩-೧೦) ಎಂದು ರೋಧಿಸುವಲ್ಲಿ ರಾಘವಾಂಕನ 'ಚಂದ್ರಮತಿಯ ಪ್ರಲಾಪ'ವನ್ನು ನೆನಪಿಸುತ್ತದೆ. ಮಾಧಾವಂಕನು ತನ್ನ ಸುತ ಬಸವಕುಮಾರನ ತಲೆಯನ್ನು 'ದುಂಢಿ'ಯಮಗನ ತಲೆಗೆ ಪ್ರತಿಯಾಗಿ ಬಲಿಕೊಡಲು ನಿರ್ಧರಿಸಲು ದುಷ್ಟದೂತರು ಅವನನ್ನು ಕರೆತರುತ್ತಿರುವಾಗ ಆಪುರದ ಜನರು ಮರುಗಿ ಪ್ರಲಾಪಿಸುವ ಪ್ರಸಂಗವೂ ಕರುಣರಸವನ್ನುಕ್ಕಿಸುತ್ತದೆ. ರಾಜ ಮಂತ್ರಿಗಳ ಮಾತಂತಿರಲಿ.... ಲಲನೆ ತಾನಡ್ಡಬಿದ್ದಾದೊಡಂ ಮಗನಸುವ ನುಳುಹಿ ಕೊಳಬಾರದಾಯ್ತೆ'' (೨೪-೩೮) ಎಂಬ ಶೋಕದನುಡಿ ಹೃದಯವನ್ನು ಆರ್ದ್ರಗೊಳಿಸುತ್ತದೆ.

ರೌದ್ರರಸ : ತನ್ನಕುವರನು ಸರಿಯಾಗಿ ವಿದ್ಯೆಕಲಿಯದ ಕಾರಣಕ್ಕೆ ಪಂಡಿತನ ಮೇಲೆ ಕೋಪಗೊಂಡ ಹರಿಹರರಾಯನ ವರ್ತನೆಯ ಚಿತ್ರಣದಲ್ಲಿ ರೌದ್ರರಸದ ಸೆಲೆಯನ್ನು ಗುರುತಿಸಬಹುದು.

ಕೋಪಾಗ್ನಿ ಹೊನಲೇರಿ ಹೊರಸೂಸಿತೆಂಬಂತೆ

ಆಪಯೋಧರ ಯುಗಂಗಳನುಮಿಗೆ ಧವಳಿಸುತೆ

ಭೂಪ ಕುಡಿಮೀಸೆಯಂ ಶಳೆವುತ್ತ ಪಲ್ನೊರದು ವಿಪ್ರನಂ ಜಡಿದು ಜರೆಯೆ'' (೩-೧೯)

ದೊರೆ ಮಾಧವಾಂಕನಿಗೆ ತನ್ನ ಕುವರನ ತಪ್ಪಿನಿಂದಾಗಿ ಬಡವಿದುಂಡಿಯ ಮಗನ ಸಾವಾಯಿತೆಂಬ ವಿಷಯ ತಿಳಿದು ಕ್ರೋಧ ಉಕ್ಕಿ ಹರಿಯುತ್ತದೆ. ಕೊಂದವನಿಗೆ ಕೊಲೆ ತಪ್ಪದೆಂಬ ನಿರ್ಣಯಕ್ಕೆ ಬಂದ ಅರಸನನ್ನು ಮಂತ್ರಿಯು ಪ್ರಶ್ನಿಸಲು ಮತ್ತಷ್ಟು ಭುಗಿಲೇಳುತ್ತದೆ. ಆಗ ಕವಿಯು ಕೊಡುವ ಚಿತ್ರದಲ್ಲಿ ರೌದ್ರರಸದ ಸೆಳಕನ್ನು ಕಾಣಬಹುದು.

''ಪೊಡವಿಪಗೆ ಕೋಪಾಗ್ನಿ ವಡಲೊಳಂ ಹೊನಲೇರಿ

ವಡನೆ ನಾಸಿಕದಿ ಪೊಗೆ ಸೂಸಿಬೆಳ್ಗಂಗಳಾಳ

ಗೊಡನೆ ಕೆಂಗಿಡಿಯೆದ್ದು ವುರಿಯ ಮುಕ್ಕುಳಿಸುತ್ತ
ಘುಡು ಘುಡಿಸಿ ಹಾಯಿದೇಳುತಾ" (೨೪-೩)

ಕಡುದುರುಳನಾದ ದೂತನನ್ನು ಕರೆದು ಆ ದುಷ್ಟನನ್ನು ಹಿಡಿದೆಳೆದು ತಾ ಎಂದು ಅರಸನು ಆರ್ಭಟಿಸುತ್ತಾನೆ.

ವೀರರಸ : "ವೀರಕ್ಕೆ ಸ್ಥಾಯಿಯಾದ ಉತ್ಸಾಹವು ಯಾವಾಗಲೂ ಯುದ್ಧಾಭಿಮುಖವೇ ಆಗಬೇಕೆಂಬ ನಿರ್ಬಂಧವಿಲ್ಲ. ಅದು ತ್ಯಾಗ, ಸನ್ಮಾರ್ಗ ಪ್ರವೃತ್ತಿ, ಪರೋಪಕಾರ ಈ ಮೊದಲಾದ ರೀತಿಗಳಲ್ಲೂ ಪ್ರವರ್ತಿಸಬಹುದು. ಆದ್ದರಿಂದ ಭರತನು ದಾನವೀರ, ಧರ್ಮವೀರ, ಯುದ್ಧವೀರ ಎಂದು ವೀರರಸವನ್ನು ಮೂರು ಪ್ರಕಾರವಾಗಿ ವಿಂಗಡಿಸುತ್ತಾನೆ. ಕೆಲವರು ದಯಾವೀರವನ್ನೂ ಇವುಗಳೊಡನೆ ಸೇರಿಸುವುದುಂಟು"[೧೩]

ಮಾಧವಾಂಕ ಕಾವ್ಯದಲ್ಲಿ ಯುದ್ಧವೀರ, ಧರ್ಮವೀರಗಳೆರೆಡರ ನಿದರ್ಶನಗಳೂ ಕಾಣಸಿಗುತ್ತವೆ. ಪಂಡಿತನು, 'ಪ್ರಭಾಕರಸೆಟ್ಟಿ'ಯ ಕಥೆಯನ್ನು ಹೇಳುವಾಗ ಉಪಕಥೆಯಾಗಿ ಬರುವ 'ಮಿತ್ರಸೇನ ಕಥೆ'ಯಲ್ಲಿ ಮಿತ್ರಸೇನನಿಗೂ ರಕ್ಕಸನೊಬ್ಬನಿಗೂ ನಡೆದ ಯುದ್ಧ ಪ್ರಸಂಗ ವೀರರಸಕ್ಕೆ ಉದಾಹರಣೆಯಾಗಿದೆ.

ಬ್ರಹ್ಮಾಂಡದ ಬೆಸುಗೆ ಬಿಟ್ಟಂತೆ ರಕ್ಕಸನು ಬಾಣಪ್ರಯೋಗಿಸಲು ಅದಕ್ಕೆ ಪ್ರತಿಯಾಗಿ ಮಿತ್ರಸೇನನು ಒಂದು ಪರುಷಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸುತ್ತಾನೆ.

"ಮಿಟಿದು ವಂದೊಂದು ಶಾಖೆಗೆ ಕೋಟಿಮುತ್ತುತ್ತೆ
ವಟವೃಕ್ಷಮತ್ತಣಿಂದತ್ತವುತ್ತರಿಸುತ್ತ
ಪುಟನೆಗೆದು ಪೊಂಮೂಡಿಗೆಯ ಪೋಗಲುದಾನವಂ ಕಾಣುತಾಟೋಪಗೊಂಡೂ
ಪಟು ಪೃಥುಲ ಭುಜಬಲಾನ್ವಿತ ಗದೆಯ ತಿರುಹಿಡಲ್
ಛಿಟಿ ಛಟಿ ಪಟದ್ಧ್ವಾನದಿಂದ ಪ್ರಳಯದಿಸಮುತ್ಕಟ ಘೋಷದಿಂದ
ಸಿಡಿಲೆರಗಿದಂದದಿ ಮಹಾದ್ಭುತಮಾಗಿ ಗರ್ಜಿಸಲ್ಕೆ" (೯-೩೧)

ಆಕಾಶಪಥದೊಳಗೆ ನೆರೆದಿದ್ದ ವಾಸವಾದಿ ಅಖಿಳ ಅಮರರೂ ತಲ್ಲಣಿಸಿಬಿಟ್ಟರಂತೆ. ಮತ್ತೆ ಮಿತ್ರಸೇನನು "ಕೇಸರಿಯ ಧ್ವನಿಗೈದು ಬೆಟ್ಟಕ್ಕೆ ಕರೆವ ಪೇರ್ಮಳೆಯಂತೆ" (೯-೩೨) ಹೊಸ ಬಾಣಗಳನ್ನು ಪ್ರಯೋಗಿಸಲು "ಅಸ್ತಗಿರಿ ಮಸ್ತಕಕ್ಕೆ ಸಂಜೆಗೆಂಪಡರ್ಗಂತೆ" ಅಸುರನ ಸರ್ವಾಂಗವೆಲ್ಲರಕ್ತ ತೊಟ್ಟಿಕ್ಕುತ್ತ "ರಕ್ತದ ತೊರೆಯೇ ಹರಿಯಿತಂತೆ" (೯-೩೩) ಕೊನೆಗೆ ಮಿತ್ರಸೇನನ ಕೈ ಮೇಲಾಗಿ ಅಸುರ ಹತನಾಗುತ್ತಾನೆ. ಈ ಕಾವ್ಯದ ಘನೋದ್ದೇಶವನ್ನು ಸಾರುವ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ಅಭಿವ್ಯಕ್ತಿಸುವ ಕೊನೆಯ ಸನ್ನಿವೇಶ 'ಧರ್ಮವೀರ'ಕ್ಕೆ ಸಾಕ್ಷಿಯಾಗಿನಿಲ್ಲುತ್ತದೆ.

ಪಾತ್ರಪೋಷಣೆ : ಸಂಖ್ಯಾದೃಷ್ಟಿಯಿಂದ ಭಾವಚಿಂತಾರತ್ನ ಮತ್ತು 'ರಾಜಶೇಖರ ವಿಳಾಸ'ಗಳಿಗಿಂತ ಹೆಚ್ಚು ಪಾತ್ರಗಳು ಮಾಧವಾಂಕ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತವೆ. ಬಹುಪಾಲು ಪಾತ್ರಗಳು ಶಿವಸಾಕ್ಷಾತ್ಕಾರದೊಂದಿಗೆ ಮುಕ್ತಾಯಗೊಳ್ಳುವ ಆದರ್ಶನಿಷ್ಠ ಪಾತ್ರಗಳು. "ಒಂದು ನಿರ್ದಿಷ್ಟವಾದ ಉದ್ದೇಶದ ಚೌಕಟ್ಟಿನಲ್ಲಿಯೇ

ಅವು ಚಲಿಸುತ್ತಿರುವಂಥವು."[೧೪] ಇಲ್ಲಿ 'ಮಾಧವಾಕ' ಕಥನಾಯಕ, ಶಿವಭಕ್ತನೂ, ಪ್ರಜಾವತ್ಸಲನೂ, ಸಮದರ್ಶಿಯೂ ಆದ ಆದರ್ಶ ಅರಸ. ದಯಾಭರಿತ ಜನ ಪರದೃಷ್ಟಿಯುಳ್ಳ ಆತ ಭಕ್ತವಧೆಗಿಂತ ಹಾನಿಯಿಲ್ಲ ವೆಂದು ಭಾವಿಸಿ ತನ್ನ ಏಕೈಕ ಪುತ್ರನನ್ನು ನ್ಯಾಯ ಧರ್ಮ ಪಾಲನೆಗಾಗಿ ಕೊಲ್ಲಿಸಿದ ನ್ಯಾಯನಿಷ್ಠುರ. ಆತನಿಗೆ ತಕ್ಕ ಸತಿ 'ಮಾದಾಂಬಿಕೆ'

"......... ಸಕಲ ಸದ್ಗುಣಯುಕ್ತ
ಚಿತ್ತನಿರ್ಮಲಗಾತ್ರೆ ತಂನವಲ್ಲಭನೊಡನೆ
ಜತ್ತಾಗಿ ವುಸುರೊಡಲಿನಂತೆ".......... (೨೦-೪)

ಶೋಭಿಸುತ್ತಿದ್ದಳು.

"ಯಲೆಕುವರ ಭೂಪನವಿಮಳಸತ್ಯಕ್ಕೆ
ಕೊರತೆ ಬಾರದೆ ಪಿತನ ಆಜ್ಞೆ ಮೀರದನೆಂದು
ಪೊರದೆ ನಿಂದೆಯವ ಶಿಶುವಧೆಗೆ ವಳಗಾಗದೆ ಧರ್ಮದಪ್ಪಿದನೆನಿಸದೆ" (೨೪-೨೩)

"................ ಏಕ ಭಾವದಿಂ ಪೋಗಿ
ಪಡಿಗೊಡಲು ಯಿಳೆ ಪೊಗಳುವದು ಮೃಡಮೆಚ್ಚಿ ವೀರಗಣ..." (೨೪-೨೪)

ಪದವಿಯನ್ನು ನೀಡುವನು ಎಂದು ಮಗನನ್ನು ಬೀಳ್ಕೊಡುವ ಕೃತಕೃತ್ಯೆ. ಮಗನಾದರೋ........ "ನೀವು ಸತ್ಯರು ನಾನು ಪುಸಿಕನೆ ನಿಂಮಯ ಪ್ರತಿಗ್ನೆಮುಮನೂ

ಸತತ ಮೀರಿದಡೆ ಸಂನ್ಮುಕ್ತಿವಧುವಲಿಸುವಳೆ.......
ಅಪಕೀರ್ತಿ ಭಾಜನನಾಗಿ ಬಾಳುವೆನೆ...." (೨೪-೧೦)
.... ನಿಂಮ ನಿರ್ಮಲಗರ್ಭ
ದಾಯಕಗೆಕವಲುಗುಣಗಣವುಂಟೆ..." (೨೪-೨೫)

ಎಂದು ದೃಢಚಿತ್ತನಾಗಿ ತನ್ನ ತಲೆಗೊಡಲು ಸಿದ್ಧನಾದ ಶಿವಮಂತ್ರ ಸಿದ್ಧನೂ, ಚೆಲುವನೂ, ಪರಾಕ್ರಮಿಯೂ ಆದ ಶಿವಭಕ್ತ. ತನ್ನ ತಪ್ಪನ್ನು ಒಪ್ಪಿಕೊಂಡು ಮರಣದಂಡನೆಗೆ ಸ್ವಇಚ್ಛೆಯಿಂದ ನಗುನಗುತ್ತ ಬಂದು ನಿಂತ ಧೀಮಂತ. ಕರ್ತವ್ಯ ನಿಷ್ಠೆಯುಳ್ಳ ಶಿವಭಕ್ತ ದೂತ ಅರಸನ ಅನುಮಾನಕ್ಕೆ ತನ್ನ ತಲೆಯನ್ನೇ ಕತ್ತರಿಸಿಟ್ಟ ಭೂಪ. ಪತಿ, ಪುತ್ರರನ್ನು ಕಳೆದುಕೊಂಡು ಇದ್ದೊಬ್ಬ ಮಗನಿಗಾಗಿ ಎಲ್ಲ ಕಷ್ಟಗಳನ್ನು ಸೈರಿಸಿಕೊಂಡು ಬದುಕುತ್ತಿದ್ದ, ಬಾಳನ್ನು ಬಂದಂತೆ ಸ್ವೀಕರಿಸಿದ್ದ ಶಿವಭಕ್ತೆ ದುಂಢಿ, ತನ್ನಿಂದಾದ ತಪ್ಪಿಗೆ ತಲೆಗೊಟ್ಟ ನೃಪಸುತ ಬಸವಕುಮಾರ, ದೂತರಿಗೆ ಪ್ರತಿಯಾಗಿ ತನ್ನ ತಲೆಗೊಟ್ಟ ನಿಷ್ಠಾವಂತ ಸ್ನೇಹಿತ ಮಂತ್ರಿಯ ಪುತ್ರ "ಹೀಗೆ ಆಯಾಪಾತ್ರಗಳು ತಮ್ಮ ದೃಢನಿಷ್ಠೆಯ ಅದ್ಭುತ ಜೀವನವನ್ನು ವ್ಯಕ್ತಪಡಿಸಿವೆ."[೧೫] ಮತ್ತು ಷಡಕ್ಷರದೇವರಿಗಿಂತ

ಭಿನ್ನವಾಗಿ ಕೆಲವು ಪಾತ್ರಗಳನ್ನು ಶಂಕರ ಕವಿಯು ಕಟೆದಿರಿಸಿದ್ದಾನೆ. ಉದಾಹರಣೆಗೆ ಇಲ್ಲಿ 'ಮಾಧವಾಂಕ'ನ ಮಂತ್ರಿಯು ರಾಜನನ್ನು ಸಂದರ್ಭೋಚಿತವಾಗಿ ಎಚ್ಚರಿಸುವ ಆತನ ನಿರ್ಧಾರಗಳನ್ನು ಪ್ರಶ್ನಿಸುವ ವೈಚಾರಿಕ ಮನೋಭಾವದ ಪ್ರತಿನಿಧಿಯಾಗಿಯೂ, ಈ ಲೋಕದ ವಾಸ್ತವಿಕತೆಗೆ ಸಂಕೇತವಾಗಿಯೂ ನಿಲ್ಲುತ್ತಾನೆ. ಮಾಧವಾಂಕನಿಗೆ ಅರಸನಾಸ್ಥಾನದಲ್ಲಿ ವಿದ್ಯೆ ಕಲಿಸುತ್ತಿದ್ದ 'ಗುರು' ಅಪ್ಪಟ ಮಾನವೀಯ ಸ್ವಭಾವಗಳ ಪ್ರತಿನಿಧಿ, ವಿದ್ಯೆ, ಕಪಟ, ಸ್ವಾರ್ಥ ಸಂದರ್ಭಕ್ಕೆ ತಕ್ಕಂತೆ ಬಣ್ಣಬದಲಾಯಿಸುವ ಗೋಸುಂಬೆತನಗಳನ್ನೆಲ್ಲ ಮೈಗೂಡಿಸಿಕೊಂಡ ಲೌಕಿಕ ನೆಲೆಯಪಾತ್ರ. ಮಾಧವಾಂಕನ ಮಾವನಾಗಿದ್ದ ಹರಿಹರದೊರೆಯು 'ಆದರ್ಶರಾಜ'ನಾಗಿದ್ದು, ಅನರ್ಹಮಗನಿಗಿಂತ ಅರ್ಹ ಅಳಿಯನೇ ಸೂಕ್ತನೆಂದು ಭಾವಿಸಿ ಅಕಳಂಕ ಮಾಧವನಿಗೆ ಪಟ್ಟಗಟ್ಟಿದ ಕ್ರಾಂತಿಕಾರಿ, ಆತನಿಗೆ ತಕ್ಕ ರಾಣಿ ಲಲಿತಾಂಗಿ. ಮಾಧವಾಂಕನ ತಾಯಿ, ಸೋಮಲೆ, ಬದುಕಿನ ಕಹಿಸತ್ಯಗಳನ್ನು 'ಮಗ'ನಿಗಾಗಿ ಸಹಿಸಿಕೊಂಡು ಬದುಕುತ್ತಿದ್ದ ಬ್ರಾಹ್ಮಣ ವಿಧವೆ. ಎಂಥ ತಪ್ಪಿಗೂ ಪ್ರಾಯಶ್ಚಿತ್ತದಿಂದ ಸತ್ಫಲ ಉಂಟೆಂಬುದನ್ನು ಸಾರುವ ವಂಚುಳೆ. ಪೂರ್ವಸಂಚಿತ ಕರ್ಮವನ್ನನುಭವಿಸಿ ಶಿವಸಾಯುಜ್ಯ ಪಡೆಯುವ ಜಾತ್ಯಂಧರೆ, ದುರ್ವಿಧಿ ಕಾರಣವಾಗಿ ಕಷ್ಟಗಳನ್ನನುಭವಿಸುವ ಮಿತ್ರಸೇನ, ಮುಗ್ಧಗುರು ಭಕ್ತನಾಗಿ ಪ್ರಭಾಕರ ಶೆಟ್ಟಿ, ದುಷ್ಟತನವೇ ಮೂರ್ತಿವೆತ್ತಂತಿದ್ದ ದುರ್ಮುಖಿಯರ ಪಾತ್ರಗಳ ಮೂಲಕ ಶಂಕರ ಕವಿಯು ಲೌಕಿಕ ಸಂಗತಿಗಳ ಸೂಕ್ಷ್ಮ ನಿರೀಕ್ಷಣಾಪ್ರಜ್ಞೆ, ವಿಶಾಲ ಜೀವನಾನುಭವಗಳನ್ನು ಪ್ರಕಟಡಿಸುತ್ತಾನೆ. ಆದರೆ ಮಲ್ಲಣಾರ್ಯ, ಷಡಕ್ಷರದೇವರುಗಳಂತೆಯೇ ಶಂಕರಕವಿಯೂ ''ಪ್ರಕೃತಿ ಸಹಜವಾದ ಮಾತೃ ಪಿತೃಹೃದಯದ ಮಿಡಿತವನ್ನು ಮರೆತುಬಿಟ್ಟಿದ್ದಾನೆ.''[೧೬] ಒಂದು ಕಡೆಗೆ ಇದ್ದೊಬ್ಬ ಮಗನನನ್ನು ಕಳೆದುಕೊಂಡು ದೆಸೆದೆಸೆಗೆ ಬಾಯ್ಬಿಡುತ್ತ ಭೋರ್ಗರೆದು ಅಳುತ್ತಿರುವ ದುಂಢಿ; ಇನ್ನೊಂದೆಡೆ 'ಭಕ್ತವಧೆಗೆ ಕಾರಣನಾದ ಏಕೈಕ ಪುತ್ರನಿಗೆ ಮರಣ ದಂಡನೆ ವಿಧಿಸುವ ನ್ಯಾಯ ನಿಷ್ಠುರಿ ಮಾಧಾವಂಕ, ವಧಾಸ್ಥಾನಕ್ಕೆ ಹೊರಟು ನಿಂತಮಗನನ್ನು ಸಂತೋಷದಿಂದ ಹರಸಿ ಕಳುಹಿಸುವ ಮಾದಲಾಂಬಿಕೆ. ಇಲ್ಲಿ ಹೀಗೇಕೆ? ಮಾನವ ಸಹಜಭಾವಗಳು ಕವಿಯ ದೃಷ್ಟಿಗೆ ಬೀಳಲಿಲ್ಲವೆ? ಎಂಬ ಪ್ರಶ್ನೆ ಏಳುತ್ತದೆ. ಶಂಕರಕವಿಯು ''ಬಸವಕುಮಾರನನ್ನು ವಧಸ್ಥಾನಕ್ಕೆ ಕರೆದೊಯ್ಯುತ್ತಿರುವ ಸನ್ನಿವೇಶದಲ್ಲಿ ಪುರಜನರು ಪ್ರಲಾಪಿಸುತ್ತ ಹೆತ್ತ ತಾಯಿಯಾದರೂ ಈ ವಧೆಯನ್ನು ತಡೆಯಬಹುದಿತ್ತು'' ಎಂದು ಆಡುವ ಮಾತುಗಳಲ್ಲಿ ಈ ಶಂಕೆಯನ್ನು ವ್ಯಕ್ತಪಡಿಸಿದ್ದಾನೇನೋ ನಿಜ. ಆದರೆ ಕಾವ್ಯದ ಗುರಿ 'ಪಂಚಾಕ್ಷರಿ ಮಂತ್ರ ಮಹಿಮೆ'ಯನ್ನು ಸಾರುವುದಾದ್ದರಿಂದ ಕವಿಗೆ ಈ ಬಗೆಯ ಚಿತ್ರಣ ಅನಿವಾರ್ಯವಾಗುತ್ತದೆ. ''ಮೇಲಾಗಿ ದುಂಢಿ ಇರುವುದು ಲೌಕಿಕ ಭೂಮಿಕೆಯಲ್ಲಿ, ಮಾಧವಾಂಕ, ಮಾದಾಂಬಿಕೆಯರಿರುವುದು ಪಾರಲೌಕಿಕಭೂಮಿಕೆಯಲ್ಲಿ. ಜೀವನದುದ್ದಕ್ಕೂ, ಗುರುಸೇವೆ, ಲಿಂಗನಿಷ್ಠೆ, ಪೂಜೆಯಲ್ಲಿ ನಿರತರಾಗಿದ್ದ ಅವರ ಭಕ್ತಿ ನಿಷ್ಠೆ ಬಲಿತ ಸಂದರ್ಭವಿದು. ಇಂಥ ನಿಷ್ಠೆಯಲ್ಲಿ ಭಕ್ತರು ಪರಮಾತ್ಮನಿಗೆ ತಮ್ಮ ಸರ್ವಸ್ವವನ್ನೂ ಅರ್ಪಿಸುತ್ತಾರೆ. ಅರ್ಪಿಸಿದಷ್ಟೂ ಅವರಿಗೆ ಆನಂದ. ಅವರು ಯಾವುದನ್ನೂ ಲೆಕ್ಕಿಸುವುದಿಲ್ಲ ''ಅರ್ಥವನನರ್ಥವ ಮಾಡಿ ಕೋಲಾಹಲಂಗೆಯ್ಯುತಿರಲಿ, ಹುಟ್ಟಿದ ಮಕ್ಕಳ

ನವಖಂಡವಮಾಡಿ ಕಡಿಯುತಿರಲಿ, ಮುಟ್ಟಿದ ಸ್ತ್ರೀಯನಭಿಮಾನಗೊಂಡು ನೆರೆವುತಿರಲಿ, ಮತ್ತೆಯೂ ಲಿಂಗಾರಾಧನೆ ಮಾಡುವೆ ಮತ್ತೆಯೂ ಜಂಗಮಾರಾಧನೆ ಮಾಡುವೆ, ಪ್ರಸಾದಕ್ಕೆ ತಪ್ಪೆ, ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ ನೀನಂದೇ ಮೂಗಕೊಯ್ ಕೂಡಲಸಂಗಮದೇವಾ''[೧೭] ಎಂಬ ನಿಷ್ಠೆ ಅವರದು, ಭಕ್ತರ ಜೀವನಕ್ಕೆ ಇದು ಸಹಜ, ವಾಸ್ತವಿಕತೆ ದೃಷ್ಟಿಯಿಂದ ಅಸಹಜವೆನಿಸುತ್ತದೆ. ''ಲೌಕಿಕದ ಪ್ರತಿನಿಧಿಯಾಗಿರುವ ಪಾತ್ರಗಳೂ ಕೊನೆಗೆ ಆದರ್ಶ ವ್ಯಕ್ತಿಗಳ ಪ್ರಭಾವಳಿಯಲ್ಲಿ ಕರಗಿ ಹೋಗುತ್ತವೆ. ಉದಾಹರಣೆಗೆ ದುಂಢಿ, ವಂಚುಳೆ, ಜಾತ್ಯಂಧರೆ, ಸುಗ್ನಾನಿ ಇತ್ಯಾದಿ. ಅಂತೆಯೇ ವಿಮರ್ಶಕರು ಇವರೆಲ್ಲ ಕಾವ್ಯಲೋಕದಲ್ಲಿ ಮಾತ್ರ ಇರಬಹುದಾದ ವ್ಯಕ್ತಿಗಳು, ನಮ್ಮ ಸಂಬಂಧ ಸಂಪರ್ಕ ಇವರಿಗಿಲ್ಲ, ಇವರೇ ಬೇರೆ ನಾವೇ ಬೇರೆ''[೧೮] ಎಂದು ಹೇಳಬೇಕಾಯಿತು. ಏನೇ ಆಗಲಿ ಮಾನವ ಸಹಜವಾದ ಪಿತೃ-ಮಾತೃ-ವಾತ್ಸಲ್ಯವನ್ನು ಕವಿಮರೆತು ಇಲ್ಲಿ ಎಡವಿದ್ದಾನೆ ಎನಿಸುತ್ತದೆ.''[೧೯] ಎಂಬ ಅಭಿಪ್ರಾಯವನ್ನು ಈ ಕಾವ್ಯದ ಉದ್ದೇಶದ ಹಿನ್ನೆಲೆಯಲ್ಲಿ ವಿಚಾರಿಸಿದರೆ ಪೂರ್ಣ ಒಪ್ಪಲಿಕ್ಕಾಗುವುದಿಲ್ಲ ಎಂದು ಹೇಳಬಹುದು.

ಛಂದಸ್ಸು ಮತ್ತು ಶೈಲಿ : ಕನ್ನಡ ಕವಿಗಳ ಕಾವ್ಯ ಪ್ರತಿಭೆಯನ್ನು ಕನ್ನಡಿಸುತ್ತ ಬಂದ ಷಟ್ಪದಿಗಳು ಎರಡು ಒಂದು ವಾರ್ಧಕ, ಇನ್ನೊಂದು ಭಾಮಿನಿ.''[೨೦] ಅಂತೆಯೇ ವೀರಶೈವಕವಿಗಳಿಗೆ 'ವಾರ್ಧಕ ಷಟ್ಪದಿ'ಯು ಬಹಳ ಮೆಚ್ಚುಗೆಯಾಗಿದ್ದ ಷಟ್ಪದಿಯೆಂಬುದಕ್ಕೆ ಅದನ್ನು ವೀರಶೈವ ಪುರಾಣ ಹಾಗೂ ಪುರಾಣ ಛಾಯೆಯ ಕೃತಿಗಳಲ್ಲಿ ವಿಶೇಷವಾಗಿ ಬಳಸಿರುವುದು ಸಾಕ್ಷಿಯಾಗಿದೆ.''[೨೧] ''ಮಾಧವಾಂಕ ಕಾವ್ಯ''ವು ವಾರ್ಧಕ ಷಟ್ಪದಿ ಯಲ್ಲಿ ಬರೆದ ಕಾವ್ಯ. ವಾರ್ಧಕದ ಲಕ್ಷಣಗಳನ್ನೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಸಾರ್ಥಕವಾಗಿ ದುಡಿಸಿಕೊಳ್ಳುವ ಪ್ರಯತ್ನ ಈ ಕಾವ್ಯದಲ್ಲಿ ನಡೆದಿರುವುದನ್ನು ಗುರುತಿಸಬಹುದು. ಹರಹಿನ ದೃಷ್ಟಿಯಿಂದ ವಾರ್ಧಕವು ಷಟ್ಪದಿಗಳಲ್ಲೆಲ್ಲ ಹಿರಿದು, ಆದುದರಿಂದ ಅದಕ್ಕೆ ವಾರ್ಧಕವೆಂಬ ಹೆಸರು ಸಾರ್ಥಕ. ಅರ್ಥ ತುಂಬಿ, ಭಾವ ತುಂಬಿ, ನಾದ ತುಂಬಿ ಹರಿಯಬಲ್ಲದು ಕಾವ್ಯಅದರ ಹರಹಿನಲ್ಲಿ''[೨೨] ವಾರ್ಧಕದ ಬೆಲೆಯನ್ನು ಅದರ ನಿರ್ಮಾತೃವೂ ಪ್ರಚಾರಕನೂ ಆದ ರಾಘುವಾಂಕನೇ ಹೇಳಿರುವಂತೆ..... ''ವಾರ್ಧಕ ಷಟ್ಪದಿಯಲ್ಲಿ ರಸವು ಅದರ ಜೀವವಾಗಿ ತುಳುಕುತ್ತದೆ, ಭಾವಕ್ಕೆ ಅದರ ಬಂಧವು ಒಡಲಿನಂತಿದೆ. ಆದರ ನಡೆಯಲ್ಲಿ ವಿಮಳಪದನ್ಯಾಸ ಎದ್ದು ತೋರುತ್ತದೆ. ಅದರ ರೀತಿ ಸುಕುಮಾರ, ನಾದ ಸುಖಕ್ಕೆ ಅದು ನಿಲಯವಾಗಿದೆ. 'ಮಾಧವಾಂಕ ಕಾವ್ಯ'ವು ಭಕ್ತಿರಸ ಪ್ರಧಾನವಾದಕಾವ್ಯ, ಜೊತೆಗೆ ಶೃಂಗಾರ ಕರುಣ ವೀರರಸಗಳು ಅಭಿವ್ಯಕ್ತಗೊಂಡಿವೆ. ಹೀಗಾಗಿ ಇಲ್ಲಿ ಭಾವಾಭಿವ್ಯಕ್ತಿಗೆ ಆದ್ಯತೆ ದೊರೆತಿದೆ.

ಮಾಧವಾಂಕನಿಗೆ ಶ್ರೀಗುರು ದೇಶಿಕೇಂದ್ರರು ವೀರಶೈವ ತತ್ವಗಳನ್ನು ತುಂಬವಿಸ್ತಾರವಾಗಿ ವಿವರಿಸಿ ಹೇಳುತ್ತಾರೆ. ಇಲ್ಲಿ ಮಲ್ಲಣಾರ್ಯರಂತೆ ಶಂಕರ ಕವಿಯೂ ''ಶಾಸ್ತ್ರ ವಿಷಯವನ್ನು ಹೇಳುವಲ್ಲಿ ಪದಲಾಲಿತ್ಯ, ಲಯಗತಿ ಕೆಡದಂತೆ, ಸರಳ ಭಾಷೆಯನ್ನು ಉಪಯೋಗಿಸಿದ್ದಾನೆ.''[೨೩] ಸುಮಾರು ಆರು ಸಂಧಿಗಳಲ್ಲಿ ವಿಸ್ತೃತವಾಗಿ ವೀರಶೈವ, ಅದರ ಲಕ್ಷಣ, ವಿಧಗಳು, ತತ್ವಗಳು,ಲಿಂಗಪೂಜಾಕ್ರಮ, ಪಂಚವಿಂಶತಿ ಲೀಲೆಗಳು,

ಪುರಾಣಗಳೊಳಗಿನ ಕಥೆಗಳು, ನೂತನ, ಪುರಾತನರ ಸಾಂದರ್ಭಿಕ ಕಥೆಗಳು ಮುಂತಾದವುಗಳ ಕುರಿತು ಹೇಳುವಲ್ಲಿ 'ವಾರ್ಧಕಷಟ್ಪದಿ'ಯ ಹಿರಿದಾದ ಹರಹು ಕವಿಯ ಭಾವಾಭಿವ್ಯಕ್ತಿಗೆ ಸಹಕಾರಿಯಾಗಿ ನಿಂತಿದೆ.

ಶಬ್ದಗಳು ಪುನರಾವರ್ತನೆಗೊಂಡು ಓದುಗರ ಕಿವಿಗೆ ಮೃದುಮಧುರವಾಗಿ, ಲಾಲಿತ್ಯ ಪೂರ್ಣವಾಗಿ ಕೇಳುವುದನ್ನು ಇಲ್ಲಿನ ಅನೇಕ ಪದ್ಯಗಳಲ್ಲಿ ಕಾಣುತ್ತೇವೆ.

ಉದಾಹರಣೆಗೆ

ಮಣಿಕೆವಣದಲಾವುಗೆಯನಿಲಿಸಿನಾಲ್ದೆಸೆಗೆ
ಮಣಿ ದೀಪ್ತಿಯಿಂಬೆಳಪಠಾಣದಿಪಗಳಿಟ್ಟು
ಮಣಿಮಯದ ಪಾದಸಾಲೆಯು ಮುಖ್ಯ ನಿಖಿಲೋಪ ಕರಣಾದಿಗಳನು ನೆರಪಿ
ಮಣಿಗನಾಭರಣದುಲಿವೆರಸಿನಾರಿಶಿರೋ
ಮಣಿಯರೆಲ್ಲವನಲಂಕರಿಸಿಪೊಸಮಿಸುನಿನವ
ಮಣಿಗಳಿಂ ಝುಗಝುಗಿಪ ಕಾಲಪೀಠವನು ಪರ್ಯಂಕದೊತ್ತಿನೊಳಮರ್ಚಿ" (೨೦-೧೬)

ಇಲ್ಲಿ ಮಣಿಶಬ್ದದ ಪುನರಾವೃತ್ತಿ ಅರ್ಥ್ಯವ್ಯಕ್ತಿಗೆ ಸಂಕೇತವಾಗಿದ್ದು ಸಹಜವಾಗಿ ಬಳಕೆಯಾಗಿದೆ.

ಧಡಧಡಿಸಿ ನಡವುತ್ತೆ ಜೆಡೆಯ ಜಡಿವುತ್ತೆ
ಬಡನಡುವುಸೊರಗಿ ಪೊಂಗೊಡಮೊಲೆಯುಕೊಡಹುತ್ತೆ
ತೊಡೆ ಪತ್ತಳದುರುತ್ತೆ ಕುಡಿಪುರ್ಬುಬೆದರುತ್ತೆ ಯಿಡಿದುವುಬ್ಬಸಮುಗುಳ್ನಗೆ
ಸಡಗರದಿ ಗಹಗಹಿಸಿ ಪಿಡಿದುವೋಕುಳಿ ಹಸ್ತ
ಬೆಡಗಿಂದಲೆತ್ತಿ ಬಾಬಾ ಅಂಜದಿರುಯೆಂದು
ಕಡು ಅಭಯ ಕೊಡುವಂತೆ ಪೊಡವಿಪನ ಮೇಲೆ ಸ್ತ್ರೀ ಪಡೆಗೂಡಿ ವೈದರಾಗಾ" (೨೧-೧೮)

ಇಲ್ಲಿ 'ಡ'ಕಾರದ ಆವರ್ತನ ಓಕುಳಿಯಾಟದ ಸನ್ನಿವೇಶವು ಕಣ್ಕಟ್ಟುವಂತೆ ಮಾಡಿದೆ. ಭಕ್ತಿಯಿರಲಿ, ಶೃಂಗಾರವಿರಲಿ, ಕರುಣೆಯೇ ಇರಲಿ, ವೀರ, ರೌದ್ರಗಳೇ ಆಗಲಿ ಶಂಕರಕವಿಯ ಕೈಯಲ್ಲಿ, 'ವಾರ್ಧಕ'ದ ನಾದ, ಭಾವ, ಹರಹುಗಳು ಸಶಕ್ತವಾಗಿ ಚಿತ್ರಿತವಾಗಿವೆ.

ಶಂಕರಕವಿಯು ಉಭಯ ಭಾಷಾವಿಶಾರದ, ಸಂಸ್ಕೃತ-ಕನ್ನಡಗಳೆರಡರಲ್ಲಿನ ಪ್ರಭುತ್ವದಿಂದಾಗಿ ಪ್ರೌಢತೆ ಕಾವ್ಯದಲ್ಲಿ ಸಹಜವಾಗಿ ಕಾಣಿಸಿಕೊಂಡಿದೆ.

ಉದಾಹರಣೆಗೆ

"ಪರಮಸದ್ಭಕ್ತದುಗ್ಧಾಬ್ಧಿವರ್ಧನ ಚಂದ್ರ
ಗುರುಪಾದಶತಪತ್ರಭೃಂಗ ಸಜ್ಜನಸಂಗ

ಶರಣಜನಕಲ್ಪಪಾದಪಯಿಷ್ಟ ಲಿಂಗನಿಷ್ಠಾಪರನುಧುರಿತ ಹರನೂ
ನಿರತ ಚಿದ್ಭಸಿತ ರುದ್ರಾಕ್ಷ ಧಾರಣಗಾತ್ರ
ನಿರಘು ಪಂಚಾಕ್ಷರಿಮಂತ್ರತತ್ಪರ ಹೃದಯ
ಚರಣಾಂಬು ಲಲಿತ ಪ್ರಸಾದ ಶಿವನ ಜೀವಸದ್ಭಾವ ಮಾಧವಾಂಕಂ" (೨೦-೩)

ಇಲ್ಲಿ ಸಂಸ್ಕೃತ ಪದಗಳ ಬಳಕೆಯಾಗಿ ಶೈಲಿ ಪ್ರೌಢವೆನಿಸಿದರೂ, ಅರ್ಥೈಸುವುದಕ್ಕೆ ಅಡ್ಡಿಯಾಗದ ಸ್ಪಷ್ಟತೆ ಇರುವುದು ಇಲ್ಲಿನ ವೈಶಿಷ್ಟ್ಯ. ನಾಟಕೀಯತೆ, ಭಾವನಿರ್ಭರತೆ, ಶಂಕರಕವಿಯ ಶೈಲಿಯ ಅವಿಭಾಜ್ಯ ಅಂಗಗಳು. ಭಾವ ಪರವಶನಾಗಿ ಗುರುವನ್ನು ಸ್ತುತಿಸುವ ಸಂದರ್ಭದಲ್ಲಿ ಬರುವ ಪದಗಳ ಕುಣಿತವನ್ನು ಈ ಕೆಳಗಿನ ಷಟ್ಪದಿಯಲ್ಲಿ ಕಾಣಬಹುದು.

ಯಂನಗುರುವೆಂನ ಸೌಭಾಗ್ಯದುಂನತಿಯೆನಿ
ನೆಂನಯ್ಯಯಂನ ಪುಣ್ಯದ ಪೊಂನರಾಸಿಯ್ಯೆ
ಯಂನಕರ್ತನೆಯಂನ ಹೃದ್ಗುಹನವಜ್ಯೋತಿಯಂನ ಚಿತ್ತಪ್ಪಕರನೆ
ಯಂನ ತೃಪ್ತಿಯ ಸುಧೆಯೆ ಯಂನ ಸ್ರುಜಿಸುವವಿಧಿಯೆ
ಯಂನ ಸತ್ಕಾರ್ಯಸಂಸಾಧನಾತುಳಶೌರ್ಯ
ಯಂನ ಸಂನ್ಮುಕ್ತಿ ಸಾಮ್ರಾಜ್ಯಪಾಲಿತ ದ್ಯೆರ್ಯಯಂನಕುಲದಾಚಾರ್ಯನೆ" (೯-೧೩)

ಶಂಕರ ಕವಿಯ ಶೈಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ದೇಶಿಯತೆ. ಆತನ ಕಾವ್ಯದುದ್ದಕ್ಕೂ ಸಂದರ್ಭೋಚಿತವಾಗಿ ಗಾದೆಗಳು. ಸೂಕ್ತಿಗಳು, ನಾಣ್ಣುಡಿಗಳು, ಅರ್ಥಾಂತರನ್ಯಾಸಗಳು ಹೇರಳವಾಗಿ ಬಳಕೆಯಾಗಿದ್ದು, ಕವಿಯ ಸಾಂದ್ರವಾದ ಜೀವಾನುನುಭವದ ದ್ಯೋತಕವಾಗಿವೆ. ಅವುಗಳಲ್ಲಿ ಹಲವು ಇಂದಿಗೂ ಪ್ರಚಲಿತವಾಗಿವೆ.

ಉದಾಹರಣೆಗೆ:

"ಪ್ರಕಟದಿಂ ಭ್ರಷ್ಟಗುಪ್ತದಿಮುಕ್ತ" (೨-೫೯)

"ಕಾಲಗತಿಯೊದಗೆ ಕಾಯದು ಬುದ್ಧಿಯೂ" (೩-೨೦)

"ಚಿಂತಾಮಣಿಯಹುದೆ ಶಂಖಮಣಿ ಮಂತ್ರಿಸಲು" (೩-೨೧)

"ಕಾಸಿದೊಡೆ ಕಬ್ಬುನಂ ಕಲಾದೌತಮಾಗುವುದೇ" (೩-೨೨)

"ಸುತೆಪ್ರಸೂತಿಯಾಗದಡೆ ಅಳಿಯನಂಬ್ಯೆವೊಲೂ" (೩-೨೪)

"ಕೃಷಿಬೆಳೆಯದಿರೆ ಬೇಲಿಯಿಂದ ಹಾಸಿದೊಲು" (೩-೨೪)

"ದುರ್ಜನರ ಸರ್ವಾಂಗ ವಿಷ" (೪-೩)

''ಧರೆಯ ಹಸಗೊಳಿಸಿ ಋತುವರಿತು ಬಿತ್ತಲಿಬೇಕು

ವುರಿವ ಜ್ಯೋತಿಗೆ ತೈಲಮುಮನರಿದೆರೆಯಬೇಕು

ಪರಿಕಿಸುತ ಬಿಸಿಯದುಗ್ಧಕ್ಕೆ ಹೆಪ್ಪಿಡಬೇಕು'' (೪-೧೧)

ಅವರ ಭಾಗ್ಯದ ಪುಂಣ್ಯಮವರಕಾಯದೆ ಬಿಡುವುದೇ' (೫-೨೭)

'ಸುತರಿಂದ ಸದ್ಗತಿಯಹುದು' (೬-೧೪)

'ಪುತ್ರರಿಲ್ಲದ ಬಾಳ್ವೆವ್ಯರ್ಥ' (೫-೧೬)

'ವಿದ್ಯಾವಿಹೀನರೆ ಪಶುಗಳ್' (೮-೨೭)

'ಸಭಾರತ್ನಯೆನಿಸುವರು ವಿದ್ವಾಂಸರುಂ' (೮-೨೮)

'ಮೂಜಗದೊಳಗಧಿಕ ಭೂರುದ್ರಕುಲಸಂಜಾತ' (೮-೪೩)

'ಜನನಿಜನಕ ರುಷಿಗಳಿಗೆ ಸಮರಾರಿಳೆಯೊಳೂ' (೧೦-೮)

'ಮುಂಗಾಣದೊರ್ವರನುನೋಯನುಡಿದವರಿಗತಿಭಂಗತಪ್ಪದು' (೧೦-೧೧)

'ಸಾನುರಾಗದಿಪೋಪ ಮಾರಿಯಂ ಕರೆದು ನಂಮೀನಗರಮಂ

ಪೊಕ್ಕು ಪೋಗು ಯೆಂಬವೊಲಾಯ್ತು' (೧೦-೨೦)

'ಸತ್ಯದಿಂನಂಬಿನಡೆವರಿಗೆ ಶಿವತಂನತಾನೆವಲಿವನಾರೆಂನದೆ (೧೧-೮೨)

'ಕೊಂದರ್ಗೆ ಕೊಲೆತಪ್ಪದು' (೨೧-೯೧)

'ಪರರಬುದ್ಧಿಗೇಳವರು ವಿನಾಶವಪ್ಪರು

ಸ್ತ್ರೀಬುದ್ಧಿ ಪ್ರಳಯಹುದೆಂಬ ನೀತಿತಥ್ಯಂ' (೨೨-೪)

'ದೀಪಲಂಘಿಸಿಯಳಿವ ಪತಂಗನ ತೆರದಿ' (೨೨-೫)

'ಪರಹಿತಾರ್ಥವೇಪುಂಣ್ಯ ಪುಣ್ಯದಿಂಪರಮಪದ' (೨೩-೫೧)

'ಮನುಷ್ಯತನುವನಿತ್ಯಂಕೀರ್ತಿತಾನಿತ್ಯ' (೨೩-೬೨)

'ಸಲೆಬೊಟ್ಟವನಿತು ಮಧುಬಿಂಧಿನಿಂ ಪಟ್ಟಣಂವಿಲಯವಾಯ್ತೆಂಬಂತೆ (೨೪-೩೮)

'ಕರಿದಲೆಗೆ ಶ್ರೀಪಟ್ಟದಾನೆಯನು ಬಲಿಗೊಡುವರುಂಟೆ (೨೩-೩೮)

'ತಂನಮನೆ ಜ್ಯೋತಿ ತಂಣ್ಣಗೆ ಪರರದೀಪಸುಡುವದೆ (೨೩-೪೦)

ಹೀಗೆ 'ಮಾಧಾವಂಕ ಕಾವ್ಯ'ದಲ್ಲಿ ಸಾಹಿತ್ಯಿಕ ಅಂಶಗಳು ಹದವರಿತು ಬೆರೆತಿದ್ದು ಈ ಕೃತಿಗೆ ಪುರಾಣ ಮೌಲ್ಯದ ಜೊತೆಗೆ ಸಾಹಿತ್ಯಿಕ ಮೌಲ್ಯವನ್ನೂ ತಂದೊದಗಿಸಿವೆ.

೪.೪. ಪುರಾಣ ಛಾಯಾಕೃತಿಯಾಗಿ 'ಮಾಧವಾಂಕ ಕಾವ್ಯ'

ಅವತಾರದ ಕಲ್ಪನೆ, ಶಿವಭಕ್ತರ ಕಥೆ, ವೀರಶೈವತತ್ವ ನಿರೂಪಣೆ ರಾಜಕೀಯ ಅಂಶಗಳು, ವೀರಶೈವ ಮತಾಧಿಕ್ಯ ಸ್ಥಾಪನೆ, ಪವಾಡಗಳು ಮೊದಲಾದವುಗಳನ್ನು ಒಳಗೊಂಡಿರುವುದು ವೀರಶೈವ ಪುರಾಣದ ಮುಖ್ಯ ಲಕ್ಷಣವೆನಿಸಿದೆ''[೨೪] ಈ ಲಕ್ಷಣಗಳ ಹಿನ್ನೆಲೆಯಲ್ಲಿ 'ಮಾಧವಾಂಕ ಕಾವ್ಯ'ದ ಸ್ಥಾನವನ್ನು ಹೀಗೆ ಅವಲೋಕಿಸ ಬಹುದು.

೧. ಅವತಾರದ ಕಲ್ಪನೆ : ಕಥಾನಾಯಕನಾದ ಮಾಧಾವಂಕನು ಇಲ್ಲಿ ಅವತಾರ ಪುರುಷನಲ್ಲ, ಪರಶಿವನ ಅಂಶವೂ ಅಲ್ಲ, ಶಿವನಕೃಪೆಯನ್ನು ಪಡೆದ ಮುಗ್ಧ ಭಕ್ತ. ಗುರುವಿನ ಕುಟಿಲ ಉಪಾಯದಿಂದಾಗಿ ಮಾರಿಯಾಲಯಕ್ಕೆ ಪುಸ್ತಕವನ್ನು ತರಲೆಂದು ಹೋದ ಮಾಧವನಿಗೆ ಶಿವಕೃಪೆ ಒದಗುತ್ತದೆ. ಆತನ ಮಗ 'ಬಸವಕುಮಾರ'ನು ಓಂಕಾರದ ಬೀಜಸ್ವರೂಪಿಯಾಗಿ ಮಾತಾ ಪಿತೃಗಳಿಗೆ ಶಿವಕೃಪೆ ಒದಗಿಸಲು ಕಾರಣೀಭೂತ ನಾಗುತ್ತಾನೆ. ಹೀಗೆಂದು ಮಾದಾಂಬಿಕೆಯು ಮಾಧವಾಂಕನು ಸಮಾಗಮದ ಸವಿ ನಿದ್ದೆಯಲ್ಲಿರುವಾಗ ಪರಶಿವನವತಾರ ಸ್ವರೂಪಿ ದೇಶಿ ಕೋತ್ತಮನು ಕನಸಿನಲ್ಲಿ ಬಂದು ''ನಾನೇ ನಿನ್ನರಸಿಯ ಉದರದಲ್ಲಿ ಸತ್ಪುತ್ರನಾಗಿ ಜನಿಸುವೆ, ಬಸವಕುಮಾರನೆಂದು ಹೆಸರಿಡು'' (ಮಾಧವಾಂಕ ಕಾವ್ಯ ೨೦-೨೮) ಎಂದು ಹೇಳಿ ಅದೃಶ್ಯನಾಗುತ್ತಾನೆ. ಹೀಗೆ ಇಲ್ಲಿ ಕಥಾನಾಯಕನ ಉದರದಲ್ಲಿ ಅಸಾಮಾನ್ಯತೆಯ ಅಂಶವುಳ್ಳ ಮಗನು ಜನಿಸುತ್ತಾನೆಂಬ ಸಂಗತಿ ಉಲ್ಲೇಖಗೊಂಡಿದೆ,

೨. ಶಿವಭಕ್ತರ ಕಥೆ : ''ಕಥಾನಾಯಕನ ಚರಿತ್ರೆಯ ಜೊತೆಗೆ ಸಮಕಾಲೀನ ಶಿವಶರಣರ ಶಿವಭಕ್ತರ ಅಂದರೆ ಪುರಾತನ ಶೈವಸಂತರ, ಪುರಾತನ ನೂತನ ಶಿವಶರಣರ ಚರಿತ್ರೆಗಳು ಪ್ರಾಸಾಂಗಿಕವಾಗಿ ಉಕ್ತ ಗೊಂಡಿರುವುದನ್ನು ಬಹುತೇಕ ವೀರಶೈವ ಪುರಾಣಗಳಲ್ಲಿ ಕಾಣುತ್ತೇವೆ.''[೨೫] 'ಮಾಧವಾಂಕಕಾವ್ಯ'ದಲ್ಲಿ ಕಥಾನಾಯಕನ ವ್ಯಕ್ತಿತ್ವ ನಿರೂಪಣೆಯ ಸಂದರ್ಭದಲ್ಲಿ ಶಿವಮಹಿಮೆಯನ್ನು ಸಾರಲು ಶಿವಭಕ್ತರ ಕಥೆಗಳು ಹೇಳಲ್ಪಟ್ಟಿವೆ. ಬಸವಣ್ಣ, ಚನ್ನಬಸವಣ್ಣ, ಅಕ್ಕನಾಗಲೆ, ಸಿದ್ಧರಾಮ, ಕಿನ್ನರಿಬೊಮ್ಮಯ್ಯ ಮೊದಲಾದ ಶರಣರ ಕಥೆಗಳು ಪೋಷಕವಾಗಿ ಬಂದಿರುವುದನ್ನು ಕಾಣುತ್ತೇವೆ. ಬೇರೆ ಪುರಾಣಗಳಿಗೆ ಹೋಲಿಸಿದರೆ ಇಲ್ಲಿ ಬಂದ ಶಿವಶರಣರ ಕಥೆಗಳು ಕಡಿಮೆ ಎಂದೇ ಹೇಳಬಹುದು. ಜೊತೆಗೆ ಕೆಲವು ಮಹಾಭಾರತ, ರಾಮಾಯಣ, ಭಾಗವತ ಮೂಲದ ಕಥೆಗಳೂ ಇಲ್ಲಿ ಎಡೆಪಡೆದಿವೆ.

೩. ವೀರಶೈವ ತತ್ವ ನಿರೂಪಣೆ : ಕಥಾನಾಯಕನ ಚರಿತ್ರೆಯ ಜೊತೆಗೆ ವೀರಶೈವ ತತ್ವಗಳನ್ನೂ ನಿರೂಪಿಸಿರುವುದು ವೀರಶೈವ ಪುರಾಣಗಳ ಮತ್ತೊಂದು ಲಕ್ಷಣ 'ಮಾಧವಾಂಕ ಕಾವ್ಯ'ದಲ್ಲಿ ಆರುಸಂಧಿಗಳ ವ್ಯಾಪ್ತಿಯಲ್ಲಿ ತಾತ್ವಿಕ ಸಿದ್ಧಾಂತಗಳ ನಿರೂಪಣೆ ವಿಸ್ತೃತವಾಗಿ ಹೇಳಲ್ಪಟ್ಟಿದೆ. ಮಾಧವಾಂಕನ ಅಪೇಕ್ಷೆಯ ಮೇರೆಗೆ ಶ್ರೀಗುರು ದೇಶಿಕೇಂದ್ರನು ವೀರಶೈವದ ವ್ಯಾಖ್ಯೆಯನ್ನು ತಿಳಿಸಿ ವೀರಶೈವ ತತ್ವಗಳನ್ನು ಬೋಧಿಸುವಲ್ಲಿ ಶಿವಶಾಸ್ತ್ರ, ಶಿವಕಥನ, ಸತ್ಕ್ರಿಯಾವಿಧಿವಿಧಾನ ಶಿವಚರಿತೆ ಕೇಳಿದವರ ಕಥೆಗಳನ್ನು ಹೇಳುತ್ತ ಶಿವನ ಪಂಚವಿಂಶತಿ

ಲೀಲೆಗಳು, ಸಪ್ತವಿಧ ಶೈವಗಳು, ಭಸಿತ, ರುದ್ರಾಕ್ಷಿ ಮಂತ್ರಜಪ, ಲಿಂಗದ ಮಹಾತ್ಮೆ, ತ್ರಿವಿಧದ ವೀರಶೈವ, ದೀಕ್ಷಾವಿಧಾನ, ನಿರಾಭಾರಿ ವೀರಶೈವನ ನಡೆಯನ್ನು ತಿಳಿಸಿ ಲಿಂಗದಿಕ್ಷೆಯನ್ನು ನೀಡುತ್ತಾನೆ. ಹೀಗಾಗಿ ಇದು ವೀರಶೈವ ತತ್ವಗಳ ಪುಟ್ಟಕೈಪಿಡಿಯಂತೆ ಭಾಸವಾಗುತ್ತದೆ. ಇದು ಕಥಾನಾಯಕನ ಚರಿತ್ರೆಗೆ ಹೊಂದಿಕೊಂಡೇ ಪೂರಕ ಕಥೆಗಳ ಮೂಲಕ ಹೇಳಲ್ಪಟ್ಟಿರುವುದರಿಂದ ದೀರ್ಘವಾಗಿದ್ದರೂ ಬೇಸರ ತರುವುದಿಲ್ಲ.

೪. ರಾಜಕೀಯ ಅಂಶಗಳು : ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಅಂಶಗಳನ್ನೊಳಗೊಂಡಿರುವುದು ವೀರಶೈವ ಪುರಾಣಗಳ ಪೂರಕ ಲಕ್ಷಣಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಮಾಧವಾಂಕ ಕಾವ್ಯವು ಪೌರಾಣಿಕ ಕಥೆ,ಇಲ್ಲಿ ರಾಜಕೀಯ ಉಲ್ಲೇಖಗಳಿಲ್ಲ. ಪ್ರಾಸಂಗಿಕವಾಗಿ ಬಸವಾದಿ ಪ್ರಮಥರ ಉಲ್ಲೇಖವನ್ನು ಬಿಟ್ಟರೆ ಹೇಳಿಕೊಳ್ಳುವಂಥ ಐತಿಹಾಸಿಕ, ರಾಜಕೀಯ ಅಂಶಗಳು ಇಲ್ಲಿಲ್ಲ. ಸಾಮಾಜಿಕ ಅಂಶಗಳ ದೃಷ್ಟಿಯಿಂದ ಈ ಕೃತಿ ಶ್ರೀಮಂತವಾಗಿದೆ ಎಂದೇ ಹೇಳಬಹುದು. ಕವಿಯ ಕಾಲದ ಅನೇಕ ಸಾಮಾಜಿಕ ಸಂಪ್ರದಾಯಗಳು, ಪದ್ಧತಿಗಳು ವಿಧಿವಿಧಾನಗಳು ಇಲ್ಲಿ ತುಂಬ ಚೆನ್ನಾಗಿ ಮೂಡಿಬಂದಿವೆ.

೫. ವೀರಶೈವ ಮತಾಧಿಕ್ಯ ಸ್ಥಾಪನೆ : ಈ ಅಂಶವನ್ನು ಈ ಕೃತಿಯಲ್ಲಿ ನಾವು ಕಾಣುವುದಿಲ್ಲ. ಶ್ರೀಗುರುವು ಮಾಧವನೃಪನೊಂದಿಗೆ ಆತನ ಸಚಿವ, ಅಖಿಲಬಂಧು ವರ್ಗದವರು, ಉಳಿದ ಎಲ್ಲ ಸ್ತ್ರೀಪುರುಷ ದಾಸ ದಾಸಿಯರಿಗೆ ದೀಕ್ಷೆಯಿತ್ತು ಲಿಂಗದೇಹಿಗಳನ್ನಾಗಿಸಿದನೆಂಬ ವಿವರಣೆ ಬರುತ್ತದೆ ಅಷ್ಟೆ" (೧೮-೨೧).

೬. ಪವಾಡಗಳು : ''ಕವಿಗಳು ಜನಸಾಮಾನ್ಯರ ಭಕ್ತಿ ಶ್ರದ್ಧೆಗಳನ್ನು ಆಕರ್ಷಿಸಲು ಪವಾಡಗಳು ಅತ್ಯಂತ ಸಮರ್ಥ ಸಾಧನಗಳೆಂದು ಬಗೆದು ನಾಯಕನ ಮಹಿಮೋನ್ನತಿಯನ್ನು ಸಾರುವಾಗ ಪವಾಡ ಕಥೆಗಳನ್ನು ಬಳಸಿಕೊಂಡಿರುವುದು ತಿಳಿಯುತ್ತದೆ.''[೨೬] ವೀರಶೈವ ಪುರಾಣಗಳಲ್ಲಿ ಶಿವಶರಣರ, ಶಿವಭಕ್ತರ ಚರಿತ್ರೆಗಳಿಗೆ ಸಂಬಂಧಿಸಿದಂತೆ ಪವಾಡಗಳು ಆರೋಪಿತವಾಗುತ್ತ ಬಂದಿವೆ. 'ಮಾಧವಾಂಕ ಕಾವ್ಯ'ದಲ್ಲಿ ಪವಾಡಗಳು ತುಂಬ ಕಡಿಮೆ. ಗುರುವಿನಾಣತಿಯಂತೆ ಮಾರಿಯಾಲಯಕ್ಕೆ ಬಂದ ಮಾಧವನನ್ನು ಶಕ್ತಿಯು ಕೈಲಾಸಕ್ಕೆ ಕರೆದೊಯ್ದು ಶಿವಕೃಪೆಗೆ ಒಳಗಾಗಿಸುವುದು, ಕ್ಷಣಮಾತ್ರದಲ್ಲಿ ಮಾಧವನು ಬೆಜ್ಜವಾಡಿಯ ಬಸವನಾಲಯದಲ್ಲಿ ಬಂದಿಳಿಯುವುದು ಪವಾಡ ಸದೃಶ ಘಟನೆ. ಈ ಮಾಧವಾಂಕನ ಮಗ 'ಬಸವಕುಮಾರ'ನು 'ಪರಶಿವನ ಅಪರಾವತಾರ'ನೆಂದು ಕನಸಾಗುವುದು, ವನಕೇಳಿಯ ಸಂದರ್ಭದಲ್ಲಿ ಒಂದು ವರ್ಷದ ಮಗು ಬಸವಕುಮಾರನು ತಂದೆಗೆ ನೀತಿ ಹೇಳುವುದು, ಕೊನೆಯಲ್ಲಿ ಶಿವಮಂತ್ರ ಮಹಿಮೆಯಿಂದ ಬಸವಕುಮಾರನಾದಿಯಾಗಿ ಎಲ್ಲರ ಶಿರಗಳು ಶಿವನಾಮ ಜಪಿಸುವುದು ಈ ಕಾವ್ಯದಲ್ಲಿನ ಪವಾಡಗಳು ಇದರ ಜೊತೆಗೆ ಹಲವು ಶಿವಶರಣರ ಜೀವನದಲ್ಲಿನ ಪವಾಡ ಸದೃಶಘಟನೆಗಳು ಸಾಂದರ್ಭಿಕವಾಗಿ ಉಕ್ತಗೊಂಡಿವೆ. ಹೀಗೆ ಈ ಕಾವ್ಯದಲ್ಲಿ ಪುರಾಣ ಲಕ್ಷಣಗಳು ಕಾಣಸಿಗುತ್ತವೆಯೇ ಹೊರತು ಇದನ್ನು ವೀರಶೈವ ಪುರಾಣಕಾವ್ಯವೆಂದು ಕರೆಯಲಾಗುವುದಿಲ್ಲ. ಮೇಲಾಗಿ ಮಾಧವಾಂಕ ಶಿವಭಕ್ತ, ಹೀಗಾಗಿ ಇದನ್ನು ಪುರಾಣಛಾಯಾ ಕೃತಿಯೆಂದು ಕರೆಯಲು ಅಡ್ಡಿಯಿಲ್ಲವೆನಿಸುತ್ತದೆ.

೪.೫. ಕೃತಿಯ ವೈಶಿಷ್ಟ್ಯ

ತಮಿಳು ಮೂಲದ 'ಸತ್ಯೇಂದ್ರ ಚೋಳ'ನ ಕಥೆಯನ್ನು ಕನ್ನಡದಲ್ಲಿ ಕಂಡರಿಸಿದ ಗುಬ್ಬಿಯ ಮಲ್ಲಣಾರ್ಯ ಮತ್ತು ಷಡಕ್ಷರದೇವನ ಕಾವ್ಯಗಳಾದ ಭಾವಚಿಂತಾರತ್ನ ಹಾಗೂ ರಾಜಶೇಖರ ವಿಳಾಸಗಳನ್ನು ಮೂಲ ಆಕರವನ್ನಾಗಿಸಿಕೊಂಡು ರಚನೆಯಾದ ಕೃತಿ 'ಮಾಧವಾಂಕ ಕಾವ್ಯ' ಮೇಲ್ನೋಟಕ್ಕೆ ವಸ್ತುವಿನ ದೃಷ್ಟಿಯಿಂದ ಭಾವಚಿಂತಾರತ್ನವನ್ನು ಅನುಸರಿಸಿರುವಂತೆ ಕಂಡರೂ ಯಥಾವತ್ತಾಗಿ ಅನುಕರಿಸದೆ ವಿಭಿನ್ನ ಆರಂಭವನ್ನು ತನ್ನ ಕಾವ್ಯಕ್ಕೆ ಒದಗಿಸಿದ್ದಾನೆ. ನಿರ್ವಹಣೆಯ ದೃಷ್ಟಿಯಿಂದ 'ರಾಜಶೇಖರ ವಿಳಾಸ'ವನ್ನು ಪ್ರಧಾನವಾಗಿ ಅನುಸರಿಸಿರುವಂತೆಕಂಡರೂ ಹಲವು ಸಂದರ್ಭಗಳಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾನೆ. ಹೀಗೆ ವಸ್ತು ಮತ್ತು ನಿರ್ವಹಣೆಯದೃಷ್ಟಿಯಿಂದ ಅದುವರೆಗೆ ಮೂಡಿಬಂದ ಸತ್ಯೇಂದ್ರ ಚೋಳನನ್ನು ಆಧರಿಸಿ ರಚನೆಗೊಂಡ ಕಾವ್ಯಗಳಲ್ಲಿ ಇದು ಸ್ವಲ್ಪ ಭಿನ್ನವಾಗಿ ನಿಲ್ಲುವ ಕೃತಿ. ಮಹಾಕಾವ್ಯದ ಲಕ್ಷಣಗಳಾದ ಅಷ್ಟಾದಶವರ್ಣನೆಗಳನ್ನು ವೀರಶೈವ ಪುರಾಣಕಾವ್ಯಗಳಲ್ಲಿ ತರುವ ಪ್ರಯತ್ನ ಮಾಡಿದ ಕವಿಗಳ ಸಾಲಿನಲ್ಲಿ ಶಂಕರ ಕವಿಯೂ ಸ್ಥಾನ ಪಡೆಯುತ್ತಾನೆ. 'ಮಾಧವಾಂಕ ಕಾವ್ಯ'ದಲ್ಲಿ 'ರಾಜನೀತಿ' ಬೋಧೆಗಾಗಿ ಒಂದು ಸಂಧಿಯನ್ನು ಮೀಸಲಾಗಿಟ್ಟು ತಮ್ಮ ಕೃತಿಯನ್ನು ಮಹಾಕಾವ್ಯವಾಗಿಸಬೇಕೆಂಬ ಹಂಬಲದಿಂದ ಅಷ್ಟಾದಶವರ್ಣನೆಗಳಲ್ಲೊಂದಾದ 'ರಾಜನೀತಿ'ಯನ್ನು ತಂದ ಬೆರಳೆಣಿಕೆಯ ವೀರಶೈವ ಕವಿಗಳಲ್ಲಿ ಶಂಕರಕವಿಯೂ ಒಬ್ಬನಾಗುತ್ತಾನೆ. ರಾಜಶೇಖರ ವಿಳಾಸದಂತೆ ಕೇವಲ ವರ್ಣನಾ ಪ್ರಧಾನವಾಗದೆ, ವರ್ಣನೆ ಮತ್ತು ಕಥೆ ಎರಡಕ್ಕೂ ಸಮಾನ ಪ್ರಾಶಸ್ತ್ಯ ಈ ಕೃತಿಯಲ್ಲಿದೆ. ಶೈವಸಂತರ, ಶಿವಶರಣರ, ಶಿವಭಕ್ತರ, ರಾಮಾಯಣ, ಮಹಾಭಾರತ, ಭಾಗವತ, ಪುರಾಣ ಮೂಲದ ಹಾಗೂ ಕೆಲವು ಜಾನಪದಮೂಲದ ಕಥೆಗಳನ್ನು ಸಾಂದರ್ಭಿಕವಾಗಿ ಹೇಳುತ್ತ ಹೋಗುವ ಶಂಕರಕವಿ ಈ ಕಾವ್ಯವನ್ನು ಒಂದು ಮಧ್ಯಮ ಪ್ರಮಾಣದ ಕಥಾಕೋಶವಾಗಿಸಿದ್ದಾನೆ. ಇದರಿಂದಾಗಿ ಒಮ್ಮೊಮ್ಮೆ ಸಾಮಾನ್ಯ ಓದುಗನಿಗೆ ಕಥೆಯಕೊಂಡಿ ಕಳಚಿದಂತೆ ಭಾಸವಾದರೂ ಶಿವಪಾರಮ್ಯವನ್ನು ಸಾರುವ ಕವಿಯ ಉದ್ದೇಶಕಾರಣವಾಗಿ ಕೃತಿಯ ಸಾವಯವ ಬಂಧಕ್ಕೇನೂ ಅಡ್ಡಿಯಾದಂತೆನಿಸುವುದಿಲ್ಲ. ಲಕ್ಕಣ ದಂಡೇಶನಂತೆಯೇ ಶಂಕರಕವಿಯೂ ಶಿವಾಗಮಗಳಿಗೆ ಪ್ರಾಶಸ್ತ್ಯ ನೀಡಿರುವುದನ್ನು ಕಾಣುತ್ತೇವೆ. ವಾತೂಲಾಗಮ, ಸೂಕ್ಷ್ಮಾಗಮ, ವೀರಾಗಮ, ಕಾರಣಗಮಗಳಲ್ಲಿ ಉಕ್ತವಾದ ಶೈವಧರ್ಮ ಪ್ರತಿಪಾದಕ ವಿಚಾರಗಳು ಇಲ್ಲಿದ್ದು "ವೀರಶೈವ ಧರ್ಮದ ಒಂದು ಪುಟ್ಟ ಕೈಪಿಡಿಯಂತೆ ಭಾಸವಾಗುತ್ತದೆ." ಒಟ್ಟಿನಲ್ಲಿ ಈ ಕೃತಿಯು ಪರಶಿವನ ಪಂಚವಿಂಶತಿ ಲೀಲೆಗಳ ಕೈಗನ್ನಡಿಯಾಗಿಯೂ ವೀರಶೈವ ತತ್ವಗಳ ಪ್ರದೀಪಿಕೆಯಾಗಿಯೂ, ಶಿವಶರಣರ ಕಥಾರ್ಣವವಾಗಿಯೂ"[೨] ಇದೆ ಎಂದು ಲಕ್ಕಣ್ಣ ದಂಡೇಶನ 'ಶಿವತತ್ವಚಿಂತಾಮಣಿ'ಯ ಕುರಿತಾಗಿ ಹೇಳಿರುವ ಮಾತುಗಳು ಮಾಧವಾಂಕ ಕಾವ್ಯಕ್ಕೂ ಅಕ್ಷರಶಃ ಅನ್ವಯಿಸುವಂತಿವೆ. ಪೌರಾಣಿಕ ದೃಷ್ಟಿಯಿಂದಾಗಿ ಈ ಕೃತಿಯು ಚಾರಿತ್ರಿಕವಾಗಿ ಗಮನ ಸೆಳೆಯುವುದಿಲ್ಲವಾದರೂ ಶಂಕರಕವಿಯು ಅಪಾರವಾದ ಲೋಕಾನುಭವ, ಸಮಾಜದರ್ಶನ, ಸಮಾಜವಿಮರ್ಶೆ ಆಚರಣೆಗಳು, ಸಂಪ್ರದಾಯಗಳ ಅಭಿವ್ಯಕ್ತಿಯಿಂದಾಗಿ 'ಸಾಮಾಜಿಕ

[illegible]

ಶ್ರೀಮಂತಿಕೆಯನ್ನೊಳಗೊಂಡ ಕೃತಿ ಮಾಧವಾಂಕ ಕಾವ್ಯ' ಎಂದು ಧಾರಾಳವಾಗಿ ಹೇಳಬಹುದು. ಸಂಸ್ಕೃತ-ಕನ್ನಡ ಉಭಯ ಭಾಷಾವಿಶಾರದನಾದ ಶಂಕರಕವಿಯು ಈ ಕೃತಿಯಲ್ಲಿ ಮಾಡಿರುವ ಸಂಧಿಯ ಆರಂಭದ ಸಂಸ್ಕೃತ ಭೂಯಿಷ್ಠ ಸ್ತುತಿಪದ್ಯಗಳು, ವೇದ ಆಗಮ ಉಪನಿಷತ್ತು ಪುರಾಣಗಳಿಂದಾಯ್ದ ಕಥೆಗಳು ಕವಿಯ ವಿದ್ವತ್ತು ಮತ್ತು ಬಹುಶ್ರುತತ್ವವನ್ನು ಸಾರುತ್ತವೆ. 'ಹರಿಹರನುದಿತಮಾರ್ಗ'ದಲ್ಲಿಯೇ ಸಾಗಿರುವ ಶಂಕರಕವಿಯು ಭಾವನಿರ್ಭರತೆಯ ಅಭಿವ್ಯಕ್ತಿಯಲ್ಲಿ ಹರಿಹರನ ಶೈಲಿಯನ್ನು ನೆನಪಿಸಿದರೆ, ನಾಟಕೀಯತೆ ಸಂವಾದರಚನೆಗಳಲ್ಲಿ ರಾಘವಾಂಕನ ನೆನಪು ತರುತ್ತಾನೆ. ಆದರೆ ಚೋರಬಸವೇಶ್ವರ ಕಾವ್ಯದಲ್ಲಿ ಕಾಣುವ ಬಿಗುವಾದ ಬಂಧ ಕಥನ ಕಲೆ ಇಲ್ಲಿಲ್ಲವೆಂಬುದು ಬೇಸರದ ಸಂಗತಿ. ಭಾವಚಿಂತಾರತ್ನ ರಾಜಶೇಖರ ವಿಳಾಸಗಳಿಗಿಂತ ಗಾತ್ರದಲ್ಲಿ ಬೃಹತ್ತಾಗಿರುವುದೇನೋ ನಿಜ. ಆದರೆ ಸತ್ವದಲ್ಲಿ ಭಾವಚಿಂತಾರತ್ನದ ಗಾಂಭೀರ್ಯ, ರಾಜಶೇಖರ ವಿಳಾಸದ ಕಾವ್ಯಾಮೃತ ಶಕ್ತಿ ಇಲ್ಲಿ ಇಲ್ಲವೇ ಇಲ್ಲ. ಸೂರ್ಯನ ತೇಜಃ ಪುಂಜವಾದ ಸ್ವಯಂಪ್ರಕಾಶದ ನೆರಳಿನಲ್ಲಿ ಬೆಳಗುವ ಕಿರುತಾರಗೆಯಂತೆ ಷಡಕ್ಷರದೇವನ ಕವಿತ್ವದ ನೆರಳಿನಲ್ಲಿ ಶಂಕರ ಕವಿಯ ಕೃತಿ ಮಿನುಗುತ್ತದೆ! ಹಲವು ಕೊರತೆಗಳ ನಡುವೆಯೂ ಸ್ವಂತಿಕೆಯನ್ನು ಅಭಿವ್ಯಕ್ತಿಸುವ ಕೆಲವು ಮಾರ್ಪಾಟುಗಳು, ಅನುಭವ ಶ್ರೀಮಂತಿಕೆ, ಬಹುಶ್ರುತತ್ವಗಳಿಂದ ಮಾಧವಾಂಕ ಕಾವ್ಯವನ್ನು ನೂತನ ನಿರ್ಮಾಣವಾಗಿಸಲು ಪ್ರಯತ್ನಿಸಿ ರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ತಾತ್ವಿಕ ಸಾಮಾಜಿಕ ಸಾಹಿತ್ಯಿಕ ಅಂಶಗಳಿಂದಾಗಿ ಗಮನ ಸೆಳೆಯಬಲ್ಲ ಕೃತಿ. 'ಮಾಧವಾಂಕ ಕಾವ್ಯ'

೪.೬. ತೌಲನಿಕ ವಿವೇಚನೆ

ಕಾವ್ಯೋತ್ಪತ್ತಿಗೆ ಪ್ರತಿಭೆಯೊಂದೇ ಸಾಲದು ಎಂಬುದು ಭಾರತೀಯ ಕಾವ್ಯಮೀಸಾಂಸಕರ ಅಭಿಮತ. ಅದಕ್ಕೆ ಜೊತೆಯಾಗಿ ಪೂರ್ವಕವಿಗಳ ಕಾವ್ಯಭ್ಯಾಸ, ಶಾಸ್ತ್ರ ಪರಿಚಯಗಳೂ ಆಗತ್ಯವೆಂಬುದು ಮಮ್ಮಟಾದಿ ಅಲಂಕಾರಿಕರ ಸ್ಪಷ್ಟ ಅಭಿಪ್ರಾಯ.[೨೮]

''ಶಕ್ತಿರ್ನಿಪುಣತಾಲೋಕಶಾಸ್ತ್ರ ಕಾವ್ಯಾದ್ಯವೇಕ್ಷಣಾತ್
ಕಾವ್ಯಜ್ಞಶಿಕ್ಷಯಾಭ್ಯಾಸಃ ಇತಿಹೇತುಸ್ತದುದ್ಭವೇ[೨೯]

ಎಂದರೆ (= ಪ್ರತಿಭೆ) ಲೋಕದ ನಡೆವಳಿಕೆ 'ಶಾಸ್ತ್ರ' ಕಾವ್ಯ ಮೊದಲಾದವುಗಳ ಪರಿಶೀಲನೆಯಿಂದ ಬರುವ ನಿಪುಣತೆ (= ವ್ಯುತ್ಪತ್ತಿ), ಕಾವ್ಯಜ್ಞರ ಉಪದೇಶವನ್ನು ಪಡೆದು ಮತ್ತೆ ಮತ್ತೆ ಮಾಡಿದ 'ಅಭ್ಯಾಸ' ಇವು ಮೂರೂ ಒಟ್ಟಿಗೆ ಕಾವ್ಯ ನಿರ್ಮಾಣಕ್ಕೆ ಕಾರಣ; ಒಂದೊಂದೇ ಇದ್ದರೆ ಸಾಲದು ''ಆದ್ದರಿಂದಲೇ ಭಾರತೀಯ ಸಾರಸ್ವತ ಪ್ರಪಂಚದಲ್ಲಿ ಕವಿಗಳು ಘನ ಪಂಡಿತರೂ ಆಗಿರುತ್ತಿದ್ದರು. ಕಾವ್ಯ ನಿರ್ಮಿತಿಗೆ ಕೈಹಾಕುವ ಮುನ್ನ ತತ್ಪೂರ್ವದ ಸಾಹಿತ್ಯವನ್ನು, ಶಾಸ್ತ್ರವನ್ನು ಅವರು ಮನನ ಮಾಡಿಕೊಳ್ಳುತ್ತಿದ್ದರು[೩೦] ಅಂತೆಯೇ ಯಾವುದೊಂದು ಕಾವ್ಯವನ್ನು ತೆಗೆದುಕೊಂಡರೂ ಅದರ ಮೇಲೆ ಪೂರ್ವಕವಿಗಳ ಪ್ರಭಾವಮುದ್ರೆಯನ್ನು ನಾವು ಗುರುತಿಸ

ಬಹುದು. ಈಮಾತಿಗೆ ಶಂಕರಕವಿಯೂ ಹೊರತಾಗಿಲ್ಲ. ಅವನ ಮಾಧವಾಂಕ ಕಾವ್ಯದಲ್ಲಿಯೂ ಪೂರ್ವಕವಿಗಳ ಛಾಯೆ ಗೋಚಸತ್ತದೆ.

> ''ಬಾಣ ಮಲುಹಣ ಮಲೆಯರಾಜ ನೃಪಕುಲಭೋಜ
> ಜಾಣ ಗುರ್ಜ್ಜರನ ಮಯೂರ ಪದ್ಮರಸರಂ
> ಕ್ಷೋಣಿಶ ಕೇಶಿರಾಜೈಯ್ಯನುದ್ಭಟನು ಪಾಲ್ಕುರಿಕೆ ಸೋಮಾರಾಧ್ಯರೂ
> ಏಣಾಂಕಧರ ವಿರೂಪಾಕ್ಷ ಪ್ರಸಾದಪ್ರ
> ವೀಣ ಹರಿಹರನು ರಾಘವ ವೀರ ಚಾಮರಸ
> ಮಾಣದೆ ಭೀಮರಸ ಮೊದಲಾದ ಶಿವಕವಿಪರೀ ಕೃತಿಯ ಪಸಗೊಳಿಪುದೂ'' (೧-೧೪)

ಎಂದು ಪೂರ್ವಕವಿಸ್ತವನದ ಸಂದರ್ಭದಲ್ಲಿ ಬಾಣ, ಮಲುಹಣ, ಮಲೆಯರಾಜ, ಭೋಜ, ಗುರ್ಜ್ಜರ, ಮಯೂರ, ಪದ್ಮರಸ, ಕೇಶಿರಾಜ, ಉದ್ಭಟ, ಪಾಲ್ಕುರಿಕೆ ಸೋಮನಾಥ, ಹರಿಹರ, ರಾಘುವಾಂಕ, ಚಾಮರಸ, ಭೀಮರಸ ಮುಂತಾದ ಶಿವಕವಿಗಳನ್ನು ಸ್ಮರಿಸಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಪ್ರಥಮತಃ ಸತ್ಯೇಂದ್ರ ಚೋಳನ ಕಥೆ ಕಂಡುಬರುವುದು ಮಲ್ಲಣಾರ್ಯನ 'ಭಾವಚಿಂತಾರತ್ನ'ದಲ್ಲಿ ಈ ಸತ್ಯೆಂದ್ರಚೋಳನ ಕಥೆಯನ್ನೇ ಆಧರಿಸಿ ರಚಿತವಾಗಿರುವುದು ಕೋಳೂರು ಶಂಕರಕವಿಯ 'ಮಾಧವಾಂಕಕಾವ್ಯ' ಈ ಕಥೆಯ ವಿಷಯ ಮೂಲಭೂತವಾಗಿ ತಮಿಳುನಾಡಿಗೆ ಸಂಬಂಧಿಸಿದ್ದಾದರೂ ಪ್ರತ್ಯೇಕವಾಗಿ ತಮಿಳಿನಲ್ಲಿರುವ ಹಾಗಿಲ್ಲವೆಂಬುದು ವಿದ್ವಾಂಸರ ಅಭಿಮತ''[೬೧] ''ಆದರೆ ಆ ಕಥೆಯ ಹಾಗೆಯೇ ಇರುವ ತಮಿಳಿನ ಒಂದು ಕಥೆಯೆಂದರೆ ಮನುನೀತಿಕಂಠ ಚೋಳನ ಕಥೆ, ಆಕಥೆ ತಂಜಾವೂರ್ ಜಿಲ್ಲೆಯ ತಿರುವಾರೂರಿಗೆ ಸಂಬಂಧಿಸಿದ್ದು, ತಿರುನಗರ ಅಥವಾ ತಿರುವಾರೂರಿನ ಮಹಿಮೆಯನ್ನು ಕುರಿತ ಮನುನೀತಿಕಂಠ ಪುರಾಣವು ಪೆರಿಯ ಪುರಾಣದ ಒಂದು ಪ್ರಸಿದ್ಧ ಕಥೆ, ತಿರುವಾರೂರಿನ ತ್ಯಾಗರಾಜ ದೇವಾಲಯದ ಎರಡನೆಯ ಪ್ರಾಕಾರದ ಉತ್ತರದಿಕ್ಕಿನ ಗೋಡೆಯ ಮೇಲೆ ವಿಕ್ರಮ ಚೋಳನ ಕಾಲಕ್ಕೆ ಸೇರಿದ ಒಂದು ಶಿಲಾಶಾಸನ (ಕ್ರಿ.ಶ. ೧೧೨೨) ಇದೆ. ಅದರಲ್ಲಿ ಮನುರಾಜನು ತನ್ನ ಮಗ ಪ್ರಿಯವರ್ಧನನ ಮೇಲೆ ರಥವನ್ನು ಹರಿಸುವಂತೆ 'ಉಭಯಕುಲಾಮಲ'ನೆಂಬ ಮಂತ್ರಿಗೆ ಅಪ್ಪಣೆ ಮಾಡುತ್ತಾನೆ. ಆ ಮಂತ್ರಿಯ ವಂಶಿಕನಿಗೆ ಕೊಟ್ಟದತ್ತಿಯನ್ನು ಆ ಶಾಸನ ತಿಳಿಸುತ್ತದೆ. ಸತ್ತ ಕರುವಿಗೆ ನ್ಯಾಯವನ್ನು ತೋರಿದ ಚೋಳರಾಜನ ಕಥೆಯ ಪ್ರಸ್ತಾಪ ಕ್ರಿ.ಶ. ಎರಡನೆಯ ಶತಮಾನಕ್ಕೆ ಸೇರಿದ 'ಶಿಲಪ್ಪದಿಕಾರ' ಕಾವ್ಯದಲ್ಲಿ ಪ್ರಾಸಂಗಿಕವಾಗಿ ಬಂದಿದೆ. ಸಿಲೋನಿನ 'ಮಹಾವಂಶ'ದಲ್ಲಿ ಸತ್ತ ಕರುವಿಗಾಗಿ ಮಗನನ್ನು ಕೊಂದು ನ್ಯಾಯ ಸ್ಥಾಪನೆ ಮಾಡಿದ ತಮಿಳು ಚೋಳನಾದ 'ಎಳಾರ'ನ ಸಂಗತಿಯಿದೆ. ಹೀಗೆ ಅತಿಪ್ರಾಚೀನವಾದ ತಮಿಳು ಕಥೆಯು ಬರಿಯ ಕಾವ್ಯ, ಶಾಸನಗಳಲ್ಲಲ್ಲದೆ ಶಿಲಾರೂಪಗಳಲ್ಲಿಯೂ ಕೆತ್ತಲ್ಪಟ್ಟಿದೆ.''[೬೨]

[illegible]

[illegible]

[illegible]

''ಕನ್ನಡನಾಡಿನ ಗಡಿ ಪ್ರದೇಶವಾದ ಅನಂತಪುರ ಜಿಲ್ಲೆಗೆ ಸೇರಿದ ಲೇಪಾಕ್ಷಿ, ಪೆನುಗೊಂಡೆಯ ದೇವಾಲಯಗಳಲ್ಲಿ ಈ ಕಥೆ ಶಿಲ್ಪ ಕೃತಿಯಾಗಿರುವುದು ಕಾಣಸಿಗುತ್ತದೆ''[೩೩] ''ಪೆರಿಯಪುರಾಣದಲ್ಲಿ ಬರುವ ಈ ಕಥೆಯನ್ನು ಆಧರಿಸಿ ಹರಿಹರನು ಮನುಚೋಳರಗಳೆಯನ್ನು ಬರೆದಿದ್ದಾನೆ.[೩೪] ಈ 'ಮನುಚೋಳ ರಗಳೆ'ಯೇ ಗುಬ್ಬಿಯ ಮಲ್ಲಣಾರ್ಯರ ಭಾವಚಿಂತಾರತ್ನಕ್ಕೆ ಮೂಲವಾಗಿರಬಹುದು''[೩೫] ಎಂಬಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ತಿರುಜ್ಞಾನಸಂಬಂಧರು ಕುಲಚ್ಚರೆಯಗೆ ಪಂಚಾಕ್ಷರಿಯ ಮಹಿಮೆಯನ್ನು ತಿಳಿಸುವುದಕ್ಕಾಗಿ ದ್ರಾವಿಡದಲ್ಲಿ ಹೇಳಿದ ಸತ್ಯೇಂದ್ರ ಕಥೆಯನ್ನು ತಾನು ಕನ್ನಡದಲ್ಲಿ ಹೇಳಿರುವೆನೆಂದು ಕವಿಯೇ ತಿಳಿಸಿದ್ದಾನೆ. ಇದರಿಂದ ಕನ್ನಡ ತಮಿಳುಗಳ ಸಂಬಂಧ ಭಾಷಾ ದೃಷ್ಟಿಯಿಂದ ಮಾತ್ರವಲ್ಲ ಸಾಹಿತ್ಯ ದೃಷ್ಟಿಯಿಂದಲೂ ನಿಕಟವಾದದ್ದು''[೩೬] ಎಂಬ ಅಂಶವ್ಯಕ್ತವಾಗುತ್ತದೆ. ಶೈವ ಮತ್ತು ವೀರಶೈವರಿಗಿರುವ ಧಾರ್ಮಿಕ ಸಂಬಂಧದ ಫಲವಾಗಿ ಸಾಹಿತ್ಯ ಸಂಪರ್ಕ ಬೆಳೆದು ಬಂದಿದೆ. ತಮಿಳಿನ ಅರವತ್ಮೂರು ಪುರಾತನರನ್ನು ವೀರಶೈವರು ತಮ್ಮವರೆಂದೇ ಭಾವಿಸಿ ಅವರ ಚರಿತ್ರೆಗಳನ್ನು ಕುರಿತು ಹಲವು ಕನ್ನಡ ಕಾವ್ಯಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

'ಪೆರಿಯ ಪುರಾಣ'ವನ್ನು ಆಧರಿಸಿದ ಮನುಚೋಳ ರಗಳೆ ಮತ್ತು ಸತ್ಯೇಂದ್ರ ಚೋಳನ ಕಥೆಗಳ ಆಶಯ ಒಂದೇ ಕೊಲೆಗೆ ಕೊಲೆ''[೩೭] ಆದರೆ 'ಮನುಚೋಳ' ರಗಳೆಯಲ್ಲಿ ಕರುವನ್ನು ಕೊಂದ ಮಗನ ಕೊಲೆಯಿದ್ದರೆ, ಸತ್ಯೇಂದ್ರಚೋಳನ ಕಥೆಯಲ್ಲಿ ಹುಡುಗನನನ್ನು ಕೊಂದವನ ಕೊಲೆಯಿದೆ. ಇದಿಷ್ಟು 'ಸತ್ಯೇಂದ್ರ ಚೋಳ'ನ ಕಥೆಯ ಹಿನ್ನೆಲೆಯಲ್ಲಿರುವ ಆಕರ ಮತ್ತು ವಸ್ತುವಿನ್ಯಾಸದ ಸಂಕ್ಷಿಪ್ತರೂಪ.

''ಕನ್ನಡದಲ್ಲಿ ಮೊತ್ತಮೊದಲು 'ಸತ್ಯೇಂದ್ರಚೋಳ'ನ ಕಥೆಯನ್ನು ವಸ್ತುವಾಗಿರಿಸಿಕೊಂಡು ಕಾವ್ಯವನ್ನು ಬರೆದವನು ಗುಬ್ಬಿಯ ಮಲ್ಲಣಾರ್ಯ, ಆಮೇಲೆ ಭೈರವೇಶ್ವರ ಕಾವ್ಯ, ಪಾಲ್ಕುರಿಕೆ ಸೋಮನಾಥ ಪುರಾಣ, ಗುರುರಾಜ ಚಾರಿತ್ರ, ಬಸವಪುರಾಣದ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಚೆನ್ನಬಸವ ಪುರಾಣ, ಸತ್ಯೇಂದ್ರ ಚೋಳ ಸಾಂಗತ್ಯ ಮೊದಲಾದ ಕೃತಿಗಳಲ್ಲಿ ಕಂಡುಬರುವ ಸತ್ಯೇಂದ್ರಚೋಳನ ಕಥೆಗೆ ''ಭಾವಚಿಂತಾರತ್ನ''ವೇ ಮೂಲ. ಕನ್ನಡದಲ್ಲಿ ಸುಪ್ರಸಿದ್ಧವಾದ 'ರಾಜಶೇಖರವಿಳಾಸ'ಕ್ಕೆ ಮೂಲಮಾತೃಕೆ ಗುಬ್ಬಿಯ ಮಲ್ಲಣಾರ್ಯರಭಾವ ಚಿಂತಾರತ್ನ''.[೩೮]

ಕೋಳೂರು ಶಂಕರಕವಿಯ 'ಬೆಜ್ಜವಾಡಿಯ ಮಾಧವಾಂಕ ಕಾವ್ಯ'ಕ್ಕೂ ಮೂಲ ಆಕರ ಕೃತಿ ಭಾವಚಿಂತಾರತ್ನ ಆದರೆ ಕೇವಲ ವಸ್ತುವಿನ ದೃಷ್ಟಿಯಿಂದ ಮಲ್ಲಣಾರ್ಯನ ಪ್ರಭಾವ ಮುದ್ರೆಯಿದ್ದು ನಿರ್ವಹಣೆಯ ದೃಷ್ಟಿಯಿಂದ ಮಹಾಕವಿ ಷಡಕ್ಷರದೇವನ 'ರಾಜಶೇಖರ ವಿಳಾಸ'ವನ್ನು ಅನುಸರಿಸುವ ಪ್ರಯತ್ನ ಮಾಡಿದಂತೆ ತೋರುತ್ತದೆ. ಇವರೆಡರ ಜೊತೆಗೆ ಸು.ಕ್ರಿ.ಶ. ೧೬೦೦ರಿಂದ ೧೬೫೦ರ ನಡುವಣ ಕಾಲದವನಿರಬಹುದೆಂದು ಭಾವಿಸಲಾಗಿರುವ 'ಧೂಪದಹಳ್ಳಿ' 'ಶಾಂತ' ಕವಿಯು ರಚಿಸಿರುವ 'ಸತ್ಯೇಂದ್ರ ಚೋಳಚಾರಿತ್ರ'ವನ್ನೂ ಶಂಕರಕವಿಯು ಗಮನಿಸಿದಂತೆ ತೋರುತ್ತದೆ.[೩೯] ಈ ಮುಂದಿನ ತೌಲನಿಕ ವಿವೇಚನೆಯಲ್ಲಿ ಅದನ್ನು ಗುರುತಿಸಲಾಗಿದೆ.

ಪ್ರಮುಖವಾಗಿ ಸತ್ಯೇಂದ್ರ ಚೋಳನ ಕಥೆಯ ಕುರಿತಾದ ಚರ್ಚೆಯಲ್ಲಿ ಪ್ರಧಾನಪಾತ್ರವಹಿಸುವ ಸಂಗತಿಗಳಾವುವೆಂದರೆ,

೧. ಷಣ್ಮುಖನಿಗೆ ಶಾಪವಿತ್ತ ಪ್ರಸಂಗ

೨. ಸತ್ಯೇಂದ್ರಸುತ ಮಂತ್ರಲಕ್ಷನ ಜನನ ಬಾಲ್ಯ

೩. ವಿವಾಹ

೪. ವನಕೇಳಿ

೫. ಚಂದ್ರಿಕಾವಿಹಾರ

೬. ವೈಹಾಳಿ

೭. ತಿರುಕೊಳ ವಿನಾಚಿ ಪ್ರಸಂಗ

೮. ಪಂಚಾಕ್ಷರಿ ಮಹಿಮೆಯ ಪ್ರಸಂಗ.

೧. ಷಣ್ಮುಖನಿಗೆ ಶಾಪವಿತ್ತ ಪ್ರಸಂಗ : ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ'ದಲ್ಲಿ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ಸಾರಲು ಶಿವನಿಂದ ಷಣ್ಮುಖನು ಶಾಪಕ್ಕೊಳಗಾಗುವ ಕಥೆಯು ವಿವರವಾಗಿ ಚಿತ್ರಣಗೊಂಡಿದೆ''[೪೦] ಷಡಕ್ಷರನ 'ರಾಜಶೇಖರ ವಿಳಾಸ'ದಲ್ಲಿ ಕೇವಲ ನಾಲ್ಕು ಪದ್ಯಗಳಲ್ಲಿ ಈ ಪ್ರಸಂಗವು ಕಥೆಗೆ ತಕ್ಕ ಪೀಠಿಕೆಯನ್ನೊದಗಿಸುತ್ತದೆ.''[೪೧] ಆದರೆ ಕೋಳೂರ ಶಂಕರಕವಿಯು ಈ ಪ್ರಸಂಗವನ್ನು ಸಂಪೂರ್ಣ ಕೈಬಿಟ್ಟು ತನ್ನ ಕಾವ್ಯವನ್ನು ಮಲ್ಲಣಾರ್ಯ ಮತ್ತು ಷಡಕ್ಷರದೇವರಿಗಿಂತ ಭಿನ್ನ ರೀತಿಯಲ್ಲಿ ಪ್ರಾರಂಭಿಸುತ್ತಾನೆ. ''ಸಜ್ಜನ ನಿವಾಸ''(೧-೨೬)ವೆನಿಸಿದ್ದ ಆಂಧ್ರದೇಶ, ಅಲ್ಲಿ ಸತ್ಯಕ್ಕೆ ನೆಲೆವನೆಯಾಗಿದ್ದ 'ಬೆಜ್ಜವಾಡಿ ಪಟ್ಟಣ', (೧-೨೯) ಅದನ್ನಾಳುತ್ತಿದ್ದ ದೊರೆ ಹರಿಹರರಾಯ. ಆತನ ಪತ್ನಿ ರಾಣಿ ಲಲಿತಾಂಗಿ, ಅವರ ಅಳಿಯನೇ ಈ ಕಾವ್ಯದ ಕಥಾನಾಯಕ 'ಮಾಧವಾಂಕ'. ಬಡಬ್ರಾಹ್ಮಣ ವಿಧವೆ 'ಸೋಮಲೆಯ' ಮಗ ಗುರುವಾಕ್ಯ ಪಾಲನೆಯಿಂದ ಶಿವಕೃಪೆ ಪಡೆದ ಸತ್ಯಸಂಧ. ಪ್ರಜಾಪಾಲಕನೂ ಸಮದರ್ಶಿಯೂ ಆದ ಹರಿಹರದೊರೆಯು ಅರ್ಹನಾದ ಅಳಿಯ 'ಮಾಧಾವಂಕ'ನಿಗೆ ಪಟ್ಟಗಟ್ಟುತ್ತಾನೆ. ಮಾಧವಾಂಕ ಮತ್ತು ಮಾಧವಿಯರ ಮಗನೇ 'ಬಸವಕುಮಾರ' ಇವನು 'ಭಾವಚಿಂತಾರತ್ನ'ದ ಮಂತ್ರಲಕ್ಷನಿದ್ದಂತೆ ನ್ಯಾಯನಿಷ್ಠುರಿಯಾಗಿದ್ದ ತಂದೆಗೆ ಸತ್ಯನಿಷ್ಠನಾಗಿದ್ದ ಮಗನೀತ.

೨. ಮಂತ್ರಲಕ್ಷನ ಜನನ ಮತ್ತು ಬಾಲ್ಯ : 'ಭಾವಚಿಂತಾರತ್ನ'ದಲ್ಲಿ ಸತ್ಯೇಂದ್ರ ಚೋಳನ ಪತ್ನಿ ಅಮೃತ ಮತಿಯು ತನಗಿರುವ ಪುತ್ರ ಬಯಕೆಯನ್ನು ಬಾಯಿಬಿಟ್ಟು ಗುರುಗಳ ಮುಂದೆ ನಿವೇದಿಸಿಕೊಳ್ಳುತ್ತಾಳೆ.

''.................. ಗುರುಪದಕೆ ವಂದಿಸಿನಿಂದು
ಕೈಗಳಂಮುಗಿದು ಬಿನ್ನಪ ಜೀಯ ಚೋಳಕುಲಕಮಲಬಾಲಾರ್ಕನೆನಿಪ
ಬಾಗಿಕುವರನ ನಿತ್ತು ರಕ್ಷಿಸೆನೆದೇಶಿಕಂ
ರಾಗಿಸುತ್ತುಂ ಮಗಳೆ ಕೊಳ್ಳೆನುತ ಕರ್ಪೂರ
ಯೋಗ ತಾಂಬೂಲದೊಡನಿಷ್ಟ ಸಿದ್ಧಿಯನಿತ್ತನಾರ್ಯನಾನಂದದಿಂದ'' (೩-೩೨)

ಆದರೆ ರಾಜಶೇಖರ ವಿಳಾಸದಲ್ಲಿ ಆಕೆಯ ಮನೋಬಯಕೆಯನ್ನು ಗುರುಗಳು ಜ್ಞಾನದೃಷ್ಟಿಯಿಂದ ಅರಿತುಕೊಳ್ಳುತ್ತಾರೆ. (ಆ. ೪-ಪ.೩)

''ತರುಣಿ ಬವದೀಯ ಪುಣ್ಯೋ
ದರದೊಳ್ಪುಟ್ಟುಗುಮಿನಾನ್ವಯಾಂಬುಧಿಚಂದ್ರಂ
ಹರ ಮಂತ್ರಮಿದನೆ ಜಪಿಸು
ತ್ತಿರೆ ತಪ್ಪದಿದೆಂದು ದೇಶಿಕಂ ಕರುಣಿಸಿದಂ'' (ಆ. ೪ ಪ. ೫)

ಶಂಕರ ಕವಿಯು ಈ ಪ್ರಸಂಗವನ್ನು ಷಡಕ್ಷರದೇವನಂತೆಯೇ ಚಿತ್ರಿಸಹೊರಟಿರುವುದು ಆತನ ಸೂಕ್ಷ್ಮಭಾವಗಳ ಅರ್ಥೈಸುವಿಕೆಯ ರೀತಿಯನ್ನು ಮಾತ್ರವಲ್ಲ ಗುರುಗಳ ಮತ್ತು ರಾಣಿಯ ಪಾತ್ರದ ಘನತೆಯನ್ನು ಹೆಚ್ಚಿಸಿರುವುದನ್ನು ತೋರುತ್ತದೆ. ರಾಣಿ ಮಾಧವಿಯು ಪರಮಾತ್ಮನನ್ನು ಧ್ಯಾನಿಸುತ್ತ ತನ್ನ ಸದ್ಭಾವದಲ್ಲಿ ಸುಗ್ನಾನಪಿಂಡದ ಬಯಕೆಯನ್ನಿರಿಸಿಕೊಂಡು ಗುರುಚರಣಕ್ಕೊಂದಿಸುತ್ತಿದ್ದಾಳೆ. ಆಗ ಗುರುವರ್ಯರು,

ಕಾಮಾರಿ ಸದ್ರೂಪ ಪಿಡಿದೆತ್ತಿ ಮಗಳೆ ನೀ
ಕಾಮಿಸ್ಯೆತಂದುದರಿದೆನುಯೇಳು ನಿನಗೊಬ್ಬ
ಕಾಮಸಂನಿಭಪುತ್ರನಪ್ಪ ಶ್ರೀ ಬಸವಕುಮಾರನೆಂಬ ಭಿಧಾನದಿ
ಕಾಮಹರನೊಲಿವನಾ ಪುತ್ರನಿಂಕೋಯನುತ
ಕಾಮಿನಿಗೆ ತಂನ ತಾಂಬೂಲಪ್ರಸಾದ ಮಂ
.... (೧೮-೯೫)

ನೀಡುತ್ತ ಹರಸುತ್ತಾರೆ.

'ಭಾವಚಿಂತಾರತ್ನ'ದಲ್ಲಿ ತಾಯಿಯ ಉದರದಲ್ಲಿದ್ದ ಮಂತ್ರಲಕ್ಷನು
''ವಿಳಾಸದೋಂಕಾರಬೀಜಂಕಂದಮಾಗೆ ಅಂಕುರಿಸಿದ(೩-೫೩)ರೆ

ರಾಜಶೇಖರವಿಳಾಸದಲ್ಲಿ ಕೂಡ

ಹೃದಯದೊಳೊದವಿದ ಶಿವಮಂ
ತ್ರದಕಲೆ ಸುಮುಹೂರ್ತದೊಳ್ ಶಿವಪ್ರೇರಣೆಯಿಂ

ತಾಯಿಯ ಪುಣ್ಯೋದರದಲ್ಲಿ ನೆಲೆಸಿ ಬೆಳೆಯಿತೆಂಬ ಚಿತ್ರ ಕಾಣಸಿಗುತ್ತದೆ. ಶಂಕರಕವಿಯೂ ಇದೆ ಭಾವದಲ್ಲಿ

ಆಪರಮಸುಗ್ನಾನಿ ಶ್ರೀಫಲಪಯೋಧರೆಯ
ಳಾಪುಂಣ್ಯಗರ್ಭದೊಳು ಶಿವಬೀಜಮಂಕುರಿಸು
ತಾ ಪವಿತ್ರ ಸುಪಿಂಡ ಬಲಿದು ದಿನದಿನದಿ ಬೆಳೆವುತಿರಲ್ಕವಳ್ಗೆ (ಮಾಧವಾಂಕ ಕಾವ್ಯ ೨೦-೩೯)

ಗರ್ಭಿಣಿಯ ಬಯಕೆಗಳು ಕಾಡತೊಡಗಿದವು ಎಂದು ಚಿತ್ರಿಸುತ್ತಾನೆ. ಬಯಕೆಗಳು, ಜನನ, ನಾಮಕರಣ, ತೊಟ್ಟಿಲು ಕಾರ್ಯಕ್ರಮಗಳ ವಿವರಣೆ, ಬಾಲಲೀಲೆಗಳ ಚಿತ್ರಣಗಳಲ್ಲಿ ಮೂರೂ ಜನ ಕವಿಗಳು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಒಂದೇ ತೆರನಾಗಿ ಚಿತ್ರಿಸಿರುವುದು ಕಾಣಸಿಗುತ್ತವೆ.

೩. ವಿವಾಹ : ಭಾವಚಿಂತಾರತ್ನ ಮತ್ತು ರಾಜಶೇಖರ ವಿಳಾಸಗಳಲ್ಲಿ ಮಂತ್ರಲಕ್ಷ ಮತ್ತು ಮಿತವಚನರಿಗೆ ಸಿಂಹಳೇಂದ್ರನ ಪುತ್ರಿಯರೊಂದಿಗೆ, ವಿವಾಹ ನೆರವೇರುವ ಪ್ರಸಂಗ ಚಿತ್ರಿತವಾಗಿದೆ. ಆದರೆ 'ಮಾಧವಾಂಕ ಕಾವ್ಯ'ದಲ್ಲಿ ಬಸವಕುಮಾರ, ಸುಬುದ್ಧಿಯರ ವಿವಾಹದ ಪ್ರಸ್ತಾಪವೇ ಬರುವದಿಲ್ಲ. ಈ ಪ್ರಸಂಗವನ್ನು ಶಂಕರಕವಿಯು ಸಂಪೂರ್ಣ ಕೈಬಿಟ್ಟಿದ್ದು. ಕೇವಲ ಭಕ್ತಿಪೂರ್ಣ ವ್ಯಕ್ತಿತ್ವದ ಪ್ರತಿನಿಧಿಗಳನ್ನಾಗಿ ಅವರನ್ನು ಕಂಡರಿಸಿರುವುದು ವಿಶೇಷವಾಗಿದೆ. ಶಾಂತಕವಿಯ 'ಸತ್ಯೇಂದ್ರಚೋಳ ಚಾರಿತ್ರ'ದಲ್ಲೂ ವಿವಾಹ ಪ್ರಸ್ತಾಪ ಕಾಣಸಿಗುವುದಿಲ್ಲ ಬಹುಶಃ ಶಂಕರಕವಿಯು ಈ ವಿಷಯದಲ್ಲಿ ಶಾಂತಕವಿಯನ್ನು ಅನುಸರಿಸಿರುವಂತೆ ತೋರುತ್ತದೆ.

೪. ವನಕೇಳಿ : ವಸಂತ ಋತುವಿನ ಆಗಮನವನ್ನು ವನಪಾಲಕನು ಅರುಹಲು ಮಂತ್ರಲಕ್ಷ ಮಿತವಚನರು ಪರಿವಾರದೊಂದಿಗೆ ಸೇನಾಸಮೇತ ವನಕೇಳಿಗೆ ಹೊರಟು ಅಲ್ಲಿ ಜಲಕ್ರೀಡೆ, ಓಕುಳಿಯಾಡಿ ಲಿಂಗಪೂಜೆ, ಭೋಜನಗೈಯುವ ಪ್ರಸಂಗಗಳು 'ಭಾವಚಿಂತಾರತ್ನ' ಮತ್ತು 'ರಾಜಶೇಖರವಿಳಾಸ'ಗಳಲ್ಲಿ ಒಂದೇ ತೆರನಾಗಿ ಚಿತ್ರಿತವಾಗಿವೆ. ಅದೇ ರೀತಿಯಲ್ಲಿ ಶಂಕರಕವಿಯು ಚಿತ್ರಿಸ ಹೊರಟಿದ್ದರೂ ಸ್ವಲ್ಪ ಭಿನ್ನತೆಯನ್ನು ಕಾಣುತ್ತೇವೆ.

ಭಾವಚಿಂತಾರತ್ನ ಮತ್ತು ರಾಜಶೇಖರವಿಳಾಸದ ಮಂತ್ರಲಕ್ಷ ಮಿತವಚನರು ಯೌವನಕ್ಕೆ ಕಾಲಿಟ್ಟಿದ್ದಾರೆ. ಆದರೆ ಇಲ್ಲಿ ಶಂಕರಕವಿಯು ನೃಪಸುತ ಬಸವಕುಮಾರ ಒಂದು ವರ್ಷದ ಕೂಸಾಗಿದ್ದು, ದೈವಾಂಶ ಸಂಭೂತ. ತಾಯಿ ಬಯಸಿದ ಎಳೆಯ ಕೋತಿಮರಿಯನ್ನು ತನ್ನ ಬಿಲ್ವಿದ್ಯಾಬಲದಿಂದ ಅಗಲಿಸಿ ಕೊಡ ಹೊರಟ ತಂದೆ ಮಾಧವಾಂಕನನ್ನು ತಡೆದು ನೀತಿವಾದ ಹೇಳುತ್ತಾನೆ. (೨೧-೬೭)

೫. ಚಂದ್ರಿಕಾವಿಹಾರ : 'ರಾತ್ರಿವಿಹಾರ'ದಲ್ಲಿ ನಾಗರಿಕನೊಬ್ಬನು ಅರಸನಿಗೆ 'ವೇಶ್ಯಾವಾಟ'ವನ್ನು ತೋರಿಸುವಂತೆ ಚಿತ್ರಿತವಾಗಿದ್ದು 'ಭಾವಚಿಂತಾರತ್ನ'ವನ್ನೇ ರಾಜಶೇಖರವಿಳಾಸವೂ ಅನುಸರಿಸಿದೆ. ಶಂಕರಕವಿಯು ಬಸವಕುಮಾರ ಸುಬುದ್ಧಿಯರು 'ವೈಹಾಳಿ'ಯಿಂದ ಹಿಂತಿರುಗಿ ಬರುವಾಗ ಆನುಷಂಗಿಕವಾಗಿ ವೇಶ್ಯಾವಾಟಿಯ ವರ್ಣನೆಯನ್ನು ಮಾಡಿದ್ದಾನೆ. ರಾಜಶೇಖರ ವಿಳಾಸದ ಎಲ್ಲೆ ಮೀರಿದ, ಅತಿ ಎನಿಸುವಂತಹ ಚಿತ್ರಣ ಇಲ್ಲಿಲ್ಲ. ಈ ದೃಷ್ಟಿಯಿಂದ ಶಂಕರಕವಿಯು ಮಲ್ಲಣಾರ್ಯನನ್ನು ಅನುಸರಿಸಿದ್ದಾನೆ.

೬. ವೈಹಾಳಿ : 'ಭಾವಚಿಂತಾರತ್ನ'ದಲ್ಲಿ ಮಿತವಚನನು ಸತ್ಯೇಂದ್ರಚೋಳನ ಸಾಕು ಮಗನಾಗಿ ರಾಜಶೇಖರನ ಅಣ್ಣನ ಸ್ಥಾನದಲ್ಲಿದ್ದರೆ 'ರಾಜಶೇಖರ ವಿಳಾಸ'ದಲ್ಲಿ 'ಮಿತವಚನ'ನು 'ರಾಜಶೇಖರ'ನಿಗೆ ಸರಿಸಮಾನನಾಗಿ ಬೆಳೆಯುತ್ತಾನೆ. ಅಲ್ಲದೇ ಮಂತ್ರಿ ಮಗನಿಗೆ ತಕ್ಕ ಸ್ಥಾನದಲ್ಲಿಯೇ ಉಳಿಯುತ್ತಾನೆ. ಇದರಿಂದ ಕಥಾನಾಯಕನ ಹಿರಿಮೆಯನ್ನು ಕಾಪಾಡಿಕೊಂಡಂತಾಗಿದೆ"[೪೨] ಶಂಕರಕವಿಯು ಮಾಧವಾಂಕ ಕಾವ್ಯದಲ್ಲಿ

''ಅಖಿಳಸುಖದುಃಖ್ಕೆಡರುಕಂಠಕಂಗಳಲು ಬರಲು

ಸುಖಿಸುವರು ಯೀರ್ವರುಂದಣಿ ಮಾತ್ರ ತಪ್ಪಿದಡೆ

ಶಿಖಿನೇತ್ರನಡಿಗೆದೂರರುಯೆಂದು ನಂಬುಗೆಯಗೊಂಡುಸುರುವಡಲಿನಂತೆ'' (೨೨-೨೧)

ಅಕಳಂಕರೆಂದೆನಿಸಿ, ಸತತ ಸದಾಚಾರಿಗಳಾಗಿ ಅತಿಶಯಾನಂದದಿಂದ ಬಾಳುತ್ತಿದ್ದರು ಎಂದು ಸಮಾನ ಭಾವದ ಸ್ನೇಹಿತರನ್ನಾಗಿ ಚಿತ್ರಿಸಿದ್ದರೂ -ಭಾವಚಿಂತಾರತ್ನ'ದ ಮಿತವಚನನಂತೆ ಇಲ್ಲಿ 'ಸುಬುದ್ಧ'ನು ಅಣ್ಣನ ಸ್ಥಾನದಲ್ಲೂ ನಿಲ್ಲುತ್ತಾನೆ. ರಾಜಶೇಖರ ವಿಳಾಸದ ಮಿತವಚನನಂತೆ ಮಂತ್ರಿ ಮಗನಿಗೆ ತಕ್ಕಸ್ಥಾನದಲ್ಲಿಯೂ ಉಳಿಯುತ್ತಾನೆ. ಶಂಕರಕವಿಯ ಸಮತೂಕದ ಔಚಿತ್ಯ ಪ್ರಜ್ಞೆಗೆ ಈ ಚಿತ್ರಣ ಸಾಕ್ಷಿಯಾಗುತ್ತದೆ.

ಒಂದು ದಿನ ಒಡ್ಡೋಲಗದಲ್ಲಿರುವಾಗ ಸಿಂಧುದೇಶದ ನವತುರಗಗಳನ್ನು ಕಾಣಿಕೆಯಾಗಿ ಒಪ್ಪಿಸಲು ರಾಜಶೇಖರನಿಗೆ ವೈಹಾಳಿಗೆ ಹೋಗುವ ಆಶೆಯಾಗುತ್ತದೆ. ಆಗಮಿತವಚನನು ಅವಸರಬೇಡವೆಂದು ನಯವಾಗಿ ತಿಳಿಸಿ ತಡೆಯುವ ಪ್ರಯತ್ನ ಮಾಡುತ್ತಾನೆ. ಆದರೆ ರಾಜಶೇಖರನು ಮಿತವಚನನ ಮಾತಿಗೊಪ್ಪದೇ ಅವನಿಂದಾಗುವ ಅಪರಾಧ ತನ್ನದೆಂದು ಮಾತುಗೊಟ್ಟು ವೈಹಾಳಿಗೆ ಒಪ್ಪಿಸುತ್ತಾನೆ. ಈ ಪ್ರಸಂಗದಲ್ಲಿ ಮಲ್ಲಣಾರ್ಯ, ಷಡಕ್ಷರದೇವ ಮತ್ತು ಶಂಕರಕವಿಗಳ ಚಿತ್ರಣ ಒಂದೇ ಭಾವವನ್ನೊಳಗೊಂಡಿರುವುದನ್ನು ಗುರುತಿಸುತ್ತೇವೆ ಆದರೆ ಬಸವಕುಮಾರ ಮತ್ತು ಸುಬುದ್ಧರ ಸಂಭಾಷಣೆಯ ರೀತಿಯು ಹೆಚ್ಚಾಗಿ 'ಭಾವಚಿಂತಾರತ್ನ'ವನ್ನೇ ಹೋಲುವುದನ್ನು ಗಮನಿಸಬಹುದು. ಭಾವಚಿಂತಾರತ್ನದಲ್ಲಿ

'ಸಿಂಧುದೇಶದ ಮಹೀರಮಣನು' (ಭಾ.ಚಿಂ.ರ. ೭-೧೧) ಎರಡು ಕುದುರೆಗಳನ್ನು ಕಾಣಿಕೆಯಾಗಿ ನೀಡುತ್ತಾನೆ. ವಾಜಿಶಾಸ್ತ್ರ ಪ್ರವೀಣರು ಅವುಗಳನ್ನು ಪರೀಕ್ಷಿಸಿ ಮಾರುತವೇಗದ ಪಂಚಕಲಾವಣ್ಣದ, ದೇವಮಣಿ ದೊರೆ ಸುಳಿಗಳುಳ್ಳ ಸುಲಕ್ಷಣಯುಕ್ತ ಕುದುರೆಗಳು'' (ಭಾ.ಚಿ..ರ. ೭-೧೬) ಎಂದು ಹೇಳಿದ್ದನ್ನು ಕೇಳಿದ ಮಂತ್ರಲಕ್ಷನು

ಅಣ್ಣಯ್ಯ....... ಕೇಳಿರ್ವರಿವನಡರಿಯಾ

ವಿಂದು ವೈಹಾಳಿಯಾಮಾಡವೆಳ್ಕೆಂದು...'' (ಅದೇ ೭-೧೭)

ನಗುತ್ತ ನುಡಿಯಲು 'ಮಿತವಚ'ನನು

ತಮ್ಮ ನೀನಱಿಯಲಾ ಮುಂದಣಾಗು ಹೋಗಂ ತಂದೆ

ಯೇನುಱಿದ ನೃಪರಂತೆ ನಾರಿಸುತ ಮೋಹಿಯೇ ಸಕಲ ಸೌಭಾಗ್ಯಮಿರಲು

ಜ್ಞಾನಿಶಂಕರಭಕ್ತವರ್ಗಕೆಮ್ಮಿಂದೆನೋ

ವೇನಾನುಮಾದೊಡಾತ್ಮಜರೆಂದು ಮನ್ನಿಸುವ

ನೇ'' (ಭಾ.ಚಿಂ.ರ. ೭-೧೮) ....

ಪಿತನ ಕಾಲ್ದರಿಯನೇ ಚಂಡೇಶ್ವರಂ ತನ್ನ

ಸತಿಯ ಪೊಡೆಯಂ ಸೀಳನೇ ಚೋಳನಂಗನೆಯ

ನತಿಕೋಪದಿಂ ಕೈಗಳರಿಯನೇಕಲಿಕಂಬಯ್ಯನ ಕೊರಲ್ ಪಱಿಯನೆ ||

ನುತಿಗೊಲ್ಲಳಾನಿಂಬೆ ಮಗನ ತಲೆಯೊಡೆಯಳೇ'' (ಅದೇ ೭-೨೨)

ಅದು ಕಾರಣಂ ವಿಚಾರಂ ಬೇಹುದು'' (೭-೨೩)

ಎಂದು ಪರಿಪರಿಯಾಗಿ ತಿಳಿಸಿ ಹೇಳುತ್ತಾನೆ. ಆದರೆ ಮಂತ್ರಲಕ್ಷನು ಬಿಡದೆ ಒಪ್ಪಿಸುತ್ತಾನೆ.

''.................. ಭವಿಷ್ಯತ್ಪದಂಗಳಾ

ವಂದಂಗಳಪ್ಪುವೆಂಬುದನರಿಯಬಾರದಾಕಂದರ್ಪಹರನೆಬಲ್ಲಂ

ಇಂದು ನಿನ್ನಿಂದಾದ ತಪ್ಪೆನ್ನದಾಯ್ತುಕೇಳ್

ಸಂದೆಗಂ ಬೇಡವೇಟಿಂದೊಡಂಬಡಿಸಿರ್ಪ'' (೭-೨೫)

ರಾಜಶೇಖರ ವಿಳಾಸದಲ್ಲಿ

ಈ ಹೊಸತುರಗಳನ್ನೇರಿ ಈನಗರದ ರಾಜಬೀದಿಯಲ್ಲಿ ಸೇನೆಯೊಡಗೂಡಿ ವಿಹರಿಸಿಬರೋಣ'' (ಆ ೧೩-೨) ಎಂದ ಮಂತ್ರಲಕ್ಷನ ಉತ್ಸಾಹಕ್ಕೆ ಮಿತವಚನನು ಈ ರೀತಿ ಉತ್ತರಿಸುತ್ತಾನೆ.

''.......... ಶಿವಭಕ್ತಜನ ವ್ರಜಂವಿಜೃಂ

ಭಿಸಿ ನೆಲಸಿರ್ದಪಟ್ಟಣಮಿದಿಂತಿದರೊಳ್ ಬಲಗೂಡಿಗಾಡಿರಂ

ಜಿಸೆ ಪೊಸವಾಜಿಯೇಱೆವಿಹರಿಪ್ಪುದು ಬಲ್ಲತನಕ್ಕೆ ತಕ್ಕುದೆ'' (೧೩-೪)

''ಏನಾನುಮೆಮ್ಮದೆಸೆಯಿಂ

ದೀನಗರದ ಭಕ್ತಜನಕೆಡರ್ಬಂದೊಡೆಮ

ದ್ಭೂನಾಥಂ ಚೋಳನೃಪಂ

ತಾನೇಂ ಸೈರಿಪನೆ ಶಾರದಾಮಣಿ ಮುಕುರಾ'' (೧೩-೬)

ಆದರೆ ಮಂತ್ರಲಕ್ಷನು....

ಮೀಶಾಜ್ಞೆಯಂ ಬಲ್ಲನಾರ್ಮುಂದೆಸಮಂತಂತಾಗೆ ತೋರ್ಪೆ ವಿಪುಲಮಹಿಮೆಯಂ

ಮುಕ್ತಿಯಂಸೂಱೆಗೊಂಬೆಂ'' (೧೩-೨೫)

''ಬಗೆಗೊಗೆದಳ್ತಿಯಂ ಸಲಿಸವೇಳ್ಪುದು ಬೇಡವೆನವೇಡ ತಂದೆನೆ

ಟ್ಟಗೆ ಮುಳಿದಪ್ಪನೆಂದೆಣಿಸದಿರ್ ನಿನಗಾದಪರಾಧಮೆನ್ನದೆಂದು'' (೧೩-೨೬)

ಒಪ್ಪಿಸಿಬಿಡುತ್ತಾನೆ.

'ಮಾಧವಾಂಕ ಕಾವ್ಯ'ದಲ್ಲಿ 'ಬಸವಕುಮಾ'ರನು ''ನಸುಗನಗುತ ವಿನಯದಿಂದೆಲೆಯಂಣಯಿಂದು ಪಗಲೊಯ್ಯಾಳಿ ಪೋಗಿಬಹನೂ'' (೨೨-೨೩) ಎಂದು ಸುಬುದ್ಧನಲ್ಲಿ ಹೇಳುತ್ತಾನೆ.

ಆಗ ಸುಬುದ್ಧನು ಪ್ರತಿಕ್ರಿಯಿಸುವ ರೀತಿ ಭಾವಚಿಂತಾರತ್ನ ಮತ್ತು ರಾಜಶೇಖರ ವಿಳಾಸಕ್ಕಿಂತ ಸಂಪೂರ್ಣ ಭಿನ್ನವಾಗಿದೆ.

''ಶಶಿತಾರಾಬಲವಿಲ್ಲನಾಳೆ ಪೋಗುವನೆಂದು'' (೨೨-೨೩) ತಿಳಿಸುತ್ತಾನೆ.

ಆ ಮಾತಿಗೆ 'ಬಸವಕುಮಾರ'ನು

''ಪರಮ ಭಕ್ತರಿಗೆ ಬರ್ಪೆಡರ ಪರಿಹರಿಸಿ ಸು
ಸ್ಥಿರಭೋಗಮೋಕ್ಷಂಗಳಿತ್ತು ಸಲಹುವರು ಸ
ದ್ಗುರು ಮೂರ್ತಿಯ ಸಮಬಲಮಿರಲುಗ್ರಹಮುನಿದು ಮಾಡುವದೇನು'' (ಅದೇ ೨೨-೨೭)
''ಸೋಮಶೇಖರನ್ನಾಗ್ನೆಯಿಂಬರ್ಪ ಸುಖದುಃಖ್ಯತಪ್ಪುವವೆ ಪೋಗದಿರಲೂ''(ಅದೇ ೨೨-೩೧)
''ನಿಂನಿಂದಾದಮಪರಾಧನಾಂ ಪೊರುವೆನಳಕಬೇಡೆಂದಭಯಮಂಕೊಟ್ಟು ಬೋಳೈಸುತೆ''(೨೨-೩೨)

ಎಂದು ಒಡಂಬಡಿಸಿ ತಂದೆಯಪ್ಪಣೆ ಕೇಳಿ ಕುದುರೆಸವಾರಿಗೆ ಹೋಗೋಣವೆಂದು ಅವಸರಿಸುತ್ತಾನೆ. ಇಲ್ಲಿ ಶಂಕರಕವಿಯು 'ಸುಬದ್ಧ'ನಿಂದ ಹೇಳಿಸುವ ಮಾತುಗಳು ಜನಮನದ ನಂಬಿಕೆಗಳ ಪ್ರತಿನಿಧಿಯಾಗಿ ಬಂದಿರುವುದನ್ನು ಗಮನಿಸುತ್ತೇವೆ. ವಾಸ್ತವಿಕತೆಯ ದೃಷ್ಟಿಯಿಂದ ಮಲ್ಲಣಾರ್ಯ ಮತ್ತು ಷಡಕ್ಷರದೇವರ ಚಿತ್ರಣವೇ ಹೆಚ್ಚು ಉಚಿತವೆನಿಸುತ್ತದೆ.

೭. ತಿರುಕೊಳವಿನಾಚಿ ಪ್ರಸಂಗ : ಪಟ್ಟಣದ ಹೊರಗೆ ವೈಹಾಳಿಯ ಉತ್ಸಾಹವನ್ನು ಮೆರೆದು ರಾಜಸುತ ಮಂತ್ರಿಸುತರು ಮರಳುತ್ತಿದ್ದಾರೆ. ತುಂಬಿದ ಸೇನೆ ಜತೆಯಲ್ಲಿತ್ತು. ಬೀದಿಯ ಇಕ್ಕೆಲಗಳಲ್ಲಿ ರಾಜಕುಮಾರನನ್ನು ನೋಡಲು ಕಿಕ್ಕಿರಿದು ಜನ ನೆರೆದಿದ್ದರು. ಸೇನೆಯ ವಾದ್ಯಗಳ ಅಬ್ಬರವನ್ನು ಕೇಳಿ ತಿರುಕೊಳವಿನಾಚಿ ಎಂಬ ಶಿವಭಕ್ತೆಯ ಮಗ ಅಲ್ಲಿಗೆ ಬಂದು ಬೆರಗಾಗಿ ನಿಂತು ಎಲ್ಲವನ್ನೂ ನೋಡುತ್ತಿತ್ತು. ಇದ್ದಕ್ಕಿದ್ದಂತೆ ಬಹುವೇಗ ದಿಂದ ಬಂದ ಪಡೆಯ ತಡೆಗಾಲಿಗೆ ಸಿಕ್ಕು ಆ ಮಗು ನೆಲದ ಮೇಲೆ ಬಿದ್ದಿತು. ಅತಿವೇಗವಾಗಿ ಧಾವಿಸಿ ಬರುತ್ತಿದ್ದ ಮಂತ್ರಲಕ್ಷನು ಆ ಮಗುವನ್ನು ಕಂಡು ನಿಡುದನಿಯಿಂದ ಅಬ್ಬರಿಸಿ ತನ್ನ ಕುದುರೆಯನ್ನು ದಾಟಿಸಿದನು. ಅದನ್ನು ನೋಡಿ ಕೈಯೂರಿ ಬಾಲಕನು ಮೇಲೆ ಏಳುತ್ತಿರುವಷ್ಟರಲ್ಲಿಯೇ ಹತ್ತಿರಬಂದ 'ಮಿತವಚ'ನ ಕುದುರೆಯ ಕಾಲ್ತುಳಿತಕ್ಕೆ ಮಗು ಸಿಕ್ಕಿಬಿದ್ದಿತು. ಕುದುರೆಯ ಕಾಲ್ಗೊರಸು ಮಗುವಿನ ಕೊರಲನ್ನು ಮೆಟ್ಟಿದೊಡನೆ ಪುಟನೆಗೆದ ತಲೆಧರೆಗುರುಳಿ ಬಿದ್ದಿತು. ಅದನ್ನು ಕಂಡ ರಾಜಕುಮಾರರು ಶಿವಭಕ್ತ ವಧೆ ಯಾಯಿತು. ಇದರ ಮರ್ಮವನ್ನು ಶಿವನೇಬಲ್ಲನೆಂದು ಅರಮನೆಯನ್ನು ಸೇರುವರು. ಇತ್ತ ಪುರಜನರಗೋಳು, ಹೆತ್ತತಾಯಿಯ ಗೋಳು ಹೇಳತೀರದಾಯಿತು. ಈ ತಿರುಕೊಳವಿನಾಚಿಯ ಪ್ರಳಾಪದ ಸನ್ನಿವೇಶ ಕನ್ನಡ ಕಾವ್ಯ ಪ್ರಪಂಚದಲ್ಲಿಯೇ ಮಿಗಿಲಾದುದು''[೪೩]

ಈ ಸನ್ನಿವೇಶ ಚಿತ್ರಣದಲ್ಲಿ 'ಭಾವಚಿಂತಾರತ್ನ' ರಾಜಶೇಖರವಿಳಾಸ ಹಾಗೂ ಮಾಧವಾಂಕ ಕಾವ್ಯಗಳ ನಿರೂಪಣೆ ಒಂದೇ ಎಂಬಂತೆ ಭಾಸವಾದರೂ ಸ್ವಲ್ಪ ಮಟ್ಟಿಗೆ ಶಂಕರಕವಿಯು ಸ್ವಂತಿಕೆಯನ್ನು ಮೆರೆದಿರುವುದನ್ನು ಗುರುತಿಸಬಹುದು. ಭಾವಚಿಂತಾರತ್ನದಲ್ಲಿ

''ಪುರಜನರು ಮಡಿದ ಕುಮಾರನ ರುಂಡ ಮುಂಡವನ್ನು ಕಂಡುಮರುಗಿ ಹೀಗೆ ನುಡಿಯುತ್ತಿದ್ದರು.

ಅಂದು ಭಕ್ತನ ಬಡಿದ ಮಾರುಡಿಗೆಯಾನಾಚಿ
ತಂದೆಯಂನೀಗಿ ಬತ್ತಲೆಗ ಸವಣರ್ ಕೆಟ್ಟ
ರೊಂದಲನ್ಯಾಯ ಮೆಲೆ ನಾಥಚೋಳಂ ಬಿಜ್ಜಳಬಳಿಕಲದಯ ಭೂಪಂ
ಮಂದುಗೆಟ್ಟಳಿದರಿಂತೆಲೆ ನಿಮ್ಮ ಭೂಮೀಶ
ನಿಂದುಧರ ಭಜಕನಿಂದೀಶಿವದ್ರೋಹಮ್ಯೆ
ತಂದುದಿದ ಕೇಳಲೆಂಗೆಯ್ವನೋ ಶಿವ ಶಿವ ಮಹಾದೇವಯೆನುತಿರ್ದರು''

(ಭಾವಚಿಂತಾರತ್ನ ೮-೨೩)

ಸುತನ ಕಾಣದೆ ಭಯದಿಂದನಾಲ್ದೆಸೆಗಳನ್ನು ನೋಡಿ ಶೋಕಾವಸ್ಥೆಯಿಂದ ಮಗನ ಹೆಸರು ಹಿಡಿದು ಶಂಕರನೆ ಯಾವೆಡೆಗೆ ಪೋದೆ ಮಗನೇಮಗನೇ (ಅದೇ ೮-೨೩) ಎಂದು ಕಂಗೆಟ್ಟು ಕರೆಯುತ್ತಿದ್ದ ನಾರಿಯನ್ನು ಕಂಡು ಕಾರಣವನ್ನು ಕೇಳಿ ಕುದುರೆಯ ಕಾಲ್ತುಳಿತಕ್ಕೆ ಈಗ ಒಂದು ಮಗು ಅಸುಗಳೆದುದು ನೋಡು ಎಂದು ಪುರಜನರು ತಿಳಿಸಿ 'ಬಹುಶಃ' ಆ ಸತ್ತಮಗುವಿನ ತಾಯಿ ಇವಳೇ ಇರಬೇಕೆಂದು ಸಂಕಟಪಡುತ್ತಾರೆ.

'ರಾಜಶೇಖರ ವಿಳಾಸ'ದಲ್ಲಿ ಪುರಜನರು ಆ ರುಂಡಮುಂಡವನ್ನು ಕಂಡು

''ಅಕಟಕಟದಾರಣುಗ ನೀ
ಸುಕುಮಾರಂ ಮಡಿದನಶ್ವಖುರಹತಿಯಿಂಬಾ
ಲಕವಧಮಿದನಱಿದೊಡೆತಾ
ನಕುಟಿಲ ಮತಿ ಚೋಳನೃಪತಿಯೇಂ ಸೈರಿಪನೇ'' (ರಾಜಶೇಖರ ವಿಳಾಸ ೧೩-೯೮)

ಎಂಬಿತ್ಯಾದಿಯಾಗಿ 'ಭಾವಚಿಂತಾರತ್ನ'ವನ್ನು ಹೋಲುವಂತೆಯೇ ರೋದಿಸಿ ಮರುಗುತ್ತಾರೆ. 'ಮಾಧವಾಂಕ ಕಾವ್ಯ'ದಲ್ಲಿ

ನೆರೆದಿರ್ಧ ಪ್ರಜೆಬಂದು ಮುತ್ತಿಮಲಮಲಮನದಿ
ಮರುಗಿ ಕುರುಹರಿದು ಬಡವಿಯ ಸುತನು ಪರಪುಟ್ಟತಂಮ ಮನೆಗಳಿಗೆ ಬರಲೂ
ಕರದು ರೊಟ್ಟಿಯ ಮುಟ್ಟಿಗೆಯನಿತ್ತಡದ ಮೆದ್ದು
ವರಗಿ ಕೊಂಡಲ್ಲಿ ಬಾಳುತಲಿರ್ದುದಂತಾಯ
ಪರವು ಮಾಡದೆ ಚಿಕ್ಕಮಕ್ಕಳೊಳು ಕೂಡಿಯಾಡುತಲಿರ್ದು ದಳ್ತಿಯಿಂದೆ'' (೨೩-೩)

[illegible]

ಇಂದು ನೃಪಸುತನ ಅಶ್ವದ ಕಾಲ್ತುಳಿತಕ್ಕೆ ಸಿಕ್ಕು ಮಡಿದನೆಂದು ತಮ್ಮೊಳಗೆ ಮಾತನಾಡುತ್ತಿರಲು ಅದನ್ನು ಕೇಳಿ, ಸಿಡಿಲು ಶೈಲಕ್ಕೆರಗಿ ಪೊಡವಿಗಿಳಿದಂತೆ'' (೨೩-೪) ಮಗುವಿನ ತಾಯಿ 'ದುಂಢಿ'ನೆಲಕ್ಕಪ್ಪಳಿಸಿ ಬಿದ್ದು ರೋದಿಸುತ್ತಿರಲು ಇಡಿಕಿರಿದು ಮುತ್ತಿ ನೋಡುತ್ತಿದ್ದ ಜನರೆಲ್ಲ

''........ ದುಃಖದಿಂಬಡಿದು ಕೊಳಲೇಕೆ ದುಂಡೀ
ಮಡಿದ ಮಗನಂಕೊಂಡು ಪೊಡವಿಪನ ಬಳಿಗೊಯ್ಯೆ
ವಡಲಿಗಂನವನಿಕ್ಕಿ ಬಿಡದೆ ಸಲಹುವನು ವೃತ
ಕಡುಶೋಕದಿಂದಿಲ್ಲಿ ಗಡಗಡನೆ ಹೊರಳಿದಡೆ
ಮಡಿದಣುಗ ಬದುಕಿ ಬಹನೆ'' (೨೩-೬)

ಎಂದು ಸಂತೈಸುವರು. ಇಲ್ಲಿ 'ಶಂಕರಕವಿ'ಯು 'ದುಂಡಿ' ಮತ್ತು ಆ ಮಗುವಿನ ಪರಿಚಯ ಈ ಮೊದಲೇ ಆ ಪುರಜನರಿಗೆತ್ತೆಂಬುದನ್ನು ಕಲ್ಪಿಸಿ, ಅವರ ಸಹಾಯದಿಂದ ಆ ಮಗುವು ಕಾಲಕಳೆಯುತ್ತಿತ್ತೆಂಬುದನ್ನು ಚಿತ್ರಿಸುತ್ತಾನೆ. 'ತಿರುಕೊಳವಿನಾಚಿಯ ಪ್ರಲಾಪ'ದ ಚಿತ್ರಣದಲ್ಲಂತೂ ಭಾವಚಿಂತಾರತ್ನವನ್ನೇ ಆಧಾರವಾಗಿಟ್ಟು ಕೊಂಡಿದ್ದರೂ 'ಶಂಕರ ಕವಿ'ಯು ಸ್ವಲ್ಪ ಮಾರ್ಪಾಟನೊಂದಿಗೆ ಓದುಗರ ಹೃದಯಕ್ಕೆ ಲಗ್ಗೆ ಹಾಕಲು ಯತ್ನಿಸಿದ್ದಾನೆ. ಆದರೆ ರಾಜಶೇಖರವಿಳಾಸದ ತಿರುಕೊಳವಿನಾಚಿಯ ಪ್ರಲಾಪದ ಸನ್ನಿವೇಶದ ಎತ್ತರಕ್ಕೆ ಬಹುಶಃ ಯಾರೂ ಏರಲಾರರೆಂದರೆ ಅತಿಶಯೋಕ್ತಿಯಾಗದೇನೋ, ''ಇಲ್ಲಿ ಹರಿಸಿರುವ ಕರುಣರಸ ಏಕೋರಸಃ ಕರುಣ ಏವ ಎಂಬ ಭವಭೂತಿಯ ಮಾತನ್ನು ನೆನಪಿಗೆ ತಂದುಕೊಡುತ್ತದೆ.''[೪೪] ಬಹುಶಃ ಈ ಸಂದರ್ಭದಲ್ಲಿ ಷಡಕ್ಷರ ಕವಿಗೆ ಷಡಕ್ಷರನೇ ಸಾಟಿಯಾಗುತ್ತಾನೆ. ಕೆಲವು ಪದ್ಯಗಳನ್ನು ಇಲ್ಲಿ ಅವಲೋಕಿಸಬಹುದು.

'ಭಾವಚಿಂತಾರತ್ನ'ದಲ್ಲಿ

''ತಿರುಕೊಳವಿನಾಚಿಯು
ಮುತ್ತಿದ್ದ ಜನಮನುರೆ ಬಗೆದೊಳಪುಗುತ್ತಲಾ
ನೆತ್ತಱಿಂರುಂಡಮಂ ಮುಂಡಮಂ ಕಂಡು ಹಾ!
ಮತ್ತನುಜ! ಹಾಕಂದ! ಹಾಮುದ್ದು ಮಗನೆ! ಹಾ! ಹಾ! ಕೆಟ್ಟೆನೆಂದೊ
ಎತ್ತಿಕೊಂಡಾತಲೆಯ ನೆರ್ದೆಯ ಗುಂಡಿಗೆಯೊಳಮ
ರ್ದೊತ್ತಿ ಶಿವದೋಯೆಂದು ತನುವನಿಳೆಗೀಡಾಡಿ
ಮತ್ತಳ್ದು ಬಿಳ್ದು ಹೊರಳುತ್ತೆದುಕ್ಕದಕಡಲೊಳೀಸಾಡುವಂತಿರ್ದಳು'' (ಭಾವಚಿಂತಾರತ್ನ ೮-೨೬)

''ಎಲೆ ಮಗನೆ ನಿನ್ನಯ ವಿಲೋಚನ ಕಂದಿದುವೆ
ಸಲೆ ಶಶಿಯ ಪೋಲ್ವ ಮುಖಮ್ಮೆದೆ ಕೊರಗಿತ್ತೆ ಮಂ
ಗಲಸೌಮ್ಯವಱತುದೇ ಗುರುಕೃಪೆಯದೇನಾಯ್ತು.......'' (೮-೨೮)

ರಾಜಶೇಖರ ವಿಳಾಸದಲ್ಲಿ ತಿರುಕೊಳವಿನಾಚಿಯು ತನ್ನ ಮಗನನ್ನರಸಿ ಕಾಣದೆ ತಲ್ಲಣಿಸಿ ಎಲೆ ಸುಕುಮಾರ ಶಂಕರಕುಮಾರ ಎಂದು ಕರೆ ಕರೆದು ಕೂಗಿ ಕಾಣದೆ ಕರಕರಿಸಿ ದಿಕ್ಕೆಟ್ಟಂತವಳಾಗಿ

''ಕರಿಗಳ ಕಾಲ್ಗೊಳಗಾದನೊ
ವರೂಥ ಚಕ್ರಕ್ಕೆ ಸಿಲ್ಕಿದನೊಹಯಚಂಚ
ತ್ಪುರಹತಿಯಿಂದಳಿದನೊ.....'' (ರಾ.ವಿ. ೧೩-೧೦೨)
ಅಕಟಕಟ ಎಂದು ಬಾಯ್ಬಿಡುತ್ತ
''ತನುಭವನೆಲ್ಲಿದನೆಲ್ಲಿದ
ನಿನಿವಾತಿನ ಕೀರನೆಲ್ಲಿದಂ'' (ರಾ.ವಿ. ೧೩-೧೦೨)

ಎಂದು ಹಲುಬುತ್ತ ಜನರು ತೋರಿದೆಡೆಯಲ್ಲಿ ಆರುಂಡ ಮುಂಡಮಂ ಕಂಡಡವಿಗಿರ್ಚುಗೊಂಡ ಪುಲ್ಲೆಯಂತೆ ಹರಣಂ ಹಮ್ಮೈಸಿ ಪರ್ದೆಱಗಿದುರಗಿಯಂತೆ ಮಿಡುಮಿಡನೆ ಮಿಡುಕಿ ಕಡಿವಡೆದೆಳೆ ವಳ್ಳಿಯಂತೆ ಕಱಗಿ ಕೊಱಗಿ ಪೊಸೆದಿಟ್ಟಪೂಮಾಲೆಯಂತೆ ಕಂದಿಕುಂದಿ ಮಂದೈಸಿದಳಲಿಂ ಮುಂದುಗೆಟ್ಟು ಕೆಟ್ಟಂಕೆಟ್ಟೆನೆಂದು ಬಸಿಱಂ ಪೊಸೆದು ದೆಸೆದೆಸೆಗೆ ಬಾಯಂಬಿಟ್ಟು ಮೊರೆಯಿಟ್ಟು ಮಱುಗಿ

''ಎಳೆಗಿಳಿಯಂ ಕೊಱಲ್ಮುಱಿದು ಮೋದಿದರಾರ್ಮಱಿಯಂಚೆಯಂ ಭಯಂಗೊಳಿಸುತೆರಂಕೆಯಂ ಪಱಿದು ಪೊಯ್ದುವರಾರ್...'' (ರಾ.ವಿ. ೧೩-೧೦೨) ಎಂದು ರೋದಿಸುತ್ತಾ ನಿಜಗೃಹಕ್ಕೇಳ್ತಂದು ಮುಂಡಮಂ ರುಂಡಮಂಪತ್ತಿಸಿ ನೋಡಿ ಮತ್ತೆ ನೆನೆನೆನೆದು ಪ್ರಲಾಪಿಸುವ ದೃಶ್ಯ ಎಂಥಕಟುಕನೂ ಕಣ್ಣೀರ್ಗರೆಯುವಂತೆ ಮಾಡುತ್ತದೆ.

'ಮಾಧವಾಂಕ ಕಾವ್ಯ'ದಲ್ಲಿ

ನೋಡಿ ಸುಖಿಸುವಯರಡು ಕಂಗಳೊಳಗಂಹುಡಿಯ
ಮಾಡಿ ಹಾಯಿದಂ ಶಿವನ ಮನೆ ಮಸಣವಾಗಲೆಂದತಿಶೋಕ ಸೋನೆಯಿಂದೆ (೨೩-೭)

ವನಿತೆ ಶ್ರವವನು ಪಿಡಿದು ಘನಮರುಕದುಃಖದಿಂ
ಮಣಿದು ಮೇಲೊರಗಿಯದೆಗಪ್ಪಿಗಲ್ಲಕೆಬಾಯನಿಟ್ಟು ಚುಂಬಿಸುತ ಬಿಡದೆ |
ಯರಡು ಕರಗಳ ಸಾರ್ಚಿ ತರುಣನಂ ಪಿಡಿದೆತ್ತು
ತಿರೆ ಬಾಯಿನಾಸಿಕದಿಸುರಿದು ರಕ್ತದದಾರಿ
ವರಿವುತ್ತಿರೆ ತೊಡೆಯೆಡೆಯೊಳೊರಗಿಸುತೆಯಡಗೈಯೊಳಾಂತು ಬಸಿದಲೆಯ ಜೊಲ್ಲಾ
ವರಸಿ ಬಲಹಸ್ತದಿಂ ಮೈಧೂಳವಂಕೊಡಹಿ
ನೆರೆದ ಪ್ರಜೆಕಂಬನಿಯ ತರುವಂತೆ ಶೋಕದಿಂ
ಶೆರೆಬಿಗಿದು ಬಂಣಿಸುತ ಲಾ ದುಂಡಿ ತತ್ಸುತನಹಾಡಿಕರ ಕರದತ್ತಳೂ|| (೨೩-೮, ೯)

ತನ್ನ ಬಡತನದ ಮಧ್ಯದಲ್ಲೂ ತರುಣ ನಿಂನಂ ನೋಡಿ ಮರದಿರ್ಧನಕಟಹಾಹಾ (ಅದೇ ೨೩-೧೦) ತನಗಿನ್ನಾರುಗತಿ?

''ಯಿಕ್ಕಿಮಂಣೊಳು ನಿಂನನೆಂತು ಮರೆಯಲೋಮಗನೆ
ಚಿಕ್ಕ ಕಂದೈಯ್ಯ ನೆರತರೆಯಂನ ಬಡತನವ
ಗಕ್ಕನೆ ಪರಿಹರಿಸಿಯೆಲ್ಲರೊಳು ಬಲ್ಲಿದಳು ಅಹೆನೆಂದು ನಂಬಿರ್ದೆನೂ'' (೨೩-೧೫)

ಎಂದು ಅಳುವ ದೃಶ್ಯ ಓದುಗನ ಕಣ್ಣನ್ನು ಒದ್ದೆ ಮಾಡದೆ ಇರದು. ಹೀಗೆ ಶಂಕರಕವಿಯ 'ದುಂಡಿ'ಯ ಪ್ರಲಾಪ ಆಕೆಯ ಬಡತನ ಮತ್ತು ತಾಯ್ತನದ ಕುಕ್ಕುಲಾತಿ ಹಂಬಲಗಳನ್ನು ಮಲ್ಲಣಾರ್ಯ ಮತ್ತು ಷಡಕ್ಷರದೇವನಿಗಿಂತ ಸ್ವಲ್ಪ ಭಿನ್ನವಾದ ವಿವರಗಳನ್ನು ಚಿತ್ರಿಸುತ್ತದೆ.

೮. ಪಂಚಾಕ್ಷರಿ ಮಂತ್ರದ ಮಹಿಮೆ : ಭಕ್ತಿಗೆ ಶಿವ ಒಲಿಯುವನೆಂಬ ಭಕ್ತಾಧಿಕ್ಯದ ಪ್ರಸಂಗವಿದು. ಮಂತ್ರದ ಮಹಿಮೆ, ಅರಸನ ನ್ಯಾಯನಿಷ್ಠೆ, ಮಗನ ಸತ್ಯನಿಷ್ಠೆ, ಭಕ್ತರ ಭಕ್ತಿ ನಿಷ್ಠೆಯನ್ನು ಪ್ರಕಟಪಡಿಸುವಲ್ಲಿ ಭಾವಚಿಂತಾರತ್ನವನ್ನೇ ರಾಜಶೇಖರ ವಿಳಾಸ ಮತ್ತು ಮಾಧವಾಂಕ ಕಾವ್ಯಗಳು ಅನುಸರಿಸಿದರೂ, ಮಾಧವಾಂಕಕಾವ್ಯದಲ್ಲಿ ಸ್ವಲ್ಪ ಮಾರ್ಪಾಡು ಕಂಡುಬರುತ್ತದೆ.

ತಿರುಕೊಳವಿನಾಚಿಯ ದುಃಖ ಆಕ್ರಂದನದ ಮೊರೆ ಕೇಳಿ ಸ್ವತಃ ದೊರೆಯೇ ವಿಚಾರಿಸಲು ಬರುವಷ್ಟರಲ್ಲಿ ದೂತನು ಆಕೆಯ ವಿಷಯ ತಿಳಿಸುತ್ತಾನೆ. ರಾಜಶೇಖರ ವಿಳಾಸದಲ್ಲಿಯೂ ರಾಜನು ತಾಯಿಯ ರೋದನ ವನ್ನಾಲಿಸಿ ಯಾರದೆಂದು ತಿಳಿದುಬರಲು ಸೇವಕಿಯನ್ನು ಕಳುಹಿಸುತ್ತಾನೆ. 'ಮಾಧವಾಂಕ ಕಾವ್ಯ'ದಲ್ಲಿ 'ದುಂಡಿ' ಯನ್ನು ಮಂತ್ರಿಯು ವಿಚಾರಿಸುವಂತೆ ಕಲ್ಪಿಸಲಾಗಿದೆ. ತದನಂತರ ಮಾಧವಾಂಕನು ತಕ್ಕ ನಿರ್ಣಯ ತೆಗೆದು ಕೊಳ್ಳುವನು. ಸಚಿವನು ದುಂಡಿಯ ದುಃಖಕ್ಕೆ ಕಾರಣವನ್ನು ಕೇಳಲು ಅನುಮಾನಿಸುತ್ತಲೇ ತನ್ನ ಸ್ಥಿತಿಯನ್ನು ನಿವೇದಿಸಿಕೊಳ್ಳುವುದು ಶಂಕರಕವಿಯು ಮಾಡಿಕೊಂಡಿರುವ ಮಾರ್ಪಾಟು. ಭಾವಚಿಂತಾರತ್ನ ಮತ್ತು ರಾಜಶೇಖರ ವಿಳಾಸದಲ್ಲಿ ಆಕೆಗೆ ಆರು ಮಕ್ಕಳಿದ ಸಂಗತಿಯಿದ್ದರೆ, ಈ ಮಾಧವಾಂಕ ಕಾವ್ಯದಲ್ಲಿ ಆಕೆಗೆ ಒಂಭತ್ತು ಮಕ್ಕಳಿದ್ದರೆಂದು ತಿಳಿಯುತ್ತದೆ. 'ದುಂಡಿ'ಯು ತಾನು ಧನವಂತ ಶೆಟ್ಟಿಯ ಸತಿಯಾಗಿದ್ದು ಮಹದೈಶ್ವರ್ಯ ವನ್ನನುಭವಿಸುತ್ತ ಒಂಭತ್ತು ಮಕ್ಕಳನ್ನು ಪಡೆದದ್ದು ಅವರೆಲ್ಲ ಮಡಿದದ್ದು, ಆಗ ಆಕೆ ಆರುತಿಂಗಳ ಗರ್ಭಿಣಿಯಾಗಿದ್ದು ಪತಿಯನ್ನೂ ಕಳೆದುಕೊಳ್ಳುತ್ತಾಳೆ. ಸಿರಿ, ಮನೆ, ಹೆತ್ತವರನ್ನೆಲ್ಲ ಕಳೆದುಕೊಂಡು ನಿರ್ಗತಿಕಳಾಗುತ್ತಾಳೆ. ಅದೇವೇಳೆಗೆ ಪರರಾಜನು ಆಪಟ್ಟಣಕ್ಕೆ ಮುತ್ತಿಗೆ ಹಾಕಿದ ಸಂಗತಿಯನ್ನು ಶಂಕರಕವಿಯು ಹೇಳಿಸುವುದು ಹೊಸ ಸಂಗತಿ. ಇದ್ದೊಬ್ಬ ಮಗನಿಗಾಗಿ ತಾನು ಜೀವಹಿಡಿದಿದ್ದು. ಈಗ ಆತನೂ ನೃಪಕುವರರ ಕುದುರೆಯ ಖುರಹತಿಗೆ ಸಿಕ್ಕು ಮಡಿದದ್ದನ್ನು ತಿಳಿಸಿ, ತಾನು ಜೀವಿಸಲಾರೆ ಎಂದು ರೋದಿಸಲು ಮಂತ್ರಿಯು ಚಿಂತಿಸಬೇಡವೆಲೆದುಂಡಿ, ಅರಸನಪ್ಪಣೆ ಪಡೆದು ನಿನಗೆ ಅನ್ನ ಅರುವೆಯಿತ್ತು ರಕ್ಷಿಸುತ್ತೇವೆ ರೋದನವ ಮರೆದು ವುಂಡುಟ್ಟು ಸುಖಮಿರ್ಪ್ಪುದು (೨೩-೩೩) ಎಂದು ಸಂತೈಸುತ್ತಾನೆ.

"ವುರಿಘ್ರುತದಿ ಪೆಚ್ಚಿದ ತೆರದಿ" (ಅದೇ ೨೩-೩೩)

ವುಂನತದದುಃಖವೆಘ್ಘಳಿಸಿ ಶಿಶುವಿನಗಲ್ಲ

ವಂನು ಚುಂಬಿಸಿ ಕಂಧ ನಿಂನಗಲಿ ಬೆಂದೊಡಲ

ಕುಂನಿ ಬಾಳಿಹ ತೆರದಿ ಪೊರದು ಬಾಳುವಳಲ್ಲವೆನುತ ಕರಕರದಳುತಿರೆ" (೨೩-೩೫)

ಕೋಪ ಹೆಚ್ಚಿಮಂತ್ರೀಶನು ಅಶನ ವಸನಗಳಿತ್ತು ರಕ್ಷಿಸುವೆವೆಂದರೂ

"ಛಲವಿಡಿದು ಮದ್ಭುತವ ಮಾಡುತಿರ್ಥಪಳಿವಳ ಪಿಡಿದೆಳದುದಬ್ಬೆನಲ್ಕೆ" (೨೩-೩೬)

ದೂತನು ಬಂದು ನಿರ್ದಯವಾಗಿ ಅವಳನ್ನು ನೂಕುತ್ತಾನೆ. ಇಲ್ಲಿ ಮಂತ್ರಿ ಮತ್ತು ದೂತನ ವರ್ತನೆ ತುಂಬ ಅನುಚಿತವಾಗಿದೆ. ರಾಜನಿಷ್ಠ ಮಂತ್ರಿಯನ್ನು ಚಿತ್ರಿಸಹೊರಟ ಶಂಕರಕವಿಯು ಈ ಅಮಾನವೀಯತೆಯ ದರ್ಶನ ಮಾಡಿಸಿ ಎಡವಿದ್ದಾನೆಂದೇ ಹೇಳಬೇಕಾಗುತ್ತದೆ. ಆದರೆ ಮಂತ್ರಿಯ ವರ್ತನೆಯನ್ನು ಖಂಡಿಸಿ ಅರಸ ಮಾಧವಾಂಕನು "ಅರ್ಭಕನನ್ನು ಕೊಂದವನ ಅಸುವನ್ನು ಈಶನಿಗೆಡೆಮಾಡುವುದೇ ನ್ಯಾಯ" (೨೩-೩೬) ಎಂದು ತೀರ್ಮಾನಿಸುತ್ತಾನೆ. ಅದನ್ನೊಪ್ಪದ ಮಂತ್ರಿಯು

"....... ಕರಿದಲೆಗೆ ಶ್ರೀಪಟ್ಟ

ದಾನೆಯನು ಬಲಿಗೊಡುವರುಂಟೆ" (ಅದೇ ೨೩-೩೮)

ತಿರುಕಿಯ ಕೂಸಿಗೆ ಅರಸನ ಪುತ್ರನನ್ನು ಬಲಿಕೊಡುವುದನ್ನು ಜನರುಮೆಚ್ಚುವುದಿಲ್ಲವೆಂದು ಪ್ರತಿ ನುಡಿಯುತ್ತಾನೆ. ಪರಸ್ಪರರಲ್ಲಿ ದೀರ್ಘ ಸಂವಾದ ನಡೆಯುತ್ತದೆ. ಕೊನೆಗೆ ಅರಸ ಮಾಧವಾಂಕನು

ಯಂನಹಿತವರುಯೆಂದು ನಿಂಮನಾಂಬಗದಿರ್ಥೆ

ಯಂನ ಸತ್ಯಕ್ಕೆಡರತಾಹ ಶತ್ರುಗಳು ನೀವು (ಅದೇ ೨೩-೬೩)

ಎಂದು ಇನ್ನು ಮರುಮಾತನಾಡಿದರೆ ಶಂಭುದೇಶಿಕನಂಘ್ರಿಯಾಣೆ ಎಂದು ಗುಡುಗುತ್ತಾನೆ. 'ಶಾಂತಕವಿ'ಯ ಸತ್ಯೇಂದ್ರ ಚೋಳ ಚಾರಿತ್ರದಲ್ಲಿನ ಮಂತ್ರಿ ರಾಜರ ಸಂವಾದವು ಶಂಕರಕವಿಗೆ ಪ್ರೇರಣೆ ನೀಡಿರುವುದನ್ನು ಕಾಣಬಹುದು.

ಎಲವದ ಮರಕಾಗಿ ಸಲೆ ಕಲ್ಪವೃಕ್ಷವ | ಬಲುಗೆರೆಯನು ಬಾವಿಗಾಗಿ

ಅಳಿವರೆ ಚಿಟ್ಟೆಯ ಪುಳಕಾಗಿ ಓದುವ | ಗಿಳಿಯ ಕೊಲ್ವರೆಭೂಮಿಪಾಲ[೫]

ಎಂದು ಮಂತ್ರಿಯು ನೃಪಕುವರನ ವಧೆಯ ನಿರ್ಣಯ ಸರಿಯಲ್ಲವೆಂದು ತಿಳಿಸುವ ಪ್ರಯತ್ನ ಮಾಡುತ್ತಾನೆ. ರಾಜನು ವಿವಿಧ ನಿದರ್ಶನಗಳಿಂದ ತನ್ನ ಮಾತನ್ನು ಸಮರ್ಥಿಸಿಕೊಂಡಾಗ ಮಂತ್ರಿಯು "ಅರಸನಿಗೆ ಪ್ರತ್ಯುತ್ತರವನ್ನಿತ್ತ ತನ್ನ ಅಪರಾಧವನ್ನು ಮನ್ನಿಸಲು ಕೇಳಿಕೊಳ್ಳುತ್ತಾನೆ" (ಅದೇ ೭-೮೧) ರಾಜಶೇಖರ

ವಿಳಾಸ ಮತ್ತು ಭಾವಚಿಂತಾರತ್ನದಲ್ಲಿ ಮಂತ್ರಿಯ ಪಾತ್ರ ಆಜ್ಞಾಧಾರಿ ಸೇವಕನಂತೆ ಚಿತ್ರಿತವಾಗಿದ್ದರೆ. 'ಶಂಕರಕವಿ'ಯ ಈ ಕಾವ್ಯದಲ್ಲಿ ಅಪ್ಪಟ ಲೌಕಿಕತೆಯ ವಾಸ್ತವಿಕತೆಯ ಪ್ರತಿನಿಧಿಯಾಗಿದೆ. ಮಾಧವಾಂಕನು ಮಂತ್ರಿಯ ಮಾತನ್ನೆಲ್ಲ ಆಲಿಸಿ ಪ್ರತಿಕ್ರಿಯಿಸುವ ಪ್ರಜ್ಞಾವಂತ ಅರಸನಾಗಿ ಕಾಣಿಸಿಕೊಳ್ಳುತ್ತಾನೆ. ತನ್ನ ಕುವರನ ತಲೆಯನ್ನು ಕಡಿದು ತರಲು ಮಂತ್ರಿಗೆ ಆಜ್ಞಾಪಿಸುವ ಸಂಗತಿಯಲ್ಲಿ ಮಲ್ಲಣಾರ್ಯ ಮತ್ತು ಷಡಕ್ಷರರಲ್ಲಿ ಸಾಮ್ಯತೆಯಿದ್ದರೆ ಶಂಕರಕವಿಯಲ್ಲಿ ''ಮಾಧವಾಂಕನು ತನ್ನ ಕುವರನ ಬಲಿಗೆ ಪತ್ನಿಯ ಅಭಿಪ್ರಾಯವನ್ನು ಕೇಳಿ ನಿರ್ಧರಿಸುವಂತೆ ಚಿತ್ರಿತವಾಗಿರುವುದು ವಿಶೇಷವಾಗಿದೆ'' (೨೪-೧೪) ತನ್ನ ಶಿರಗೊಡಲು ಹೊರಟ ಮಗನನ್ನು ತಾಯಿಯು ಆಶೀರ್ವದಿಸುವ ಪ್ರಸಂಗವು ಭಾವಚಿಂತಾರತ್ನ, ರಾಜಶೇಖರ ವಿಳಾಸ ಕಾವ್ಯಗಳಿಗಿಂತ ಮಾಧವಾಂಕಕಾವ್ಯದಲ್ಲೇ ಚೆನ್ನಾಗಿ ಮೂಡಿಬಂದಿದೆ.

ವಧಾಸ್ಥಾನಕ್ಕೆ ನೃಪಸುತನನ್ನು ಕರೆದೊಯ್ಯುವ ಸಂದರ್ಭದ ಚಿತ್ರಣದಲ್ಲಿ ಶಂಕರಕವಿಯು ಸ್ವಂತಿಕೆ ಮೆರೆದಿದ್ದಾನೆ. ಪುರಜನರ ಪ್ರಲಾಪ ಮೂಲಕ್ಕಿಂತ ಇಲ್ಲಿ ಸೊಗಸಾಗಿದೆ. (೨೪-೩೪ರಿಂದ ೪೩) ಕೊನೆಯ ದೃಶ್ಯವಂತೂ ಉಗ್ರವಾಗಿದೆ. ಭವ್ಯವಾಗಿದೆ. ಕೊನೆಗೆ ಮಂಗಳಕರವೂ ಆಗಿದೆ.[೪೬]

ಪುರದ ಬಹಿರುದ್ಯಾನಕ್ಕೆ ಬಂದು ಶಿವಸ್ಮರಣೆ ಮಾಡಿ ವಧೆಯಾಗಲು ಕುಳಿತ ಮಂತ್ರಲಕ್ಷನನ್ನು ಕುರಿತು ತನ್ನ ಭೃತ್ಯತ್ವಕ್ಕೆ ಹಾನಿಯಾದರೂ ಚಿಂತೆಯಿಲ್ಲ ಪಂಚಾಕ್ಷರಿಯನ್ನು ಮರೆಯದೆ ಉಚ್ಚರಿಸೆಂದು ಸಂದಾಯಿಯು ಎಚ್ಚರಿಸುತ್ತಾನೆ. ಅಂತೆಯೇ ಸಂದಾಯಿಯ ಕತ್ತಿಯ ಏಟಿಗೆ ಕುತ್ತಿಗೆ ಕತ್ತರಿಸಿ ತಲೆ ಆಗಸಕ್ಕೆ ಹಾರಿತು. ಸಂದಾಯಿ ಒಡ್ಡಿದ ಕೈಯಲ್ಲಿ ಮಂತ್ರಲಕ್ಷನ ತಲೆ ಮಂಡಿಸಿ ಪಂಚಾಕ್ಷರಿಯನ್ನುಚ್ಚರಿಸ ತೊಡಗಿತು. ರಾಜಸಭೆಗದನ್ನು ತಂದು ಸಂದಾಯಿಯು ಅರಸನಿಗೊಪ್ಪಿಸಿದನು. ಎಲ್ಲರೂ ಚಕಿತರಾಗಿರಲು ಇದು ಹೇಗಾಯ್ತೆಂದು ರಾಜನು ಕೇಳಿದ ಪ್ರಶ್ನೆಗೆ ಸಂದಾಯಿಯು ನಡೆದ ಸಂಗತಿಯನ್ನು ವಿವರಿಸಿ ತನ್ನ ತಲೆಯನ್ನು ತಾನೇ ಕತ್ತರಿಸಿಕೊಂಡು ಎಡಗೈಯಲ್ಲಿ ಧರಿಸಲು ಅದೂ ಪಂಚಾಕ್ಷರಿ ಮಂತ್ರವನ್ನುಚ್ಚರಿಸತೊಡಗಿತು. ಆಮಂತ್ರಾಮೃತದಿಂದ ಶಂಕರನ ತಲೆಗೂ ಪ್ರಾಣಬಂದು ಅದೂ ಪಂಚಾಕ್ಷರಿಯನ್ನುಚ್ಚರಿಸತೊಡಗಿತು. ಅರಸನ ಪುತ್ರನ ತಲೆ ತನ್ನ ಪುತ್ರನಿಗೆ ಸಮ. ಭೃತ್ಯನ ತಲೆಗೆ ನನ್ನ ತಲೆಯನೀವೆನೆಂದು ತಿರುಕೊಳ ವಿನಾಚಿಯೂ ತಲೆಯನ್ನೊಪ್ಪಿಸುತ್ತಾಳೆ. ಅರಸ, ಮಂತ್ರಿಸುತ ಮಿತವಚನರೂ ತಲೆಯನ್ನು ಕತ್ತರಿಸಿಕೊಳ್ಳಲು ಸತ್ಯೇಂದ್ರನ ರಾಣಿಯೂ ತಲೆಗಡಿದುಕೊಳ್ಳಲು ಸನ್ನದ್ಧಳಾಗಿ ವೀರಶಿವಶರಣರನ್ನು ನೆನೆದು ತನ್ನ ಕುತ್ತಿಗೆಯನ್ನು ಕೊರೆಯತೊಡಗಲು ಉಮಾಸಹಿತ ಶಿವನು ಪ್ರಸನ್ನನಾಗಿ ಇವರಲ್ಲಿ ನಿನಗಾರ್ ಬದುಕಬೇಕು? ಎಂದು ಕೇಳುತ್ತಾನೆ. 'ಆ ಬಾಲ ಶಂಕರನ ಪ್ರಾಣವನ್ನುಳಿಸಲು ಬೇಡುತ್ತಾಳೆ. ಪರಶಿವನು ಎಲ್ಲರಿಗೂ ಪ್ರಾಣವನ್ನು ಮರಳಿ ನೀಡುತ್ತಾನೆ. ದೇವ ದುಂದುಭಿಗಳು ಮೊಳಗಿದವು ಅಲ್ಲಲ್ಲಿ ಬಿದ್ದಿದ್ದ ಅಟ್ಟೆಗಳು ತಮತಮಗೆ ನಲಿದು ಬಂದು ತಮ್ಮ ತಲೆಯೊಡನೆ ಸೇರಿಕೊಂಡವು. ಮಹಾಮಸ್ತಕ ವನ್ನು ಪಡೆದ ಆನಿಷ್ಮರೆಲ್ಲ ಉಮಾಮಹೇಶ್ವರರಿಗೆ ವಂದಿಸಿದರು ಸತ್ಯೇಂದ್ರಚೋಳನು ಶಿವನನ್ನು ಕೊಂಡಾಡಲು ಎಲ್ಲರನ್ನೂ ಕೈಲಾಸಕ್ಕೆ ಕರೆದೊಯ್ದು ರುದ್ರಗಣಪದವಿಯನ್ನು ನೀಡುತ್ತಾನೆ. ಈ ಪ್ರಸಂಗವು ಭಾವಚಿಂತಾರತ್ನ

[illegible]

ರಾಜಶೇಖರ ವಿಳಾಸಗಳಲ್ಲಿ ನಂತೆಯೇ ಮಾಧವಾಂಕ ಕಾವ್ಯದಲ್ಲಿ ಚಿತ್ರಿತವಾಗಿದ್ದರೂ ಮಾಧವಾಂಕನು ತನ್ನ ತಲೆಗಡಿದು ಕೊಳ್ಳುವಷ್ಟರಲ್ಲಿಯೇ ಶಿವನು ಪ್ರತ್ಯಕ್ಷನಾಗಿ ತಡೆಯುತ್ತಾನೆ. ರಾಣಿವಾಸದವರೊಡನೆ ಮಾಧವಿಯು ಆರತಿಯನ್ನು ಬೆಳಗುತ್ತಾಳೆ. ಹೀಗೆ ಕಥಾವಸ್ತುವಿನ ದೃಷ್ಟಿಯಿಂದ ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾ ರತ್ನ'ವನ್ನು ಬಹುಪಾಲು ಅನುಸರಿಸಿದ್ದರೂ ಯಥಾವತ್ತಾಗಿ ಅನುಕರಿಸದೆ ಸಾಂದರ್ಭಿಕವಾಗಿ ಕೆಲವು ಬದಲಾವಣೆ ಗಳನ್ನು ಮಾಡಿಕೊಂಡು ಸ್ವಂತಿಕೆಯನ್ನು ಮೆರೆದಿದ್ದಾನೆ. ನಿರ್ವಹಣೆಯ ದೃಷ್ಟಿಯಿಂದ 'ಷಡಕ್ಷರದೇವನ ರಾಜಶೇಖರ ವಿಳಾಸ'ದಂತೆ ಅಷ್ಟಾದಶ ವರ್ಣನೆಗಳನ್ನು ತರುವ ಪ್ರಯತ್ನದಲ್ಲಿ ಮಾಧವಾಂಕ ಕಾವ್ಯದ ಗಾತ್ರ ಹಿಗ್ಗಿದೆಯೇ ಹೊರತು ಷಡಕ್ಷರದೇವನ ಸತ್ವವನ್ನು ಒಳಗೊಳ್ಳಲು ಸಾಧ್ಯವಾಗಿಲ್ಲ.

ಕೊನೆಯ ಟಿಪ್ಪಣಿಗಳು

೧. ಡಾ. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧

೨. ಅದೇ ಪು. ೨

೩. ಡಾ. ಎಂ.ಎಂ.ಕಲಬುರ್ಗಿ, ಬಸವಮಾರ್ಗ, ಸಂಪುಟ ೧, ಸಂ ಪು.

೪. ಸಿ.ವೀರಣ್ಣ, ಕನ್ನಡ ಸಾಹಿತ್ಯದ ಚಾರಿತ್ರ ಬೆಳವಣಿಗೆ, ಪು. ೪೧೯

೫. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೪೨೮

೬. ಎಂ.ಚಿದಾನಂಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೯

೭. ಫ್ಲೀಟ್, Imperial Gazetter of India II, byfleet, p.6

೮. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೨೭೯

೯. ಅದೇ, ೨೭೯

೧೦. ಅದೇ, ೨೮೧

೧೧. ಆರ್.ಸಿ.ಹಿರೇಮಠ, (ಸಂ) ಭೀಮಕವಿ ಬಸವಪುರಾಣ, ೩೩೬

೧೨. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೩೧೧

೧೩. ತೀ.ನಂ.ಶ್ರೀಕಂಠಯ್ಯ, ಭಾರತೀಯ ಕಾವ್ಯ ಮೀಮಾಂಸೆ, ಪು. ೩೦೫

೧೪. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೭೩

೧೫. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೪೨೫ ಮಲ್ಲಣಾರ್ಯ

೧೬. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೪೨೬

೧೭. ಡಾ. ಆರ್.ಸಿ.ಹಿರೇಮಠ ಮತ್ತು ಡಾ. ಸುಂಕಾಪುರ, ರಾ.ವಿ.ಸಂ., ಪ್ರಸ್ತಾವನೆ, ಪು. ೫೫

೧೮. ಸಮಗ್ರ ಕ.ಸಾ.ಚ.ಪು. ಸಂ.೭೩

೧೯. ಅದೇ, ಪು. ೪೨೬

೨೦. ಡಾ. ಡಿ.ಎಸ್.ಕರ್ಕಿ, ಛಂದೋವಿಕಾಸ, ಪು. ೧೮೪

೨೧. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೨೬೬

೨೨. ಡಾ. ಡಿ.ಎಸ್.ಕರ್ಕಿ, ಛಂದೋವಿಕಾಸ, ಪು. ೧೮೪

೨೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೪೩೨

೨೪. ಡಾ. ಎಫ್.ಟಿ.ಹಳ್ಳಿಕೇರಿ, ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಪು. ೨೫೮

೨೫. ಡಾ. ಎಫ್.ಟಿಹಳ್ಳಿಕೇರಿ ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಪು. ೨೫೯

೨೬. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೩೬೫

೨೭. ಎಸ್.ಬಸಪ್ಪ, (ಸಂ) ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ ಕೃತಿಪರಿಚಯ, ಪು. ೮೩

೨೮. ತೀನಂ.ಶ್ರೀ., ಭಾರತೀಯ ಕಾವ್ಯ ಮೀಮಾಂಸೆ, ಪು. ೧೩೧

೨೯. ತೀ.ನಂ.ಶ್ರೀ., ಭಾರತೀಯ ಕಾವ್ಯ ಮೀಮಾಂಸೆ, ಪು. ೧೩೧ ಮೂಲಃ ಕಾವ್ಯ ಪ್ರಕಾಶ

೩೦. ಆರ್.ಸಿ.ಹಿರೇಮಠ ಮತ್ತು ಎಂ.ಎಸ್.ಸುಂಕಾಪುರ, (ಸಂ) ರಾಜಶೇಖರ ವಿಳಾಸಂ ಪ್ರಸ್ತಾವನೆ, ಪು. ೫೮

೩೧. ಸಿ.ಮಹಾದೇವಪ್ಪ, (ಸಂ) ಭಾವಚಿಂತಾರತ್ನ, ಪು. ೩೮

೩೨. ಸಿ.ಮಹಾದೇವಪ್ಪ, (ಸಂ) ಭಾವಚಿಂತಾರತ್ನ ಪೀಠಿಕೆ, ಪು. ೩೯

೩೩. ಅದೇ, ಪು. ೩೯

೩೪. ಸಿ.ಮಹಾದೇವಪ್ಪ, (ಸಂ) ಭಾವಚಿಂತಾರತ್ನ, ಪು. ೧೧

೩೫. ಜಿ.ಜಿ.ಮಂಜುನಾಥನ್, (ಸಂ) ಸತ್ಯೇಂದ್ರಚೋಳ ಚಾರಿತ್ರ, ಪು. ೨೦

೩೬. ಅದೇ, ಪು. ೩೮

೩೭. ಜಿ.ಜಿ.ಮಂಜುನಾಥನ್, (ಸಂ) ಸತ್ಯೇಂದ್ರ ಚೋಳ ಚಾರಿತ್ರ ಪೀಠಿಕೆ, ಪು. ೨೦

೩೮. ಡಾ. ಆರ್.ಸಿ.ಹಿರೇಮಠ, (ಸಂ) ವೀರಶೈವಾಮೃತ ಪುರಾಣ, ಪ್ರಸ್ತಾವನೆ ಪು. ೧೩

೩೯. ಜಿ.ಜಿ.ಮಂಜುನಾಥನ್, (ಸಂ) ಸತ್ಯೇಂದ್ರಚೋಳ ಚಾರಿತ್ರ ಪೀಠಿಕೆ, ಪು. ೧

೪೦. ಮಲ್ಲಣಾರ್ಯನ ಭಾವಚಿಂತಾರತ್ನ ಸಂಧಿ ೧-೩೨ರಿಂದ ೪೪

೪೧. ರಾಜಶೇಖರ ವಿಳಾಸಂ, ಪ್ರಥಮಾಶ್ವಾಸ, ಪು. ೭೩ರಿಂದ ೭೬

೪೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೭೧

೪೩. ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ, ರಾಜಶೇಖರ ವಿಳಾಸಂ (ಸಂ) ಪ್ರಸ್ತಾವನೆ, ಪು. ೫೫

೪೪. ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ, (ಸಂ) ರಾಜಶೇಖರ ವಿಳಾಸಂ, ಪ್ರಸ್ತಾವನೆ, ಪು. ೫೫

೪೫. ಶಾಂತಕವಿ ಸತ್ಯೇಂದ್ರಚೋಳ ಚಾರಿತ್ರ ೭-೬೯

೪೬. ಡಾ. ಆರ್.ಸಿ.ಹಿರೇಮಠ ಮತ್ತು ಎಂ.ಎಸ್.ಸುಂಕಾಪುರ (ಸಂ) ರಾಜಶೇಖರ ವಿಳಾಸಂ, ಪ್ರಸ್ತಾವನೆ ಪು. ೫೫

ಅಧ್ಯಾಯ ೫

ಚೋರಬಸವೇಶ್ವರ ಕಾವ್ಯ

ಅಧ್ಯಾಯ ೫

ಚೋರಬಸವೇಶ್ವರ ಕಾವ್ಯ

೫.೧. ಕೃತಿಯ ಸ್ವರೂಪ

ಕೋಳೂರು ಶಂಕರಕವಿ ವಿರಚಿತ ಚೋರಬಸವೇಶ್ವರ ಕಾವ್ಯವು ೧೩ ಸಂಧಿ, ೭೫೫ ವಾರ್ಧಕ ಷಟ್ಪದಿಗಳನ್ನೊಳಗೊಂಡಿದೆ. ಇದು ಬಸವಣ್ಣನವರ ಜಂಗಮ ಪ್ರೇಮವನ್ನು ವಿನೂತನ ರೀತಿಯಲ್ಲಿ ಹೇಳಹೊರಟಿರುವ ಕೃತಿ. ಪ್ರತಿಯೊಂದು ಸಂಧಿಯ ಆರಂಭದಲ್ಲಿನ 'ಸೂಚನೆ'ಯಲ್ಲಿ ಆಯಾಸಂಧಿಯು ಒಳಗೊಂಡಿರುವ ಕಥಾವಸ್ತುವನ್ನು ಸೂಚ್ಯವಾಗಿ ತಿಳಿಸುತ್ತಾನೆ. ಕೋಳೂರ ರಾಮೇಶ ಕವಿಯ ಇಷ್ಟದೇವತೆ "....... ಶ್ರೀರಾಮೇಶ ಹೃದಯ ಕಮಲದೊಳಿರ್ದು ನುಡಿಸಿದಡೆ ಪೇಳಿದೆನು ಶಂಕರ ಶರಣಕಿಂಕರ" ಎಂದು ಪ್ರತಿ ಸಂಧಿಯ ಅಂತ್ಯದಲ್ಲಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಉಭಯ ಭಾಷಾವಿಶಾರದನಾದ ಶಂಕರ ಕವಿಯು ಸಂಸ್ಕೃತ ಕನ್ನಡ ಶಬ್ದಗಳ ಹಿತಮಿತವಾದ ಸಂಮಿಶ್ರಣದಲ್ಲಿ ಪಾರ್ವತಿಯನ್ನೊಳಗೊಂಡು ಶಿವಪುತ್ರರನ್ನು ಪ್ರಮಥರನ್ನು, ನೂತನ ಪುರಾತನರನ್ನು ಸ್ತುತಿಸಿದ್ದಾನೆ. ಪೂರ್ವಕವಿ ಸ್ಮರಣೆ ಕಾವ್ಯರಚನೆಯ ರೀತಿ. ವಿನಯೋಕ್ತಿಗಳ ತರುವಾಯ ಕಥಾನಿರೂಪಣೆ ಮುಂದುವರಿಯುತ್ತದೆ. ಏಕತಾನತೆಯನ್ನು ನಿವಾರಿಸಲು ಹರಿಹರ ಶಿವಾಚಾರ್ಯನು ಚಾಮರಸನಿಗೆ ಈ ಕಾವ್ಯವನ್ನು ಹೇಳಿದಂತೆ ಕಲ್ಪಿಸಿರುವುದು ಸೊಗಸಾಗಿದೆ(೧-೪೧).

ಪ್ರತಿಯೊಂದು ಸಂಧಿಯೂ

> ಇದು ಚೋರ ಬಸವ ಚಾರಿತ್ರಾಭಿಧಾನಮ
> ತ್ತಿದ ಪೇಳ್ದಹಂಪೆ ಹರಿಹರ ಶಿವಾಚಾರ್ಯ ಸ
> ಮ್ಮುದದಳಿಯೆ ಲೀಲೆ ಚಾಮರಸನೊಳು ಇದನು ಕೃತಿಗೈದವನದಾರೆಂದೆನೆ
> ವದನ ಭೂವನಿತೆಗೆಂದೆಂಬ ಶ್ರೀ ಕೋಳೂರ
> ಸದನ ಸಿಂಹಾಸನಾಧೀಶ ಶ್ರೀರಾಮೇಶ
> ಹೃದಯ ಕಮಲದೋಳಿರ್ದು ನುಡಿಸಿದೊಡೆ ಪೇಳಿದೆನು ಶಂಕರ ಶರಣಕಿಂಕರ

ಎಂದು ಮುಕ್ತಾಯವಾಗುತ್ತದೆ.

[illegible]

[illegible]

[illegible]

[illegible]

[illegible]

[illegible]

ಈ ಕಾವ್ಯವನ್ನು ಡಾ. ಎಂ.ಎಸ್.ಸುಂಕಾಪುರ ಮತ್ತು ಪಂ. ನಾಗಭೂಷಣಶಾಸ್ತ್ರಿಗಳವರು ಸಂಪಾದಿಸಿದ್ದಾರೆ. ಬೆಲೆಯುಳ್ಳ ಪ್ರಸ್ತಾವನೆಯೊಂದಿಗೆ ಶಬ್ದಕೋಶವನ್ನು ನೀಡಿ ಉಪಕರಿಸಿದ್ದಾರೆ.

ಕಾವ್ಯಸಾರ

೧ನೆಯ ಸಂಧಿ: ಶ್ರೀಪರಮನಂದೀಶನು ಶಿವನಪ್ಪಣೆಯಂತೆ ಭೂಮಿಯಲ್ಲಿ ಜನಿಸಿ ಜಂಗಮರನ್ನು ಕದ್ದೊಯ್ದು ಗೆದ್ದಂತಹ ಚೋರಬಸವ ಸುಚರಿತವನ್ನು ಹೇಳುವೆನು ಎಂದು 'ಸೂಚನೆ'ಯಲ್ಲಿ ತನ್ನ ಕಾವ್ಯದ ಕಥಾವಸ್ತುವಿನ ಕುರಿತು ಸೂಚ್ಯವಾಗಿ ತಿಳಿಸುತ್ತಾನೆ.

ಕವಿಯ ಆರಾಧ್ಯದೈವ 'ಕೋಳೂರ ರಾಮೇಶ್ವರ'ನ ಸ್ತುತಿಯೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ. ವಿಶಾಲ ಕಣ್ಣುಳ್ಳ ಚಂದ್ರಮುಖಿಯಾದ ಪಾರ್ವತಿಯೇ

"ಶಿವಸಭಾಮಧ್ಯದೊಳ್ ಶಿವನ ನಾಮದೊಳಿರ್ದು
ಶಿವನಮನಕತಿ ಸೊಬಗ ತೋರ್ಪಂತೆ ಮತ್ಕೃತಿಯ
ಶಿವಭಕ್ತರುಂ ಮೆಚ್ಚುವಂತೆ ನಿರ್ವಿಘ್ನತೆಯನಿತ್ತು ರಕ್ಷಿಸು ಮೃಡಾಣೀ (೧-೮)

ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತಾನೆ. ತನ್ನ ಕಾವ್ಯವು ಶಿವಭಕ್ತರು ಮೆಚ್ಚುವಂತಾಗಬೇಕೆಂಬ ಅಭಿಲಾಷೆ ಕವಿಯದು. ಇಲ್ಲಿ ತನ್ನದು "ಗಿರೀಶನಿಗೆ ತನ್ನ ನಾಲಗೆಯನ್ನು ಮಾರಿದ ಹರಿಹರನುದಿತ ಮಾರ್ಗ" ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ತನಗೇನೋ ಶಿವನ ಒಲವುಂಟು ಆದರೆ ಶಿವೆಯ ಒಲವೂ ಬೇಕೆಂದು ಪ್ರಾರ್ಥಿಸುವ ಪದ್ಯ ತುಂಬ ಮಾರ್ಮಿಕವಾಗಿದೆ(೧-೯).

ಶಿವನೊಡನೆ ಶಿವೆಯ ಸಹಾಯವೂ ದೊರೆತರೆ 'ರತ್ನ'ಕ್ಕೆ ಕುಂದಣ ಜೋಡಿಸಿದಂತಾಗುತ್ತದೆ. ಆದ್ದರಿಂದ ನಾನು ಈ ಕೃತಿಗೆ ವಿಘ್ನ ಉಂಟಾಗದಂತೆ ವರವನೀಡೆಂದು ನಿನ್ನಲ್ಲಿ ಪ್ರಾರ್ಥಿಸುತ್ತೇನೆ ಎನ್ನುತ್ತಾನೆ. ತದನಂತರ ದಲ್ಲಿ ನಂದಿ, ಭೃಂಗಿ, ವೀರಸ್ಕಂದ, ಗಣೇಶ ಮೊದಲಾದ ಶಿವಪುತ್ರ ಪ್ರಮಥರನ್ನು ಹರಭಕ್ತ ಬಸವ, ಚನ್ನಬಸವ, ಮಡಿವಾಳ ಮಾಚಿದೇವ, ಕಿನ್ನರ ಹೊನ್ನಿತಂದೆ, ಬಾಚರಸ, ಕಕ್ಕಯ್ಯ, ಚಿಕ್ಕಯ್ಯ, ನಾಗಾಂಬೆ, ನೀಲಾಂಬಿಕೆ ಮೊದಲಾದ ನೂತನ ಪುರಾತನರನ್ನು ಭಕ್ತಿಯಿಂದ ನಮಸ್ಕರಿಸುತ್ತಾನೆ.

ಶಂಕರನ ಚಿತ್ಕಳೆಯನ್ನೆ ಕಾಯವನ್ನಾಗಿ ಧರಿಸಿ, ನಿರ್ಮಾಯೆ ಸ್ವರೂಪನಾದ, ನಿತ್ಯನಿರ್ಗುಣ ಖ್ಯಾತಿಯನ್ನು ಪಡೆದ ಬಸವಾದಿಪ್ರಮಥರಿಗೆ ಗುರುಸ್ವರೂಪನಾಗಿ ಬಂದು ಷಟ್‌ಸ್ಥಲ ಮರ್ಮವನ್ನು ತಿಳಿಸಿ, ವೀರಶೈವ ಧರ್ಮವನ್ನು ಉದ್ಧರಿಸಿ, ಬಯಲೊಳಗೆ ಬಯಲಾದ ಪ್ರಭುವೇ ನಿರ್ವಿಘ್ನವನ್ನು ದಯಪಾಲಿಸು.

ಕಾಳಿದಾಸ, ಬಾಣ, ಮಯೂರ, ಭೋಜ, ಪಾಲ್ಕುರಿಕೆ ಸೋಮನಾಥ, ಹರಿಹರ, ಚಾಮರಸ, ರಾಘವಾಂಕ, ಕೆರೆಯ ಪದ್ಮರಸ ಮುಂತಾದ ಶಿವಕವಿಗಳು "ಚವುಷಷ್ಟಿ ವಿದ್ಯಂಗಳೊಳ್ ಲೋಲರು" (೧-೧೨) 'ಶಿವನಿಗಿಂತ

ಹಿರಿಯರಿಲ್ಲ' ಎಂಬ ಮಾತನ್ನು ಮೂಢನಾದ ನನ್ನಿಂದ ಹೇಳಿಸುವಲ್ಲಿ ಅವರ ಬೆಂಬಲ ನನಗಿರಲಿ ಎಂದು ಅಪೇಕ್ಷಿಸುತ್ತಾನೆ.

ನನ್ನ ಕೃತಿಯೊಳಗೆ "ಲಕ್ಷಣವ ನೋಡಬೇಡಿ" (೧-೧೨) "ಅಂತರಿಕ್ಷದಿ ಸಿಡಿಲುಗುಳ್ದ ಬಾವಿಗಂ ಸೋಪಾಗ ವೀಕ್ಷಿಸಲುಂಟೇ? (೧-೧೨) ಶಿವನ ವರಪ್ರಸಾದಿಗೆ ಲಕ್ಷಣವುಂಟೇ? ನಿಟಿಲಾಕ್ಷನ ಬೆಸನಿಂದ ಪೇಳ್ದ ಕಬ್ಬಂ" (೧-೧೨) ಸತ್ಪುರುಷರಾದವರು ಶಿವಕೃಪೆಯಿಂದ ರಚಿತವಾದ ಈ ಕಾವ್ಯವನ್ನು ಸಲಕ್ಷಣವೆಂದೇ ಭಾವಿಸುವವರು. ಕುಕವಿಗಳು ಇದನ್ನು ಜರಿದರೇನು?

ಇದು ಚೋರಬಸವ ಚಾರಿತ್ರಾಭಿಧಾನಮ
ತ್ತಿದ ಪೇಳ್ದ ಹಂಪೆ ಹರಿಹರ ಶಿವಾಚಾರ್ಯ ಸ
ಮ್ಮುದದಳಿಯೆ ಲೀಲೆ ಚಾಮರಸನೊಳು ಯಿದನು ಕೃತಿಗೈದವನದಾರೆಂದೆನೆ
ವದನಭೂವನಿತೆಯೆಂದೆಂಬ ಶ್ರೀ ಕೋಳೂರ
ಸದನ ಸಿಂಹಾಸನಾಧೀಶ ಶ್ರೀ ರಾಮೇಶ
ಹೃದಯ ಕಮಲದೊಳಿರ್ದು ನುಡಿಸಿದಡೆ ಪೇಳಿದೆನು ಶಂಕರಶರಣ ಕಿಂಕರ (೧-೧೪)

ಈ ಕೃತಿಯ ಹೆಸರು ಚೋರಬಸವಚಾರಿತ್ರ್ಯ. ಈ ಕಥೆಯನ್ನು ಪ್ರಪ್ರಥಮವಾಗಿ ಹಂಪೆಯ ಹರಿಹರ ಶಿವಾಚಾರ್ಯರು ಚಾಮರಸನಿಗೆ ಹೇಳಿದರು. ಈ ಕಥೆಯನ್ನೇ ಶ್ರೀಕೋಳೂರ ರಾಮೇಶನ ಅನುಗ್ರಹದಿಂದ 'ಶರಣಕಿಂಕರ'ನಾದ ನಾನು ಕಾವ್ಯವನ್ನಾಗಿ ಕಟ್ಟಿ ಹೇಳಿದ್ದೇನೆ.

'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' ಎಂದು ಕುಮಾರವ್ಯಾಸನು ವಿನಯ ಮೆರೆದಂತೆ ಶಂಕರಕವಿಯು... ಶ್ರೀರಾಮೇಶ ಹೃದಯ ಕಮಲದೊಳಿರ್ದು ನುಡಿಸಿದಡೆ ಪೇಳಿದೆನು (೧-೧೪) ಎಂದು ಸೌಜನ್ಯತೆಯನ್ನು ತೋರ್ಪಡಿಸಿದ್ದಾನೆ.

ಕನ್ನಡ ನಾಡಿನ ಅಭಿವರ್ಣನೆಯೊಂದಿಗೆ ಕಾವ್ಯವು ವಿದ್ಯುಕ್ತವಾಗಿ ಪ್ರಾರಂಭವಾಗುತ್ತದೆ.

'ಸಪ್ತಶರಧಿಮಧ್ಯ'ದಲ್ಲಿ ಜಂಬೂದ್ವೀಪ ಅದರಮಧ್ಯದ ಭೂಪ್ರದೇಶವೇ ಕನಕಾಚಲ, ಅದರ ದಕ್ಷಿಣ ಕ್ಕಿರುವುದೇ ಭರತಖಂಡ ಅದರೊಳಗೆ ಮೆರೆಯುತ್ತಿರುವ ಛಪ್ಪನ್ನದೇಶಂಗಳಲ್ಲಿಯೆ ವಿಶಿಷ್ಟವಾದದ್ದು ಕುಂತಳಾಹ್ವಯದೇಶ, ಅಂದರೆ ಕನ್ನಡದೇಶ. ಅಲ್ಲಿ 'ದಕ್ಷಿಣಸುಕಾಶಿ' ಶಿವವಾಸಿ, ಮುಕ್ತಿಯನಿವಾಸಿ(೧-೧೫)ಯಂತೆ ಶೋಭಿಸುತ್ತಿರುವ ಸುಕ್ಷೇತ್ರವೇ ಕಿಷ್ಕಿಂದ ಅಂದರೆ ಹಂಪೆಯನಾಡು. ಈ ನಾಡಿನಲ್ಲಿ ಪ್ರಸಿದ್ಧ ವಾಗಿರುವ ಹೇಮಕೂಟಾದಿ ಪಂಚ ಪರ್ವತಗಳ ಮಧ್ಯದಲ್ಲಿ 'ತುಂಗಭದ್ರಾ ನದಿ' ಭೋರ್ಗರೆದು ಹರಿಯುತ್ತಿದೆ. ಅದರ ವರ್ಣನೆಯನ್ನು ಕವಿಯ ಮಾತುಗಳಲ್ಲೇ ಆಲಿಸಬೇಕು.

ಸಸಿನೆ ಕಂಡಡೆಯು ಸೋಂಕಿದಡೆ ಸ್ನಾನಂಮಾಡೆ
ವೊಸೆದು ಪಾನಂಗೈಯ್ಯೆ ದುರ್ಘಟದ ಬ್ರಹ್ಮೇತಿ
ವಿಸರವೊಸರುತ್ತಿಹುದು ಭಕ್ತಿ ಮುಕ್ತೀಷ್ಟಾರ್ಥಮಹುದುವದ ಸಾರಿದರ್ಗೆ (೧-೧೬)

ತುಂಗೆಯನ್ನು ಕಂಡರೇನೇ ಪುಣ್ಯ. ಸ್ಪರ್ಶಿಸಿದರೆ ಮಹಾಪುಣ್ಯ. ಅದರಲ್ಲಿ ಸ್ನಾನ ಮಾಡಿ, ಅದನ್ನು ದಾನಗೈದವರಿಗೆ ಪಾವನತೆ ಪ್ರಾಪ್ತವಾಗುತ್ತದೆ. ಮಾತ್ರವಲ್ಲ ಪಾಪಿಗಳ ಪಾಪವನ್ನು ತೊಳೆಯುವ ಮಹಾಶಕ್ತಿ ತುಂಗಭದ್ರೆಯಲ್ಲಿದೆ ಎಂದು ಭಕ್ತಿಪುರಸ್ಸರವಾಗಿ ವರ್ಣಿಸಿದ್ದಾನೆ. ಇಂದಿಗೂ ಪ್ರಚಲಿತವಾಗಿರುವ "ಗಂಗಾ ಸ್ನಾನ ತುಂಗಾ ಪಾನ" ಎಂಬ ಗಾದೆ ಮಾತನ್ನು ಇದು ನೆನಪಿಸುತ್ತದೆ.

ಈ ಪವಿತ್ರ ನದಿಯ ದಡಗಳಲ್ಲಿ ಅನೇಕ ಪುಣ್ಯಾಶ್ರಮಗಳಿವೆ. ವರವಶಿಷ್ಟ, ವಿಶ್ವಾಮಿತ್ರ, ಗಾರ್ಗೇಯ, ಭೃಗು, ಭಾರದ್ವಾಜಾದಿ ಮುನಿಪುಂಗವರೆಲ್ಲ ಅಲ್ಲಿದ್ದುಕೊಂಡು ಜಪತಪಮಾಡಿದರು. ಈ ನದಿಯ ಇಕ್ಕೆಲಗಳಲ್ಲಿ ಪರಿಪರಿಯ ವೃಕ್ಷಗಳು ಬೆಳೆದು ನಿಂತಿವೆ. ರಸಪೂರಿತ ಆಮ್ರ, ಆಲ, ಬದರಿ, ಬಾಳೆ, ತೆಂಗು, ಪುನ್ನಾಗ, ಮರುಗ, ಪಚ್ಚೆ, ದವನ, ಬಿಲ್ವ, ಬೆಳವಲ, ನಿಂಬೆ, ಹೇರಳೆ, ಹಲಸು ಇತ್ಯಾದಿ ಫಲವೃಕ್ಷಗಳು (೧-೧೭) ಕಣಗಿಲೆ, ಮೊಲ್ಲೆ, ಮಲ್ಲಿಗಿ, ಜಾಜಿ, ಸಂಪಿಗೆ, ಸುರಹೊನ್ನೆ, ನಂದಿ (೧-೧೮) ಮುಂತಾದ ಪುಷ್ಪಲತೆಗಳು, ತರುಗಳು, ಕಾಲುವೆ, ಸರೋವರಗಳನ್ನು ಬಳಸಿ ತೊನೆಯುತ್ತಿದ್ದವು.

ವರಹಂಸ ಷಟ್ಟರಣ, ಕೇಕಿ ಕೋಕಿಲ ಶುಕಂ
ಸರಸಿಯೊಳು ಕ್ರೀಡಿಸುತ ಮರಿಗಳಿಗೆ ನಳಿನ ಕೇ
ಸರಗಡಿದು ಗುಟುಕಿಟ್ಟುಯೆರಗಿ ಬಂಡುಂ(೧-೧೮)ಡು ಝೇಂಕರಿಸುತ್ತ ಹರಿದಾಡುತ್ತಿದ್ದವು. ಇಲ್ಲಿ ಕಾಣುವ ಸರಸರಮ್ಯವಾದ ಪ್ರಕೃತಿಯ ಚಿತ್ರಣ 'ನಂಜುಂಡಕವಿ' (ಕ್ರಿ.ಶ.ಸು. ೧೫೨೫)ಯ 'ಕುಮಾರರಾಮನ ಸಾಂಗತ್ಯ'ದಲ್ಲಿ ಬರುವ ಕನ್ನಡ ನಾಡಿನ ವರ್ಣನೆಯನ್ನು ನೆನಪಿಸದೇ ಇರುವುದಿಲ್ಲ.

ಉಬ್ಬಿಸ್ವರಗೈವ ಕೋಗಿಲೆ, ಪಕ್ವಗೊಂಡ ಫಲಗಳನ್ನು ಕಚ್ಚಿರಸಹೀರುವ ಗಿಳಿಗಳು, ಬಗಸಿಬಂದರ್ಗೆನೆಳಲು. (೧-೧೯) ನೀರು, ಹಣ್ಣುಗಳನ್ನು ನೀಡುವ ಉಪವನಗಳು ಶೋಭಿಸುತ್ತಿದ್ದವು.

ನಾನಾ ಬಗೆಯ ಭತ್ತದ ಗದ್ದೆಗಳು, ಕಬ್ಬಿನ ಹೊಲಗಳು, ನಾಗವಲ್ಲಿ ವಾಟಿಗಳು, ಎತ್ತ ನೋಡಿದರೂ ಅರವಟಿಗೆ ಅನ್ನಕ್ಷೇತ್ರಗಳು ಉದ್ದಗಲಕ್ಕೂ ವ್ಯಾಪಿಸಿದ್ದವು ಎಂದು ಚಿತ್ರಿಸುತ್ತಾನೆ. ಈ ಮೂಲಕ ಕನ್ನಡಿಗರ ಉದಾರತೆ, ಪ್ರಕೃತಿ ಪ್ರೇಮ, ಧರ್ಮಪ್ರಜ್ಞೆಗಳ ಸಮೃದ್ಧ ದರ್ಶನಮಾಡಿಸುತ್ತಾನೆ ಶಂಕರಕವಿ.

ವಿರೂಪಾಕ್ಷನು ಪಂಪಾಂಬಿಕೆಯೊಡನೆ ಮಣಿಮಯ ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ. ಅವರ್ಣನೀಯವಾದ ವಿರೂಪಾಕ್ಷನ ಸಿರಿಭವನದಲ್ಲಿ ನರಸುರರು ಸಲ್ಲೀಲೆಯಿಂದ ಓಲೈಸುವರು. ಆಸಭೆಯ ಮಧ್ಯದಲ್ಲಿ 'ವಿಜಿತೇಂದ್ರಿಯ (೧-೨೪)ನೂ ಸಕಲವಿದ್ಯಾನಿಪುಣನೂ ಆದ ಶರಣಾಗ್ರಣ್ಯ ಹರಿಹರದೇವನು

[illegible]

ವಿಭೂತಿ ರುದ್ರಾಕ್ಷಿ ಭೂಷಿತ ಶರೀರನಾಗಿ ವಿರಾಜಮಾನನಾಗಿದ್ದಾನೆ. ಅವನಸುತ್ತ ಶಾಸ್ತ್ರ ಪುರಾಣಗಳನ್ನು ಬಲ್ಲ ಪಂಡಿತರು, ಕಾವ್ಯಕಲಾಕೋವಿದರು, ನಾಟ್ಯಶಾಸ್ತ್ರವಿಶಾರದರು ಸಕಲಕಲಾಪರಿಣತರೂ ಮಂಡಿಸಿದ್ದಾರೆ. ವಿರೂಪಾಕ್ಷನ ಇಚ್ಛೆಯ ಮೇರೆಗೆ ಪ್ರಮಥಗಣಗಳ ಇತಿಹಾಸವನ್ನು ಹರಿಹರ ಕವಿ ಸರ್ವರಿಗೂ ತಿಳಿಯುವಂತೆ ಬಿತ್ತರಿಸತೊಡಗಿದ್ದಾನೆ. ಆಗ ಸಕಲತೀರ್ಥ ಯಾತ್ರೆಯನ್ನು ಪೂರೈಸಿಕೊಂಡು ಜಡೆಮುಡಿಯ, ಭಸಿತ ರುದ್ರಾಕ್ಷಿ, ಕಾಷಾಂಬರದ ಉಡಿಗೆ ತೊಡುಗೆಗಳಿಂದ ಶೋಭಿಸುವ ಸೋರೆದಂಡವನ್ನು ಹಿಡಿದ (೧-೨೭) ಚಾಮರಸನು.

''ವಿರೂಪಾಕ್ಷನ ಅಡಿಯಡಿಯಪೊರ್ದಿಬದುಕುವೆ''(೧-೨೭)ನೆಂದು ಬಂದು ಆ ಗುಡಿಯ ಮುಖ್ಯದ್ವಾರ ವನ್ನು ಹೋಗಲು ಸದ್ಬ್ರಾಹ್ಮಣರ ಮಧ್ಯದಲ್ಲಿ ರಂಗಸಾಲೆಯೊಳು ಮಂಡಿಸಿದ ಹರಿಹರನನ್ನು ಕಾಣುತ್ತಾನೆ. ಶರಣರನ್ನು ನೋಡಿ ನಮಿಸದೆ ಈಶ್ವರನೆಡೆಗೆ ಬಂದ ದೊರೆ ನಂಬಿಯನ್ನೂ ವಾಲ್ಮೀಕನಾಥನನ್ನೂ ಹೊರಗೆಂದ ಮೆರೆಮಿಂಡ ಶರಣನನ್ನು ನೆನಪಿಸಿಕೊಳ್ಳುತ್ತಾನೆ. ''ಹರಗೆ ಶರಣರೆಯಧಿಕ'' (೧-೨೮) ಎಂದುಕೊಂಡು ಮೊದಲು ಇವರ ಪಾದಕಮಲದರುಶನವ ಕೊಂಡು ಪೋಗುವೆನೆಂದು ಬಂದು ಹರಿಹರ ಶಿವಾಚಾರ್ಯನಿಗೆ ಸಾಷ್ಟಾಂಗ ವೆರಗುವನು. ಆಗ ಹರಿಹರನು ''ಭಕ್ತಿಯುಳ್ಳಲ್ಲಿ ಶಿವಮೂರ್ತಿಗೊಂಡಿಹನು'' ಭಕ್ತ ದೇಹಿಕ ದೇವನೆಂದು ಶ್ರುತಿಮತವಿಹುದು. ಪರಮಭಕ್ತರಿಗೆ ಭೃತ್ಯತಾನೆಂದು (೧-೨೯) ಎದ್ದು ಬಂದು ಚಾಮರಸನ ಕೈ ಹಿಡಿದು ಕರೆದೊಯ್ದು ಅಧಿಕಾಸನದಲ್ಲಿ ಕುಳ್ಳಿರಿಸಿ ಆದರಾತಿಥ್ಯ ಮಾಡುತ್ತಾನೆ.

ವೈರಾಗ್ಯಶಾಲಿಗಳೇ ತಾವು ಎತ್ತಣಿಂದ ಬಂದಿರಿ? ತಮ್ಮ ಹೆಸರೇನು? ಇಂತಹ ಅನುಪಮವೈರಾಗ್ಯ ತಮಗೆ ಬರಲು ಕಾರಣವೇನು? ಸಾದ್ಯಂತವಾಗಿ ಹೇಳಿರಿ ಎಂದು ಅನುನಯದಿಂದ ಪ್ರಶ್ನಿಸುವನು. ಆಗ ತುಂಬ ಭಾವುಕನಾಗಿ ಯತಿವರ ಚಾಮರಸನು ''ಎಲೆ ಗುರುರಾಯ ಈ ಲೋಕದಲ್ಲಿ ನೀನು ಯಾರೆಂದು ಇಂದಿನವರೆಗೆ ಯಾವ ಸದ್ಬುದೋತ್ತಮರೂ ನನ್ನನ್ನು ಕೇಳಲಿಲ್ಲ. ತಾವು ಕೇಳಿದಿರಿ ಕಾಲಕರ್ಮವ ಕಳೆದು ಸನ್ಮುಕ್ತನಾಗುವ ಕಾಲ ಈಗ ಒದಗಿತು. (೧-೩೦) ಎನ್ನಭವಜಾಡ್ಯ ಪರಿದುದ್ಯೆ ಆಲಿಸಿರಿಸ್ವಾಮಿ ಎಂದು ತನ್ನ ಪೂರ್ವವೃತ್ತಾಂತ ವನ್ನು ಬಿತ್ತರಿಸತೊಡಗಿದನು.

ಗುರುವೆ ನಾನು ಹುಟ್ಟಿದ ಊರು ಗದುಗು. ಚಾಮರಸನೆಂಬುದು ಹೆಸರು. ನಮ್ಮ ತಂಗಿಯೊಬ್ಬಳನ್ನು ಕುಮಾರವ್ಯಾಸನಿಗೆ ಮದುವೆ ಮಾಡಿಕೊಟ್ಟಿದ್ದೇವೆ. ಅವನು, ನಾವು ಎಲ್ಲರೂ ಸುಖವಾಗಿದ್ದೆವು. ಹೀಗಿರಲೊಂದು ದಿನ ರಾಜನು ನಮ್ಮಿಬ್ಬರನ್ನೂ ಕರೆಸಿ, ''ಸಂಸ್ಕೃತ ಭಾಷೆಯಲ್ಲಿರುವ ಭಾರತವನ್ನು ಕನ್ನಡದಲ್ಲಿ ಹೇಳಿರೆಂದು ಅಪ್ಪಣೆ ಮಾಡಿದ. ಅದಕ್ಕೆ ಒಪ್ಪಿಕೊಂಡು ನಾನು ಭಾರತದ ಪೂರ್ವಾರ್ಧವನ್ನು ಕುಮಾರವ್ಯಾಸನು ಉತ್ತರಾರ್ಧ ವನ್ನೂ ಬರೆದು ಮುಗಿಸಿದೆವು. ಪೂರ್ವದೇಶದಿಂದ ವಿಮರ್ಶಕ ವಿದ್ವಾಂಸರು ಆಗಮಿಸಿ, ಅರಸನ ಅಪ್ಪಣೆಯ ಮೇರೆಗೆ ನಮ್ಮೆಡೆಗೆ ಬಂದರು. ನಮ್ಮೀರ್ವರ ಕಾವ್ಯಗಳನ್ನು ಪರೀಕ್ಷಿಸಿದರು. ಆ ಸಮಯದಲ್ಲಿ ನಾನು ನನ್ನ ಪುಸ್ತಕದ ಗರಿಗಳನ್ನು ಬೆರಳಿನಿಂದ ಹಿಸುಕಲು ರಕ್ತ ಸೂರೆಯಾಯಿತು. ವಿಮರ್ಶಕರು ವಿಸ್ಮಿತರಾಗಿ ''ನನ್ನದೇ ನಿಜವಾದ ವೀರಕಾವ್ಯ'' ಎಂದು ಬಗೆದು ರಾಜನಿಗೆ ಶಿಫಾರಸು ಮಾಡಿದರು. ಇದರಿಂದ ದುಃಖಿತನಾದ

ಕುಮಾರವ್ಯಾಸನು ಕ್ರೋಧತಪ್ತನಾಗಿ ಹೆಂಡತಿಯನ್ನು ಕರೆದು ನಿನ್ನಣ್ಣನ ಕೃತಿಯೆದುರು ನನ್ನ ಕಾವ್ಯ ನಿಸ್ಸಾರ ವಾಯಿತು. ಆದರಿಂದ ರಾಜನೆದುರು ನನಗೆ ಅವಮಾನವಾಗಿದೆ. ನಾನಿಲ್ಲಿರುವುದಿಲ್ಲ ಕಾಶೀಯಾತ್ರೆಗೆ ಹೊರಡುತ್ತೇನೆ ಎನ್ನುತ್ತಾನೆ. ಆಗ ಆಕೆಯು ಪ್ರಾಣೇಶ, ನೀವು ದೇಶಾಂತರ ಹೋದರೆ ನನಗೆ ವೈಧವ್ಯ ಪ್ರಾಪ್ತವಾದಂತೆಯೇ ಸರಿ ನಾನು ಹೇಗೆ ಬಾಳಲಿ? ಸ್ವಲ್ಪ ತಾಳಿರಿ, ಎಂದು ನಾನಿಲ್ಲದ ಸಮಯ ಸಾಧಿಸಿ ನಮ್ಮ ಮನೆಗೆ ಬಂದು ನನ್ನ ಕೃತಿಯನ್ನು ಕದ್ದೊಯ್ದು ಸುಟ್ಟು ತನ್ನ ಪತಿಯ ದುಃಖವನ್ನು ತಿಳಿಯಾಗಿಸಿದಳು. ಈ ನೋವಿನಿಂದ ಸರ್ವಸ್ವವನ್ನೂ ತ್ಯಜಿಸಿ ಸನ್ಯಾಸಿಯಾಗಿ ಸಕಲ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ, ಕೊನೆಗೆ ಈ ಮಹಾತಾಣಕ್ಕೆ ಬಂದೆ, ನಿಮ್ಮ ದರ್ಶನ ಭಾಗ್ಯ ಪಡೆದೆ. ಈಗ ನನ್ನ ಭವಜಾಡ್ಯ ತೊಲಗುವಂತೆ ಉಪದೇಶ ವನ್ನಿತ್ತು ರಕ್ಷಿಸುತಂದೆ.

ನಿಮ್ಮ ಅಮಳಸತ್ಕೀರ್ತಿ ಮಹಿಮೆಯನ್ನು, ನೀವು ರಾಘವಾಂಕನಿಗೊಲಿದುದನ್ನು ಕೇಳಿದ್ದೆ. ಅನ್ಯನೆಂದು ನನ್ನನ್ನು ಉದಾಸೀನ ಮಾಡದೆಯೇ ಕರುಣೆ ತೋರಿ ರಕ್ಷಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ದೀನನಾಗಿ ಹರಿಹರದೇವನ ಪಾದಕಮಲಕ್ಕೆರಗಿದನು.

ಅರಿಯದೆ ಮಾಡಿದ ದೋಷ ತಿಳಿಯುವುದು ಉಲ್ಲಾಸದಿಂದ ಶರಣರ ಮಹಿಮೆಯಕೇಳಲು, ಪಠಿಸಲು, ಸ್ತುತಿಸಲು, ಲಿಂಗದೀಕ್ಷೆ ಪಡೆಯಲು ನಿಜಮೋಕ್ಷ ಹೊಂದಬಹುದು ಎಂದು ಹರಿಹರನು ತಿಳಿಸುವನು. ಆಗ ಚಾಮರಸನು "ಗುರುವೆ, ಈ ಮೊದಲು ನಾನು ಪ್ರಮಥರ ಮಹಿಮೆಯನ್ನು ಕೇಳಿಲ್ಲ. ಈಗ ನೀವು ಕೃಪೆಮಾಡಿ ಹೇಳಿದರೆ ನರಸ್ತುತಿಗೈದ ಪಾಪದಿಂದ ಪಾರಾಗುವೆ. ಆ ಮೇಲೆ ಶಿವನನ್ನು ಸದಮಲಾತ್ಮಕ ಶಿವಶರಣರನ್ನು ಹೊಗಳಿ ಕೃತಾರ್ಥನಾಗುವೆನು ಎಂದು ಹರಿಹರದೇವನು ಶಿವಮಾಹೇಶ್ವರರು ಸಂತೋಷಿಸುವಂತೆ ಸದ್ಭಕ್ತನಿವಹಮಾನಂದಿಸುವಂತೆ ಸದ್ಬ್ರಾಹ್ಮಣರು ನಲಿಯುವಂತೆ ಕವಿಗಮಕಿಗಳು ಮೆಚ್ಚುವಂತೆ, ರಾಘವಾಂಕ, ಭೀಮಕವಿ, ಲಕ್ಕಣಾಮಾತ್ಯರು ಮೆಚ್ಚುವಂತೆ "ಅವಿರಳ ಸುಪ್ರಮಥೇಂದ್ರ ಚೋರಬಸವ ಮಹಿಮೆ"(೧-೪೦)ಯನ್ನು ಹೇಳಲುದ್ಯುಕ್ತನಾದನು.

ಎಲೆ ಮಗನೆ ಚಾಮರಸ, ನೀನು ಚಿತ್ತಗೊಟ್ಟು ಆಲಿಸುವೆ ಯಾದರೆ ನಾನು ಒಲಿದು ಹರಭಕ್ತ ಬಸವೇಶ್ವರನ ಮಹಿಮೆಯನ್ನು ಸಂಕ್ಷೇಪವಾಗಿಬಿತ್ತರಿಸುವೆ. ನಿಜವಾಗಿಯೂ ಅವನ ಮಹಿಮೆಯನ್ನು ಬಣ್ಣಿಸಲು "ಇರ್ಛಾಸಿರ ನಾಲಗೆಯ" ಆದಿಶೇಷನಿಗೂ ಸಾಧ್ಯವಿಲ್ಲ. ಹೀಗಿರಲು ನನ್ನ ಪಾಡೇನು? ಎಂದು ಕಥೆಯನ್ನು ಪ್ರಾರಂಭಿಸುವನು.

೨ನೆಯ ಸಂಧಿ : ಭೂಸುರಮಂಡಗೆಯ ಮಾದರಸ ಮಾದಾಂಬೆಯರು ಸಕಲ ಭೋಗಂಗಳನನುಭವಿಸುತ್ತ ಸುಖವಾಗಿದ್ದರು. ಮಕ್ಕಳನ್ನು ಬಯಸಿ ಹಲವು ವ್ರತಗಳನ್ನು ನಡೆಸಿದರೂ ಮನೋಬಯಕೆ ಈಡೇರಲಿಲ್ಲ ಆದ್ದರಿಂದ ಕಪ್ಪಡಿಯ ಸಂಗಮೇಶ್ವರನನ್ನು ಧ್ಯಾನಿಸುತ್ತ ವಿವಿಧಾನುರಾಗದಿಂದ ಭಜಿಸುತ್ತಿದ್ದರು.

[illegible]

ಈ ಸಂದರ್ಭದಲ್ಲಿ ನಾರದ ಮುನಿಗಳು ಭೂಲೋಕಕ್ಕೆ ಆಗಮಿಸುತ್ತಾರೆ. ಜೈನಮತ ಅವನಿಯುದ್ದಕ್ಕೂ ಪ್ರಾಬಲ್ಯ ಮೆರೆಯುತ್ತಿತ್ತು. ಈಶ್ವರನನ್ನು ಹಳಿದು ಶ್ರುತಿ, ಶಾಸ್ತ್ರಗಳೆಲ್ಲ ಸುಳ್ಳೆಂದು ಅಲ್ಲಗಳೆಯುತ್ತಿದ್ದರು. ಶಿವಭಕ್ತರನ್ನು ದೂಷಿಸುತ್ತಾ ಬುದ್ದನೇ ಇಹಪರದೈವ ಎಂದು ಸಾರುತ್ತಲಿದ್ದರು. ಇದನ್ನು ಕಣ್ಣಾರೆ ಕಂಡು ಕೇಳಿದ ನಾರದರು ಕೈಲಾಸಕ್ಕೆ ಬರುತ್ತಾರೆ. ಸಿಂಹಪೀಠದಲ್ಲಿ ಮಂಡಿಸಿದ್ದ ಮಾರಾರಿಯನ್ನು ವಂದಿಸಿ ಅನನ್ಯ ಭಕ್ತಿಯಿಂದ ಸ್ತುತಿಸುತ್ತಾರೆ. ಸಂಪ್ರೀತಗೊಂಡ ಶಿವನು ನಾರದರನ್ನು ಆದರದಿಂದ ಬರಮಾಡಿಕೊಂಡು, 'ಎತ್ತ ಹೋಗಿದ್ದಿರಿ? ಯಾರಿಂದ ಮನನೊಂದುದು ಎಂದು ವಿಚಾರಿಸುತ್ತಾನೆ. ಕಲಹ ಪ್ರಿಯ ನಾರದರು. ಹೊತ್ತುಗಳೆಯಲೆಂದು ಭೂಲೋಕಕ್ಕೆ ಹೋಗಿದ್ದೆ' ಜಗದಗಲವೂ ದುರ್ಮತ ಪಸರಿಸಿ ಬುದ್ಧನೇ ಪರದೈವ ಎಂದು ಸಾರುತ್ತಿರುವರು. ಶಿವನಸಮಯಕ್ಕೆ ಜೈನರಿಂದ ಮಹಾಘಾತ ಉಂಟಾಗಿದೆ. ಹರಿಹರ ಬ್ರಹ್ಮಾದಿಗಳನ್ನು, ಶ್ರುತಿಶಾಸ್ತ್ರ ಪುರಾಣಗಳನ್ನು ಬಂದಂತೆ ಜರಿಯುತ್ತಿರುವರು. ಪರಮಾತ್ಮ ನೀವೇ ಧರೆಗಿಳಿದು ಪರಸಮಯಿಗಳ ತರಿದೊಟ್ಟಬೇಕು" (೨-೬) ತಮ್ಮ ಧರ್ಮವನ್ನುಳಿಸಿಕೊಳ್ಳಬೇಕು ಎಂದು ಕರಮುಗಿದು ಬೇಡಿಕೊಂಡನು. ಇದನ್ನಾಲಿಸಿದ ಶಂಕರನು 'ನಂದಿ'ಯನ್ನು ಕರೆದು ''ಧರೆಯೊಳುದುರ್ಮತದ ದೀಪ ನಂದಿಸಿಯೆ ವೀರಶೈವನ್ವಯ ವನುದ್ಧರಿಸಿನಂದದಿಂ ಕೂಡಲಾಸಂಗಮೇಶ್ವರನೊಳಡಗೆಂದು" (೨-೭) ಆಜ್ಞಾಪಿಸಿದನು. ಆಗ ಪಾರ್ವತಿಯು ಅನುಮಾನಿಸುತ್ತಾ ಇವನಿಂದ ಇಂತಹಕಾರ್ಯ ಆಗಬಹುದೆ ದೇವಾ? ಮರ್ತ್ಯದೊಳಗೆ ಸಕಲವಿಷಯಗಳಿಗೆ ದಾಸನಾಗಿ ಕುದಿಯುವನು ಇವನೆತ್ತ? ಜೈನರೆತ್ತ? ಗೆಲುವೆತ್ತ? ಎಂದು ಪ್ರಶ್ನಿಸಿದಳು.

ಆಗ ಶಿವನು ಲಲನೆ ನಂದೀಶನೆಂದರೆ ಸಾಮಾನ್ಯನಲ್ಲ. ಹಿಂದೆ ಶಿಲಾದಮುನಿಯು ನನ್ನನ್ನು ಕುರಿತು ಉಗ್ರತಪಸ್ಸುಮಾಡಿ ನಾನೇ ತನಗೆ ಮಗುವಾಗಬೇಕೆಂದು ಬೇಡಿದ. ನನಗಿಂತಲೂ ಶ್ರೇಷ್ಠನಾದ ವೃಷಭನೇ ನಿನ್ನ ಮಗುವಾಗುವನೆಂದು ಹೇಳಿದಾಗ ಒಪ್ಪಿಕೊಂಡನು. ಆ ವೃಷಭನೇ ನಂದೀಶನೆಂದು ಪ್ರಸಿದ್ಧಿ ಪಡೆದು ಉಗ್ರತಪಸ್ಸನ್ನಾಚರಿಸಿ ನನ್ನ ತದ್ರೂಪವೇ ತಾನಾಗಿ ಗಣಪದವಿ ಪಡೆದು ನಮ್ಮಲ್ಲಿದ್ದಾನೆ. ಅವನು ಸಾಮಾನ್ಯ ಪುರುಷನಲ್ಲ. ಅನಾದಿಶರಣ ಎಂದು ತಿಳಿ ಹೇಳಿದನು. ಮತ್ತು ನಂದಿಯನ್ನು ಕರೆದು

"..................ನಿನ್ನಯಾ

ಪಿಂತೆ ಪ್ರಮಥೇಂದ್ರರಂ ಕಳುಪಿದಪೆ ನೆನಹುಮಾತ್ರ ದಿನೀನೆ ನಾನೆಂದು ತಿಳಿ (೨-೧೧) ಮಂಡಗೆಪುರದಲ್ಲಿ ನಿನ್ನ ವ್ರತದಲ್ಲಿರುವ ಮಾದಿರಾಜ ಮಾದಾಂಬೆಯ ಉದರದಲ್ಲಿ ಜನಿಸು ಎಂದು ಅಪ್ಪಣೆ ಮಾಡುತ್ತಾನೆ. ಆಗ "......ಭೂಕಾಂತೆಗುತ್ತಮಕ್ಷೇತ್ರಯಿಂಗಳಿಗೆ ಬಾಗವಾಡಿಯಲ್ಲಿ" (೨-೧೧) ಬಸವಣ್ಣನು ಪ್ರಸನ್ನ ನಾಗುತ್ತಾನೆ. ಅನ್ಯಧರ್ಮಗಳ ಕಾರ್ಗತ್ತಲೆಯು ಧರೆಯುದ್ಧಕ್ಕೂ ವ್ಯಾಪಿಸಿದ್ದ ಸಮಯವದು, "ಹರಸಮಯ ತರಣಿಯುದಯಿಸಿದ" (೨-೧೨) ಹಾಗೆ ಬಸವೇಶನು "ಶರಣಾಳಿಕಮಲಗಳದುಗುಡವ ನೀಗಿಸುವ" ಲೀಲೆ ಯನ್ನು ಮೆರೆಯುತ್ತಿದ್ದ.

[illegible]

[illegible]

[illegible]

[illegible]

[illegible]

[illegible]

ವಸುಧೆಯೊಳಗೆ ಬಾಗವಾಡಿಯ ನಂದೀಶ್ವರನೆಂದರೆ ಶಿವನ ಅವತಾರ. ಕೊರಡ ಕೊನರಿಸಿ ಬರಡ ಕರೆಸಿ ಬಂಜೆಯರ್ಗೊಲಿದು ಮಕ್ಕಳಂ ಕೊಡುತಿರ್ದ (೨-೧೨)

ಮಹಾಶಕ್ತಿಯುಳ್ಳವನು. ಈ ಮಾತನ್ನು ಮನದಂದು ಭೂಸುರಮಂಡಗೆಯಮಾದರಸ, ಮಾದಾಂಬೆಯರು ಅತ್ಯಾಕಾಂಕ್ಷೆಯಿಂದ ಶಿಶುವನ್ನು ಪಡೆಯುವೆವೆಂದು ನಂದೀಶ್ವರನನ್ನು ಭಯಭಕ್ತಿಯಿಂದ ಪೂಜಿಸತೊಡಗಿದರು ''ಚಪಲಾಕ್ಷಿ ಮಾದಾಂಬೆಗೆ ಒಲಿದು ಮಸ್ತಕದಿಸೂಡಿರ್ದ (೨-೧೪) ಪುಷ್ಪವನ್ನುದುರಿಸಲು ಭಕ್ತಿ ಸಂತೋಷ ಗಳಿಂದ ಸ್ವೀಕರಿಸಿ, ಸ್ತುತಿಸಿ ಮನೆಗೆ ಮರಳಿದರು. ದ್ಯೂಮಣಿಯು ಜೈನಮತವಳಿವುದಿಂತೆಂದು ತೋರ್ಪಂತೆ ಪಡುಗಡಲಿಗಿಳಿದನು(೨-೧೫).

ಅಂದು ರಾತ್ರಿ ಮಾದರಸ-ಮಾದಾಂಬೆಯರು ಸಮಾಗಮದಲ್ಲಿರಲು ಮಾದಾಂಬೆಯ ಉದರದಲ್ಲಿ ಶಿವಕಳೆ ಮೂಡಿ ಬೆಳೆಯಲಾರಂಭಿಸಿತು. ಬೆಳಗಿನ ಜಾವದಲ್ಲಿ ಈರ್ವರಿಗೂ ಸ್ವಪ್ನವಾಯಿತು. ''ಬಸವನಾದ ನಾನೇ ನಿಮಗೆ ಶಿಶುವಾಗುವೆ. ನನ್ನ ಜನನ ಕಾಲದಲ್ಲಿ ಮರೆಯದೇ ಇಷ್ಟಲಿಂಗಧರಿಸಿ'' ಎಂದು ಅರುಹಿದಂತಾಯಿತು. ಅದನ್ನು ಕೇಳಿ ದಂಪತಿಗಳು ಹರ್ಷೋದಧಿಯಲ್ಲಿ ಈಜಾಡಿದರು.

ದಿನಗಳುರುಳಿದಂತೆ ಮಾದಾಂಬೆಗೆ ಬಯಕೆಗಳು ಕಾಡತೊಡಗಿದವು. ನವಮಾಸಗಳು ಗತಿಸಿದವು. ಹೆರಿಗೆಯಾಗದೆ ಬಸುರು ಬೆಳೆಯುತ್ತಿರಲು ಮಾದಾಂಬೆಗೆ ತುಂಬ ಕಷ್ಟವಾಗತೊಡಗಿತು. ಪುರಜನರೆಲ್ಲ ಬೆರಗಾದರು. ಚಿಂತಾಕ್ರಾಂತನಾದ ಮಾದರಸನು ಬಲ್ಲವರನ್ನು ಕರೆದು ತೋರಿಸಿದನು. ''ನವಮಾಸಗಳಾಗಲು ಹೆರಿಗೆಯಾಗುವುದು. ಇದೆತ್ತಣ ಮಾಯೆ? ನಾಗಕಂಕಣನೇ ಬಲ್ಲ. ನಮ್ಮಿಂದಾಗದು ಎಂದು ಅವರೆಲ್ಲ ಹೊರಟು ಹೋದರು. ಮಾದರಸನು ಚಿಂತಾಸಾಗರದಲ್ಲಿ ಮುಳುಗಿ ಸಂಗಮೇಶನ ವೃಷಭರನ್ನು ನೆನೆಯುತ್ತ ವಿಭೂತಿಯನ್ನು ಕೊಡಲು'' ಕುಂಭಿನಿಗೆ ೨ನೆ ಶಂಭು ಬಸವೇಶ ಜನಿಸುತ್ತಾನೆ. ಸಂತಸಕ್ಕೆ ಮೇರೆಯೇ ಇಲ್ಲದಾಯಿತು. ಲಲನೆಯರು ಉಲ್ಲಾಸಗೊಂಡು ಉಪಚರಿಸುತ್ತಾ

''ಮಲಹರನ ಸಮಯ ಕೇಸರಿಯು ಪುಟ್ಟಿದ ಜೈನ ಸಮಯ ಕರಿನಿಚಯಮೆಲ್ಲ
ತೊಲಗಿರೋಯೆಂದು ಡಂಗುರವ ಪೊಯ್ಯಂದದಲಿ'' (೨-೨೯)

ಜಯಘಂಟೆ ಬಾರಿಸುತ್ತಾ ಶಿಶುರತ್ನವನ್ನು ಕೊಂಡೊಯ್ದು ಮಲಗಿಸಿದರು. ತಂದೆ ತಾಯಿಗಳಿಗೆ, ಬಂಧು ಬಾಂಧವರಿಗೆ, ಲೋಕದ ಭಕ್ತರಿಗೆ ಮಹದಾನಂದವಾಯಿತು. ಜನನಕರ್ಮಗಳನ್ನೆಲ್ಲ ನೆರವೇರಿಸಿದ ತಂದೆ-ತಾಯಿಗಳು ಕೂಸಿಗೆ ಲಿಂಗಧಾರಣ ಮಾಡಿಸುವುದನ್ನೇ ಮರೆತರು. ಕೂಸು ಹಾಲ್ಗುಡಿಯದೆ ಏಳು ದಿನಗಳವರೆಗೆ ಅಳುತ್ತಲೇ ಇದ್ದನು. ಸತಿಪತಿಗಳು ಚಿಂತಾಕ್ರಾಂತರಾದರು.

''ಸುತರಿಲ್ಲದಿರೆಕಷ್ಟ, ಮಕ್ಕಳಾದರೆ ದುಃಖ
ಕ್ಷಿತಿಯೊಳುಂ ತಮಗಿಂದ ನಿರ್ದೈವರಿಲ್ಲೆಂದು......'' (೨-೩೨)

ಬಳಲುತ್ತಿದ್ದರು. ಅಷ್ಟರಲ್ಲಿ ಸಂಗಮೇಶ್ವರನೇ ಸರ್ವಾಂಗಭೂಷಿತನಾಗಿ ಜಂಗಮ ರೂಪಧರಿಸಿ 'ಭೂರುದ್ರ ಬಸವೇಶ'ನಿದ್ದೆಡೆಗೆ ಬಂದನು. 'ಭಿಕ್ಷಾ...' ಎಂದು ಮನೆ ಬಾಗಿಲಲ್ಲಿ ನಿಂತನು. ಆಗ ಮಾದಾಂಬೆಯು ಭೂತ ಸೋಂಕಿತೋ, ಗೃಹದ ಚೇಷ್ಟೆಯೋ, ಬಾಲ್ಯದ ರೋಗವೋ ನೋಡಿ ಪರಿಹರಿಸಿ ಎಂದು ಮಗುವನ್ನು ಜಂಗಮನಡಿಯಡಿಯಲ್ಲಿ ಕೆಡಹಿದಳು.

"ಒಡುವವು ಇವನ ಕಂಡಾಕ್ಷಣವೆ ಬ್ರಹ್ಮೇತಿ
ರೂಢಿಗೆರಡನೆಯ ಶಂಭುವುದಿಸಿದನು ನಿಮ್ಮ ಜಠರದಿ ವೀರಶೈವಾರ್ಕನು
ಮೂಡಿದಂ ಇಷ್ಟಲಿಂಗದ ಮತೋದ್ಧಾರಕನು" (೨-೩೮)

ಇವನಿಗೆ ದೀಕ್ಷೆಮಾಡಿಸಿ, ಲಿಂಗಧರಿಸಿ, ಇಲ್ಲದಿರೆ ಉಣ್ಣನು ಎಂದರು.

"ನೀವಲ್ಲದಿನ್ನಾರು" ಎಂದು ಜಂಗಮನ ಪಾದಾಬ್ಜಕ್ಕೆರಗಿದ ದಂಪತಿಗಳನ್ನು ಸಂತೈಸಿದರು. ಶ್ರೀಗುರುವು ಸೂತ್ರಮಂತ್ರ ಸಮೇತ ಭಸಿತ ಧರಿಸಿ ಇಷ್ಟಲಿಂಗ ಧರಿಸಿ ಪ್ರಣವ ಪಂಚಾಕ್ಷರ ಉಪದೇಶಮಾಡಿ ಕಿವಿಯಲ್ಲಿ 'ಬಸವಾ' ಎಂದು ಹೆಸರಿಟ್ಟರು. ಒಡನೆ ಆ ಕೂಸು ಮೊಲೆಹಾಲುಂಡು ಜನನಿಜನಕರಿಗೆ ಸಂತಸತೋರಿತು. "ದಿನದಿನಕೆ ಬಾಲ ಶಶಿಯಂತೆ ಬೆಳೆವುತಲಿರ್ದ ಭವನಾಶ ಬಸವೇಶನು.

ಶಿವಧ್ಯಾನಿಯಾಗಿ ಬುಧಕಲಾಭರಣನೆನಿಸಿದ್ದ ಏಳು ವರುಷ ತುಂಬಲು "ಮುಂಜಿ" ಮಾಡುವ ಪ್ರಸ್ತಾಪ ಬಂತು. ಆಗ ಬಸವೇಶನು ಉಪನಯನವನ್ನು ನಿರಾಕರಿಸುತ್ತಾನೆ. ತನ್ನ ಮಹಿಮೆಯತಾನೆಬಲ್ಲನು (೨-೩೯) ಎಂದು ತಂದೆ-ತಾಯಿಗಳು ಸುಮ್ಮನಾಗುತ್ತಾರೆ. ಅಷ್ಟರಲ್ಲಿ ಸಂಗಮೇಶ್ವರನು ಗುರುವೇಷ ತಳೆದು ಬಂದು ಬಸವನಿಗೆ 'ಪಂಚಾಕ್ಷರುಪದೇಶ' ನೀಡುತ್ತಾರೆ. ಲಿಂಗದೀಕ್ಷೆ ಮಾಡುತ್ತಾರೆ. ಶ್ರೀಗುರುವಿನ ಪೂರ್ವಾಪರ ಸಂಬಂಧಗಳನ್ನು ತಿಳಿಯಲಿಚ್ಛಿಸಿದ ದಂಪತಿಗಳಿಗೆ "ನಮ್ಮ ಹೆಸರು ಸಂಗಮೇಶ್ವರ ನಾವಿರುವ ಸ್ಥಳ ಕಪ್ಪಡಿ" ಎಂದು ತಿಳಿಸಿ, ಹರಸಿ ಹೊರಟು ಹೋಗುತ್ತಾರೆ.

ಇತ್ತ ಬಸವೇಶ್ವರನು ಸಕಲಶಾಸ್ತ್ರ ವಿದ್ಯಾಪಾರಂಗತನಾಗಿ ನಿರುತ ಶಿವಧ್ಯಾನದಲ್ಲಿರುತ್ತಿದ್ದನು. ಅಪಾರ ಮಹಿಮೆಗಳನ್ನು ತೋರುತ್ತ ಭೂಸುರರೊಳಗೆ ಅಗ್ಗಳನೆನಿಸಿ ಮೆರೆಯುತ್ತಿದ್ದನು. ಮಗನ ಅಭ್ಯುದಯ ಕಂಡು ಮಾದರಸ ಮಾದಾಂಬೆಯರು ನಲಿಯುತ್ತಿದ್ದರು.

೩ನೆಯ ಸಂಧಿ : ಕೈಲಾಸದಲ್ಲಿ ಸಿಂಹಪೀಠಸ್ಥನಾಗಿ ಶಿವನು ನೆರೆದಗಣಂಗಳನ್ನುದ್ದೇಶಿಸಿ ಹೀಗೆ ಆಜ್ಞಾಪಿಸಿದನು. "ಭೂಲೋಕದೊಳಗೆ ಜನಿಸಿರುವ ಬಸವನಿಗೆ ಬೆಂಬಲವಾಗಿ ನೀವೆಲ್ಲಹೋಗಿ ಜೈನರನೆಲ್ಲ ಸಂಹರಿಸಿ ಆತನನ್ನು ಉದ್ಧರಿಸಿ" ಕಾಮಾರಿಯ ಈ ನುಡಿಯನ್ನು ಕೇಳಿ ಸಕಲ ಪ್ರಮಥರು

ಆ ಮರ್ತ್ಯ, ಲೋಕದೊಳಗಿಳಿದರ್ಗೆಸಕಲ ವಿಷಯದ ರತಿಗೆತೊಡರ್ದುಕೆಡೆದು
ನಿಮ್ಮಡಿಯನೆಂತು ಭಜಿಸುವೆವು (೩-೪)

ಎಂದು ತಮ್ಮ ಭೀತಿ ತುಂಬಿದ ಅನುಮಾನವನ್ನು ಶಿವನ ಮುಂದಿಟ್ಟರು. ''ನಿಮ್ಮೊಡನೆ ನಾನಿರ್ಪೆನೊಳ ಹೊರಗೆ ತೆರೆಹಿಲ್ಲ'' (೩-೪) ಅಂಜದಿರಿ ಎಂದು ಅಭಯವಿತ್ತು ಪರಶಿವನು ಬೀಳ್ಕೊಡುತ್ತಾನೆ. ಶಿವನಾಣತಿ ಹೊತ್ತು ಸಕಲ ಪ್ರಮಥೇಂದ್ರರು ಭೂಮಿಗೆ ಬಂದು ಸಕಲ ಕುಲಗಳಲ್ಲಿ ಜನಿಸಿದರು. ನಾರದನು ಬಿಜ್ಜಳನ ಆಸ್ಥಾನದಲ್ಲಿ ಕೊಂಡೆಮಂಚಣ್ಣನಾಗಿ ಮೆರೆದನು. ಬಲದೇವನು ಬಿಜ್ಜಳನ ಭಂಡಾರಕೊಡೆಯನಾಗಿ ಹರಧ್ಯಾನ ಮನದಿಂದ ಸುಖವಾಗಿದ್ದನು. ಅವನ ಮಹಿಮೆ ಅಪಾರ ಇಡೀ ರಾಜ್ಯದ ಆಯವ್ಯಯವನ್ನು ಪಂಚಾಕ್ಷರ ದಲ್ಲಿಯೇ ಬರೆದಿಟ್ಟಿದ್ದನು. ಇಂಥ ಮಹಿಮಾಪುರುಷನಿಗೆ ತ್ರಿಪುರಾಂತಕನ ಹರಕೆಯಿಂದ 'ಗಂಗಾಂಬಿಕೆ' ಎಂಬ ಪುತ್ರಿ ಜನಿಸುವಳು. ಆಕೆಗೆ ಯೌವನ ಪ್ರಾಪ್ತವಾಗುತ್ತದೆ. ಮಹಿಮಾಪುರುಷನೂ ಪಂಡಿತನೂ ಆದ ಅಕ್ಕನಮಗಬಸವಣ್ಣನಿಗೆ ಮಗಳನ್ನಿತ್ತು ಧಾರೆಯೆರೆಯುತ್ತಾನೆ. ಸಕಲರೂ ವಿವಾಹದ ಸಂಭ್ರಮದಲ್ಲಿದ್ದರು. ಹೀಗಿರಲೊಂದು ದಿನ ಬಸವರಸನು ತನ್ನ ಗುರು ಕಪ್ಪಡಿಯ ಸಂಗಮೇಶ್ವರನ ದರ್ಶನವಕೊಂಡು ಗಣಪರ್ವ ಮಾಡಿಸಲು ಸಂಗಮಕ್ಕೆ ಹೋಗುತ್ತಾನೆ. ದೇವಾಲಯದಲ್ಲಿರುವ ಶಿವಲಿಂಗದ ದರ್ಶನವಾಗುತ್ತಲೇ ತನಗೆ ಅಂದು ದೀಕ್ಷೆಗೈದ ಸಂಗಮನಾಥನ ನೆನಪಾಯಿತು. ಆವನೇ ಈ ಕೂಡಲ ಸಂಗಮ ದೇವನೆಂದು ಪ್ರತ್ಯಕ್ಷ ಕಾಣದಿದ್ದಲ್ಲಿ ಖಡ್ಗಕ್ಕೆ ಒಡಲನೊಪ್ಪಿಸುವೆನೆಂದು ಇರಿದುಕೊಳ್ಳಲುದ್ಯುಕ್ತನಾಗುವನು. ಆ ಕ್ಷಣವೇ ಗುರುಮೆಚ್ಚಿ ''ಹೋ ಹೋ ನಿಲ್ಲೆಂದು'' ಕೈ ಹಿಡಿದು ತನ್ನ ನಿಜರೂಪವನ್ನು ತೋರುತ್ತಾನೆ. ಬಸವರಸನು ಹರ್ಷಪುಳಕಿತನಾಗಿ ಸಾಷ್ಟಾಂಗ 'ಎರಗಿ, "ಗುರುವೆ ಮದ್ಗುರುವೆ ಸಲಹು' ಎಂದು ಸ್ತುತಿಸುವನು. ಅವನನ್ನು ಬಿಗಿದಪ್ಪಿ ಕರುಣದಿಂದ ವಿಮಲ ಪ್ರಸಾದವನ್ನು ನೀಡಿ ''ಮಗನೆ ನಿನ್ನ ಮನದಂತಸ್ಥವನ್ನರಿಯಲು ಹೀಗೆ ಮಾಡಿದೆ. ನೀನು ನನ್ನನ್ನು ಮೆಚ್ಚಿಸಿದೆ. ಭಲರೆ, ಏನು ಬೇಡಿದರೂ ಕೊಡುವೆ'' ಎಂದನು. ಬಸವಣ್ಣನು ಶಿವಪಾದಾಬ್ಜದರ್ಶನ ಮತ್ತು ಗಣಪರ್ವದ ಬಯಕೆಗೆ ಕೃಪೆಯಿತ್ತು ಹರಸಿರೆಂದನು.

"ದಂಪತಿಗಳೊಂದಾಗಿ ಶಿವಭಕ್ತರೊಳು ಗರ್ವ
ಮಂ ಪಿಡಿಯದಿರು ಲಕ್ಷತೊಂಭತ್ತ ಆರು ಸಾವಿ
ರ ಪರಮ ಜಂಗಮಾರ್ಚನೆ ಮಾಡು ಹಸ್ತನುಡಿ ಧನಧಾನ್ಯ ನೋಟಪರುಷ
ನಾಂ ಪುಸಿಯದಿತ್ತೆ ಕಲ್ಯಾಣಪುರ ಬಿಜ್ಜಳ ನೃ
ಪನ ಪ್ರಧಾನತ್ವ ಸಮನಿಪುದು ಶಿವಲಿಪಿಯೋದು
ತಾಂಪುಣ್ಯಪುರುಷನಾಗುವೆ ಮಹಿಮೆಗಳ ಮೆರೆವೆಭೂತಳಂ ಬೆರಗಾಗಲು" (೩-೧೮)

ಇದಕ್ಕೆ ಕುಂದಿಲ್ಲ, ನಾ ನಿನ್ನೊಡನಿರುವೆ ಎಂದು ಅಭಯನೀಡಿದನು. ಗಂಗಾಂಬಿಕೆಯೂ ಬಸವರಸನೊಂದಿಗೆ ಗುರುವಿಗೆ ನಮಸ್ಕರಿಸಿ ಆಶೀರ್ವಾದ ಪಡೆದಳು. ಶಿವಭಕ್ತರಿಗೆ ಗಣಪರ್ವಮಾಡಿ ಧನಧಾನ್ಯವಸ್ತ್ರಗಳನ್ನು ದಾನ ಮಾಡಿ ನಿಜಪುರಕ್ಕೆ ಮರಳಿದರು.

ಅಲ್ಪಕಾಲದಲ್ಲಿಯೇ ಬಲದೇವನು ಮರ್ತ್ಯದಲ್ಲಿದ್ದರೆ ಶಿವ ಸಭೆಯ ಲೆಕ್ಕ ತಿಳಿದು ಹೇಳುವರಿಲ್ಲೆಂದು ಶಿವ ಕರೆಸಿದಂತೆ ಲಿಂಗೈಕ್ಯನಾಗುವನು. ಬಿಜ್ಜಳರಾಯನು ತನಗೆ ತಕ್ಕ ಪ್ರಧಾನರಿಲ್ಲವೆಂದು ಯೋಚಿಸ ತೊಡಗಿದನು. ''ಬಲದೇವನ ಅಳಿಯ ಬಸವಣ್ಣನು ಅತಿ ಪ್ರೌಢ''ನೆಂದು ಕೊಂಡೆಮಂಚಣ್ಣನು ಸೂಚಿಸಿದ. ಸಕಲ ರಾಜಮರ್ಯಾದೆಯೊಂದಿಗೆ ಬಸವಣ್ಣನನ್ನು ಕರೆಸಿಕೊಂಡು ಸಿಂಹಾಸನವಿತ್ತು ಮುದ್ರೆಯನ್ನು ಕೈಯಲ್ಲಿತ್ತನು. ಆಗ ಬಸವೇಶ್ವರರು'' ಪ್ರೀತಿಯಿಂದ ನಮ್ಮ ಮಾತನ್ನು ನಡೆಸುವಿರಾದರೆ ಇರುವೆವು. ತೃಣೀಕರಿಸಿದರೆ ಹೋಗುವೆವು. ಎಂದು ಷರತ್ತು ಹಾಕುತ್ತಾನೆ. ಆಗ ಬಿಜ್ಜಳರಾಯನು ''ಅಸುವು ನಿಮ್ಮದು ಯಿತ್ತ ಮಾತು ತಪ್ಪಿದಡೆನ್ನಪೆಸರೇನು? ನೀಪೋಗೆ ದೊರೆತನವ ಮಾಡಿದೊಡೆ ಶಿವದಂಡಿಸುವನು'' ಎಂದು ವಚನ ನೀಡುವನು ಬಸವಣ್ಣನು ಸಾನುರಾಗದಿಂದ ಮಂತ್ರಿಪದ ವಹಿಸಿಕೊಂಡು ಗುರು, ಲಿಂಗ ಜಂಗಮವನ್ನು ಪೂಜಿಸುತ್ತ ನ್ಯೂನಮಿಲ್ಲದೆ ಪ್ರಜೆಗಳ ಪಾಲಿಸುತ್ತ ಸುಖವಾಗಿದ್ದನು.

ಹೀಗಿರಲೊಂದು ದಿನ ವೈಭವದ ಒಡ್ಡೋಲಗ ನಡೆಯುತ್ತಿದ್ದ ಸಮಯ 'ಗುಪ್ತಲಿಪಿ'ಯೊಂದು ಮಾಯ ದಿಂದ ಆ ಸಿಂಹ ಪೀಠದ ಹತ್ತಿರ ಬೀಳುತ್ತದೆ. ಅಚ್ಚರಿಗೊಂಡ ಅರಸನು ವಿವಿಧ ಲಿಪಿಗಳನ್ನು ಬಲ್ಲವರನ್ನು ಕರೆಸಿ "ಈಶ್ವರನಟ್ಟಿದ ಲಿಖಿತ"ವ ಕೊಡಲು ಅರ್ಥೈಸಲಾಗದೆ ಮೌನ ತಾಳಿದರು. ನಮ್ಮ ಮನುಷ್ಯರ ಬರಹಕ್ಕೆ ಹೊಂದಿಕೆಯಾಗದು. ಉತ್ತರಿಸಲು ನಾವು ಶಕ್ತರಲ್ಲ ಎನ್ನಲು ಬಿಜ್ಜಳನು ಕೋಪೋದ್ರಿಕ್ತನಾಗಿ "ಕಡುಬೆಡಗು ನುಡಿದಿರಿ, ಇಳೆಯೊಳಗಿಲ್ಲದುದು ಬರುವುದೇ? ಪೇಳಲುಂ ಲೇಸು, ಅಲ್ಲದೊಡೆ ಬಂಧನಕ್ಕೊಳಪಡಿಸುವೆ" ಎಂದು ಘುಡುಘುಡಿಸಿದನು. ಆ ಸಮಯದಲ್ಲಿ ಬಸವಣ್ಣದಂಡ ನಾಯಕನು ಅಲ್ಲಿಗೈತರುವನು. ಗುರು ಸಂಗಮೇಶನ ಪಾದದಾಣೆಯನಿಟ್ಟು ಸೂರ್ಯನನ್ನು ಗಗನ ಮಧ್ಯದಲ್ಲಿ ನಿಲ್ಲಿಸಿ ಶಿವಲಿಖಿತವನ್ನೋದಿ ಗುಪ್ತಧನ ವನ್ನು ತೆಗೆಸಿ ಅರಸನಿಗೆ ನೀಡಿದನು. ರಾಜನನ್ನೊಳಗೊಂಡು ಸಭಿಕರೆಲ್ಲ ಬೆರಗಾದರು. ಬಸವಣ್ಣನು ಗುರುಚರಣದ ಆಣೆ ಇಟ್ಟಿದ್ದರಿಂದ ರವಿಯು ನಿಂತಲ್ಲೇ ನಿಂತಿದ್ದನು. ಆಣೆಯನ್ನು ಹಿಂತೆಗೆಯುತ್ತಲೇ ರವಿ ಚಲಿಸತೊಡಗುವನು. ಬಿಜ್ಜಳನು ಬಸವರಸನಿಗೆ ಮುದದಿಂದ ರಾಜಮರ್ಯಾದೆ ಮಾಡುವನು. ಅಕ್ಷರದಲ್ಲಿ ಸೋತುಮರೆಬಿದ್ದ ಜೈನರ ಕುಲವನ್ನು ಆಕ್ಷಣದಲ್ಲಿ ಲಿಂಗದೀಕ್ಷೆಗೊಳಪಡಿಸಿ ಶಿವಭಕ್ತರೊಳಗೆ ಬೆರೆಯುವಂತೆ ಮಾಡುವನು. ಅವರೆಲ್ಲ ಶ್ರೀಬಸವ ಸಾಂಪ್ರದಾಯಕರೆನಿಸಿ ಗುರುಲಿಂಗ ಜಂಗಮವನ್ನು ಭಜಿಸಲು ಅನು ವಾಗುತ್ತಾರೆ. ಹೀಗೆ ಪರಮತೀಯರನ್ನು ಶಿವಭಕ್ತರನ್ನಾಗಿ ಮಾಡಿ ಸಂತಸದಿಂದ ಲಿಂಗಪೂಜಾನಿರತನಾಗಿ ಕಾಲ ಕಳೆಯುತ್ತಿದ್ದನು.

ವಾದಿಗಳನ್ನು ದಿನದಿನಕ್ಕೆ ಗೆಲ್ಲುತ್ತ ಅವರನ್ನು ಶಿವಭಕ್ತರನ್ನಾಗಿ ಮಾಡಿ ಭೂಮಿಗೆ ಹೊಸತೆನಿಸುವಂತೆ ಮಹಿಮೆಗಳ ತೋರುತ್ತಿದ್ದರು. ಇಂಥ ಬಸವರಸನ ದರ್ಶನಕ್ಕೆ ಎಲ್ಲೆಡೆಯಿಂದಲೂ ಶರಣರು ಸಾಗರೋಪಾದಿ ಯಲ್ಲಿ ಬರತೊಡಗಿದರು. ಅದರ ವರ್ಣನೆಯನ್ನು ಕವಿಯ ಬಾಯಲ್ಲೇ ಕೇಳಬೇಕು.

[illegible]

''ಕಾಣದಂಧಕಗಕ್ಷಿ ಹೆಳವನಿದ್ದೆಡೆಗೆ ಗೋದಾವರಿಯು ದಾರಿದ್ರನ
ನಡುಮನೆಗೆಯಷ್ಟ ಲಕ್ಷ್ಮಿಯರು ತಾಂಬಂದಂತೆ
ಪೊಡವಿಯೊಳು ಬಸವೇಶ್ವರನ ಭಕ್ತಿಲತೆ ಪರ್ಬಿ
ಝಡಿದು ಫಲಕಾಯ್ತಿರಲು ಮೆಲಲ್ಯೆದಿಕೋಕಶುಕಪಿಕನಿಕರ ನೆರೆದಂದದಿ''
(೩೫೨ ಮತ್ತು ೫೩ ಪ)

ಜಂಗಮರು ಬರತೊಡಗಿದರು. ಬಸವನಿದ್ದ ಕಲ್ಯಾಣ ಕೈಲಾಸವೆನಿಸಿತು. ಮಡಿವಾಳ ಮಾಚರಸ, ಸೊಡ್ಡಳ ಬಾಚರಸ, ಹಡಪದಪ್ಪಣ್ಣ, ಪಡಿಹಾರ ಉತ್ತಣ್ಣ ಮೊದಲಾದ ಅಸಂಖ್ಯ ಶರಣರು ಕಾಯಕ ಹಿಡಿದು ಜಂಗಮಾರಾಧನೆ ಗೈಯುತ್ತ ಕಲ್ಯಾಣದಲ್ಲಿಯೇ ನೆಲೆಸಿದರು. ಪರಮಕಲ್ಯಾಣ ಶರಣರ ಪ್ರಾಣವಾಯಿತು. ಹೀಗೆ ಒಂದು ಲಕ್ಷ ತೊಂಭತ್ತು ಸಾವಿರ ಜಂಗಮರಾದರು. ಮತ್ತಾರು ಸಾವಿರ ಜಂಗಮರಿಗಾಗಿ ''ಧಾರುಣಿಯೊಳೆಲ್ಲಿಹರು ನೋಡಿ ಬನ್ನಿ'' (೩-೬೩) ಎಂದು ಬಸವರಸನು ತನ್ನ ಅನುಚರರನ್ನು ಅಟ್ಟಿದನು. ಅವರಲ್ಲಿ ಒಬ್ಬ ಹರಭಕ್ತನು 'ಕಾಶ್ಮೀರದ ಮಾಂಡವ್ಯನಗರದೊಳಗೆ ಮಹಾದೇವಭೂಪಾಲನು ನಿತ್ಯದಲ್ಲಿ ಆರುಸಾವಿರ ಜಂಗಮರಿಗೆ ದಾಸೋಹ ನಡೆಸುತ್ತಿದ್ದುದನ್ನು ತಾನು ಕಂಡುಬಂದನೆಂದು ತಿಳಿಸುವನು.

''ಯೇನ್ನಿಮಿತ್ತಿಂತು ಕಟ್ಟಳೆಯಿಂದೆ ಜಂಗಮವಭಜಿಪ''(೩-೬೫) ನು ಎಂದು ಬಸವರಸನು ಯತಿಗಳನ್ನು ಪ್ರಶ್ನಿಸುವನು. ಆಗ ಆಯತಿವರ್ಯರು ಹೀಗೆ ಹೇಳುತ್ತಾರೆ; ಒಮ್ಮೆ ಕೈಲಾಸದಲ್ಲಿ ಶಿವನು ಮುನಿಗಳೊಡನೆ ತತ್ವಚಿಂತನೆ ಮಾಡುತ್ತಿದ್ದ ಸಂದರ್ಭ 'ಕೇಟಕಿ' ಎಂಬ ಪುರುಷ ಗಂಧರ್ವನು ಜಂಗಮ ಪ್ರಸಾದವನ್ನು ಲಿಂಗಕ್ಕೆ ಕೊಡಬಹುದೆ? ಎಂದು ಪ್ರಶ್ನಿಸಿದನು. ಶಿವನು ಕೋಪದಿಂದ ''ಚರವೆ ಪರಮಾತ್ಮನೆಂದರಿಯದೇ ನಿಂದಿಪರೆ'' (೩-೬೬) ಹೀಗೆಂದ ತಪ್ಪಿಗೆ ಮರ್ತ್ಯದಲ್ಲಿ 'ಹಂದಿ'ಯಾಗಿ ಹುಟ್ಟು ಎಂದು ಶಾಪವಿತ್ತನು. ಶಾಪಗ್ರಸ್ಥ ಕೇಟಕಿಯು ನಡುನಡುಗುತ್ತ ತನಗೆ ಈ ಶಾಪದಿಂದ ಎಂದು ಬಿಡುಗಡೆ ನೀಡುವಿರೆಂದು ವಿನಂತಿಸಿಕೊಂಡನು. 'ನಿನಗೆ ಚರಶೇಷ ಪ್ರಸಾದ ಸಿಕ್ಕಿದಾಗ ಅದೇ ಉಶ್ಯಾಪವಾಗುವುದು' ಎಂದು ಹೇಳಿದನು. ಅದಕ್ಕಾಗಿ 'ಕೇಟಕಿ'ಯು ಮಾಂಡವ್ಯನಗರದಲ್ಲಿ ಹಂದಿಯಾಗಿ ಜನಿಸಿ ಕಾಲಾಂತರದಲ್ಲಿ ಒಬ್ಬ ಶಿವಭಕ್ತನು ಮಾಂಡವ್ಯಪುರದ ಬಳಿಯಲ್ಲಿ ಹರಿಯುತ್ತಿರುವ ನೀರಿನಲ್ಲಿ ಸ್ನಾನ ಮಾಡಿ, ಶಿವಪೂಜೆ ಮುಗಿಸಿ, ಲಿಂಗಪ್ರಸಾದ ಸ್ವೀಕರಿಸುತ್ತಿರಲು ಒಂದು ಅಗುಳುಪ್ರಸಾದ ಕಣ್ಣಿಗೆ ಕಾಣದೆ ಉಳಿಯಿತು. ಅದನ್ನೇ ಆ ಹಂದಿ ತಿನ್ನಲು ಮುನ್ನಿನ ರೂಪಪಡೆಯಿತು. ಇದು ಜಂಗಮಪ್ರಸಾದದ ಮಹಿಮೆ. ಇದನ್ನರಿತ ಮಹಾದೇವಭೂಪಾಲನು ಜಂಗಮ ತೃಪ್ತಿಗಾಗಿ ಅವರನ್ನು ಮೊದಲಿನಿಂದಲೂ ಆರಾಧಿಸುತ್ತ ಬಂದಿದ್ದಾನೆಂದು ತಿಳಿಸಿದನು. ಆಗ ಪುಳಕಿತನಾದ ಬಸವರಸನು ಆ ಸುವಾರ್ತೆಯ ತಂದ ಪರಿಚರನಿಗೆ ಬಹುವಿಧದಲ್ಲಿ ಸತ್ಕರಿಸಿದನು. ''ಈಶನವತಾರ ಜಂಗಮವ ತರವೇಳ್ಕುಂ'' (೩-೭೯) ಎಂದು ಸಂಕಲ್ಪ ಮಾಡಿದನು.

೪ನೆಯ ಸಂಧಿ : ಬಸವದಂಡೇಶನು 'ವ್ಯಾಪಾರಿ'ಯ ವೇಷಧರಿಸಿಕೊಂಡನು. ಬಹುವಿಧದ ಸರಕನ್ನು ಕಟ್ಮೋಗರ ಬುತ್ತಿಯನ್ನು ಹಸುಬೆಯೊಳಗೆ ತುಂಬಿಕೊಂಡು ಜಂಗಮರನ್ನು ಕದ್ದು ತರಲು ಸಿದ್ಧನಾದನು. ವಿಷ್ಣುವು ಬಲಿಯೆಡೆಗೆ ವೇಷಮರೆಸಿ ಹೋದಂತಲ್ಲ ರಾವಣನುಮಾಯಾವೇಷದಿಂದ ಸೀತೆಯೆಡೆಗೆ ಬಂದಂತಲ್ಲ ಹರಿಶ್ಚಂದ್ರನೆಡೆಗೆ ಬಂದ ಕೌಶಿಕ ನಂತಲ್ಲ, ಬಸವನ ಪರಿಯೇ ಬೇರೆ!......

ತಸ್ಕರದಿ ತನ್ನೊಡಲ ಪರಿಯೆ ವಿಧಿ
ವಶದೊಳಗೆ ಮುಳುಗುವರು ತದ್ಧನವತವಕದಿಂ
ದಸಮಾಕ್ಷಶರಣರ್ಗೆ ಸವಿಯೆ ಸದ್ಯೋನ್ಮುಕ್ತಿಯಹುದೆಂದು....(೪-೫)
ಮನದಲ್ಲಿ ನಿರ್ಣಯಿಸಿದನು.
"ಕದ್ದು ತರ್ಪರುಧನವನಿಳೆಯೊಳುಂ ಚೋರರುಂ
ಕದ್ದವರುಮುಂಟೇ ಜಂಗಮವನೀಜಗದೊಳಗೆ"

ಹೌದು 'ಬಸವಣ್ಣನು ಜಂಗಮಚೋರ! ಶೆಟ್ಟಿಗಳ ಕುಲಶಿರೋಮಣಿಯಂತೆ ವೇಷಧರಿಸಿ ಜಂಗಮದ ಕಟ್ಟಳೆಯನೆಲ್ಲ ನೀಲಾಂಬಿಕೆಗೆ ಹೇಳಿದನು. ಚರಮೂರ್ತಿಗಳನ್ನು ಕಾಣುವಾಕಾಂಕ್ಷೆಯಿಂದ ಮನೋವೇಗದಲ್ಲಿ ಮಾಂಡವ್ಯಪುರಕ್ಕೆ ಆಗಮಿಸಿದ ಬೀದಿ ಬೀದಿಗಳಲ್ಲಿ ಶುಂಠಿ, ಇಂಗು, ಮೆಣಸು, ಉಪ್ಪು ಕೊಳ್ಳಿರೆಂದು ಅಲೆದಾಡಿದ ಹೊತ್ತುಮುಳುಗಿ ಕತ್ತಲಾವರಿಸಿತು. ಮಹಾದೇವಭೂಪಾಲನು ಎಂದಿನಂತೆ "ಗುರು-ಲಿಂಗ-ಜಂಗಮವ ಭಜಿಸಿ ಅಷ್ಟವಿಧದಿಂದ ಚರಶೇಷ ಲಿಂಗಾರ್ಪಣಂಗೈದು, ತಾನುಂಡು. ಶಿವಧ್ಯಾನಗೈಯುತ್ತ ನಿದ್ರಾವಶನಾಗುವನು. ಅದೇ ಸಮಯಸಾಧಿಸಿ ಬಸವೇಶನು 'ಕಳ್ಳನಂತೆ ಅರಮನೆಯ ಪ್ರವೇಶ ಮಾಡಲು' ಬಾಗಿಲಲ್ಲಿ ನಾಗವಾಸಿಗಳು ತಡೆದರು.

..................ವಿಮಳ ಜಂಗಮದ ಸುಪ್ರಸಾದ
ನಿತ್ಯಪಡೆದುಂಬೆ ವ್ರತತಪ್ಪಿದಡೆ ಮತ್ಪ್ರಾಣ
ಉತ್ತರಿಪೆ ಶಿವಭಕ್ತರೊಧೆ ನೃಪಗೆ ಬಿಡದೆನಲು (೪-೧೩)

ಹೆದರಿ ಸುಮ್ಮನಾದರು. ಬಸವಣ್ಣನು ಮನೆಯೊಳಗೆ ಪ್ರವೇಶಿಸುತ್ತಾನೆ. ಅದು ಮನೆಯಲ್ಲ ಶಿವನಿಲಯವೆಂಬಂತೆ ಗೋಚರಿಸಿತು. ತಾನೂಮಜ್ಜನಗೈದು ತ್ರಿಪುಂಡ್ರಧಾರಿಯಾಗಿ ಜಂಗಮಗೃಹದಲ್ಲಿ ಕಾಲಿಟ್ಟು ನೋಡಲು ಜಂಗಮರೆಲ್ಲ ಶಿವಲೀಲೆಯಲ್ಲಿದ್ದುದು ಕಂಡುಬಂತು. ಅವರಿಗೆ ಸಾಷ್ಟಂಗವೆರಗಲು ಯತಿ ಯೋರ್ವನು

"ಎಂತು ಬಂದೆಲವೋ ಮಠದೊಳು ಪೊಕ್ಕು ನೀನುನರ
ರಂತೆ ತೋರುವುದಿಲ್ಲ" (೪-೧೯)

ಹೆಸರೇನು? ಯಾವ ಊರು? ಎಂದು ಪ್ರಶ್ನಿಸುವನು. ಶಿವರೂಪಿಯೇ ಕೇಳು, ನಾವುಕಲ್ಯಾಣದವರು. ವಿರಕ್ತರ ಬಂಧು, ನನ್ನ ಹೆಸರು ಕೋರಿಯ ಸಂಗ, ವ್ಯಾಪಾರವೇ ನಮ್ಮ ವೃತ್ತಿ. ನಿತ್ಯ ಪ್ರಸಾದದಕಟ್ಟಳೆಯೆ ಮಗುಂಟು ಈ ಪುರದಲ್ಲಿ ಜಂಗಮರನ್ನು ಅರಸಿ ಕಾಣದೆ ಈ ಮಠದ ಬಾಗಿಲಕಾಯ್ದುರಿಗೆ ಹೇಳಿ ಬಂದಿರುವೆ. ಪ್ರಸಾದವನ್ನು ನೀಡಿರಿ ಎಂದು ಬಸವರಸನು ಎರಗಿದನು.

"ಜತಿಗಳೆಲ್ಲರ ಬಿಟ್ಟು ಲಿಂಗಾರ್ಪಣಂಗೈಯ್ಯಲಾಗದೆನೆ ೪(೨೧)

ಬಸವಣ್ಣನು ಸರ್ವರ್ಗೆ ಬಿನ್ನಹಮಿದೆ" ಎನ್ನಲು ಅತಿಪೊಸತು ಇವನು ನೀಡುವನೆಂತೋ ನೋಡುವೆವು ಯೆನುತ..... (೪-೨೧) ಬಂದ ಎಲ್ಲರನ್ನೂ ಭೋಜನಶಾಲೆಯಲ್ಲಿ ಕುಳ್ಳಿರಿಸಿ ಹರುಷದಿಂದ 'ಕಟ್ಬೋಗರ'ವನ್ನು ಹೊರತೆಗೆಯಲು ಒಬ್ಬರಿಗೆ ಸಾಲದು, ಎಲ್ಲರಿಗೂ ಎಂತು ನೀಡುವೆ? ಪುರದೊಳು ತಿರುಗಿ ಹಸಿದಿರುವೆ, ನೀನೆ ಸ್ವೀಕರಿಸಿಬಿಡು ಎಂದು ಪರಿಹಾಸಗೈದರು. ಇನಿತಿನಿತು ಸವಿನೋಡಿರಿ ಎಂದು ತನ್ನ ಪರುಷಹಸ್ತದಿಂದ ಆರುಸಾವಿರ ಜಂಗಮರಿಗೆ ನೀಡಿ ತೃಪ್ತಿಪಡಿಸಿದರೂ

'ಮತ್ತೆ ಮುನ್ನಿನವೊಲು ಆ ಬೋನವಿರೆಕಂಡು' (೪-೨೩)

ಬೆರಗಾದರು. ಆಜಂಗಮರು ಬಸವಣ್ಣನಿಂದ ಕಲ್ಯಾಣದ ಮಹಿಮೆಯನ್ನು ಆಲಿಸಿ ಅಚ್ಚರಿದಳೆದು ತಾವೂ ಕಲ್ಯಾಣವನ್ನು ಕಾಣಬೇಕೆಂದು ಇಚ್ಛೆ ವ್ಯಕ್ತಪಡಿಸಿದರು.

'ಮನವೊಲಿದು ನೀವು ಬಂದರೆ ನಾನು ಕರೆದೊಯ್ವೆ (೪-೨೫)

ಎನ್ನಲು ಬಂದಪೆವು ವೊಯ್ವುದೆಂತೋ ಎಂದರು. ಈಗ ಕದ್ದೊಯ್ಯುವುದೊಂದೇ ದಾರಿ ಎಂದು ತಿಳಿಸಿ ತನ್ನ ಹಸುಬೆಯಲ್ಲಿ ಆ ಜಂಗಮರನ್ನೆಲ್ಲ ತುಂಬಿಕೊಂಡು ನಿಮಿಷಾರ್ಧದಲ್ಲಿ ಕಲ್ಯಾಣಕ್ಕೆ ಬಂದನು.

ಇತ್ತ ಮಾಂಡವ್ಯಪುರದಲ್ಲಿ ಶಿವಯೋಗ ನಿದ್ರೆಯಿಂದೆದ್ದು ಮಹಾದೇವಭೂಪಾಲನು ಮಜ್ಜನಗೈದು ಜಂಮಾರ್ಚನೆಗೆ ಹೋಗಲು ಅಲ್ಲಿ ಒಬ್ಬಜಂಗಮನೂ ಇಲ್ಲ! ಕ್ರೋಧ ತಪ್ತನಾದ ಅರಸನು ಕಾವಲುಗಾರರನ್ನು ಪ್ರಶ್ನಿಸುತ್ತಾನೆ. ಇಲ್ಲಿಗೆ ಬೇರಾರೂ ಬಂದಿಲ್ಲ, ಒಬ್ಬ ಶಿವಭಕ್ತಮಾತ್ರ ಹಸುಬೆಯನ್ನು ತೆಗೆದುಕೊಂಡು ಬಂದಿದ್ದು ಶಿವಪೂಜೆ ಮುಗಿಸಿಕೊಂಡು ಹೋದನೆಂದು ಹೇಳಿದರು. ಆಗ "ಬಸವೇಶನಲ್ಲದುಳಿದರ್ಗಳವೆ ಮಠಪೊಕ್ಕು ನುಸುಳಿಪೋಗುವದು." (೪-೩೨)

ಎಂದು ನಿಶ್ಚಯಿಸಿ ಕೋಪಾಟೋಪದಿಂದ ತನ್ನ ಸೇನೆಯೊಡಗೂಡಿ ಹೋಗಿ "ಮಸಿಗೆಯ್ವೆ ಕಲ್ಯಾಣಪುರವ ಬಸವನ ಹತಿಸಿ ವಿಸರ ಜಂಗಮವೆಲ್ಲ ತಹೆನೆಂದು" (೪-೩೨) ಯೋಚಿಸುತ್ತಿದ್ದನು. ಆಗ ಒಬ್ಬ ಪೌರಾಣಿಯು ಬಂದು ಅರಸನನ್ನು ತಡೆದು "ಬಸವೇಶ್ವರನು ಸಾಮಾನ್ಯನಲ್ಲ"ವೆಂದು ತಿಳಿಸಿ ಆತನ ಮಹಿಮೆಯನ್ನು ಹೇಳತೊಡಗಿದನು.

[illegible]

೫ನೆಯ ಸಂಧಿ : ಕಲ್ಯಾಣದ ಮೇಲೆ ಯುದ್ಧಸಾರಿ ಹೊರಟಿದ್ದ ಮಹಾದೇವಭೂಪಾಲನು ರೋಷದಿಂದ ಕಿಡಿಕಿಡಿಯುಗುಳುತ್ತಿರಲು ಪೌರಾಣಿಯು ಬಸವೇಶನ ಮಹಿಮೆಯನ್ನು ಹೀಗೆ ಬಣ್ಣಿಸುತ್ತಾನೆ.

"ಬಡವ ತಾ ಮುನಿದು ಮಾಡಿದ ಸಿಟ್ಟು
ದವಡಿಂಗೆ ಮುಪ್ಪುಮೆಂಬರು ಬಸವನತ್ಯಂತ ಸುಲಭ ಸದ್ಭಕ್ತಜನಕೆ" (೫-೩)

ವಿರಸಕ್ಕವನು ನರನಲ್ಲ, ಎರಡನೆಯ ಶಂಭುವೆನಿಸಿದವನೊಡನೆ ಮತ್ಸರತಾಳುವುದೇ? ಬಲ್ಲಿದರ ಕೂಡೆಯಬಲರಿಗೆ ಪಗೆಸಲ್ಲ. ಬಸವಣ್ಣ ಅಸಾಮಾನ್ಯ ಅವನ ಮಹಿಮೆಯನ್ನು ಒರೆಯಲು ಉರಗೇಂದ್ರ ಗಳವಲ್ಲ, ಸಂಕ್ಷೇಪವಾಗಿ ಬಿತ್ತರಿಸುವೆನು. ಬಸವಣ್ಣನು ಗುರುಲಿಂಗ ಜಂಗಮರನ್ನು ಸಾಕ್ಷಾತ್ ಶಿವನೆಂದು ಬಗೆದು ನಿತ್ಯದಲ್ಲಿ ಭಜಿಸುತ್ತಾನೆ. ಜಂಗಮರೆಂದರೆ ಅವನಿಗೆ ಪ್ರಾಣ, ಅವರಿಗೆ ಬೇಡಿದ್ದನ್ನು ನೀಡುವನು. ಬಸವಣ್ಣನು ಒಂದು ದಿನ ಸಚಿವರೊಡಗೂಡಿ ಬರುತ್ತಿದ್ದನು. 'ಕಕ್ಕಯ್ಯನೆಂಬ ಶರಣನು ಅವರನ್ನು ಆರೋಗಣೆ ಮುಗಿಸಿಕೊಂಡು ಹೋಗಲು ಬೇಡಿಕೊಂಡನು. ಆದರೆ ಬಸವಣ್ಣನು ಮುಂದೆ ಸಾಗಿ ತನ್ನಗೆಳೆಯರನ್ನೆಲ್ಲ ಬೀಳ್ಕೊಂಡು ಕಕ್ಕಯ್ಯನ ಮನೆಗೆ ತಿರುಗಿ ಬಂದು ನೋಡುತ್ತಾನೆ. ಮನೆಯ ಬಾಗಿಲು ಮುಚ್ಚಿತ್ತು. ಬಸವಣ್ಣನನ್ನು ಪ್ರಸಾದಕ್ಕೆ ಕರೆದರೆ ಮಿಕ್ಕಿ ಹೋದನು ಅವನ ಬರವನ್ನು ಹಾರೈಸಿ ಹನ್ನೆರಡುವರುಷ ಕಾದಿದ್ದೆನು. ಇನ್ನೇನು ಮಾಡುವುದು? ಎಂದು ಕಕ್ಕಯ್ಯನು ಪ್ರಸಾದವನ್ನು ಸಕ್ಕರೆಯ ರೂಪದಲ್ಲಿ ಇರುವೆಯ ಮುಖಾಂತರ ಕಳುಹಿಸಿದನು. ಅದನ್ನು ನೋಡಿ ಬಸವೇಶನು. ಅರಿವೆಯಲ್ಲಿ ಕಟ್ಟಿಕೊಂಡು ತನ್ನ ಮನೆಗೆ ಹೋದನು. ಮುಕ್ಕಣ್ಣನ ಮಂತ್ರಾಧಿ ದೇವತೆ ಎನಿಸಿದ ಅಕ್ಕನಾಗಮ್ಮನು ಆ ಪ್ರಸಾದವನ್ನು ಲಿಂಗಾರ್ಪಣಗೈದು ಸೇವಿಸಿದಳು. ಆ ಪ್ರಸಾದವೇ ನಾದಬಿಂದುಕಳಾರೂಪವಾಗಿ ಅವಳ ಉದರದಲ್ಲಿ ಪಿಂಡಾಂಡವೆನಿಸಿತು. ತರುಣಿ ಗರ್ಭಿಣಿಯಾದ ಸುದ್ದಿ ಮಂಚಣ್ಣನಿಗೆ ತಿಳಿಯಿತು. ಧರಣಿಯೊಳು ಸುಪ್ರಸಿದ್ಧಮುಮಾಗಬೇಕೆಂದು ಒಂದು ದಿನ ಬಿಜ್ಜಳನೊಡನೆ ಕುಳಿತಾಗ ಮೆಲ್ಲಗೆ ಈ ಕುರಿತು ಮಾತು ತೆಗೆಯುತ್ತಾನೆ.

"ಭೂವಲ್ಲಭನೇ ಕೇಳು ಬಸವೇಶ ಪರವಸ್ತುಪರ
ವಲ್ಲಭೆಯ ಪರಧನಕೆ ಮನವೆಳಸೆ ನರಕಮಹುದೆಂದು ಸಾರಿಸುತಲಿಹನು"

ಈಗ ಅವನಕ್ಕ ಅಕ್ಕನಾಗಲೆ ಗರ್ಭಿಣಿ, ಆಕೆಗೆ ಗಂಡನಿಲ್ಲ. ವಿಚಾರಿಸಬೇಕಾದ ಮಾತು ಎಂದುಸುರಿದನು. ಆಗ ಬಿಜ್ಜಳನು ಬಸವಣ್ಣನನ್ನು ಕರೆದು ವಿಚಾರಿಸುತ್ತಾನೆ. "ರಾಜನೇ ಅದು ಕಕ್ಕಯ್ಯಗಳ ಪ್ರಸಾದದ ಮಹಿಮೆ. ಅವಳ ಗರ್ಭದಿಂದ ಶಿವಪುತ್ರ ಜನಿಸುವುದು ಖಂಡಿತ" ಎಂದುತ್ತರವಿತ್ತ. ಅದನ್ನು ಕೇಳಿ ಅಚ್ಚರಿಗೊಂಡ ಮಹಾರಾಜನು...... ಅವನಿಯೊಳು ಗಂಡರಿಲ್ಲದೆ ಮಕ್ಕಳಂಪಡೆದವರೊಳರೆ...? ಎಂದು ಅನುಮಾನಿಸುತ್ತಾನೆ. "ಕೊಂಡೆ ಮಂಚಣ್ಣನು ಕೊಂಡ ಪ್ರಸಾದ ಪಿಂಡವಾದದ್ದಾದರೆ ಆ ಪಿಂಡಗರ್ಭದಲ್ಲಿದ್ದುಕೊಂಡೇ ಮಾತಾಡ ಬಹುದಲ್ಲವೇ?" ಎಂದು ಪ್ರಶ್ನಿಸಿದನು. ಆಗ ಬಸವಣ್ಣನು ಅಕ್ಕನಾಗಾಯಿಯನ್ನೆ ಕರೆಸಿ ಸಭಾಮಧ್ಯದಲ್ಲಿ

ನಿಲ್ಲಿಸುವನು. ''ಘನಮಹಿಮನೇ ಜನತೆ ನಮ್ಮನ್ನು ಜರಿದು ಮಾತನಾಡುತ್ತಿದೆ ಮಾತಾಡು'' ಎಂದು ಬಿನ್ನವಿಸಿಕೊಳ್ಳುತ್ತಾನೆ ಬಸವೇಶ. ಆಗ ಆ ಪಿಂಡವು ''ನಾನೇ ಈ ಪೂರ್ವದಲ್ಲಿ ಕೂನಪಾಂಡ್ಯನನ್ನು ಮೆಟ್ಟಿ ಹಾಕಿದವನು. ನಾನೇ ಆ ಕಾರ್ತಿಕ ಶಿವನರೂಪ ಈಗ ಕಕ್ಕಯ್ಯನ ಪ್ರಸಾದದಿಂದ ದೇಹಧರಿಸಿ ಬಂದಿದ್ದೇನೆ. ಜಗತ್ತಿನಲ್ಲಿರುವ ದುಷ್ಟರ ಗರ್ವವನ್ನು ಮುರಿದು ಷಟ್‌ಸ್ಥಳವನ್ನುದ್ಧರಿಸುವೆ, ನನ್ನ ತಾಯಿಗೆ ತಪ್ಪು ಹೊರಿಸಿದವರ ನಿಟ್ಟೆಲುವು ಮುರಿಯದಿರಲಾರೆ'' ಎಂದು ಆರ್ಭಟಿಸಿತು. ಅದನ್ನು ಕೇಳಿ ಮಂಚಣ್ಣ ಮೆತ್ತಗಾದನು. ಬಿಜ್ಜಳನು ಬಸವಣ್ಣನಿಗೆ ''ನಿಮ್ಮ ಮಹಿಮೆಯ ನೀವೇ ಬಲ್ಲಿರೆ'' ಎಂದು ಮೌನವಾಂತನು. ಬಸವೇಶನು ತನ್ನ ಅಕ್ಕನೊಂದಿಗೆ ಮಹಾಮನೆಗೆ ಬಂದು ತ್ರಿಕಾಲದಲ್ಲಿ ಜಂಗಮಾರಾಧನೆ ಮಾಡುತ್ತ ಸುಖವಾಗಿದ್ದನು.

ಚೆನ್ನಬಸವಣ್ಣನ ಜನನವಾಯಿತು. ತಾಯಿನಾಗಲಾಂಬಿಕೆ ಭಸಿತ ರುದ್ರಾಕ್ಷಿತೊಡಿಸಿ ಮಗುವಿಗೆ ಮುದ್ದಿಟ್ಟು ನಲಿದಾಡಿದಳು. ಚನ್ನಬಸವಣ್ಣ ಹುಟ್ಟಿದಾಗಲೇ ಪರಮವಿರಕ್ತ. ಷಟ್‌ಸ್ಥಳವನ್ನು ಉದ್ಧರಿಸುವ ಮಹಾತ್ಮನಾದನು. ಮಹಾಜಂಗಮ ಮೂರ್ತಿಯಾಗಿ ಗುರುವಿಗೆ ಗುರುವಾಗಿ ಮೆರೆದನು. ಗುರುವಿನ ಗುಣವನ್ನು ಲಿಂಗದಲ್ಲಿ ಕಂಡುಕೊಂಡ ಚೆನ್ನಬಸವಣ್ಣ ವೀರಶೈವದಲ್ಲಿನ ಕಂದಾಚಾರಗಳನ್ನು ಕಿತ್ತೊಗೆದ ಮಹಾನುಭಾವ ನಂತರ ಪೌರಾಣಿಯು ಮಹಾದೇವಭೂಪಾಲನಿಗೆ ಮತ್ತೊಂದು ಸತ್ಕಥೆಯನ್ನು ಹೇಳತೊಡಗಿದನು.

ಒಂದು ದಿನ ನೃಪನೊಡನೆ ಬಸವೇಶನು ಲೆತ್ತವನಾಡುತ್ತ ಕುಳಿತಿರಲು, ಒಮ್ಮೆಲೇ ತನ್ನ ಹಸ್ತವನ್ನು ಮೇಲಕ್ಕೆತ್ತಿದನು. ಅವನೀಶನು ಅತ್ಯಂತ ಕೋಪದಿಂದ ''ಒಮ್ಮೆಲೇ ಕೈನೆಗವಲು ಇಷ್ಟೊಂದು ಬಲಬಂದಿತೇ''? ಎಂದು ಕೇಳಿದನು. ಹಾಗೇನಿಲ್ಲ ದೊರೆಗಳೇ ದಾರಿಯಲ್ಲಿ ಮೊಸರಿನಗಡಿಗೆ ಹೊತ್ತು ನಡೆಯುತ್ತಿದ್ದ ಒಬ್ಬ ಮಹಿಳೆ ಎಡವಿ ಬಸವಾ ಎಂದಳು. ಅವಳ ತಲೆಯ ಮೇಲಿನ ಕೊಡಬೀಳಬಾರದೆಂದು ಕೈಯೆತ್ತಿ ಹಿಡಿದೆ ಎಂದನು. ಅರಸನು ತನ್ನ ಅನುಚರರನ್ನಟ್ಟಿ ಅವಳನ್ನು ಕರೆಕಳುಹಿಸಿ ಪರೀಕ್ಷಿಸಲು ಅದು ದಿಟವಾಗಿತ್ತು. ಮತ್ತೊಂದು ದಿನ ''ಘಳಿಗೆಯ ಬಟ್ಟಲವನು'' ಬಂದು ಅಸ್ತಮದ ಸಮಯವಿದು. ಆದರೂ ಸೂರ್ಯನು ಗಗನದಲಿ ಹಾಗೇ ನಿಂತಿರುವನು. ಎಂದು ಕಳವಳ ವ್ಯಕ್ತಪಡಿಸಲು ನೃಪನು ಬಸವೇಶನನ್ನು ಕೇಳುವನು. 'ವಾರವಧು (ವೇಶ್ಯೆ) ಮಹಾದೇವಿ'ಯು ಅಭ್ಯಂಜನಗೈದು ಉಪ್ಪರಿಗೆ ಏರಿ ತನ್ನ ತಲೆಗೂದಲನ್ನಾರಿಸಲು ಬಿಸಿಲು ಸಾಲದು ಎಂದು ರವಿರಥವನ್ನು ನಿಲ್ಲಿಸಿಹಳೆಂದು ಹೇಳುತ್ತಾನೆ. ಭೂಲೋಕಕ್ಕಿದು ಅಚ್ಚರಿ. ಅಬಲ ನಾರಿಯ ಕೈಯಿಂದಪ್ಪ ಕೆಲಸವೇನಿದು? ಎಂದು ಅರಸನು ಪ್ರಶ್ನಿಸುವನು. ಬಸವಣ್ಣನು ನೇರವಾಗಿ ಸೌಧಾಗ್ರದಲ್ಲಿ ಕೇಶವನೊಣಗಿಸುವ ನಾರಿಯ ಬಳಿ ಅರಸನನ್ನು ಕರೆದೊಯ್ಯುತ್ತಾನೆ. ಅವಳಿಂದ ರವಿಗೆ ಬಸವೇಶನ ಪಾದದಾಣೆ ಇಡಲು, ಚಲಿಸದೇ ನಿಂದಿಹನೆಂದು ಸಾದ್ಯಂತವಾಗಿ ಹೇಳಿಸುತ್ತಾನೆ. ಬೆರಗಾದ ನೃಪನು ''ಆಣೆಬಿಡು. ರವಿಚಲಿಸಿದರೆ ಭೂಮಿಗೇ ಇದು ಹೊಸತೆಂಬೆನು,'' ಎನ್ನುವನು ಆಜ್ಞೆಯನ್ನು ತೆಗೆಯುತ್ತಾಳೆ. ರವಿ ಅಸ್ತಮಿಸುತ್ತಾನೆ. ರಾಜನು ಭಾವುಕನಾಗಿ ಭಕ್ತಿಯಿಂದ ಬಸವರಸನಿಗೆ ವಂದಿಸುತ್ತಾನೆ.

[illegible]

ಪೌರಾಣಿಯು ಮತ್ತೊಂದು ಬಸವಮಹಿಮೆಯ ಕಥೆಯನ್ನು ಬಿತ್ತರಿಸುವನು. ಒಂದು ದಿನ ಹಗಲಿನಲ್ಲಿ ಸಚಿವರೊಡಗೂಡಿ ಬಸವಣ್ಣನು ನೃಪಸಭೆಯಲ್ಲಿದ್ದರು. ಇತ್ತ ಬೆಲೆವೆಣ್ಣು ನಿಂಬದೇವಿಯು ಬ್ರಾಹ್ಮಣ ಕೇರಿಯಲ್ಲಿ ಬರುತ್ತಿದ್ದಳು. ಆಗ ''ಗುರುವಿನಿಂದ ಲಿಂಗವನ್ನು ಪಡೆದು, ಒಲಿಸಿ ಪೂಜಿಸುವವರು ಯಾವ ಕುಲದವರಾದರೂ ಅಂತ್ಯದಲ್ಲಿ ಶಿವಪದವ ಪಡೆವರು'' ಎಂದು ಓದುತ್ತಿದ್ದುದನ್ನು ಕೇಳುತ್ತಾಳೆ. ಭವಿತನಕೆ ಹೇಸುತ್ತ ಭಕ್ತಿ ಪಲ್ಲವಿಸಿ ''ಲಿಂಗಧರಿಸದೆವುಣಲ್ಕಾಗದೆಂದು'' ಪ್ರತಿಜ್ಞೆಮಾಡುತ್ತಾಳೆ. 'ಮಿಂಡನಾಗಯ್ಯ'ನೆಂಬ ವಿಟಜಂಗಮನನ್ನು ಕಂಡು ಕಾಲ್ಗೆರಗಿ ''ಲಿಂಗವ ಧರಿಸಿ ಎನಗೆ'' ಎಂದು ಬೇಡುತ್ತಾಳೆ. ಆತನುನಸುನಗುತ್ತ ''ದುಂಡು ನಿಂಬೆಯಹಣ್ಣು'' ಕೊಡುತ್ತಾನೆ. ಅದನ್ನೇ ಶಿವಲಿಂಗವೆಂದರಿದು ಶಿವಭಕ್ತಿಯಿಂದಾಕೆ ಭಜಿಸುತ್ತ ಭವಿಗಳ ಸಂಪರ್ಕತೊರೆಯುತ್ತಾಳೆ. ಅರಸನು ಇದರ ಅರ್ಥವೇನೆಂದು ಬಸವಣ್ಣನನ್ನು ಕೇಳುತ್ತಾನೆ. ''ನೂರೊಂದು ಕುಲದೊಳಾರಾದೊಡಂ ಶಿವಪೂಜೆ ಮಾಡಲವರೆ ವಸುಧೆಗತ್ಯುತ್ತಮರು'' ಎಂದು ತಿಳಿಸುತ್ತಾನೆ. ಬಸವಣ್ಣ ಆಗ ಕೊಂಡೆಮಂಚಣ್ಣನು ದೊರೆಗಳೆ, ಅವಳು ಪೂಜಿಸುವುದು ಲಿಂಗವಲ್ಲ, ಲಿಂಬೇಹಣ್ಣು ಎಂದು ಪರಿಹಾಸ್ಯ ಮಾಡುತ್ತಾನೆ. ಇಲ್ಲಿ ಶಿವಶರಣರು ಲಿಂಗವನ್ನಲ್ಲದೆ ಮತ್ತೇನನ್ನೂ ಭಜಿಸರು. ಬೇಕಾದರೆ ಅವಳನ್ನು ಪರೀಕ್ಷಿಸಬಹುದು ಎಂದು ಭಿನ್ನವಿಸುತ್ತಾನೆ. ಅದಕ್ಕೆ ಸಾಕ್ಷಿಯಾಗಿ ಅವಳ ಕರಡಿಗೆಯಲ್ಲಿ ಶಿವಲಿಂಗವಿದ್ದುದು ಕಂಡುಬಂದಿತು.

ಮತ್ತೊಂದು ಸಲ ಅರಮನೆಯ ಬಾಣಸದ ಕೆಲಸಗಿತ್ತಿಯರನ್ನೆಲ್ಲ ಕರೆದು ಜಂಗಮವೇಷ ಹಾಕಿಸುತ್ತಾರೆ. ಬಸವೇಶ ಬರುತ್ತಲೇ ''ನಿನ್ನ ಭಕ್ತೇನಾಯ್ತು. ಕಾಣೆವನ್ನವನು ವುಣಬಡಿಸೆಂದು ಕುಳಿತಿಹರು. ಇವರನ್ನು ಭಜಿಸುವುದಿಲ್ಲವೆ? ಎಂದು ಅರಸನು ಕೇಳುತ್ತಾನೆ. ರಾಜನು ತನ್ನ ಸತ್ತ್ವಪರೀಕ್ಷೆ ಮಾಡುತ್ತಿರುವನೆಂದು ತಿಳಿದು ಆ ವೇಷಧಾರಿ ಜಂಗಮರನ್ನೆಲ್ಲ ತನ್ನರಮನೆಗೆ ಕರೆದೊಯ್ದು ಅವರನ್ನು ನಿಜಜಂಗಮರೆಂದೇ ಪೂಜಿಸಿದನು. ಅವರೆಲ್ಲ ಜಂಗಮರಾಗಿಯೇ ಉಳಿದು ಬಿಟ್ಟರು. ಇತ್ತ ಬಿಜ್ಜಳನ ಅರಮನೆಯಲ್ಲಿ ಕೆಲಸದವರೇ ಇಲ್ಲವಾದರು. ಇನ್ನೇನು ಗತಿ? ಎಂದು ಬಿಜ್ಜಳನು ಚಿಂತಿಸತೊಡಗಿದನು. ಬಸವರಸನು ದೊರೆಗಳೇ, ಸುಮ್ಮನೆ ಚಿಂತಿಸದಿರಿ, ಅರಮನೆಯ ಅಡುಗೆಮನೆ ಪ್ರವೇಶ ಮಾಡಿ ನೋಡಿರೆಂದು ಬಿನ್ನವಿಸಿಕೊಳ್ಳುತ್ತಾನೆ. ಎಲ್ಲ ಊಳಿಗದಾಳುಗಳೂ ಎಂದಿನಂತೆ ಕೆಲಸದಲ್ಲಿದ್ದ ಚೋದ್ಯವನ್ನು ಕಂಡು ಬಿಜ್ಜಳನಿಗೆ ಬಸವಣ್ಣನ ಬಗ್ಗೆ ಮತ್ತಷ್ಟು ಪೂಜ್ಯಭಾವ ಉದಿಸುತ್ತದೆ.

ಇನ್ನೊಂದು ದಿನ ಕಲ್ಯಾಣದಲ್ಲಿಪುರುಷ ಶವವನ್ನು ಹೊತ್ತು ಹೋಗುತ್ತಿದ್ದರು. ಆ ಸತ್ತವನ ಪತ್ನಿ ಬಸವಣ್ಣನ ಪಾದಕ್ಕೆ ಬಿದ್ದು 'ನನ್ನನ್ನು ಮುತ್ತೈದೆಯನ್ನಾಗಿ ಮಾಡಿರಿ' ಎಂದು ಬೇಡುವಳು. ಬಸವಣ್ಣನು ಅವಳನ್ನು ಮೇಲಕ್ಕೆತ್ತಿ ಶಿವ, ಶಿವಾ ಎಂದು ಕರೆಯಲು ಹೆಣಕ್ಕೆ ಜೀವಬಂದಿತು. ಹೀಗೆ ಬಸವಣ್ಣ ಸಾಮಾನ್ಯ ಪುರುಷನಲ್ಲ ಅವನ ಮಹಿಮೆಯನ್ನು ಎತ್ತಿ ಹಿಡಿದ ಅನೇಕ ಕೃತಿಗಳಿವೆ. ಎಲ್ಲವನ್ನೂ ಹೇಳುವುದು ಅಸಾಧ್ಯ ಎಂದು ಪೌರಾಣಿಯು ಹೇಳುವನು.

[illegible]

[illegible]

[illegible]

೬ನೆಯ ಸಂಧಿ : ಪೌರಾಣಿಯು ಮಹಾದೇವಭೂಪಾಲನಿಗೆ ಶಿವನೊಡನೆ ಸೆಣಸಿ, ಭಂಗಪಟ್ಟು ಶರಣು ಹೊಕ್ಕ ದಕ್ಷನ ಪುರಾಣ ಪ್ರಸಿದ್ಧ ಕಥೆಯನ್ನು ಹೇಳುತ್ತಾನೆ.

ಧರಣೀಶ ಕೇಳು, ಒಮ್ಮೆ ಕೈಲಾಸಪುರದಲ್ಲಿ ಶಿವನು ಸಿಂಹ ಪೀಠದೊಳು ಮಂಡಿಸಿ ಓಲಗ ನಡೆಸುತ್ತಿದ್ದ 'ಹರನಿಗೆ ಮಗಳು ಗೌರಿ'ಯನ್ನಿತ್ತ ಗರ್ವದಿಂದ ದಕ್ಷನು ಅಲ್ಲಿಗೆ ಬಂದು ಈಶ್ವರನಿಗೆ ವಂದಿಸದೆನಿಂತ ಅವನನ್ನು ಶಿವನೂ ಲಕ್ಷಿಸಲಿಲ್ಲ. ಅವಮಾನಿತನಾದ ದಕ್ಷನು ಅತಿಕೋಪದಿಂದ ''ನನ್ನ ಮಗಳ ದೆಸೆಯಿಂದ ವನಿಗೆ ಅಖಿಳ ಐಶ್ವರ್ಯ ಬಂದುದನ್ನು ಮರೆತಿದ್ದಾನೆ. ಇವನನ್ನೇ ಇಲ್ಲವಾಗಿಸುವೆನೆಂದು 'ಯಜ್ಞ'ವನ್ನಾರಂಭಿಸುತ್ತಾನೆ. ಆಸಂಭ್ರಮಕ್ಕೆ ಶಿವಗೌರಿಯರನ್ನುಳಿದು ಮಿಕ್ಕೆಲ್ಲ ದೇವಾನುದೇವತೆಗಳು ಮುನಿವರರು, ರವಿಗ್ರಹನಿಕರಗಳಿಗೆಲ್ಲ ಆಮಂತ್ರಣ ನೀಡುತ್ತಾನೆ. ಇದನ್ನರಿತ ಶಿವನು ಕೋಪದಿಂದ ರೌದ್ರರೂಪ ತಾಳುವನು. ಅವನ ಹಣೆಗಣ್ಣಿನಿಂದ ವೀರಭದ್ರನು ಜನಿಸುವನು. ದಕ್ಷಯಜ್ಞನಾಶಗೈಯಲು ಅಪ್ಪಣೆ ಪಡೆದು ಮುಂದೆಸಾಗುವನು. ವೀರಭದ್ರನವತಾರಕ್ಕೆ

''ಪೊಡವಿ ನಡುನಡುಗಿ ಪೆಡೆಯಂಕೊಡಹಿದನು ಅಹಿಪ ಸಿಡಿದು ದಿಗ್ಗಿರಿಕರಿಗಳು
ಘೀಳಿಟ್ಟುಕೂರ್ಮ ಪಾತಾಳಕ್ಕೆ ಇಳಿದಡಗೆ
ಕಾಲಪ್ರಳಯಕ್ಕೆ ಮಿಗಿಲೆನಿಸಿತ್ತು ಬ್ರಹ್ಮಾಂಡ'' (ಸಂ. ೬, ಪ. ೬-೭)

ಶೂಲಪಾಣಿಯಪುತ್ರನರಿಕುಲಾರಣ್ಯಗ್ನಿ ಹೋತ್ರನಾದ ವೀರಭದ್ರನು ಬರುತ್ತಿರುವ ಸುದ್ದಿಯನ್ನು ನಾರದರು ದಕ್ಷನಿಗೆ ತಿಳಿಸುವರು. ದಕ್ಷನ ಅಗಣಿತಸೇನೆ 'ಸೂರ್ಯನಿಗೆ ಮೋಡಕವಿದಂತೆ ಇಂದು ಮಂಡಲವನ್ನು ರಾಹು ಮುತ್ತುವಂತೆ ವೀರಭದ್ರನತ್ತ ಹರಿದುಬಂತು. ವೀರಭದ್ರನ ವೀರಾವೇಶದ ಸಂಗ್ರಾಮಕ್ಕೆ ಧರಣಿ ತಲ್ಲಣಿಸಿತು. ಸೈನ್ಯದ ಕಾಲಿನಧೂಳಿ ಆಕಾಶವನ್ನಡರಿತು. ''ತೃಣದ ಪರ್ವತವ ಸುಡಲೊಂದು ಕಿಡಿಯು ಸಾಲದೇ''? ಎಂಬಂತೆ ದಿಕ್ಕರಿಗಳು ತಬ್ಬಿಬ್ಬುಗೊಡು ಆದಿಶೇಷನ ಕಂಧರ ಕುಸಿದು ಕುಲಶೈಲಗಳು ಸಿಡಿದು, ಸರ್ವಲೋಕಗಳೊಳು ''ದುರ್ದಿನಂದೋರಿ'' ಧರಣಿಬಾಯ್ದೆರೆಯಿತು. ವಿಷ್ಣುವು ಚಕ್ರಪ್ರಯೋಗಿಸಲು ವೀರಭದ್ರನಡಿಗೆರಗಿ ಮರಳಿ ಹರಿಯೆಡೆಗೆ ಹೋಯಿತು. ಕೊನೆಗೆ ದಕ್ಷನ ಶಿರವರಿದು ಉರಿದೇಳುತಿಹ ಹೋಮದೊಳುಬಿಸುಡಲು ದಳ್ಳುರಿಯಾರಿ ಅತಿ ಶಾಂತವಾಯಿತು. ಅಷ್ಟರಲ್ಲಿ ನಾರದರು ಬಂದರು. ವೀರಭದ್ರನನ್ನು ಪ್ರಶಂಸಿಸಿ ಜಗತ್ತಿಗಚ್ಚರಿಯಾಗುವಂತೆ 'ದಕ್ಷ'ನಿಗೆ ಜೀವದಾನಮಾಡಲು ಕೇಳಿಕೊಂಡರು. ಅದಕ್ಕೊಪ್ಪಿ ವೀರೇಶನು ಒಂದು ಟಗರಿನ ತಲೆತಂದು ದಕ್ಷನ ಮುಂಡಕ್ಕೆ ಜೋಡಿಸಿ ಜೀವವನ್ನಿತ್ತನು. ಪಶ್ಚಾತ್ತಾಪದಿಂದ ಬೆಂದ ದಕ್ಷನು

''ದೀಪ ಪತಂಗ ಬಡೆದಪನೆಂದು ತಾನೆಮೃತವಾದಂತೆ'' (೬-೮೧)

ಆಯಿತು ನನ್ನ ಸ್ಥಿತಿ ಇನ್ನಾದರೂ ಅವರೊಂದಿಗೆ ಸೇರುವುದೇಲೇಸೆಂದು ಶ್ರೀವೀರಭದ್ರನ ಪಾದ ಕಮಲದಿ ಭೃಂಗನಂತೆ ಬೀಳುವನು. ವೀರೇಶನು ಮನ್ನಿಸಿ ಕೈಲಾಸಕ್ಕೆ ಕರೆದೊಯ್ದನು. ವಿಜಯಿಯಾಗಿ ಮರಳಿದ

[illegible]

ವೀರೇಶನನ್ನು ಅಪ್ಪಿಕೊಂಡು ಶಿವನು ಕೊಂಡಾಡಿದನು. ಆತನಿಗೆ ವೀರಗಣಪಟ್ಟವನ್ನು ಕಟ್ಟಿ ಗಣಂಗಳು ಉತ್ಸಾಹದಿಂದ ಮೆರೆದಾಡಿದರು.

೭ನೆಯ ಸಂಧಿ : ಪೌರಾಣಿಯು ವಶಿಷ್ಠ ಕೌಶಿಕರ ಕಥೆಯನ್ನು ಹೇಳುತ್ತಾನೆ. ಸಾಕ್ಷಾತ್‌ಹರನೇ ನೆಲೆಸಿರುವ ತುಂಗಭದ್ರಾ ತೀರದಲ್ಲಿ ಗುರುವಶಿಷ್ಠ ವಿಶ್ವಾಮಿತ್ರರು ತಪೋನಿಷ್ಠಾರಾಗಿದ್ದರು. ಕೌಶಿಕನಿಂದ ಬ್ರಹ್ಮರ್ಷಿ ಪದವಿ ಪಡೆಯುವ ಬಯಕೆಯಿಂದ ವಶಿಷ್ಠರು ಉಗ್ರತಪಸ್ಸನ್ನಾಚರಿಸಿದರು. ಬ್ರಹ್ಮರ್ಷಿ ಪದವಿಯೊಂದಿಗೆ ತಾವುಗಳಿಸಿದ ತಪಸ್ಸಿನಲ್ಲಿ ಹನ್ನೆರಡು ವರುಷದ ತಪಸ್ಸನ್ನು ಕೌಶಿಕರು ವಶಿಷ್ಠರಿಗೆ ಧಾರೆಯೆರೆದು ಕೊಟ್ಟರು. ಮತ್ತೊಂದು ದಿನ ಕೌಶಿಕ ಯತಿವರ ವಶಿಷ್ಠರ ಆಶ್ರಮಕ್ಕೆ ಬರುತ್ತಾರೆ. ಅತ್ಯಾದರದಿಂದ ಬರಮಾಡಿಕೊಂಡು ನಾನಾ ಉಪಚಾರಗಳಿಂದ ತಣಿಸಿದರು ವಶಿಷ್ಠರು. ತಮಗೆ ಶಿವನ ಅನುಗ್ರಹದಿಂದ ದೊರೆತ ಪುಣ್ಯ ಫಲದಲ್ಲಿ ೧೦ ದಿವಸದ ಪುಣ್ಯಫಲವನ್ನು ಕೊಡುಗೆಯಾಗಿ ಇತ್ತರು. ಅದನ್ನು ಸ್ವೀಕರಿಸಿದ ವಿಶ್ವಾಮಿತ್ರರು "ನಾಕೊಟ್ಟುದಕ್ಕಿದೆ ಸಾಟಿಯೆ" ಎಂದು ಪ್ರಶ್ನಿಸುತ್ತಾರೆ. ಪರಸ್ಪರ ಈರ್ವರ ಕೊಡುಗೆಗಳನ್ನು ತಕ್ಕಡಿಯಲ್ಲಿಟ್ಟು ತೂಗಲು ವಶಿಷ್ಠರ 'ಸೋಮವಾರದಫಲ' ಭೂಮಿಯನ್ನು ಬಿಟ್ಟು ಏಳದಾಯಿತು.

"ಉಕ್ಕಿನ ಚೂರ್ಣಮೆದ್ದು ಸೂಜಿಯ ಮೇಲೆ
ನೆತ್ತಿಯನವೂರಿ ಪಂಚಾಗ್ನಿ ಮಧ್ಯದಿ ಶರೀರ ಕರಗಿಸಿದ ತಪದ ಫಲವು" (೭-೫)

ಅಂತರದಲ್ಲಿ ನಿಲ್ಲಲು ವಿಶ್ವಾಮಿತ್ರರಿಗೆ ಮುಖಭಂಗವಾಯಿತು. ಒಡಲಲ್ಲಿಉರಿಗೋಪವೆದ್ದು ಭುಗಿಲೆಂದು ಉರಿಯಿತು! ಕೋಪದ ಭರದಲ್ಲಿ ತನ್ನಾಶ್ರಮಕ್ಕೆ ಹಿಂದಿರುಗಿ ವಶಿಷ್ಠರನ್ನು ಹುಸಿಗೊಳಿಸುವ ಹವಣಿಕೆ ಯಲ್ಲಿದ್ದರು.

ಇದಕ್ಕಿಂತ ಪೂರ್ವದಲ್ಲಿ ಪೃಥ್ವೀಶ ತ್ರಿಶಂಖರಾಯನು ಸೇನಾಸಮೇತನಾಗಿ ಅಯೋಧ್ಯಾಪುರದಿಂದ ಬೇಟೆಯಾಡುತ್ತ ಸತ್ಯದಾಗರ ಮುಕ್ತಿಯ ಬೀಡು ಪಂಪಾಕ್ಷೇತ್ರದ ಸಮೀಪದಲ್ಲಿ ಬೀಡು ಬಿಟ್ಟಿದ್ದನು. ಅಲ್ಲಿ;

"ಇಲಿಬೆಕ್ಕು ತೋಳಕುರಿಯುರಗ ಮುಂಗುಲಿಹುಲ್ಲೆ
ಹುಲಿಯ ಹರಿಕರಿ ಶರಭಭೇರುಂಡವತಿಶತ್ರು
ಕುಲಗೂಡಿಯಾಹರಂಗೊಳು ತಿರಲು" (೭-೮)

ಶಬರರಿಂದ ಕೇಳಿ ಕಂಡು ಕೌತುಕಪಟ್ಟು ತನ್ನ ಕುಲಗುರು ವಶಿಷ್ಠರನ್ನು ಕಂಡು ನಮಿಸುತ್ತಾನೆ. ಈ ತಪೋ ಭೂಮಿಯಲ್ಲಿರುವ ಕಾಡುಮೃಗಗಳು ತಮ್ಮ ಸ್ವಾಭಾವಿಕ ವೈರವನ್ನು ಮರೆತಿರಲು ಕಾರಣವೇನೆಂದು ಕೇಳುತ್ತಾನೆ. ಅದಕ್ಕೆ ವಶಿಷ್ಠರು "ಶ್ರೀವಿರೂಪಾಕ್ಷನಾಣೆಯುಂಟದರ ದೆಸೆಯಿಂದ ಬೆರೆದಿರ್ಪವು" ಎನ್ನುತ್ತಾರೆ. ತನಗೂ ಶ್ರೀವಿರೂಪಾಕ್ಷನ ದರ್ಶನ ಮಾಡಿಸಿರೆಂದು ಕೇಳಿಕೊಳ್ಳುತ್ತಾನೆ. ಪಂಪಾವಿರೂಪಾಕ್ಷನ ದರ್ಶನಗೈದ ತ್ರಿಶಂಖುವು ಅಜ್ಞಾನದಿಂದ "ಈ ನಾಥನನಾರು ಪ್ರತಿಷ್ಠೆ ಮಾಡಿದರು" ಎಂದು ಪ್ರಶ್ನಿಸುತ್ತಾನೆ. ಸಿಟ್ಟಿಗೆದ್ದ ವಶಿಷ್ಠರು,

‘‘ಎಲವೋ ಹೊಲೆಯ ಶ್ರೀನಾಥಅಜರುಶ್ರುತಿಯರಸಿಕಾಣದ ಮೂರ್ತಿ ನೀನರಿಯಧಾರಿಂದ ಲಾದುದೆಂಬರೆ’’ ಎನ್ನಲು ತ್ರಿಶಂಖುವಿಗೆ ಹೊಲೆತನ ಪ್ರಾಪ್ತವಾಯಿತು. ಆ ಹೊಲೆಯನ್ನು ಹೋಗಲಾಡಿಸಲು ಅವನು ಗುರು ವಶಿಷ್ಠರನ್ನು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಅದಕ್ಕೆ ವಶಿಷ್ಠರು ನೀನು ವಿಶ್ವಾಮಿತ್ರನ ದೆಸೆಯಿಂದ ಈ ಹೊಲೆತನವನ್ನು ಅನುಭವಿಸಬೇಕಾಗಿದೆ. ಕೊನೆಯಲ್ಲಿ ಅದರಿಂದ ಮುಕ್ತನಾಗಿ ಕೈಲಾಸ ಪದವಿಯನ್ನು ಹೊಂದುವೆ ಎಂದು ಅಭಯವಿತ್ತರು.

ಕೆಲಕಾಲದ ನಂತರ ತ್ರಿಶಂಖುಮಹಾರಾಜನು ಪುನಃ ವಶಿಷ್ಠರಲ್ಲಿಗೆ ಬಂದು ‘ಸುರಭೋಗದಯ ಪಾಲಿಸಿ’ರೆಂದು ಬೇಡುವನು. ವಶಿಷ್ಠರು ‘ಮುನ್ನಿತ್ತಶಾಪದ ಫಲವನನು ಭವಿಸಲೆನುತ’ ತಮ್ಮಿಂದ ಅದನ್ನು ಕೊಡಲಾಗದು ಎನ್ನುವರು. ವಿಶ್ವಾಮಿತ್ರರಲ್ಲಿಗೆ ಬಂದು ‘ಇಂದ್ರತ್ವ’ವನ್ನು ಯಾಚಿಸುವನು ವಶಿಷ್ಠರನ್ನು ‘ಹುಸಿಕನೆಂದು ಸಿದ್ಧಮಾಡಲು’ ತಕ್ಕ ಅವಕಾಶ ಇದೇ ಎಂದು ಕೊಂಡು ತ್ರಿಶಂಖುವನ್ನು ದೇವೇಂದ್ರನಲ್ಲಿಗೆ ಕರೆದುಕೊಂಡು ಹೋಗುತ್ತಾರೆ. ಇಂದ್ರತ್ವವನ್ನು ಬೇಡುತ್ತಾರೆ. ವಿಶ್ವಾಮಿತ್ರನ ಮಾತಿಗೆ ಮಣಿದು ಇಂದ್ರನು ತನ್ನ ಸಿಂಹಾಸನದ ಅರ್ಧಭಾಗವನ್ನು ತ್ರಿಶಂಖುವಿಗೆ ನೀಡುತ್ತಾನೆ. ಇದರಿಂದ ಕುಪಿತಗೊಂಡ ದೇವತೆಗಳೆಲ್ಲ ‘ಇಂಥ ಪದವಿಯನ್ನು ನೀಡುವಶಕ್ತಿ ಶಿವನಿಗಲ್ಲದೆ ಬೇರಾರಿಗೂ ಇಲ್ಲ’ ಎಂದು ಇಂದ್ರನ ನಿರ್ಧಾರವನ್ನು ತಿರಸ್ಕರಿಸುತ್ತಾರೆ.

> ‘ಇವನು ವಿರುಪಾಕ್ಷ ಲಿಂಗದ ಮೂಲಕೀಳೆ ಹೊಲೆಯವನೆಂದು
> ಗುರುಶಾಪಮುನ್ನುಂಟು’ (೭-೧೬)

ಇಂಥವನು ಇಂದ್ರಪದವಿಗೆ ಅನರ್ಹನೆಂದು ಸಾರುತ್ತಾರೆ. ಆಗ ವಿಶ್ವಾಮಿತ್ರರು ‘ಇದಕೆ ಮಿಗಿಲಾದ ಪದವಿಯ ಕೊಡುವೆನೆಂದು’ ಅಂತರಿಕ್ಷದಲ್ಲಿ ಒಂದು ಲೋಕವನ್ನೇ ರಚಿಸಿ ಮುಂತಿರ್ದ ಸೃಷ್ಟಿಗಂ ಪ್ರತಿಸೃಷ್ಟಿ ಮಿಗಿಲೆನಿಸಿ, ಅದಕ್ಕೆ ತ್ರಿಶಂಖುವನ್ನು ಅಧಿಪತಿಯಾಗಿಸಿ ಪಟ್ಟಗಟ್ಟಿದನು.

ಹೀಗಿರಲೊಂದು ದಿನ ತ್ರಿಶಂಖುರಾಜನು ಐರಾವತವನ್ನೇರಿ ಶಿವಸಭೆಗೆ ಹೊರಟನು. ದ್ವಾರಪಾಲಕರು ಆತನನ್ನು ಹೊರವಲಯದಲ್ಲಿಯೇ ನಿಲ್ಲಿಸಿ, ಈ ವಾರ್ತೆಯನ್ನು ಶಿವನಿಗೆ ಮುಟ್ಟಿಸುತ್ತಾರೆ. ನಾರದರಿಂದ ಸಾದ್ಯಂತ ಅವನ ವೃತ್ತಾಂತವನ್ನು ತಿಳಿದು ‘ಅವನೇ ಆ ಚಾಂಡಲ! ಅವನನ್ನು ಒಳಗೆ ಬಿಡಬೇಡಿರಿ’ ಎಂದು ಅಪ್ಪಣೆಮಾಡಿದನು. ಕಡುನೊಂದು ತ್ರಿಶಂಖುವು ವಶಿಷ್ಠರಾಶ್ರಮಕ್ಕೆ ಬಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಕರುಣೆಯುಕ್ಕಿ ಅವನನ್ನು ಮೇಲಕ್ಕೆತ್ತಿ ಮೈದಡವಿ ಮುಂಡಾಡುತ್ತಾರೆ. ಆಗ ತ್ರಿಶಂಖುವಿನ ‘‘ಚಾಂಡಾಲ ತನವು ಉರಿಗಂಡ ಕರ್ಪೂರದಂತೆ’’ (೭-೨೨) ನಾಶವಾಯಿತು. ಅವನಿಗೆ ಪಂಪಾಪುರದ ಚಕ್ರತೀರ್ಥದಲ್ಲಿ ಸ್ನಾನಮಾಡಿಸಿ ಷಟ್‌ಸ್ಥಲದ ನೆಲೆಕಲೆಗಳನ್ನು ತಿಳಿಸಿ, ಪಂಚಾಕ್ಷರಿಯ ಉಪದೇಶಗೈದು ಅರಿವಿನ ಬೆಳಗನ್ನು ತೋರಿಸಿದರು. ಕೈಲಾಸಕ್ಕೆ ಕರೆದೊಯ್ದು ಶಿವಸಮ್ಮುಖದಲ್ಲಿ ಇಂದ್ರಪದವಿಯನ್ನು ಕೊಡಿಸುವರು. ಇದರಿಂದ ಅವಮಾನಿತನಾದ ವಿಶ್ವಾಮಿತ್ರನು ವಶಿಷ್ಠರ ಮೇಲಿನ ಮತ್ಸರಭಾವದಿಂದ ಮುನಿಗಳ ಸಭೆಗೈತಂದರು.

''ಕುಂಭಿನೀಶ್ವರಗೆ ಸಾನಿತ್ತಪದ ತೆಗೆದು ಮರ

ಳಿಂ ಬಂದೊಶಿಷ್ಟನೋಕ್ಕಕ್ಕೆ ಪಾಲಿಸಿದರ್ರೆ

ನಾಂಬಡವನೇ'' (೭-೩೭)

ಎಂದು ಕಣ್ಣುಕೆಂಪೇರಿ ಘರ್ಜಿಸುತ್ತಾರೆ. ಅಭವನು ಬಡವಬಲ್ಲಿದರೆಂಬ ಭೇದನಮ್ಮೊಳಗಿಲ್ಲ (ಅದೇ, ೭-೩೮) ನಿಮ್ಮಯ ನ್ಯಾಯ ತೀರ್ಮಾನಿಸುವವರು ಈ ಸಭೆಯೊಳಗಾರೂ ಇಲ್ಲ. ಅರ್ಕ ಅಗಸ್ತ್ಯಮುನಿ ಮತ್ತು ಆದಿಶೇಷರನ್ನು ಕರೆತಂದರೆ ಅವರು ಈ ನ್ಯಾಯವನ್ನು ಪರಿಹರಿಸುವರೆಂದು ತಿಳಿಸಿದನು. ನಿಮಿಷಮಾತ್ರದಲಿ ಅವರನ್ನೆಲ್ಲ ಕರೆತರುವೆನೆಂದು ಹೋದ ವಿಶ್ವಾಮಿತ್ರನು ಬರಿಗೈಯಲ್ಲಿ ಬರುತ್ತಾನೆ. ವಶಿಷ್ಠರು ಶಿವನಪ್ಪಣೆಪಡೆದು

''ನಿಮ್ಮ ಕಾರುಣ್ಯಪೂರಮಿರೆಯಾಗದದು ವೊಂದುಂಟೆ'' (೭-೪೧)

ಎಂದು ವಿನಯ ಆತ್ಮವಿಶ್ವಾಸಗಳೇ ಮೂರ್ತಿವೆತ್ತಂತೆ ಹೊರಟು ಅರ್ಕ ಅಹಿಪತಿ ಅಗಸ್ತ್ಯರನ್ನು ಕರೆತರುತ್ತಾರೆ. ಜಯಶಾಲಿಯಾಗುತ್ತಾರೆ ವಿಶ್ವಾಮಿತ್ರರು ಒಳಗೊಳಗೇಬೆಂದು ವಶಿಷ್ಠರನ್ನು ಹೇಗಾದರೂ ಮಾಡಿ ಮಣ್ಣು ಮುಕ್ಕಿಸಬೇಕೆಂದು ಸಮಯಕ್ಕಾಗಿ ಕಾಯತೊಡಗಿದರು. ಹೀಗಿರಲೊಂದು ದಿವಸ ದೇವೇಂದ್ರನು ಸಭೆಯಲ್ಲಿ ''ತ್ರಿಲೋಕದೊಳು ಸತ್ಯದಿಂದ ನಡೆದವರಾರುವೊಳರೆ?'' ಎಂದು ಕೇಳುವನು. ವಶಿಷ್ಟರು ತನ್ನ ಶಿಷ್ಯ 'ಹರಿಶ್ಚಂದ್ರ ಸತ್ಯವಂತ'ನೆಂದು ಹೇಳುವರು. ಕೌಶಿಕ ವಶಿಷ್ಠರ ಮಧ್ಯ ಅಲ್ಲ ಹೌದು ಎಂಬವಾದ ತಾರಕಕ್ಕೇರುತ್ತದೆ. ನಾರದರು ಮಧ್ಯ ಪ್ರವೇಶಿಸಿ ''ವಿಶ್ವಾಮಿತ್ರ ಹರಿಶ್ಚಂದ್ರನು ಸತ್ಯವಂತನೆಂಬುದು ಸತ್ಯವಾದರೆ ನಿನ್ನದೇನು ಪ್ರತಿಜ್ಞೆ ಹೇಳು'' ಎಂದರು. ವಿಶ್ವಾಮಿತ್ರರು ''ನಾನು ಉಗ್ರತಪಗೈದುಗಳಿಸಿದ ೫೦ ಕೋಟಿಯೊಳಗೆ ಅರ್ಧವನ್ನು ಆ ಹರಿಶ್ಚಂದ್ರನಿಗೆ ನೀಡುತ್ತೇನೆಂದರು.

ಹರಿಶ್ಚಂದ್ರನು ಸುಳ್ಳಾಡಿದರೆ ನನ್ನ ಬ್ರಹ್ಮರ್ಷಿ ಪದವಿಯನ್ನು ವಿಶ್ವಾಮಿತ್ರನಿಗೆ ಧಾರೆಯೆರೆಯುತ್ತೇನೆಂದು ವಶಿಷ್ಠರು ಪ್ರತಿಜ್ಞೆಮಾಡಿದರು. ಹರಿಶ್ಚಂದ್ರನ ಸತ್ತ್ವಪರೀಕ್ಷೆ ನಡೆಸಲು ಅವರೀರ್ವರೂ ಭೂಲೋಕಕ್ಕೆ ತೆರಳಿದರು.

ವಿಶ್ವಾಮಿತ್ರರು ಹರಿಶ್ಚಂದ್ರನಲ್ಲಿಗೆ ಹೋಗಿ ಅಪರಿಮಿತಧನವನ್ನು ಬೇಡಲು ತಕ್ಷಣವೇ ನೀಡುತ್ತಾನೆ. ಹರಿಶ್ಚಂದ್ರನ ಪರೀಕ್ಷೆಗಾಗಿ ನಾಡಿನಲ್ಲೆಲ್ಲಾ ಕಾಡುಮೃಗಗಳ ಉಪದ್ರವವಾಗಲೆಂದು ಕೃತಕ ಮೃಗಗಳನ್ನು ಬಿಡಲಾಗುತ್ತದೆ. ಆಗ ಪ್ರಜೆಗಳಿಗೆ ತೊಂದರೆಯಾಗಬಾರದೆಂದು ಹರಿಶ್ಚಂದ್ರನು ಬೇಟೆಯಾಡಿ ಒಂದು ಕಾಡು ಹಂದಿಯನ್ನು ಕೊಲ್ಲುವನು. ಹಂದಿಯನ್ನು ಕೊಂದುದಕ್ಕಾಗಿ ವಿಶ್ವಾಮಿತ್ರರು ಮನಬಂದಂತೆ ದೂಷಿಸುವರು. ಆಮೇಲೆ ಹೊಲತಿಯರನ್ನು ಸೃಷ್ಟಿಮಾಡಿ ಹರಿಶ್ಚಂದ್ರನನ್ನು ಮದುವೆಯಾಗಲು ಹಟಹಿಡಿಯಿರಿ ಎಂದು ಆಜ್ಞಾಪಿಸಿದನು. ಅವರು ಬಂದು ಕಾಡಲು ''ಧರೆಸಿರಿಯು ಪೋದೊಡವರಪತಿಯಾಗಲೊಲ್ಲೆ''ನೆನ್ನುತ್ತಾನೆ. ಹಾಗಾದರೆ ನುಡಿದಂತೆ ನಡೆ ಎಂದು ರಾಜ್ಯವನ್ನು ಕಿತ್ತುಕೊಳ್ಳುತ್ತಾನೆ. ಆಮೇಲೆ ಈ ಮೊದಲು ದಾನಮಾಡಿದ

ಹಣವನ್ನು ಕೊಡು ಎಂದು ಪೀಡಿಸತೊಡಗಿದನು. ಅದಕ್ಕಾಗಿ ಹರಿಶ್ಚಂದ್ರನು ಹೆಂಡಿರುಮಕ್ಕಳನ್ನು ಮಾರಿ, ತಾನೂ ಚಾಂಡಾಲನ ಸೇವಕನಾಗಿ ಸ್ಮಶಾನದ ಕಾವಲುಗಾರನಾದನು. ಹರಿಶ್ಚಂದ್ರನ ಮಗ ಲೋಹಿತಾಶ್ವನು ವಿಶ್ವಾಮಿತ್ರನ ಕುತಂತ್ರದಿಂದ ಸರ್ಪಕಚ್ಚಿ ಸಾಯಲು ಚಂದ್ರಮತಿಯು ತನ್ನ ಮಗನನ್ನು ಸುಡಲು ಮಸಣಕ್ಕೆ ತರುತ್ತಾಳೆ. ಸತಿಸುತರೆಂದುತಿಳಿದೂ 'ನೆಲಹಾಗತಾ' ಇಲ್ಲದಿರೆ ದಹಿಸಲಿಬೇಡವೆಂದು ಅಡ್ಡಿಪಡಿಸುವನು. ಅದರಿಂದ ಅತಿದುಃಖಿತಳಾಗಿ ಬರುತ್ತಿರುವಾಗ ಆ ಪುರದ ರಾಜನ ಮಗನ ಶಿರವರಿದು ಚೋರರು ಅವಳ ಉಡಿಯೊಳಗೆ ಕಟ್ಟಿ ಹೋಗುತ್ತಾರೆ. 'ಆಕೊಲೆಯ ಅಪವಾದ ಅವಳ ಮೇಲೆ ಬಂತು ನ್ಯಾಯ ವಿಚಾರಣೆ ನಡೆದು ಕೊಂದವನ್ನು ಕೊಲ್ಲುವುದೇ ಧರ್ಮ'ವೆಂಬ ಆಜ್ಞೆಯಾಯಿತು. ಹರಿಶ್ಚಂದ್ರನೇ ಮಡದಿಯ ಶಿರ ಕತ್ತರಿಸಲು ಅಣಿಯಾದ! ಇನ್ನೇನು ತನ್ನ ಖಡ್ಗವನ್ನೆತ್ತಿ ಮಡದಿಯ ಶಿರಕತ್ತರಿಸಬೇಕೆನ್ನುವಷ್ಟರಲ್ಲಿ ಶಿವ ಮೆಚ್ಚಿ ''ಹೋಹೋ ನಿಲ್ಲೆನುತ ಅನುನಯದಿಬಿಗಿದಪ್ಪಿ ಲೋಹಿತಾಶ್ವನಿಗೆ ಮರಳಿ ಜೀವ ಕರುಣಿಸಿ, ಚಂದ್ರಮತಿ ಯನ್ನಿತ್ತು, ಹರಿಶ್ಚಂದ್ರನಿಗೆ ಪಟ್ಟಗಟ್ಟುತ್ತಾನೆ. ಕೌಶಿಕನು ಈ ಮೊದಲು ಹೇಳಿದಂತೆ ತನ್ನ ತಪಶ್ಚರ್ಯದ ಅರ್ಧಭಾಗವನ್ನು ಹರಿಶ್ಚಂದ್ರನಿಗಿತ್ತನು. ಹೀಗೆ ಶಿವಕೃಪೆಯಿದ್ದವರಿಗೆ ಯಾವ ತೊಂದರೆಯೂ ಇಲ್ಲ 'ಬಸವಂಗೆ ಶಿವನ ಬಲಮುಂಟು' ಆದ್ದರಿಂದ ಅವನನ್ನು ಗೆಲ್ಲುವುದು ಅಸಾಧ್ಯ ಎಂದು ಪೌರಾಣಿಯು ಮಹಾದೇವ ಭೂಪಾಲನಿಗೆ ಹೇಳಿದನು.

ಆನೆಯ ಸಂಧಿ : ತಮ್ಮ ಧರೆಸಿರಿಯ ಬಲುಮದದಿಂದ ಸತ್ಯಶರಣರ ಕೂಡ ಗರ್ವಿಸಿ ಹಮ್ಮಳಿದು ಭೃತ್ಯರಾದವರ ಕಥೆಗಳು ಅನೇಕ. ಅವರಲ್ಲೊಬ್ಬ ಕ್ಷುಪನೆಂಬ ಮಹಾರಾಜ. ಆತನು ವೈಭವಪೂರ್ಣವಾಗಿ ರಾಜ್ಯವಾಳುತ್ತಿದ್ದ.

ಒಂದು ದಿನ ಮುನಿಪುಂಗವ ದಧೀಚಿಯು ರಾಜನಲ್ಲಿಗೆ ಬಂದು ಆಶೀರ್ವಾದಗೈದು ಶ್ರುತಿಶಾಸ್ತ್ರವೋದಿಸುತ ಧ್ಯಾನಜಪತಪ ಮಾಡುವ ಬ್ರಾಹ್ಮಣನೇ ಶ್ರೇಷ್ಠವೆಂದು ಹೇಳುತ್ತಾನೆ. ಅದನ್ನೊಪ್ಪದೆ ರಾಜನು ಶೌರ್ಯದಿಂದ ಭೂಮಿಯನ್ನು ಪಾಲಿಸುವ ಕ್ಷತ್ರಿಯನೇ ಶ್ರೇಷ್ಠ ಎಂದು ವಾದಿಸುತ್ತ ಕೋಪದಿಂದ ದಧೀಚಿಯರನ್ನು ಒದೆಯುತ್ತಾನೆ. ದಧೀಚಿಯು ಧರೆಗುರುಳುತ್ತಾನೆ. ಅಪಮಾನದ ಸೇಡು ತೀರಿಸಿಕೊಳ್ಳಲು ಭೃಗಮುನಿಯಲ್ಲಿಗೆ ಬರುತ್ತಾನೆ. ಕ್ಷುಪರಾಜನನನ್ನು ಸದೆಬಡಿಯುವಾ ಸಾಮರ್ಥ್ಯವನ್ನು ತನಗೀಯಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಭೃಗು ಮಹರ್ಷಿಯು ಕರುಣೆಯಿಂದ ಪಂಚಾಕ್ಷರವನ್ನುಪದೇಶಮಾಡಿ ಶಿವನನ್ನು ಧ್ಯಾನಿಸಲು ತಿಳಿಸುತ್ತಾನೆ. ಅಂತೆಯೇ ಶಿವನನ್ನು ಕುರಿತು ಉಗ್ರತಪಗೈದು ಶಿವನು ಪ್ರತ್ಯಕ್ಷನಾಗಿ ಬೇಡಿದವರವಿತ್ತು ಮಾಯವಾಗುತ್ತಾನೆ. ತಕ್ಷಣವೇ ಮಹಾಕೋಪದಿಂದ ದಧೀಚಿಮುನಿಯು ಕ್ಷುಪರಾಜನ ಆಸ್ಥಾನಕ್ಕೆ ಬರುತ್ತಾನೆ. ಮತ್ತೆ ರಾಜನು. ಒದೆಯಲನುವಾದಾಗ ಮುನಿಯು ತಡೆಯದೇ ಜೋರಿನಿಂದೊದೆಯುತ್ತಾನೆ. ರಾಜನು ಧರೆಗುರುಳುತ್ತಾನೆ. ಈ ಮುನಿಯು ಶಿವಕೃಪೆಯಿಂದ ನನ್ನನ್ನು ಭಂಗಿಸಿದ ನಾನುವಿಷ್ಣುವಿನ ಕೃಪೆಪಡೆದು ಈತನನ್ನು ಮಣ್ಣು ಮುಕ್ಕಿಸುವೆನೆಂದು ನಿಶ್ಚಯಿಸಿದನು. ವಿಷ್ಣುವನ್ನು ಕುರಿತು ತಪಸ್ಸುಮಾಡಿ ದಧೀಚಿಯನ್ನು ಶಿಕ್ಷಿಸುವ ಶೌರ್ಯವನ್ನು ಬೇಡುತ್ತಾನೆ.

ಹರಭಕ್ತರುಗಳ ಗೆಲುವತಿ ಸಹಸವು

ಎನಗಿಲ್ಲ ನಿನ್ನ ಮೇಲಣ ದ್ವೇಷ ಬಿಡಿಸುವೆನು (೮-೬ ಮತ್ತು ೭)

ಎನ್ನುತ್ತ ಅವನನ್ನೊಡಂಬಡಿಸಿ, ವಿಪ್ರಾಕೃತಿಯ ತಾಳಿ ಮುನಿಯೆಡೆಗೆ ಬರುವನು. ರಾಕ್ಷಸರ ಸದೆಬಡೆಯುವ ಅತಿಮಾಯೆಯನ್ನು ಪ್ರದರ್ಶಿಸಲು ಬಂದಿರುವೆಯೋ ವನಜಾಕ್ಷ? ಎನ್ನಲು ಹರಿಯುನಾಚಿ ನಿಜರೂಪ ತೋರುವನು.'' ಕ್ಷುಪನ ಮೇಲಣ ವೈರವನ್ನು ಬಿಟ್ಟು ತನಿನೇಹದಿಂದ ಸಲಹು'' ಎಂದು ಕೇಳಿಕೊಳ್ಳುವನು. ನೊಂದವನನುಳಿದು ಮತ್ತೊಬ್ಬ ಬಳಲ್ವನೆಂಬ ಗಾದೆಯಂತಾಯಿತೆಂದುಕೊಂಡು ದಧೀಚಿಯು ವಿಶ್ವರೂಪ ತೋರಿದ ಹರಿಗೆ ತನ್ನ ಪಾದದ ತುದಿಯ ಉಂಗುಟದಿ ವಿಶ್ವರೂಪತೋರುತ್ತಾನೆ. ಕ್ಷುಪರಾಜನು ದೂರದಿಂದಲೇ ಇದನ್ನೆಲ್ಲ ನೋಡಿ ಗರ್ವವಳಿದು ದಧೀಚಿಯ ಪಾದದ ... ಳುತ್ತಾನೆ. ಕೊಂದಡೆ ಕೊಲ್ಲು ಕೃಪೆಯಿಂದ ಸಲಹಿದಡೆಸಲಹೆನಲು ನೆರೆಮೆಚ್ಚಿ ಪಂಚಾಕ್ಷರುಪದೇಶವ ಇತ್ತು ಬೀಳ್ಕೊಡುತ್ತಾನೆ. ದಧೀಚಿ ಆದ್ದರಿಂದ ಹರಭಕ್ತ ಬಸವೇಶನೊಡನೆ ವಿರಸಬೇಡವೆಂದು ಪೌರಾಣಿಯು ಹೇಳುತ್ತಾನೆ. ಮತ್ತೊಂದು ಸತ್ಕಥೆ ಹೀಗಿದೆ. ತಿರುವಾಲೂರು ವಾಲ್ಮೀಕೇಶ್ವರ ದೇವಾಲಯದಲ್ಲಿ 'ಮೆರೆಮಿಂಡದೇವ'ನೆಂಬೊಬ್ಬ ಶಿವನ ಪರಮಭಕ್ತ. ಒಂದು ದಿನ ಆ ಪುರದರಸು, ಸೌಂದರ್ಯ, ಯೌವನ, ವಿದ್ಯೆ, ವಿಕ್ರಮ, ತಪಸ್ಸು ಸಕಲಸೌಭಾಗ್ಯಗಳ ಒಡೆಯ ನಂಬಿಯಣ್ಣನು ಶಿವನೊಲುಮೆಪಡೆದ ಮಹಾಮದದಿಂದ ಶಿವಾಲಯಕ್ಕೆ ಆಗಮಿಸಿದ. ಶಿವನನ್ನೊಲಿಸಿ ಕೊಂಡವರಿಗೆ ಶಿವಶರಣರ ಹಂಗೇಕೆಂದು ಭಾವಿಸಿ, ಶಿವಗೋಷ್ಠಿಯಲ್ಲಿದ್ದ ಮೆರೆಮಿಂಡದೇವ ಮತ್ತು ಶಿವಭಕ್ತರನ್ನು ನುಡಿಸದೆ. ನೇರವಾಗಿ ಶಿವದರ್ಶನಮಾಡಿಕೊಂಡು ಕುದುರೆಯೇರಿ ಹೊರಟು ಹೋದ. ಅವನ ಗರ್ವವನ್ನು ಸೆದೆಬಡಿಯಬೇಕೆಂದು ಮೆರೆಮಿಂಡದೇವನು. ವಾಲ್ಮೀಕೇಶ್ವರ, ಇವನಿಗೆ ಹೊನ್ನಕೊಟ್ಟೆಯಾದರೆ ಪ್ರಮಥರಾಣೆ. ತಪ್ಪಿದರೆ ಶಿವನು ಇಹಪರಕ್ಕೆ ಹೊರಗೆಂದು ಡಂಗುರಸಾರಿದೆ. ಶಿವಾಲಯದ ಬಾಗಿಲಿಗೆ ಬೀಗ ಮುದ್ರೆಬಿತ್ತು. ಶಿವನು ಕಿಂಡಿಯೊಳಗಿಂದ ಪಾರಾಗಿ ಹೋದುದನ್ನು ಕಂಡು ನಂಬಿಯಣ್ಣ ಕಂಪಿಸಿಬಿಟ್ಟ.

''ಶಂಭುವೇಶರಣ, ಶರಣನೇಶಂಭು'' (೮-೧೮)

''ಭಕ್ತದೇಹಿಕದೇವನೆಂಬ ಶ್ರುತಿ ಮತವಿಹುದು. (ಅದೆ ೮-೧೫)

ಆದ್ದರಿಂದ ಶಿವಭಕ್ತರನ್ನು ನಿರ್ಲಕ್ಷಿಸಿದ ನಂಬಿಯಣ್ಣಪಾಪಿಯೆಂದು ತೀರ್ಮಾನವಾಯಿತು.ಆಗ ಅವನು ಶಿವನನ್ನೊಡಗೊಂಡು ವಾಲ್ಮೀಕನಾಥನ ಗುಡಿಯ ಮುಂದಿನಂಗಣದಲ್ಲಿ ನಿಂತು ಶಿವಶರಣರನ್ನು ಭಜಿಸಿ, ಕೀರ್ತಿಸಿ, ಶಿವಭಕ್ತರೇ ಶ್ರೇಷ್ಠರೆಂದು ಒಪ್ಪಿಕೊಳ್ಳುವನು. ಮೆರೆಮಿಂಡದೇವನಡಿಗಳಿಗೆರಗಿ, ನಾಸರ್ವದ್ರೋಹಿ ನಿಮ್ಮಬಾಲಕನ ಸಲಹೆಂದು ಪರಿಪರಿಯಾಗಿ ಬೇಡುವನು. ಆಗ ಮೆರೆಮಿಂಡದೇವನು ಮೃಡಭಕ್ತರೊಳು ಗರ್ವಬೇಡೆಂದು ಬುದ್ಧಿ ಹೇಳುವನು.

ಮತ್ತೊಂದು ಸತ್ಕಥೆ ಹೀಗುಂಟು.

'ಗಜರಾಜ'ನೆಂಬ ಹರಿಭಕ್ತ ಶೌರ್ಯದಿಂದ ರಾಜ್ಯವಾಳುತ್ತಿದ್ದ ಶಿವಭಕ್ತರನ್ನು ಕಡೆಗಣಿಸಿದ ಕಾರಣವಾಗಿ ಅವರಿಂದ ಶಾಪಕ್ಕೊಳಗಾಗಿ ಮದಗಜವಾಗಿ ಹುಟ್ಟಿದ

ಆರಣ್ಯದೊಳು ತರುಮುರಿದು ಮೆಲುತೆ

ತೃಷಿವಟ್ಟೊಂದು ಪೇರ್ಮಡುವಿನಲ್ಲಿ ನೀರ್ಗುಡಿವುತಿರೆ (೮-೨೪) ಮೊಸಳೆಯೊಂದು ಘಟ್ಟಾಗಿ ಆ ಗಜದ ಪಾದಗಳನ್ನು ಹಿಡಿಯಲು ತೀವ್ರಬಾಧೆಗೊಳಗಾಗಿ ಶ್ರೀಹರಿಯನ್ನು ಪ್ರಾರ್ಥಿಸಿತು. ಆಗ ಶ್ರೀಹರಿಯು ತನ್ನ ಚಕ್ರ ಪ್ರಯೋಗಿಸಿ ಮೊಸಳೆಯಿಂದ ಬಿಡಿಸಲು ನಮಸ್ಕರಿಸಿ ''ಯೆಲೆಸ್ವಾಮಿಯೀದುರ್ಜನ್ಮ ಪರಿಹರಿಸಿ ಮುಕ್ತಿ ನೀಡೆಂದು'' ಪ್ರಾರ್ಥಿಸಿತು. ಆಗ ಶ್ರೀಹರಿಯು

ಅಜನಿಂದ ಸೃಷ್ಟಿಯೆನ್ನಿಂದ ಸ್ಥಿತಿಯೀಶನಿಂ
ನಿಜಮೋಕ್ಷಮಪ್ಪುದೆಲೆ (೮-೨೪)

ಅವನನ್ನು ಭಜಿಸಿ ಹುಳು-ಹುಪ್ಪಡಿಗಳೂ ಮೋಕ್ಷ ಪಡೆಯುತ್ತವೆಯೆಂದು ಹೇಳಿದನು. ಆ ಹುಳದ ವೃತ್ತಾಂತ ಹೀಗಿದೆ. ಶಿವನನ್ನು ಜೇಡಹುಳುವೊಂದು ಪೂಜಿಸುತ್ತಿತ್ತು. ಗಜಗರ್ಭನೆಂಬ ಶಿವಯೋಗಿಯ ಮೇಲೆ ಆಹುಳ ಹರಿದಾಡುತ್ತಿರಲು ಆತನ ಶಿಷ್ಯ ಅದನ್ನು ತೆಗೆದು ಕೆಳಗಿಟ್ಟೊಡನೆ ಸತ್ತು ಹೋಗುತ್ತದೆ. ಮುಂದೆ ಕಾಳಹಸ್ತೀಶ್ವರನ ಕೃಪೆಯಿಂದ ಮೋಕ್ಷ ಪಡೆಯಿತು. ಆದ್ದರಿಂದ ನೀನು ಶಿವನನ್ನು ಭಕ್ತಿಯಿಂದ ಭಜಿಸು ಮೋಕ್ಷ ಪಡೆಯುವೆ ಎಂದು ಆನೆಗೆ ಹರಿ ಹೇಳಿದನು. ಅದರಂತೆಯೇ ಆ ಆನೆಯು ತನ್ನ ಸೊಂಡಿಲಲ್ಲಿ ನೀರು ತುಂಬಿ ತಂದು ಎರೆದು, ಹೂ ಪತ್ರೆಗಳಿಂದ ಪೂಜಿಸುತ್ತಿತ್ತು. ಜೇಡಹುಳು ನೇಯ್ದು ಚಿತ್ರವು ಮೇಲೆ ಬಂದು ತೋರಣವೆಲ್ಲ ಹರಿದು ಹೋಗುತ್ತಿತ್ತು. ಮರಳಿ ನೇಯುತ್ತಿತ್ತು, ಆನೆ ಕೆಡಿಸುತ್ತಿತ್ತು. ಒಮ್ಮೆ ಆ ಹುಳು ಕೋಪದಿಂದ ಗಜವನ್ನು ಕೊಲ್ಲಲೆಳಸಿ ಅದರ ಸೊಂಡಿಲ ಒಳಹೊಕ್ಕು ಮಸ್ತಕವನ್ನು ಕಡಿಯಿತು. ಹೀಗೆ ಎರಡೂ ಕಾದಾಡಿ ಕಾದಾಡಿ ಸತ್ತು ಹೋದವು. ಆ ಹುಳ 'ಕಳಚಂಗಪೇರ್ಮಳೆ'ಯಾಗಿ ಹುಟ್ಟಿದರೆ ಈ ಗಜ ಚೋಳದೇಶದ ರಾಜನ ಉದರದಲ್ಲಿ ಕರಿಕಾಲಚೋಳನಾಗಿ ಜನಿಸಿತು. ಧರ್ಮದಿಂದ ರಾಜ್ಯವಾಳುತ್ತಿರಲು ಒಮ್ಮೆ ಬೇಟೆಗೆ ಹೋದ ಸಂದರ್ಭ ದಂಡಿ ಎಂಬುವವಳು ತನ್ನ ಜಾರನಿಗಾಗಿ ಪತಿಯ ತಲೆಕೊಯ್ಯಲು ಖಡ್ಗಕ್ಕೆ ಮಸ್ತಕವು ಅಂಟಿಕೊಂಡೇ ಇತ್ತು. ಆಕೆ ಆ ಪುರವನ್ನಗಲಿ ಭಯದಿಂದ ಅರಣ್ಯಮಾರ್ಗವಾಗಿ ಬರುತ್ತಿದ್ದಳು. ತುಂಬತೃಷೆಯಾಗಿ ನೀರಡಸಿ ಪಾದದಿಂದಲೇ ಹಳ್ಳದಲ್ಲಿ ಮಳಲ ಬಗೆದು ನೀರ್ಗುಡಿದು ಅಲ್ಲಿಗೆ ಬರಲು ಕರದಿ ಹಿಡಿದಿದ್ದ ಖಡ್ಗ ತಲೆ ಕಳಚಿಕೊಂಡು ಬಿದ್ದಿತೆಂದು ತಿಳಿಸುವಳು. ಇದನ್ನು ಕೇಳಿದ ಅರಸ ತನ್ನ ಪುರಕ್ಕೆ ಮರಳಿ ಸಭೆಕರೆಯುತ್ತಾನೆ. ''ಹಳ್ಳದಲಿ ಕಾಲಿಂದ ಅಗೆದ ವರತೆಯ ನೀರನ್ನು ಹುಲ್ಲೆಕುಡಿಯಲು ದಂಡಿಗೆ ಪತಿಯ ವಧೆದೋಷ ಹಿಂಗಿತು'' ಬಲ್ಲವರು ಹೇಳಿರಿ ಅರವಟಿಗೆ ಬಾವಿ ಕೆರೆಗಳೊಳು ಉತ್ತಮ ಯಾವುದು? ಎಂದು ಪ್ರಶ್ನಿಸುತ್ತಾನೆ.

[illegible]

[illegible]

[illegible]

[illegible]

[illegible]

[illegible]

"........ಅರವಟಿಗೆ ಬಾವಿಗಳೊಳಗೆ

ಯೆಲ್ಲ ಜೀವಕ್ಕೆ ತೃಷೆ ಹಿಂಗದು ತಟಾಕಂಗಳಲ್ಲ

ಖಿಳಪ್ರಾಣಿಗಳು ಸುಖಿಸುವವುಮದರಿಂದ ಕೆರೆಯಧಿಕ (೮-೩೧)

ಎಂದು ಕೇಳಿ ಧರೆಯ ಜನರಿಗೆಲ್ಲ ಪುಣ್ಯ ಲಭಿಸಲೆಂಬ ಸದುದ್ದೇಶದಿಂದ ಕಾವೇರಿ ನದಿಗೆ ಕಟ್ಟೆ ಕಟ್ಟಿಸಲನುವಾದನು. ಸಕಲದೇಶದ ಜನರನ್ನು ಹಿಡಿದು ತರಿಸಿದನು. ಬಾರದರವರಾರೆಂದು ಮಂತ್ರಿಗಳನ್ನು ಕೇಳಲು ಮುಕ್ಕಣ್ಣ ಚೋಳರಾಜ ಮತ್ತು ಕಾಶಿದೇಶದ ಪ್ರಭಾಕರನೆಂಬ ಅರಸ ಎಂದು ತಿಳಿಸುತ್ತಾರೆ. "ಬಿಸಿಗಣ್ಣು" ತನಗಿರುವ ಹಮ್ಮಿನಿಂದ ಮೆರೆಯುತ್ತಿದ್ದ ಚೋಳರಾಜನ ಪ್ರತಿಮೆಯನ್ನು ನೆಲದಲ್ಲಿ ಬರೆದು ನಡುಗಣ್ಣನ್ನು ಕೋಲಿಂದ ತಿವಿಯಲು ನಡುಗುತ್ತ ಬಂದು ಕರಿಕಾಲಚೋಳನಿಗೆರಗಿ ಬಿಟ್ಟಿಯ ಹೊತ್ತು ಕಣ್ಣು ಪಡೆಯುವನು. ನಿತ್ಯದಂತೆ ಸ್ವರ್ಣಪಾತ್ರೆಯಲಿ ನೈವೇದ್ಯವನ್ನು ತೋರಿಸಲು ಮುನ್ನಿನಂತೆ ಗಗನಕೆ ತೆಗೆದುಕೊಂಡು ಉಣ್ಣದೆ ಇರಲು ರಾಜ ಪ್ರಭಾಕರನ ಕರೆಗೆ ಓಗೊಟ್ಟು ಬಂದು 'ರವಿ'ಯು ಕರಿಕಾಲಚೋಳನು ತನಗೆ ಮಾರಾರಿ ಪದದಾಣೆಯಿಟ್ಟದ್ದನ್ನು ತಿಳಿಸಿ, ಶಿವಭಕ್ತರಾಜ್ಞೆಯನ್ನು ಮೀರಲಹುದೆ ಹೋಗಿ ಬಿಟ್ಟಿಯಂನಡೆಸಿಬಾ ಎಂದು ಹೇಳುತ್ತಾನೆ. ಅಂತೆಯೇ ನೃಪನು ಹಮ್ಮಳಿದುಬಂದು ಕೆರೆಯಕಟ್ಟೆಗೆ ಬಿಟ್ಟಿ ಹೊತ್ತು ಮರಳಿ ತನ್ನ ಪುರಕ್ಕೆ ಬಂದು ಎಂದಿನಂತೆ ನೈವೇದ್ಯ ಮಾಡುತ್ತಾನೆ. ರವಿಯು ಸ್ವೀಕರಿಸುತ್ತಾನೆ.

ಹೀಗಿರುವಾಗ ಒಬ್ಬ ಶತವೃದ್ಧೆ, ದೋಸೆ ಮಾರಿ ಹೊಟ್ಟೆ ಹೊರೆಯುತ್ತಿದ್ದಾಕೆ. ಅರಸನಾಳುಗಳು ಆಕೆಯನ್ನು ಬಿಟ್ಟಿಗೆ ಕರೆಯುತ್ತಾರೆ. ಶಿವಧೋ ಎಂದು ಆಕೆ ಮೊರೆಯಿಡಲು ಶಿವನು ಸಾಮಾನ್ಯನೊಬ್ಬನ ವೇಷಧರಿಸಿ ಅವಳಲ್ಲಿಗೆ ಬರುತ್ತಾನೆ. "ನನಗೆ ಹಸಿವಾಗಿದೆ ಊಟ ನೀಡಿದರೆ ಉಂಡು ನಿನ್ನಾಳಾಗಿ ಕೆಲಸಮಾಡಿ ಬರುವೆ" ಎನ್ನುವನು ಆಕೆ ಹರಿದ ದೋಸೆಯೆಲ್ಲವನ್ನು ನೀಡಲು ಉಂಡುಕೆರೆಯ ಕೆಲಸಕ್ಕೆ ಬರುತ್ತಾನೆ. ಆದರೆ ತಾನೂ ಕೆಲಸಮಾಡದೆ ಕೆಲಸ ಮಾಡುವವರನ್ನೂ ಅಣಕಿಸುತ್ತಿದ್ದ ಇದೇನು ಚೇಷ್ಟೆ? ಎಂದೊಬ್ಬ ಆಳು ಬಂದು ತನ್ನ ಕರದೊಳಗಣ ಕೋಲಿಂದ ಹೊಡೆಯುತ್ತಾನೆ. ಅಲ್ಲಿ ನೆರೆದ ಕೆಲಸದಾಳುಗಳ ಬೆನ್ನಲ್ಲಿ ಕೋಲಿನ ಗುರುತು ಮೂಡಿ ಅಳತೊಡಗಿದರು. ಇದನ್ನು ಕೇಳಿದ ಅರಸ ಇದೇನೆಂದು ವಿಚಾರಿಸಲು, ಪಿಟ್ಟವ್ವೆಯ ಆಳು ಈತ, "ತಾ ಪೊರನು ಪೊರುವವರ ತಲೆಯ ಪುಟ್ಟಿಗಳ ಕೆಡಹಿ ಪರಿಹಾಸಗೈಯುವನು" ಎನ್ನಲು ಅರಸನು ಮತ್ತೊಬ್ಬ ದಿಟ್ಟ ಆಳನ್ನು ಕರೆದು ಮತ್ತೊಮ್ಮೆ ಹೊಡೆ ಎನ್ನುತ್ತಾನೆ. ಈಗ ಆಹೊಡೆತ ರಾಜನ ಬೆನ್ನಲ್ಲಿ ಮೂಡಲು "ಈತನು ನರನಲ್ಲ ಪನ್ನಗಾಭರಣನು" ಎಂದು ಸಾಷ್ಟಾಂಗವೆರಗಿ ರಾಜನು ಸ್ತುತಿಸುತ್ತಾನೆ. ಅರಸನ ಕೋರಿಕೆಯ ಮೇರೆಗೆ ಪಿಟ್ಟವ್ವೆಯ 'ದೋಸೆ'ತಿಂದ ವೃತ್ತಾಂತವನ್ನು ಹೇಳುವನು. ಅರಸನಿಗೆ ಲಿಂಗಮುಖದಿಂದ ಉಂಬುವ ಭಾಷೆಯಿತ್ತು ನಡೆಸುತ್ತಾನೆ. ಒಂದು ದಿನ ಶಿವನಿಗುಣ್ಣಿಸುವೆನೆಂಬ ಅರಸನ ಹಮ್ಮುಕಳೆಯಲು ಚನ್ನಯ್ಯ ನಮನೆಯ ಅಂಬಲಿಯುಂಡದ್ದಕ್ಕಾಗಿ ತನಗೆ ಮೃಷ್ಟಾನ್ನ ಉಣ್ಣಲಾಗುತ್ತಿಲ್ಲವೆಂದು ಶಿವನು ನಿರಾಕರಿಸುತ್ತಾನೆ. ಜ್ಞಾನೋದಯವಾಗಿ ಅರಸನು ಚನ್ನಯ್ಯನಡಿಗಳ ಕಂಡು ಬದುಕುವೆನೆಂದು ಹೊಲಗೇರಿಗೆ ಬರುತ್ತಾನೆ.

ಶಿವನೊಡನೆ ಉಂಡ ಮೇಲಾರು ಸತ್ಕುಲಜರುಗಳು (೮-೨೪)

ನಿಮ್ಮೊಳಗೆ ಶಿವನಿರ್ಪ ನೀನೇಶಿವನಮಗೆಂದು ಅಪ್ಪಿ ಅಗಲದಂತಾದ ಶಿವನು ಇದನ್ನು ಕಂಡು ಮೆಚ್ಚಿ ದೇವಾನುದೇವತೆಗಳೊಡನೆ ಬಂದು ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ಕರೆದೊಯ್ದು ಶಿವಸಾಯುಜ್ಯ ಪದವನ್ನಿತ್ತನು. ಮಹದೇವ ಭೂಪಾಲನೇ ಕೇಳು

"............... ಶಿವಭಕ್ತರ

ಭಾವದೊಳು ಶಿವನಿರ್ಪನವರೊಡನೆ ಹಮ್ಮಿನಿಂ

ದಾವ ಸಾಮರ್ಥ್ಯರಾಗಲಿ ತೊಡಕಿ ಜೈಸುವರೆ

ಭಾವಜ್ಞ ಬಸವೇಶನೊಡನೆ ಪಗೆ ಬೇಡ.......(೮-೩೬)

ಎಂದು ಪೌರಾಣಿಯು ತಿಳಿಹೇಳುವನು.

೯ನೆಯ ಸಂಧಿ : ಹೀಗೆ ಪೌರಾಣಿಯು ಶರಣರ ಘನವನ್ನುಸುರಲು ಮಹಾದೇವಭೂಪಾಲನ ರೋಷಾಗ್ನಿ ಶಾಂತವಾಗುತ್ತದೆ. ಬಸವರಸನ ಮಹಿಮೆಯನ್ನು ಕಣ್ಣಾರೆ ಕಾಣಬೇಕೆಂದು ಬಯಸಿ, ಪರೀಕ್ಷಿಸಲೆಳಸಿ ಕಳ್ಳರಕಳ್ಳರೆನಿಸಿದ ಈರ್ವರನ್ನು ಕರೆಸುತ್ತಾನೆ. ''ಬೇಕಾದಷ್ಟು ಸಂಪತ್ತನ್ನು ನೀಡುವೆ. ಜಂಗಮಕೊಂದಿಸುವವನು ಬಸವರಸ ಆದ್ದರಿಂದ ಜಂಗಮ ವೇಷತಾಳಿ ''........ ನೀವೋಗಿಯನು ವರಿದು ನೋಡಿ ಇರಿದು ಬನ್ನೆಂದು ವೀಳ್ಯವನಿತ್ತು ಬೀಳ್ಕೊಡಲು'' (೯-೫) ಅವರು ಜಂಗಮವೇಷಧರಿಸಿ, ಅವುಡಲವ ಸರಮಾಡಿಕೊಂಡು, ವಿಭೂತಿ ಧಾರಿಗಳಾಗಿ ಚಿಕ್ಕಬದನೆಕಾಯಿಗಳನ್ನು 'ಲಿಂಗ'ವಾಗಿ ಮಾಡಿಕೊಂಡು ಕಂಕುಳಲ್ಲಿ ಚೂರಿಯನ್ನಿಟ್ಟು ಕೊಂಡು ಶಾಸ್ತ್ರದ ಪುಸ್ತಕಗಳನ್ನು ಹಿಡಿದು ಜಂಗಮರಂತೆ ಕಲ್ಯಾಣದ ಬಸರವರಸನರ ಮನೆಗೆ ಬಂದರು. ಶಿವಮೂರ್ತಿ ಗಳನ್ನು ಭಜಿಸುತ್ತಿದ್ದ ಬಸವಣ್ಣನನ್ನು ಕಂಡಾಕ್ಷಣವೇ "..........ಕೃತಕರುಂಬಂದ ಕಾರ್ಯದವಗುಣ ಪೋಗಿ ಸುಜ್ಞಾನವಳವಟ್ಟುದಾಗ'' (೯-೮)

ಭಕ್ತಿಯಿಂದ ಅವರನ್ನು ಇದಿರುಗೊಂಡು ಕರೆದೊಯ್ದು ಬಸವಣ್ಣನು ಲಿಂಗಾರ್ಚನೆಯ ಮಾಡಿರೆನ್ನುವನು. ವೇಷಧಾರಿಗಳು ತಮ್ಮೊಳಗೆ ಬೆದರುತ್ತ ಬೆಚ್ಚುತ್ತ ತಡಕಾಡುತ್ತಿರುವಾಗ ಹಾಕಿಕೊಂಡ ಅವುಡಲದಸರ 'ರುದ್ರಾಕ್ಷಿ'ಯಾಗಿತ್ತು. ಬದಣೆಯ ಕಿರುಗಾಯಿ ಲಿಂಗವಾಗಿತ್ತು. ಅಕ್ಕಪಕ್ಕದ ಜಂಗಮರನ್ನು ನೋಡಿ ಅವರಂತೆ ಲಿಂಗಪೂಜೆ ಮಾಡಿಕೊಂಡು ಪ್ರಸಾದವನ್ನು ಲಿಂಗಾರ್ಪಿತಮಾಡಿ ಸೇವಿಸುತ್ತಾರೆ. ''........ಬಸವೇಶ ನಿಮ್ಮ ಪ್ರಮಥರ ಸೇವೆ ನಮಗಿತ್ತು ಕೃಪೆಮಾಡು'' (೯-೧೦) ಎಂದು ಪ್ರಾರ್ಥಿಸುತ್ತಾರೆ. ಶಿವನೊಲಿದು ಕಾಲಾಂತರದಲ್ಲಿ ಅವರನ್ನು ಕೈಲಾಸಪುರಕ್ಕೆ ಕರೆದೊಯ್ಯುತ್ತಾನೆ. ಧರಣೀಶಮಹಾದೇವನು ಈ ವಾರ್ತೆ ಕೇಳಿ ಬೆರಗಾಗುತ್ತಾನೆ.

ವಿರಸಗೈದರ್ಗೆ ಕೈಲಾಸಪುರ

ವಿರದಾಯ್ತು ಶ್ರೀಬಸವದಂಡೇಶ್ವರನ ಪಾದ ಪಂಕರುಹ ಭೃತ್ಯನಾಗಿ...

ಅವರ ಭೋಗಕ್ಕೆಣೆಯಗಾಣೆನೆಂದಿಚ್ಛೈಸಿ (೧೧ ಮತ್ತು ೧೨)

ರಾಜ್ಯವನ್ನುಧಿಕ್ಕರಿಸಿ, ತನ್ನ ಸುಪುತ್ರ ಲಿಂಗಾರತಿಗೆ ಪಟ್ಟಗಟ್ಟಿ ಪತ್ನಿ ಮಹಾದೇವಿಯೊಂದಿಗೆ ನಿಶ್ಚಲಾತ್ಮಕನಾಗಿ ಧರೆಗೆ ನವಕೈಲಾಸವೆನಿಸಿದ ಕಲ್ಯಾಣಕ್ಕೆ ಬರುವನು. ಇವರ ಬರವನ್ನು ಬಸವಣ್ಣನು ಇಷ್ಟಲಿಂಗದ ಮುಖಾಂತರ ಅರಿಯುತ್ತಾನೆ. ಮುತ್ತಿನಾರತಿ ಹಿಡಿದನೀಲಾಂಬಿಕೆಯೊಡಗೂಡಿ, ಶರಣವೃಂದ ಸಮೇತ ಸ್ವಾಗತಕೋರಿ ಪರಸ್ಪರ ಗೌರವ ನಮನಗಳೊಂದಿಗೆ ಭಕ್ತರಭಕ್ತರಾಗಿ ಮೆರೆದರು. ಕಟ್ಟಿಗೆ ತಂದು ವಿಕ್ರಯಿಸುವ ಕಾಯಕ ಹಿಡಿದು ಮೋಳಿಗೆಯ್ಯಗಳೆಂಬ ಅಭಿದಾನ ಪಡೆದು ನಿತ್ಯ ದಾಸೋಹಿಯಾಗುತ್ತಾನೆ ಮಹಾದೇವ ಭೂಪಾಲ. ಹೀಗೆ ಬಸವಣ್ಣನು ಗುರು-ಲಿಂಗ-ಜಂಗಮಕ್ಕೆ ಮಣಿದು ಒಂದು ಲಕ್ಷತೊಂಭತ್ತಾರು ಸಾವಿರ ಭಕ್ತರಿಗೆ ದಾಸೋಹ ಮಾಡುತ್ತ ತನ್ನ ಮಹಿಮೆಗಳನ್ನು ತೋರುತ್ತ ಸುಖವಾಗಿದ್ದನು.

ಶಶಿಚೂಡನಪರಮಾವತಾರ ಅಲ್ಲಮಪ್ರಭು ಮಹಾಜ್ಞಾನಿ. ಭಕ್ತಾಗ್ರೇಸರ ಬಸವಣ್ಣನು ಪ್ರಭುವಿನ ಕಾರುಣ್ಯ ದಿಂದ ಪರಮತೇಜದ ಶೂನ್ಯ ಸಿಂಹಾಸನವ ರಚಿಸಿ ಹರುಷದಿಂಬಂದುಯಿದನೊಳಪೊಕ್ಕು ಬಯಲವಿಷ್ಟರವೇರಿ ಮಂಡಿಸಿದರಾರಾಗಲೆನ್ನಯಾ

ಪರಿಭವಂಗಳ ಕಳೆದು ನಿಜಮೋಕ್ಷಪಾಲಿಸುವ ಗುರುವೆಂದು ......(೯-೩೨)

ಅಲ್ಲಮನ ಬರವನ್ನು ಹಾರೈಸುತ್ತಿದ್ದನು. ಕಂಡವರು ಹೇಕರಿಸುವ ಮರುಳವೇಷಧರಿಸಿ ಅಲ್ಲಮನು ಬರುತ್ತಿದ್ದ, ಹಾವಿನಡಿ ಹಾವು ಹಿಡಿದು ಪೋಪಂತೆ ಬಸವದಂಡನಾಯಕನು ಶರಣಸಂದೋಹದೊಂದಿಗೆ ಸಂಭ್ರಮದಿಂದ ಕುಣಿದಾಡುತ್ತ ಇದಿರ್ಗೊಳ್ಳುತ್ತಾನೆ. ಪ್ರಭುರಾಯ ಮೆಚ್ಚಿ ಒಲಿದು ಬಸವರಚಿಸಿದ ಶೂನ್ಯ ಸಿಂಹಾಸನದ ಮಹಮನೆಯ ಹೊಕ್ಕು ಅಗ್ರಪೀಠದಲ್ಲಿ ಮಂಡಿಸುತ್ತಾನೆ.

ಎನ್ನಗುರುವಹುದೀತ ಎನ್ನಭವಲತಛೇದ (೯-೩೫)

ಎಂದು ಸ್ತುತಿಸುತ್ತ ಬಸವಣ್ಣನು ಆನಂದ ಭಾಷ್ಪಸುರಿಸುತ್ತಿರಲು ಪ್ರಭುರಾಯನು ಹಸಿದಿದ್ದೇನೆ ಉಣಬಡಿಸೆಂದು ಕೇಳುತ್ತಾನೆ. ಪೊನ್ನಪರಿವಾಣದೊಳು ಮೀಸಲಾದ ಸಮಸ್ತ ಭಕ್ಷ್ಯಭೋಜ್ಯಾದಿಗಳು ಉಣಬಡಿಸಿ ಸಾಷ್ಟಾಂಗ ವೆರಗುತ್ತಾನೆ ಬಸವಣ್ಣ.

ಆಕಾಶ ಬಾಯಾದಂತೆ ಪರಿವಾಣಬರಿದಾಯಿತು. ಅಗಣಿತದ ಜಂಗಮಕೆ ಮಾಡಿದನ್ನವನೆಲ್ಲ ನೀಡಲು, ದಿಗುವಾಯಿ ತೆರೆದಂತೆ ನುಂಗುತ್ತಿದ್ದ ಸಮಸ್ತ ಪ್ರಸಾದವೆಲ್ಲ ತೀರಿಹೋಗಿ ಮತ್ತೆ ಬೇಡತೊಡಗಿದ. ಬಸವಣ್ಣನು ತಡಬಡಿಸುತ್ತಿರಲು ಮಡಿವಾಳ ಮಾಚರಸರು ಬಂದು "....ಕೊಡುವೆನೆಂಬಹಂ ಬಿಟ್ಟಖಿಲವಸ್ತು ಶಿವಸೊಮ್ಮೆನಲು ಭಾವಾರ್ಥದಿಂ" ತೃಪ್ತಿಗೊಳುವನೆನ್ನುತ್ತಾನೆ. ಬಸವೇಶನು ನೀಲಾಂಬಿಕೆ ಸಹಿತ ಪೊಡಮಟ್ಟು ತನುಮನಧನಂನಿಮ್ಮವಲ್ಲದೆ ನಿಮಗೆಯಿಟ್ಟುಣಿಸಿ ದಣಿಸಬಲ್ಲವರಾರುಯೆನೆ ಭಕ್ತಿರಸ ಉಂಡು ತೇಗುತ್ತ ಪ್ರಭುರಾಯನು

ಎಲೆ ಬಸವ ನಿನ್ನ ನಿರಹಂಕಾರ ವೃತ್ತಿಯಂ
ತಿಳಿಯಲೋಸುಗ ಬದಲುವೇಷದಿಂ ಬರಲೆನ್ನ ಒಲಿಸಿದೈ................ (೯-೪೫)

ಎಂದು ಸಂತಸದಿಂದ ನಿಶ್ಚಲನಿರಾಲಂಬ ನಿರ್ಗುಣಸಮಾಧಿಯ ಮಹತ್ವವನ್ನು ಎಲ್ಲರಿಗೂ ಬೋಧಿಸಿ ಹರಸುತ್ತಾನೆ. ಕುಪಿತರಾಗಿದ್ದ ಮಿಕ್ಕಗಣಂಗಳೂ ತೃಪ್ತಿ ಪಡೆಯುವಂತೆ ಮಾಡುತ್ತಾನೆ. ತಡವಾಗಿ ಬಂದ ಕಾರಣವನ್ನು ಕೇಳಿದ ಬಿಜ್ಜಳನಿಗೆ

''ಸ್ವಾಮಿ ಮದ್ಗುರುವರಂ ಆರೋಗಿಸಿದನಖಿಳ
ಸ್ತೋಮ ಸಚರಾಚರಂ ತೃಪ್ತಿಗೊಂಡುದು ಯೆನಲು'' (೯-೪೯)

ಈ ಮಾತು ಸುಳ್ಳು ಒಬ್ಬನುಂಡು ಅಖಿಲ ಜೀವರಿಗೆ ತೃಪ್ತಿಗೊಳಿಸುವುದು ಸತ್ಯವೇ? ಎಂದು ಅರಸನು ಪ್ರಶ್ನಿಸುತ್ತಾನೆ. ಕಣ್ಣಾರೆ ನೀವೆ ನೋಡಿರೆಂದು ಮಂಡುಕನಹೊಟ್ಟೆಸೀಳಿ ಅನ್ನಧಾನ್ಯಗಳನ್ನು ತೋರಿಸಿ ಮತ್ತೆ ಪ್ರಾಣವಿತ್ತು ನೀರೊಳು ಹಾಕಿಸಿದಾಗ ಬಿಜ್ಜಳನು ಬೆರಗಾಗುತ್ತಾನೆ.

ಕಾಯಕ ಜೀವಿಗಳಾದ ಮಹದೇವ ಮಹದೇವಿಯರು ಸದ್ಭಕ್ತಿಯಿಂದ ಹುಲ್ಲಿನ ಕುಟೀರ ರಚಿಸಿಕೊಂಡು ಲಿಂಗ ಜಂಗಮವನ್ನು ಭಜಿಸುತ್ತಲಿದ್ದರು. ಅವರ ಕಾಯಕದ ಸ್ವರೂಪ ಹೀಗಿತ್ತು.

''ನಿತ್ಯದಿ ಭವಾರಣ್ಯವೆಂಬವಿಪಿನವಮೆಟ್ಟಿ
ಯೆತ್ತಿ ಸುಜ್ಞಾನಪದಗೊಡಲಿ ಸುಮನೋಕರದಿ
ವುತ್ತರಿಸಿ ಕರಣೇಂದ್ರಿಗುಣದ ಹೆಮ್ಮರವ ಶಿವಧರ್ಮಕಾಷ್ಠಗಳ ನಾಯ್ದು
ಚಿತ್ತಶುದ್ಧಿಯ ಪೊರೆಯನೊಟ್ಟಿ ಮಾಯಾರತಿಯ
ಕಿತ್ತು ತ್ರಿಮಲಹರಿತ ಮೂರು ಕಟ್ಟಂಬಿಗಿದು
ಹೊತ್ತು ನಿರ್ದೇಹಮೋಳಿಗೆ ಸತ್ತು ಚಿತ್ತ ಆನಂದ ನಿಜಮಸ್ತಕದೊಳು'' (೯-೫೨)

ಅರಿಷಡ್ವರ್ಗಗಳನ್ನು ಮೆಟ್ಟಿ ಶರಣರಿಗೆ ಶರಣರಾಗಿ ಬದುಕುತ್ತಿದ್ದರು ಒಂದು ದಿನ ಮೋಳಿಗೆಯ್ಯಗಳು 'ಕಟ್ಟಿಗೆ ವಿಕ್ರಯಸುತ್ತಿದ್ದುದನ್ನು ಕಂಡ ಬಸವಣ್ಣನವರು ತನ್ನಿಂದಾಗಿ ಹೀಗೆ ಇವರು ಸಕಲಭೋಗವನುಳಿದು ದೇಹದಂಡನೆಯ ಮಾಡುತಿಹರೆಂದು ನೊಂದು ಚಿಂತಿಸುತ್ತಾನೆ. ಒಮ್ಮೆ ವೇಷಬದಲಿಸಿಕೊಂಡು ಮಹದೇವಿಯೊಬ್ಬಳೇ ಇರುವ ಸಮಯದಲ್ಲಿ ಬರುತ್ತಾನೆ. ಪೂಜೆಯನೆಪದಲ್ಲಿ ಮಜ್ಜನಸಾಲೆಯಲ್ಲಿ ಪೊನ್ನಜಾಳಿಗೆಯನಿಳಿಸಿಬರುವನು. ಇದನ್ನು ಕಂಡು ಮಹದೇವನು ಬಸವಣ್ಣನು ನಮ್ಮನ್ನು ಬಡವರೆಂದು ಕಡೆಗಣ್ಣಿಂದ ನೋಡಿದನೇ? ಕೊಡುವ ಶಿವ ನಮ್ಮವನಿರುವಾಗ ನಮಗೆಲ್ಲಿಯ ಬಡತನ? ಎಂದುಕೊಂಡು ಮಠಕ್ಕೆ ಹೋಗುತ್ತಾನೆ. ಒಂದು ಲಕ್ಷತೊಂಭತ್ತಾರು ಸಾವಿರ ಜಂಗಮರನ್ನು ಕರೆತಂದು ಅವರು ಬಯಸಿದ್ದನ್ನು ನೀಡಿ ಕನಕದಂಡಗಳ ಕರಕಿತ್ತು ವಂದಿಸಿ ಬೀಳ್ಕೊಡುತ್ತಾನೆ. ಇದನ್ನರಿತ ಬಸವಣ್ಣನು

ಅಕಟನಾಂ ಗರ್ವಪರ್ವತ ವೇರಿದೆನು ಶರಣ
ರಕಳಂಕರಸ ರಮವರ್ಗಾರು ತೊಣೆಯಿಲ್ಲ (೯-೬೩)

ಎಂದುಕೊಂಡು ಮಡಿವಾಳ ಮಾಚರಸರಾದಿ ಶರಣರೊಂದಿಗೆ ಮಾರಯ್ಯನ ಕುಟೀರಕ್ಕೆ ಬರುತ್ತಾನೆ. ಮಾರಯ್ಯಗಳು ಬಸವಣ್ಣನನ್ನು ಬಿಗಿದಪ್ಪಿ ಕೃತಾರ್ಥಭಾವದಿಂದ ಯೆಲೆಬಸವ ನಿನ್ನಂಗಸಂಗದಿಂ ನಿಜಮೋಕ್ಷ ಧರೆಗುಭಯ ಶಂಭುನೀನೆ (೯-೬೭)

ಆದೊಡೇನೈಶರಣರೊಳು ಗರ್ವಬೇಡ (೯-೬೮)

ಎಂದು ಗುದ್ದಲಿಯನ್ನು ಕೈಗಿತ್ತು ತಮ್ಮ ಕುಟೀರದ ಸುತ್ತ ಅಗೆದುನೋಡಲು ತಿಳಿಸುತ್ತಾನೆ. ಅಗೆದಲ್ಲೆಲ್ಲ ಬಂಗಾರ ದೊರೆಯುತ್ತದೆ. ತನ್ನ ಮರುಳುತನಕ್ಕೆ ನಾಚಿದ ಬಸವೇಶನು ಕ್ಷಮೆಯಾಚಿಸಿ ಮೋಳಿಗೆಯಮಾರಯ್ಯನ ಮನವಾರೆ ಹೊಗಳುವನು.

೧೧ನೆಯ ಸಂಧಿ : ಚಾಮರಸನಿಗೆ ಹರಿಹರನು ಬಸವಣ್ಣನ ಮಹಿಮೆಯನ್ನು ಹೇಳತೊಡಗುವನು. ಶಿವಭಕ್ತರೆಲ್ಲ ಒಂದೇ ಎಂಬ ಭಾವದಲ್ಲಿ ಬಸವಣ್ಣನು ಗುರುಲಿಂಗ ಜಂಗಮದ ಸೇವೆ ಮಾಡುತ್ತಲಿದ್ದನು. ಒಂದು ದಿನ ಬಸವಣ್ಣನು ಅಂದಣವನೇರಿ ಸಕಲವೈಭವದೊಡನೆ ರಾಜನ ಒಡ್ಡೋಲಗಕ್ಕೆ ಬರುತ್ತಿದ್ದನು. ಶರಣ ಹರಳಯ್ಯನು, ಶರಣು ಎಂದು ನಮಿಸಲು ಶ್ರೀಬಸವೇಶನು ''ಧರೆಯಮೇಲಣಲೀಲೆ ಮುಗಿದು ದೆಂದರಿದು'' ಶರಣು, ಶರಣು, ಎಂದು ನಮಿಸುತ್ತಾನೆ.

ಕೀಳು ಕುಲದವರಾದ ನಾವು ''ಸಂಬೋಳಿ'' ಎಂದು ನುಡಿಯಬೇಕು. ನಾನೀಗ ಅಜ್ಞಾನಿದಿಂದ ಶರಣೆಂದ ಕಾರಣ ಸರ್ವರೊಳು ಹರನಿರ್ಪನೆಂಬಭಾವದ ಬಸವೇಶನು ಎರಡು ಸಲ ಶರಣೆಂದನು. ಈಭಾರವನ್ನು ಹೇಗೆ ಕಳೆದುಕೊಳ್ಳಲಿ? ಎಂದು ಯೋಚಿಸುತ್ತ ಮನೆಗೆ ಬರುತ್ತಾನೆ. ಶಿವಪದಧ್ಯಾನೆ ಸತಿಕಲ್ಯಾಣಿಯೆದುರು ತನ್ನ ಆತಂಕವನ್ನು ಹೇಳಿಕೊಳ್ಳುತ್ತಾನೆ. ''ಶಿವಶಿವನಮ್ಮ ಕಲ್ಯಾಣಪಟ್ಟಕ್ಕೆ ದಾಳಿ ಬಂದುದು'' ಎಂದು ಚಿಂತಿಸಿ ''ನಮ್ಮ ಪೊರೆಯ ನಾವಿಳುಹಿಕೊಂಬ'' ಎಂದು ತಮ್ಮ ತೊಡೆಯ ಚರ್ಮದ ಆವುಗೆಯ ಮಾಡಿ ಬಸವಣ್ಣನಿಗೆ ಮೆಟ್ಟಿಸುವ ಸಲಹೆನೀಡಿದಳು ಅಂತೆಯೇ ಹರಳಯ್ಯನು, ತಮ್ಮಾವುಗೆಗಳನ್ನು ತಲೆಯ ಮೇಲೆ ಹೊತ್ತು ಶಿವಧ್ಯಾನದಿಂದ ಮಹಾಮನೆಯ ಮುಖ್ಯದ್ವಾರದಲ್ಲಿ ಬಂದು ನಿಲ್ಲುತ್ತಾನೆ. ಶರಣರೊಡಗೂಡಿ ಬಂದ ಬಸವಣ್ಣನನ್ನು ಕಾಣುತ್ತ ಪೊಡಮಟ್ಟು ಪಾದುಕೆಯ ಮುಂದಿರಿಸಿ ನಿಮ್ಮಮಳ ಮೃದುಪಾದದಿಂದ ಮೆಟ್ಟಿಯೆನ್ನ ನುದ್ಧರಿಪುದು ಎಂದು ಬೇಡಿಕೊಳ್ಳುತ್ತಾನೆ. ಬಸವೇಶನು ಶಂಭುವೇ ಶರಣ, ಶರಣನೇ ಶಂಭು ಪೆರತಲ್ಲ (೧೦-೧೪) ನಾಂಬಡವ ನಿಮ್ಮ ಚಮ್ಮಾವುಗೆಯ ಮೆಟ್ಟಶಕ್ತನೇ?ಯೆಂದು ವಂದಿಸುತ್ತ ಮರಳಿ ಹರಳಯ್ಯನಿಗೆ ನೀಡುವನು. ನಿರ್ವಾಹವಿಲ್ಲದೆ ಹರಳಯ್ಯನು ತನ್ನ ಮನೆಗೆ ಮರಳುತ್ತಿದ್ದ ರಾಜಮನ್ನಣೆ ಪಡೆದ ಹಮ್ಮಿನಿಂದ ಬಿಜ್ಜಳನ ಹಿರಿಯ ಅಧಿಕಾರಿ ಮಧುವರಸನು ಒಡ್ಡೋಲಗಕ್ಕೆ ಬರುತ್ತಿದ್ದ ''ಎಲವೋ ಹಳುಗ ನಿನ್ನಯ ಕಕ್ಷ ಸ್ಥಳದಲ್ಲಿ ಮಿರುಗುತಿಹುದೇನು ಎಂದು ಹರಳಯ್ಯನನ್ನು ಕೇಳುತ್ತಾನೆ. ಅವನು ಎಲ್ಲವನ್ನೂ ವಿವರಿಸಿ ಹೇಳಿದಾಗ ಅಪಹಾಸ್ಯ ಮಾಡಿ ಹರಳಯ್ಯನನ್ನು ಜರಿದು ದುರುಳುತನದಿಂದ ಕಸಿದು ಒಯ್ದು ಚಮ್ಮಾವುಗೆಯನ್ನು

[illegible]

[illegible]

[illegible]

[illegible]

[illegible]

ಮೆಟ್ಟುತ್ತಾನೆ. ಆಕ್ಷಣವೇ ಆಪಾದಮಸ್ತಕ ಪರಿಯಂತ ಉರಿ ಎದ್ದು ಸುಡತೊಡಗಿತು. ಭೂಲೋಕದ ವೈದ್ಯರಾರಿಂದಲೂ ಉರಿಶಮನವಾಗಲಿಲ್ಲ ಕೊನಗೆ ಬಚ್ಚಲಲ್ಲಿ ಕುಳ್ಳಿರಿಸಿ ತಣ್ಣೀರು ಸುರಿಯತೊಡಗಿದರು. ಮನೆಯೊಳಗಿನ ನೀರೆಲ್ಲ ಮುಗಿಯಿತು. ಒಬ್ಬಳು ಶರಣಹರಳಯ್ಯನವರು ಸ್ನಾನಮಾಡಿ ಮಡುಗಟ್ಟನಿಂತ ನೀರನ್ನೇ ತಂದೆರೆಯಲು ಮಧುವರಸನ ಉರಿ ಶಾಂತವಾಯಿತು. ವಿಸ್ಮಿತನಾದ ಆತ ಈ ನೀರನ್ನೆಲ್ಲಿಂದ ತಂದೆ? ಎಂದು ಕುತೂಹಲದಿಂದ ಪ್ರಶ್ನಿಸುತ್ತಾನೆ. ಅವಳು ಹೆದರುತ್ತಲೇ ನಿಜಸಂಗತಿ ತಿಳಿಸುತ್ತಾಳೆ. ಪಶ್ಚಾತಾಪದಗ್ಧನಾದ ಮಧುವರಸನು ಹರಳಯ್ಯಗಳು ಅಧಿಕತರಮಹಿಮನೆಂದರಿಯದೇ ಭ್ರಾಂತಿಯಿಂದ ತೃಣೀಕರಿಸಿದೆ. ಅವರೊಡನೆ ಕೂಡಿಬಾಳುವೆನೆಂದು ನಿಶ್ಚಯಿಸುತ್ತಾನೆ. ನಿರ್ವಂಚನೆಯ ಭಾವದಿಂದ ಹರಳಯ್ಯನಂಗಣಕ್ಕೆ ಬಂದು ನಿಂತು "ಹರಶರಣರಿರ್ಪ‌ಚಾಂಡಾಲವಾಸಿಯೆಕಾಸಿ" ....ಅರಿದರಿದುಯಿನ್ನುನಾಂ ಅಧಮವಿಪ್ರರಕುಲಕ್ಕಂಜುವೆನೆ ನಿಮ್ಮ ಕುವರಂಗೆ ಮತ್ಸುತೆಯ ನೀವೆ ಮುದದಿಂದ ಒಪ್ಪಿಕೊಳ್ಳಬೇಕು ಎಂದು ವಿನೀತ ಭಾವದಿಂದ ಕೇಳುತ್ತಾನೆ. ಹರಳಯ್ಯಗಳು ಲೋಕರೂಢಿಗೆ ವಿರುದ್ಧವಾಗಿ ನಡೆದರೆ "ಧರೆಯಜನರೆಂತು ಸೈರಿಪರು" ಎಂದು ನಿರಾಕರಿಸುತ್ತಾನೆ. ಆಗ ಸತಿಕಲ್ಯಾಣಿಯು ತಾವು ನಿಮಿತ್ತಮಾತ್ರರು ಇದು ಶಿವನಪ್ಪಣೆ ಎಂದು ತಿಳಿಹೇಳಿ ಬೀಗತನಕ್ಕೆ ಒಪ್ಪಿಸುತ್ತಾಳೆ. ಶರಣ ಸಂದೋಹದೊಂದಿಗೆ ವಿವಾಹಮೆರವಣಿಗೆ ಹೆಬ್ಬಾಜಾರದಲ್ಲಿ ಬರುತ್ತಲಿತ್ತು. ಇದನ್ನು ಕಂಡಕೊಂಡೆ ಮಂಚಣ್ಣಗಳು, "ಹರಹರಾ, ಕಲ್ಯಾಣ ಕೆಡುವುದಕೆ ಸೂಚಕವು" ಎಂದು ಬಿಜ್ಜಳನಲ್ಲಿಗೆ ಬಂದು ಮಧುವರಸನು ಉತ್ತಮರು ಹಾರುವರಕುಲ ಹೊಲೆಯ ಗಲಸಿದನು" ಎಂದು ಚಾಡಿಹೇಳುತ್ತಾನೆ. ಕೋಪಾಗ್ನಿ ಉರಿದೆದ್ದು ಬಿಜ್ಜಳನು

"ಭಾಳಾಕ್ಷ ಭಕ್ತರ್ಕಿಕುಲಮೆಲ್ಲವೊಂದೆಂದು
ಹಾಳುಮಾಡಿದ ಹಲಬರಲ್ಲುಂಡು ಮಾಹೀಂದ್ರ
ಜಾಲಮುಮನೊಡ್ಡಿ ಪವಾಡವೆಂಬುತ ತೋರಿಬಸವನಿಂದಿಂತಾದುದು" (೧೦-೨೯)

ಎಂದು ಘುಡುಘುಡಿಸುತ್ತಾನೆ ತನ್ನ ಸೇವಕರಿಗೆ ಬಸವಣ್ಣನನ್ನು ಎಳೆದುಕೊಂಡು ಬನ್ನಿರಿ ಎಂದು ಅಟ್ಟುತ್ತಾನೆ. ಅವರು ಬಸವಣ್ಣನಿದ್ದ ಮಠಕ್ಕೆ ನುಗ್ಗಲನುವಾಗುತ್ತಾರೆ. ಅಷ್ಟರಲ್ಲಿ ದ್ವಾರಪಾಲಕರು ತಡೆದು ಹಡಪದ ಅಪ್ಪಣ್ಣನಿಗೆ ಸೂಚಿಸುತ್ತಾರೆ. ಅಪ್ಪಣ್ಣನು ಏಕಾಂತದಲ್ಲಿ 'ಬಸವೇಶ'ನಿಗೆ ಎಲ್ಲ ವೃತ್ತಾಂತವನ್ನು ಬಿತ್ತರಿಸುವನು.

ಇಲ್ಲಿಗೆಂಭತ್ತೆಂಟು ನಿಜ ಪವಾಡಂಗಳುಂ
ಯೆಲ್ಲ ಮುಗಿದುವುಮೀಶಕಳುಹಿಸಿದ ಮಣಿಹ ಸಂಪೂರ್ಣ

ಮಾದುದುಯಿಳೆಯೊಳು ಎಂದು ಬಸವಣ್ಣನು ನೀಲಲೋಚನೆಗೆ ತಾವು ಕೂಡಲೇಶನೊಳು ಕೂಡುವೆವು ತಕ್ಷಣ ಬರಬೇಕೆಂದು ಹೇಳಿಕಳಿಸುತ್ತಾನೆ. ಆಗ ನೀಲಾಂಬಿಕೆಯು ಶ್ರೀ ಸಂಗಮೇಶನಬಳಿಗೆ

ಪೋಗಲೇಕಿಲ್ಲಿ ತಾನಿಲ್ಲವೆ... ಎಂದು ಲಿಂಗದೊಳಗೆ ಬಯಲಾಗುತ್ತಾಳೆ. ಇದನ್ನು ಕಣ್ಣಾರೆ ಕಂಡ ಅಪ್ಪಣ್ಣನು ಬಸವೇಶನಿಗೆ ತಿಳಿಸುತ್ತಾರೆ. ಇದನ್ನು ಕೇಳಿ ಮುದಗೊಂಡ ಬಸವಣ್ಣ ತಡಮಾಡದೇ ಮನೋಗಮನದಿಂದ

[illegible]

[illegible]

[illegible]

[illegible]

[illegible]

ಹೋಗಿ ಕೂಡಲ ಸಂಗಮೇಶನನ್ನು ಸ್ತುತಿಸತೊಡಗುತ್ತಾನೆ. ಸಾಕ್ಷಾತ್ ಶಂಭುವೇ ಒಲಿದು ಗುರುರೂಪದಿಂದ ಲಿಂಗದೊಳು ಬೆರೆಸಿ ಬಿಗಿದಪ್ಪುವನು.

ದೀಪದೀಪಂ ಕೂಡಿ ಬಯಲಬೆರೆದಂತ್ತೆ....
....
....
ತಾಪಸೋತ್ತಮ ಬಸವನಪ್ಪಿದಾಕ್ಷಣ ವುಭಯ
ರೂಪಳಿದು ನಿಜಬೆಳಗ ಬೆರೆದು ಬಯಲಾಗಲ್ಕೆ

ಪುರಜನರೆಲ್ಲಬೆರಗಾಗಿ ಕೊಂಡಾಡತೊಡಗಿದರು. ಹಡಪದ ಅಪ್ಪಣ್ಣನು ಬಸವಣ್ಣನು ಶಿವನೊಳಗೆ ಬೆರೆದ ವಾರ್ತೆಯನ್ನು ಚನ್ನಣ್ಣ ಅಕ್ಕಮ್ಮ ಮಡಿವಾಳ ಮಾಚಿದೇವರಿರುವ ಏಕಾಂತವಾಸಕ್ಕೆ ಹೋಗಿ ಹೇಳಲು ಬೆಕ್ಕಸಬೆರಗಾಗುತ್ತಾರೆ. ಕಲ್ಯಾಣದೆಲ್ಲೆಡೆ ಈವಾರ್ತೆ ಪಸರಿಸಿತು. ತಂಡೋಪತಂಡವಾಗಿ ಶರಣರೆಲ್ಲ ಬೆರಗಿನಿಂದ ಮಠದತ್ತ ಬರುತ್ತಿದ್ದರು. ಏಳನೂರಎಪ್ಪತ್ತು ತೆತ್ತಿಗರೂ ನಡೆತಂದರು. ಅಕ್ಕನಾಗಮ್ಮ ಚೆನ್ನಬಸವಣ್ಣನವರು ಸಂತೈಸುತ್ತಿದ್ದರು. ಈವಾರ್ತೆ ಬಿಜ್ಜಳರಾಯನ ಕಿವಿತಲುಪಿತು.

ಕುಸಿದು ಚಿಂತೆಯ ತಾಳಿಯೆನ್ನಜೀವನ ಮಂತ್ರಿ
ಬಸವನಂ ಹೋಗಾಡಿಕೊಂಡೆನೀ ಮಧುವಹಳ್ಳುಗರ ದೆಸೆಯಲಿಂದಲೆನುತ (೧೦-೫೦)

ಆರ್ಭಟಿಸುತ್ತ ದುಷ್ಟಚಾಂಡಲ ದೂತರನ್ನು ಕರೆಸಿ ಮಧುವರಸ ಹರಳಯ್ಯರನ್ನು ಎಳಹೂಟಿಕಟ್ಟಿ ಎಳೆಸಿದನು. ಮಧುವರಸರ ಕಣ್ಣುಕಿತ್ತು. ಹರಳಯ್ಯನನ್ನು ಶೂಲಕ್ಕೇರಿಸಿ ಎಂದಾಜ್ಞೆಯಿತ್ತನು. ಕಾಲಭಟರಂದದಿ ಘರ್ಜಿಸುತ್ತ ಅರಸನಟ್ಟಿದ ಚಾಂಡಾಲರು ಬಂದು ಕರೆಯಲು ಮಧುವಯ್ಯ ಹರಳಯ್ಯಗಳು ಸುರಚಿರಾನಂದಕರಾಗಿ ತಮ್ಮ ಬಳಗದವರೊಡಗೂಡಿ ಮದುವೆಗೆ ಹೋಗುವಂತೆ ಹರಹರ ಮಹಾದೇವ ಎನ್ನುತ್ತ ಶಿವರಾತ್ರಿಗೆ ಹೋಗುವಂತೆ ಮನೋಲ್ಲಾಸದಿಂದ ಹೊರಡುತ್ತಾರೆ. ಮಧುವರಸರ ಕಣ್ಣುಕೀಳುತ್ತಾರೆ. ಹರಳಯ್ಯಗಳ ಶೂಲಕ್ಕೇರಿಸಲು, ಅದು ಚಿಗುರಿ ಪಲ್ಲವಿಸಿತಂತೆ! ಕಂಡವರೆಲ್ಲ ವಿಸ್ಮಿತರಾಗಿರಲು ಶಿವೆಸಹಿತ ಶಿವನು ಪ್ರಮಥರೊಡಗೂಡಿ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ದುಗಣಪದವಿಯನ್ನೀಯುತ್ತಾನೆ. ಚಾಮರಸನೇ "ಶರಣರ ಘನಮಹಿಮೆ ಇಂಥದು ತಿಳಿದುಕೋ" ಎಂದು ಹರಿಹರನು ಭಾವತುಂಬಿ ಬಣ್ಣಿಸುತ್ತಾನೆ.

ಇತ್ತ ಅದನ್ನು ಕಂಡ ಬಿಜ್ಜಳರಾಯನು ಬೆರಗಾಗುವನು. ಪೃಥ್ವಿಯಜನರೆಲ್ಲ ಜಯಜಯಕಾರ ಹಾಕುವರು ಶರಣಾಳಿಯೆಲ್ಲ ಶಿವಧ್ಯಾನದಲ್ಲಿದ್ದರು. ಇಂಥ ಚೋರಬಸವೇಶ್ವರನ ಅಮಳ ಮಹಾತ್ಮೆಯನ್ನು ಕೇಳಿ ಪಠಿಸುತ್ತ ಹೊಗಳುವವರಿಗೆ ಕರ್ತೃ ಶ್ರೀವಿರೂಪಾಕ್ಷನು ಇಷ್ಟಾರ್ಥವನ್ನಿತ್ತು ರಕ್ಷಿಸುವನು. ಎಲೆಮಗನೆ, ಯಿಂತಹ ಮಹಿಮಾ ಪುರುಷ ಬಸವೇಶನ ಮಹಿಮೆಯನ್ನುಸುರುವುದು ಆದಿಶೇಷನಿಗೂ ಅಸಾಧ್ಯವಾಗಿರುವಾಗ ನನ್ನ ಪಾಡೇನು?

[illegible]

ಸಂಕ್ಷೇಪದಲ್ಲಿ ಹೇಳಿರುವೆನು, ತಿಳಿದುಕೋ ಎನ್ನುತ್ತಾನೆ. ಹರಿಹರ ಶಿವಾಚಾರ್ಯ ಆಗ ಚಾಮರಸನು ಹರ್ಷಜಲಧಿಯೊಳು ಮುಳುಗೆದ್ದು ಪುಳಕಿತನಾಗಿ ಗದ್ಗದ ಸ್ವರದಿಂದ ಹರಿಹರನಂಘ್ರಿದ್ವಯಗಳನ್ನು ಶಿರದೊಳು ಹೊತ್ತು ಹೊಗಳುತ್ತಿದ್ದನು.

೧೧ನೆಯ ಸಂಧಿ : ಚಾಮರಸನ ಗುರುಭಕ್ತಿಗೆ ಮೆಚ್ಚಿದ ಹರಿಹರನು ಎಲೆ ಮಗನೆ, ನೀನು ನರಸ್ತುತಿಗೈದ ದುರ್ದೋಷಮಾಯವಾದುದು. ಬಸವ ಮಹಿಮಾಮೃತದಪಾನದಿಂದ ಇನ್ನು ನಿನಗೆನಿಜಮೋಕ್ಷದೊರೆಯುವುದು ಎಂದು ಹರಸುತ್ತಾನೆ. 'ಶ್ರೀಉದ್ಭಾನವೀರದೇಸಿಕನು ನಿನಗೆ ಶ್ರೀವೀರಶೈವೋಪದೇಶ'ವನ್ನು ನೀಡುವನು ಹೋಗು ಎನ್ನಲು ಚಾಮರಸನು 'ಶ್ರೀಗುರುವೇ ನೀನು ಸಾಕ್ಷಾತ್ ಸುಗುಣಸ್ವರೂಪನು, ನಿರ್ಗುಣಶಿಲಾಮೂರ್ತಿಯನ್ನು ಒಲಿಸಿಕೊಳ್ಳಲು ನಾನು ಶಕ್ತನೇ? ಎಂದು ಅನುಮಾನಿಸುವನು. ಶಿಷ್ಯನೇ ನೀನರಿಯೆ ಶಿಲೆ, ಮರ, ಮಳಲು, ಹಿಕ್ಕೆಮುಂತಾದ್ದನ್ನು ನಂಬಿ ಪೂಜಿಸಿ ಮೋಕ್ಷ ಪಡೆದವರುಂಟು ನಂಬು ಎಂದನು. ಈಮೊದಲು ಹನುಮಂತನು ವೀರೇಶನನ್ನೊಲಿಸಿ ಲಿಂಗದೀಕ್ಷೆಯ ಪಡೆಯಲಿಲ್ಲವೇ? 'ಹಮ್ಮಿನಿಂದಿರ್ದವರಿಗೆ' ಒಲಿಯಲಿಲ್ಲ ಅಷ್ಟೆ ಎನ್ನಲು ಆಶ್ಚರ್ಯಚಕಿತನಾಗಿ ಹನುಮಂತನು ರಾಮನ ಸೇವಕ. ಹೀಗಿರಲು ಆತನು ಲಿಂಗಪಡೆದುದು ಹೇಗೆಂದು ಕುತೂಹಲದಿಂದ ಪ್ರಶ್ನಿಸುವನು.

ಮಗನೆ ಕೇಳು, ರಾಮನಿಗೆ ಹನುಮಂತ ನಿಷ್ಠಾವಂತ ಸೇವಕ. ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗಾಗಿ ಭೂಮಿಯನ್ನು ತ್ಯಜಿಸಿ ವನವಾಸಿಯಾಗುತ್ತಾನೆ. ಅಲ್ಲಿ ಸೀತಾಪಹರಣದಿಂದ ಚಿಂತೋದಧಿಯಲ್ಲಿ ಮುಳುಗಿದ್ದಾಗ ಹನುಮಂತನು ಅದನ್ನು ಕಂಡು ಸುಗ್ರೀವನಿಗೆ ತಿಳಿಸುತ್ತಾನೆ. ವಾಲಿಯನ್ನು ಕೊಲ್ಲಿಸಿ, ತನ್ನ ಸೇನೆಯ ಸಹಾಯದಿಂದ ರಾವಣನ ಸಂಹಾರಕ್ಕೆ ಒತ್ತಾಸೆಯಾಗಿ ನಿಲ್ಲುತ್ತಾನೆ. ಕೊನೆಗೆ ಸೀತಾರಾಮರ ಪಟ್ಟಾಭಿಷೇಕ ವಾಗುವಂತೆ ಮಾಡುತ್ತಾನೆ. ಈ ಸಾಹಸಕ್ಕೆ ಹನುಮಂತನನ್ನು ಕರೆದು ಶ್ರೀರಾಮನು ''ನೀನು ಬಯಸಿದ್ದನ್ನು ಬೇಡು'' ಎನ್ನಲು ಮುಕ್ತಿ ಸಾಮ್ರಾಜ್ಯವನ್ನು ನೀಡೆಂದು ಪ್ರಾರ್ಥಿಸುತ್ತಾನೆ. ದೇವತ್ವ ನಾಂ ಪಡೆಯಲಿಲ್ಲ ಎಂತುಯಿತ್ತಪೆನೆನಲು ಹನುಮಂತನು ಮನದೊಳಗೆ ಜರಿದುಕೊಳ್ಳುತ್ತ ಅಲ್ಪಮನುಜದೈವಗಳ ನಾದರಿಸುವವ ಮೂರ್ಖನವನೆಂದು ವಶಿಷ್ಠ ಮಹರ್ಷಿಗಳ ಹತ್ತಿರ ಬರುತ್ತಾನೆ. ಶ್ರೀವೀರಶೈವದೀಕ್ಷೆ ಉಪದೇಶಿಸಿ ಮೋಕ್ಷ ಮುಖಿಯಾಗಿಸುವ ಗುರು ಶ್ರೀವೀರಭದ್ರನೆಂದು ತಿಳಿದುಕೊಂಡು ಹೇಮಕೂಟಕ್ಕೆ ಬರುತ್ತಾನೆ. ಉಗ್ರ ತಪಸ್ಸನ್ನಾಚರಿಸಲು ಶ್ರೀವೀರೇಶ್ವರನು ಮೆಚ್ಚಿ ಪ್ರತ್ಯಕ್ಷನಾಗುತ್ತಾನೆ. ಸಪ್ತದೀಕ್ಷಾಕ್ರಮದಿಂದ ಇಷ್ಟಲಿಂಗವನ್ನು ಕರಪೀಠಕ್ಕಿತ್ತು ಪಂಚಾಕ್ಷರಿಯ ಮಂತ್ರಾರ್ಥ ತಿಳಿಸಿ, ತ್ರಿಕಾಲದಲ್ಲಿ ಲಿಂಗಾರ್ಚನೆ ಮಾಡಲು ಹೇಳಿ ಹರಸುತ್ತಾನೆ. ಈಗ ಹನುಮಂತನಿಗೆ ಲಿಂಗವೆ ನೋಟ. ನೋಟವೇ ಲಿಂಗವಾಯಿತು. ಸರ್ವಾಂಗಲಿಂಗ ಕಳೆಯೊಳಗೆ ಮುಳುಗಿ ಲಿಂಗಾಂಗ ಸಮರಸದಯಿಂಗಿತದಲ್ಲಿದ್ದು ಶಿವಗೀತಗಳನ್ನು ರಚಿಸುತ್ತ ಗುರು ಪದಧ್ಯಾನ, ಲಿಂಗಾರ್ಚನೆಯಲ್ಲಿರು ತ್ತಿದ್ದನು. ಇತ್ತ ಗೌತಮನ ಆಶ್ರಮದೊಳಗೊಬ್ಬ ಶಿವಯೋಗಿಯು ತನ್ನ ಇಷ್ಟಲಿಂಗ ಕಾಣದಾಗಲು ಭೀತಿಯಿಂದ ಲಿಂಗದೊಡನೆ ಸಹಗಮನ ವೈದುವೆನೆಂದು ತನ್ನ ಕೊರಳಿಗೆ ಖಡ್ಗ ಹಿಡಿದುಕೊಳ್ಳುತ್ತಾನೆ. ಶಿವಪ್ರತ್ಯಕ್ಷನಾಗಿ

ಲಿಂಗವನ್ನಿತ್ತು ಶಿವಯೋಗಿಯನ್ನು ಅನುನಯದಿಂದ ಮುದ್ದಿಸುತ್ತಾನೆ. ಗೌತಮ ಮಹಾಮುನಿಯು ಶಂಕರನನ್ನು ವಂದಿಸಿ ಔತಣಕ್ಕೊಪ್ಪಿಸುತ್ತಾನೆ. ಅಲ್ಲಿನ ಉಪವನದೊಳಗೆ ಅಖಿಳ ಗಣವೃಂದದೊಡನೆ ಶಿವನಿರುವ ಸಮಯದಲ್ಲಿ ಹನುಮಂತನು ಬಂದು ಸಾಷ್ಟಾಂಗವೆರಗುತ್ತಾನೆ. ಗುಂಡಕ್ರಿಯಾದಿರಾಗವೆರಸಿ ಪರಿಪರಿಯಾಗಿ ಸ್ತುತಿಸಲು ಇನಿರಸದ ಸೊಬಗಿನ ಸೋನೆ ಸುರಿದಂತೆ ಸರ್ವರೂ ಮೂರ್ಛಿತರಾಗುವರು ಹೀಗೊಮ್ಮೆ ಶಿವಸನ್ನಿಧಿಯಲ್ಲಿ ಹನುಮಂತನು ಹಾಡುತ್ತಿರಲು ಲಿಂಗಪೂಜೆಗೆ ಸಮಯವಾಯಿತೆಂದು ಹೊರಡುತ್ತಾನೆ. ಶಿವನು ಅವನನ್ನು ಪರೀಕ್ಷಿಸಲು ಲಿಂಗವನ್ನಡಗಿಸಿಡುತ್ತಾನೆ. ನಾನಾ ಪರಿಯಾಗಿ ಚಿಂತಿಸಿ ಇನ್ನಿರುವುದು ತರವಲ್ಲ ವೆಂದುಕೊಂಡು ಗುರುವಿಗರುಹಿ ಪ್ರಾಣಗಳೆವೆನೆಂದು ಶ್ರೀ ವೀರಭದ್ರನನ್ನು ನೆನೆಯುತ್ತಾನೆ. ತಕ್ಷಣವೇ ಪ್ರತ್ಯಕ್ಷ ನಾದ ಶ್ರೀವೀರೇಶನು ಹನುಮಂತನಿಗಾಗಿ ಲಿಂಗವನ್ನು ಹುಡುಕಿ ತರಲು ಹೊರಡುವನು. ಕೊನೆಗೆ ಶಿವನು ಮೆಚ್ಚಿ ಹನುಮಂತನಿಗೆ ಲಿಂಗವನ್ನಿತ್ತು ಹರಸುವನು.

ಎಲೆ ಮಗನೆ ಚಾಮರಸ ಕೇಳು, ಶ್ರೀವೀರೇಶನು ಹನುಮಂತನಿಗೊಲಿದು ಲಿಂಗೋಪದೇಶವಿತ್ತು ನಿಶ್ಚಲ ಪದವಿಯೊಳಗೆ ಲೋಲಾಡಿಸಿದ ಕಥೆ ನಾರದ ಪುರಾಣದಲ್ಲಿ ಪ್ರಸಿದ್ಧವಾಗಿದೆ ಎನ್ನಲು ಉಲ್ಲಾಸ ಹೆಚ್ಚಿ ಗುರು ಹರಿಹರನಿಗೊಂದಿಸಿ ಚಾಮರಸನು ಬೀಳ್ಕೊಳ್ಳುತ್ತಾನೆ. ಭಕ್ತಿರಸತುಂಬಿ ಶ್ರೀವಿರೂಪಾಕ್ಷನನ್ನು ಸ್ತುತಿಸುತ್ತಾನೆ. ಪಂಪಾಪತಿಯು ಪ್ರತ್ಯಕ್ಷನಾಗಿ "ಉದ್ಧಾನವೀರದೇಶಿಕೇಂದ್ರನು ಒಲಿದು ಮನದಿಷ್ಟವನ್ನು ಯಿತ್ತಪನೆಂದು" ಹರಸುತ್ತಾನೆ.

೧೨ನೆಯ ಸಂಧಿ : ಚಾಮರಸನು ತನ್ನ ತುಟಿಸೋಂಕದಂತೆ ಒಂದೇಸವನೆ ಶ್ರೀವೀರಭದ್ರನನ್ನು ಸ್ತುತಿಸ ತೊಡಗುತ್ತಾನೆ. ಗಾನಂಗೇಳ್ದಅಹಿಯಂತೆ ನಲಿದು ಒಲಿದು ಪ್ರತ್ಯಕ್ಷನಾಗಿ ಕಾರ್ಮೇಘದ ಕೋಟಿಮಿಂಚು ಹೊಳೆದಂತೆ ಪ್ರಜ್ವಲಿಸುತ್ತಾನೆ. ಚಾಮರಸ ಮೂರ್ಛಿತನಾಗಿ ಧರೆಗುರುಳಿಬಿಡುತ್ತಾನೆ.

''ಪಡೆದವಳು ಶಿಶುವು ಪೊಡೆಗೆಡೆಯಲತಿ ಮರುಕದಿಂ
ಕಡುಭರದಿ ಪರಿದೈದಿಯೆತ್ತಿ ಮುದ್ದಿಸುವಂತೆ" (೧೨-೧೧)

ಶ್ರೀವೀರಭದ್ರನು ತನ್ನ ಶ್ರೀಹಸ್ತವನ್ನು ಚಾಮರಸನ ಮಸ್ತಕದ ಮೇಲಿಟ್ಟು ಹೆದರದಿರು ಎಂದು ಅಭಯ ನೀಡುವನು ಚಾಮರಸನು ತನ್ನ ಪೂರ್ವವೃತ್ತಾಂತವನ್ನು ತಿಳಿಸಿ ತನಗೆ ವೀರಶೈವದ ದೀಕ್ಷೆಯನಿತ್ತು ಮೋಕ್ಷದಮಾರ್ಗವನ್ನು ತಿಳಿಸಬೇಕೆಂದು ಬೇಡಿಕೊಳ್ಳುತ್ತಾನೆ. ಏಕಾಂತದಲ್ಲಿ ಸಿದ್ಧಾಸನದಲ್ಲಿ ಕುಳಿತು ಹೀಗೆ ಉಪದೇಶಿಸುತ್ತಾನೆ. ಎಲೆಮಗನೆ ವೀರಶೈವದ ಮಹಿಮೆ ಅನ್ಯಶೈವದಂತಲ್ಲ ಅನ್ಯಧನ, ಅನ್ಯವನಿತೆ ಅನ್ಯಭೂಮಿ ಗೆಳಸದಿರಬೇಕು. ಪುಣ್ಯಕ್ಷೇತ್ರತೀರ್ಥ ಯಾತ್ರೆಗಳೆಂದು ಅಲೆಯದಿರಬೇಕು. ಗ್ರಹಣ, ಸಂಕ್ರಮಣ, ಶಿವರಾತ್ರೆಗಳ ಪುಣ್ಯತಿಥಿಪರ್ವಣಿ ಎಂದು ಹಲವು ಕರ್ಮಗಳಿಗೆ ಎರಗಲಾಗದು. ಮಲತ್ರಯಗಳನ್ನು ಅರಿಷಡ್ವರ್ಗಗಳನ್ನು ಸಪ್ತವ್ಯಸನಗಳನ್ನು ಬಿಡಬೇಕು. ಅಷ್ಟಮದ ದಶವಿಕಾರಗಳನ್ನು ಕಡಿಯಬೇಕು. ಮಾಯಾಪಾಶಗಳನ್ನು ಹರಿದೊಗೆದು ದುಷ್ಕರ್ಮಿಗಳ ಸಂಗವನ್ನು ತೊರೆದು ವೀರಭಕ್ತಿ ಸನ್ಮಾರ್ಗದಲ್ಲಿ ನಡೆಯಬೇಕು.ಅಮಲಸುಜ್ಞಾನ

ಖಡ್ಗವನ್ನು ಹಿಡಿದು ಕರಣೇಂದ್ರಿಯಗಳನ್ನು ಜಯಿಸಬೇಕು. ನಿರ್ಮಲಾತ್ಮಕನಾಗಿ, ಅಂಗಭೋಗೋಪಭೋಗಾದಿಗಳನ್ನೆಲ್ಲ ಶಿವಲಿಂಗ ಮುಖವರಿದು ಶಿವಪ್ರಾಣಿಯಾಗಿರ ಬೇಕು. ಸ್ವ ಸ್ವರೂಪವನ್ನರಿಯಬೇಕು ಎಂದನು. ಚಾಮರಸನ ಅಪೇಕ್ಷೆಯ ಮೇರೆಗೆ ಅಂಗಾದಿ ಮುಖ್ಯಪೂರ್ವ ಗುಣಗಳನ್ನು ನೀಗಿಕೊಂಡು ನಿಜಸುಖಿಯಾಗುವ ಪರಿಯನ್ನು ಮಾರ್ಮಿಕವಾಗಿ ತಿಳಿಸುತ್ತಾನೆ. ಆರು ಅಂಗದ ಗುಣವನತಿಗಳೆವ ಬಗೆಯನ್ನು ವಿಸ್ತರಿಸಿ ಹೇಳುತ್ತಾನೆ.

ಜೀವಾತ್ಮ, ಅಂತರಾತ್ಮ, ಪರಮಾತ್ಮರೆಂದೆನಿಪ ಆತ್ಮತ್ರಯಮನುಳಿದು ಇಷ್ಟ ಪ್ರಾಣ, ಭಾವವೆನಿಪ ನಿಜ ಚೇತನವನಲ್ಲಿ ನೆಲೆಗೊಳಿಸಲು ಆತ್ಮಗಳ ಪೂರ್ವವು ಅಳಿಯುವುದು. ನೀರಹನಿ ಶುಕ್ತಿಯಲಿ ಪ್ರವೇಶವಾಗಿ ಕಂಗೊಳಿಪ ಜ್ಯೋತಿ ಮೌಕ್ತಿಕವಾಗುವಂತೆ ಪರಮಗುರುವೊಲಿದವರ ಪೂರ್ವಗುಣಭಂಗಿಸುತ್ತ ಶಿವಕಳೆಯನ್ನು ಪ್ರತಿಷ್ಠಾಪಿಸಲು ನರರೆಲ್ಲ ಶರಣರಾಗುವರು.

ಭ್ರೂಮಧ್ಯದಲ್ಲಿ ಮನಸ್ಸುವಾಸಿಯಾಗಿರುವುದು. ಆ ಮನವು ಬಹಿರ್ವಿಷಯಕ್ಕೆಳಸದೆ ಅಂತರ್ಮುಖವಾಗಿ ತನ್ನತಾನರಿದು ತನ್ನೊಳಗೆ ತಾನಿದ್ದು ಮಹಾತ್ಮನೆಂಬ ಹೆಸರನ್ನು ಪಡೆಯುವುದು. ಆ ಮಹಾತ್ಮನೇ ಮಹಾಲಿಂಗ. ಆ ಮಹಾಲಿಂಗವನ್ನು ಮನಸ್ಸಿನ ಮಧ್ಯದಲ್ಲಿ ನಿಲ್ಲಿಸಿದರೆ ಮನದ ತುದಿಯಲ್ಲಿಯೇ ಪರಮಾತ್ಮ ಕಾಣಿಸುತ್ತಾನೆ. ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವಿತ್ತು ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವನ್ನು ಸವಿದು, ಪ್ರಾಣಲಿಂಗದ ಕಳೆಯ ಇಷ್ಟಲಿಂಗದಲ್ಲಿ ತುಂಬಿ ಸದ್ಭಾವವನ್ನು ಕರಕಮಲದಲ್ಲಿಟ್ಟು ಭಜಿಸುವವರ ಘನತೆಯನ್ನು ವರ್ಣಿಸಬಹುದೇ? ಎಂದು ಶ್ರೀಗುರುವು ಹೇಳಲು ಚಾಮರಸನು ಧನ್ಯತಾಭಾವತಾಳಿದನು. ಆಗ ಶಾಸ್ತ್ರೋಕ್ತವಾಗಿ ಚಾಮರಸನಿಗೆ ಲಿಂಗದೀಕ್ಷೆ ಮಾಡಿ ಇಷ್ಟಲಿಂಗವೇ ಪ್ರಾಣಲಿಂಗವೆಂದೂ, ಭಾವಲಿಂಗವೆಂದೂ ಹೆಸರುಗೊಳ್ಳುವ ಪರಿಯನ್ನು ಶ್ರೀಗುರುವು ವಿವರಿಸಿ ಹೇಳುತ್ತಾರೆ. ದೀಕ್ಷೆ ಪಡೆದ ಚಾಮರಸನು ಕೃತಾರ್ಥಭಾವದಿಂದ ತನ್ನ ಗುರುವನ್ನು ಸ್ತುತಿಸಲು ಗುರುದೇವನು ಲಿಂಗವನ್ನಿತ್ತು ಬಯಲಲ್ಲಿ ಬಯಲಾದನು.

೧೩ನೆಯ ಸಂಧಿ : ಉದ್ವಾನ ವೀರದೇಶಿಕನಿಂದ ಲಿಂಗೋಪದೇಶ, ಸುದೀಕ್ಷೆ ಪಡೆದ ಚಾಮರಸನು ಇಷ್ಟಲಿಂಗದ ಮಹಾಬೆಳಗಿನಲ್ಲಿ ಹಾಲು ನೀರು ಬೆರೆತಂತೆ ಬೆರೆಸಿ ಬೇರಿಲ್ಲದ ರೀತಿಯಲ್ಲಿ ಪರಿಪೂರ್ಣಭಾವದಲ್ಲಿ ಮೆರೆಯತೊಡಗಿದನು. ಅವನದು ಲಿಂಗನಡೆ, ಲಿಂಗನುಡಿ, ಲಿಂಗದೊಡನಾಟ, ಅಖಿಲವೂ ಲಿಂಗಸ್ವರೂಪಿಯಾಗಿ ನಿಜಲಿಂಗ ಲೀಲೆಯಿಂದಿರುತ್ತಿದ್ದನು. ಹೀಗೆ ಚಿಲ್ಲಿಂಗ ಲೀಲೆಯಲಿ ತೊಳಗಿಬೆಳಗುತ್ತ ಸಂತಸದಿಂದ ರಾಘವ ಭೀಮಕವಿ, ಲಕ್ಕಣದಂಡೇಶರಿಗೆ ಗುರುವಾಗಿಮೆರೆದ ಕವಿಕುಲಗುರು ಹರಿಹರ ಶಿವಾಚಾರ್ಯರಿದ್ದೆಡೆಗೆ ಬರುತ್ತಿದ್ದನು. ಇವನ ಬರವನ್ನು ಕಾಣುತ್ತಲೇ ಹರಿಹರನು. ನರನಾಗಿ ಹೋಗಿ ಪೂರ್ವವಳಿದು. ಬುಧಕುಲಕೆ ಗುರುವಾಗಿ ಬಂದೆ ಕಾರಣಪುರುಷ ಬಾ ಎಂದು ಸಮ್ಮುದದಿಂದ ಕರವಿಡಿದು ಅಧಿಕಾಸನದಲ್ಲಿ ಕುಳ್ಳಿರಿಸಿದನು. ಹರಿಹರನ ಸೂಚನೆಯ ಮೇರೆಗೆ ತನ್ನ ವೃತ್ತಾಂತವೆಲ್ಲವನು ಸಭೆಗರುಹಿ ತನ್ನ 'ಪ್ರಭುಲಿಂಗಲೀಲೆ'ಯನ್ನು ನಿರೂಪಿಸಲು ಅಣಿಯಾಗುತ್ತಾನೆ.

ಧರೆಗೆಸೆವ ಕರವೂರ ಪುರದಲ್ಲಿ ಸುಜ್ಞಾನಿ ನಿರಹಂಕಾರ ಎಂಬ ದಂಪತಿಗಳಿದ್ದರು. ಮಕ್ಕಳಿಲ್ಲದ್ದರಿಂದ ಶಿವನನ್ನು ಕುರಿತು ತಪಸ್ಸುಮಾಡಲು ಶಿವನು 'ನಿರ್ಮಾಯ' ಎಂಬ ಗಣನಾಯಕನನ್ನು ಕಳುಹಿಸುತ್ತಾನೆ. ಅವನೇ ಈ ದಂಪತಿಗಳ ಉದರದಲ್ಲಿ 'ಮಗ'ನಾಗಿ ಜನಿಸಿ, 'ಪ್ರಭುದೇವ' ಎಂಬ ಹೆಸರು ಪಡೆದ ಆತನು ಪದ್ಮಿನಿ ಎಂಬ ರತಿಸದೃಶ ಸತಿಗೆ ಪತಿಯಾಗಿ ಅಖಿಲಭೋಗದಲ್ಲಿದ್ದುಕೊಂಡು ರಾಜ್ಯವಾಳುತ್ತಾನೆ. ಮುಂದೆ ಸಂಸಾರದಲ್ಲಿ ಬೇಸರ ಹುಟ್ಟಿ ವೀರ ವಿರಕ್ತನಾಗಿ ಗುರುಗುಹೇಶ್ವರನಿಂದ ಉಪದೇಶ ಪಡೆಯುತ್ತಾನೆ. ನಾನಾ ಲೀಲೆಯಲ್ಲಿ ಮೆರೆಯುತ್ತ ಲೋಕದಲ್ಲಿ ಬಯಸಿದವರಿಗೆ ಒಲಿದು ಜೀವನ್ಮುಕ್ತಿಯನ್ನು ಕೊಡುತ್ತಲಿದ್ದನು. ಒಂದು ದಿನ ಕೈಲಾಸದಲ್ಲಿ ಶಿವೆಯೊಡನೆ ಕುಳಿತ ಶಿವನು ಧರೆಯಲ್ಲಿ ಜನಿಸಿದ ಪ್ರಭುವಿನ ಮಹತ್ವವನ್ನೂ ತತ್ವವನ್ನೂ ಯಾರಿಂದಲೂ ಪರೀಕ್ಷಿಸಲಾಗದು ಎಂದು ಹೇಳುತ್ತಾನೆ. ಇದಕ್ಕೊಪ್ಪದ ಪಾರ್ವತಿಯು ತನ್ನ ವಾದವನ್ನೇ ಮುಂದುಮಾಡಿ ಆಪ್ರಭುವನ್ನು ತನ್ನ ಮಾಯೆಯ ಬಲದಿಂದ ಹಿಡಿದೆಳೆದು ತರದಿದ್ದರೆ ತಾನು ಪಾರ್ವತಿಯೇ ಅಲ್ಲವೆಂದು ಪ್ರತಿಜ್ಞೆ ಮಾಡುತ್ತಾಳೆ.

ಬನವಸೆಯ ಮೋಹಿನೀ ದೇವಿ, ಮಮಕಾರರಹೊಟ್ಟೆಯಲ್ಲಿ ಪಾರ್ವತಿಯ ತಾಮಸಕಳೆಯು 'ಮಾಯೆ'ಯ ಹೆಸರಿನಿಂದ ಹುಟ್ಟಿ ಬಂದಿತು. ಮಾಯೆಗೆ ಯೌವನ ಪ್ರಾಪ್ತವಾಗಲು ಶಿವನೇ ತನಗೆ ಗಂಡನಾಗಬೇಕೆಂದು ಮಧುಕೇಶ್ವರನನ್ನು ಪೂಜಿಸಿ ನೃತ್ಯ ಮಾಡತೊಡಗಿದಳು. ಅಲ್ಲಮ ಪ್ರಭುವು ಮದ್ದಳೆಯವನ ವೇಷಧರಿಸಿ 'ಮಾಯೆ'ಯ ಮನಸ್ಸಿನಗಾಂಭೀರ್ಯವನ್ನು ತಿಳಿದುನೋಡುವೆನೆಂದು ಆ ದೇವಾಲಯಕ್ಕೆ ಬರುತ್ತಾನೆ. 'ಮಾಯೆ'ಯು ದೇವಾಲಯದಲ್ಲಿ ಪೂಜೆಮಾಡುತ್ತಿದ್ದ ಸಮಯ ಹೊರಗಡೆಯಲ್ಲಿ ನಿಂತು ಅಲ್ಲಮನು ಮದ್ದಳೆ ಬಾರಿಸತೊಡಗುತ್ತಾನೆ. ಕೇಳಿದ ಮಾಯೆ ಹುಚ್ಚೆದ್ದು ಕುಣಿಯತೊಡಗುತ್ತಾಳೆ. ತಕ್ಷಣವೇ ಮದ್ದಳೆಯವನನ್ನು ಕರೆಸುತ್ತಾಳೆ. ಮೊದಲ ನೋಟದಲ್ಲಿಯೇ ಕಾಮ ಪರವಶಳಾಗುತ್ತಾಳೆ. ಅವನನ್ನಪ್ಪಿಕೊಂಡು ತೃಪ್ತಿ ಪಡೆಯಲೆಂದು ಅವನ ಬಳಿ ಬರಲು ಅವಳನ್ನು ಮರುಳುಗೊಳಿಸಿ, ಅವಳ ಕೈಗೆ ಸಿಗದೆ ಮದ್ದಳೆಯನ್ನು ಬಿಸುಟುಬಯಲಾಗುವನು. ಮುಂದೆ ಗೊಗ್ಗಯ್ಯನಿಂದ ಗುಪ್ತ ಸಮಾಧಿಯನ್ನು ಅಗಿಸಿ, ಅನಿಮಿಷದೇವನ ಅಮಳ ಲಿಂಗವನ್ನು ತಾನು ಧರಿಸಿಕೊಂಡು ಅವನಿಗೆ ಮುಕ್ತಿಯನ್ನೀಯುತ್ತಾನೆ. ಮುಕ್ತಾಯಕ್ಕನ ದುಃಖವನ್ನು ಹೋಗಲಾಡಿಸುತ್ತಾನೆ. ಸೊನ್ನಲಿಗೆಗೆ ಬಂದು ಸಿದ್ಧರಾಮನಿಗೆ ನಿಜವನ್ನು ತೋರಿಸಿ ಕಲ್ಯಾಣಕ್ಕೆ ಆಗಮಿಸುತ್ತಾನೆ. ಅಲ್ಲಿ ಮರುಳಶಂಕರ ದೇವನಿಗೆ ಐಕ್ಯವನ್ನೀಯುತ್ತಾನೆ. ಬಸವಣ್ಣನವರ ಇಷ್ಟವನ್ನು ಸಲ್ಲಿಸಿ, ಅಕ್ಕಮಹಾದೇವಿಯನ್ನು ಜೀವನ ಮುಕ್ತಳನ್ನಾಗಿಸಿ, ಗೋರಕ್ಷನಿಗೆ ಸುಜ್ಞಾನ ಸಿದ್ಧಿಯನ್ನು ದಯಪಾಲಿಸಿ ಋಷಿವಿತಾನಕ್ಕೆ ಲಿಂಗೈಕ್ಯವನ್ನಿತ್ತು. ಮೂಢನಾದ ಶಬರನನ್ನು ಕರೆದು ಉಪದೇಶ ನೀಡಿ, ಧರೆಯನ್ನು ಪಾವನಮಾಡಿ ಅಲ್ಲಮನು ಪರಮನಲ್ಲಿ ಬಯಲಾಗುವನು. ಹೀಗೆ ಪ್ರಭುವು ಲಿಂಗಲೀಲೆಯನ್ನು ಮೆರೆಯುವನು. ಈ ಪ್ರಬಂಧವನ್ನು ಹರಿಹರನಿಗೆ ಕೇಳಿಸುತ್ತಿರುವಾಗ ವಿಜಯನಗರ ಸಾಮ್ರಾಜ್ಯದ ಅಧಿಪತಿ ದೇವರಾಜನಿಗೆ ಈ ವಾರ್ತೆ ತಲುಪುತ್ತದೆ. ಆತನು ತನ್ನ ಆಸ್ಥಾನಕ್ಕೆ ಚಾಮರಸನನ್ನು ಕರೆಸಿ ಪಂಡಿತ ಮಂಡಲಿಯಲ್ಲಿ ಪ್ರಭುಲಿಂಗಲೀಲೆಯನ್ನು ಓದಿಸಿ ಕೇಳಿದನು.

ಕವಿಗಳು. ಗಮಕಿವಾದಿವಾಗ್ಮಿಗಳೆಲ್ಲ ಕೇಳಿ ಪ್ರಭುಲಿಂಗಲೀಲೆಯೊಂದು ಮಹಾಕಾವ್ಯ ಎಂದು ಒಪ್ಪಿಕೊಂಡರು. ಅದರಲ್ಲಿ ಮಹಾಕಾವ್ಯದ ಲಕ್ಷಣ ಇರುವುದರ ಜೊತೆಗೆ ಇಹಪರದ ಏಳ್ಗೆಗಾಗಿ ಕಾಲಕರ್ಮವನೊರೆಸಿ ಉತ್ಪತ್ತಿ ಸ್ಥಿತಿಲಯವನ್ನು ಕಡಿದು ಪ್ರತ್ಯಕ್ಷಸನ್ಮುಕ್ತಿ ಸಾಮ್ರಾಜ್ಯ ಸಾಧನ ಇದೆಯೆಂದು ಘೋಷಿಸಿದರು. ಪ್ರಭುಲಿಂಗಲೀಲೆ ಒಂದು ಸಂಸ್ಕೃತಿ ಅದನ್ನು ರಚಿಸಿದ ಚಾಮರಸನೊಬ್ಬನೇ ಸತ್ಕವಿ ಎಂದು ಕವಿನಿಕರ ಪ್ರಶಂಸಿಸಿತು.

ಈ ರೀತಿಯಾಗಿ ಎಲ್ಲ ವಿದ್ವತ್ಪಂಡಿತರು ಕೊಂಡಾಡಲು ದೇವ ರಾಜೇಂದ್ರನು ಚಾಮರಸನನ್ನು ರಾಜಮರ್ಯಾದೆಯೊಂದಿಗೆ ಸತ್ಕರಿಸಿ ಕಾವ್ಯವನ್ನು ಆನೆಯ ಮೇಲಿಟ್ಟು ಮೆರವಣಿಗೆ ಮಾಡಿ ವಿರೂಪಾಕ್ಷ ದೇವರಿಗೆ ಆಕಾವ್ಯವನ್ನು ಅರ್ಪಿಸಿ ತನ್ನ ಅರಮನೆಗೆ ತೆರಳಿದರು. ಹರಿಹರದೇವನು ಗಣಾರಾಧನೆ ಮಾಡಿಸಿ ಮಹಾಮಂಗಳ ಮಾಡಿಸಿದನು. ಅಷ್ಟರಲ್ಲಿ ಮಹಾರಾಜನು ಕುಮಾರವ್ಯಾಸ ಭಾರತಕ್ಕೂ ಮರ್ಯಾದೆ ಮಾಡಿಸುವನೆಂಬ ವಾರ್ತೆಹರಿಡಿತು. ಅದನ್ನು ಕೇಳಿ ಕೋಪಾವಿಷ್ಟನಾದ ಚಾಮರಸನು ವಿದ್ವತ್‌ಜನರನ್ನು ಒಡಗೊಂಡು ದೊರೆಯ ಬಳಿಬರುತ್ತಾನೆ. ಅವನನ್ನು ಮನ್ನಣೆಯಿಂದ ಬರಮಾಡಿಕೊಂಡ ಅರಸನು ಭಾರತವನ್ನು ಬರೆದ ಕುಮಾರವ್ಯಾಸನಿಗೂ ಮನ್ನಣೆ ಮಾಡಿದರೆ ಒಳಿತಲ್ಲವೆ? ಎಂದು ಕೇಳುತ್ತಾನೆ. ಚಾಮರಸನು ಘುಡುಘುಡಿಸುತ್ತ ಶವಕ್ಕೆ ಶೃಂಗಾರವೇಕೆ? ಸತ್ತಪ್ರಬಂಧಕ್ಕೆ ಕನಕಸ್ನಾನವೇ? ಎಂದು ಪ್ರಶ್ನಿಸುವನು. ಆಗ ಅರಸನು ಈ ಲೋಕದಲ್ಲಿ ಜೀವನದ ಸತ್ಪ್ರಬಂಧ ಉಂಟೇ? ಎಂದು ಪ್ರಶ್ನಿಸಿದನು. ಅದಕ್ಕೆ ಚಾಮರಸನು ಉಂಟುಂಟು ಪ್ರಭುಲಿಂಗಲೀಲೆಯನ್ನು ಕೇಳಿರಿ ಎಂದು ಕೈಯೆತ್ತಿ ಹೇಳತೊಡಗಿದ ಇದು ಸತ್ತವರ ಕಥೆಯಲ್ಲ, ಸಾಯದೆ ಬದುಕಿದ ವ್ಯರ್ಥಜೀವಿಗಳ ಕಥೆಯಲ್ಲ, ಸಾಯದೆ ಸುತ್ತುಚಿತ್ತನಾಂದ ನಿತ್ಯ ಪರಿಪೂರ್ಣಪ್ರತ್ಯಕ್ಷ ಮೋಕ್ಷಪದವನ್ನು ಸತ್ಯದಿಂದ ಸಾಧಿಸುವ ಪುಣ್ಯಪುರುಷರ ಚರಿತ್ರೆ ಎಂಬುದನ್ನು ಸ್ಪಷ್ಟಮಾಡಿ ತೋರಿದನು. ದೇವರಾಯನು ಚಾಮರಸನ ಶಿಷ್ಯನಾಗಿ ವೀರಶೈವದೀಕ್ಷೆ ಹೊಂದಿ ಮೋಕ್ಷಮಾರ್ಗ ಹಿಡಿದನು. ಚಾಮರಸನಿಗೆ ಉಂಬಳಿಯನ್ನು ಸಲ್ಲಿಸುತ್ತ ಸುಖದಲ್ಲಿದ್ದನು.

ಚಾಮರಸು ಬಹುಕಾಲಬಾಳಿ, ಆಕಾಂಕ್ಷಿಗಳಾಗಿ ಬಂದ ಅನ್ಯರಿಗೆ ಮೋಕ್ಷಮಾರ್ಗವನ್ನು ತಿಳಿಸುತ್ತ ಮಹಾಲಿಂಗದಲ್ಲಿ ಬೆರೆದು ಬೆಳಗಿನೊಳಗೆ ಬೆಳಗಾದನು.

ಚೋರಬಸವೇಶ್ವರ ಕಾವ್ಯ ಪರಮಸತ್ಪುರುಷರ ಕಾವ್ಯ. ಈ ಚೋರಬಸವೇಶ್ವರನ ಮಹಿಮೆಯನ್ನು ಕೇಳಿದವರಿಗೆ ಸಕಲಸೌಭಾಗ್ಯ ಪ್ರಾಪ್ತವಾಗುವುದು. ಈ ಕಾವ್ಯವನ್ನು ಓದಿ ಕೇಳಿ ಹೇಳುವ ಸುಜನರುಗಳಿಗೆ ಕೋಳೂರ ರಾಮೇಶ್ವರನು ಆಯುರಾರೋಗ್ಯ ಸಂತೋಷ ಸೌಭಾಗ್ಯಗಳನ್ನಿತ್ತು ಸಲಹುವನು. ಏನುಪೇಳಿದ ಮೂಢ ಕವಿತೆಯ ಸುಲಕ್ಷಣವಿಹೀನ ಎನ್ನುತ ಜರಿಯಲಿಬೇಡಿ. ಸರ್ವರನ್ನು ರಕ್ಷಿಸುವ ನಂಜುಂಡನ ದಿವ್ಯ ನಾಮವೇ ನಿಜವಾದ ಸುಲಕ್ಷಣ, ಆದ್ದರಿಂದ ತನ್ನದು ಶಿವಕಾವ್ಯವೆಂದು ಸ್ವೀಕರಿಸಲು ಕಾವ್ಯರಸಿಕರಿಗೆ ಬಿನ್ನವಿಸಿಕೊಳ್ಳುತ್ತಾನೆ. ತನ್ನ ದೀಕ್ಷಾಗುರುವಾದ ಗುರುಬಸವರ ಅಡಿಗೆ ಶರಣೆನ್ನುತ್ತಾನೆ. ಚರಚಕ್ರವರ್ತಿಯೆನಿಸಿದ ಕರಿಬಸವನಿಜಯೋಗೀಂದ್ರರ ಅಡಿದಾವರೆಗೆ ನಮಿಸುತ್ತಾನೆ. ಕಾವ್ಯಾಂತ್ಯದಲ್ಲಿ ಬಸವಾದಿ ಶರಣರನ್ನು ಸ್ಮರಿಸುತ್ತಾನೆ. ಕೊನೆಗೆ ಕೋಳೂರ ರಾಮೇಶ್ವರನಿಗೆ ನಮಿಸಿ ಕಾವ್ಯವನ್ನು ಮುಕ್ತಾಯಗೊಳಿಸುವ ಮುನ್ನ

[illegible]

[illegible]

[illegible]

ಕೃತಿರಚನಾ ಕಾಲವನ್ನು ತಿಳಿಸುತ್ತಾನೆ. ಶಾಲಿವಾಹನ ಶಕ ೧೬೮೫ನೆಯ ಸ್ವಭಾನು ಸಂವತ್ಸರದ ಕಾರ್ತೀಕ ಬಹುಳ ಪಾಡ್ಯ ಬುಧವಾರ ರೋಹಿಣಿ ನಕ್ಷತ್ರದಲ್ಲಿ ಈ ಕಾವ್ಯರಚನೆ ಸಂಪೂರ್ಣವಾಯಿತು. ಎಂದು ತಿಳಿಸುತ್ತಾನೆ.

೫.೩. ಕೃತಿ ವಿಮರ್ಶೆ

'ಚೋರಬಸವೇಶ್ವರ ಕಾವ್ಯ'ವು ಬಸವಣ್ಣನವರ ಜೀವನಚರಿತೆಯನ್ನು ವಸ್ತುವಾಗಿರಿಸಿಕೊಂಡಕಾವ್ಯ ಹೇಳುವ ರೀತಿಯಲ್ಲಿ ಇದುವರೆಗೆ ಬಂದ ಎಲ್ಲ ಕೃತಿಗಳಿಗಿಂತ ಭಿನ್ನವಾಗಿ ನಿಲ್ಲುವ ಕೃತಿ. ಸಮಾಜಸೇವೆಯೇ ಶಿವನ ನಿಜವಾದ ಆರಾಧನೆ ಎಂದು ಭಾವಿಸಿದ್ದ ಬಸವಣ್ಣನು ಜಂಗಮಪ್ರಾಣಿ, ಆತನ ಜೀವ ಜಂಗಮವಾಗಿದ್ದ ಅನ್ಯಾದೃಶ ವ್ಯಕ್ತಿತ್ವವನ್ನು ಸಾರಲು ಶಂಕರಕವಿಯು. 'ಜಂಗಮಚೋರ'ನೆಂದು ಬಸವಣ್ಣನನ್ನು ಕಲ್ಪಿಸುವ ಮೂಲಕ ಈ ಕಾವ್ಯದಲ್ಲಿ ವ್ಯಕ್ತಿತ್ವ ವಿಶೇಷತೆಯ ಅನಾವರಣ ಮಾಡಿದ್ದಾನೆ. ಕನ್ನಡದಲ್ಲಿ ಜನಜನಿತವಾದ ಕುಮಾರವ್ಯಾಸ ಚಾಮರಸರಿಗೆ ಸಂಬಂಧಿಸಿದ ದಂತ ಕಥೆಯನ್ನೇ ಮೂಲವಾಗಿಟ್ಟುಕೊಂಡು ಶಂಕರಕವಿಯು ಬಸವಣ್ಣನವರ ಚರಿತೆಯನ್ನು ಹಾಡಿದ್ದಾನೆ.

ಶಿವಕವಿಗಳಾದ ಕಾಳಿದಾಸ, ಬಾಣ, ಮಯೂರ, ಭೋಜ ಪಾಲ್ಕುರಿಕೆ ಸೋಮನಾಥ, ಹರೀಶ್ವರ, ರಾಘವಾಂಕ, ಕೆರೆಯ ಪದ್ಮರಸ ಚಾಮರಸ ಮೊದಲಾದವರನ್ನು ಸ್ಮರಿಸುತ್ತಾನೆ. ಅವರಕಾವ್ಯಶಕ್ತಿ ತನ್ನದಾಗಲೆಂದು ಬೇಡಿಕೊಂಡಿರುವ ಶಂಕರಕವಿಗೆ ಹರೀಶ್ವರನೇ 'ಕವಿಕುಲಗುರು' ಎಂಬ ಅಚಲವಾದ ನಂಬಿಕೆ, ಅಂತೆಯೇ ಈ ಕಾವ್ಯದುದ್ದಕ್ಕೂ ಹರಿಹರ ಕವಿಯ ಗಾಢವಾದ ಪ್ರಭಾವ ಎದ್ದು ಕಾಣುತ್ತದೆ. ಕಥಾನಾಯಕ ಬಸವಣ್ಣನ ವ್ಯಕ್ತಿತ್ವ ಹಾಗೂ ಶಿವಕವಿಚಾಮರಸನ ವ್ಯಕ್ತಿತ್ವದ ವರ್ಣನೆಗಳ ಸುಂದರ ಸಮ್ಮಿಲನ ಈ ಕಾವ್ಯದ ವಿಶೇಷತೆ. ಬಸವಣ್ಣನವರ ವ್ಯಕ್ತಿತ್ವದ ತೇಜಸ್ಸನ್ನು ಪ್ರಖರಗೊಳಿಸಲೆಂದು ಚಿತ್ರಣಗೊಂಡಿರುವ ಉಪಕಥೆಗಳಿಂದಾಗಿ ಈ ಕಾವ್ಯವು ಉತ್ತಮ ಪುರಾಣಕಾವ್ಯಗಳ ಸಾಲಿಗೆ ಸೇರುತ್ತದೆ. ಕಾವ್ಯ ಮತ್ತು ತತ್ತ್ವಗಳ ಸಂಗಮವಾಗಿರುವ ಚೋರಬಸವೇಶ್ವರ ಕಾವ್ಯವು ಹಲವು ವೈಶಿಷ್ಟ್ಯಗಳನ್ನು ತನ್ನೊಡಲಲ್ಲಿ ಗರ್ಭೀಕರಿಸಿಕೊಂಡಿದೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಸಾಮಾಜಿಕ ಅಂಶಗಳು : ಕವಿ ಸಮಾಜದ ಅವಿಭಾಜ್ಯ ಅಂಗ, ಆತನ ಸೃಷ್ಟಿಯಾದ 'ಸಾಹಿತ್ಯವು ಸಮಾಜದ ಕೈಗನ್ನಡಿ' ಎಂದೇ ಭಾವಿಸಲ್ಪಟ್ಟಿದೆ. ಹೀಗಾಗಿ ಸಾಮಾಜಿಕ ಪ್ರಜ್ಞೆಯುಳ್ಳ ಕೃತಿ ಹೆಚ್ಚು ಬೆಲೆಯುಳ್ಳದ್ದಾಗುತ್ತದೆ. ಶಂಕರಕವಿಯು ಚೋರಬಸವೇಶ್ವರ ಕಾವ್ಯವು ೧೨ನೆಯ ಶತಮಾನದ ಸಮಗ್ರಕ್ರಾಂತಿಯ ನೇತಾರ 'ಬಸವಣ್ಣ'ನನ್ನು ಕುರಿತಕಾವ್ಯ. ಬಸವಣ್ಣನ ನೇತೃತ್ವದಲ್ಲಿ ಉಂಟಾದ ಸಾಮಾಜಿಕ ಕ್ರಾಂತಿಯಂತೂ ಇಂದಿಗೂ ಬೆರಗು ಹುಟ್ಟಿಸುವಂಥದು. ಅಂತೆಯೇ ಪ್ರಸ್ತುತಕೃತಿಯಲ್ಲಿ ಸಾಮಾಜಿಕ ಮೌಲ್ಯಗಳಿಗೆ ಸಂಬಂಧಪಟ್ಟ ಅಂಶಗಳು ಅಲ್ಲಲ್ಲಿ ಕಾಣಸಿಗುತ್ತವೆ. ಪುರಾಣ ಕಾವ್ಯದ ಇತಿ-ಮಿತಿಗಳ ಹಿನ್ನೆಲೆಯಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

೧. ಕುಲ : ಮೇಲು ಕೀಳೆಂಬ ಜಾತಿಭೇದ ಸಮಾಜವನ್ನು ವ್ಯವಸ್ಥಿತವಾಗಿ ಒಡೆದು ಆಳುತ್ತಿದ್ದ ಕಾಲವದು. ಎಲ್ಲ ಭೇದಗಳನ್ನು ಇಲ್ಲವಾಗಿಸಿ ಸಮಾನತೆಯಭಾವ ಬಿತ್ತಲೆತ್ನಿಸಿದ ಮಹಾಮಾನವತಾವಾದಿ ಬಸವಣ್ಣ ಕುಲಸಂಬಂಧವಾದ ಆತನ ವ್ಯಾಖ್ಯಾನವನ್ನು ಶಂಕರಕವಿಯು ಈರೀತಿ ಕಂಡರಿಸಿದ್ದಾನೆ.

ನಿಂಬದೇವಿ ಎಂಬ ಬೆಲೆವೆಣ್ಣು ಬ್ರಾಹ್ಮಣರ ಕೇರಿಯಲ್ಲಿ ಬರುತ್ತಿದ್ದ ಸಂದರ್ಭ, ಎಂತಹ ತಪ್ಪಿಗೂ ಪ್ರಾಯಶ್ಚಿತ್ತವಿದೆ ಎಂದು ಬ್ರಾಹ್ಮಣರು ಓದುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಾಳೆ.

"................... ಲೈಂಗ್ಯಮಂ
ವೊಲಿಸಿಗುರುಲಿಂಗಮಂ ಪಡೆದು
ಪಲ ತೆರದ ಕುಲದೊಳಾರಾದೊಡಂ ಪೂರ್ವಾಘ
ಗಳ ನೀಗೆ ದುರ್ಬಾಧೆಯಿಂದ ಚರಿಪರು ಅಂತ್ಯದಲಿ ಶಿವನ ಪದವಡೆವರು" (೫-೨೮)

ಗುರುವನ್ನು ಒಲಿಸಿಕೊಂಡು ಲಿಂಗವನ್ನು ಪಡೆದು ಪೂಜಿಸಿದರೆ ಯಾವ ಕುಲದವರಾದರೂ ತಮ್ಮ ಪೂರ್ವದ ಪಾಪಗಳನ್ನು ನೀಗಿಕೊಂಡು ಶಿವಪದವನ್ನು ಪಡೆಯುವುದು ನಿಶ್ಚಿತ ಎಂಬುದನ್ನರಿತುಕೊಂಡು ಭವಿತನಕ್ಕೆ ಹೇಸಿ, ಭಕ್ತಿ ಪಲ್ಲವಿಸಿ.... 'ಲಿಂಗಧರಿಸದೆವುಣಲ್ಕಾಗದೆಂದು' (೫-೨೯) ಮಿಂಡನಾಗಯ್ಯ'ನೆಂಬ ವಿಟಜಂಗಮ ನಲ್ಲಿ 'ಲಿಂಗವಧರಿಸಿರೆಂದು' ಬೇಡುತ್ತಾಳೆ. ಆತ ನೀಡಿದ 'ನಿಂಬೆಹಣ್ಣ'ನ್ನೇ 'ಶಿವಲಿಂಗ'ವೆಂದರಿದು ಭಕ್ತಿಯಿಂದ ಪೂಜಿಸುತ್ತಾಳೆ, ಭಜಿಸುತ್ತಾಳೆ, ಭವಿಗಳ ಸಂಪರ್ಕವನ್ನು ತೊರೆಯುತ್ತಾಳೆ. ಇದನ್ನು ಕೇಳಿದ ಅರಸ ಬಿಜ್ಜಳನು ಬಸವಣ್ಣನನ್ನು ಕುರಿತು 'ಸೂಳೆಯರಲ್ಲಿ ಶಿವಭಕ್ತಿಪೊಸಪರಿಯಿದೇನೆಂದು' ಕೇಳುತ್ತಾನೆ. ಆಗ ಬಸವಣ್ಣನು

"............... ಚತುರ್ವಿಧಮಷ್ಟ
ದಶಜಾತಿ ನೂರೊಂದು ಕುಲದೊಳಾರಾದೊಡಂ ಶಿವಪೂಜೆ ಮಾಡಲವರೆ
ವಸುಧೆಗತ್ಯುತ್ತಮರು........(೫-೩೧) ಎಂದು ಹೇಳುತ್ತಾನೆ.

ವೇಶ್ಯೆಯಾದರೂ ಕಾಯಕನಿಷ್ಠೆಯಿಂದ ಲಿಂಗಪೂಜಾನಿಷ್ಠೆಯಿಂದ ಅತ್ಯುತ್ತಮಳಾಗಬಲ್ಲಳು ಎಂಬಲ್ಲಿ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟ, ತಿರಸ್ಕೃತವರ್ಗದ ವೇಶ್ಯೆಗೂ ಕೂಡ ಸಮಾಜದ ಶ್ರೇಷ್ಠ ಶರಣ ಶಿವಭಕ್ತರ ವಾಹಿನಿಯಲ್ಲಿ ಸ್ಥಾನ ಕಲ್ಪಿಸಿರುವುದು ವಿಶೇಷವಾಗಿದೆ. ಭಕ್ತರಿಗೆ ಕುಲದ ಕಾಯಕದ ಹಂಗಿಲ್ಲವೆಂಬುದು ಶರಣರ ನಿಲುವು.

೨. ಪರಧನ ಪರವಧು : ಶಿವಭಕ್ತನಾದವನು ಪರಧನ ಪರವಧುವಿನ ಮೇಲಣ ಆಶೆಯನ್ನು ಬಿಡಬೇಕು. ಆಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣಸಾಧ್ಯವಾಗುತ್ತದೆ. ಬದುಕಿಗೆ ಹಣ ಅಗತ್ಯ ಆದರೆ ಸ್ವಯಾರ್ಜಿತ ವಾದುದನ್ನು ಹೊರತುಪಡಿಸಿದ ಪರರಹಣಕ್ಕೆ ಆಶಿಸುವವನು ಭಕ್ತನಾಗಲಾರ, ಭವಿಯಾಗುತ್ತಾನೆ. ಇದು

ಶರಣ ಸಿದ್ಧಾಂತಕ್ಕೆ ವಿರುದ್ಧ ಹಾಗೆಯೇ ಸ್ವಸ್ತ್ರೀಯನ್ನುಳಿದು ಪರಸ್ತ್ರೀಯರಿಗಾಶಿಸುವುದೂ ಕೂಡ ಅನಾರೋಗ್ಯ ಕರವೆಂದು ಶರಣರು ಸಾರುತ್ತಾರೆ. ಸ್ವಸ್ಥಸಮಾಜಕ್ಕೆ ಪರವಧುವಿನ ಮೇಲಣ ಆಶೆಸಲ್ಲದೆಂಬುದು ಶರಣರ ಅಭಿಮತ.

ಚೋರಬಸವೇಶ್ವರ ಕಾವ್ಯದಲ್ಲಿ ವೀರಶೈವದೀಕ್ಷೆಪಡೆಯಲು ಅರ್ಹತೆಗಳೇನೆಂಬುದನ್ನು ತಿಳಿಸುವ ಸಂದರ್ಭ ಬರುತ್ತದೆ. ಆಗ ಉದ್ಧಾನವೀರದೇಶಿಕನು ಚಾಮರಸನಿಗೆ ಹೀಗೆ ಹೇಳುತ್ತಾನೆ. ''ಎಳಸದಿರಬೇಕನ್ಯ ಧನವನನ್ಯ ವನಿತನ್ಯಭೂಮಿದುಷ್ಕಾಮ್ಯನಾಗಿ'' (೧೨-೧೬) ಅನ್ಯರ ವಧು ಅನ್ಯರ ಧನ, ಅನ್ಯರ ಭೂಮಿಗಾಗಿ ಸಾಯದೆ ನಿಷ್ಕಾಮವಂತ ಕಾಯಕಯೋಗಿಯಾರಬೇಕು ಎಂಬರ್ಥದಲ್ಲಿ ಮುಂದುವರಿಯುತ್ತದೆ.

೩. **ಏಕದೈವೋಪಾಸನೆ :** ಶರಣರು ಪ್ರತಿಪಾದಿಸಿದ ಸಮಾಜೋ ಧಾರ್ಮಿಕ ಮೌಲ್ಯಗಳಲ್ಲಿ ಇದೂ ಒಂದು ಮಾನವಧರ್ಮನಿಷ್ಠ ಸಮಾಜ, ಏಕದೈವ ನಿಷ್ಠ ಸಮಾಜ ಶರಣರ ಹಂಬಲವಾಗಿದ್ದಿತು. ನಿಷ್ಠೆಯಿಲ್ಲದೆ ಹಲವು ದೇವರನ್ನು ಪೂಜಿಸುವ ವ್ಯರ್ಥಕೆಲಸ ಸಲ್ಲದು. ಏಕದೈವೋಪಾಸನೆಯೊಂದೇ ಭಗವಂತನನ್ನು ಒಲಿಸಿಕೊಳ್ಳಲು ರಹದಾರಿ ಎಂದು ಬಲವಾಗಿ ಪ್ರತಿಪಾದಿಸಿದರು. ಶಿವಭಕ್ತರಾದವರು, ಲಿಂಗದೀಕ್ಷೆ ಪಡೆಯ ಬಯಸುವವರು,

''ಇಳೆಯೊಳಿಹ ಬಹುಪುಣ್ಯ ಕ್ಷೇತ್ರಯಾತ್ರೆಗಳನ್ನು
ಬಳಸಲಾಗದು ಗ್ರಹಣಸಂಕ್ರಮಣ ಶಿವರಾತ್ರೆ
ಗಳ ಪುಣ್ಯತಿಥಿಯ ಪರ್ವಣಿಯೆಂದು ಯೆರಗಲಾಗದು ಹಲವು ಕರ್ಮಗಳಿಗೆ'' (೧೨-೧೬)

ಮಲತ್ರಯಗಳನ್ನು ಬಿಡಬೇಕು. ಅರಿಷಡ್ವರ್ಗ, ಸಪ್ತವ್ಯಸನಗಳನ್ನು ಬಿಡಬೇಕು. ಅಷ್ಟಮದದಶ ವಿಕಾರ ಗಳನ್ನು ಕಡಿದುಕೊಳ್ಳಬೇಕು. ಮಯಾಪಾಶಗಳನ್ನು ಸಡಲಿಸಬೇಕು ಎಂಬಿತ್ಯಾದಿಯಾಗಿ ಉದ್ಧಾನವೀರದೇಶಿಕನು, 'ಚಾಮರಸ'ನಿಗೆ ಶಿವಭಕ್ತನ ಆಚಾರ ಸಂಹಿತೆಯನ್ನು ತಿಳಿಸುತ್ತಾನೆ. ಇಲ್ಲಿ ಉಕ್ತವಾದ 'ಆಚಾರ ಸಂಹಿತೆ'ಯು ಸಮಾಜಸಂಹಿತೆಯಾಗಬೇಕೆಂಬ ಹಂಬಲವನ್ನು ಗುರುತಿಸುತ್ತೇವೆ.

೪. **ತಾತ್ತ್ವಿಕ ವಿವೇಚನೆ :** ಶಂಕರ ಕವಿ ಮೂಲತಃ ವೀರಶೈವಧರ್ಮದ ಅನುಯಾಯಿ, ವೀರಶೈವಧರ್ಮ ಸಾಮ್ರಾಜ್ಯದ ಅನಭಿಷಿಕ್ತದೊರೆಯಂತೆ ಮೆರೆದ ಬಸವಣ್ಣನನ್ನು ಕುರಿತು ಹಾಡಿರುವ ಕಾವ್ಯ ಚೋರಬಸವೇಶ್ವರ ಕಾವ್ಯ. ಆದ್ದರಿಂದ ವೀರಶೈವ ತತ್ವಚಿಂತನೆ ಈ ಕೃತಿಯಲ್ಲಿ ಸಹಜವಾಗಿಯೇ ಎಡೆ ಪಡೆದಿರುವುದನ್ನು ಕಾಣುತ್ತೇವೆ.

''ಬಸವಪುರಾಣದ ಕಾವ್ಯಗಳು ಬಸವಣ್ಣನವರ ಅಲೌಕಿಕ ವ್ಯಕ್ತಿತ್ವವನ್ನು ಅತ್ಯಂತ ಪ್ರಭಾವಿಯಾಗಿ ಚಿತ್ರಿಸ ಬೇಕೆಂಬ ಉದ್ದೇಶದಿಂದ ಹೊರಟವುಗಳಾದ್ದರಿಂದ ಇವುಗಳ ಹಿನ್ನೆಲೆಯಲ್ಲಿ ಅವತಾರದ ಕಲ್ಪನೆ'' ಅದ್ಭುತ ಪವಾಡಗಳು ಮತ್ತು ಧಾರ್ಮಿಕ ತಾತ್ವಿಕ ಚಿಂತನೆಗಳು ಪ್ರಮುಖ ಪಾತ್ರವಹಿಸಿರುವುದು ಕಂಡು ಬರುತ್ತದೆ.[೧]

ಚೋರಬಸವೇಶ್ವರ ಕಾವ್ಯದಲ್ಲಿ ಉದ್ವಾನ ವೀರದೇಶಿಕನು ಚಾಮರಸನಿಗೆ ವೀರಶೈವದೀಕ್ಷೆಯನ್ನು ನೀಡುವ ಸಂದರ್ಭದಲ್ಲಿ ವಿವರವಾದ ತಾತ್ವಿಕ ವಿವೇಚನೆ ಕಂಡುಬರುತ್ತದೆ.

ಉದಾಹರಣೆಗೆ ಶಿಷ್ಯನಿಗೆ ದೀಕ್ಷಾಪೂರ್ವದಲ್ಲಿ ಮಾಡುವ ಬೋಧೆ ದೀಕ್ಷಾ ಸಂಸ್ಕಾರಗಳು, ದೀಕ್ಷೆಯನ್ನು ಪಡೆಯುವವನು ಪಾಲಿಸಬೇಕಾದ ಸದಾಚಾರಗಳು ಇತ್ಯಾದಿ.

''ಆರು ಅಂಗದ ಗುಣವನತಿಗಳೆವ ಬಗೆಯವಿ
ಸ್ತಾರದಿಂ ಕೇಳು ಪೇಳುವೆ ಮಗನೆ ಮೊದಲೆಯಾ
ಧಾರ ಸ್ವಾಧಿಷ್ಠಾನಮಣಿ ಪೂರಕ ನಹತ ವಿಶುದ್ಧಾಜ್ಞೆಯೆಂದೆಂಬುವ
ಆರು ಚಕ್ರದಿಭಕ್ತ ಮಾಹೆಶಸು ಪ್ರಾಸಾದಿ
ಸಾರ ಸತ್ಪ್ರಾಣಲಿಂಗಿಯು ಶರಣ ಐಕ್ಯರೆಂ
ಬಾರು ಸ್ಥಾನಗಳಲ್ಲಿ ನೆಲೆಗೊಳಿಸೆಪೂರ್ವಾಂಗವಳಿವುದೆಲೆ ಮಗನೆ ಕೇಳ'' (೧೨-೨೨)

ಷಡ್ವಿಧಲಿಂಗಗಳನ್ನು ಮೂರು ಲಿಂಗಗಳಲ್ಲಿ ನೆಲೆಗೊಳಿಸುವ ವಿವರ ತ್ರಿವಿಧ ಪ್ರಸಾದಗಳ ಭೇದ ಇತ್ಯಾದಿ ಗಳನ್ನು ತಿಳಿಸುತ್ತಾ

''ಇಂತಿಷ್ಟ ಗುರುವಿಂಗೆ ತನುವನು ಸಮರ್ಪಿಸುತ
ಇಂತಿಷ್ಟಲಿಂಗಕ್ಕೆ ಮನವನೊಲಿದೀವುತ್ತ
ಇಂತಿಷ್ಟ ಜಂಗಮಕೆ ಧನವಿತ್ತು
.............ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ
ಸಂತಸದಿ ಸೇವಿಸಿ ಸತ್ಪ್ರಾಣಲಿಂಗದ ಕಳೆಯ
ತಾಂ ತಂದು ಇಷ್ಟಲಿಂಗದಿ ತುಂಬಿ ಸದ್ಭಾವ
ವಾಂತು ಹಸ್ತಾಬ್ಜದೊಳಗಿಟ್ಟು ಭಜಿಸುವರ ಸದ್ಘನವನುಪಮಿಸಲಿಬಹುದೆ'' (೧೨-೪೨)

ಎಂದು ಸದ್ಭಕ್ತನ ನಿಲುವನ್ನು ಉಪದೇಶಿಸುತ್ತಾರೆ.

೫. ಮತಾಂತರ : ಅಂದು ಧಾರ್ಮಿಕರಂಗವು ತುಂಬ ಸಂಕೀರ್ಣತೆಗೆ ಒಳಗಾಗಿತ್ತು. ಹಲವಾರು ಪಂಥಗಳು ಪರಸ್ಪರ ಪೈಪೋಟಿಗಿಳಿದುದರ ಕಾರಣವಾಗಿ ಸಾಮಾನ್ಯಜನರು ಧರ್ಮದ ಕುರಿತಾಗಿ ಒಂದು ಬಗೆಯ ಗೊಂದಲ ದಲ್ಲಿ ಸಿಲುಕಿಕೊಂಡಿದ್ದರು. ''ಒಂದು ಕಡೆಗೆ ಸಂಪ್ರದಾಯದ ಕರ್ಮಕಾಂಡದ ಅತಿರೇಕ. ಇನ್ನೊಂದೆಡೆಗೆ ಅಂಧಶ್ರದ್ಧೆ, ಅಜ್ಞಾನಗಳ ಪ್ರಾಬಲ್ಯ, ಮಗುದೊಂದೆಡೆಗೆ ಐಹಿಕಬಾಳಿನ ಬಗೆಗೆ ನಿರುತ್ಸಾಹವನ್ನುಂಟು ಮಾಡುವ ಕಠೋರ ಆಚಾರಗಳ ಸನ್ಯಾಸಧರ್ಮ ಮತ್ತು ಜೈನ ಮತಗಳು''[೨]

ಇಂಥ ಸಮಯದಲ್ಲಿ ಬಸವಣ್ಣನವರು ವೈಚಾರಿಕ ಕ್ರಾಂತಿಯನ್ನುಂಟುಮಾಡುವ ಪ್ರಯತ್ನದಲ್ಲಿ ನಿರತರಾದರು. ಪರಮತೀಯರನ್ನೂ ವೀರಶೈವ ಧರ್ಮವನ್ನನುಸರಿಸುವಂತೆ ಪ್ರೇರೇಪಿಸಿದರು. ಶಂಕರಕವಿಯು

ತನ್ನ ಚೋರಬಸವೇಶ್ವರ ಕಾವ್ಯದಲ್ಲಿ ಬಸವಣ್ಣನು ಪರಮತೀಯರನ್ನು ತನ್ನ ಬೌದ್ಧಿಕ, ವೈಚಾರಿಕ ಸಾಮರ್ಥ್ಯ ದಿಂದ ಗೆದ್ದ ಸಂಗತಿಯನ್ನು ತಿಳಿಸುತ್ತಾನೆ. ಅಂಥ ಒಂದು ಪ್ರಸಂಗ ಹೀಗಿದೆ.

ಮಾಯದ ಲಿಪಿಯನ್ನು ಓದಲು ಶಕ್ತರಾಗದೆ ಜೈನಪಂಡಿತರು ಬಸವೇಶ್ವರನನ್ನು ಹೀಗೆ ವಿನಂತಿಸಿಕೊಳ್ಳು ತ್ತಾರೆ. ಪರಿಪರಿಯ ಲಿಪಿಯೊಳಗೆ ಹುಡುಕಿ ಬೇಸತ್ತು ನೃಪನಾಜ್ಞೆಗೊಳಗಾಗಿದ್ದೇವೆ. ಪರಿಹರಿಸಿ ಕಾಯಬೇಕೆಂದು ದೈನ್ಯಬಡುತ್ತಾರೆ.

> ''ಓದಿ ನಿಮ್ಮಯ ಬಾಧೆ ಬಿಡುಸುವೆನು.
> ....ನಮ್ಮಯಾಚರಣೆ ಪಿಡಿದೊಡೆ'' (೩-೩೫)

ಎಂದು ಷರತ್ತು ವಿಧಿಸುತ್ತಾನೆ ಬಸವಣ್ಣ ಲಿಪಿಯನ್ನು ಓದಿ, ಗುಪ್ತಧನವನ್ನು ತೆಗೆಸಿ ಅರಸನಿಗೆ ಕೊಡಲು ಸರ್ವರೂಬೆರಗಾಗುತ್ತಾರೆ. ಕವಿಯೇ ಹೇಳಿರುವಂತೆ

> ''ಅಕ್ಷರದಿ ಸೋತು ಮರೆಬಿದ್ದ ಜೈನರ ಕುಲವ
> ಆಕ್ಷಣದಿ ವೀರಶೈವವ ತುಂಬಿ ಗುರುಮುಖದಿ
> ದೀಕ್ಷೆಯಿಂ ಯಿಷ್ಟಲಿಂಗಾಂಕಿತರ ಮಾಡಿ ಶಿವಭಕ್ತರೊಳು'' (೩-೪೨)

ಬೆರಸುತ್ತಾನೆ. ಹೀಗೆ ಅಂದು ಪರಮತೀಯರನ್ನು ವೀರಶೈವಧರ್ಮಕ್ಕೆ ಸೇರ್ಪಡೆಮಾಡಿಕೊಳ್ಳುವ ಮತಾಂತರ ಪ್ರಕ್ರಿಯೆ ನಡೆಯುತ್ತಿತ್ತೆಂಬುದು ತಿಳಿದು ಬರುತ್ತದೆ.

೬. ವರ್ಣನೆಗಳು : ''ವರ್ಣನಾನಿಪುಣಃ ಕವಿಃ'' ಎಂಬುದೊಂದು ಸಂಸ್ಕೃತೋಕ್ತಿ ಕವಿಯಾದವನು ವರ್ಣಿಸುವುದರಲ್ಲಿ ನಿಪುಣ. ಅದೇ ಅವನ ಕಾರ್ಯ. ''ಕವಿಯ ಪ್ರತಿಭೆ, ಪಾಂಡಿತ್ಯ, ವಿದ್ವತ್ತು, ಕಲ್ಪನಾವಿಲಾಸ ಭಾಷಾಪ್ರಭುತ್ವಗಳನ್ನು ಪ್ರಕಟಪಡಿಸಲು ವರ್ಣನೆಗಳು ಪ್ರಮುಖ ಸಾಧನಗಳೆನಿಸಿವೆ. ಆದರೆ ಆ ವರ್ಣನೆಗಳು ಕಾವ್ಯಕ್ಕೆ ಚ್ಯುತಿಬಾರದ ಹಾಗೆ ಸಂದರ್ಭಾನುಸಾರ ಔಚಿತ್ಯವರಿತು ಬಂದರೆ ಅಭ್ಯಂತರವಿಲ್ಲ ಪ್ರಾಚೀನ ಕಾಲ ದಿಂದಲೂ ಅಷ್ಟಾದಶವರ್ಣನೆಗಳನ್ನು ಕಾವ್ಯದುದ್ದಕ್ಕೂ ನಮ್ಮ ಕವಿಗಳು ಬಳಸುತ್ತ ಬಂದಿದ್ದಾರೆ. ಚಂಪೂ ಕಾವ್ಯಗಳಲ್ಲಂತೂ ಅಷ್ಟಾದಶವರ್ಣನೆಗಳು ಅನಿವಾರ್ಯವೆಂಬಂತೆ ಬಂದಿವೆ. ಹೀಗಾಗಿ ಆ ರೂಪದ ಲಕ್ಷಣ ಗಳಲ್ಲಿ ಅದು ಒಂದಾಗಿ ಪರಿಣಮಿಸಿದೆ. ಆದರೆ ಮುಂದೆ ಬಂದರಗಳೆ, ಷಟ್ಪದಿ, ಸಾಂಗತ್ಯ ಮೊದಲಾದ ವರ್ಣಕ ಕಾವ್ಯಗಳಲ್ಲಿ ಇದರ ಬಳಕೆ ಕಡ್ಡಾಯವೆನಿಸಿಲ್ಲ.''[೩]

ಸಂದರ್ಭಕ್ಕೆ ಬಂದವರ್ಣನೆ ಸಕಾಲಕ್ಕೆ ಒದಗಿದ ಮಳೆಯಂತೆ ಮನೋಹರವಾಗಿರುತ್ತದೆ.[೪] ಶಂಕರಕವಿಯು ಈ ಮಾತನ್ನು ಅರಿತು ಆಚರಿಸಿದ್ದಾನೆ. ಉದಾಹರಣೆಗೆ ಬಸವಚರಿತೆಯ ಪೂರ್ವ ಪೀಠಿಕೆ ಎನ್ನುವಂತೆ ಬರುವ ತುಂಗಭದ್ರೆಯ ವರ್ಣನೆ ಕನ್ನಡನಾಡ ಪ್ರೇಮವನ್ನು ಉಕ್ಕಿಸುವಂತೆ ಬರುತ್ತದೆ. ತುಂಗಭದ್ರಾ ತೀರದಲ್ಲಿರುವ

ಹಂಪೆ. ಅದರ ಸುತ್ತಮುತ್ತಲಿರುವ ವನಶ್ರೀ ಪಶುಪಕ್ಷಿಗಳ ಕಿಲಕಿಲನಿನಾದ ಒಟ್ಟುಗೂಡಿ ವಿರೂಪಾಕ್ಷನ ಸಾನ್ನಿಧ್ಯ ಮಂಗಲಮಯವೆನ್ನುವ ಕಲ್ಪನೆಗೆ ಅವಕಾಶ ನೀಡುವಂತಾಗಿದೆ. ಕೆಲವೊಂದನ್ನು ಇಲ್ಲಿ ಗಮನಿಸ ಬಹುದು.

ಭೋರ್ಗರೆದು ಹರಿಯುತ್ತಿರುವ ತುಂಗಭದ್ರಾನದಿಯ ವರ್ಣನೆ ಹೀಗಿದೆ.

''ಸಸಿನೆ ಕಂಡಡೆಯು ಸೋಂಕಿದಡೆ ಸ್ನಾನಮಾಡೆ
ವೊಸೆದು ಪಾನಂಗೈಯ್ಯ ದುರ್ಘಟದ ಬ್ರಹ್ಮೇತಿ
ವಿಸರ ಮೊಸರುತ್ತಿಹುದು ಭಕ್ತಿ ಮುಕ್ತೀಷ್ಟಾರ್ಥವಹುದುಮದಸಾರಿದರ್ಗೆ'' (೧-೧೬)

ತುಂಗೆಯನ್ನು ಕಂಡರೇನೆ ಪುಣ್ಯ ಸ್ಪರ್ಶಿಸಿದರೆ ಮಹಾಪುಣ್ಯ, ಅದರಲ್ಲಿ ಸ್ನಾನಮಾಡಿ ಪಾನಗೈದವರಿಗೆ ಪಾವನತೆ ಪ್ರಾಪ್ತವಾಗುತ್ತದೆ. ಮಾತ್ರವಲ್ಲ, ಪಾಪಿಗಳ ಪಾಪವನ್ನು ತೊಳೆಯುವ ಮಹಾಶಕ್ತಿ ತುಂಗಭದ್ರೆಯಲ್ಲಿದೆ ಎಂದು ಭಕ್ತಿಪೂರ್ವಕವಾಗಿ ವರ್ಣಿಸಿದ್ದಾನೆ.

ತುಂಗಭದ್ರಾತೀರದ ವನಸಿರಿಯೊಳಗಣ ಪಶುಪಕ್ಷಿಗಳ ಕಿಲಕಿಲ ನಿನಾದದ ವರ್ಣನೆ ಹೀಗೆ ಬರುತ್ತದೆ.

ವರಹಂಸ ಷಟ್ಚರಣ ಕೇಕಿ ಕೋಕಿಲ ಶುಕಂ
ಸರಸಿಯೊಳು ಕ್ರೀಡಿಸುತ ಮರಿಗಳಿಗೆ ನಳಿನ ಕೇ
ಸರಗಡಿದು ಗುಟುಕಿಟ್ಟುಯೆರಗಿ ಬಂಡುಂಡು ಝೇಂಕರಿಸುತ್ತ ..... (೧-೧೮)

ಎಂಬಲ್ಲಿ ಕಾಣುವ ಸರಸಮಯವಾದ ಪ್ರಕೃತಿಚಿತ್ರಣವು ಕ್ರಿ.ಶ. ೧೫೨೫ರ 'ನಂಜುಂಡಕವಿ'ಯ ಕುಮಾರ ರಾಮನಸಾಂಗತ್ಯದಲ್ಲಿ ಬರುವ ಕನ್ನಡ ನಾಡಿನ ವರ್ಣನೆಯನ್ನು ನೆನಪಿಸುತ್ತದೆ. ಉಚ್ಚಸ್ವರಗೈವ ಕೋಗಿಲೆ, ಪಕ್ವಗೊಂಡ ಫಲಗಳನ್ನು ಕಚ್ಚಿರಸಹೀರುವ ಗಿಳಿಗಳು, ಬಗಸಿ ಬಂದರ್ಗೆನೆಳಲು (೧-೧೯) ನೀರು ಹಣ್ಣುಗಳನ್ನು ನೀಡುವ ವುಪವನಗಳು ಶೋಭಿಸುತ್ತಿದ್ದವು. ಇಂತಹ ಚೆಲುವಾದ ನೋಟಕರ ಕಣ್ಣುತುಂಬುವ ತುಂಗಾತೀರದಲ್ಲಿ ಭೂಕಾಂತೆಯುರದೊಳ್ಮೆರೆವ ಪೊನ್ನಕರಡಿಗೆಯುಯೆಂಬಂತೆ (೧-೨೦) ಸೌಭಾಗ್ಯಲಕ್ಷ್ಮಿಯ ತವರೋ, ಕೀರ್ತಿಭಂಡಾರವನೆಯೋ, ಸಂತತ ಸಕಲಕ್ಷೇತ್ರಗಳಿಗೆ ಗುರುನೆಲೆಯೋ ಎಂಬಂತೆ 'ಪಂಪಾನಗರ' ಶೋಭಿಸುತ್ತಿಹುದು ''ಭೂಕಾಂತೆಗುತ್ತಮ ಕ್ಷೇತ್ರಯಿಂಗಳಿಗೆ ಬಾಗವಾಡಿ''(೨-೧೧)ಯಲ್ಲಿ ಬಸವಣ್ಣನು ಪ್ರಸನ್ನನಾದ ವಿವರ ವರ್ಣನೆ ಮಾರ್ಮಿಕವಾಗಿದೆ.

''ಪರಸಮಯ ತಾಮಸವು ಧರೆಯಗಲಮುಸುಕಿರಲು
ಹರಸಮಯ ತರಣಿಯುದಯಿಸಿದ ವೋಲ್ಬಸವೇಶ
ಶರಣಾಳಿ ಕಮಲದುಗುಡವ ನೀಗಿಸುವ ಲೀಲೆ ಶರಧಿಯೊಳು ಲೋಲ್ಯಾಡಿಪರಿ
ಪರಿಯ ಕುಷ್ಟಕರಕೂನಂಶುದ್ಧೆಸಿ
ಕೊರಡಕೊನರಿಸಿ ಬರಡ ಕರೆಸಿ ಬಂಜೆಯರ್ಗೊಲಿದು ಮಕ್ಕಳಂ ಕೊಡುತಿರ್ದನು''(೨-೧೨)

ಸೂರ್ಯಾಸ್ತದ ಚಿತ್ರವಂತೂ ತುಂಬ ಮಾರ್ಮಿಕವಾಗಿದೆ. ಬಸವಣ್ಣನ ಜನನದ ಕಾರಣ ಮತ್ತು ಆತನ ಮಹಿಮೆಯನ್ನು ಚಿತ್ರಿಸುವ ಆ ವರ್ಣನೆ ಹೀಗಿದೆ.

ಮಾದರಸ ಮಾದಲಾಂಬಿಕೆಯರ ಉದರದಲ್ಲಿ ಬಸವಣ್ಣನ ಜನನವಾಗುವುದನ್ನು ಸೂಚಿಸುವಂತೆ ದ್ಯೂಮಣಿಯು ಜೈನ ಮತವಳಿವುದಿಂತೆಂದು ತೋರ್ಪಂತೆ ಪಡುಗಡಲಿಗಿಳಿದನು. (೨-೧೫) ಜೈನಮತದ ಅಸ್ತಮಿಕೆಯ ಸಮಯವಾಯಿತೆಂಬಂತೆ ಸೂರ್ಯ ಅಸ್ತ್ಂಗತನಾದನಂತೆ! ನಂತರ ಪಸರಿಸಿದ ಕತ್ತಲೆಯ ವರ್ಣನೆಯೂ ಹೃದ್ಯವಾಗಿದೆ.

ಧಾರಿಣಿಯೊಳು ಪಗಲು ಚರಿಪ ಖಗಮೃಗವೆಲ್ಲ
ಸಾರಿದವು ತಾಣಗಳ ವಾರಿಜಕೆ ದುಗುಡಾಯ್ತು
ಭೋರನಡರಿತು ತಮವು ತಾರೆಗಣಬಲಗೂಡಿ ತೋರಿದವು ಗಗನದಗಲ
ಜಾರಚೋರರ ಮನಸು ಸಂತೋಷವಣ್ಮಿದವು
ಸಾರಿ ಶರಣರ ಹೃದಯ ಜ್ಯೋತಿಗಳು ಯೆಂಬಂತೆ
ತೋರಣದ ಸಿರಿವನೆಗಳೊಳಗೆ ತುಂಬಿದರೊಲಿದು ನಾರಿಯರು ದೀವಿಗೆಗಳ
ಆ ಸಮಯ ಬಸ್ತಿಮತಕಾಳವನು ಪರಿಹರಿಪ
ಈಶನೆರಡನೆರೂಪ ಬಸವೇಶನುದಿಸೆ ವಿ
ಶೇಷಭಕ್ತಿಯ ಬೆಳಗುಯಿದೆಯೆಂದು ತೋರ್ಪಂತೇಇಂದು ಮೂಡಲು ಮೂಡಿದ
ಸೂಸುತಿರೆ ಕಿರಣ ದಿಕ್ತಟದಿಂ ಚಕೋರಗಳು
ತೋಷದಿಂ ಕಳಕಳದ ರವದಿ ನಲಿದಾಡುತಿರೆ
ಆಸರಸಿಗಳೊಳು ಕುಮುದಾಳಿ ವಿಕಸಿತಮಾಗೆ ಆರಾತ್ರಿ ಕಂಗೊಳಿಸಿತು (೨೧೬ ಮತ್ತು ೧೭)
ಸೂರ್ಯೋದಯ ವರ್ಣನೆಯಂತೂ ತುಂಬಸೊಗಸಾಗಿದೆ
ಗಾಢ ಕಣ್ತೆರೆದೆದ್ದು ನೋಡಿ ಕೆಲಬಲಮಾತ
ನಾಡುತಿರೆ ಜೈನರ್ಗೆ ಕೇಡಕ್ಕು ಬಸವೇಶ
ರೂಢಿ ದ್ವಿಜರುದರದೊಳ್ ಜನಿಸುವನುಯೆನುತಾಗಕೂಗೆ ಕುಕ್ಕುಟನುಬೇಗ
ಓಡಿತ್ತು ತಾಮಸಂ ತಾರೆಗಳು ಅಡಗಿದವು
ಬಾಡಿತ್ತು ಶಶಿಕಾಂತಿ ಮೂಡಕೆಂಪಡರಿತ್ತು
ಕೂಡಿ ಪಕ್ಷಾಳಿಯುಂ ಧ್ವನಿಮಾಡೆ ಪುರದೊಳಗಾಗೆಭೇರಿ ಘಂಟೆಯು ಕಹಳೆಯು (೨-೨೩)

ಮಾದಲಾಂಬೆಯ ಗರ್ಭವರ್ಣನೆ ಚಿಕ್ಕದಾಗಿ ಚೊಕ್ಕದಾಗಿ ಮೂಡಿಬಂದಿದೆ.

.... ತರುಣಿ ಬಸುರ್ಬೆರಳವುತಿರೆ ಮೂರಾರು ತಿಂಗಳೊಳು

ವರಜಾತಿ ಧರ್ಮಂಗಳಿರ್ದಂತೆ ಲೆರ್ಚುತಂ

ಪರಿಪರಿಯ ಫಲಗಳಾಹಾರಗಳ ಬಯಸುತ್ತಸೇವಿಸುತ ನವಮಾಸವು" (೨-೨೬)

ವೀರಭದ್ರನು ದಕ್ಷಯಾಗವನ್ನು ಸುಟ್ಟುಸೂರೆಗೈಯುವವರ್ಣನೆಯಂತೂ ಅತ್ಯದ್ಭುತ! ವೀರಕ್ಕೆ ವೀರವೆನಿಸುವಂತೆ ಚಿತ್ರಿತವಾಗಿವೆ.

ವೀರಭದ್ರನ ಬಾಣಾಘುತಕ್ಕೆ ಸಿಕ್ಕು ತತ್ತರಿಸಿದ ದಕ್ಷ ಮತ್ತು ಆತನ ಸೈನ್ಯಕ್ಕೆ ವ್ಯಾಳಪತಿ ಸಿರದ ಮರೆಯಲ್ಲಿ ಮಲಗಿದ ಕಪ್ಪೆಯಂತೆ (೬-೬೩) ಎಂಬ ನಾಣ್ನುಡಿಯ ಸ್ಥಿತಿಯೊದಗಿತು. ಎಂತಾದೊಡಂ ಸಾವು ತಪ್ಪದೆಂದು ದಕ್ಷನು ಬಿಲ್ಬಾಣಗಳನು ತಳೆದು ಘುಡುಘುಡಿಸುತ್ತ

ಮೋಹರವನೆಲ್ಲ ಕೆಣಕಿದೆ ನೋಡು ನೋಡೆನ್ನ

ಬಾಹುಬಲವಿಕ್ರಮವನೆನುತಲ್ಲಿದಕ್ಷಣನು

ಸಿಂಹಧ್ವನಿಯಿಂದಲಬ್ಬರಿಸಿ ಬೊಬ್ಬಿರಿದು ತೊಡೆಚಪ್ಪರಿಸಿ ಮೀಸೆ ಸೆಳೆದು

ಕಾಹುರದಿ ಕಣ್ಣು ಕೆಂಪೇರಿ ದವಡೆಯ ಕಡಿದು

ಸಾಹಸಿಗರೆರೆಯ ನಡೆತಂದು ಅತಿಧೈರ್ಯದಿಂ

ಆಹ ಪ್ರಳಯದ ಕಾಲರುದ್ರ ಅತಿರೌದ್ರ ಅರಿಭಿದ್ರಶ್ರೀವೀರಭದ್ರ (೬-೬೫)

...... ಆಸಮಯ ಕಿಡಿಕಿಡಿಯ ನುಗುಳುತ್ತ ಸರಳು ಘನ

ಘೋಷದಿಂ ಮೊರೆವುತ್ತ ಬರಲು ಕಾಣುತ್ತವೀ

ರೇಶಪುಟನೆಗೆದು ಸುರಗಿಯನೆತ್ತಿ ವುತ್ತರಿಸಿಯೆಚ್ಚೊಂದು ಮಾರ್ಗಣೆಯನು

ದೂಷಕನ ಕರದಧನುಮುರಿದು ಶಿಖಿಯಂ ಪಿಡಿದು

ಈಶನತಿ ಸೂತ್ರದಂದಾಡುತಿಹ ಬೊಂಬೆಸ

ರ್ವೇಶ್ವರನ ನೀನೆಂತು ಕೊಂದಪೆಯೊ ಎಂದವನ ಮೂದಲಿಸಿ ಒದೆದು ಸದೆದು (೬-೬೩)

...........ವೀರೇಶ ದಕ್ಷನ ಶಿರವ

ತಾಮಹಾಕೋಪದಿಂದರಿದು ಉರಿದೇಳುತಿಹ

ಹೋಮದೊಳು ಬಿಸುಡೆ ದಳ್ಳುರಿಯಾರಿ ಅತಿಶಾಂತಮಾಗೆ (೬-೬೮)

ಹೀಗೆ ದಕ್ಷಸಂಹಾರವಾಯಿತು. ಯುದ್ಧ ಸಮಾಪ್ತಿಯಾಯಿತು. ನಂತರದ ಚಿತ್ರ 'ಭೀಭತ್ಸತೆ'ಯನ್ನು ಕಣ್ಣೆದುರು ಕಟ್ಟಿ ನಿಲ್ಲಿಸುತ್ತದೆ. ರಣಾಂಗಣದ ನೆಲದುದ್ದಗಲಕ್ಕೂ ಮುತ್ತಿದ ಶಾಕಿನಿ ಡಾಕಿನಿ, ಭೂತಪ್ರೇತ ಪಿಶಾಚಿಕುಲ ಒಲವಿಂದ ನೆರೆದು

ನೆತ್ತರೋಕುಳಿಯಾಟ ಹಸ್ತನಳಿಚಿನಿಯಾಟ

ನೆತ್ತಿಹಿಡಿಚೆಂಡಾಟವಾಡುವೆವು ಬನ್ನೆಂದು

ಮೊತ್ತ ಮೊತ್ತದಿ ನೆರೆದು ಈಡಾಡಿ ವೋಡಾಡಿ ಕುಣಿದಾಡಿಯಣಕವಾಡಿ

ಮುತ್ತಿಮುರಿದೊತ್ತಿ ಡೊಕ್ಕೆಯ ಬಗೆದು ಕಂಡ ಕೊರೆ

ವುತ್ತ ಮೊರೆವುತ್ತ ನಲಿವುತ್ತ ನಲಿನಲಿದುಸುರಿ

ವುತ್ತಿಳೆಯುರು ಪುಟ್ಟಿದಂದಿಂದುಮೊದಲಿಂತು ಮಾಹರಕಾಣೆವೆಂದೆನುತಿರೆ (೬-೭೧)

ಆರ್ಭಟಿಸುತ್ತಿದ್ದವಂತೆ !

ಒಟ್ಟಾರೆ ಕವಿಶಂಕರನು ಹಿಗ್ಗಿಸಿ ವರ್ಣಿಸಬಲ್ಲ ಕುಗ್ಗಿಸಿ ಸಣ್ಣಮಾಡಬಲ್ಲ.[೫]

ಉದಾಹರಣೆಗೆ ಹರಿಶ್ಚಂದ್ರಕಾವ್ಯ, ಪ್ರಭುಲಿಂಗಲೀಲೆಗಳಂತಹ ಮಹಾಕಾವ್ಯಗಳ ಸಾರವನ್ನು ಹೀರುವ ಕಲೆಗಾರಿಕೆ.

ಒಟ್ಟಿನಲ್ಲಿ ಈ ಕಾವ್ಯದಲ್ಲಿ ತಮ್ಮ ಇತಿಮಿತಿಯಲ್ಲಿಯೇ ವರ್ಣನೆಗಳು ಓದುಗರ ಗಮನ ಸೆಳೆಯುತ್ತವೆ. ಪುರಾಣಗಳಲ್ಲಿ ಕಾವ್ಯಾಂಶ ಕಡಿಮೆ ಎಂಬ ಮಾತನ್ನು ಸುಳ್ಳಾಗಿಸುತ್ತವೆ. ಭೀಮಕವಿಯ ಅನುಕರಣೆಯಂತೆ ಕಂಡುಬಂದರೂ ಅನೇಕ ಕಡೆ ಕವಿಯಸ್ವಪ್ರತಿಭೆಯಿಂದ ಮಿಂಚಿ ಬೆಳಗುವ ಉದಾಹರಣೆಗಳು ಹೇರಳವಾಗಿ ಇಲ್ಲಿ ಸಿಗುತ್ತವೆ. ವರ್ಣನೆಗಳೇ ಈ ಕಾವ್ಯದ ಪ್ರಧಾನ ಆಕರ್ಷಣೆ ಎಂದರೆ ತಪ್ಪಿಲ್ಲ.

೭. ಪಾತ್ರಪರಿಪೋಷಣೆ : ಕವಿಯ ಆಳವಾದ ಅನುಭವವನ್ನು, ಬದುಕಿನ ಕಾಣ್ಕೆಯನ್ನು ಆತ ಸೃಷ್ಟಿಸಿದ ಪಾತ್ರಗಳು ಸಂಕೇತಿಸುತ್ತವೆ. ಪ್ರತಿಭೆ ಮತ್ತು ಅನುಭವಗಳು ಕಾವ್ಯನಿರ್ಮಾಣದ ಮೂಲದ್ರವ್ಯಗಳು ಎಂಬುದನ್ನು ಎಲ್ಲ ಅಲಂಕಾರಿಕರೂ ಒಪ್ಪುತ್ತಾರೆ.

'ಮಮ್ಮಟ'ನು ತನ್ನ 'ಕಾವ್ಯಪ್ರಕಾಶ'(೧-೨)ದಲ್ಲಿ

ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಾತ್ |

ಕಾವ್ಯಜ್ಞಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ ||[೬]

ಪ್ರತಿಭಾಶಕ್ತಿ, ಲೋಕಶಾಸ್ತ್ರ, ಕಾವ್ಯಗಳ ವಿಶೇಷ ಪರಿಚಯದಿಂದ ಬರುವ ನಿಪುಣತೆ, ಕಾವ್ಯಜ್ಞರ ಶಿಕ್ಷಣದಿಂದ ಬರುವ ಅಭ್ಯಾಸಗಳು ಕವಿಯ ಮೂಲ ಅಗತ್ಯಗಳು ಎಂದು ಹೇಳುತ್ತಾನೆ. ಒಟ್ಟಾರೆ ಅನುಭವ ಶ್ರೀಮಂತಿಕೆಯೇ ಕವಿಯ ಜೀವದ್ರವ್ಯ ''ಆತನ ಜೀವನದ ಅನುಭವ ಹೆಚ್ಚಾಗಿದ್ದರೆ ಮಾನವ ಸ್ವಭಾವದ ಪರಿಚಯ ಮಿಗಿಲಾಗಿದ್ದರೆ ಆತನು ಸೃಷ್ಟಿಸಿದ ಪಾತ್ರಗಳು ಜೀವಂತವಾಗಿ ಓದುಗನ ಕಣ್ಮುಂದೆ ಕುಣಿಯುತ್ತವೆ. ಮಾನವರಂತೆ ಮಾತನ್ನಾಡುತ್ತ. ಮಾನವತೆಯೇ ರೂಪವೆತ್ತು ಬಂದಂತೆ ತೋರುತ್ತವೆ. ಇದೆಲ್ಲ ಕವಿಯ ಪ್ರತಿಭೆಯ ಸೊತ್ತು''[೭]

ಶಂಕರಕವಿ ಚಿತ್ರಿಸಿದ ಪಾತ್ರಗಳು ಹಲವು, ನಾಯಕ ಪಾತ್ರವೆ ಇರಲಿ, ಪೋಷಕ ಪಾತ್ರವೆ ಇರಲಿ, ಬಹಳ ಸಮರ್ಥವಾಗಿ, ಹದವರಿತು ಚಿತ್ರಿಸಿದ್ದಾನೆ. ಎಲ್ಲವುಗಳೂ ಹೊಸ ಜೀವಕಳೆಯಿಂದ ಶೋಭಿಸುತ್ತವೆ. ಉದಾ. ಸಾಂಸಾರಿಕ ದ್ವೇಷ ಅಸೂಯೆಗಳ ಕುಲುಮೆಯಲ್ಲಿನೊಂದು-ಬೆಂದ ಚಾಮರಸನ ಪಾತ್ರ ದೈನ್ಯತೆಯೇ ಮೂರ್ತಿವೆತ್ತಂತೆ ಚಿತ್ರಿತವಾಗಿದ್ದರೆ, ಹರಿಹರ ದೇವನ ಪಾತ್ರ ಋಷಿಸದೃಶ ಗಾಂಭೀರ್ಯದ ಪ್ರತಿಮೂರ್ತಿಯಂತೆ ಕಂಗೊಳಿಸುತ್ತದೆ.

ಕಥಾನಾಯಕ ಬಸವಣ್ಣನ ಪಾತ್ರವಂತೂ ಅತ್ಯದ್ಭುತ! ಲೌಕಿಕನಾಗಿ ಮಾನವ ಸಹಜ ದೌರ್ಬಲ್ಯಗಳೊಂದಿಗೆ ಅಲೌಕಿಕ ಸಂಬಂಧಿಯಾಗಿ ಮಹಾಮಾನವನಾಗಿ ನಿಲ್ಲುವ ಬಸವಣ್ಣ ಶಂಕರ ಕವಿಯ ಸಮತೂಕದ ಪಾತ್ರಚಿತ್ರಣ ಕೌಶಲ್ಯಕ್ಕೆ ಸಾಕ್ಷಿಯಾಗಿ ನಿಲ್ಲುತ್ತಾನೆ. ಇಲ್ಲಿನ "ಬಸವಣ್ಣನವರ ಪಾತ್ರ ಭಕ್ತಿಯ ಬೆಳಸು, ಮುಕ್ತಿಯ ಹಲಸು, ಆ ಪಾತ್ರದ ಒಂದೊಂದು ಮಾತಿನಲ್ಲಿ, ಕೃತಿಯಲ್ಲಿ ಕವಿಯ ಭಕ್ತಿ ಹಾಸು ಹೊಕ್ಕಾಗಿತುಂಬಿ ನಿಲ್ಲುತ್ತದೆ. ನಿಜಶರಣನ ಸಾಮಾನ್ಯ ಕೃತಿಗಳು ಸಹ ಪವಾಡವಾಗಿ ಮೆರೆಯುತ್ತವೆ. ಅವರ ನಡೆನುಡಿ ಇತರರಿಗೆ ಆದರ್ಶ ವಾಗುತ್ತವೆ. ನಡೆದಂತೆ ನುಡಿದು, ನುಡಿದಂತೆ ನಡೆಯುವವರೇ ಶರಣರಲ್ಲವೇ?"

ಬಿಜ್ಜಳ, ಕೊಂಡೆಯ ಮಂಚಣ್ಣ ಮುಂತಾದ ಪಾತ್ರಗಳು ಮಿಂಚಿನಂತೆ ಮಿನುಗಿ ಮಾಯವಾಗುತ್ತವೆ. ಭೀಮಕವಿಯ 'ಬಸವಪುರಾಣ' ಕಾವ್ಯಕ್ಕಿಂತ ಇಲ್ಲಿ ಬಿಜ್ಜಳನ ಪಾತ್ರ ಮಸುಕಾದಂತೆ ಭಾಸವಾಗುತ್ತದೆ. ಬಹುಶಃ ಕವಿಯ ದೃಷ್ಟಿಯೆಲ್ಲ 'ಬಸವಣ್ಣ'ನನ್ನು ಚಿತ್ರಿಸುವುದರ ಮೇಲೆಯೇ ಕೇಂದ್ರಿಕೃತವಾದದ್ದು ಕಾರಣವಾಗಿರಬೇಕು.

ಮೋಳಿಗೆಯ್ಯ, ಸತಿ ಮಹಾದೇವಿ, ಹರಳಯ್ಯ ಆತನ ಪತ್ನಿಕಲ್ಯಾಣಿ, ಮಧುವರಸ ಬಸವಸತಿ ನೀಲಾಂಬಿಕೆ, ಪಿಟ್ಟವ್ವೆ ಮುಂತಾದ ಪಾತ್ರಗಳು ಚಿಕ್ಕದಾದರೂ ಭಿನ್ನವಾಗಿವೆ. ತಮ್ಮ ಹಿರಿದಾದ ವ್ಯಕ್ತಿತ್ವದ ಘನತೆಯಿಂದ ಓದುಗರ ಎದೆಯಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.

ಪಾತ್ರ ಚಿತ್ರಣದಲ್ಲಿ ಶಂಕರ ಕವಿಯದು ನಿಜಕ್ಕೂ ಎತ್ತಿದಕೈ, ಉದಾ. ವೀರಭದ್ರನ ಪಾತ್ರ ಉದಾತ್ತತೆಗೆ ಸಂಕೇತವಾಗಿದೆ. ಬೆಂಕಿಯುಂಡೆಯಂತಹ ರೌದ್ರಾವತಾರಿ ವೀರಭದ್ರನು ಕುಲಪರ್ವತಗಳನ್ನೇ ಆಣೆಕಲ್ಲಿನಂತೆ ತೂರುತ್ತಾನೆ. ಅವನ ಕೋಪದಕಿಚ್ಚಿಗೆ ಸಮುದ್ರವೆಲ್ಲ ಬತ್ತಿಹೋಗುತ್ತದೆ. ಪ್ರಳಯ ಕಾಲದ ಚಂಡಮಾರುತದಂತೆ ಅವನು ಆರ್ಭಟಿಸುತ್ತಾನೆ. ಅವನ ಆಟಾಟೋಪಕ್ಕೆ ಮೂರು ಲೋಕಗಳೂ ತತ್ತರಿಸಿ ಬೊಬ್ಬಿರಿಯುತ್ತವೆ ಹರನ ಉರಿಗಣ್ಣಿನ ಮಗನೆಂಬ ಭಾವ ಪ್ರತಿಕ್ಷಣಕ್ಕೂ ಉಕ್ಕುವಂತೆ ಶಂಕರಕವಿಯು ವೀರಭದ್ರನ ಪಾತ್ರವನ್ನು ಕಟೆದು ನಿಲ್ಲಿಸಿದ್ದಾನೆ.

೮. ರಸವಿವೇಚನೆ : ರಸವೇ ಕಾವ್ಯದ ಜೀವಾಳ, ಕಾವ್ಯದ ಸೃಷ್ಟಿ ಮತ್ತು ಆಸ್ವಾದನೆಗಳೆರಡೂ ರಸಪ್ರಕಾಶದ ಬೆಳಕಿನಲ್ಲಿಯೇ ಬೆಳೆಯುತ್ತಾ ಪೂರ್ಣಗೊಳ್ಳುತ್ತವೆ. ನವರಸಗಳು ಕೃತಿಯೊಂದನ್ನು ಮಹಾಕಾವ್ಯದ ನೆಲೆಗೇರಿಸುವ ಅರ್ಹತೆಪಡೆದಿದ್ದವೆಂಬುದಕ್ಕೆ ಪ್ರಾಚೀನ ಮಹಾಕಾವ್ಯಗಳೇ ಸಾಕ್ಷಿ.

ಹತ್ತನೆಯ ಶತಮಾನದ ಕನ್ನಡ ಕಾವ್ಯಗಳು ವೀರರಸ ಪ್ರಧಾನವಾಗಿದ್ದರೆ, ಹನ್ನೆರಡನೆಯ ಶತಮಾನ ಮತ್ತು ತದನಂತರದ ಕಾವ್ಯಗಳಲ್ಲಿ 'ಭಕ್ತಿರಸ'ವೇ ಪಟ್ಟಮಹಿಷಿಯಾಗಿ ಮೆರೆದಿರುವುದನ್ನು ಕಾಣುತ್ತೇವೆ. ಭಕ್ತಕವಿ ಹರಿಹರನನ್ನೇ ಕಾವ್ಯಗುರುವಾಗಿಸಿಕೊಂಡ ಶಂಕರಕವಿಯ ಪ್ರಸ್ತುತ ಚೋರ ಬಸವೇಶ್ವರ ಕಾವ್ಯದಲ್ಲಿ 'ಭಕ್ತಿರಸ'ವೇ ಪ್ರಾಧಾನ್ಯ ಪಡೆದದ್ದು ಸಹಜವೇ ಆಗಿದೆ. ಸಂದರ್ಭೋಚಿತವಾಗಿ ಶೃಂಗಾರ, ಹಾಸ್ಯ, ಕರುಣ, ವೀರರಸಗಳು ಸುಳಿದಾಡಿದರೂ ಅವೆಲ್ಲ, ಭಕ್ತಿರಸದ ಮಹಾಸಾಗರದಲ್ಲಿ ಒಂದಾಗಿ ಹೋಗುವ ಉಪನದಿಗಳಂತೆ ತೋರುತ್ತವೆ.

ಉದಾಹರಣೆಗೆ ಮಾದಿರಾಜ ಮಾದಲಾಂಬಿಕೆಯರ ಮಿಲನ ಸಂದರ್ಭದಲ್ಲಿ ಶೃಂಗಾರರಸ,

ಸಂಸಾರದ ದ್ವೇಷಾಸೂಯೆಗಳದಳ್ಳುರಿಯಲ್ಲಿ ಬೆಂದುಬಸವಳಿದ ಚಾಮರಸನು ಹರಿಹರನಲ್ಲಿ ತನ್ನನ್ನು ಉದ್ಧರಿಸಲು ಬೇಡಿಕೊಳ್ಳುವ ಸನ್ನಿವೇಶದಲ್ಲಿ ಕರುಣರಸ.

'ಪಿಟ್ಟವ್ವೆ'ಯ ಪರವಾಗಿ ಸೇವಕನ ವೇಷದಲ್ಲಿ ಬರುವ ಶಿವ ಕೆರೆಯ ಕಟ್ಟಡದ ಕೆಲಸದವರೊಂದಿಗೆ ವರ್ತಿಸುವ ಸನ್ನಿವೇಶದಲ್ಲಿ ಹಾಸ್ಯರಸ ಇತ್ಯಾದಿ.

ಬಸವಣ್ಣನವರು ಈ ಕಾವ್ಯದಲ್ಲಿ ಭಕ್ತಿ ಭಂಡಾರಿಯಾಗಿ ಮೆರೆಯುತ್ತಾರೆ. ಹರಿಹರನು ಪಂಪಾವಿರೂಪಾಕ್ಷನಲ್ಲಿಟ್ಟ ಭಕ್ತಿ ಪಟ್ಟ ಶಾಲೆಯಾಗಿ ಮೆರೆಯುತ್ತದೆ.[೯] ಮಹಾದೇವ ಭೂಪಾಲನ ಜಂಗಮಪ್ರೇಮ ಭಕ್ತಿರಸದ ಮಹಾತೊರೆ, ಉದ್ದಾನವೀರದೇಶಿಕನುಚಾಮರಸನಿಗೆ ಲಿಂಗದೀಕ್ಷೆ ನೀಡುವ ಸನ್ನಿವೇಶ ಭಕ್ತ್ಯಾಧಿಕ್ಯದಸೂಚಕ

ಭಕ್ತಿರಸದಷ್ಟು ಪ್ರಧಾನವಾಗಿ ಅಲ್ಲದಿದ್ದರೂ ಅದಕ್ಕೆ ಪೈಪೋಟಿ ನೀಡುತ್ತದೆಯೇನೋ ಎಂದು ಭಾಸವಾಗುವಷ್ಟರ ಮಟ್ಟಿಗೆ ವೀರರಸವು ಇಲ್ಲಿ ಮೆರೆದಿದೆ. ದಕ್ಷಸಂಹಾರ ಪ್ರಸಂಗದಲ್ಲಿ ವೀರರಸ ತುತ್ತ ತುದಿಗೇರಿ ನಿಲ್ಲುತ್ತದೆ. ಯಾವುದೇ ರಸ ಹರಿದು ಬಂದರೂ ಅದು ಭಕ್ತಿಯ ಮಹಾಸಾಗರದಲ್ಲಿ ಒಂದಾಗಿ ಬಿಡುವುದು ಇಲ್ಲಿನ ವಿಶಿಷ್ಟತೆ.

೯. ಅಲಂಕಾರಗಳು : 'ಕಾವ್ಯ ಶೋಭಾಕಾರನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೇ |[೧೦]

"ಕಾವ್ಯಕ್ಕೆ ಸೊಗಸು ಕೊಡುವ ಧರ್ಮಗಳೇ ಅಲಂಕಾರಗಳು" ಕಾವ್ಯೋದ್ದೇಶಕ್ಕೆ ಅನುಗುಣವಾದ ನಿರೂಪಣೆಯಲ್ಲಿ ಅನೇಕ ಅಲಂಕಾರಗಳು ಈ ಕಾವ್ಯದಲ್ಲಿ ಕಾಣಿಸಿಕೊಂಡಿವೆ. ಅವುಗಳಲ್ಲಿ ಉಪಮೆ, ರೂಪಕ, ದೃಷ್ಟಾಂತ ಅತಿಶಯೋಕ್ತಿ ಶಬ್ದಾಲಂಕಾರಗಳು ಮುಖ್ಯವಾದವು.

...... ಕಾವ್ಯದಲ್ಲಿ ಅಲಂಕಾರದ ಸ್ಥಾನದ ಬಗ್ಗೆ ವಾದವಿವಾದವಿದ್ದರೂ ಅನೇಕ ಕವಿಗಳಿಗೆ ಅಲಂಕಾರಗಳು ಪರಮಪ್ರಿಯವೆಂಬ ವಿಷಯ ಕಾವ್ಯಾಭ್ಯಾಸದಿಂದ ತಿಳಿದುಬರುತ್ತದೆ. ಕೇವಲ ಉಕ್ತಿವೈಚಿತ್ರ್ಯ ಇಲ್ಲವೇ ಪಾಂಡಿತ್ಯ ಪ್ರದರ್ಶನಕ್ಕೆ ಕವಿಗಳು ಅಲಂಕಾರಗಳನ್ನು ತರಬಹುದು. ಆದರೆ ಅವು ರಸಕ್ಕೆ ಉಪಕಾರಿಗಳಾಗಿ, ಪೋಷಕಗಳಾಗಿ ಬಂದರೆ ಕಾವ್ಯ ಇನ್ನೂ ಉತ್ಕೃಷ್ಟವಾಗುವುದಲ್ಲದೆ ಅಲಂಕಾರಗಳಿಗೂ ಸಾರ್ಥಕ್ಯ ಉಂಟಾಗುತ್ತದೆ.[೧೧]

ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಚೋರಬಸವೇಶ್ವರ ಕಾವ್ಯದಲ್ಲಿ ಬಳಕೆಯಾದ ಅಲಂಕಾರಗಳನ್ನು ಪರಿಶೀಲಿಸಿದರೆ ಅವೆಲ್ಲ ಸಂದರ್ಭೋಚಿತವಾಗಿ, ಸನ್ನಿವೇಶ ಸಂಗತಿಗಳಿಗೆ ಪೋಷಕವಾಗಿ ಬಂದುದು ಕಂಡು ಬರುತ್ತದೆ.

ಅರ್ಥಾಲಂಕಾರಗಳಲ್ಲಿ 'ಉಪಮಾ' ಮೌಲೀಭೂತವೆಂದು ಅಲಂಕಾರಿಕರ ಅಭಿಮತ, ಶಂಕರಕವಿಯ ಈ ಕಾವ್ಯದಲ್ಲಿ ಉಪಮೆಗೇ ಅಗ್ರಸ್ಥಾನ!

ಉದಾ 'ಪಂಪಾನಗರ'ವನ್ನು ವರ್ಣಿಸುತ್ತಾ "ಭೂಕಾಂತೆಯುರದೊಳ್ಮೆರೆವ ಪೊನ್ನಕರಡಿಗೆ ಯುಯೆಂಬಂತೆ" (೧-೨೦) ಎಂದು ಹೇಳುವಲ್ಲಿ ಕವಿಯ ಭಕ್ತಿ-ಅಭಿಮಾನಗಳು ಎದ್ದು ಕಾಣುತ್ತವೆ.

ಬಾಲಬಸವನ ಬೆಳವಣಿಗೆಯನ್ನು

ದಿನದಿನಕೆ ಬಾಲಶಶಿಯಂತೆ ಬೆಳೆವುತಲಿರ್ದಬಸವೇಶ ಭವವಿನಾಶ (೨-೩೫)

ಎಂದು ಸಾಂಪ್ರದಾಯಿಕ ರೀತಿಯಲ್ಲಿ ಚಿತ್ರಿಸುತ್ತಾನೆ. ಶಿವಲಿಪಿಯ ಪವಾಡದ ಸಂದರ್ಭದಲ್ಲಿ

ಗುರುಸಂಗಮೇಶ್ವರನ ಪಾದದಾಣೆಯನಿಟ್ಟು ಸೂರ್ಯನನ್ನು ಗಗನ ಮಧ್ಯದಲ್ಲಿ ನಿಲ್ಲಿಸಿ ಆಣೆಯನ್ನು ಬಿಟ್ಟ ಮೇಲೆ ಭಾಸ್ಕರನು

ಅಂದು ಜೈನರ ಸಿರಿಯು ಇರದೆ ನೀರೊಳು ಕೂಡ್ಗುಮೆಂಬಂತೆಯಸ್ತಮಿಸಿದ ನಂತೆ (೩-೩೯)

ರಾತ್ರಿಯಲ್ಲುದಿಸಿದ ನಕ್ಷತ್ರಗಳನ್ನು

ಪರಸಮಯಿಗಳ ಗೆಲಿದ ಬಸವೇಶನಂ ನೋಡ

ನೆರೆದು ದೇವಾಳಿ ಪುಷ್ಪದ ವೃಷ್ಟಿ ಕರೆವುತಿಹ

ಪರಿಯಂತೆ ನಕ್ಷತ್ರನಿಚಯ ಗಗನದಗಲದಿ ಶೋಭಿಸಿದವಾ ಸಮಯದಿ (೩-೪೦)

ಶಿವಭಕ್ತಿ ಪ್ರಭೆ ಜಗದಗಲ ಪರ್ಬಿತೆಂ

ಬಂತೆ ಎಣ್ದೆಶೆಯೊಳಗೆ ಬೆಳಗು ಪಸರಿಸಿತು. (೩-೪೫)

ಬಸವನ ಭಕ್ತಿಯನ್ನು ಕಣ್ಣಾರೆ ಕಾಣುವ ತವಕದಿಂದ ಶರಣರು ಬರುವುದನ್ನು

"ನಡುಮನೆಗೆ ಅಷ್ಟಲಕ್ಷ್ಮಿಯರು ತಾಂಬಂದಂತೆ

ಉಡುಪ ಹಿತನುದಯಕ್ಕೆ ವನಜ ಪಸರಿಸಲು ಆ

ರಡಿಯ ಬಳಗಂ ಕೂಡಿ ಕವಿದಂತೆ ಹಂಸೆಯುಂ

ಪಡೆಸಹಿತ ಸರಸಿಗೈತರ್ಪಂತೆ ಜಂಗಮವು ಬರುತಿರ್ದುದೇನೆಂಬೆನು (೩-೫೩)

ಎಂದು ಬಣ್ಣಿಸುತ್ತಾನೆ. ವೀರಭದ್ರನ ಆಟಾಟೋಪಕ್ಕೆ ತತ್ತರಿಸಿದ ದಕ್ಷನ ಸ್ಥಿತಿ

ಹುಲ್ಲೆ ಹುಲಿಗಂಡೊಲುಂ ಮಾತಂಗಹರಿಸುಳುಹಿ
ನಲ್ಲಿ ಕುದಿವಂತೆ ಗರುಡನ ಕಂಡ ಉರಗನೊಲು ಮರುಗಿ ಚಿಂತಿಸಿ ನೆನೆದನು
ಬಲ್ಲಿದನಕೂಡೆ ಹಗೆ ವ್ಯಾಳಪತಿಸಿರದ ಮರೆ
ಯಲ್ಲಿ ಮಲಗಿದ ಕಪ್ಪೆಯಂತೆಂಬನಾಣ್ಣುಡಿಯು (೬-೬೩)

ಎಂದು ಮುಂತಾಗಿ ಉಪಮೆಗಳನ್ನು ಬಳಸಲಾಗಿದೆ. ಉಪಮೆಗಳಂತೆ ಕೆಲವು ರೂಪಕಗಳನ್ನೂ ಔಚಿತ್ಯವರಿತು ಬಳಸಿದ್ದಾನೆ. ಬಸವಣ್ಣನ ಜನನ ಸಂದರ್ಭದಲ್ಲಿ ಸೇವಕಿಯರು

''ಮಲಹರನಕೇಸರಿ''ಯು ಪುಟ್ಟಿದ ''ಜೈನಸಮಯಕರಿನಿಚಯ''ಮೆಲ್ಲ

ತೊಲಗಿರೋಯೆಂದು ಡಂಗುರಸಾರುವಂತೆ ''ಜಯಘಂಟೆ'' ಬಾರಿಸುತ್ತ ''ಶಿಶುರತ್ನ'' ಕೊಂಡೊಯ್ದು ಮಲಗಿಸುತ್ತಾರೆ. (೨-೨೯)

ದೃಷ್ಟಾಂತಗಳೂ ಅಲ್ಲಲ್ಲಿ ಎಡೆಪಡೆದಿವೆ. ಉದಾಹರಣೆಗೆ ಮಾದಿರಾಜ ಮಾದಲಾಂಬಿಕೆಯರು ಕುವರನನ್ನು ಬಯಸುತ್ತಿರುವ ಪರಿ ಹೇಗಿತ್ತೆಂದರೆ

ಬಡವ ಭಾಗ್ಯವಂ ಹೆಳವಕರಚರಣ ರೋಗಿ
ಸವಿಶಾಖಪಾಕ ಶಶಿಕಿರಣಂಚಕೋರಕಂ
ರವಿವುದಯ ಕಮಲವಿಕಸಿತ ಭ್ರಮರಂಗಳುಂ
ಹಾರೈಸುವಂತೆ ಸುತನಾಕಾಂಕ್ಷೆಯೊಳಗಿದ್ದರಂತೆ (೨-೨೫)

ಬಸವೇಶ್ವರನ ಜನನದ ಮುನ್ಸೂಚನೆಯ ವಿವರದಲ್ಲಿ 'ಶಬ್ದಾಲಂಕಾರ' ಸಾರ್ಥಕವಾಗಿದೆ.

ಬೀರಿತ್ತು ಕುಮುದ ಕಳೆ ಜಾರಿತ್ತು ಆಗಚ
ಕೋರಕ್ಕೆ ದುಗುಡಮಂ ತೋರಿತ್ತು ಉದಯಾದ್ರಿ
ಗೇರಿತ್ತು ರವಿಕಿರಣಹಾರಿತ್ತು ಭೃಂಗಾಳಿವಾರಿಜವರಳ್ದವು ಪಸರಿಸಿ
ಧಾರಿಣಿಯೊಳುಂ ಜೈನಮತಕುಮುದ ಕಳೆಗಳೆವ ಮಾರಾರಿಭಕ್ತ ಬಸವಂ......

'ಸ್ವಭಾವೋಕ್ತಿ'ಗಳೂ ಅಲ್ಲಲ್ಲಿ ಕಂಡುಬರುತ್ತವೆ. ಉದಾಹರಣೆಗೆ

ಕರವೀರ ಮೊಲ್ಲೆ ಮಲ್ಲಿಗಿ ಜಾಜಿಸಂಪಿಗೆಯು
ಸುರಹೊನ್ನೆ ನಂದಿಪರ್ವತ ಮುಖ್ಯಕುಸುಮಚಯ
ಪರಿಪರಿಯ ತರುಲತಾವಳಿಯು ಕಾಲುವೆ ಸರಸಿಬಳಸಿ ಪರಿದಾಡುತಿರ್ಪ
ವರ ಹಂಸ ಷಟ್ಚರಣಕೇಕಿ ಕೋಕಿಲಶುಕಂ

ಸರಸಿಯೊಳು ಕ್ರೀಡಿಸುತ ಮರಿಗಳಿಗೆ ನಳಿನಕೇ

ಸರಿಗಡಿದು ಗುಟುಕಿಟ್ಟುಯೆರಗಿ ಬಂಡುಂಡು ಝೇಂಕರಿಸುತ್ತ ಪರಿದಾಡುತೆ (೧-೧೮)

''ಉತ್ಪ್ರೇಕ್ಷೆ''ಗೂ ಕೊರತೆಯಿಲ್ಲ ಚಾಮರಸನ ಪುಸಕ್ತವನ್ನು ವಿಮರ್ಶಕರು ಪರಿಶೀಲಿಸುತ್ತಿರುವಾಗ ಚಾಮರಸನು

.....ಪುಸ್ತಕವ ಬೆರಲಿಂಪಿಸುಕೆ ರುಧಿರ್ಗರೆದುದು ಪುಸ್ತಕವನ್ನು ಬೆರಳಿಂದ ಹಿಸುಕಿದರೆ ರಕ್ತ ಕರೆಯಿತಂತೆ| ಉದಯಾದ್ರಿಶಿಖರದಲ್ಲಿ ರವಿಕಿರಣ ಪಸರಿಸಿದ ಪರಿಯನ್ನು

ಮೂಡಿ ಮುಳುಗುವೆ ನಿತ್ಯ ಗಾಢ ಕವಿವುದು ತಮವು

ರೂಢಿಯೊಳು ಬಸವರಸನುದಿಸಿದುರ್ಮತಕಾಳ

ವೋಡಿಸಿದ ಮರಳಿಮುಸುಕದ ವೋಲುಮಾತಂಗೆಯೆನ್ನ ಪ್ರಭೆ ಸಮವಲ್ಲವು

ನೋಡಿ ಬಸವನತೇಜ ಬೇಡಿಕೊಂಬನ ತೆರದಿ.....

ಎಂದು ಚಿತ್ರಿಸುತ್ತಾನೆ.

ಹೀಗೆ ಚೋರಬಸವೇಶ್ವರ ಕಾವ್ಯದಲ್ಲಿ ಹೃದ್ಯವಾಗಿ ಮಾರ್ಮಿಕವಾಗಿ ಅಲಂಕಾರಗಳು ಮೂಡಿ ಬಂದದ್ದು ಕಾವ್ಯಕ್ಕೆ ಹೆಚ್ಚಿನ ಮೆರಗನ್ನು ತಂದುಕೊಟ್ಟಿದೆ.

೧೦. **ಭಾಷಾಶೈಲಿ :** ೧೨ನೆಯ ಶತಮಾನದ ಸಮಗ್ರಕ್ರಾಂತಿಯ ತರುವಾಯ ಕನ್ನಡ ಕಾವ್ಯಗಳಲ್ಲಿ ಭಾಷಾ ಬಳಕೆಯ ದೃಷ್ಟಿಯಿಂದ ಸರಳತೆಯ ಕ್ರಾಂತಿಯೇ ಜರುಗಿ ಹೋದದ್ದು, ಸರ್ವವಿದಿತ. ಅಂತೆಯೇ ಹರಿಹರನ ಗಾಢವಾದ ಪ್ರಭಾವಕ್ಕೊಳಗಾಗಿರುವ 'ಶಂಕರಕವಿ'ಯು ಉಭಯ ಭಾಷಾವಿಶಾರದನಾಗಿದ್ದರೂ ಅವನಶೈಲಿ ಸರಳ ಸ್ಪಷ್ಟ, ಸಾಮಾನ್ಯರಿಗೂ ತಿಳಿಯುವಂತೆ ಬರೆಯುವುದೇ ಆತನಗುರಿ.

ಕಥೆ ಎಲ್ಲಿಯೂ ತಡೆದು ನಿಲ್ಲದಂತೆ ಸರಾಗವಾಗಿ ಸಾಗುತ್ತದೆ. ಸಂಸ್ಕೃತ ಕನ್ನಡ ಶಬ್ದಗಳ ಹಿತಮಿತವಾದ ಬಳಕೆ ಇಲ್ಲಿನ ಶೈಲಿಯಲ್ಲಿದೆ. ಉಪಮೆ ರೂಪಕ, ಉತ್ಪ್ರೇಕ್ಷೆ ಮೊದಲಾದ ಅರ್ಥಾಲಂಕಾರಗಳನ್ನು ಕವಿ ಮೇಲಿಂದ ಮೇಲೆ ಬಳಸಿಕೊಂಡಿದ್ದಾನೆ. ''ಒಂದೊಂದು ಪದ್ಯದಲ್ಲಿ ಒಂದೊಂದು ವ್ಯಕ್ತಿಯ ಇಲ್ಲವೆ ಸನ್ನಿವೇಶದ ಚಿತ್ರಣವನ್ನು ಕೊಟ್ಟು ಶಂಕರ ಕವಿಯು ಕಾವ್ಯವನ್ನು ಒಂದು ಚಲನಚಿತ್ರವೆನ್ನುವಂತೆ ಹೇಳುವುದು ವೈಶಿಷ್ಟ್ಯ ಪೂರ್ಣವಾಗಿದೆ.[೨]

ಕಾವ್ಯವು ಬಿಗುವಾದಬಂಧ, ಸಂಗ್ರಾಹಕ ಗುಣ, ಸಂಕ್ಷಿಪ್ತತೆ ಸರಳತೆ, ಔಚಿತ್ಯ, ಕಥನತಂತ್ರ, ಸಂಭಾಷಣಾ ತಂತ್ರಗಳಿಂದ ಹೃದಯಸ್ಪರ್ಶಿಯಾಗಿರುವಂತೆ ಭಾವನಾತ್ಮಕವೂ ಆಗಿದೆ.

ಜನಸಾಮಾನ್ಯರ ಆಡುನುಡಿಗಳ ಹದವರಿತ ಬಳಕೆ ಇಲ್ಲಿದೆ. ಸಂದರ್ಭೋಚಿತವಾಗಿ ಕೆಲವು ಗಾದೆ ಮಾತುಗಳನ್ನು, ನುಡಿಗಟ್ಟುಗಳನ್ನು ಹದವರಿತು ಬಳಸಿದ್ದಾನೆ.

ಉದಾಹರಣೆಗೆ "ದೇವರೊಲವಿತ್ತರರ್ಚಕನೀಯನೆಂಬಂತೆ" (೧-೯)

"ಅಂತರಿಕ್ಷದಿ ಸಿಡಿಲುಗುಳ್ದ ಬಾವಿಗಂ ಸೋಪಾನವೀಕ್ಷಿಸಲುಂಟೇ" (೧-೧೩) ಬ್ರಹ್ಮಾಂಡದಾ ಪರಮ ವಿಸ್ತಾರ ಚಿತ್ರ ಪಟದೊಳ್ ತೋರ್ಪ ಆಪರಿ (೧-೨೧)

"ಹರಗೆ ಶರಣರೆಯಧಿಕ" (೧-೨೮)

"ಭಕ್ತದೇಹಿಕದೇವ" (೧-೨೯)

"ಅರಿದುನಾಸಿಕ ಮುಕುರ ತೋರುವುದು ಏನುಂಟು" (೩-೩೫)

"ಬಡವ ತಾಮುನಿದು ಮಾಡಿದ ಸಿಟ್ಟುದವಡಿಂಗೆ ಮುಪ್ಪುಮೆಂಬರು" (೫-೩)

"ಬಲ್ಲಿದರ ಕೂಡೆಯಬಲರಿಗೆ ಪಗೆಸಲ್ಲ" (೫-೩)

"ಬೂರುಗನ ಮರನ ಬೆಳಸಿದೋಲ್" (೫-೨೯)

"ನರರೊಳಗೆ ನಿಂದಕರ ಮನೆಯೆ ಚಾಂಡಾಲರಾಲಯ" (೫-೨೯)

"ಬಲವಂತರೊಡನೆ ಪಗೆಸಲ್ಲ" (೬-೨)

"ದೀಪವ ಪತಂಗ ಬಡೆದಪನೆಂದು" (೬-೮೧)

"ವೈರಿಯುಮಾಗೆಮರೆಬೀಳೆಕಾಯ್ವ ಧರ್ಮ" (೬-೮೨)

"ಮುಂಗಯ್ಯ ಕಂಕಣವನೋಡೆ ಕನ್ನಡಿಯೇಕೆ" ೭-೪೫

"ನೊಂದವನನುಳಿದು ಮತ್ತೊಬ್ಬ ಬಳಲ್ವನೆಂದ" (೮-೭)

"ಭಕ್ತರಧಿಕ ಮಾಹೇಶರಿಂದ" (೮-೧೫)

"ಗುರುಮುನಿಯೆ ಹರಕಾಯ
ಹರ ಮುನಿದೊಡಂ ಕರ್ತುಗುರುಕಾಯ್ವ
ಹೆತ್ತವರು ಬಾಲಕನ ಅವಗುಣವನೆಣಿಸುವರೇ?" (೯-೬೫)

"ಪಟ್ಟದಾನೆಯಕೊಂದು ನರಿಯ ಪಾಲಿಪುದುಂಟೇ?" (೧೧-೪೪) ಇತ್ಯಾದಿ.

೧೧. ಸಂಭಾಷಣಾತಂತ್ರ : ಚೋರಬಸವೇಶ್ವರ ಕಾವ್ಯವು ಹರಿಹರನು ಚಾಮರಸನಿಗೆ ಹೇಳಿದಂತೆ ಸಂವಾದ ರೂಪದಲ್ಲಿದ್ದು, ಈ ತಂತ್ರ ಕಾವ್ಯಕ್ಕೊದಗಬಹುದಾಗಿದ್ದ ಏಕತಾನತೆಯನ್ನು ಹೋಗಲಾಡಿಸಿ ಪರಿಣಾಮರಮ್ಯತೆಯನ್ನು ನೀಡಿದೆ.

ಉದಾಹರಣೆಗೆ ವಿರಾಗಿ ವೇಷದ ಚಾಮರಸನು ರಂಗಸಾಲೆಗೆ ಬರಲು 'ಹರಿಹರ'ನು ಯೋಗ್ಯೋಪಚಾರ ಗಳಿಂದ ಸತ್ಕರಿಸಿ

ಯೆತ್ತಣಿಂಬಂದೆ ಪುರವಾವುದ್ಯೆ ಪೆಸರೇನುವಿರತಿಕೈಕೊಂಡುದೇಕೆ ಪಾಳಿಯಿಂದುಸುರು.... (೧-೨೯ ಮತ್ತು ೩೦) ಎಂದು ಪ್ರಶ್ನಿಸಲು

‘‘ಗುರುವೆನಾಂ ಪುಟ್ಟಿದೆಡೆಗದುಗು ಚಾಮರಸನೆಂ

ಬರು ಎನ್ನ ....’’ (೧-೩೧) ಎಂದುತ್ತರಿಸುತ್ತಾನೆ.

ಎನ್ನ ಭವ್ಯಜಾಡ್ಯಪರಿವಂತೆ ಉಪದೇಶವಂ

ಇನ್ನಿತ್ತು ರಕ್ಷಿಸೈ .... (೧-೩೬) ಎಂದು ಚಾಮರಸನು ಬಿನ್ನವಿಸಿಕೊಳ್ಳಲು

‘‘ಕೇಳೆಲವೊ ಚಾಮರಸ ನೀ ಮುನ್ನ ನರಸ್ತುತಿಯ

ಪೇಳಿದ ಮಹಾದೋಷವಖಿಲ ತೀರ್ಥ ಕ್ಷೇತ್ರ

ಜಾಲದೊಳು ಪೋಗಾಡಲಿಲ್ಲ ನೀನೆಂತು ಧನ್ಯನುಮಪ್ಪೆಯೆನಲು ಭಯದಿ

ಫಾಲಲೋಚನ ವಿರೂಪಾಕ್ಷ ಪ್ರಸಾದದಿ ನೀ

ಪೇಳಿದಂತಿರ್ಪೆನಿದಕೀಗಪ್ರಾಯಶ್ಚಿತ್ತ

ಲೀಲೆಯಿಂದಿತ್ತು ರಕ್ಷಿಪುದೆನಲು ಹರಿಹರ ಶಿವಾಚಾರ್ಯನಿಂತೆಂದನು’’ (೧-೩೭)

ಅಲ್ಲಲ್ಲಿ

‘ಎಲೆಮಗನೆ ನೀನು ಲಾಲಿ ಪೆನೆನಲು ಬಿತ್ತರಿಪೆ‘ (೧-೪೧)

‘ಪ್ರೇಮದಿಂ ಕೇಳೆಲವೊ ಚಾಮರಸ ಸತ್ಕಥೆಯ’ (೨-೨)

ಪ್ರೇಮದಿಂ ಕೇಳೇಕ ಚಿತ್ತದಿಂ ನಿಶ್ಚೈಸಿ (೨-೧೫)

ಚಾಮರಸ.........

‘ಕೇಳು ಚಾಮರಸಾಂಕ’ (೩-೨)

ಪ್ರೇಮದಿಂ ಚಿತ್ತವಿಸು (೩-೩)

‘ಸುಹಿತದಿಂ ಕೇಳು’ (೩-೯)

‘ಭೂಸುರೋತ್ತಮ ಕೇಳು’ (೫-೨)

ಪೌರಾಣಿಯಿಂತೆಂದನೆಲೆ ಭೂವರ... (೫-೨) ಎಂದು ಹರಿಹರನು ಬಸವಣ್ಣನ ಚರಿತೆಯನ್ನು ಬಿತ್ತರಿಸುವಂತೆ ಶಂಕರಕವಿಯು ಕಥೆ ಹೆಣೆದಿದ್ದಾನೆ. ಮಾತ್ರವಲ್ಲ ಬಸವಣ್ಣನ ಮಹಿಮೆಯನ್ನು ‘ಪೌರಾಣಿ’ಯು ಕಾಶ್ಮೀರದ ಮಾಂಡವ್ಯಪುರದರಸು ‘ಮಹಾದೇವಭೂಪಾಲ’ನಿಗೆ ಬಿತ್ತರಿಸುವಾಗ ಅನೇಕ ಶಿವಭಕ್ತರ ಕಥೆಗಳನ್ನು ಹೇಳುವಲ್ಲಿ ‘ಸಂಭಾಷಣಾತಂತ್ರ’ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ. ‘ಉದ್ದಾನವೀರದೇಶಿಕ’ನು ‘ಚಾಮರಸ’ನಿಗೆ ಲಿಂಗದೀಕ್ಷೆನೀಡುವ ಪ್ರಸಂಗಗಳು ತರ್ಕಬದ್ಧ ಪ್ರಶ್ನೋತ್ತರಗಳ ಮೂಲಕ ಆತ್ಮೀಯವಾಗಿ, ಸ್ವಾರಸ್ಯಕರ ವಾಗಿ ಮೂಡಿಬಂದಿವೆ.

‘‘ಎಲೆ ಮಗನೆ ನೀನುಬೆಸಗೊಂಬ ಸತ್ಕ್ರಮಮದುವೆ

ಸುಲಭವಲ್ಲಖಿಳಶೈವದ ಪರಿಯು ತಾನಲ್ಲ (೧೧-೧೬)

ಶ್ರೀಗುರುವೆಯಂಗಾದಿ ಸುಮುಖ್ಯ ಪೂರ್ವಗುಣ

ನೀಗಿ ನಿಜ ಸುಖಿಯಪ್ಪ ಪರಿಯೆಂತು ವಿಸ್ತರಿಪು

ದೀಗೆಂದು ...." (೧೧-೨೦)

"ತನಯ ಕೇಳಿಂತು ಷಡ್ವಿಧಲಿಂಗಂಗಳನು" (೧೧-೩೩) ಇತ್ಯಾದಿ

೧೨. ಛಂದಸ್ಸು : ಚೋರಬಸವೇಶ್ವರಕಾವ್ಯವು, ವಾರ್ಧಕ ಷಟ್ಪದಿ ಛಂದಸ್ಸಿನಲ್ಲಿ ರಚಿತವಾದ ಕೃತಿ. ಒಟ್ಟು ೧೩ ಸಂಧಿಗಳು, ೭೫೫ವಾರ್ಧಕ ಷಟ್ಪದಿಗಳಿವೆ. ಸಂಸ್ಕೃತಭೂಯಿಷ್ಠವಾದ ಸ್ತುತಿ ಪದ್ಯಗಳು ಪ್ರಾರಂಭ ದಲ್ಲಿ ಬರುತ್ತವೆ. ಇದಕ್ಕೂ ಮುನ್ನ 'ಸೂಚನೆ'ಯಲ್ಲಿ ಪ್ರತಿಸಂಧಿಯು ಒಳಗೊಳ್ಳುವ ಕಥಾವಿಷಯದ ಮುಖ್ಯ ಸೂತ್ರ ಕಾಣಸಿಗುತ್ತದೆ. ೯ನೆಯ ಸಂಧಿಯಲ್ಲಿ ಪೌರಾಣಿಯಿಂದ ಬಸವಮಹಿಮೆಯನ್ನು ಕೇಳಿದ ಮಹಾದೇವ ಭೂಪಾಲನು ಬಸವನನ್ನು ಸ್ತುತಿಸುವ ೮ ಪದ್ಯಗಳು ಭಾಮಿನಿಷಟ್ಪದಿಯಲ್ಲಿವೆ. ವೈವಿಧ್ಯತೆಗಾಗಿ ಬಳಸಿರುವಂತೆ ಕಂಡರೂ ಶಂಕರಕವಿಯು 'ಭಾಮಿನಿ'ಯೆಡೆಗೂ ತನ್ನ ಒಲವಿರುವುದನ್ನು ಸೂಚ್ಯವಾಗಿ ಪ್ರಕಟಿಸುತ್ತಾನೆ. ಈ ಕಾವ್ಯದಲ್ಲಿ ಆದಿಪ್ರಾಸವು ನಿಯತವಾಗಿ ಪಾಲಿಸಲ್ಪಟ್ಟಿದೆ. ವಾರ್ಧಕ ಷಟ್ಪದಿಗೆ ಉದಾಹರಣೆಗೆ

ಭಕ್ತ ದೇಹಿಕ ದೇವನೆಂಬ ಶ್ರುತಿಮತವಿಹುದು

ಭಕ್ತರ ಉದಾಸಿನವಮಾಡಿದೇವನ ಭಜಿಸೆ

ವ್ಯಕ್ತಿಯಪ್ಪುದೆ ಫಲಂವ್ಯರ್ಥವಲ್ಲದೆ ಭಕ್ತರಧಿಕಮಾಹೇಶಗಿಂದ (೮-೧೫)

ಭಾಮಿನಿಗೆ ಉದಾ. ಮುಂದೆ ವೃಷಭಾವತಾರದ ಲಿನೀ

ನಿಂದುಮೌಳಿಯ ಪೊತ್ತುಚರಿಸಿಮ

ತ್ತೊಂದುರೂಪುಶಿಲಾದರಾಜಗೆ ಪುತ್ರ ನೀನಾದಿ (೯-೭)

....

ಅನುಪ್ರಾಸಕ್ಕೆ ಉದಾಹರಣೆ

ಗುರು ಗುರೂತ್ತಮ ಗುರು ಗುರುಪ್ರವರಗುರು ಪ್ರಭುವೆ

ಗುರುವರೇಣ್ಯಾಗಣ್ಯ ಪುಣ್ಯ ಸದ್ಗುಣಶ್ರೇಣ್ಯ..........

"ವಾರ್ಧಕವು ಕಥನ ವರ್ಣನೆಗಳಿಗೆ ಚೆನ್ನಾಗಿ ಒಗ್ಗುದ ಛಂದಸ್ಸು"[೧೩]

ಎಂಬ ಮಾತುರಾಘುವಾಂಕನಲ್ಲಿ ಸಾರ್ಥಕವಾಗಿದೆ ಎಂಬಮಾತನ್ನು ಶಂಕರಕವಿಗೂ ಯಥಾವತ್ತಾಗಿ ಅನ್ವಯಿಸ ಬಹುದು.

ಹರಿಹರನು ತನ್ನ ಕಥನಕಾವ್ಯಗಳಲ್ಲಿ ತೋರಿದ ಸಿದ್ಧಿಯನ್ನು 'ರಾಘವಾಂಕ'ನು ತನ್ನ ಹರಿಶ್ಚಂದ್ರಕಾವ್ಯದಲ್ಲಿ ತೋರಿರುವ ನಾಟಕೀಯತೆಯನ್ನು ಈ ಕಾವ್ಯದಲ್ಲಿ ಶಂಕರಕವಿಯು ಸಾಧ್ಯವಾದಷ್ಟೂ ಅನುಸರಿಸುವ

ಪ್ರಯತ್ನಮಾಡಿದ್ದಾನೆ. ಒಂದು ರೀತಿಯಲ್ಲಿ ನೋಡಿದರೆ ಹರಿಹರ, ರಾಘವಾಂಕರ ಶೈಲಿಯ ಆಕರ್ಷಣೆಯ ಸೆಳವಿಗೆ ಸಿಕ್ಕ ಯಾರೂ ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲಾರರು. ಅದಕ್ಕೆ ಶಂಕರಕವಿಯೂ ಹೊರತಲ್ಲ. ಈತನ ಬರವಣಿಗೆಯಲ್ಲಿ ಪ್ರಸಾದಗುಣವಿದೆ. ಸಮತೆ, ಮಾಧುರ್ಯ ಸೌಕುಮಾರ್ಯ, ಕಾಂತಿಗಳಿವೆ. ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಸಮಾಧಿಗುಣಗಳಿಗೂ ಕೊರತೆಯಿಲ್ಲ. ಉತ್ತಮಕವಿತಾಶಕ್ತಿ, ಕಲ್ಪನಾವಿಲಾಸಕ್ಕೆ ಶಂಕರ ಕವಿ ನಿದರ್ಶನವಾಗಿ ನಿಲ್ಲಬಲ್ಲ, ಭಕ್ತಿಯ ಆರ್ತತೆ ಆವೇಶಗಳನ್ನು ವರ್ಣಿಸುವಲ್ಲಿ, ಪರತತ್ತ್ವ ಸ್ವರೂಪಗಳನ್ನು ತಿಳಿಸುವಲ್ಲಿ ಕವಿ, 'ಹರಿಹರ'ನನ್ನೇ ನೆನಪಿಸುತ್ತಾನೆ.

೧೩. **ಚಾರಿತ್ರಿಕ ವಿವೇಚನೆ :** ಶಂಕರಕವಿಯ 'ಚೋರಬಸವೇಶ್ವರ ಕಾವ್ಯ'ವು ಪ್ರಧಾನವಾಗಿ ಕನ್ನಡದ ಮೊದಲ ವೀರಶೈವ ಪುರಾಣವೆಂದು ಖ್ಯಾತಿವೆತ್ತ 'ಭೀಮಕವಿಯ ಬಸವಪುರಾಣ'ವನ್ನು ಅನುಸರಿಸಿರ ಬರೆದ ಕೃತಿ. 'ಬಸವ ಪುರಾಣ'ವೂ ಭೀಮಕವಿಯ ಪೂರ್ಣಸ್ವತಂತ್ರ ಕೃತಿಯೇನಲ್ಲ. ತೆಲುಗಿನ ಪಾಲ್ಕುರಿಕೆ ಸೋಮನಾಥ 'ವಿರಚಿತ' ಬಸವಪುರಾಣಮು ಕೃತಿಯರೂಪಾಂತರ. ಹೀಗಿರುವಾಗ ಚಾರಿತ್ರಿಕ ದೃಷ್ಟಿಯಿಂದ ಅವಲೋಕಿಸುವಾಗ, ಶಂಕರಕವಿ ಹೇಳಿದ ಸಂಗತಿಗಳ ಹಿಂದೆ ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಗಳ ಕೃತಿಗಳ ಪ್ರಭಾವದ ನೆರಳಲ್ಲೇ ಸಾಗಬೇಕಾಗುತ್ತದೆ. 'ಹೀಗಾಗಿ ಪುರಾಣಕಾವ್ಯಗಳ ಚೌಕಟ್ಟಿನಲ್ಲಿ ಬರೆಯಲ್ಪಟ್ಟಿರುವ ಈ ಚೋರ ಬಸವೇಶ್ವರ ಕಾವ್ಯದಲ್ಲಿ ಚಾರಿತ್ರಿಕ ಮಹತ್ವದ ಸಂಗತಿಗಳು ಅಷ್ಟಾಗಿ ಕಾಣಸಿಗುವುದಿಲ್ಲ. ಸಾಂದರ್ಭಿಕವಾಗಿ ಕಾಣಸಿಗುವ ವಿವರಗಳ ಆಧಾರದ ಮೇಲೆ ಕೆಲವೊಂದನ್ನು ಈ ಕೆಳಕಂಡಂತೆ ಗುರುತಿಸಬಹುದು.

೧. ಬಸವಕಾಲೀನ ಶರಣರ ಉಲ್ಲೇಖ ಈ ಕೃತಿಯ ಮೊದಲ ಚಾರಿತ್ರಿಕ ವೈಶಿಷ್ಟ್ಯ ಬಸವಣ್ಣನ ಮಹಿಮೆಯನ್ನು ಕಣ್ಣಾರೆಕಾಣಲು ಆಚಾರ್ಯರೇವಣಸಿದ್ದೇಶ, ಮರುಳಸಿದ್ಧಾಚಾರ್ಯ, ಏಕೋರಾಮಾಚಾರ್ಯ, ಶ್ರೀಪಂಡಿತಾಚಾರ್ಯ, ಮಡಿವಾಳಮಾಚರಸ, ಸೊಡ್ಡಳ ಬಾಚರಸ ಕಿನ್ನರಸಹೊನ್ನಯ್ಯ, ಹಡಪದಪ್ಪಣ್ಣ, ಪಡಿಹಾರಿ ಉತ್ತಣ್ಣ, ಹೊಡೆಹುಲ್ಲ ಬಂಕಯ್ಯ, ಶಿವರಾತ್ರಿ ಸಂಕಯ್ಯ, ಮೃಡರೂಪಕಕ್ಕಯ್ಯ, ನಿಜಲಿಂಗ ಚಿಕ್ಕಯ್ಯ, ಬಂಕಯ್ಯ ಶಂಕರಯ್ಯ, ಕಲಕೇತ ಕೊಡಗದ ಮಾರ, ಕನ್ನದ ಮಾರ, ನಿರ್ಮಲದ ಹರಳಯ್ಯ ಮೊದಲಾದ ಭಕ್ತರು ಒಲಿದು ಬಂದು ಮನಬಂದ ಕಾಯಕವಿಡಿದು ಜಂಗಮವನ್ನು ಭಜಿಸುತ್ತಿದ್ದರು.

೨. ಬಸವಣ್ಣನ ಐಕ್ಯದ ನಂತರ ಶರಣರು ಬಿಜ್ಜಳನನ್ನು ವಧಿಸಿ ಉಳುವಿಗೆ ಬರುವರು ಎಂದು ಹರಳಯ್ಯನ ಪತ್ನಿ 'ಕಲ್ಯಾಣಿ'ಯು ಭವಿಷ್ಯದರ್ಶಿಸಿ ಆಡುವ ಮಾತಿನಲ್ಲಿ ಕಲ್ಯಾಣಕ್ರಾಂತಿಯ ತರುವಾಯ ಶರಣರು ನಾಡಿನ ವಿವಿಧೆಡೆಗೆ ಚದುರಿಹೋದ ಚಾರಿತ್ರಿಕ ಸಂಗತಿಯ ಸೂಚನೆಯಿದೆ.

೩. ಬಸವಣ್ಣನು ಉಪನಯನವನ್ನು ನಿರಾಕರಿಸುತ್ತ ಶೈವ, ಶಾಕ್ತ, ಗಾಣಪತ್ಯ, ವೈಷ್ಣವ, ಬೌದ್ಧ ಚಾರ್ವಾಕಾದಿಷಣ್ಮತಗಳನ್ನು ಮೀರಿ ವೀರಶೈವವನ್ನು ಅಪ್ಪಿಕೊಂಡಿದ್ದೇನೆನ್ನುತ್ತಾನೆ. ಇಲ್ಲಿ ಬಸವಯುಗದಲ್ಲಿ ವಿವಿಧ ಶೈವ, ವೈಷ್ಣವ, ಜೈನ, ಬೌದ್ಧ ಮೊದಲಾದ ಧರ್ಮಗಳು ಸಂಘರ್ಷವನ್ನು ಎದುರಿಸುತ್ತಿದ್ದ ಚಾರಿತ್ರಿಕ ಸಂಗತಿ ತಿಳಿದುಬರುತ್ತದೆ.

೪. ಹಲವಾರು ಶಿವಶರಣರ ಚರಿತ್ರೆಗಳು ಸಾಂದರ್ಭಿಕವಾಗಿ ಈ ಕೃತಿಯಲ್ಲಿ ಉಲ್ಲೇಖಗೊಂಡಿವೆ. ಬಸವಣ್ಣನ ಮಹಿಮೆ ಕರ್ನಾಟಕದಾಚೆ ಕಾಶ್ಮೀರಕ್ಕೂ ಹಬ್ಬುತ್ತದೆ. ಕಾಶ್ಮೀರದ ಅರಸು ಮಹಾದೇವ ರಾಜನು ಪತ್ನಿ ಗಂಗಾದೇವಿಯೊಡನೆ ಕಲ್ಯಾಣಕ್ಕೆ ಬಂದು ಕಟ್ಟಿಗೆಯ ಕಾಯಕ ಸ್ವೀಕರಿಸಿ ಮೋಳಿಗೆಯ ಮಾರಯ್ಯನಾದನು. ಇದನ್ನೇ ಹಿನ್ನೆಲೆಯಾಗಿಟ್ಟುಕೊಂಡು ಶಂಕರಕವಿಯು ತನ್ನ ಜಂಗಮರನ್ನು ಕದ್ದೊಯ್ದು ಬಸವನನ್ನು ಕೊಲ್ಲಿಸಲೆಳಸಿ ಆತನ ಮಹಿಮೆಗೆ ಬಾಗಿ ಬರುವ 'ಮಹಾದೇವಭೂಪಾಲ'ನನ್ನಾಗಿ ಚಿತ್ರಿಸಿದ್ದಾನೆ. ಇಲ್ಲಿ.

೫. ಚಾಮರಸನ ಬಗೆಗೆ ಆತನ ಕೃತಿಯಿಂದ ಏನೂ ತಿಳಿದುಬರುವುದಿಲ್ಲ. ಶಂಕರಕವಿಯು ಈತನು 'ಗದಗ'ದವನೆಂದು ತಿಳಿಸುತ್ತಾನೆ. ಗುರುರಾಜ ಚಾರಿತ್ರವೂ ಹೀಗೆಯೇ ಹೇಳುತ್ತದೆ.[೧೪]

ಹೀಗೆ ಅಲ್ಲೊಂದು, ಇಲ್ಲೊಂದು ಎಂಬಂತೆ ಸಿಗುವ ವಿವರಗಳು, ಮತ್ತು ಮೂಲತಃ ಪಾಲ್ಕುರಿಕೆ ಸೋಮನಾಥನನ್ನೇ ಹೆಚ್ಚಾಗಿ ಕನ್ನಡಿಸಿರುವ ಭೀಮಕವಿಯನ್ನು ಶಂಕರಕವಿಯು ಅನುಸರಿಸಿರುವುದರಿಂದ ಈ ಕೃತಿಯು ಚಾರಿತ್ರಿಕವಾಗಿ ಅಷ್ಟೇನೂ ಮಹತ್ವ ಪಡೆಯುವುದಿಲ್ಲ.

೫.೪. ವೀರಶೈವ ಪುರಾಣವಾಗಿ ಚೋರಬಸವೇಶ್ವರ ಕಾವ್ಯ

ಭಾರತೀಯ ವಾಙ್ಮಯ ಒಂದು ಕಡೆ ಶ್ರುತಿ, ಸ್ಮೃತಿ ಪುರಾಣಗಳಿಂದ, ಇನ್ನೊಂದು ಕಡೆ ಇತಿಹಾಸಗಳಿಂದ ರೂಪುಗೊಂಡಿದೆ.[೧೫]

'ಪುರಾಣ'ವೆಂದರೆ ಪ್ರಾಚೀನವಾದದ್ದು ಎಂದರ್ಥ "ಪುರಾತನ ಕಾಲದಿಂದ ಬಂದಿರತಕ್ಕದ್ದು" ಎಂದು ವಾಯುಪುರಾಣ, 'ಹಿಂದಿನ ಘಟನೆಗಳ ದಾಖಲೆಗಳನ್ನೊಳಗೊಂಡದ್ದು' ಎಂದು ಮತ್ಸ್ಯಪುರಾಣ ಹೇಳುತ್ತವೆ. "Formulation of definition is waste of time!" ಪುರಾಣದ ಲಕ್ಷಣೀಕರಣ ಕಾಲಹರಣವಷ್ಟೇ! ಎಂಬ ಸ್ವಾರಸ್ಯಕರ ಹೇಳಿಕೆಯೂ ಉಂಟು ಹೀಗಾಗಿ ಪುರಾಣಗಳೆಂದರೆ "ಒಂದು ನಿರ್ದಿಷ್ಟ ಗ್ರಂಥವರ್ಗ" ಎಂಬ ಲಕ್ಷಣೀಕರಣ ಅಂತಿಮವಾಗಿ ನಿಲ್ಲುತ್ತದೆ.[೧೬]

ಪುರಾಣಗಳು ತಮ್ಮ ಹೆಸರಿಗೆ ತಕ್ಕಂತೆ ಪುರಾತನಕಾಲದಿಂದಲೂ ಸಾಗಿಬಂದಿರುವ ಸೃಷ್ಟಿವರ್ಣನೆ ಸಾಂಕೇತಿಕ ಕಟ್ಟುಕತೆ ರೂಪಕ, ಸಂಪ್ರದಾಯ ಮತ, ಸಮಾಜ, ನಿಯಮ ಮುಂತಾದವುಗಳ ಜನಪ್ರಿಯ ನಿರೂಪಣೆಗಳು ಇದೇ ಪುರಾಣಗಳ ಮೂಲೋದ್ದೇಶ. ಉಚ್ಚತಮವಾದ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಸತ್ಯಗಳನ್ನು ಕಥೆ, ಆಖ್ಯಾನ, ಸಂಕೇತ, ಅಡ್ಡಕಥೆ, ಪವಾಡ, ದೃಷ್ಟಾಂತಗಳ ಮೂಲಕ ಜನಸಾಮಾನ್ಯರಿಗೆ ತಿಳಿಯಪಡಿಸುವುದೇ ಪುರಾಣದ ಗುರಿ[೧೭] ಒಂದು ಪ್ರಮುಖವಾದ ಕಥೆ ಪ್ರಚಲಿತವಾಗಿದ್ದರೆ ಅದರ ಸುತ್ತ ನೂರಾರು ಉಪಕಥೆಗಳು ಹೆಣೆದು ಕೊಂಡಿರುತ್ತವೆ. ಪ್ರತಿಯೊಂದು ಉಪಕಥೆಯೂ ಒಂದೊಂದು ತಾತ್ವಿಕ ಸತ್ಯ ಅಥವಾ ನೈತಿಕ ಸೂತ್ರವನ್ನು ಸ್ಪಷ್ಟೀಕರಿಸುತ್ತದೆ. ಈಮಾತನ್ನು ಕನ್ನಡ ವೀರಶೈವ ಪುರಾಣಗಳಿಗೂ ಅನ್ವಯಿಸಲಬಹುದು. ಆದರೆ ವೀರಶೈವ ಪೂರಾಣಗಳಿಗೆ ತನ್ನದೇ ಆದ ವಿಶಿಷ್ಟ ಲಕ್ಷಣಗಳಿವೆ ಅವನ್ನು ಕುರಿತು ಎಂ.ಆರ್.ಶ್ರೀನಿವಾಸಮೂರ್ತಿ,

[illegible]

ಸದಾನಂದ ನಾಯಕ. ಆರ್.ಸಿ.ಹಿರೇಮಠ, ಎಸ್.ವಿದ್ಯಾಶಂಕರ ಮೊದಲಾದ ವಿದ್ವಾಂಸರು ವಿಸ್ತಾರವಾಗಿ ವಿವೇಚಿಸಿದ್ದಾರೆ.[೧೮]

''ವೀರಶೈವಸಾಹಿತ್ಯ ಚರಿತ್ರೆಯಲ್ಲಿ ಶಿವಶರಣರ ಸಾಹಿತ್ಯದ ತರುವಾಯ ಅವತರಿಸಿದುದು ಶಿವಕವಿ ಸಾಹಿತ್ಯ ಈ ಶಿವಕವಿ ಸಾಹಿತ್ಯದ ಬಹುದೊಡ್ಡ ಪಾಲು ಪುರಾಣಗಳು''[೧೯]

ಭೀಮಕವಿಯ ಬಸವಪುರಾಣವೇ ಮೊದಲ ವೀರಶೈವ ಪುರಾಣಕೃತಿ. ಈ ಕನ್ನಡ ಬಸವಪುರಾಣವನ್ನು ಆಧಾರವಾಗಿಯೋ ಆದರ್ಶವಾಗಿಯೋ ಇಟ್ಟುಕೊಂಡು ನಾಲ್ಕು ನೂರಕ್ಕೂ ಮೀರಿ ಕೃತಿಗಳು ಕನ್ನಡ ಹಾಗೂ ಇತರ ಭಾಷೆಗಳಲ್ಲಿ ರಚಿತವಾಗಿವೆ[೨೦] ಎಂಬ ವಿಷಯವನ್ನು ಮನದಂದರೆ ವೀರಶೈವ ಪುರಾಣಗಳ ರಚನೆಯ ವೈವಿಧ್ಯತೆ ಅರಿವಾಗುತ್ತದೆ.

ಅವತಾರದ ಕಲ್ಪನೆ, ಶಿವಭಕ್ತರ ಕಥೆ, ವೀರಶೈವ ತತ್ವನಿರೂಪಣೆ, ರಾಜಕೀಯ ಅಂಶಗಳು, ''ವೀರಶೈವ ಮತಾಧಿಕ್ಯಸ್ಥಾಪನೆ. ಪವಾಡಗಳು ಮೊದಲಾದವುಗಳನ್ನು ಒಳಗೊಂಡಿರುವುದು ವೀರಶೈವ ಪುರಾಣದ ಮುಖ್ಯ ಲಕ್ಷಣವೆನಿಸಿದೆ. ವೀರಶೈವ ಪುರಾಣವೆಂದರೆ ವೀರಶೈವ ಧರ್ಮಾನುಯಾಯಿಗಳಾಗಿ ಬಾಳಿದ ಮಹಾಪುರುಷರ ಮತ್ತು ಅವರು ಬೆಳಗಿದ ವೀರಶೈವ ಧರ್ಮದ ಸಂಬಂಧವಾದುದೇ ಪುರಾಣ''[೨೧] ಎಂದು ಸೂತ್ರಪ್ರಾಯವಾಗಿ ಹೇಳಲಾಗುತ್ತದೆ.

ಈ ವೀರಶೈವ ಪುರಾಣ ಲಕ್ಷಣಗಳ ಹಿನ್ನೆಲೆಯಲ್ಲಿ 'ಚೋರಬಸವೇಶ್ವರ ಕಾವ್ಯ'ದ ಸ್ಥಾನವನ್ನು ಹೀಗೆ ಅವಲೋಕಿಸಬಹುದು.

೧. ಅವತಾರದಕಲ್ಪನೆ ಪ್ರಧಾನಪುರುಷರು ಬಹುವಾಗಿ ಪರಶಿವ ಶಿವೆಯ ಅಂಶ ಇಲ್ಲವೇ ಅವರ ಪರಿವಾರದವರಾಗಿದ್ದು, ಕಾರಣಾಂತರಗಳಿಂದ ಭೂಲೋಕದಲ್ಲಿ ಅವತರಿಸಿದವರಾಗಿರುತ್ತಾರೆ. ಮತ್ತು ಈ ಲೋಕದ ಮಣಿಹಮುಗಿದೊಡನೆ ಒಂಟಿಯಾಗಿಯೋ ಸಾಮೂಹಿಕವಾಗಿಯೋ ಮತ್ತೆ ಕೈಲಾಸವನ್ನು ಸೇರುತ್ತಾರೆ. ಕಥಾನಾಯಕನು ಅವತಾರ ಪುರುಷನೆಂಬುದನ್ನು ಶಿಶುತಾಯಿಯ ಗರ್ಭದಲ್ಲಿದ್ದಾಗ, ಅದುಜನಿಸಿ ಈ ಲೋಕಕ್ಕೆ ಬಂದಾಗ ಕೆಲವು ಅಘಟಿತ ಘಟನೆಗಳ ಮೂಲಕ ತಿಳಿಸುವುದು. ಶಿವನೇ ವೇಷಾಂತರದಿಂದ ಬಂದು ಶಿಶುವನ್ನಾಶೀರ್ವದಿಸುವಂತೆ ಹೇಳುವುದು ವೀರಶೈವ ಪುರಾಣಗಳ ಪ್ರಮುಖ ಲಕ್ಷಣವಾಗಿದೆ. 'ಈ ತಂತ್ರ' ಚೋರಬಸವೇಶ್ವರ ಕಾವ್ಯದಲ್ಲಿಯೂ ಕಂಡುಬರುತ್ತದೆ. ಬಸವೇಶ್ವರನ ಜನನದ ಹಿನ್ನೆಲೆಯನ್ನು ಶಂಕರ ಕವಿಯು ಈ ಲಕ್ಷಣದ ಹಿನ್ನೆಲೆಯಲ್ಲಿಯೆ ನಿರೂಪಿಸಿದ್ದಾನೆ.

'ಕೈಲಾಸದಲ್ಲಿ ನೆರೆದಿದ್ದ ಶಿವನಸಭೆಗೆ ನಾರದರು ಆಗಮಿಸುತ್ತಾರೆ ಭೂಲೋಕದಲ್ಲಿ ಜೈನಾದಿ ಅನ್ಯಮತಗಳ ಅಟ್ಟಹಾಸದಲ್ಲಿ ಶಿವಮತವು ಮಂಕಾಗಿರುವುದನ್ನು ತಿಳಿಸಿ, ಸ್ವತಃ ಶಿವನೇ ಹೋಗಿ ಉದ್ಧರಿಸಬೇಕೆಂದು ಕೇಳಿ ಕೊಳ್ಳುತ್ತಾನೆ. ಆಗ ಪರಶಿವನು ತನ್ನದೇ ರೂಪವಾದ 'ನಂದಿ'ಯನ್ನು ಕರೆದು ನಿನ್ನ ಹಿಂದೆ ಪ್ರಮಥೇಂದ್ರರನ್ನು

[illegible]

ಕಳುಹಿಸುತ್ತೇನೆ. ಮಂಡಗೆಪುರದಲ್ಲಿ ನಿನ್ನ ವ್ರತದಲ್ಲಿರುವ ಮಾದರಸ ಮಾದಂಬೆಯರ ಉದರದಲ್ಲಿ ಜನಿಸು ಎಂದು ಅಪ್ಪಣೆ ಮಾಡುತ್ತಾನೆ. ಶಿವನಾಜ್ಞೆಯಂತೆ 'ನಂದೀಶ'ನು ಬಾಗವಾಡಿಯಲ್ಲಿ ಪ್ರಸನ್ನನಾಗುತ್ತಾನೆ.

ಶಿವಭಕ್ತ ಸುತನಾಕಾಂಕ್ಷೆಯಿಂದ ಶಿವವ್ರತಸ್ಥರಾಗಿದ್ದ ದಂಪತಿಗಳೀರ್ವರು ಒಂದಿರುಳು ಸಮಾಗಮ ಹೊಂದಿ ಮಲಗಿರಲು ಒಂದು ಕನಸಾಗುತ್ತದೆ. ಬಾಗವಾಡಿಯ ಆರಾಧ್ಯದೈವ ಶಿವರೂಪಿ ನಂದಿಯೇ 'ನಾ ಬಸವ ಶಿಶುವಾಗಿ ಬರುವೆ' ನನ್ನ ಜನನ ಕಾಲದಲ್ಲಿ ಇಷ್ಟಲಿಂಗವನ್ನು ಮರೆಯದೇ ಧರಿಸಿ ಎಂದು ಹೇಳುತ್ತಾನೆ(೨-೨೨).

ಗರ್ಭವತಿ ಮಾದಾಂಬೆಗೆ ನವಮಾಸಗಳು ಮೀರಿದರೂ ಹೆರಿಗೆ ಆಗಲಿಲ್ಲ. ಇದು ಲೋಕಸಹಜವಲ್ಲ, ಶಿವನೇ ಬಲ್ಲನೆಂದು ಜನರು ಅಚ್ಚರಿಪಡುತ್ತಿದ್ದರು. ಚಿಂತಾಸಾಗರದಲ್ಲಿ ಮುಳುಗಿದ ಮಾದರಸನು, ಸಂಗಮೇಶನ ವೃಷಭರನ್ನು ನೆನೆವುತ ವಿಭೂತಿಯನ್ನು ಕೊಡಲು ಕುಂಭಿನಿಗೆ ಎರಡನೆ ಶಂಭುವೆನಿಸುವ ಬಸವೇಶ ಜನಿಸುತ್ತಾನೆ (೨-೨೮).

ಹರ್ಷಾಬ್ಧಿಯಲ್ಲಿ ಮುಳುಗಿದ ದಂಪತಿಗಳು ಲಿಂಗಧಾರಣೆ ಮಾಡಿಸುವುದನ್ನೇ ಮರೆಯುತ್ತಾರೆ. ಹುಟ್ಟಿ ಏಳು ದಿನಗಳಾದರೂ ಶಿಶು ಮೊಲೆಹಾಲು ಕುಡಿಯಲಿಲ್ಲ, ಅಳು ನಿಲ್ಲಿಸಲಿಲ್ಲ, ಕೂಡಲಸಂಗಮೇಶನೇ 'ಜಂಗಮರೂಪ'ದಲ್ಲಿ ಬಂದು ಲಿಂಗಧಾರಣೆ ಮಾಡಿ ಬಸವಾ ಎಂದು ಹೆಸರಿಡಲು ಮಗು ಮೊಲೆಹಾಲು ಕುಡಿಯುತ್ತದೆ.

'ಬಸವಣ್ಣ'ನು ವಿವಾಹನಂತರ ಗಣಪರ್ವ ಮಾಡಿಸಲು ಕಪ್ಪಡಿಸಂಗಮಕ್ಕೆ ಬಂದು ಶಿವಮೂರ್ತಿಯನ್ನು ಕಂಡು ತನಗೆ ಲಿಂಗಧರಿಸಿದ ಗುರು ಈತನೇ ಎಂದು ಸಿದ್ಧವಾಗದಿದ್ದಲ್ಲಿ ಶಿರವನೊಪ್ಪಿಸುವೆನೆಂದು ಖಡ್ಗದಲ್ಲಿ ಇರಿದುಕೊಳ್ಳಲು ಅಣಿಯಾಗುತ್ತಾನೆ. ಶಿವನು ಪ್ರತ್ಯಕ್ಷನಾಗಿ ಹರಸುತ್ತಾನೆ. (೩-೧೫) ಈ ಎಲ್ಲ ಸಂಗತಿಗಳು ಕಥಾನಾಯಕನ ಅಸಾಮಾನ್ಯತೆಯನ್ನು ತೋರಿಸಲು ರೂಪಿಸಿಕೊಂಡವುಗಳಾಗಿವೆ.

೨. ಶಿವಭಕ್ತರ ಕಥೆ : ವೀರಶೈವ ಧರ್ಮಾನುಯಾಯಿಗಳಾದ ಮಹಾಪುರುಷರ ಚರಿತ್ರೆಗಳು ಪ್ರಧಾನವಾಗಿಯೂ, ಅವರು ತಮಗೆ ಆದರ್ಶರೆಂದು ಅಂಗೀಕರಿಸಿದ ಪುರಾತನ ಶೈವ ಸಂತರು ಹಾಗೂ ಪುರಾತನ ಮತ್ತು ನೂತನ ಶಿವಶರಣರು ಮೊದಲಾದವರ ಕಥೆಗಳು ಪ್ರಾಸಂಗಿಕವಾಗಿಯೂ ಅವುಗಳಲ್ಲಿ ಉಕ್ತವಾಗಿರುತ್ತವೆ.

'ಬಸವ ಪುರಾಣ'ದಲ್ಲಿ ಬಸವಣ್ಣನವರ ಜೀವನ ಚರಿತ್ರೆಯನ್ನು ಜೊತೆಗೆ ಅರವತ್ತುಮೂರು ಪುರಾತನ ಕಥೆಗಳು ಸಮಕಾಲೀನ ಶರಣರ ಕಥೆಗಳು ಕಾವ್ಯದುದ್ದಕ್ಕೂ ಹಾಸುಹೊಕ್ಕಾಗಿವೆ. ಈ ಕೃತಿಯ ಪ್ರಧಾನ ಅನುಕರಣೆಯಾದ, ಚೋರಬಸವೇಶ್ವರ ಕಾವ್ಯವು ನೇರವಾಗಿ ಬಸವಣ್ಣನವರ ಚರಿತ್ರೆಗೆ ಸಂಬಂಧಪಟ್ಟಿದ್ದರೂ 'ಪುರಾಣ'ವಾಗಬೇಕೆಂಬ ಉದ್ದೇಶದಿಂದ ಜನತೆಯಲ್ಲಿ ಭಕ್ತಿ-ಭಾವನೆಯನ್ನು ಹುಟ್ಟಿಸುವ ಶಿವಭಕ್ತರ ಕಥೆಗಳನ್ನಿಲ್ಲಿ ಅಳವಡಿಸಿಕೊಂಡಿದೆ. ಶರಣಕಕ್ಕಯ್ಯ, ಮೆರೆಮಿಂಡದೇವ, ಚನ್ನಬಸವಣ್ಣ, ಮಹಾದೇವ ಭೂಪಾಲನು ಮೋಳಿಗೆಯ ಮಾರಯ್ಯಗಳಾದದ್ದು, ಅಲ್ಲಮಪ್ರಭು, ಶರಣ ಹರಳಯ್ಯ ಮುಂತಾದ ಶರಣ ಕಥೆಗಳು ಚಿಕ್ಕದಾಗಿ

ಚೊಕ್ಕದಾಗಿ ಮೂಡಿಬಂದಿವೆ. ಮಾತ್ರವಲ್ಲದಕ್ಷಯಾಗಕಥೆ ಕೌಶಿಕವಶಿಷ್ಠ ಸತ್ಯಹರಿಶ್ಚಂದ್ರ, ತ್ರಿಶಂಕು, ಕ್ಷುಪರಾಜ, ಭೃಗುಮುನಿ, ಹರಿಭಕ್ತ ಗಜರಾಜ, ಶಿವಭಕ್ತ ಕರಿಕಾಲಚೋಳ ಹನುಮಂತಲಿಂಗ ಪಡೆದ ಕಥೆ, ಉದ್ಭಾನವೀರದೇಶಿಕನಿಂದ ಚಾಮರಸನಿಗೆ ಲಿಂಗದೀಕ್ಷೆಯಾದ ಕಥೆ ಮುಂತಾ ಶೈವಪರಂಪರೆಯ ಶರಣರ ಕಥೆಗಳೂ ಇಲ್ಲಿ ನಿರೂಪಿಸಲ್ಪಟ್ಟಿವೆ. ಮೂಲ ಬಸವಪುರಾಣ ಹಾಗೂ ಇತರ ಪುರಾಣಗಳ ಜೊತೆ ಹೋಲಿಸಿ ನೋಡಿದರೆ ಬಸವಣ್ಣನ ಶಿವಭಕ್ತಿಯ ಪಾರಮ್ಯದ ಪ್ರಕಾಶನಕ್ಕೆ ಪೋಷಕವಾಗಿ ಈ ಕಥೆಗಳು ಬಂದಿರುವುದರಿಂದ ಶಂಕರಕವಿಯ ಔಚಿತ್ಯ ಪ್ರಜ್ಞೆ ಎದ್ದುಕಾಣುತ್ತದೆ.

೩. **ವೀರಶೈವತತ್ತ್ವ ನಿರೂಪಣೆ :** ಕಥಾನಾಯಕನ ಚರಿತ್ರೆಯ ಜೊತೆಗೆ ವೀರಶೈವ ತತ್ತ್ವಗಳನ್ನು ನಿರೂಪಿಸಿರುವುದು ವೀರಶೈವ ಪುರಾಣಗಳ ಮತ್ತೊಂದು ಲಕ್ಷಣ ಕೆಲವು ಪುರಾಣಗಳಲ್ಲಿ ತಾತ್ವಿಕ ನಿರೂಪಣೆಯು ಹೆಚ್ಚು ವಿಸ್ತಾರವಾಗಿ ಬಂದಿದ್ದರೆ ಕೆಲವು ಪುರಾಣಗಳಲ್ಲಿ ಹಿತಮಿತವಾಗಿ ಬಂದಿವೆ. 'ಚೋರಬಸವೇಶ್ವರ ಕಾವ್ಯ'ದಲ್ಲಿ ಹನ್ನೆರಡನೆಯ ಸಂಧಿಯ ಅರ್ಧಕ್ಕಿಂತ ಹೆಚ್ಚು ಭಾಗ ತಾತ್ವಿಕ ಸಿದ್ಧಾಂತಗಳ ನಿರೂಪಣೆಗೆ ಮೀಸಲಾಗಿದೆ. ತನಗೆ ವೀರಶೈವ ದೀಕ್ಷೆ ನೀಡಬೇಕೆಂದು ಬೇಡಿದ 'ಚಾಮರಸ'ನಿಗೆ ಉದ್ಭಾನವೀರದೇಶಿಕನು ದೀಕ್ಷಾಪೂರ್ವದ ಅರ್ಹತೆಗಳನ್ನೊಳಗೊಂಡು ಷಟ್ಸ್ಥಲ, ಅಷ್ಟಾವರಣ, ಪಂಚಾಚಾರ, ದೀಕ್ಷಾವಿಧಾನ, ಶಿವಪೂಜಾಕ್ರಮ ಮುಂತಾಗಿ ವಿವರಿಸುವಲ್ಲಿ ವೀರಶೈವ ತಾತ್ವಿಕ ವಿವೇಚನೆ ವಿವರವಾಗಿಯಲ್ಲದಿದ್ದರೂ ಹಿತಮಿತವಾಗಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

೪. **ರಾಜಕೀಯ ಅಂಶಗಳು :** ಸಮಕಾಲೀನ ಯುಗದ ರಾಜಕೀಯ, ಸಾಮಾಜಿಕ ಅಂಶಗಳನ್ನು ಒಳಗೊಂಡಿರುವುದು ವೀರಶೈವ ಪುರಾಣಗಳ ಒಂದು ಪೂರಕ ಲಕ್ಷಣವೆನಿಸಿದೆ. 'ಚೋರಬಸವೇಶ್ವರ' ಕಾವ್ಯದಲ್ಲಿ 'ಬಿಜ್ಜಳ'ನ ಪ್ರಧಾನಿಯಾಗಿ ಬಸವಣ್ಣನಿದ್ದ ಸಂಗತಿಯನ್ನು ಹೊರತು ಪಡಿಸಿದರೆ ಹೇಳಿಕೊಳ್ಳುವಂಥ ರಾಜಕೀಯ ಅಂಶಗಳು ಕಾಣಸಿಗುವುದಿಲ್ಲ.

೫. **ವೀರಶೈವ ಮತಾಧಿಕ್ಯ ಸ್ಥಾಪನೆ :** ವೀರಶೈವ ಧರ್ಮವನ್ನು ಮೆಟ್ಟಿಕ್ಕತೊಡಗಿದ ಪರಸಮಯಿಗಳನ್ನು ಎದುರಿಸಿ ಸ್ವಧರ್ಮವನ್ನು ರಕ್ಷಿಸಿ ಬೆಳೆಸಿದ ರೀತಿಯು ಪವಾಡ ಕಥೆಗಳ ರೂಪದಲ್ಲಿ ಪ್ರಧಾನವಾಗಿ ಕಂಡು ಬರುವುದು ವೀರಶೈವ ಪುರಾಣ ಲಕ್ಷಣಗಳಲ್ಲೊಂದು ಚೋರಬಸವೇಶ್ವರ ಕಾವ್ಯದ ವಿಶಿಷ್ಟ ಅಂಶಗಳಲ್ಲಿ ವೀರಶೈವ ಮತಾಧಿಕ್ಯ ಸ್ಥಾಪನೆಯೂ ಒಂದು. ಸಾಂದರ್ಭಿಕವಾಗಿ ಬಸವಣ್ಣನು ಪರಸಮಯಿಗಳ ಗರ್ವಭಂಗ ಮಾಡಿ ಬಸವ ಸಾಂಪ್ರದಾಯಿಕರನ್ನಾಗಿ ಮಾಡುವ ಪ್ರಸಂಗ. ಪೌರಾಣಿಯು ಮಹಾದೇವ ಭೂಪಾಲನಿಗೆ ಹೇಳುವ ಶಿವಭಕ್ತರ ಕಥೆಗಳು. ಅದರಲ್ಲೂ ಶಿವಕೃಪೆವಡೆದದಧೀಚಿಯೊಂದಿಗೆ ವಿಷ್ಣುಕೃಪೆ ಪಡೆದ ಕ್ಷುಪಮಹಾರಾಜನು ಪೈಪೋಟಿಗಿಳಿದ ಕಥೆ ವಿಷ್ಣು ವಿಶ್ವರೂಪತೋರಲು ದಧೀಚಿಮುನಿಯು ಪಾದತುದಿಯ ಉಂಗುಟದಲ್ಲಿ ಹರಿಗೆ ವಿಶ್ವರೂಪ ತೋರಿದ ಪ್ರಸಂಗ. ಶಿವನಿಂದಲೇ ಸಕಲ ಜೀವಿಗಳಿಗೆ ಮುಕ್ತಿ ಎಂಬುದನ್ನು ಸಾರುವ 'ಗಜರಾಜ'ನ ಕಥೆ ಇಲ್ಲಿ ಶಂಕರಕವಿಯ ಸ್ವಧರ್ಮಾಭಿಮಾನ ಅಭಿವ್ಯಕ್ತವಾಗುತ್ತದೆ.

[illegible]

೬. **ಪವಾಡಗಳು :** ಭಾರತೀಯ ಸಂಸ್ಕೃತಿಯಲ್ಲಿ ಪವಾಡಗಳ ಕಲ್ಪನೆ ತುಂಬ ಪ್ರಾಚೀನ. ಕಥಾನಾಯಕನ ಅಸಾಮಾನ್ಯ ವ್ಯಕ್ತಿತ್ವದ ದರ್ಶನಕ್ಕೆ ಪವಾಡಗಳ ಕಥೆಗಳು ಸೃಷ್ಟಿಯಾಗಿರುವುದು ವೀರಶೈವ ಪುರಾಣಗಳ ಪ್ರಧಾನಲಕ್ಷಣಗಳಲ್ಲೊಂದು. ಅವುಗಳಲ್ಲಿ ಕೆಲವು ಕಥಾನಾಯಕನ ನಿಜಜೀವನದಲ್ಲಿ ನಡೆದ ಘಟನೆಗಳನ್ನು 'ಪವಾಡ'ವೆಂಬಂತೆ ಮಾರ್ಪಡಿಸಿದುವಾಗಿದ್ದರೆ ಇನ್ನು ಕೆಲವು ಕಥಾನಾಯಕನ ಮಹತ್ವವನ್ನು ಉಜ್ವಲ ಗೊಳಿಸುವುದಕ್ಕಾಗಿ ಆರೋಪಿಸಿದ ಸಾಂಕೇತಿಕ ಕಥೆಗಳು ಏಕೆಂದರೆ ಬಸರವಪುರಾಣಗಳನ್ನೇ ದೃಷ್ಟಿಯಲ್ಲಿಟ್ಟು ಕೊಂಡು ಹೇಳುವುದಾದರೆ.... ''ಬಸವಣ್ಣನ ಜೀವನಕ್ಕೆ ಸಂಬಂಧಿಸಿದ ಸಂಗತಿಗಳಿಗಿಂತಲೂ ಅದ್ಭುತನಾದ ಪವಾಡಗಳಿಗೆ ಅವುಗಳಲ್ಲಿ ಹೆಚ್ಚಿನ ಸ್ಥಾನ ದೊರೆತಿದೆ.''[೨]

> ''ಯಿಲ್ಲಿಗೆಂಭತ್ತೆಂಟು ನಿಜಪವಾಡಂಗ ಳುಂ
> ಯೆಲ್ಲ ಮುಗಿದುವುಯೀಶಕಳುಹಿಸಿದ ಮಣಿಹ ಸಂಪೂರ್ಣಮಾದುದು ಯಿಳೆಯೊಳು''(೧೦-೪೨)

ಎಂದು 'ಚೋರಬಸವೇಶ್ವರ'ದಲ್ಲಿ ಬಸವಣ್ಣ ಹೇಳುವ ಸಂದರ್ಭದಲ್ಲಿ ತಾನು ಮೆರೆದ ಪವಾಡಗಳು ಎಂಭತ್ತೆಂಟು ಎಂದು ತಿಳಿಸಿದ್ದಾನೆ. ಆದರೆ ಈ ಕಾವ್ಯದಲ್ಲಿ ಬಸವಣ್ಣನ ವ್ಯಕ್ತಿತ್ವಕ್ಕೆ ಪೂರಕವಾಗಿ ಕೆಲವೇ ಕೆಲವು ಪವಾಡಗಳ ಉಲ್ಲೇಖ ಕಾಣಸಿಗುತ್ತದೆ. ಗೊಲ್ಲತಿಪವಾಡ, ನಿಂಬೆಹಣ್ಣು ಲಿಂಗವಾದದ್ದು, ಅರಸನ ಅಡಿಗೆ ಮನೆಯ ಪರಿಚಾರಕರೆಲ್ಲ ಜಂಗಮರಾದದ್ದು, ಶವಕ್ಕೆ ಜೀವದಾನ ನೀಡಿದ್ದು, ಕಳ್ಳರ ಕೊರಳ ಬದನೆಕಾಯಿ ಲಿಂಗವಾದದ್ದು, ಬಸವನಾಣೆಯಿಟ್ಟ ವೇಶ್ಯೆ ಸೂರ್ಯನನ್ನು ತಡೆದುನಿಲ್ಲಿಸಿದ್ದು ಇತ್ಯಾದಿ ಇಲ್ಲೆಲ್ಲ ಮುಖ್ಯವಾಗಿ 'ಭಾವದಲ್ಲಿ ಭಗವಂತನಿರುವನೆಂಬ' ಸತ್ಯಕ್ಕೆ ಪವಾಡಗಳ ಕವಚ ತೊಡಿಸಿರುವಂತೆ ತೋರುತ್ತದೆ.

ಒಟ್ಟಿನಲ್ಲಿ 'ಚೋರಬಸವೇಶ್ವರ' ಕಾವ್ಯವು ವೀರಶೈವ ಪುರಾಣಪರಂಪರೆಯನ್ನು ಅನುಸರಿಸಿ ರಚಿಸಿಲ್ಪಟ್ಟ ಕೃತಿಯಾಗಿದ್ದರೂ ಕೆಲವು ಅಂಶಗಳಲ್ಲಿ ವಿಶಿಷ್ಟವೆನಿಸಿದೆ. ಐತಿಹಾಸಿಕ ವ್ಯಕ್ತಿಯಾದ ಬಸವಣ್ಣನನ್ನು ಕೇಂದ್ರ ವಾಗಿಟ್ಟುಕೊಂಡು ಆತನ ಚರಿತೆಯನ್ನು ಪುರಾಣ ಲಕ್ಷಣಗಳಿಗೆ ಪೂರಕವಾಗಿ ಹೇಳಹೊರಟು ಯಶಸ್ವಿ ಯಾಗಿರುವುದು ಮೊದಲ ವಿಶೇಷ ಶೈವಸಂತರು ಹಾಗೂ ಶರಣರ ಭಕ್ತಿಯ ಆಧಿಕ್ಯ ಪ್ರಕಟಣೆಗೆ ಸಮಾನ ಪ್ರಾಶಸ್ತ್ಯ ನೀಡಿರುವುದು ಎರಡನೆಯದು. ತಾತ್ವಿಕ ವಿವೇಚನೆ ಹಾಗೂ ಪವಾಡಗಳ ನಿರೂಪಣೆಯಲ್ಲಿ ಸಂತುಲಿತ ಮನೋಭಾವವನ್ನು ಕವಿಯು ಅಭಿವ್ಯಕ್ತಪಡಿಸಿರುವುದು ಮೂರನೆಯದು. ಎಲ್ಲಕ್ಕಿಂತ ಮಿಗಿಲಾಗಿ ತನ್ನ ಕಾವ್ಯಾತ್ಮಕತೆಯಿಂದ ಹೃದ್ಯವಾಗಿ ಓದಿಸಿಕೊಂಡುಹೋಗುವ ಗುಣ ಚೋರಬಸವೇಶ್ವರ ಕಾವ್ಯಕ್ಕಿದೆ. ಆದ್ದರಿಂದ ಕಾವ್ಯದ ಮಾಧುರ್ಯನನ್ನು ತನ್ನಲ್ಲಿ ಸೆರೆಹಿಡಿದಿಟ್ಟುಕೊಂಡ ಯಶಸ್ವೀ ಪುರಾಣಕಾವ್ಯ ಇದಾಗಿದ್ದು ವೀರಶೈವ ಪುರಾಣ ಪರಂಪರೆಯಲ್ಲಿ ಒಂದು ವಿಶೇಷ ಸ್ಥಾನಕ್ಕೆ ತಕ್ಕುದಾಗಿದೆ.

೫.೫. ಕೃತಿಯ ವೈಶಿಷ್ಟ್ಯ

ಶ್ರೀಕೋಳೂರ ಶಂಕರಕವಿಯ ಚೋರಬಸವೇಶ್ವರ ಕಾವ್ಯವು ಕನ್ನಡದ ಮೇಲ್ತರಗತಿಯ ಸತ್ಕಾವ್ಯಗಳ ಲ್ಲೊಂದು. ಕನ್ನಡದಲ್ಲಿ ಇದುವರೆಗೆ ರಚನೆಗೊಂಡ ಬಸವ ಪುರಾಣಗಳ ಸಾಲಿನಲ್ಲಿ ನಿಜವಾಗಿಯೂ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ ಕಾವ್ಯವಾಗಿ ನಿಲ್ಲಲರ್ಹವಾಗಿದೆ.

'ರಾಜಷಟ್ಪದಿ' ಎನಿಸಿದ 'ಭಾಮಿನಿ'ಯ ತರುವಾಯ ಕನ್ನಡ ಕವಿಗಳ ಗಮನಸೆಳೆದ ಜನಪ್ರಿಯ ಷಟ್ಪದಿ 'ವಾರ್ಧಕ'ದಲ್ಲಿಕಾವ್ಯರಚಿಸಿ ಶಂಕರಕವಿ ಯಶಸ್ವಿಯಾಗಿದ್ದಾನೆ. ವ್ಯಾಪಾರಿಯ ವೇಷ ಧರಿಸಿ ಚೋರ ತನದಿಂದ ಜಂಗಮರನ್ನು ಸೆಳೆದು ತಂದ ಬಸವಣ್ಣನು 'ಜಂಗಮಪ್ರಾಣಿ' ಎಂಬುದನ್ನು ಹೊಸರೀತಿಯಲ್ಲಿ ಕಂಡರಿಸುವ ಪ್ರಯತ್ನ ಇಲ್ಲಿನದು.

'ಶಿವನಂ ತದೀಯ ಶರಣವ್ರಜಮಂ' ಕುರಿತು ಕೃತಿರಚನೆ ಮಾಡುವುದು ಗಿರೀಶನಿಗೆ ತಮ್ಮ ನಾಲಗೆಯನ್ನು ಮಾರಿದ ವೀರಶೈವ ಕವಿಗಳ ಉದ್ದೇಶ. ಇಂಥ ವ್ರತಧಾರಿ ಕವಿ ಹರಿಹರನನ್ನೇ ತನ್ನ 'ಕಾವ್ಯಗುರು'ವೆಂದು ಸ್ವೀಕರಿಸಿದ ಶಂಕರಕವಿಯು ಹರಿಹರನಂತೆ ಶಿವನನ್ನು ಶಿವಶರಣರನ್ನು ಶಿವತತ್ವಗಳನ್ನು ಕುರಿತು ಹಾಡಲು ತನ್ನ ಕವಿತ್ವವನ್ನು ಮುಡಿಪಾಗಿಟ್ಟಿದ್ದಾನೆ.

ಭೀಮಕವಿಯ ಬಸವಪುರಾಣವು ಸರ್ಗಶ್ಚಪ್ರತಿ ಸರ್ಗಶ್ಚವಂಶೋಮನ್ವಂತರಾಣಿಚ | ಎಂಬ ಲಾಕ್ಷಣಿಕರ ತತ್ತ್ವಕ್ಕನು ಗುಣವಾಗಿ ಬರೆದ ಸಾಂಪ್ರದಾಯಕ ಪುರಾಣವಲ್ಲ. ''ಔಚಿತ್ಯವಿಲ್ಲದೆ ಜಗತ್ತಿನ ಎಲ್ಲ ವಸ್ತುಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಬೇಕೆಂಬ ಹವ್ಯಾಸ..... ಬಸವಪುರಾಣಕ್ಕಿಲ್ಲ''[೨೩] ಎಂಬ ಮಾತನ್ನು ಚೋರಬಸವೇಶ್ವರ ಕಾವ್ಯದ ಕುರಿತಾಗಿಯೂ ಪುನರುಚ್ಚರಿಸಬಹುದು, ಮಾತ್ರವಲ್ಲ ಭೀಮಕವಿಗಿಂತಲೂ ಹೆಚ್ಚಿನ ಔಚಿತ್ಯ ಪ್ರಜ್ಞೆ, ಕಲ್ಪನೆಯ ಔನ್ನತ್ಯ ಶಂಕರನಲ್ಲಿ ಮಿಗಿಲಾಗಿರುವುದನ್ನು ಗುರುತಿಸುತ್ತೇವೆ.

ಕನ್ನಡದಲ್ಲಿರುವ ಭಿನ್ನ ಭಿನ್ನ ಸಂಪ್ರದಾಯಗಳ ಪುರಾಣ ಕಾವ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಚೋರಬಸವೇಶ್ವರ ಕಾವ್ಯದ ಕಥನಕ್ರಮ ನಿಜಕ್ಕೂ ವಿಶಿಷ್ಟ ನಿರ್ಮಿತಿ ಎಂದು ನಿಸ್ಸಂಶಯವಾಗಿ ಹೇಳಬಹುದು.

ಶಿವಶರಣರ ಕಥೆಯ ಜೊತೆಗೆ ಶಿವಕವಿಯ ಕಥೆಯನ್ನೂ ಬರೆಯುವ ಈ ಕಾವ್ಯ ತನ್ನತನವನ್ನು ಕಾಯ್ದು ಕೊಂಡಿದೆ. ಕನ್ನಡದಲ್ಲಿ ಇದುವರೆಗೆ ಬಂದ ಉಳಿದೆಲ್ಲ ಬಸವಚರಿತೆಗಳಿಂದ ಭಿನ್ನವಾಗಿ ನಿಲ್ಲುವ ಕೃತಿ. ಕಾವ್ಯದಾರಂಭ, ಅಂತ್ಯಗಳೆರಡೂ ಭಿನ್ನವಾಗಿದ್ದು, ಮಧ್ಯದಲ್ಲಿ ನಾಯಕ ಬಸವಣ್ಣನ ಚರಿತೆ ಶೈವಸಂತರ, ಶಿವಶರಣರ ಚರಿತೆಗಳು ಬಿಗಿಯಾದ ನಿರ್ದೇಶನದೊಂದಿಗೆ ಮೂಡಿಬಂದ ಸುಂದರ ಚಲನಚಿತ್ರದಂತೆ ಭಾಸವಾಗುತ್ತದೆ. ಕೊನೆಯ ಮೂರು ಸಂಧಿಗಳು ಶಿವಕವಿ ಚಾಮರಸನ ವ್ಯಕ್ತಿತ್ವ ಪ್ರಕಾಶನಕ್ಕೇ ಮೀಸಲಾಗಿವೆ. ಈ ದೃಷ್ಟಿಯಿಂದ ಚಾಮರಸನ ವೈಯಕ್ತಿಕ ಬದುಕಿನ ಮೇಲೆ ಬೆಳಕು ಬೀರುವ ಪ್ರಯತ್ನ ಇದಾಗಿದೆ.

ಶೈವ ಮತ್ತು ವೀರಶೈವಗಳ ಸಮ್ಮಿಶ್ರ ಪರಂಪರೆಯು ಪ್ರಚಲಿತವಾಗಿದ್ದ ಯುಗದ ಜೀವಂತ ಸಾಕ್ಷಿಯಾ ಈ ಕಾವ್ಯ ನಿಲ್ಲುತ್ತದೆ. ಪರಮತವಿಡಂಬನೆ... ಇದಿರು ಹಳಿಯಲುಬೇಡವೆಂದು ಸಾರಿದ ಬಸವಣ್ಣನು ಜೈನರನ್ನು ವ್ಯಂಗ್ಯವಾಗಿ ಕೆಣಕುವ ಲಿಪಿಪವಾಡದ ಸಂದರ್ಭಗಳು ತತ್ಕಾಲ ಓದುಗನಲ್ಲಿ ಮೆಚ್ಚುಗೆ ಹುಟ್ಟಿಸಬಹುದಾದರೂ ಬಸವತತ್ವಕ್ಕೆ ವಿರುದ್ಧವಾಗಿವೆ. ಅಲ್ಲಲ್ಲಿ ಇಂಥ ಕಪ್ಪುಕಲೆಗಳಿದ್ದರೂ ಒಟ್ಟು ಸೌಂದರ್ಯಕ್ಕೆ ಬಾಧಕವಿಲ್ಲ. ತನ್ನ ಸರಳ ಭಾಷಾಶೈಲಿ, ಬಿಗುವಾದ ಬಂಧ ವಿನೂತನ ಕಥನ ತಂತ್ರಗಳಿಂದಾಗಿ ಈ ಕಾವ್ಯ ತನ್ನ ಮುಂದಿನವರ

[illegible]

ಮೇಲೆ ಸಾಕಷ್ಟು ಪ್ರಭಾವ ಬೀರಿದ್ದನ್ನು ಕಾಣುತ್ತೇವೆ. ಶಿವಶರಣರ ಚರಿತ್ರೆ ನಿರೂಪಣೆಗೆ 'ಯಕ್ಷಗಾನ'ವನ್ನು ಬಳಕೆಯಲ್ಲಿತಂದದ್ದೊಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿನೂತನ ಪ್ರಯೋಗ ಈ ಪ್ರಯೋಗಶೀಲತೆಗೆ ಪ್ರಭಾವ ಬೀರಿದ ಕೃತಿ ಚೋರಬಸವೇಶ್ವರ ಕಾವ್ಯ ಎನ್ನಬಹುದು. ನಾಟಕಕಾರ ಚಂದ್ರಯ್ಯ ಮತ್ತು ಜೋಳದರಾಶಿ ದೊಡ್ಡನಗೌಡರು ಶಂಕರಕವಿಯಿಂದ ಪ್ರಭಾವಿತರಾಗಿರುವುದು ಇಲ್ಲಿ ಸ್ಮರಣಾರ್ಹ.

೫.೬. ತೌಲನಿಕ ವಿವೇಚನೆ

'ಒಬ್ಬ ಕವಿಯ ಜೇಬಿನಲ್ಲಿ ಮತ್ತೊಬ್ಬ ಕವಿಯ ಕೈಯಿರುತ್ತದೆ' ಎಂಬ ಜನಜನಿತ ಮಾತಿನಲ್ಲಿ ಪ್ರತಿಯೊಬ್ಬ ಕವಿಯೂ ತನಗಿಂತ ಮುನ್ನಿನ ಕವಿಗಳ ಪ್ರಭಾವ ಪ್ರೇರಣೆಗಳಿಗೆ ಒಳಗಾಗಿರುತ್ತಾನೆಂಬ ಭಾವ ಅಭಿವ್ಯಕ್ತವಾಗುತ್ತದೆ. ಈ ಮಾತು ಶಂಕರ ಕವಿಗೂ ಅನ್ವಯಿಸುತ್ತದೆ.

> ''ಕವಿಗಮಕಿಗಳು ಮೆಚ್ಚೆ ರಾಘುವೇಶ್ವರಭೀಮಕವಿಯು ಲಕ್ಕಣಾಮಾತ್ಯರು
> ಸವಿನಯಂದಳಿಯೆದಂತಚ್ಛವಿಯ ಪಸರಿಸು
> ತ್ತವಿರಳ ಸುಪ್ರಮಥೇಂದ್ರ ಚೋರಬಸವನಮಹಿಮೆ
> ಶಿವಮೂರ್ತಿ ಹರಿಹರ ಮಹಾಚಾರ್ಯಪೇಳಲುಜ್ಜುಗವಾಂತನೆಂತೆಂದೊಡೆ"(೧-೪೦) ಎಂದೂ
> ''ಕಾಳಿದಾಸ ಬಾಣ ಮೈಯ್ಯೂರ ಭೋಜನುಂ
> ಪಾಲುಕುರಿಕೆಯ ಸೋಮಣಾರಾಧ್ಯ ಹರಿಯರಸ
> ಲೀಲೆ ಚಾಮರಸ ರಾಘವ ಕೆರೆಯಪದ್ಮರಸ ಮೊದಲಾದ ಶಿಕವಿಗಳು'' (೧-೧೨)

ಎಂದು ಪೂರ್ವಕವಿ ಸ್ತುತಿಯ ಸಂದರ್ಭದಲ್ಲಿ ಬಾಣ, ಕಾಳಿದಾಸ, ಮಯೂರ, ಭೋಜ, ಪಾಲ್ಕುರಿಕೆ ಸೋಮನಾಥ, ಹರಿಹರ, ಚಾಮರಸ ರಾಘವಾಂಕ, ಭೀಮಕವಿ, ಲಕ್ಕಣ್ಣದಂಡೇಶ ಕೆರೆಯಪದ್ಮರಸರನ್ನು ..... ಎನಗೆ ಬೆಂಬಲವಾಗಿ ಮತ್ಕೃತಿಯ ಪೆಸರ್ಗೊಳಿಪುದೊಲವಿನಿಂದೇ ಎಂದು ಬೇಡುತ್ತಾನೆ.

"ಕನ್ನಡ ಬಸವ ಪುರಾಣವನ್ನು ಆಧಾರವಾಗಿಯೋ ಆದರ್ಶವಾಗಿಯೋ ಇಟ್ಟುಕೊಂಡು ನಾಲ್ಕು ನೂರಕ್ಕೂ ಮೀರಿ ಕೃತಿಗಳು ಕನ್ನಡ ಹಾಗೂ ಇತರ ಭಾಷೆಗಳಲ್ಲಿ ರಚಿತವಾಗಿವೆ."[೨೪] ಅಂತೆಯೇ ಶಂಕರಕವಿ ಕೂಡ ಪ್ರಧಾನವಾಗಿ 'ಭೀಮಕವಿ'ಯ 'ಬಸವಪುರಾಣ'ದಿಂದ, ಆನುಷಂಗಿಕವಾಗಿ ಹರಿಹರ, ಲಕ್ಕಣದಂಡೇಶ ಹಾಗೂ ರಾಘವಾಂಕರ ಕಾವ್ಯಗಳಿಂದ ಪ್ರಭಾವಿತರಾಗಿರುವುದು ತಿಳಿದುಬರುತ್ತದೆ.

ಬಸವಣ್ಣನವರು ಮಹೇಶತ್ವವನ್ನು ಮರ್ತ್ಯಕ್ಕೆ ತಂದ ಮಹಿಮಾಪುರುಷ! ಧರ್ಮವು ವೈಯಕ್ತಿಕ ಸಾಧನೆಗೆ ಸೀಮಿತವಾಗದೇ ಸಮಾಜಮುಖಿಯಾಗಿ ಸಮಷ್ಟಿ ಸಾಧನೆಗೆ ಪ್ರೇರಕವಾಗಲೆಂಬ ಮಹದುದ್ದೇಶದಿಂದ ಕ್ರಿಯಾಶೀಲವಾದ ರಾಜಕೀಯ ಸಂತ. ಅಂತರಂಗಶುದ್ಧಿ ಬಹಿರಂಗಶುದ್ಧಿಗೆ ತೋರು ಬೆರಳಾಗುವ ನಿಜ ಪವಾಡವನ್ನು ಮೆರೆದಾತ ತನ್ನ ಸಮಾಜ ಶುದ್ಧೀಕರಣದ ಮೆಟ್ಟಿಲುಗಳನ್ನೇರುತ್ತ ಜಗತ್ತೇ ನಿಬ್ಬೆರಗಾಗುವಂಥ

[illegible]

ಅದ್ಭುತ ಕ್ರಾಂತಿಯನ್ನೆಸಗಿದವನು. ಅವನೊಬ್ಬ ಮಹಾನ್ ಭಕ್ತ, ಅರ್ಥಶಾಸ್ತ್ರಜ್ಞ, ಧಾರ್ಮಿಕ ಸುಧಾರಕ ಸಮಾಜದ ಮುಖಂಡ.... ಹೀಗೆ ಅವನ ವ್ಯಕ್ತಿತ್ವಕ್ಕೆ ಹಲವು ಮುಖಗಳುಂಟು. ಈತನ ಉದಾತ್ತ ವ್ಯಕ್ತಿತ್ವ ಲೋಕಕ್ಕೆ ಆದರ್ಶವಾಗಿ ನಿಲ್ಲಲೆಂಬ ಭಾವನೆಯಿಂದ ಅನೇಕ ಕವಿಗಳು ಈತನ ಹಾಗೂ ಅನುಯಾಯಿಗಳಾದ ಶರಣರ ಬದುಕನ್ನು ಬರಹಕ್ಕೆ ಇಳಿಸಿದರು. ಅದರಲ್ಲೂ ಬಸವಣ್ಣನವರನ್ನು ಕುರಿತು ಹುಟ್ಟಿರುವ ಸಾಹಿತ್ಯ ಕೃತಿಗಳು ಅಸಂಖ್ಯವೆಂದರೆ ಅತಿಶಯೋಕ್ತಿಯಾಗದು!

ಅವುಗಳಲ್ಲಿ ಇಂದಿಗೂ ಪರಿಗಣಿಸಲ್ಪಡುತ್ತಿರುವ ಮುಖ್ಯವಾದ ಕೃತಿಗಳೆಂದರೆ:

೧. ಭೀಮಕವಿಯ ಬಸವಪುರಾಣ

೨. ಹರಿಹರನ ಬಸವರಾಜದೇವರ ರಗಳೆ

೩. ಸಿಂಗಿರಾಜನ ಅಮಲಬಸವಚಾರಿತ್ರ್ಯ

೪. ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿ

ಕೋಳೂರ ಶಂಕರಕವಿಯು ಕಥಾವಸ್ತುವಿನ ದೃಷ್ಟಿಯಿಂದ, 'ಭೀಮಕವಿ'ಯ ಬಸವಪುರಾಣವನ್ನು ಆಧರಿಸಿದ್ದರೂ ಸಂಗ್ರಾಹಕಗುಣ, ಸಂಕ್ಷಿಪ್ತತೆ. ಔಚಿತ್ಯ ಪ್ರಜ್ಞೆಗಳಿಂದ ಸ್ವಂತಿಕೆಯನ್ನು ಮೆರೆದಿದ್ದಾನೆ. ಶೈಲಿಯಲ್ಲಿ ಹರಿಹರ, ರಾಘವಾಂಕರ ನೆನಪುತರುವ ಶಂಕರಕವಿಯು ತತ್ವಪ್ರತಿಪಾದನೆಯ ಅಂಶಗಳಲ್ಲಿ ಲಕ್ಕಣದಂಡೇಶನನ್ನು ನೆನಪಿಸುತ್ತಾನೆ.

ಇಲ್ಲಿ 'ಭೀಮಕವಿ'ಯ ಬಸವಪುರಾಣ ಮತ್ತು 'ಶಂಕರ ಕವಿ'ಯ 'ಚೋರಬಸವೇಶ್ವರ' ಕಾವ್ಯದ ತೌಲನಿಕ ವಿವೇಚನೆಯನ್ನು ಮಾಡಲಾಗಿದೆ. ಪ್ರಧಾನವಾಗಿ ಬಸವಚರಿತೆಯ ನಿಷ್ಕರ್ಷದಲ್ಲಿ ಪ್ರಮುಖ ಪಾತ್ರವಹಿಸುವ ಸಂಗತಿಗಳೆಂದರೆ

೧. ಜನ್ಮದ ಕಾರಣ. ಉದ್ದೇಶ

೨. ಬಸವನಜನನ ಬಾಲ್ಯ

೩. ಉಪನಯನ

೪. ಕೂಡಲಸಂಗಮಕ್ಕೆ

೫. ವಿವಾಹ

೬. ಮಂತ್ರಿಪಟ್ಟ

೭. ಶರಣರ ಸಮಾಗಮ

೮. ವಿರಸ

೯. ಬಸವಣ್ಣನವರ ಐಕ್ಯ

೧. ಬಸವಣ್ಣನ ಜನನದ ಕಾರಣ : ಬಸವಣ್ಣನು ಧರೆಗವತರಿಸಲು ಕಾರಣವೇನೆಂಬುದನ್ನು ಚಿತ್ರಿಸುವಾಗ ಶಂಕರ ಕವಿಯು 'ಭೀಮಕವಿ'ಯನ್ನೇ ಅನುಸರಿಸಿದ್ದರೂ, ಸೂಕ್ತ ಮಾರ್ಪಾಡುಗಳಿಂದ, ಸ್ವಂತಿಕೆಯ ಜೀವಕಳೆಯಿಂದ ಕಂಗೊಳಿಸುವಂತೆ ಮಾಡಿದ್ದಾನೆ.

ಕೈಲಾಸದಲ್ಲಿ ಶಿವನಸಭೆ ನೆರೆದಿದೆ. ನಾರದಮಹರ್ಷಿಗಳು ಅಲ್ಲಿಗೆ ಬರುತ್ತಾರೆ. ಭೂಲೋಕದಲ್ಲಿ ಶಿವ ಭಕ್ತಿಯು ಕಾಣದಾಗಿದೆ. ಲಿಂಗ, ಜಂಗಮ, ಪ್ರಸಾದಸ್ಥಲಗಳ ರಹಸ್ಯವನ್ನು ವಿವರಿಸಿ ಮಾನವರನ್ನು ಉದ್ಧರಿಸುವ ಮಹತ್ಕಾರ್ಯಕ್ಕಾಗಿ ತಾವೇ ಭೂಲೋಕಕ್ಕೆ ಬಿಜಯಂಗೈಸಬೇಕೆಂದು ಶಿವನನ್ನು ಪ್ರಾರ್ಥಿಸುತ್ತಾರೆ.

''.........................ಮರ್ತ್ಯಲೋಕದೊ
ಳಿಂದು ಭಕ್ತಿಚರಿತ್ರವಿನಿತುಂ ವ್ಯಕ್ತಮಾಗಿರದು
.... ಕೆಲಬರತಿಸುಖ
ಪರವಶದಿ ಮಱೆದಿಪ್ಪರೀ ಲೋಕಕ್ಕೆ ಮಱೆಗೊಂಡು |
ನಿಮ್ಮ ಭಕ್ತಿಯ ತುದಿಮೊದಲಿದೆಂ
ದೊಮ್ಮೆಯುಂಸಲೆ ತೋಱಿದಾರಿಗೆ
ಸಮ್ಮದಿಸಲರಿದಲ್ಲಿ ದೃಷ್ಟ ಪ್ರತ್ಯಯಂಗಳಲಿ ||
........................ಮನುಷ್ಯ ಲೋಕದಲಿ
ಮುಂದೆಯಿದು ಲಿಂಗ ಸ್ಥಳಂತಾ
ನೆಂದಿದುವೆ ವರ ಜಂಗಮ ಸ್ಥಳ
ವೆಂದು ತದ್ವಿಮಳ ಪ್ರಸಾದಸ್ಥಳಮಿದೆಂದಱಿಪಿ |
ನೀವು ಬಿಜಯಂಗೆಯ್ದು ಕರುಣಾ
ಭಾವಗುಣದಿಂ ನೋಡಿ ಮರ್ತ್ಯವ
ನೋವಿಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲಿ |
ಪಾವನತ್ವವನಿತ್ತು ಪಾಲಿಸಿ
ಕಾವುದೆನ್ನಯ ಬಿನ್ನಪವನೆನೆ
ದೇವದೇವಂ ಸಂತಸದೊಳಿಂತೆಂದನಾ ಮುನಿಗೆ |

(ಭೀಮಕವಿ, ಬಸವಪುರಾಣ ೧, ೫೬, ೫೭, ೫೮, ೫೯, ೬೦)

'ನಂದಿನಾಥನಿಗೂ ನನಗೂ ಭೇದವೆಂಬುದಿಲ್ಲ, ಆತನನ್ನೇ ಭೂಲೋಕಕ್ಕೆ ಕಳುಹುವುದಾಗಿ ಶಿವನು ಅಪ್ಪಣೆ ಕೊಡುವನು. ಶಿವನಾಜ್ಞೆಯನ್ನು ನಂದಿನಾಥನು ಶಿರದಲ್ಲಿವಹಿಸಿ ಇಲ್ಲಿದ್ದರೂ ಅಷ್ಟೆ, ಅಲ್ಲಿದ್ದರೂ ಅಷ್ಟೆ,

[illegible]

[illegible]

[illegible]

[illegible]

ನಾನು ಎಂದೆಂದಿಗೂ ಎಲ್ಲೆಲ್ಲಿಯೂ ನಿನ್ನಲ್ಲಿಯೇ ಇರತಕ್ಕವನು ಎಂದು ಬಿನ್ನೈಸಿ ಭೂಲೋಕದಲ್ಲಿ ಉದಯಿಸ ಲುದ್ಯುಕ್ತನಾಗುವನು.

ಈ ಪ್ರಸಂಗಕ್ಕೆ ಸಂಬಂಧಪಟ್ಟಂತೆ ಚೋರಬಸವೇಶ್ವರ ಕಾವ್ಯದಲ್ಲಿ ಶಂಕರಕವಿಯು ಯುಗಧರ್ಮಕ್ಕೆ ತಕ್ಕಂತೆ ಸೂಕ್ತಮಾರ್ಪಾಡು ಮಾಡಿಕೊಂಡಿದ್ದಾನೆ. ಅದನ್ನಿಲ್ಲಿ ಗಮನಿಸೋಣ.

ಕೈಲಾಸದಲ್ಲಿ ನೆರೆದಿದ್ದ ಶಿವಸಭೆಗೆ ಆಗಮಿಸಿದ ನಾರದರು. 'ಶಿವನೇ, ಶಿವಸಮಯಕ್ಕೆ ಜೈನರಿಂದ ಮಹಾ ಆಘಾತ ಉಂಟಾಗಿದೆ. ಸುಮ್ಮನಿದ್ದರೆ ಶೈವಧರ್ಮ ಅಳಿಯುವುದೇ ನಿಶ್ಚಿತ ಆದ್ದರಿಂದ ಸ್ವತಃ ತಾವೇ ಭೂಮಿಗೆ ತೆರಳಿ ತಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕು ಎಂದು ಕರಜೋಡಿಸಿ ಬೇಡಿಕೊಳ್ಳುತ್ತಾರೆ.

''ಕರ್ತುವವಧರಿಸು ನಾ ಮರ್ತ್ಯಕ್ಕೆ ಮನವೆಳಸಿ
ಪೊತ್ತುಗಳೆದಪೆನೆಂದು ಪೋಗಿರ್ದೆ ಜಗದಗಲ
ಮತ್ತೆ ದುರ್ಮತಪಿಡಿದು ಬುದ್ಧನೇ ಪುರದೈವಯೆಂದು ಜೈನರು ಪೆರ್ಚಿಯೆ
ಹರಿಹರ ಬ್ರಹ್ಮಾದಿ ಶ್ರುತಿಶಾಸ್ತ್ರ ಪೌರಾಣ
ಜರಿವರಂ ಶಿವಯುತರ ಭಸಿತ ರುದ್ರಾಕ್ಷಿಗಳ
ಧರಿಸಿರ್ಪರಂಕಂಡುಂ ಯಣಕವಾಡುತ್ತಿಹರು ಸೊಕ್ಕಿವುಕ್ಕೆಗ್ಗಳಿಸಿಯೆ
ಪರಮಾತ್ಮ ನೀವೆ ಧರೆಗಿಳಿದು ಪರಸಮಯಿಗಳ
ತರಿದೊಟ್ಟೆಯಳಿವರಾರ್ಗಮಳವಡರೆನುತ
ಕರಕಮಲವಂ ಮುಗಿದುಯಿಂತೆಂದು....." (೨-೪ ಮತ್ತು ೬)

೩. ಬಸವಣ್ಣನ ಜನನ ಮತ್ತು ಬಾಲ್ಯ : ಇಂಗಳಿಗಿ ಬಾಗವಾಡಿ ಸಮೀಪದಲ್ಲಿರುವ ಮಂಡಗೆ ಪುರದಲ್ಲಿ ಶಿವನವ್ರತವಿಡಿದು ಮಕ್ಕಳ ಅಪೇಕ್ಷೆಯಲ್ಲಿದ್ದ ಮಾದಿರಾಜ ಮಾದಲಾಂಬಿಕೆಯರ ಉದರದಲ್ಲಿ ಶಿವನಪ್ಪಣೆಯ ಮೇರೆಗೆ ಬಸವಣ್ಣನು ಜನಿಸುತ್ತಾನೆ.

ಭೀಮಕವಿಯ ಬಸವ ಪುರಾಣದಲ್ಲಿ ಮಾದಲಾಂಬೆಯ ಬಯಕೆಯ ಚಿತ್ರಣ ವಿವರವಾಗಿ ಬಂದರೆ ಶಂಕರಕವಿಯ ಕಾವ್ಯದಲ್ಲಿ ಸೂಜಿಗೆ ಮುದ್ದುಕೊಟ್ಟಂತೆ ಸ್ವಲ್ಪದರಲ್ಲಿಯೇ ಮುಗಿಯುತ್ತದೆ. ಬಸವಣ್ಣನ ಬಾಲಲೀಲೆಗಳ ಚಿತ್ರಣದಲ್ಲೂ ಇದೇ ದೃಷ್ಟಿಕೋನವಿದೆ.

ಲೋಕರೂಢಿಗೆ ವಿರುದ್ಧವಾಗಿ ಗರ್ಭಬೆಳೆದ ಸಂಗತಿಯ ಚಿತ್ರಣದಲ್ಲಿ ಮಾತ್ರ ಭೀಮಕವಿ ಶಂಕರಕವಿಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಉದಾಹರಣೆಗೆ ಬಸವ ಪುರಾಣದಲ್ಲಿ

ಪುಣ್ಯಂಗೆಯ್ದ ಸತಿಯರು
ತರಳರಂ ಬೆಸಲಹರು ನವಮಾಸಂಗಳಂಪೊತ್ತು

ನಿರುತವಿಂದಿಗೆ ಮೆಲ್ಲನಿದೆ ಮೂ
ರ್ವರುಷವಾಯಿತ್ತಯ್ಯನಂದೀ
ಶ್ವರನೆಯಿದಜೆಂದೇನವಸ್ಥೆಗೆ ಬಹೆನೊ ನಾನ ಜೆಯೆ
ಇಂದು ದುರ್ಭರವೆನಿಸಿದರ್ಭಕ
ನಿಂದೆ ಧರಿಸಲ್ಪಟ್ಟ ಗರ್ಭವ
ಮಂದ ಕಕ್ಕಟಿಗರ್ಭವಾಯಿತು......
ಎಲ್ಲಿಯುಂ ಕೇಳ್ದಜೆಯೆವಿಂತಹ
ದುರ್ಲಭದ ಬಸುಜೆಯರನೆನುತಿರು
ತಲ್ಲಿಗಲ್ಲಿಗೆ ನಿಂದು ಬಳಲತೆ...." (ಭೀಮಕವಿ ಬಸವಪುರಾಣ ೩. ೧೫೧೬, ೧೭)
ಚೋರಬಸವೇಶ್ವರ ಕಾವ್ಯದಲ್ಲಿ
ಅಂದುಪೂರೈಸೆ ದಿವಸಂ ಮೀರಿ ಬಸುರ್ಬೆಳೆಯೆ
ಇಂದುವದನೆಗೆ ಬಹಳ ಕಕ್ಷಮಾಗಲು.... |
...............ನರರು ನವಮಾಸಂಗ
ಳಾಗೆಪೆತ್ತಪರು ಯೆತ್ತಣದು ಇದು ಮಾಯವಿದ
ನಾಗಕಂಕಣಬಲ್ಲ ನಮಗೆ ಸಮನಿಸದೆಂದು ಪೋಗೆ || (೨-೨೭ ಮತ್ತು ೨೮)

ಗರ್ಭಿಣಿ ಮಾದಾಂಬೆಗೆ ಒಂದಿರುಳು ಕನಸಾದಂತೆ ಬಸವಪುರಾಣದಲ್ಲಿ ವಿವರವಿದ್ದರೆ, ಶಂಕರಕವಿಯ ಕಾವ್ಯದಲ್ಲಿ ಶಿಶುವಾಗಿ ಜನಿಸಲಿರುವವನು ಬಸವಣ್ಣನೆಂದು ಸಮಾಗಮದದಿನವೇ ಕನಸಾಗುವುದು. ಜನನದ ದಿನವೇ ಸಂಗಮೇಶನು 'ಮಾಯಾರೂಪದ ಜಂಗಮ'ನಾಗಿ ಬಂದು ಮಗುವಿಗೆ ಲಿಂಗಸಂಗ ಮಾಡುವನೆಂದು 'ಭೀಮಕವಿ' ಹೇಳುತ್ತಾನೆ. ಆದರೆ ಶಂಕರಕವಿಯು ವಾಸ್ತವಕ್ಕೆ ಹತ್ತಿರವಾಗಿ ಈ ಪ್ರಸಂಗವನ್ನು ಚಿತ್ರಿಸಿದ್ದಾನೆ. ಹುಟ್ಟಿ ಏಳುದಿನಗಳು ಗತಿಸಿದರೂ ಮಗು ಹಾಲು ಕುಡಿಯುವುದಿಲ್ಲ. ಆಗ ಶಿವನು 'ಗುರುರೂಪ'ದಲ್ಲಿ ಬಂದು ಮಗುವಿಗೆ ಲಿಂಗಧಾರಣೆ ಮಾಡುತ್ತಾನೆ.

೩.ಉಪನಯನ : ಬಸವಣ್ಣನ ಉಪನಯನ ಪ್ರಸಂಗದ ಚಿತ್ರಣದಲ್ಲಿ ಶಂಕರಕವಿಯು ಭೀಮಕವಿಯನ್ನೇ ಅನುಸರಿಸಿದಂತೆ ತೋರಿದರೂ ಭೀಮಕವಿಯ ವಿವರವಾದ ಚಿತ್ರಣಕ್ಕಿಂತ ಶಂಕರಕವಿಯ ಸಂಕ್ಷಿಪ್ತ ಚಿತ್ರಣವೇ ಆಪ್ತವಾಗುತ್ತದೆ. ಮಾತ್ರವಲ್ಲ ಭೀಮಕವಿಯ ಕಾವ್ಯದಲ್ಲಿಯಂತೆ ಇಲ್ಲಿನ ಬಸವಣ್ಣನು ತಂದೆ ತಾಯಿಗಳನ್ನು ಧಿಕ್ಕರಿಸುವುದಿಲ್ಲ.

ಬಸವಣ್ಣನಿಗೆ ಲನೆಯ ವರುಷದಲ್ಲಿ 'ಮುಂಜಿವೆ' ಮಾಡಲಣಿಯಾಗುತ್ತಾರೆ. ಬಸವಣ್ಣನು.

ಜನಿಸಿದಾಗಳೆ ಸಂಗಮೇಶ್ವರ

ನೆನಗೆ ಸದ್ಗುರುವಾಗಿ ಬೋಧಿಸಿ

ವಿನುತ ಶೈವಾಚಾರಮಾರ್ಗದೊಳಿರಿಸಿ ಸಲಹಿದನು (ಭೀಮಕವಿ ಬಸವಪುರಾಣ ೩-೪೪)

ಎಂದು ಹೇಳಿದಾಗ ಆತನ ತಂದೆ ತಾಯಿಗಳು ನಾನಾ ವಿಧವಾಗಿ ತಿಳಿಸಿ ಹೇಳುವ ಪ್ರಯತ್ನ ಮಾಡುತ್ತಾರೆ ಆದರೆ ಬಸವಣ್ಣನು

ತಂದೆ ಕೇಳೀರೇಳು ಲೋಕದ

ತಂದೆಯಂ ಭಜಿಸದೆ ರತೀಶನ

ತಂದೆಯಂ ಬಿದಿರವಿ ಶಿಖಿಗಳಂ ಭಜಿಸಿಕರ್ಮಕ್ಕೆ

ತಂದೆ ನಿನ್ನೊಡಲಂಭವಾಳಿಗೆ

ತಂದೆಯಕ್ಕಟ ನೀನದೆಲ್ಲಿಯ

ತಂದೆಯೆನಗಿನ್ನೀಶ ಭಕ್ತರೆ ತಂದೆ ತಾಯಿಗಳು (ಬಸವಪುರಾಣ ೩-೮೧)

ಎಂದು ಧಿಕ್ಕರಿಸಿ ಸಹೋದರಿ ನಾಗಾಂಬಿಕೆಯೊಂದಿಗೆ ಮಹಮನೆಗೆ ಬರುತ್ತಾನೆ. ಉಪನಯನಕ್ಕೆ ಬಂದ ಮಾದಲಾಂಬೆಯ ಸಹೋದರ ಬಲದೇವನು ಶಿವಭಕ್ತ ಬಸವನಿಗೆ ಮಗಳನ್ನೀಯುವ ಸಂಕಲ್ಪ ಮಾಡುತ್ತಾನೆ.

ಭೀಮಕವಿಯು ಈ ಪ್ರಸಂಗವನ್ನು ತುಂಬ ವಿವರವಾಗಿ ಚಿತ್ರಿಸುತ್ತಾನೆ. ಬಸವಣ್ಣ ಮತ್ತು ಆತನ ತಂದೆಯ ಮಧ್ಯೆನಡೆವ ಮಾತಿನ ಚಕಮಕಿ ತುಂಬ ಮಾರ್ಮಿಕವಾಗಿದೆ.

ಆದರೆ 'ಶಂಕರಕವಿ'ಯಲ್ಲಿ ಬಸವಣ್ಣನ ಅಸಾಮಾನ್ಯತೆಯನ್ನು ಒಪ್ಪಿಕೊಳ್ಳುವ ತಂದೆ-ತಾಯಿಗಳ ಚಿತ್ರವಿದೆ. ಉದಾಹರಣೆಗೆ ಚೋರಬಸವೇಶ್ವರ ಕಾವ್ಯದಲ್ಲಿ

ಏಳು ವರುಷದಿ ಮುಂಜೆ ಮಾಡಬೇಕೆನಲಾಗ

ಕೇಳಿ ಶೈವಾಶಾಕ್ತಗಾಣಪತ್ಯಾದಿಗಳ

ಹೇಳದಿರಿ ವೈಷ್ಣವಂಬೌದ್ಧಚಾರ್ವಾಕ ಷಣ್ಮತವನುಂಮೀರಿ ತೋರಿ

ವೀರಶೈವವ ಹಿಡಿದು ಇಷ್ಟಲಿಂಗವಧರಿಸಿ

ಮಾರಾರಿ ಪದವ ಮನದನುದಿನದಿಯನುವರಿದು

ಜಾತವಾವುದು ಈಶನೊಲಿದವಗೆ ಸೂಜಾತಜಾತಿ ಬೇರುಂಟೆ ಕೇಳ (೨-೩೬-೩೭-೩೮)

ಎಂದು ಬಸವಣ್ಣನು ಪ್ರಶ್ನಿಸುವನು. "ಇಂತೆನಲು ತನ್ನ ಮಹಿಮೆಯ ತಾನೆಬಲ್ಲನೆಂದು ತಂದೆತಾಯಿಗಳು ಸುಮ್ಮನಿರೆ.... ಕಪ್ಪಡಿಯ ಸಂಗಮೇಶ್ವರರು ಆಗಮಿಸಿ ಹರಸುವರು.

೪. ವಿವಾಹ : ಬಸವಣ್ಣನು ಬಲದೇವದಂಡನಾಥನ ಮಗಳಾದ ಗಂಗಾಂಬೆಯೊಡನೆ ವಿವಾಹವಾದ ಸಂಗತಿ ಭೀಮಕವಿಯಲ್ಲಿ ವಿಸ್ತೃತವಾಗಿದ್ದರೆ ಶಂಕರನಲ್ಲಿ ತುಂಬ ಸಂಕ್ಷಿಪ್ತವಾಗಿದೆ. ಬಸವಣ್ಣನವರಿಗೆ 'ಮಾಯಿದೇವಿ'

ಎಂಬ ಇನ್ನೊಬ್ಬ ಪತ್ನಿಯಿದ್ದುದಾಗಿ ಭೀಮಕವಿಯು ಹೇಳಿದರೆ (ಬಸವಪುರಾಣ ೪-೭೪) ಶಂಕರಕವಿಯು 'ನೀಲಾಂಬಿಕೆ' ಎಂಬ ಪತ್ನಿಯಿದ್ದಳೆಂದು ತಿಳಿಸುತ್ತಾನೆ.

೫. ಕೂಡಲಸಂಗಮಕ್ಕೆ : ಉಪನಯನವನ್ನು ಧಿಕ್ಕರಿಸಿದ ಬಸವಣ್ಣನು ಶ್ರುತಿಶಾಸ್ತ್ರ ಪುರಾಣ, ಛಂದಸ್ಸು, ತರ್ಕ, ತತ್ವ, ಸಿದ್ಧಾಂತಗಳನ್ನು ಮೀಮಾಂಸೆ ಮೊದಲಾದ ವಿದ್ಯೆಗಳನ್ನು ಕರಗತ ಮಾಡಿಕೊಳ್ಳುವನು. ಬಿಜ್ಜಳನಲ್ಲಿಮಹಾಮಂತ್ರಿಯಾಗಿದ್ದ ಬಲದೇವನು ತನ್ನ ಏಕಮಾತ್ರ ಸುಪುತ್ರಿ 'ಗಂಗಾಂಬಿಕೆ'ಯನ್ನು ಬಸವಣ್ಣನಿಗಿತ್ತು ಸಂಭ್ರಮದ ಮದುವೆ ಮಾಡುತ್ತಾನೆ. ಬಸವಣ್ಣನು ವಿವಾಹಸಮಾರಂಭದ ತರುವಾಯ ಪತ್ನಿಯೊಡನೆ ಕೂಡಲಸಂಗಮಕ್ಕೆ ಗಣಪರ್ವಮಾಡಿ ಬರುವೆವೆಂದು ಹೋಗುವನು. ದೇವಾಲಯದಲ್ಲಿರುವ ಶಿವಲಿಂಗದ ದರ್ಶನವಾಗುತ್ತಲೇ ಹುಟ್ಟಿದೊಡನೆ ಬಂದು ತನಗೆ ಲಿಂಗದೀಕ್ಷೆ ಮಾಡಿದ ಸಂಗಮ ಗುರುವಿನ ನೆನಪಾಯಿತು. ಆತನೇ ಪ್ರತ್ಯಕ್ಷ ಕಾಣದಿದ್ದಲ್ಲಿ ಖಡ್ಗಕ್ಕೆ ಒಡಲನೊಪ್ಪಿಸುವೆನೆಂದು ಇರಿದುಕೊಳ್ಳಲು ಮುಂದಾಗುತ್ತಾನೆ. ಗುರುಮೆಚ್ಚಿ ಪ್ರತ್ಯಕ್ಷನಾಗುತ್ತಾನೆ. ಸತಿ, ಪತಿಗಳೊಂದಾಗಿ ಗಣಪರ್ವ ಮಾಡಿ ಹಿಂದಿರುಗುವರು. ಭೀಮಕವಿ ಮತ್ತು ಶಂಕರಕವಿಗಳಿಬ್ಬರೂ ಈ ಪ್ರಸಂಗವನ್ನು ಒಂದೇ ತೆರನಾಗಿ ಚಿತ್ರಿಸಿದ್ದರೂ ಕೊನೆಯಲ್ಲಿ 'ಭೀಮಕವಿ'ಯು ''ಬಸವಣ್ಣನು ಕೂಡಲಸಂಗಮದಲ್ಲೇ ಇದ್ದು ಬಿಜ್ಜಳನ ಆಹ್ವಾನಕ್ಕೆ ಓಗೊಟ್ಟು ಕಲ್ಯಾಣಕ್ಕೆ ಬರುವನೆಂದೂ, ಮಂತ್ರಿ ಪದವಹಿಸಿಕೊಳ್ಳುವನೆಂದೂ ಚಿತ್ರಿಸಿದರೆ, ಶಂಕರಕವಿಯು ಗಣಪರ್ವದ ತರುವಾಯವೇ ತನ್ನ ನಿಜ ಊರಿಗೆ ಮರಳುವನು. ಬಲದೇವನ ಮರಣದ ತರುವಾಯ ಮಂತ್ರಿ ಪದವಹಿಸಿಕೊಳ್ಳುವನೆಂದು ಚಿತ್ರಿಸಿದ್ದಾನೆ.

೬. ಕಲ್ಯಾಣಕ್ಕೆ : ಮಗಳು ಗಂಗಾಬಿಕೆಯನ್ನು ಬಸವಣ್ಣನವರಿಗಿತ್ತು ಸ್ವಲ್ಪಕಾಲದಲ್ಲಿಯೇ ಬಲದೇವನು ಶಿವೈಕ್ಯನಾಗುತ್ತಾನೆ. ಭೀಮಕವಿಯು

.... ಬಸವಂಗೆ ತನಯಳ
ನಿತ್ತಡೊಲಿದು ಪ್ರಮಥರತಿಮುದ
ವೆತ್ತು ಕರೆಸಲು ಪೋಪವೊಲು ಶಿವಲೋಕಕೆಯ್ದಿದನು (ಬಸವಪುರಾಣ ೫-೩)

ಎಂದು ಚಿತ್ರಿಸುತ್ತಾನೆ. ಆದರೆ 'ಶಂಕರಕವಿ'ಯು ಇದನ್ನು ಭೀಮಕವಿಗಿಂತಲೂ ತುಂಬ ಸೊಗಸಾಗಿ ಚಿತ್ರಿಸಿದ್ದಾನೆ.

ಬಲದೇವ ಮರ್ತ್ಯದಲ್ಲಿರಲು ಶಿವಸಭೆ ಲೆಖ್ಖ
ತಿಳಿದು ಪೇಳುವರಿಲ್ಲವೆಂದು ಕರೆಸಿದವೊಲುಂ
ಪಲದಿನಂಗಳ ಮೇಲೆ ಲಿಂಗವಾಗಲ್ಕೆ (೩-೨೦)

ಬಿಜ್ಜಳರಾಯನು ತನಗೆ ಯೋಗ್ಯಮಂತ್ರಿಯನ್ನು ಹುಡುಕುತ್ತಿರುತ್ತಾನೆ. 'ಮಂಡಗೆ'ಯಲ್ಲಿರುವ ಬಲದೇವನ ಅಳಿಯ ಬಸವಣ್ಣನೇ ಯೋಗ್ಯಮಂತ್ರಿಯಾಗಬಲ್ಲನೆಂದು ಕೊಂಡೆ ಮಂಚಣ್ಣ ಸೂಚಿಸುತ್ತಾನೆ. ಬಿಜ್ಜಳನು

ರಾಜಮರ್ಯಾದೆಯೊಂದಿಗೆ ಬಸವಣ್ಣನವರನ್ನು ಕರೆಸಿಕೊಂಡು ಸಿಂಹಾಸನದ ಮೇಲೆ ಕುಳ್ಳಿರಿಸಿ ಮುದ್ರೆಯನ್ನು ಕೈಯಲ್ಲಿಕೊಡುತ್ತಾನೆ. ಆಗಬಸವಣ್ಣನು ''ಮಹಾರಾಜ, ನಮ್ಮ ಮಾತಿಗೆ ಬೆಲೆ ಇದ್ದರೆ ಇಲ್ಲಿ ಇರುವೆವು. ತೃಣೀಕರಿಸಲು ಹೋಗುವೆವು ಎಂದು ಕರಾರು ಹಾಕುವನು. ಬಿಜ್ಜಳನು ''ನನ್ನ ಪ್ರಾಣ ನಿಮ್ಮದು, ನೀ ಹೋದಂದೆ ನನ್ನ ಒಡೆತನ ಮುಕ್ತಾಯವಾಯಿತೆಂದು ತಿಳಿ'' ಎಂದು ವಚನವೀಯುತ್ತಾನೆ. ನಂಬಿದ ಬಸವಣ್ಣನು ಮಂತ್ರಿ ಪದವಿಯನ್ನು ಸ್ವೀಕರಿಸುತ್ತಾನೆ.

ಭೀಮಕವಿಯ 'ಬಸವಪುರಾಣ'ದಲ್ಲಿ ಬಲದೇವನು ಐಕ್ಯವಾದಾಗ ಇನ್ನೂ ಕೂಡಲಸಂಗಮದಲ್ಲೇ ಇರುತ್ತಾನೆ. ಬಿಜ್ಜಳನು ಬಲದೇವ ಮಂತ್ರಿಯ ಬಂಧು ಬಳಗವನ್ನು ಕರೆಯಿಸಿ ಬಲದೇವನ ಹೊಣೆಹೊರಲು ಸಮರ್ಥರಾದವರು ಯಾರಾದರೂ ಉಂಟೇ? ಎಂದು ವಿಚಾರಿಸುವನು. ಅವರ ಸಲಹೆಯ ಮೇರೆಗೆ ಸಂಗಮಕ್ಕೆ ಹೋಗಿ ಬಿಜ್ಜಳನ ಪ್ರಧಾನಿಪಟ್ಟಕ್ಕೆ ಅಧಿಪತಿಯಾಗಲು ಅಮಾತ್ಯರು ಅರಸನ ಬಿನ್ನಪವನ್ನುನಿವೇದಿಸುತ್ತಾರೆ. ಭಕ್ತಹಿತಾರ್ಥವಾಗಿ ಒಡಂಬಟ್ಟು ಬಸವಣ್ಣ ಕಲ್ಯಾಣಕ್ಕೆ ಬರುತ್ತಾನೆ.

೭. ಶರಣರ ಸಮಾಗಮ : ಮಹಾಮನೆಯೆಂದರೆ ಬಸವಣ್ಣನ ಅನುಭವಮಂಟಪ ಬಂದಭಕ್ತರಿಗೆ ಪ್ರಸಾದವಾದರೆ ಶಿವಭಕ್ತರಿಗೆ ಜ್ಞಾನದಾಸೋಹ ನಡೆಯುತ್ತಿತ್ತು. ಬಸವಣ್ಣನು ನಿತ್ಯದಲ್ಲಿ ಗುರುಲಿಂಗ ಜಂಗಮಕ್ಕೆ ತನುಮನ ಧನಗಳನ್ನು ಅರ್ಪಿಸುವ ತಾಣವಾಯಿತು. ಅಲ್ಲಿಂದ ಬಸವಣ್ಣನ ಉಪದೇಶ ನಾಡಿನ ತುಂಬ ಹರಡತೊಡಗಿತು. ಒಮ್ಮೆ ಬಂದು ಅವರ ದರ್ಶನ ಉಪದೇಶಗಳನ್ನು ಪಡೆದವರು ವೀರಶೈವ ದೀಕ್ಷೆಕೈಕೊಳ್ಳದೇ ಇರುತ್ತಿರಲಿಲ್ಲ. ಪರಸಮಯದವರು ಸಹ ವೀರಶೈವರಾದರು ಬಸವನ ಕೀರ್ತಿಲತೆಹಬ್ಬಿ

''ನಡುಮನೆಗೆಯಷ್ಟಲಕ್ಷ್ಮಿಯರು ತಾಂಬಂದಂತೆ
ಪೊಡವಿಯೊಳು ಬಸವೇಶ್ವರನ ಭಕ್ತಿಲತೆ ಪರ್ಬಿ
ಝಡಿದು ಫಲಕಾಯ್ತಿರಲು ಮೆಲಲ್ಯೆದಿಕೋಕಶುಕ ಪಿಕನಿಕರನೆರೆದಂದದಿ
.... ಹಂಸೆಯುಂ
ಪಡೆಸಹಿತ ಸರಸಿಗೈತರ್ಪಂತೆ ಜಂಗಮವು ಬರುತಿರ್ದುದೇನೆಂಬೆನು'' (೩-೫೩)
ಅದನ್ನೇ ಭೀಮಕವಿಯು ಹೀಗೆ ಹೇಳಿದ್ದಾನೆ.
''....................ಪೊಡವಿಯೊ
ಗುರ್ಡಿಸಿತೆನೆ ಮೃಡಭಕ್ತಗಣತಲೆತಂಡ ತಂಡದಲಿ
ಸಡಗರದೊಳೆಯ್ತುರೆ...................'' (ಬಸವಪುರಾಣ ೬-೨೦) ಇತ್ಯಾದಿ

೮. ವಿರಸ : ಬಿಜ್ಜಳ ಬಸವಣ್ಣನವರಲ್ಲಿ ವಿರಸಹುಟ್ಟುವ ಪ್ರಸಂಗಗಳ ಚಿತ್ರಣದಲ್ಲಿ ಭೀಮಕವಿಯಷ್ಟು ಆಸಕ್ತಿ ಶಂಕರಕವಿಗಿಲ್ಲವೆಂದು ತೋರುತ್ತದೆ. ಮೇಲಾಗಿ ಬಸವಣ್ಣನೊಬ್ಬ ಆಸಾಮಾನ್ಯ ಪುರುಷನೆಂಬ ಚಿತ್ರಣದ

ಕಡೆಗೇ ಶಂಕರಕವಿಯ ಒಲವು ವ್ಯಕ್ತವಾಗುವುದು. ಹೀಗಾಗಿ ವಿರಸ ಪ್ರಸಂಗಗಳೂ ಬಹಳ ಸೂಚ್ಯವಾಗಿ ಸೂಕ್ಷ್ಮವಾಗಿ ಚಿತ್ರಿತವಾಗಿದೆ. ಬಿಜ್ಜಳನು ಬಸವಣ್ಣನ ವ್ಯಕ್ತಿತ್ವದ ಮುಂದೆ ಇಲ್ಲಿ ಸ್ವಲ್ಪಕುಬ್ಜವಾಗುತ್ತಾನೆ. ಬಸವಮಹಿಮೆಯ ಅಯಸ್ಕಾಂತದ ಪ್ರಭಾವಕ್ಕೊಳಗಾದ ಬಿಜ್ಜಳನೇ ಇಲ್ಲಿಕಾಣಸಿಗುವುದು. ಅದರಹೊರತಾಗಿ ಭೀಮಕವಿಯಲ್ಲಿನ ರಾಜದರ್ಪದಬಿಜ್ಜಳನ ಚಿತ್ರ ಇಲ್ಲಿಲ್ಲ. ಬಸವಪುರಾಣದಲ್ಲಿನ ಮಡಿವಾಳ ಮಾಚಿದೇವನ ಪ್ರಸಂಗ. ಕಿನ್ನರಿಬೊಮ್ಮಯ್ಯನ ಪ್ರಸಂಗ, ಕನ್ನದಬೊಮ್ಮಯ್ಯನ ಪ್ರಸಂಗ, ಶಿವನಾಗಮಯ್ಯಗಳ ಪ್ರಸಂಗಗಳು ಇಲ್ಲಿಲ್ಲ.

ಬಿಜ್ಜಳನು ರಾಜಸಭೆಯಲ್ಲಿ ಕುಳಿತಿದ್ದಂತೆಯೇ ಜರುಗಿದಗೊಲ್ಲತಿಯ ಪವಾಡವನ್ನು ಪರೀಕ್ಷಿಸಿಯೇ ಮನಗಂಡ ಸಂದರ್ಭವು ಬಹುಶಃ ಈರ್ವರ ಮಧ್ಯದ ವಿರಸದ ಆರಂಭವಾಗಿರಬೇಕು. ಹರಳಯ್ಯ ಮಧುವರಸರ ಪ್ರಸಂಗದಲ್ಲಿ ಸಂಬಂಧವೇ ಮುರಿದುಬೀಳುತ್ತದೆ. ಆದರೆ ಶಂಕರಕವಿಯು ಪಶ್ಚಾತ್ತಾಪ ಪಡುವ ಬಿಜ್ಜಳನ ಚಿತ್ರಣವನ್ನಿಲ್ಲಿ ನೀಡಿರುವುದು ವಾಸ್ತವಿಕತೆಗೆ ಹತ್ತಿರವಾಗಿದೆ.

೯. **ಬಸವಣ್ಣನವರ ಐಕ್ಯ :** ಈ ಪ್ರಸಂಗವು ಭೀಮಕವಿಗಿಂತ ಸ್ವಲ್ಪ ಭಿನ್ನವಾಗಿದೆ. 'ಬಸವಪುರಾಣದಲ್ಲಿ ಬರುವ' ಜಗದೇವನ ಪ್ರಸ್ತಾಪ ಶಂಕರಕವಿಯ ಕಾವ್ಯದಲ್ಲಿ ಕಾಣಸಿಗುವುದಿಲ್ಲ.

ಬಸವಪುರಾಣದಲ್ಲಿ ಬಸವಣ್ಣನು ಹರಳಯ್ಯ ಮಧುವರಸರ ಕಣ್ಣನ್ನು ಬಿಜ್ಜಳನು ಕೀಳಿಸಿದನೆಂಬ ದುರ್ವಾರ್ತೆಯನ್ನು ಕೇಳಿ ಜಗದೇವನನ್ನು ಕರೆದು

ನಿನ್ನ ಮುನ್ನಿನ ಭಾಷೆಯಂಸಲಿ
ಸಿನ್ನು ತದ್ರೋಹಿಯನಪಹರಿಸಿ
ನನ್ನಿಯಂ ಮೆಚೆ ಎನುತ ಜಗದೇವಂಗೆ ಬೆಸನಿತ್ತು...ಬಸವಪುರಾಣ (೬-೦೭)

ಸಂಗಮದೆಡೆ ಶರಣರೊಡಗೂಡಿ ಪಯಣಿಸುತ್ತಾನೆ.

ಚೋರಬಸವೇಶ್ವರ ಕಾವ್ಯದಲ್ಲಿ

''ಹಾರುವ ಕುಲ ಹೊಲೆಯಗಲಿಸಿದನು'' ಎಂದು ಕೊಂಡೆ ಮಂಚಣ್ಣನು ಬಸವನವಿರುದ್ಧ ದೊರೆಯಲ್ಲಿಗೆ ದೂರು ತರುತ್ತಾನೆ. ಆಗ ಬಿಜ್ಜಳನು |

ಕೇಳಿಕೆಕ್ಕರಿಸಿ ಕೋಪಾಗ್ನಿ ಪೊತ್ತುತೆ ||
ಪಿಡಿದೆಳೆದುಕೊಂಡು ಬಸವನ ಬನ್ನಿರೆಂದಟ್ಟೆ (೧೦-೨೯, ೪೦-೪೧)

ಸೇವಕರು ಬಸವೇಶನ ಮಠದ ಬಾಗಿಲಬಳಿ ಬರಲು ಹೆಬ್ಬಾಗಿಲಲ್ಲೇ ದ್ವಾರಪಾಲಕರು ತಡೆಯುತ್ತಾರೆ. ಹಡಪದ ಅಪ್ಪಣ್ಣನಿಗೆ ಎಲ್ಲ ಸಂಗತಿಯನ್ನು ತಿಳಿಸುತ್ತಾರೆ. ಆಗ ಅಪ್ಪಣ್ಣನು ಏಕಾಂತದಲ್ಲಿ ಬಸವನಿಗೆ ಎಲ್ಲ ವೃತ್ತಾಂತವನ್ನು ಬಿತ್ತರಿಸುತ್ತಾನೆ.

"ಯಿಲ್ಲಿಗೆಂಭತ್ತೆಂಟು ನಿಜಪವಾಡಂಗಳುಂ
ಯೆಲ್ಲ ಮುಗಿದುವುಯೀಶಕಳುಹಿಸಿದ ಮಣಿಹ ಸಂಪೂರ್ಣಮಾದುದು ಯಿಳೆಯೊಳು
ನಿಲ್ಲಬಾರದು ನೀಲಲೋಚನೆಗೆ ನೀಪೇಳು
ಪುಲ್ಲಶರಹರ ಕೂಡಲೇಶನೊಳು ಕೂಡುವೆವು" (೧೦-೪೨)

ಎಂದು ಯಾರಿಗೂ ಹೇಳದೇ ಸಂಗಮಕ್ಕೈ ತಂದು ಕೂಡಲಸಂಗಮೇಶನನ್ನು ಸ್ತುತಿಸಿ ಅವನೊಳಗೆ ದೀಪ ದೀಪಂ ಕೂಡಿ ಬಯಲ ಬೆರೆದಂತೆ (೧೦-೧೫)

ಒಂದಾಗುತ್ತಾನೆ. ಈ ಸುದ್ದಿ ತಿಳಿದ ಬಿಜ್ಜಳನು ಕುಸಿದು ಚಿಂತೆಯ ತಾಳಿಯೆನ್ನ ಜೀವನ ಮಂತ್ರಿ ಬಸವನಂ ಹೋಗಾಡಿಕೊಂಡೆನೀ ಮಧುವ ಹಳ್ಳುಗರ ದೆಸೆಯಲಿಂದೆನುತ (೧೦-೫೦) ಮಧುವರಸನ ಕಣ್ಣು ಕೀಳಿಸಿ ಹರಳಯ್ಯನ್ನು ಶೂಲಕ್ಕೆ ಹಾಕಲು ಆಜ್ಞಾಪಿಸುತ್ತಾನೆ.

ಹೀಗೆ ಮೂಲವನ್ನನು ಸರಿಸಿಯೂ ಅನೇಕ ಸಂದರ್ಭಗಳಲ್ಲಿ ಶಂಕರಕವಿಯು ಸ್ವಂತಿಕೆಯನ್ನು ಮೆರೆದಿದ್ದಾನೆ. ಮುಂದಿನ ಮೂರು ಸಂಧಿಗಳು ಚಾಮರಸನ ವ್ಯಕ್ತಿತ್ವ ಪ್ರಕಾಶನಕ್ಕೆ ಮೀಸಲಾಗಿದ್ದು, ಇದು ಶಂಕರಕವಿಯ ಪೂರ್ಣ ಸ್ವತಂತ್ರ ಸೃಷ್ಟಿ. ಕಾವ್ಯದ ಆರಂಭ ಮತ್ತು ಅಂತ್ಯಗಳೆರಡರಲ್ಲೂ ಹೊಸತನವನ್ನು ಶಂಕರಕವಿ ಮೆರೆದಿದ್ದಾನೆಂಬುದು ಸ್ಪಷ್ಟ.

ಕೊನೆಯ ಟಿಪ್ಪಣಿಗಳು

೧. ಡಾ. ಸಿ.ವಿ.ಪ್ರಭುಸ್ವಾಮಿಮಠ, ಕನ್ನಡ ಬಸವಪುರಾಣಗಳು, ಬಸವಪುರಾಣ ಪರಂಪರೆ, (ಸಂ) ವ್ಹಿ.ಬಿ.ರಾಜೂರ, ಪು. ೮

೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೯೮

೩. ಡಾ. ಎಫ್.ಟಿ.ಹಳ್ಳಿಕೇರಿ, ಕೆರೆಯಪದ್ಮರಸ ಮತ್ತು ಆತನ ವಂಶಜರು, ಪು. ೧೬೬

೪. ಡಾ. ಎಂ.ಎಸ್.ಸುಂಕಾಪುರ, ಚೋರಬಸವೇಶ್ವರ ಕಾವ್ಯ, ಪ್ರಸ್ತಾವನೆ, ಪು. ೮

೫. ಅದೇ

೬. ಡಾ. ಎಚ್.ತಿಪ್ಪೇರುದ್ರಸ್ವಾಮಿ, ತೌಲನಿಕ ಕಾವ್ಯ ಮೀಮಾಂಸೆ, ಪು. ೮೨

೭. ಡಾ. ಎಂ.ಎಸ್.ಸುಂಕಾಪುರ, ಚೋರಬಸವೇಶ್ವರ ಕಾವ್ಯ, ಪ್ರಸ್ತಾವನೆ, ಪು. ೯

೮. ಅದೇ

೯. ಅದೇ

೧೦. ತೀ.ನಂ.ಶ್ರೀ., ಭಾರತೀಯ ಕಾವ್ಯಮೀಮಾಂಸೆ, ಪು. ೩೧

೧೧. ಡಾ. ಎಫ್.ಟಿ.ಹಳ್ಳಿಕೇರಿ, ಕೆರೆಯಪದ್ಮರಸ ಮತ್ತು ಆತನ ವಂಶಜರು, ಪು. ೧೬೭

೧೨. ಡಾ. ಎಂ.ಎಸ್.ಸುಂಕಾಪುರ, ಚೋರಬಸವೇಶ್ವರ ಕಾವ್ಯ, ಪ್ರಸ್ತಾವನೆ, ಪು. ೧೦

೧೩. ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕನ್ನಡ ಛಂದಃಸ್ವರೂಪ, ಪು. ೫೩೦

೧೪. ವಿವರಗಳಿಗೆ: ಡಾ. ಎಸ್.ವಿದ್ಯಾಶಂಕರ, ಚಾಮರಸನ ಪ್ರಭುಲಿಂಗಲೀಲೆ (ಗದ್ಯಾನುವಾದ) ಪು. ೭

೧೫. ಸಿ.ಪಿ.ಕೃಷ್ಣಕುಮಾರ, ಪುರಾಣಗಳ ಸ್ವರೂಪ, ಪು. ೧೬

೧೬. ಅದೇ

೧೭. ಭೀಮಕವಿರಚಿತ ಬಸವಪುರಾಣದ ಪ್ರಸ್ತಾವನೆ, ಪು. ೧೬ ಮೂಲ ಅರಬಿಂದೊ ಫೌಂಡೇಶನ್ಸ್ ಆಫ್ ಇಂಡಿಯನ್ ಕಲ್ಚರ್, ಪು. ೩೫೨

೧೮. ಡಾ. ಎಫ್.ಟಿ.ಹಳ್ಳಿಕೇರಿ, ಕೆರೆಯ ಪದ್ಮರಸ ಮತ್ತು ಆತನ ವಂಶಜರು, ಪು. ೨೫೮

೧೯. ಡಾ.ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೧, ಪು. ೫೭೯

೨೦. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೧೫೨

೨೧. ಅದೇ

೨೨. ಪ್ರೊ. ಟಿ.ಎಸ್.ವೆಂಕಣ್ಣಯ್ಯ, ಬಸವರಾಜ ದೇವರ ರಗಳೆಯ ಪೀಠಿಕೆ, ಪು.

೨೩. ಡಾ. ಆರ್.ಸಿ.ಹಿರೇಮಠ, ಬಸವಪುರಾಣ, ಪ್ರಸ್ತಾವನೆ, ೧೦೦

೨೪. ಡಾ. ಎಸ್.ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ, ಪು. ೧೫೨

ಅಧ್ಯಾಯ ೬

ನವಮೋಹನ ತರಂಗಿಣಿ

ಅಧ್ಯಾಯ ೬

ನವಮೋಹನ ತರಂಗಿಣಿ

೬.೧. ಕೃತಿಸ್ವರೂಪ

ಇದು ೩೩ ಸಂಧಿ, ೨೦೧೧ ವಾರ್ಧಕ ಷಟ್ಪದಿಯನ್ನೊಳಗೊಂಡ ಒಂದು ದೊಡ್ಡವರ್ಣಕ ಗ್ರಂಥ. ಕೃಷ್ಣ-ರುಕ್ಮಿಣಿ, ಪ್ರದ್ಯುಮ್ನ-ರತಿ, ಅನಿರುದ್ಧ-ಉಷೆ ಇವರ ಶೃಂಗಾರಮಯ ಜೀವನವೇ ಈ ಕಾವ್ಯದ ಪ್ರಮುಖ ವಸ್ತುವಾಗಿದೆ. ಕರ್ತೃಕೋಳೂರು ಶಂಕರಕವಿಯು ಈ ಗ್ರಂಥದ ಅಂತ್ಯದಲ್ಲಿ

"...........ಕಲ್ಪಣಾಕಥೆಯ ಪೇಳಿದನುಯಂದೆನ್ನ
ಪುಸಿಕನೆನದಿರುಗೆ ಶಂಕರನಸಂಹಿತೆ ಭಾಗವತ
ಮುಸುರ್ಪಯಿತಿಹಾಸ ಬೆಂಬಳಿವಿಡಿದು ನಿನ್ನೊಡನೆ ವಚಿಸಿದೆನು ಯಿನಿದುಟಳಿಯಳೇ"

(೩೩-೪೬)

ಎಂದು ಹೇಳಿರುವಂತೆ ಇದು ಕಲ್ಪನೆಯ ಕಥೆಯಲ್ಲ. 'ಶಂಕರ ಸಂಹಿತೆ' ಮತ್ತು 'ಭಾಗವತ'ದ ಆಧಾರದ ಮೇಲೆ ರಚಿತವಾಗಿರುವಂಥದು.

"ಸುಪ್ರಸಿದ್ಧದಿ ಮೆರೆವ ಕೋಳೂರ ರಾಮೇಶ
ನ ಪ್ರತಿಮ ನುಡಿಸುತಿಹ ಚಿತ್ಕಾಂತೆ ಲಾಲಿಪಳು
ಕ್ಷಿಪ್ರ ಕುಪ್ಪಸಕಂಥೆ ಗುರುವರ್ಯ ಪದಪದ್ಮಲೆಂಕ ಶಂಕರನುಸುರ್ದನೂ" (೧-೧೭)

ಕೋಳೂರರಾಮೇಶನು ಶಂಕರಕವಿಯ ಆರಾಧ್ಯದೈವ. ಬಸವರಸ ನಾಗಾಂಬೆಯರು ಕವಿಯ ತಂದೆ-ತಾಯಿಗಳು ಕವಿಯು ತಾನು ಕವಿತಾದಿ ಲಕ್ಷಣಗಳನ್ನು ಓದಿದವನಲ್ಲವೆಂದೂ "ಜಾತ್ಯಂಧಕನ ಬಿಡದೆ ಕೋಲಂ ಪಿಡಿದು ಮುಂದೆ ನಡೆಸಲವಂಪೋಪಂತೆ ಶಿವನೊಲಿದು ಮದ್ವದನದಿ ನಾಲಗೆಯೆ ತಾನಾಗಿ ನುಡಿಸಿದಡೆಯು ಸುರುವೆನು" ಆದ್ದರಿಂದ ಗ್ರಂಥದ ಗುಣದೋಷಗಳು ಪೂರ್ಣವಾಗಿ ಅವನಿಗೇ ಸಲ್ಲತಕ್ಕವುಗಳೆಂದೂ ಶಿವ ನುಡಿಸಿದಂದದಿ ನುಡಿಯುತ್ತಿರುವುದರಿಂದ ಇದರಲ್ಲಿ "ಕವಿತಾದಿ ಲಕ್ಷಣಶಬ್ದಭೇದಮನೆಣಿಸಿ ಕಡೆಗಳೆಯದೆ ಬಾಲಕನ ತೊದಳ್ನುಡಿಯೆಂದು ತಿದ್ದಿ" ಸವಿಯಬೇಕೆಂದು ಕೇಳಿಕೊಂಡಿದ್ದಾನೆ.

[illegible]

[illegible]

[illegible]

[illegible]

[illegible]

[illegible]

ಪ್ರತಿಯೊಂದು ಸಂಧಿಯ ಪ್ರಾರಂಭದಲ್ಲಿ ಕೋಳೂರು ರಾಮೇಶನ ಸ್ತುತಿ ಹಾಗೂ ಗಿರಿಜೆಯನ್ನು ಕುರಿತ ಪ್ರಾರ್ಥನಾಪದ್ಯಗಳಿವೆ. ''ಇವುಗಳು ಸಾಮಾನ್ಯವಾಗಿ ಶಬ್ದಾಲಂಕಾರದಿಂದ ಕೂಡಿದ್ದು ಆಡಂಬರಯುಕ್ತ ವಾಗಿದ್ದರೂ ಕೆಲವೆಡೆ ಮನೋರಂಜಕವಾಗಿವೆ.''[೧] ''ಪ್ರತಿಯೊಂದು ಸಂಧಿಯ ಕೊನೆಯಲ್ಲಿ

ಇದುವೆ ಬಾಣಾಖ್ಯಸಾಯುಜ್ಯ ಪ್ರಬಂಧಮ
ತ್ತಿದುವೆ ನವಮೋಹನತರಂಗಿಣಿಯಭಿದಾನ
ಯಿದನು ಶ್ರೀಕೋಳೂರ ರಾಮೇಶ ನುಡಿಸಿದೊಡೆ ಪೇಳ್ದಶಂಕರನು ನಲಿದು
ಇದನು ಸರಸೋಕ್ತಿಯಿಂ ಬರದೋದಿ ಪೇಳ್ಕೇಳ್ವ
ಸದುಹೃದಯರಾದ ಸತ್ಪುರುಷರಿಗೆ ಸಂತಸದಿ''

ಕುಧರ ಜಾರ್ಧಾಂಗ ಸೌಭಾಗ್ಯಸಂಪದ ಸೌಖ್ಯವಿತ್ತುರಕ್ಷಿಸುವ ಬಿಡದೆ ಎಂದು ಗ್ರಂಥಾಂತ್ಯದ ಪದ್ಯ

''ಪರಮ ಬಾಣಾಖ್ಯ ಸಾಯೂಜ್ಯ ಪ್ರಬಂಧ
ಧುರ ಶಾಲಿವಾಹನ ಶಖ ಸಾವಿರದ ಆರು ನೂರರ ಮೇಲೆ ತೊಂಭ
ತ್ತಾರನೆಯ ಸ್ಮರನಸಂವತ್ಸರದ ಫಾಲ್ಗುಣಶುದ್ಧದೀ
ಮೆರೆವ ತದಿಗಿಯಲಿ ರೇವತಿನಕ್ಷತ್ರದೊಳು ಪರಿಪೂರ್ಣಮಾದುದಿದ
ಲಾಲಿಸಿದ ಬುಧಜನರು......'' (೩೩-೪೫)

ಎಂಬಲ್ಲಿ ಈ ಕೃತಿಯು ಶಾಲಿವಾಹನ ಶಕ ೧೬೯೬ನೆಯ ಮನ್ಮಥ ಸಂವತ್ಸರದ ಫಾಲ್ಗುಣಶುದ್ಧ ತದಿಗೆ ರೇವತಿಯ ನಕ್ಷತ್ರದ ದಿವಸ ಅಂದರೆ ಕ್ರಿ.ಶ. ೧೭೭೪ರ ಮಾರ್ಚ್ ನಾಲ್ಕನೆಯ ತಾರೀಖಿನ ದಿನ ಸಂಪೂರ್ಣ ವಾಯಿತೆಂದು ತಿಳಿದು ಬರುತ್ತದೆ.

ಕೃತಿಯ ಆದಿಯಲ್ಲಿ ಮೊದಲನೆಯ ಆಶ್ವಾಸದಲ್ಲಿ ಕವಿಯು ಶ್ರೀಕೋಳೂರ ರಾಮೇಶ, ಶಿವನಪತ್ನಿ ಪಾರ್ವತಿ, ಸರಸ್ವತಿ, ಮುಂದಿನ ಪದ್ಯಗಳಲ್ಲಿ ನಂದಿ, ಭೃಂಗಿ, ವೀರಸ್ಕಂದ, ಅವರ ಸತ್ಸಂಪ್ರದಾಯದಲ್ಲಿ ಪ್ರವರ್ತಿಸುವ ಗುರು ಚರರ್ಗಗಳ, ರೇವಣ, ಮರುಳಸಿದ್ಧರಾಯಾರ್ಯ ಶ್ರೀಪಂಡಿತಾರಾಧ್ಯಾದಿ ವೀರಶೈವ ಆಚಾರ್ಯರನ್ನು, ಪ್ರಭುದೇವ, ಸಂಗನಬಸವ ಚಿಕ್ಕ ಚನ್ನಬಸವ, ಮಡಿವಾಳ ಮಾಚರಸ, ಕಲಕೇತಬ್ರಹ್ಮಯ್ಯ, ಬಾಣಮಯೂರ ಕಾಳಿದಾಸ, ಮೊಗ್ಗೆಯಮಾಯಿದೇವ, ಹರಿಹರ, ಚಾಮರಸ, ಭೀಮರಸ, ಲಕ್ಕಣಾಮಾತ್ಯ, ಪಾಲ್ಕುರಿಕೆ ಸೋಮನಾಥ ಮೊದಲಾದ ಪೂರ್ವ ಶಿವಕವಿಗಳನ್ನು ಸ್ತುತಿಸಿದ್ದಾನೆ.

ನಂತರದ ಅಧ್ಯಾಯಗಳಲ್ಲಿ ಕ್ರಮವಾಗಿ ಬಾಣಾಸುರನೆಂಬ ಶಿವಭಕ್ತನ ಆಳ್ವಿಕೆಗೊಳಪಟ್ಟಿದ್ದ ಶೋಣೀತ ಪುರದ ವರ್ಣನೆ, ಅವನ ರಾಜ್ಯವೈಭವ, ದೇವತೆಗಳಿಗೆ ತಾರಕಾಸುರನ ಬಾಧೆ. ಬ್ರಹ್ಮನಿಗೆ ವಿಷ್ಣುವಿನ ಉಪದೇಶ, ಬೃಹಸ್ಪತಿಯು ಶಿವನ ತೋಪಭಂಗಕ್ಕೆ ಮನ್ಮಥನನ್ನು ಪ್ರೇರೇಪಿಸುವುದು. ಮನ್ಮಥನ ಪ್ರಯಾಣ, ಮನ್ಮಥನು ಶಿವನನ್ನು ಕೆಣಕಿ ಮರಣ ಹೊಂದುವುದು, ರತಿಯಪ್ರಲಾಪ ಮತ್ತು ಈಶ್ವರನ ಅಭಯ ಪ್ರಧಾನ, ಅರಣ್ಯದ

ವರ್ಣನೆ, ಶಂಬರನ ಮನೆಯಲ್ಲಿ ರತಿಯವಾಸ ಮತ್ತು ಅವಳಲ್ಲಿ ಶಂಬರನವ್ಯಾಮೋಹ, ದ್ವಾರಕಾಪುರದಲ್ಲಿ ಕೃಷ್ಣ-ರುಕ್ಮಿಣಿಯರ ವೈಭವ, ರುಕ್ಮಿಣಿಯ ಗರ್ಭದಲ್ಲಿ ಪ್ರದ್ಯುಮ್ನ ಜನಿಸಿದ್ದು. ಶಂಬರಾಸುರನವಧೆ, ರತಿ ಪ್ರದ್ಯುಮ್ನರ ವಿವಾಹ, ಅನಿರುದ್ಧನ ಜನನ, ಬಾಣನು ವೀರಶೈವ ದೀಕ್ಷೆಯನ್ನು ಪಡೆದದ್ದು ಮತ್ತು ಆತನ ಶಿವಪೂಜೆ, ಬಾಣನಭಕ್ತಿಗೆ ಶಿವನು ಮೆಚ್ಚಿದುದು, ಬಾಣನಿಗೆ ಉಷಾದೇವಿಯ ಜನನ, ಶೈಶವ, ಅಂಬಿಕಾಪೂಜೆ ಮತ್ತು ವರಪ್ರಸಾದ, ಉಷಾವಿರಹ, ಚಿತ್ರಲೇಖೆಯು ಚಿತ್ರಪಟವನ್ನು ತಂದದ್ದು, ಉಷಾ ಅನಿರುದ್ಧರ ಸಮಾಗಮ, ಶಿವನಿಗೂ ಕೃಷ್ಣನಿಗೂ ಯುದ್ಧ, ಕೃಷ್ಣ ಬಾಣಾಸುರರ ಯುದ್ಧ, ಉಷಾದೇವಿಯ ವಿವಾಹ, ಶಿವನು ಬಾಣಾಸುರನನ್ನು ಕೈಲಾಸಕ್ಕೆ ಕರೆದೊಯ್ದು ಗಣಪದವಿಯನ್ನಿತ್ತದ್ದು ಹೀಗೆ ಹಲವಾರು ಸಂಗತಿಗಳು ತುಂಬ ವರ್ಣನಾತ್ಮಕವಾಗಿ ಮೂಡಿಬಂದಿವೆ.

ಕನಕದಾಸರ ಮೋಹನ ತರಂಗಿಣಿ ಈ ಕೃತಿಗೆ ಮೂಲ ಆಕರವಾಗಿದೆ. "ಬರದೋದಿದವನಲ್ಲ ಕನಕದಾಸನ ವಡನೆ ಹರಿಮುನ್ನ ಪೇಳಿಸಿದ" ಎಂಬ ಮಾತುಗಳಲ್ಲಿ ಶಂಕರಕವಿಯು ವಿನಯಪೂರ್ವಕಾವಗಿ ಕನಕದಾಸರಿಗೆ ತಾನು ಋಣಿಯಾಗಿರುವುದನ್ನು ತಿಳಿಸಿದ್ದಾನೆ.

ಕನಕದಾಸರಂತೆಯೇ "ಕವಿಯು ಈ ಕಾವ್ಯವನ್ನು ತನ್ನ ಪ್ರಿಯಳಿಗೆ ಹೇಳುತ್ತಿರುವುದರಿಂದ ಗ್ರಂಥಕ್ಕೆ ಒಂದು ವೈಶಿಷ್ಟ್ಯವುಂಟಾಗಿದೆ."[೨] ಪ್ರತಿಯೊಂದು ಸಂಧಿಯ ಪ್ರಾರಂಭದಲ್ಲಿ ಮತ್ತು ಕೆಲವೊಮ್ಮೆ ಮಧ್ಯದಲ್ಲಿಯೂ ಅವರಿಬ್ಬರ ಸಂಭಾಷಣೆಗಳು ಏಕತಾನತೆಯನ್ನು, ಪಾಂಡಿತ್ಯ ಪ್ರದರ್ಶನದ ಬೇಸರಿಕೆಯನ್ನು ಹೊಡೆದೋಡಿಸಲು ನೆರವಾಗುತ್ತವೆ. ಇದು ಈ ಕೃತಿಯ ಸ್ಥೂಲ ಸ್ವರೂಪ.

೬.೨. ಕಥಾಸಾರ

ಶಿವನೊಲವ ಪಡೆದವರ ಸತ್ಕಥೆಯನ್ನು ಕೇಳುವ ಬಯಕೆ ವ್ಯಕ್ತಪಡಿಸಿದ ಪತ್ನಿಗೆ ಕವಿಯು 'ನವಮೋಹನ ತರಂಗಿಣಿ'ಯೆಂಬ ಸತ್ಕಥೆಯನ್ನು 'ನಿನ್ನ ಹೃದಯಾಂಬೋಧಿ ಪೋಗಿ ವರ್ಧಿಸುವಂತೆ' (ನವಮೋಹನ ತರಂಗಿಣಿ ೧-೨) ಹೇಳುವೆನೆಂದು ಕಥೆಯನ್ನು ಪ್ರಾರಂಭಿಸುತ್ತಾನೆ.

ಹಿಮಾಲಯದಲ್ಲಿ ದಕ್ಷಿಣಕ್ಕಿರುವ ಭರತಖಂಡದಲ್ಲಿ ಛಪ್ಪನ್ನ ದೇಶಗಳಲ್ಲಿ ಬಲಿಪುತ್ರ ಬಾಣಾಸುರನು ಆಳುತ್ತಿದ್ದ ದೇಶ ಸುವಿಶಾಲವಾಗಿತ್ತು. ಮಧ್ಯದಲ್ಲಿ 'ಗೋಮತಿ'ಯೆಂಬ ಪುಣ್ಯತೀರ್ಥ. ಅದರ ತೀರದಲ್ಲಿ "ಮೇದಿನಿಯೊಳು ಮುನಿವ ಶತೃಗಳ ಪಿಡಿತಂದು ಕೊಯ್ದು ರಕ್ತದಿ ಕದಡಿ ಮೃತ್ತಿಕೆಯೊಳಂಬಿಡದೆ" (೨-೨೨) ನಾದಿ ಕಟ್ಟಿದ ಕೋಟೆಯಿರುವ 'ಶೋಣಿತಪುರ' ಅದು ಧಾತ್ರಿದೇವತೆಯ ಅಮಳ ಭಾಳದೊಳಗಿಟ್ಟ ಮುತ್ತಿನ ಬೊಟ್ಟಿನಂತಿತ್ತು. ಇದನ್ನು ನಿಶ್ಚಿಂತನೂ, ನೀತಿಯುತನೂ, ರಿಪುಕುಲ ಶಿಕ್ಷಕ, ನತಜನಸಂರಕ್ಷಕನೂ ಆಗಿದ್ದ ಶಿವಭಕ್ತ ಬಾಣಾಸುರನು ಆಳುತ್ತಿದ್ದ. ಆತನ ಪತ್ನಿ ಶ್ರೀಗಿರಿಜೆಯ ಸದ್ವ್ರತಸ್ಥೆಯೂ ತರುಣಿಯರ ಕುಲಶಿರೋಮಣಿಯೂ ಆಗಿದ್ದ ಪತಿ ಕೂಲೆ ಭದ್ರಾವತಿ ತನ್ನ ಕುಲಗುರು ಸುಭಾರ್ಗವಾಚಾರ್ಯರಿಂದ ಬಾಣಾಸುರನು ವೀರಶೈವದೀಕ್ಷೆ ಪಡೆದು ತ್ರಿಕಾಲದಲ್ಲೂ ಶಿವಲಿಂಗಪೂಜಕನಾಗಿದ್ದ ಆತನ ಪ್ರತಿಬಿಂಬವೇ

ಮೂರ್ತಿಗೊಂಡಂತೆ ಕುಂಭಾಂಡನೆಂಬ ಸಚಿವೇಂದ್ರನು ನೃಪನಿಗೆ ಅತ್ಯಂತ ಆಪ್ತನಾಗಿದ್ದುಕೊಂಡು ಕಾರ್ಯ ನಿರ್ವಹಿಸುತ್ತಿದ್ದನು. ಆತನ ಪತ್ನಿ 'ಕುಂಭಿನಿ'ಯು ನವಕಲಾ ಕೋವಿದೆಯೆನಿಸಿ ಅವಿರಳ ಗುಣಾನ್ವಿತೆಯಾಗಿದ್ದಳು. ಬಾಣಾಸುರನು ಧರೆಗೆ ಅಭಿನವರುದ್ರನೆನಿಸಿ ಸರ್ವಸಂಪತ್ತಿನಿಂದ ಸಾಮ್ರಾಜ್ಯವನ್ನಾಳುತ್ತಿದ್ದನು. ಇತ್ತ ದೇವೇಂದ್ರಾದಿ ಪ್ರಮುಖ ಸುರನಿಕರರೊಡಗೂಡಿ ಬ್ರಹ್ಮನು ವಿಷ್ಣುವಿನ ಬಳಿ ಬರುತ್ತಾನೆ. ಇಂದ್ರಲೋಕಕ್ಕೆ ತಾರಕಾಸುರನಿಂದ ಒದಗಿರುವ ಉಪಟಳವನ್ನು ನಿವಾರಿಸಬೇಕೆಂದು ಪರಿಪರಿಯಾಗಿ ಸ್ತುತಿಸಿ ಬೇಡಿಕೊಳ್ಳುತ್ತಾನೆ. ಆಗ ಶ್ರೀಹರಿಯು ಬ್ರಹ್ಮನೇ ನಿನ್ನಿಂದಲೇ ವರಪಡೆದು ತಾರಕನು ಗರ್ವಿಯಾಗಿದ್ದಾನೆ. ಇಂದು ಮೌಳಿಯ ಆತ್ಮಸುತನಿಂದಲವಗೆ ಜೀವನ್ಮುಕ್ತಿ, ಶಿವನು ಪಾರ್ವತಿಯೊಂದಿಗೆ ಸಂಭೋಗಿಸಿದರೆ ಸ್ಕಂದನುದಿಸುವನು. ಉಗ್ರತಪಸ್ಸಿನಲ್ಲಿ ನಿರತನಾಗಿರುವ ಶಿವನನ್ನು ಪಾರ್ವತಿಯೊಡನೆ ಸಂಪರ್ಕಗೈಸಲು ಮನ್ಮಥನಿಂದ ಮಾತ್ರಸಾಧ್ಯ. ಆತನ ಪಂಚೆಸಲ್ಲಣೆಗಳ ಪ್ರಯೋಗದಿಂದ ಪರಶಿವನ ಯೋಗಮುದ್ರೆಯೊಡೆದು ಮೊದಲಿನಂತೆ ಶಿವೆಯ ಸಂಪರ್ಕದಲ್ಲಿರುತ್ತಾನೆಂದು ತಿಳಿಸುವನು. ಹರ್ಷಚಿತ್ತನಾದ ಬ್ರಹ್ಮನು ಸಕಲ ಅಮರಗಣದೊಡನೆ ಸತ್ಯಲೋಕಕ್ಕೆ ಬಂದು ಸುರಗುರು ಬೃಹಸ್ಪತಿಯಲ್ಲಿ ಹೀಗೆ ಬಿನ್ನವಿಸಿಕೊಳ್ಳುತ್ತಾನೆ. ''ನೀನು ಅಖಿಳ ಸುರಗಣ ಕುಲದ ಆಚಾರ್ಯ, ಅವರಿಗೆ ತಾರಕನಿಂದ ಬಂದ ಕಂಟಕವನ್ನು ನಿವಾರಿಸಲು ನಿನ್ನ ಆಪ್ತಶಿಷ್ಯ ಮನ್ಮಥ ನೃಪನನ್ನು ಪ್ರೇರೇಪಿಸಬೇಕು. ಅವನು ಗುರುವಾಕ್ಯವನ್ನು ಮೀರಲಾರ'' ಎಂದು ಅಡಿಗೆರಗುವನು. ಶ್ರೀಗುರು ಬೃಹಸ್ಪತಿಯು ಹಾಗೆಯೇ ಆಗಲೆಂದು ಅಭಯವಿತ್ತು ಶಶಿಯೆಡೆಗೆ ಅಷ್ಟನಿಗ್ರಹ ಬರ್ಪಂತೆ ಮನ್ಮಥನಿರುವ ಕುಸುಮಾವತಿ ಪಟ್ಟಣಕ್ಕೆ ಆಗಮಿಸುತ್ತಾನೆ. ಅದು ಸುರನಗರಿಯಂತೆ ಶೋಭಿಸುತ್ತಿತ್ತು ತನ್ನಲ್ಲಿಗೆ ಬಂದ ಗುರುವರನ ಪಾದದಡಿಗೆ ನಮಿಸಿ, ಅರ್ಘ್ಯಪಾದ್ಯಂಗಳಿಂದರ್ಚಿಸಿ, ಸಂತೃಪ್ತಿಪಡಿಸಿ ಗುರುಗಳ ಆಗಮನದ ಕಾರಣವನ್ನು ತಿಳಿಯಲು ಅಪೇಕ್ಷಿಸುತ್ತಾನೆ. ಆಗ ಬೃಹಸ್ಪತಿಯು ತನ್ನಕಾರ್ಯದ ಮಹತ್ತನ್ನು ಚಿಂತಿಸಿ ನೂರು ಜನ ಅಳಿದು ಒಬ್ಬನು ಉಳಿವುದು ಮೇದಿನಿಯೊಳು ಲೇಸೇ? ಒಬ್ಬನಳಿದು ಇಬ್ಬರ ಕಾಯ್ದುಕೊಂಬುದುವಳಿತೆ? ಎಂದು ಕೇಳುತ್ತಾನೆ. ತನಗೆ ಮುಂದೇನಾಗುವುದೆಂಬುದನ್ನರಿಯದೆ ಮನ್ಮಥನು ''ಅಳಿದೊರ್ವನನಿಬರನುಳು ಹುವುದೆ ಧರ್ಮ'' ಎಂದುತ್ತರಿಸುತ್ತಾನೆ. ನಳಿನಾಸ್ತ್ರನೀನಿತ್ತ ಸತ್ಯವಾಕ್ಯವಬಿಡದೆ ಕಲಿಯಾಗು ಎಂದು ತಾರಕನ ಉಪಟಳ, ವಿಷ್ಣುವಿನ ಸಲಹೆ, ತಾನಿಲ್ಲಿಗೆ ಬಂದ ಉದ್ದೇಶವೆಲ್ಲವನ್ನೂ ಸಾದ್ಯಂತವಾಗಿ ವಿವರಿಸುತ್ತಾನೆ. ''.....ಅಮರರನ್ನುಳಿಸಲು ಹರಿ ಬ್ರಹ್ಮರು ಎನ್ನ ಕಳೆವರವನೀಗ ಹೇಳಿದರೆ ಎಂದು ಮನ್ಮಥನು ಪ್ರಶ್ನಿಸಿದಾಗ ದೇಹದನಶ್ವರತೆಯನ್ನು ತಿಳಿಸುತ್ತ ಬೃಹಸ್ಪತಿಯು ಈ ದೇಹ ಅನಿತ್ಯ ಎಂದಿದ್ದರೂ ಅಳಿಯುವುದು, ಸತ್ಯ, ಸತ್ಕೀರ್ತಿವಧು ಸೂರ್ಯ ಚಂದ್ರರಿರುವತನಕ ಕೈಹಿಡಿದು ಸಾರುವಳು. ಮಾಂಧಾತ ಶ್ರೀಜಿತರ ಉದಾಹರಣೆಯನ್ನಿತ್ತು ''ಈ ಜಡದೇಹ ದಿಂದ ಫಲವೇನು? ನೀನಿತ್ತಮಳ ಸತ್ಯಭಾಷೆಯ ನಡೆಸು, ಪುಸಿಯಬೇಡ'' ಎಂಬಿತ್ಯಾದಿಯಾಗಿ ಬೋಧಿಸಲು ವೀರಾವೇಶದಿಂದ ಶಿವನ ತಪೋಭಂಗಕ್ಕೆ ಅಣಿಯಾಗಿ ಗುರುವಿನ ಹರಕೆ ಪಡೆದು ರತಿಯಲ್ಲಿಗೆ ಬರುತ್ತಾನೆ. ರಾಹುಗ್ರಸ್ತ ಚಂದ್ರನಂತೆ ಕಂದಿ ಕುಂದಿದ ರತಿಯು ''ಸನುಮತವೆ ಬಲವಂತರೊಳು ಕಲಹ? ಮುನ್ನ ಜೈಸಿದರಾರು

ಶಿವನ ಕೆಣಕಿ? ಎಂದು ತಿಳಿಹೇಳಿ ತಡೆಯುವಯತ್ನ ಮಾಡುತ್ತಾಳೆ. ಆದರೆ ಮಾರನು ತಾನು ಗುರುವಿಗೆ ಕೊಟ್ಟ ಭಾಷೆಗೆ ತಪ್ಪಲಾರೆ. ಏನಾದುದಾಗಲಿ, ಪೋಪೆನ್, ನಿನ್ನಪುಣ್ಯದ ಫಲನಿನ್ನನ್ನು ಕಾಯದೇ ಬಿಡುವುದೇ?''... ''ರತಿಕಾಮರುಗಳು ವೊಬ್ಬೊಬ್ಬರನು ಹೆರೆಹಿಂಗದಿರುತಿಹೆವು ಯಿದು ತತ್ವವು'' ಎಂದು ಸಂತೈಸಿ ತನ್ನ ಮಂತ್ರಿಗಳಾದ ವಸಂತ ಚಂದ್ರರಿಗೆ ತನ್ನ ಚತುರಂಗಬಲವನ್ನು ಕರೆಸಲು ಅಪ್ಪಣೆಮಾಡುತ್ತಾನೆ. ತಮ್ಮ ಸಲಹೆ ಮಾರನಿಗೆ ರುಚಿಸದೆಂದರಿತು ಅವರು ಮಂದ ಮಾರುತನಿಗೆ ಆಜ್ಞಾಪಿಸಲು ಅಖಿಳ ಪಕ್ಷಿಯ ನಾಯಕರೆಲ್ಲ ಬರುತ್ತಾರೆ. ಚೈತ್ರರಥವನ್ನೇರಿ ಕಾಮಚಕ್ರೇಶನು ತನ್ನ ಸೇನೆಯೊಂದಿಗೆ ಮೋಹದ ಮಾಯಾಬಲೆ ಯನ್ನು ಬೀಸುತ್ತ ಹೊರಟನು. ಇತ್ತ ಶಿವನ ತಪೋವನದಲ್ಲಿ ಮುಂಗುಲಿ ಉರಗ, ಗರುಡ, ಹರಿಣ, ಹುಲಿ, ಆನೆ, ಸಿಂಹಗಳು ತಮ್ಮ ಶತೃತ್ವವನ್ನು ಮರೆತು ಅತಿವಿನಯದಿಂದ ಬಾಳುತ್ತಿದ್ದವು. ಅಲ್ಲಿ ಪಂಚಾಕ್ಷರಿ ಮಂತ್ರ ಆಗಮಗಳ ಪಠಣ ನಡೆಯುತ್ತಿತ್ತು. ಅತ್ರಿ ಕಸ್ಯಪ, ಭಾರದ್ವಾಜಾದಿ ಮುನಿಗಳು ಪರಮ ನಿರ್ಮಲ ಹೃದಯರಾಗಿ ಶಿವದರ್ಶನ ಮಾಡುತ್ತಿದ್ದರು. ಇಂಥ ತಪೋವನದ ಮಧ್ಯದಲ್ಲಿ ಈಶ್ವರನು ಭದ್ರಾಸನದಲ್ಲಿ ಕುಳಿತು ಕುಂಡಲಿನೀ ಶಕ್ತಿಯನ್ನು ಊರ್ಧ್ವಮುಖಗೊಳಿಸಿ ರಜತಶೈಲವೇ ತಪೋಧನರೂಪತಾಳಿರ್ದೊಲು ಉಗ್ರತಪೋನಿರತನಾಗಿದ್ದ ಇವನ ತಪೋಭಂಗಕ್ಕೆಂದೇ ಆಗಮಿಸುತ್ತಲಿದ್ದ ಮಾರನ ಪ್ರಲಾಪವನ್ನು ಕಂಡು ನಂದೀಶನು ಕೋಪಾಗ್ನಿಯನ್ನು ಗುಳುತ್ತ ಮಾರನತ್ತ ಆಗಮಿಸುತ್ತಾನೆ. ಮಾರನು ಹೆದರಿಕಂಗೆಟ್ಟು ವೃಕ್ಷವನ್ನೇರಿದ್ದನ್ನು ಕಂಡಗಿರಿಜೆಯು ನಂದೀಶನಿಗೆ ಮಾರನ ಆಗಮನದ ಕಾರಣ ತಿಳಿಸಿ ಸಮಾಧಾನಪಡಿಸುತ್ತಾಳೆ. ಮಾರನು ತಡಮಾಡದೆ ಶಿವನ ಮೇಲೆ ಪುಷ್ಪಬಾಣಗಳನ್ನು ಪ್ರಯೋಗಿಸಲು ಪಂಚವರ್ನಸ್ವರೂಪಕನ ಸರ್ವಾಂಗಗಳ ವಂಚನೆಯಿಲ್ಲದೆ ತಾಗಿ, ವಿರಹಾಗ್ನಿ ಆವರಿಸಲು ಅತಿಕೋಪದಿಂದ ತನ್ನ ಹಣೆಗಣ್ಣನ್ನು ತೆರೆಯಲು ''ನಿಮಿಷಾರ್ಧದೊಳು ಚಿತ್ರಪಟವ ದಹಿಪಂತೆ ದಹನಂಗೊಳಿಸಿ ಮಾರನನ್ನು ಭಸ್ಮೀಕೃತಗೊಳಿಸಿ ಬಿಡುತ್ತಾನೆ. ರತಿಯು ತನ್ನ ಸ್ನೇಹಿತೆಯರಿಂದ ಈ ವಿಷಯ ತಿಳಿದು ನವಕದಳಿಮೂಲಮಂ ಭೇದಿಸಲು ಕೆಡೆವಂತೆ ಧೊಪ್ಪನೆ ಮೂರ್ಛಿತಳಾಗಿ ಭೂಮಿಗೆ ಬೀಳುತ್ತಾಳೆ. ಗೆಳತಿಯರು ಸಂತೈಸಿ ಶಿವನಲ್ಲಿಗೆ ಅವಳನ್ನು ಕರೆತರುತ್ತಾರೆ. ಶೈಲಜೆಯು ಪನ್ನಗಾಭರಣನು ಮುನಿದೊಡೆಕೊಲ್ವ ಶರಣು ಹೊಕ್ಕರಕಾಯ್ವ ಕರುಣಾನಿಧಿ ಅವನು ಶಾಂತಿಯಿಂದ ನೋಡಲೊಡನೆ ನಿನ್ನ ಮಾರನು ಪುನಃ ಜೀವಿಸುವನು ಇದು ಹುಸಿಯಲ್ಲ ಎಂದು ಸಂತೈಸುತ್ತಾಳೆ. ಅಂತೆಯೇ ಶಿವನಿಂದ ಚಿರಮುತ್ತೈದೆಯಾಗಿರುವ ಹರಕೆ ಪಡೆದು ಶೈಲಜೆಯಿಂದ ಬೀಳ್ಕೊಂಡು ಹೊರಡುತ್ತಾಳೆ. ತನ್ನ ಪತಿಯನ್ನು ಮರಳಿ ಪಡೆಯದೆ ತಾನು ತನ್ನ ನೆಲೆಗೆ ಮರಳಲಾರೆನೆಂದು ಅರಣ್ಯದಲ್ಲಿ ಸಂಚರಿಸುತ್ತಿರುವಾಗ 'ಶಂಬರಾಸುರ'ನ ತೋಟಿಗನು ರತಿಯ ವಿಷಯ ತಿಳಿಸುತ್ತಾನೆ. ರತಿಯು ಆತನ ಅರಮನೆಗೆ ಹೋಗಲು ನಿರಾಕರಿಸುತ್ತಾಳೆ. ಆದರೆ ಮಂತ್ರಿಯ ಸಂತೈಕೆಯಿಂದ ಸನ್ಯಾಸಿನಿಯಾಗಿರುವೆನೆಂದು ಅಲ್ಲಿಗೆ ಹೊರಡುತ್ತಾಳೆ. ಶಂಬರಾಸುರನ ಅಡಿಗೆ ಮನೆಯ ಮೇಲ್ವಿಚಾರಕಿಯಾಗಿ ನೇಮಕಗೊಳ್ಳುತ್ತಾಳೆ. ಕೆಲದಿನಗಳ ನಂತರ ರತಿಗೆ ಆಶಿಸಿದ ಶಂಬರಾಸುರನು ತನ್ನ ಪತ್ನಿಯನ್ನು ರಾಯಭಾರಕ್ಕೆ ಕಳುಹಿಸುತ್ತಾನೆ. ಅದಕ್ಕೊಪ್ಪದ ರತಿಯು ಪ್ರಾಣಾರ್ಪಣೆಗೆ

ಸನ್ನದ್ಧಳಾಗಲು "ಶಂಬರನು" ನಿನ್ನ ಪತಿವ್ರತತ್ವವನ್ನು ಪರೀಕ್ಷಿಸಿದೆ. ನನ್ನನ್ನು ಶಿಶುವೆಂದು ಭಾವಿಸು, ತಾಯಿಯಾಗು" ಎಂದು ಕ್ಷಮೆಬೇಡುತ್ತಾನೆ.

ಇತ್ತ ದ್ವಾರಕಾಪುರದಲ್ಲಿ ಕೃಷ್ಣನ ಒಡ್ಡೋಲಗದಲ್ಲಿ ಪೌರಾಣಿಯು "ಅಪುತ್ರಸ್ಯಗತಿರ್ನಾಸ್ತಿ" ಎಂದು ಹೇಳುತ್ತಿದ್ದುದನ್ನು ಕೇಳಿ ರುಕ್ಮಿಣಿಗೆ ಮಗುವಿನ ಬಯಕೆಯಾಗುತ್ತದೆ. ಕೃಷ್ಣ ರುಕ್ಮಿಣಿಯರ ಬಯಕೆ ಫಲಿಸಿ ಪ್ರದ್ಯುಮ್ನನ ಜನನವಾಗುತ್ತದೆ. ನಾರದನಿಂದ ಆ ಮಗುವು ತನ್ನ ಶತ್ರುವೆಂದು ತಿಳಿದು ಶಂಬರಾಸುರನು ಅದನ್ನು ಅಪಹರಿಸಿ "ಶಿಶುವಧೆಯ ಪಾಪ ಬೇಡವೆಂದು ಬಗೆದು" ಸಮುದ್ರಕ್ಕೆಸೆದು ಹೋಗುತ್ತಾನೆ. ಮಗ್ಗುಲಲ್ಲಿನ ಮಗುವನ್ನು ಕಾಣದ ರುಕ್ಮಿಣಿಯ ಗೋಳು ಹೇಳತೀರದಾಯಿತು. ಕೃಷ್ಣನು ತನ್ನನ್ನು ನೋಡಿ ಮರೆಯೆಂದು ಅವಳನ್ನು ಸಂತೈಸುತ್ತಾನೆ.

ಶಂಬರಾಸುರನ ಆಸ್ಥಾನಕ್ಕೆ ಒಬ್ಬಬೆಸ್ತರವನು ಒಂದು ಹೊಳೆಯುವ ಮೀನನ್ನು ತಂದು ಕಾಣಿಕೆಯಾಗಿ ನೀಡುತ್ತಾನೆ. ಅಡುಗೆ ಮನೆಯಲ್ಲಿದ್ದ 'ರತಿ'ಯು ಆ ಮೀನನ್ನು ಕೊಯ್ಯಲು ಮಗುವೊಂದನ್ನು ಕಂಡು ಮೂರ್ಛಿತಳಾಗುತ್ತಾಳೆ. ಆ ಮಗು ನಿನ್ನ ಪತಿಯೆಂದು ನಭೋವಾಣಿ ಮೊಳಗುತ್ತದೆ. ಶಂಬರಾಸುರನಿಗೆ ಅದು ತನ್ನ ಸಖಿಪಡೆದ ಮಗುವೆಂದು ತಿಳಿಸಿ ಪೋಷಿಸ ತೊಡಗುತ್ತಾಳೆ. ಆ ಮಗುವಿಗೆ ಮಾರು ಹೋದ ಶಂಬರನು ತನ್ನ ವಿದ್ಯವನನ್ಯರಾರಾದೊಡಂ ಕಲಿಯೆ ತನ್ನ ಕೊಲುವವರೆಂದು' ಗುರುವು ಹೇಳಿದ ಮಾತನ್ನು ಮರೆತು 'ಚಿಣ್ಣ'ನೆಂಬ ಉದಾಸೀನ ಭಾವದಿಂದ ಎಲ್ಲ ವಿದ್ಯೆಗಳನ್ನು ಕಲಿಸಿಕೊಡುತ್ತಾನೆ. ಮತ್ತೆ ನಾರದರು ಆಗಮಿಸಿ 'ಕುಲದ ಬೇರಿಗೆ ಗುದ್ದಲಿಯನೆ ತಂದುಕೊಂಬರೆ ಎಂದು ಶಂಬರನ ವೈರಿ ಪ್ರದ್ಯುಮ್ನನೆಂದು ತಿಳಿಸುತ್ತಾನೆ. ಶಂಬರಾಸುರ ಮತ್ತು ಪ್ರದ್ಯುಮ್ನರ ಮಧ್ಯೆ ಯುದ್ಧವೇರ್ಪಡುತ್ತದೆ. ಶಂಬರನು ತನಗೆ ಆ ಮಗುವನ್ನು ಸಲುಹಿದ ಮೋಹ ಬಿಡದು ಎಂದು ತಿಳಿಹೇಳುವ ಪ್ರಯತ್ನ ಮಾಡಿದರೂ ತನ್ನ ಸತಿ ರತಿಯನ್ನು ಮೋಹಿಸಿದ ತಪ್ಪಿಗೆ ಶಿಕ್ಷೆ ಎಂದುತ್ತರಿಸಿ ಶಂಬರನನ್ನು ಪ್ರದ್ಯುಮ್ನನು ವಧಿಸುತ್ತಾನೆ. ಆತನ ಮಂತ್ರಿಗೆ ದೇಶದ ಅಧಿಪತ್ಯವನ್ನು ವಹಿಸಿ ರತಿಯೊಡನೆ ದ್ವಾರಕೆಗೆ ಆಗಮಿಸುತ್ತಾನೆ. ಅಲ್ಲಿ ಕೃಷ್ಣನು ಸಕಲ ವೈಭವದೊಂದಿಗೆ ರತಿ ಪ್ರದ್ಯುಮ್ನರ ವಿವಾಹವೇರ್ಪಡಿಸುತ್ತಾನೆ. ಅವರ ಉದರದಲ್ಲಿ ಅನಿರುದ್ಧನು ಜನಿಸುತ್ತಾನೆ. ಯೀರಲಹಬ್ಬ ನಾಮಕರಣ ಶಾಸ್ತ್ರಗಳು ವಿಜೃಂಭಣೆಯಿಂದ ಜರುಗುತ್ತವೆ. ಅನಿರುದ್ಧನು ತನ್ನ ಬಾಲಲೀಲೆಗಳಿಂದ ಎಲ್ಲರನ್ನೂ ಸಂತಸದ ಸಾಗರದಲ್ಲಿ ಮುಳುಗಿಸುತ್ತಾನೆ. ಗಣಪತಿಯ ಪೂಜೆಯೊಂದಿಗೆ ಆತನ ವಿದ್ಯೆಕಲಿಕೆ ಆರಂಭವಾಗುತ್ತದೆ. ಸಕಲವಿದ್ಯಾ ಪಾರಂಗತನಾಗಿ ಗರಡಿವಿದ್ಯೆ ವೈಹಾಳಿಗಳನ್ನೂ ಕಲಿಯುತ್ತಾನೆ. ಮಹಾಶೂರನಾದ ಅನಿರುದ್ಧನು ಒಂದು ದಿನ ತನ್ನ ಮುತ್ತಯ್ಯ ಶ್ರೀಕೃಷ್ಣನಲ್ಲಿ 'ಬೇಟೆ'ಗೆ ಹೋಗಲು ಅಪ್ಪಣೆ ಪಡೆದು ಸ್ನಾನ, ಪೂಜೆ ಪೂರೈಸಿಕೊಂಡು ಭೋಜನಂಗೈದು ತಾಯ್ತಂದೆಯರಿಗೆರಗಿ ಕಾನನಕ್ಕೆ ಹೊರಡುತ್ತಾನೆ. ಅಡವಿಕುಲದವರು ಅನಿರುದ್ಧನ ಪರಾಕ್ರಮವನ್ನು ಕಂಡು ಅನೇಕಾನೇಕ ಕಾಣಿಕೆಗಳನ್ನಿತ್ತು ಬೀಳ್ಕೊಡುತ್ತಾರೆ. ಸೂರ್ಯಾಸ್ತವಾಗಲು ಅನಿರುದ್ಧನು ರಾತ್ರಿವಿಹಾರಕ್ಕೆ ಅಣಿಯಾಗುತ್ತಾನೆ.

[illegible]

ಅತ್ತ ಶೋಣೀತಪುರದಲ್ಲಿ ಬಾಣಾಸುರನ ಆಸ್ಥಾನಕ್ಕೆ 'ಸುಭಾರ್ಗವಾಚಾರ್ಯ' ಗುರುಗಳ ಆಗಮನ ವಾಗುತ್ತದೆ. ಶಿವಜ್ಞಾನಾಕಾಂಕ್ಷಿಯಾದ ಬಾಣನು ಗುರುಗಳಡಿಗೆರಗಿ ಉಚಿತಾಸನವನ್ನಿತ್ತು ಉಪಚರಿಸಿ "ನಿರುತಶಿವ ಪೂಜೆಯಂಗೈದು ವಲಿಸುವ ಕ್ರಮವದೆಂತಿಹುದು" ತ್ವರಿತದಿಂದೆನಗೆ ಬೋಧಿಸಿ ರಕ್ಷಿಸುವುದು ಯಸ್ಥಿರ ಶರೀರದ ಭೋಗಮಂನಚ್ಚಿದುರ್ಗತಿಯ ನಿರಯದೊಳು ಬ್ಯಾಯಲಾರೆನು ಮುನ್ನಿನವರಂತೆ ಗುರುವೆ ಮದ್ಗುರುವೆ."... ಎಂದು ಬೇಡಿಕೊಳ್ಳುತ್ತಾನೆ ಒಲಿದ ಶ್ರೀಗುರುವು ಇಷ್ಟಲಿಂಗದ ಮಹಾತ್ಮೆಯನ್ನು ತಿಳಿಸಿ, ಪಂಚಾಕ್ಷರಿ ಮಂತ್ರಮಹಿಮೆಯನ್ನು ಬೋಧಿಸಿ ಅಷ್ಟವಿಧ ಪೂಜೆಯ ವಿಧಾನವನ್ನು ತಿಳಿಸಿ. ವೇದಮಂತ್ರೋಕ್ತ ದಿಂದ ಕ್ರಮತಪ್ಪದೆ ಅರ್ಚಿಸಿದರೆ ಈಶ್ವರ ನೊಲಿಯದೇ ಇರನು ಎಂದು ಬೋಧಿಸುವರು, ಬಾಣಾಸುರನು ಆನಂದ ಪರವಶನಾಗಿ ಗುರುಗಳನ್ನು ಯಥಾವಿಧಿಸತ್ಕರಿಸಲು ಅವರು ಹಾರೈಸಿ ನಿಜಾಶ್ರಮಕ್ಕೆ ತೆರಳುತ್ತಾರೆ. ಇತ್ತ ಗುರೂಪದೇಶದಂತೆ ಕ್ರಮವರಿತು ಪರಮಸದ್ಭಕ್ತಿಯಿಂದ ಲಿಂಗಾರ್ಚನೆಗೈಯುತ್ತಾನೆ. ಅವನ ಭಕ್ತಿನಿಷ್ಠೆಗೆ ಮೆಚ್ಚಿ ಕರದಿಷ್ಟಲಿಂಗದೊಳಗೀಶ ನಿಜದೋರಿ ಅವನ ಇಷ್ಟಾರ್ಥವನ್ನು ಸಲ್ಲಿಸುತ್ತಾನೆ. ಬಾಣಾಸುರನು ಬಯಸಿದಾಗ ಕೈಲಾಸಕ್ಕೆ ಮನೋಗಮನದಿಂದ ಹೋಗಿ ಬರುವ ಸಾಮರ್ಥ್ಯ ಮತ್ತು ಈಧರೆಯ ಭೋಗಮುಗಿದ ನಂತರ ಸತ್ಪ್ರಮಥಗಣಪದವಿಯನ್ನು ನೀಡುವ ವರವಿತ್ತು ಶಿವನು ಕೈಲಾಸಕ್ಕೆ ತೆರಳುತ್ತಾನೆ. ಶಿವನೊಲವ ಪಡೆದ ಬಾಣಾಖ್ಯನು ಶಿವಭಕ್ತಿ ಶೀಲಸದ್ವ್ರುತ ಸದಾಚಾರದಿಂದ ನಿತ್ಯವೂ ತ್ರಿಕಾಲದಲ್ಲಿ ಲಿಂಗಾರ್ಚನೆಗೈಯುತ್ತ ಶಿವಯೋಗಿ ಸಮೂಹಕ್ಕೆ ಪರಶಿವನ ದರ್ಶನಕ್ಕೆಳಸಿ ತನಗೆ ಕೈಲಾಸಕ್ಕೆ ಪ್ರವೇಶಿಸಲು ಶಿವನು ನಿರಪ್ಪಣೆಯಿತ್ತಿಹ ನೆಂಬ ಗರ್ವದಿಂದ ನಾಗವಾಸದ ದ್ವಾರಪಾಲಕನನ್ನು ಗಮನಿಸದೆ ಒಳಹೋಗಲು ಆತ ಬಾಣಾಸುರನ ಎರಡು ರಟ್ಟೆಗಳನ್ನು ಹಿಡಿದು ಕೋಪದಿಂದ ಬೀಸಿ ಗಗನಕ್ಕೊಗೆಯುತ್ತಾನೆ. ಮೂರ್ಛೆ ತಿಳಿದೆದ್ದ ಬಾಣನು. ಈಶನ ಒಲವಿಂದಾಗಿ ನಾನು ಜೀವಿಸಿದೆ. ಇನ್ನು ಮೇಲೆ ನಾನಿದ್ದಲ್ಲಿಗೇ ಬಂದು ಶಿವನು ಸಂದರ್ಶನವೀವಂತೆ ವರ ಪಡೆಯುವೆನೆಂದು ಸಂಕಲ್ಪಿಸಿ ಗೋಮತಿನದಿಯಲ್ಲಿಗೆ ಬಂದು ಸ್ನಾನಗೈದು, ಲಿಂಗಪೂಜಾನಿರತನಾಗಿ ಶಿವಭಜನೆಯಲ್ಲಿರಲು ಶಿವನು ಪ್ರತ್ಯಕ್ಷನಾಗುತ್ತಾನೆ. ಶಿವನ ಅಭಯಕ್ಕೆ ಮಣಿದು ಬಾಣನು "ಪೃಥ್ವಿ" ಜನರೆಲ್ಲ ಪೊಸತೆಂಬಂತೆ ಶೋಣಿತ ಪುರದ್ವಾರ ದೊತ್ತಿನಲ್ಲೆ ಸತ್ಪ್ರಮಥಗಣದೊಂದಿಗೆ ಶಿವನು ದರ್ಶನವ ನೀಡಬೇಕು ಮತ್ತು ಶಿವನನನ್ನು ನೋಡಿ ಹಾಡಿ, ಪೂಜಿಸಲು ಸಹಸ್ರಕರ ನಯನ ಐನೂರು ಬಾಯಿಗಳನ್ನು ನೀಡೆಂದು ಬೇಡಿ ವರ ಪಡೆಯುತ್ತಾನೆ. ಬಾಣಾಸುರನು ತನ್ನ ಪುರದ ಉಪವನದೊಳಗೆ ಭವ್ಯವಾದ ಶಿವಾಲಯ ವನ್ನು ನಿರ್ಮಿಸುತ್ತಾನೆ. ನಿತ್ಯವೂ ಶಿವಪೂಜೆ ಭಜನೆ, ಕೀರ್ತನೆಗಳಿಂದ ನಲಿಯುತ್ತಿದ್ದ ಬಾಣನ ಅಮಳಸದ್ಭಕ್ತಿಗೆ ಮೆಚ್ಚಿ ಪರಶಿವನು ಪ್ರಮಥಗಣದೊಂದಿಗೆ ಶೋಣಿತಪುರದ ಉಪವನಕ್ಕೆ ಬರುತ್ತಾನೆ. ಬಾಣನ ಹರ್ಷ ಮೇರೆಮೀರುತ್ತದೆ. "ನಿನಗೆ ಈ ಭೂಭೋಗ ಸಾಕಾಗುವವರೆಗೂ" ನನ್ನಿಯಿಂ ನಿತ್ಯದರ್ಶನವ ನೀವೆ ಎಂದು ಶಿವನು ಬಾಣನಿಗೆ ಅಭಯ ನೀಡುತ್ತಾನೆ. ಶೋಣಿತಪುರವು ಎರಡನೆಯ ಕೈಲಾಸವೆಂಬಂತೆ ಶೋಭಿಸುತ್ತಿತ್ತು. ಒಂದು ದಿನ ಗುರು ಸುಭಾರ್ಗವಾಚಾರ್ಯರು ಬಾಣನಲ್ಲಿಗೈತಂದು ಸತ್ಕಾರಸ್ವೀಕರಿಸಿ ಬಾಣಸತಿ 'ಭದ್ರಾವತಿ'ಗೆ

[illegible]

ವೃಷಭೇಶ್ವರನನ್ನು ಸದ್ವ್ರತದಿಂದ ಭಜಿಸು 'ವೃಷದೇವಿ'ಯೆಂಬ ಚೆಲುವಾದ ಸತ್ಪುತ್ರಿ ಜನಿಸುವಳೆಂದು ಹಾರೈಸುವರು. ಕೆಲಕಾಲಾನಂತರದಲ್ಲಿ 'ಭದ್ರಾವತಿ'ಯ ಉದರದಲ್ಲಿ 'ವೃಷೆ'ಯೂ, ಕುಂಭಿನಿ ದೇವಿಯ ಉದರದಲ್ಲಿ 'ಚಿತ್ರಲೇಖೆ'ಯೂ ಜನಿಸುವರು. ಈರ್ವರೂ ಸಮಚೆಲುವೆಯರಾಗಿ, ತನುವೆರಡು ಜೀವ ಒಂದೆಂಬಂತೆ ಬೆಳೆಯತೊಡಗಿದರು ಭಾರ್ಗವಾಚಾರ್ಯರಿಂದ ಏಕಾಂತದಲ್ಲಿ ಅಸುರಮಾಯಾವಿದ್ಯೆ, ಮಂತ್ರೋಪದೇಶಗಳನ್ನು ಪಡೆದ ಚಿತ್ರಲೇಖೆಯು ಪ್ರತಿನಿತ್ಯ ವೃಷೆಗೂ ಸಕಲ ಕಲಾಕುಶಲಗಳನ್ನು ಕಲಿಸುತ್ತ ನರ್ತನ ನಾರಿಯರಿಂದ ಭರತನಾಟಕ ಅಲಂಕಾರ, ಮುಖ್ಯಗಾನ, ಗೀತ, ಸಾಹಿತ್ಯಗಳನ್ನು, ಸಪ್ತಸ್ವರ, ತಾಳ, ಮದ್ದಳೆ, ವೀಣೆ ಇತ್ಯಾದಿ ಸಕಲ ವಿದ್ಯೆಗಳನ್ನು ಜೊತೆಗೂಡಿ ಕಲಿತರು, ಗುಣ, ರೂಪು, ಚೆಲುವು, ನಲಿವು, ಉಡುಗೆ, ತೊಡುಗೆ, ಅಲಂಕಾರ, ಪೂಜಾದಿಗಳಲ್ಲಿ ಗಂಡಭೇರುಂಡನಂತೆ ಮೆರೆದರು. ವೃಷಾದೇವಿಯ ಪುರುಷಾಪೇಕ್ಷೆಯನ್ನರಿತ ಚಿತ್ರಲೇಖೆ ಶಿವಪಾರ್ವತಿಯರ ದರ್ಶನಕ್ಕೆ ಸಲಹೆ ನೀಡುತ್ತಾಳೆ. ತಾತನ ಅಪ್ಪಣೆ ಪಡೆದು ವೃಷೆಯು ಶಿವಾಲಯಕ್ಕೆ ಹೋಗಲು ಶೃಂಗಾರಗೊಳ್ಳುತ್ತಾಳೆ. ಸವಿಗೋಲನಂಗನೆಯಂತೆ ಶೋಭಿಸುತ್ತಾಳೆ. ಚಿತ್ರಲೇಖೆಯೊಂದಿಗೆ ಪೂಜಾಲಯಕ್ಕೆ ಬಂದು ವಿಧಿವತ್ತಾಗಿ ಲಿಂಗಾರ್ಚನೆಗೈದು ಪ್ರಸಾದ ಸ್ವೀಕರಿಸಿ, ಸಕಲವಿನಿಯೋಗದವರೊಂದಿಗೆ ಶಿವದರ್ಶನಕ್ಕೆ ತೆರಳುತ್ತಾರೆ. ಶ್ರೀಗಿರಿಜೆಯನ್ನರ್ಚಿಸಿ ಸಂತುಷ್ಟ ಪಡಿಸುತ್ತಾಳೆ. ಗೆಳತಿ ಚಿತ್ರಲೇಖೆಯ ಮುಖಾಂತರ ತನ್ನ ಮನದಿಂಗಿತವನ್ನು ತಿಳಿಸುತ್ತಾಳೆ. ಆಗ ಶಿವಸತಿಯು

"ಯಲೆಕುವರಿ ನಿನ್ನಯಳೆ ಪ್ರಾಯಕ್ಕೆ ರೂಪಿಂಗೆ
ನಲುವಿಂಗೆ ಸತ್ಕಳೆಗೆ ಪ್ರೌಢಿಂಗೆ ಸರಸಕ್ಕೆ
ವೊಲುಪಿಂಗೆ ಚತುರತೆಗೆ ಬೇಟಕ್ಕೆ ಕೂಟಕ್ಕೆ ನೆಲೆವಂತ ಕಲೆವಂತನೂ" (೨೪-೯೩)

ಕುಲವಂತ ಬಲವಂತನಾದ ಸುಸರಸಕಾಂತನು ನಿನ್ನ ಸ್ವಪ್ನದಲ್ಲಿ ಕಾಣಿಸಿಕೊಳ್ಳುವನು. ನಿನ್ನ ಗೆಳತಿ ಚಿತ್ರಲೇಖೆಯು ಆ ಪುರುಷನನ್ನು ನಿನಗಾಗಿ ತಂದಪಳು. ಮರುಗದಿರು ಎಂದು ಬೆಸನಿತ್ತು ಬೀಳ್ಕೊಳ್ಳುವಳು. ಗಿರಿಜಾತೆಯೊಲಿದು ಬೆಸನಿತ್ತಂತೆ ಅಮಳ ಸೌಂದರ್ಯದ ಯೌವನ ಕಳಾಪ್ರೌಢವಿಧ ಕುಶಲಯುತ ಪರಮ ಪುರುಷೋತ್ತಮನು ವೃಷೆಯಲ್ಲಿಗೈತಂದು ಕೂಡಿದಂತೆ ಕನಸಾಗುತ್ತದೆ. ಆಕೆ ವಿರಹಾಗ್ನಿಯಲ್ಲಿ ಬೆಂದು ಬಸವಳಿಯುತ್ತಾಳೆ. ತನ್ನ ಸಖಿ ಚಿತ್ರಲೇಖೆಯ ಕಾಲಿಗೆರಗಿ 'ಆಕಾಮ ಸದೃಶನಕರತಂದು ತೋರದಿರೆ ದೇಹ| ದೋಪದ್ರಮಂತವಿಸಲಾರೆನು" ಎಂದು ಆಲ್ಪರಿಯುತ್ತಾಳೆ. ಚಿತ್ರಲೇಖೆಯು ಅವಳನ್ನು ಹಿಡಿದೆತ್ತಿ, ಕುರುಳ್ತಿದ್ದಿ, ಬಿಗಿದಪ್ಪಿ

"ಮೃಡನರಸಿ ಪೇಳ್ದಂತೆ ಸ್ವಪ್ನದೊಳು ಸುಳಿದುನಿಂ
ನೊಡಗೂಡಿಪೋದ ತತ್ಕಾಂತ ತಾನಾವಲೋಕದೊಳಿರಲು ನಾನು ಪೋಗೀ
ಪುಡುಕಿ ಕರೆತಂದು ಸಂಪರ್ಕಮಂಗೈಸುವೆನು" (೨೫-೯೫)

ನಿನ್ನ ಮನದ ಅನುತಾಪವನ್ನು ಬಿಡು ಎಂದು ಸಂತೈಸುತ್ತಾಳೆ. ಅಸುರ ಮಾಯಾಮಂತ್ರಮಂ ಜಪಿಸಿ ಫಣೆಯೊಳಂ ಭಸಿತಮನುಧರಿಸಿ ದಿಗ್ಬಂಧನಂಗಳಗೈದು ಲಿಂಗಧರಿಸಿಮನೋಗಮನದಿಂದ ಪಾತಾಳ, ಸ್ವರ್ಗ

ಲೋಕಗಳಲ್ಲಿ ವೃಷೆಗೆ ಅನುರೂಪರಾದ ಪುರುಷರನ್ನು ಕಾಣದೆ ಛಪ್ಪನ್ನ ದೇಶದ ರಾಜಪುತ್ರರೊಳು ಮಿಗೆರೂಪು, ಯೌವ್ವನ ಯುಕ್ತರಾದ ಕೆಲವರನ್ನು ಚಿತ್ರಿಸಿಕೊಂಡು ಇವರಾರೂ ವರನಾಗತಕ್ಕವರಲ್ಲವೆಂದೆಣಿಸಿ, ಯಾದವ ನೃಪಕುವರರೊಳಗತಿ ಚೆಲುವರನ್ನು ಚಿತ್ರಿಸಿಕೊಂಡು, ಕೊನೆಗೆ ಇಕ್ಷುಚಾಪನ ಆತ್ಮಜ ಅನಿರುದ್ಧನನ್ನು ಕಂಡು ಸಂತಸಗೊಂಡು, ಕುಶಲದಿಂದವನ ಚಿತ್ರವ ಬರೆದುಕೊಂಡು ಶೋಣಿತಪುರಕ್ಕೆ ಬರುತ್ತಾಳೆ. ಅನಿರುದ್ಧನ ಚಿತ್ರಪಟ ವನ್ನು ಕಾಣುತ್ತಲೇ ರೋಮಾಂಚಿತಳಾಗುತ್ತಾಳೆ. ''ನೀಂಬರಿದೆ ಚಿತ್ರಪಟಮಂ ನೋಡಿ ಮಾರನೆಸಳಂಬಿಂಗೆ ಗುರಿಯಹರೆ ಹರನ ನಾಮವ ಮರೆಯದಿರು ಸ್ಮರಿಸು'' ಎಂದು ಚಿತ್ರಲೇಖೆ ತಾಕೀತು ಮಾಡಿ ಮತ್ತೆ ಅನಿರುದ್ಧ ನಿದ್ದಲ್ಲಿಗೆ ಬರುತ್ತಾಳೆ. ಆತನಿಗೆ ಎಲ್ಲವನ್ನೂ ವಿವರಿಸಿ ''ನೀನು ಬಂದೊಡೆ ವೈದು ಕೂಡಿಸುವೆ ನಾ ಸಖಿಯಳಾ'' ಎನ್ನಲು ಆತ ಸಂತೋಷದಿಂದ ಒಪ್ಪಿಕೊಳ್ಳುತ್ತಾನೆ. ತನ್ನ ಮಾಯಾವಿದ್ಯೆಯ ಬಲದಿಂದ ಆತನನ್ನು ಶೋಣಿತ ಪುರದ ವೃಷೆಯಿದ್ದ ಅರಮನೆಗೆ ಕರೆತರುತ್ತಾಳೆ. ಆತನಿಗೆ ಮಜ್ಜನಗೈಸಿ, ತಾನೆಗುರುವಾಗಿ 'ಲಿಂಗಾರ್ಚನಾವಿಧಿ' ಯನ್ನು ಬೋಧಿಸಿ ಆತನನ್ನು ಲಿಂಗಪೂಜೆಗೆ ಅಣಿಗೊಳಿಸುತ್ತಾಳೆ. ಪ್ರಸಾದ ಸ್ವೀಕಾರದ ತರುವಾಯ ಶಯ್ಯಾಗೃಹಕ್ಕೆ ಕರೆತಂದು ಶಕುನಿ ಮಂಚದ ಮ್ಯಾಲೆ ಕುಳ್ಳಿರಿಸಿ ಆತನ ಮನದನ್ನೆ ವೃಷೆಯನ್ನು ಶೃಂಗರಿಸಿ ಕರೆತಂದು ಈರ್ವರಿಗೂ ಗಾಂಧರ್ವ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿ ಈ ವಿಷಯ ನಿಮ್ಮಲ್ಲೇ ಗುಟ್ಟಾಗಿರಬೇಕು ಎಂದು ಕಾವಲುಗಾರ್ತಿಯರಿಗೆ ಎಚ್ಚರಿಸಿ ಹೋಗುತ್ತಾಳೆ. ಇತ್ತ ನಾರದನು. ಬಾಣಾಸುರನ ಆಸ್ಥಾನಕ್ಕೆ ಬಂದು ಯಥೋಚಿತ ಸತ್ಕಾರವನ್ನು ಸ್ವೀಕರಿಸಿ, ತಾನು ಬಂದ ಸತ್ಕಾರ್ಯದ ಕುರಿತು ಪ್ರಸ್ತಾಪಿಸುತ್ತಾನೆ. ಮಾನಹಾನಿಯೇ ಪ್ರಾಣಹಾನಿಯೆಂಬುದು ಸಹಜ, ನಿನ್ನ ಬಾಗಿಲೊಳು ಇಂದು ಶೇಖರನಿದ್ದೂ ಕಾಣದಾದನೆ ಎಂದು ಪೀಠಿಕೆ ಮಾಡಲು ಬಾಣಾಖ್ಯನುಶಿವನರಿಯದಿದ್ದಡೆ ಇರಲಿ, ನೀವರಿದುದನ್ನು ತಿಳಿಸಿ ಎಂದು ಬಿನ್ನವಿಸಲು..... 'ಶೇಖರನ ವೊಲುಮೆಯುಳ್ಳವನೆಂದು ಅಹಂಕಾರಮಾಡದಿರು ನಿನ್ನಯ ಚಲುವ ಸತ್ಕುವರಿ ತಾ ಸೂಳೆಯಾಗಲು ಮಾನಹಾನಿಯಾರದು ಭಾವಿಸೇ...' ಎನ್ನತ್ತಾನೆ. ಆ ಬಿರುನುಡಿಗಳನ್ನು ಕೇಳಿ ಕಿವಿಯೊಳಗೆ ಸಂತಾಪದ ಸರಳು ತಿವಿದಂತಾಗಿ 'ದೇವರುಷಿ ನೀನೆಂದು ತಾಳಿದೆನು' ಮತ್ತೊಬ್ಬಯತಿಯಾಗಿದ್ದರೆ ಅವನ ಹೆಡಮುರಿಗೆ ಕಟ್ಟುತ್ತಿದ್ದೆ ಎಂದು ಅಬ್ಬರಿಸುತ್ತಾನೆ. ಮಂತ್ರಿ ಕುಂಭಾಂಡನು ''ಸತ್ಯಸಂಗತಿಯನ್ನು ನಾನು ತಿಳಿದು ವಿಚಾರಿಸಿ ಬರುವೆ, ನೀವು ಶಾಂತರಾಗಿ ಎಂದು ಸಂತೈಸುತ್ತಾನೆ. ಅಖಿಲ ದೈತ್ಯ ಸೈನ್ಯದೊಡಗೂಡಿ ಕುಂಭಾಂಡಮಂತ್ರೀಶ್ವರನು ವೃಷಾ ಅನಿರುದ್ಧರಿದ್ದೆಡೆಗೆ ಧಾವಿಸಿಬರುತ್ತಾನೆ. ಅನಿರುದ್ಧನು ತನ್ನನ್ನು ಅಸುರ ಬಲ ಮುತ್ತುವುದನ್ನು ತಿಳಿದು ಶಿವಪೂಜೆಗೈದು ಅಣಿಯಾಗಲು ಚಿತ್ರಲೇಖೆ ರಣತಿಲಕವನ್ನಿಡುತ್ತಾಳೆ. ಮಂತ್ರಿಯ ಪಟುಭಟರನ್ನೆಲ್ಲ ಹುಲಿಯಂತೆ ಎದುರಿಸಿ ವಧಿಸುತ್ತಾನೆ. ಕುಂಭಾಂಡನು

> ''ಅಸುವ ಹೋಗಾಡದಿರು ಪರವಧುವಿನೊಡನೆ ದು
> ರ್ವಸನದಿಂ ಮುನ್ನಾರು ಜೈಸಿದರು ಬೇಡನ
> ಮ್ಮಸುರೇಂದ್ರ ಬಾಣಾಖ್ಯನೊಡನೆ ಪಗೆಯಾಕೆ ಶರಣ್ಪೊಕ್ಕು ಹರಣವನುಳಿಹಿಕೋ'' (೨೮-೨೮)

ಎಂದು ತಿಳಿಹೇಳುತ್ತಾನೆ. ಅನಿರುದ್ಧ ಅದಕ್ಕೊಪ್ಪದೇ ವೀರಾವೇಶದಿಂದ ಹೋರಾಡುತ್ತಾನೆ. ಕೊನೆಗೆ ಅನಿರುದ್ಧನ ಗದಾಪ್ರಹಾರದಿಂದ ಕುಂಭಾಂಡನು ಮೂರ್ಛಿತನಾಗುತ್ತಾನೆ. ವರಮಂತ್ರಿ ಮೂರ್ಛೆಹೋಗಿದ್ದನ್ನು ಕೇಳಿ ಕೋಪದ ಉರಿ ಹೆಚ್ಚಿ ಬಾಣನು ಸಹಸ್ರಾಕ್ಷಿಗಳಲ್ಲಿ ಕಿಡಿ ಕಿಡಿಯುಗಳುತ್ತ ಪಟುಭಟರೊಡನೆ ಅನಿರುದ್ಧನಲ್ಲಿಗೆ ಬರತೊಡಗಿದನು. ಈರ್ವರೂ ಸಮಬಲರಾಗಿ ಹೋರಾಡುತ್ತಾರೆ. ಅನಿರುದ್ಧನು ಬಾಣಾಸುರನ ಬಾಣ ಪ್ರಯೋಗದಿಂದ ಮೂರ್ಛಿತನಾಗುತ್ತಾನೆ. ಮಗಳು ವಿಧವೆಯಾಗುವಳೆಂದು ತಿಳಿದುಕೊಲ್ಲದೆ ಅವನನ್ನು ಉಪಚರಿಸಿ ತನ್ನೊಂದಿಗೆ ಮಂತ್ರಿಸಹಿತ ಸಭೆಗೆ ಕರೆತರುತ್ತಾನೆ. ಅಲ್ಲಿಮುನಿವರನಿಗೆ ವಂದಿಸಿ, "ವಿನಯದಿಂದ ಈ ಕನ್ಯಾಚೋರನಿಗೆ ಮಾಳ್ಪದಂಡಣೆ ಯಾವುದೆಂದು ಕೇಳುತ್ತಾನೆ. ಪ್ರತ್ಯಕ್ಷ ಪರಮೇಶ್ವರನಲ್ಲಿ ಹೋಗಿ ಬಿನ್ನವಿಸಿಕೋ, ಅವನಪ್ಪಣೆಯಂತೆ ನಡೆದುಕೋ ಎನ್ನುತ್ತಾರೆ. ಅಂತೆಯೇ ನನ್ನಿಯಿಂದ ಅಭವನಲ್ಲಿಗೈ ತಂದು ವಂದಿಸಿ ಬಿನ್ನವಿಸಿಕೊಳ್ಳುತ್ತಾನೆ. ಪರಶಿವನು

"ನಮ್ಮಂ ಕೇಳ್ವದೇನು ನೀನೂ ತೋಳು ಸಾವಿರಗಳಿಂದೆ ತಮ್ಮನರ್ಚಿಸಿವಲಿಸಿ
ಕಾಳಗವ ಬಯಸಿ ಬೆಸಗೊಂಡಂತೆ ಸಮರಸಂ
ಮೆಳ ಕೈಗೂಡಿ ಬಂದುದು......." (೨೯-೨೬)

ಎನ್ನಲು ಬಾಣಾಖ್ಯನು ಎಲೆದೇವ,

"ಪ್ರತುಳ ಪಟುಭಟರುಯನಗೇ
ಧರೆಯೊಳಿದಿರಿಲ್ಲವೆಂದಾನು ಯೋಚಿಸುತಿರಲು
ಕರುಣಾಸಾಗರನೆ ನೀನೆನಗೆ ವದಗಿಸಿಯಿತ್ತೆ
ಧುರದೊಳಗೆ ಯತಿಬಳನ ಶೆಣಸಿ ಸೋಲಿಸಿ ಗೆಲಿದು ನಿನ್ನ ಮನಮೆಚ್ಚಿಸುವೆನೂ"

ಅನಿರುದ್ಧನ ಬಂಧನದ ವಿಷಯ ತಿಳಿದು ಕೃಷ್ಣನು ಬರುತ್ತಾನೆ. ಅವನೊಡನೆ ಕಾದಿ ಜಯಿಸುವೆನೆನ್ನುತ್ತಾನೆ. ಆಗ ಶಿವನು ಕೃಷ್ಣನು ಅಸಹಾಯ ಶೂರನು, ಅಸಮನು, ಅವನನ್ನು ಗೆದ್ದವರಾರೂ ಇಲ್ಲ, ನಿನ್ನ ಪವಣೆಂ ತಿರ್ಪುದೋ ಎಂದುಸುರಲು ಬಾಣಾಖ್ಯನು ನೆರೆಗೆಲಿದೆ, ಸೋತೆನೆಂಬಭಿಮಾನಮೆನಗಿಲ್ಲ ಚಕ್ರಪಾಣಿಯೊಡನೆ ಶೆಣಸಿ ನನ್ನ ಬಯಕೆಯ ತೀರಿಸಿಕೊಂಡು ನಿಮ್ಮ ಪಾದಕಮಲಗಳೆಡೆಗೆ ಬರುವೆನು, ನನ್ನನ್ನುತಾವು ಕೈಲಾಸಕ್ಕೆ ಕರೆದೊಯ್ಯುದು ಎಂದು ಬಿನ್ನವಿಸಿಕೊಳ್ಳುತ್ತಾನೆ. ಹಾಗೆಯೇ ಆಗಲೆಂದು ಹರಸಿ ಶಿವನು ಬೀಳ್ಕೊಡಲು ತನ್ನ ಆಸ್ಥಾನಕ್ಕೆ ಮರಳಿ ಅಳಿಯ ಅನಿರುದ್ಧನಿಗೆ ಉಪಚರಿಸಿ ಬಂಧಿಸುತ್ತಾನೆ. ಅಲ್ಲಿದ್ದ ನಾರದ ಮುನಿಗಳು ದ್ವಾರಕಾವತಿಗೆ ಕೃಷ್ಣನಾಸ್ಥಾನಕ್ಕೆ ಬಂದು ಅನಿರುದ್ಧನ ಬಂಧನದ ವಿಷಯ ತಿಳಿಸಲು ರುಕ್ಮಿಣಿ, ಸತ್ಯಭಾಮೆ, ರತಿಯಾದಿ ಸ್ತ್ರೀಯರು ದುಃಖದಿಂದ ರೋದಿಸತೊಡಗಿದರು. ಶೋಣಿತಪುರವನ್ನು ಮುತ್ತಿ ಬಾಣನ ಸಾಸಿರ ತೋಳುಗಳನ್ನು ಹೋಗಾಡಿ ಅನಿರುದ್ಧನೊಂದಿಗೆ ಅವನ ಮಗಳನ್ನು ಕರೆದುಕೊಂಡು ಬರುವೆನೆಂದು ಅಭಯ ನೀಡುವನು ಬಾಣನಪುರದ ಬಾಗಿಲು ಕಾಯುತ್ತಿರುವ ಶಿವನೆಮಗೆ ಸ್ನೇಹಿತನು ಆತನ ಸಹಾಯದಿಂದಲೇ

ಬಾಣನನ್ನು ಶಿಕ್ಷಿಸಬೇಕು. ಇದು ಒಬ್ಬನಿಂದಾಗುವ ಕೆಲಸವಲ್ಲವೆಂದು ತಿಳಿಸಿ ಗರುಡನ ಸಹಾಯದಿಂದ ಗೋಮತಿಯ ತೀರಕ್ಕೆ ಬಂದು ಬಳಲಿಕೆಯನ್ನು ನಿವಾರಿಸಿಕೊಂಡು ಅಲ್ಲಿಯೆ ಬಿಡಾರ ಹೂಡಿದರು. ನಾರದಮುನಿಯನ್ನು ಶ್ರೀಕೃಷ್ಣನು ಪರಶಿವನಲ್ಲಿಗೆ ಸಂಧಾನಕ್ಕೆ ಕಳಿಸುವನು. 'ಬಾಣಾಖ್ಯನು ತನ್ನ ನಂದನೆಯನ್ನು ಅನಿರುದ್ಧನಿಗಿತ್ತು ಸಂಬಂಧ ಬೆಳೆಸುವ' ಕೃಷ್ಣನ ನಿರೂಪವನ್ನು ನಾರದರಿಂದ ಕೇಳಿ ಶಿವನು ಹರ್ಷಚಿತ್ತನಾಗಿ ಹಾಗೆ ಆಗುವುದಾದರೆ ಒಳ್ಳೆಯದೆ, ಆದರೆ ಬಾಣಾಖ್ಯನು ಮೂರ್ಖನಾಗಿ ಒಪ್ಪದೇ ಹೋದರೆ ಯುದ್ಧ ಅನಿವಾರ್ಯವಾಗುತ್ತದೆ. ಭಕ್ತಾಧೀನ ಶಿವನಾದ್ದರಿಂದ ಬಾಣಭಕ್ತ, ಕೃಷ್ಣ ಸ್ನೇಹಿತ ಉಭಯರಿಗೆ ಹರ್ಷ ವುಂಟಾಗುವಂತೆ ಯುದ್ಧ ಮಾಡುವೆವು ಎಂದು ವೃಷಭಾರೋಹಣ ಮಾಡುವನು. ಶಿವನ ಸಂಧಾನದ ಸಲಹೆಯನ್ನು ಕುಂಭಾಂಡ ಮಂತ್ರೀಶನಿಂದ ತಿಳಿದ ಬಾಣಾಖ್ಯನು

> "ಸಾಕುಯಿಹದ ಸುಖವೂ | ಬೇಡಿಕೊಳಲಭವಶತೃವನಿತ್ತ ಬಳಿಕಹೇ |
> ಡಾಡಿ ಹಿಂಜರಿದು ಸಂಧಾನದಿಂಬಾಳುವೆನೆ
> ಕೂಡೆನ್ನ ಸಹಸ್ರತೊಳ್ಗಳು ದಣಿವತನಕ ಯುದ್ಧವ ನಿತ್ತುಕೃಷ್ಣನೊಡನೆ
> ಯನ್ನ ಮನದಭಿಮತವ ತೀರಿಸದೆ ಬಿಡೆನೆನಗೆ...." (೩೦-೨೭)

ಎಂದು ತನ್ನ ನಿರ್ಧಾರವನ್ನು ತಿಳಿಸಿ ಲಿಂಗಾರ್ಚನೆಗೆ ಹೋಗುತ್ತಾನೆ. ಶಿವನು ಷಣ್ಮುಖ ನಂದಿ, ಗಣಪರಾದಿಯಾಗಿ ತನ್ನ ಸೈನ್ಯವನ್ನು ಕಳುಹಿಸಿಕೊಡುತ್ತಾನೆ. ಷಣ್ಮುಖನು ಮನ್ಮಥನನ್ನು, ನಂದಿ ಗರುಡನನ್ನು, ಗಣಪ ಬಲರಾಮರನ್ನು ಎದುರಿಸಿ ಕಾದಾಡುತ್ತಾರೆ. ಕೊನೆಗೆ ಕೃಷ್ಣನಿಗೂ ಈಶ್ವರನಿಗೂ ಯುದ್ಧ ಪ್ರಾರಂಭವಾಗುತ್ತದೆ. ಶಿವನು ತ್ರಿಶೂಲವನ್ನೂ, ಕೃಷ್ಣನು ತನ್ನ ಚಕ್ರವನ್ನೂ ಪ್ರಯೋಗಿಸಲು ಅಣಿಯಾಗುತ್ತಾರೆ.

> "ಇಳಾಮಂಡಲವು ಕುಂಭಕಾರಕ ಚಕ್ರದೋಲ್
> ತನತನಗೆ ತಿರ್ರನೆ ತಿರುಗುತಿರೆಶೂಲದಾ
> ಮೊನೆಗಾಂಪರಾರು ಚಕ್ರವುಮಾರ ಶಂಕಿಪುದು
> ಸನುಮತವೆ ಹೋ ಹೋ ನಿಲ್ಲಿರಿಯನುತಲೀರ್ವರಿಗೆ ಸಾಕ್ಷಿ ಬಯಲಂ ನುಡಿದುದೂ"(೩೧-೨೧)

ದೇವದುಂದುಭಿಗಳು ಮೊಳಗಿದವು. ಅಮರಾನಾರಿಯರು ಮುತ್ತಿನಾರತಿಯನ್ನು ಬೆಳಗಿದರು. ಪುಷ್ಪವೃಷ್ಟಿಯಾಗಲು ಇಬ್ಬರೂ ರಣಾಂಗಣದಿಂದ ವಿಮುಖರಾಗುತ್ತಾರೆ. ಇಂದು ಶೇಖರನು ನಳಿನ ಲೋಚನನೊಡನೆ ಸಲಿಗೆಯಿಂದ ಕಾದಿ ಅಲಸಿದಂತೆ ನಿರ್ಜರರ ಬಲಗೂಡಿ ಬಾಣಾಖ್ಯನು ತನಗೆ ನಿರ್ಮಿಸಿದ್ದ ಅಮಳ ಭಕ್ತಿಸ್ಥಳಕ್ಕೆ ಹೋಗಿ ವಿರಮಿಸುತ್ತಿದ್ದನು. ಇದನ್ನು ಓರ್ವ ಚರನಿಂದ ತಿಳಿದ ಬಾಣಾಖ್ಯನು ರಣೋತ್ಸಾಹದಿಂದ ಕೃಷ್ಣನಲ್ಲಿಗೆ ಬಂದು ಕಾದಾಡುತ್ತಾನೆ. ಅಂತ್ಯದಲ್ಲಿ ಕೃಷ್ಣನು ಪ್ರಯೋಗಿಸಿದ ಚಕ್ರದ ಪರಿಣಾಮವಾಗಿ ಬಾಣನ ಒಂಬೈನೂರ ತೊಂಭತ್ತೆಂಟು ತೋಳುಗಳು, ನಾಲ್ಕನೂರತೊಂಭತ್ತೊಂಭತ್ತು ತಲೆಗಳು ಬಿರುಗಾಳಿಗೆ ಒಣಗಿದ ಮರದ ತರಗೆಲೆಗಳು ಉದುರಿದಂತೆ ಧರೆಗುರುಳಿದವು. ಭೋಂಕನೆ ಶಂಕರನು ಬಂದು ಸದ್ಭಕ್ತನಂಗದಲ್ಲಿ ಸುರಿವ

ರಕ್ತವನ್ನು ಕರುಣಾವಲೋಕನದಿಂದ ನೋಡಿ ನಿಲ್ಲಿಸುತ್ತ ಮೈದಡವಿ ಬೋಳೈಸಲು ಬಾಣಾಖ್ಯನು ಹರ್ಷಾಶ್ರುವನ್ನು ಸುರಿಸುತ್ತ ಶಿವನಂಘ್ರಿಗಳಿಗೆರಗುತ್ತಾನೆ. ಪರಶಿವನು ಪ್ರೀತಿಯಿಂದ ಹಿಡಿದೆತ್ತಿ "ನಿನ್ನಭಿಮತವು ತೀರಿದುದೆ" ಯೆಂದು ಬೆಸಸಲು

"ನಾನುಹುಲುದಾನವನು ಸ್ವಾನುಭಾವದಿ ಭಜಿಸಿವಲಿಸಶಕ್ತನೆ ನಿಮ್ಮ
ನೂನಸಲ್ಲಿಲಾವಿಲಾಸದಿಂದೆನೆಗೊಲಿದುಯನ್ನಭಿಮತಸಿದ್ಧಿಗೇ
ಯೇನುಕೊರತೆಯುಯಿಲ್ಲದೆ ನಡಸಿಸುಖಿಸಿದೆನು
ಹೀನಜನ್ಮಂಗಳಲಿಯನುಭವಿಬಜರೆ ಮರಣ
ಹಾನಿವೃದ್ಧಿಯು ವಿಷಯ ದುರ್ವಾಸನೆಯು ಮನದೊಳಿನಿತಿಲ್ಲ ಪ್ರಮಥರೊಳಗೇ"(೩೨-೪೦)

"ನಿತ್ಯತ್ವದಿಂದೆ ಸುಖಿಸುವೆ ನೀವುಮೊದಲೆವಲಿ
ದಿತ್ತ ಪ್ರಸಾದವಾಕ್ಯ ತಪ್ಪದೆ ನಡೆಸು
ದತ್ಯಾಂತಕರುಣಾಸಾಗರ ಯನುತ ಪಾದಾಬ್ಜಕೆರಗಿ..." (೩೨-೪೧)

ಬಿನ್ನವಿಸಿಕೊಳ್ಳುತ್ತಾನೆ. ಅಷ್ಟರಲ್ಲಿ ನಾರದರು ಮತ್ತು ಶ್ರೀಕೃಷ್ಣರಾಯರು ಆಗಮಿಸಿ ಸದ್ಭಕ್ತ ಬಾಣಾಖ್ಯನಿಂದಾಗಿ ತಮಗೆ ಶಿವನ ಪುಣ್ಯದರ್ಶನಭಾಗ್ಯ ಲಭ್ಯವಾಯಿತೆಂದು ನಮಿಸುವರು ನಾರದರು, ನಿಮ್ಮ ಅಮಳ ಸದ್ಭಕ್ತ ಬಾಣಾಖ್ಯಸುತೆ ವೃಷಾದೇವಿಯನ್ನು ಸ್ಮರಜಾತ ಅನಿರುದ್ಧನಿಗಿತ್ತು. ವಿವಾಹವನ್ನು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ಪರಶಿವನು ಕುಂಭಾಂಡ ಮಂತ್ರೀಶ್ವರನನ್ನು ಕರೆಸಿ ವೃಷೆ ಅನಿರುದ್ಧರ ವಿವಾಹವನ್ನು ಸಾಂಗವಾಗಿ ನೆರವೇರಿಸಲು ಆಜ್ಞಾಪಿಸುತ್ತಾನೆ. ತಮ್ಮ ಪರಮ ಸದ್ಭಕ್ತರಿಗೆ ಸಮ್ಮತವಹುದೇ? ಎನಲು, ಬಾಣಾಖ್ಯನು

ಯಲ್ಲ ಜನ್ಮಂಗಳೊಳು ನರಜನ್ಮವೆಯಧಿಕ
ಯಲ್ಲ ನರರೊಳಗೆ ಶಿವಭಕ್ತರಪ್ಪುದೆಯಧಿಕಸು
ಸಲ್ಲಲಿತ ಶಿವಭಕ್ತರೊಳಗಧಿಕ ಸುಜ್ಞಾನಿ ಜ್ಞಾನಿತಾನಾದ ಬಳಿಕಾ (೩೨-೪೮)
ಭಾಳಾಕ್ಷ ನಿಮ್ಮೊಡನೆ ಬರ್ಪವನ ಮರಳಿ ನಿಂ
"ಕೇಳುವದದೇನು ಕರ್ತವ್ಯ ತಮ್ಮೊಡವೆ ತಾವೀವುದದಕೆ ಪರಸಾಕ್ಷಿಯೇ"

ಎಂದು ಶಿವನಂಘ್ರಿಗಳಿಗೆ ನಮಿಸಿ ತನ್ನದೇನು ಅಭ್ಯಂತರವಿಲ್ಲವೆಂದು ತಿಳಿಸುತ್ತಾನೆ. ಶಿವನು ಕೃಷ್ಣನ ಅಸಾಮಾನ್ಯತೆಯನ್ನು ತಿಳಿಸಲು ನನ್ನ ಮನದಹಂಕಾರವನು ನೀಗಿಸಿದ ಆಪ್ತವೈರಿಯನು ಕರುಣಿಸಿದಿರಿ ಎಂದು ಮತ್ತೆ ವಂದಿಸುತ್ತಾನೆ. ಪರಶಿವನು ನಾರದರಿಗೆ ಕುಂಭಾಂಡ ಮಂತ್ರೀಶನೊಂದಿಗೆ ತೆರಳಿ ವೃಷೆ ಅನಿರುದ್ಧರ ವಿವಾಹ ಜರುಗಿಸಲು ಹೇಳುತ್ತಾನೆ. ತನ್ನ ಸದ್ಭಕ್ತ ಬಾಣಾಖ್ಯನೊಂದಿಗೆ ಉಪವನದ ವಿಮಳಾಶ್ರಮಕ್ಕೆ

ತೆರಳುತ್ತಾನೆ. ಇತ್ತ ಕುಂಭಾಂಡ ಮಂತ್ರಿಶೇಖರನು ಶ್ರೀಕೃಷ್ಣದೇವರ ಪಾದಕ್ಕೆರಗಿ ವಿವಾಹನಿಮಿತ್ತ ಅವರ ರಾಣಿವಾಸದವರನ್ನು ಕರೆಸಲು ಬಿನ್ನವಿಸಿಕೊಳ್ಳುತ್ತಾನೆ. ಇತ್ತ ಬಲರಾಮ, ಪ್ರದ್ಯುಮ್ನ, ಸಾತ್ವೀಕಿ ಮುಖ್ಯರನ್ನು ಒಡಗೊಂಡು ಶೋಣಿತನಗರಿಯ ರಾಜಮಂದಿರವನ್ನು ಹೊಕ್ಕು ಅನಿರುದ್ಧನನ್ನು ಬಂಧನದಿಂದ ಬಿಡಿಸಿ ಮಜ್ಜನ ಭೋಜನಗಳ ಮಾಡಿಸಿ, ಬಂದವರಿಗೆಲ್ಲ ಯೋಗ್ಯೋಪಚಾರಗಳನ್ನಿತ್ತು ಸತ್ಕರಿಸುತ್ತಾನೆ. ಕಾಮಾಟಿಯರನ್ನು ಕರೆದು ಪುರದ ಶೃಂಗಾರಕ್ಕೆ ಆಜ್ಞಾಪಿಸುತ್ತಾನೆ. ಬಾಂಧವನೃಪಾಲಕರಿಗೆ ಆಹ್ವಾನ ಕಳಿಸಿ, ಭದ್ರಾವತಿ, ಕುಂಭಿನಿದೇವಿಯರಿಗೆ ಬಾಂಧವ ಸುರಾಂಗನೆಯರನ್ನು ಕರೆಸಲು ಅರುಹುತ್ತಾನೆ. ಜ್ಯೋತಿಷ್ಯ ಸಿದ್ಧಾಂತಿಗಳನ್ನು ಕರೆಸಿ, ಮುಹೂರ್ತ ನಿಶ್ಚಯಿಸಿ ವಿಜೃಂಭಣೆಯಿಂದ ವೃಷೆ ಅನಿರುದ್ಧರ ವಿವಾಹವನ್ನು ನೆರವೇರಿಸಿ, ಅಖಿಲಬಂಧು ಬಾಂಧವರಿಗೆ ಉಚಿತ ಉಡುಗೊರೆಗಳನ್ನಿತ್ತು ಬೀಳ್ಕೊಳ್ಳುತ್ತಾನೆ. ಶ್ರೀಕೃಷ್ಣನ ಪಾದಗಳಿಗೆರಗಿ ತನ್ನಿಂದಾಗಬೇಕಾದ ಸೇವೆಯನ್ನು ಬೆಸಸಲು ಕೇಳುತ್ತಾನೆ. ಶೋಣಿತಪುರದ ರಾಜ್ಯಪಾಲನೆಗೆ ಆಜ್ಞಾಪಿಸಿ ಶ್ರೀಕೃಷ್ಣನು ಕುಂಭಾಂಡನಿಗೆ ರಾಜಮುದ್ರೆಯನ್ನಿತ್ತು ಬೀಳ್ಕೊಳ್ಳುತ್ತಾನೆ. ಸರ್ವರೂ ದ್ವಾರಕೆಗೆ ತೆರಳುತ್ತಾರೆ. ನಾರದರು ಸತ್ಯಲೋಕಕ್ಕೆ ಹೊರಡುತ್ತಾರೆ. ಶ್ರೀಕೃಷ್ಣನು ಪ್ರದ್ಯುಮ್ನ ಅನಿರುದ್ಧರನ್ನು ಅವರವರ ನಿವಾಸಕ್ಕೆ ಬೀಳ್ಕೊಡುತ್ತಾನೆ. ಚಿತ್ರಲೇಖೆಯು ಸಹಿತ ಮುನ್ನಿನಂತೆ ವೃಷೆಯೊಡಗೂಡಿ ಅಲ್ಲಿಯೇ ಇರುತ್ತಾಳೆ. ಅತ್ತ ಪರಮಸದ್ಭಕ್ತ ಬಾಣನಿಗೆ ಪರಶಿವನು ಗಣಪದವಿಯನ್ನು ನೀಡುತ್ತಾನೆ. ಈ ಕಾವ್ಯದ ಮಹಿಮೆಯಿಂದ ಕ್ಷೋಣಿಗೆ ಮಾಸಕ್ಕೆ ಮೂರುಮಳೆಗಳು, ಕರೆಯಲಿ, ಸಕಲಧಾನ್ಯಗಳು ಬೆಳೆಯಲಿ, ಎಲ್ಲ ಪ್ರಜೆಗಳು ಸುಖದಿಂದ ಬಾಳಲಿ, ಗೋಸಂಕುಲವು ಸಂತತ ಹಾಲನ್ನು ಕರೆಯಲಿ, ಕಾನನದ ಕೊರಡುಗಳು ಚಿಗುರಲಿ, ಬಂಜೆಯರು ಮಕ್ಕಳನ್ನು ಹೆರಲಿ, ಸಾನುರಾಗದಿಂದ ದೇವ, ಬ್ರಹ್ಮಗುರುಚರ ಶಿವಾರ್ಚಕರು ಅತಿ ಸಂತುಷ್ಟಿಯಿಂದಿರಲಿ ಎಂದು ಕವಿಯು ಹಾರೈಸುತ್ತಾನೆ.

೬.೩. ಕೃತಿವಿಮರ್ಶೆ

ಶಂಕರಕವಿಯ "ನವಮೋಹನ ತರಂಗಿಣಿಯು ದಾಸಪಂಥದ ಅಶ್ವಿನೀ ದೇವತೆಗಳಲ್ಲೊಬ್ಬರೆನಿಸಿದ"[೩] ಕನಕದಾಸರ ಬೃಹತ್ ಸಾಂಗತ್ಯ ಕೃತಿ "ಮೋಹನ ತರಂಗಣಿ"ಯನ್ನು ಆಧರವಾಗಿಟ್ಟುಕೊಂಡು ರಚಿಸಲ್ಪಟ್ಟಿರುವ ಕಾವ್ಯ. ಛಂದಸ್ಸನ್ನುಳಿದಂತೆ ಎಲ್ಲಂದದಲ್ಲೂ ಮೋಹನ ತರಂಗಿಣಿಯ ಹೆಜ್ಜೆಗಳೊಂದಿಗೆ ತನ್ನ ಹೆಜ್ಜೆಯನ್ನು ಹಾಕುತ್ತ ಹೋಗಿರುವ ಕೃತಿ. ಕನ್ನಡ ಕವಿಗಳ ಮೋಹದ ಷಟ್ಪದಿಗಳಲ್ಲೊಂದಾದ ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟಿರುವ ನವಮೋಹನ ತರಂಗಿಣಿಯು ಮೂಲ ಆಕರಕಾವ್ಯದಲ್ಲಿನಂತೆ ಅಷ್ಟಾದಶವರ್ಣನೆಗಳ ಮೋಹಪಾಶದಲ್ಲಿ ಬಂಧಿತವಾಗಿರುವ ಕೃತಿ. ಕನಕದಾಸರ ಕೃತಿಯ ಸತ್ವಕ್ಕೇರುವ ಪ್ರಯತ್ನದಲ್ಲಿ ಶಂಕರಕವಿಯು ಅಲ್ಪಮಟ್ಟಿನ ಯಶಸ್ಸನ್ನು ಸಾಧಿಸಿದ್ದಾನೆ. ಆದರೆ ಎಷ್ಟೋ ಕಡೆಗಳಲ್ಲಿ ಕನಕರ ಎಲ್ಲೆ ಮೀರಿದ ಶೃಂಗಾರ ವರ್ಣನೆಗಳ ಸಂದರ್ಭದಲ್ಲಿ ಶಂಕರಕವಿಯು ಸಂಯಮವನ್ನು ತೋರಿಸಿರುವುದು ಮೆಚ್ಚತಕ್ಕ ಅಂಶ. ಹೆಸರೇ ಹೇಳುವಂತೆ ಮೋಹನ ತರಂಗಿಣಿಯು ಶೃಂಗಾರ ಕಾವ್ಯ. ಇದರ ಕಥಾವಸ್ತು ಕಾಮನದು, ಕಾಮಪಿತನದ್ದು, ಹಾಗೂ ಕಾಮಸುತನದ್ದು. ವಿಮರ್ಶಕರು ಗುರುತಿಸಿರುವಂತೆ ಕನಕದಾಸರು ಆಶ್ರಯದಾತ ದೊರೆ

ಕೃಷ್ಣದೇವರಾಯನನ್ನು, ತಮ್ಮ ಆರಾಧ್ಯದೈವ ಶ್ರೀಕೃಷ್ಣನಿಗೆ ಸಮೀಕರಿಸಿ ಬರೆದಿರುವ ಕಾವ್ಯ. ''ವಿಜಯನಗರ ಕಾಲದ ಸರ್ವಧರ್ಮಸಮನ್ವಯ ದೃಷ್ಟಿ ಕನಕದಾಸರನ್ನು ಶಿವ-ಕೃಷ್ಣರಲ್ಲಿ ಭೇದವೆಣಿಸದಂತೆ ಮಾಡಿರಬೇಕು''[೪] ಹೀಗಾಗಿ ಹರಿಹರಸಾಮ್ಯತೆಯ ಭಾಗವತ ದೃಷ್ಟಿಕೋನವನ್ನು ಸಾರುವುದರ ಜೊತೆಗೆ ತತ್ಕಾಲೀನ ವಿಜಯನಗರ ಸಾಮ್ರಾಜ್ಯದ ವೈಭವದ ದಿನಗಳನ್ನು ಮೋಹನ ತರಂಗಿಣಿಯು ಸಾರುತ್ತದೆ. ಆದ್ದರಿಂದ ನವಮೋಹನ ತರಂಗಿಣಿಯ ಕುರಿತು ಪರಿಶೀಲಿಸುವ ಸಂದರ್ಭದಲ್ಲಿ ಕನಕರ ಧ್ವನಿಯನ್ನು ಕೇಳಬೇಕಾಗುತ್ತದೆ. ಆದರೂ ಶಂಕರ ಕವಿಯು ಸಾಧ್ಯವಾದಲ್ಲೆಲ್ಲ ತನ್ನ ಅನುಭವಸಿರಿ, ಸ್ವೋಪಜ್ಞತೆ, ವೀರಶೈವನಿಷ್ಠೆಗಳ ಕಾರಣವಾಗಿ ಭಿನ್ನವಾಗಿ ನಿಲ್ಲುತ್ತಾನೆಂಬುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ 'ನವಮೋಹನ ತರಂಗಿಣಿ'ಯ ಕೆಲವು ವೈಶಿಷ್ಟ್ಯಗಳನ್ನು ಇಲ್ಲಿ ಅವಲೋಕಿಸಬಹುದು.

ಸಾಮಾಜಿಕ ವಿವೇಚನೆ : ''ಪರಂಪರೆ ಮತ್ತು ಸ್ವೋಪಜ್ಞತೆಯನ್ನು ಕುರಿತು ತಮ್ಮ ಪ್ರಸಿದ್ಧ ಲೇಖನದಲ್ಲಿ ಹೆಸರಾಂತ ಕವಿ ವಿಮರ್ಶಕ ಟಿ.ಎಸ್.ಎಲಿಯಟ್ ಅವರು ಪ್ರತಿಯೊಬ್ಬ ಕವಿಗೂ ತನ್ನ ಹಿಂದಿನ ಸಾಹಿತ್ಯ ಪರಂಪರೆಯ ಋಣಭಾರಸಾಕಷ್ಟಿರುವುದನ್ನು ಕುರಿತು ಕೆಲವು ಮೌಲಿಕ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ಕಲೆಯಭಾವ ಅವ್ಯೆಯಕ್ತಿಕ. ಕವಿ ತನ್ನನ್ನು ತಾನು ಸೃಷ್ಟಿಸುತ್ತಿರುವ ಕಲಾನಿರ್ಮಿತಿಗೆ ಅಧೀನ ಪಡಿಸಿಕೊಂಡಲ್ಲದೆ ಈ ಅವ್ಯೆಯಕ್ತಿಕ ಸ್ಥಿತಿಯನ್ನು ತಲುಪಲು ಸಾಧ್ಯವಿಲ್ಲ. ತಾನು ಏನನ್ನು ಸೃಷ್ಟಿಸಬೇಕಾಗಿದೆ ಎಂಬುದು ಅವನಿಗೆ ತಿಳಿಯುವುದು, ಅವನು ತನ್ನನ್ನು ತಾನು ಸಮಕಾಲೀನ ಬದುಕಿನ ವಿವರಗಳಲ್ಲಿ ತೊಡಗಿಸಿಕೊಂಡಾಗ ಮಾತ್ರವಲ್ಲ ತನ್ನ ಗತಕಾಲದ ಜೀವಂತ ಬದುಕಿನ ಅನುಭವಗಳನ್ನು ತನ್ನ ಸೃಷ್ಟಿಯಲ್ಲಿ ಅಳವಡಿಸಿಕೊಂಡಾಗ ಮಾತ್ರ''[೫] ಈ ಮಾತುಗಳಲ್ಲಿ ಕವಿಯಾದವನು ತನ್ನ ಕಾಲದ ಸಮಾಜದ ವಾಹಿನಿಯಲ್ಲಿ ಪರೋಕ್ಷವಾಗಿಯೋ, ಪ್ರತ್ಯಕ್ಷ ವಾಗಿಯೋ ಬೆರೆತು ಅದರ ಕಣ್ಣಾಗಿ ನಿಲ್ಲುತ್ತಾನೆ. ಹಾಗೂ ತನ್ನ ಗತಕಾಲದ ಪರಂಪರೆಯ ಅನುಭವಗಳಿಗೆ ದನಿಯಾಗುತ್ತಾನೆಂಬ ಭಾವ ಸ್ಪಷ್ಟವಾಗುತ್ತದೆ. ಅದಕ್ಕೆಂದೇ ''ಗಾರ್ಕಿಯವರು ಸಾಹಿತಿ ತನ್ನ ನಾಡಿನ ಮತ್ತು ಸಮಾಜದ ರಸಸ್ಪಂದಿಯಾಗಿರಬೇಕು, ಅವುಗಳ ಕಿವಿಯಾಗಬೇಕು, ಅವುಗಳ ಕಣ್ಣಾಗಬೇಕು, ಅವುಗಳ ಹೃದಯವಾಗಬೇಕು, ಅವನು ಸಮಕಾಲೀನಯುಗವಾಣಿಯೂ ಆಗಬೇಕು''[೬] ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ 'ನವಮೋಹನ ತರಂಗಿಣಿ'ಯನ್ನು ಅವಲೋಕಿಸಿದರೆ, ಅಂದಿನ ಜನಜೀವನ, ಸಾಮಾಜಿಕ ಮೌಲ್ಯಗಳು, ಆಚರಣೆಗಳು, ಹವ್ಯಾಸಗಳು ಮುಂತಾದವುಗಳನ್ನು ಗುರುತಿಸಬಹುದು. ಮೂಲ ಆಕರ ಕಾವ್ಯದ ಕರ್ತೃ ಕನಕದಾಸರಷ್ಟು ವಿಸ್ತೃತವಾದ ಚಿತ್ರಣಗಳು ಇಲ್ಲಿ ಕೆಲವೊಂದು ಕಡೆ ದೊರೆಯುವುದಿಲ್ಲ ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ.

ಜನಜೀವನ ದರ್ಶನ : ಮೋಹನ ತರಂಗಿಣಿಯಂತೆ ನವಮೋಹನ ತರಂಗಿಣಿಯೂ ಸಂಕೀರ್ಣ ಕಥೆಯನ್ನು ಒಳಗೊಂಡ ಕೃತಿ. ಇದು ಕೃಷ್ಣ-ರುಕ್ಮಿಣಿ-ಸತ್ಯಭಾಮೆ, ಮನ್ಮಥ-ರತಿ, ಪ್ರದ್ಯುಮ್ನ-ರತಿ, ಅನಿರುದ್ಧ ವೃಷೆ ಒಟ್ಟು ಮೂರು ತಲೆಮಾರುಗಳನ್ನೊಳಗೊಂಡಿದೆ. ಮನುಷ ಅತಿಮಾನುಷ ಸಂಗತಿಗಳು ಶಂಬರಾಸುರ ಮತ್ತು

ಬಾಣಾಸುರರ ಕಥನದಲ್ಲಿ ಮೂಡಿಬಂದಿವೆ. ''ಭಿನ್ನಸಂಸ್ಕೃತಿಯ ನಡುವಣ ಘರ್ಷಣೆಯಂತೆ ಕಂಡು ಬಂದರೂ ಕಲ್ಯಾಣಕಾರಣವಾಗಿ ಅವು ಒಂದಾಗುತ್ತವೆ.''[೭] ಈ ಕೃತಿಯ ರಚನೆಯಲ್ಲಿ ಕವಿಗೆ ತನ್ನ ಅನುಭವದ ಅಭಿವ್ಯಕ್ತಿಗೆ ಸಾಕಷ್ಟು ಅವಕಾಶ ಲಭ್ಯವಾಗುತ್ತದೆ. ಹುಟ್ಟಿದಂದಿನಿಂದ ಕಡೆಗಾಲದವರೆಗಿನ ಎಲ್ಲ ಸಂಗತಿಗಳೂ ಇಲ್ಲಿ ಎಡೆಪಡೆದಿವೆ.

ನವಮಾಸ ತುಂಬಿದ ಗರ್ಭಿಣಿ ರತಿದೇವಿ ಹೆರಿಗೆ ಬೇನೆಯಿಂದ ನರಳುವ ಚಿತ್ರಣವನ್ನು ಎಳೆಎಳೆಯಾಗಿ ಬಿಡಿಸಿದ್ದಾನೆ ಕವಿ. ರತಿದೇವಿಯು ಸುಖದ ನೋವಿನಿಂದ ನರಳುತ್ತಾ ತಾಳಲಾರದೆ ಶಿವಶಿವಾ ಎಂದಳುತ್ತಿರಲು

''ನಾರಿಯರ ಪೆಗಲ್ಗಳೊಳು ತನ್ನುಭಯ ತೋಳುಗಳ
ಪೇರುತ್ತೆಬಾಗಿ ತೂಗುತೆಬಳಲಿಯರಚಿಬಾ
ಯಾರುತಿರೆಕರದೊಯ್ದು ಸೂತಿಕಾಲಯದಿ ಪರಿಯಂಕದೊಳು ಮಲಗಿಸುತ್ತೆ
ಆರೈವುತಿರಲು ಸೂತಕಿ ಸಹಿತ ಸ್ತ್ರೀ ಜನರು
ವೋರಂತೆಯಭಯಮುಮನೀವುತಿರೆಸುಪ್ರಸೂತಿ
ಮಾರುತನ ದೆಸೆಯಿಂದ ಗರ್ಭಮುಮನೊತ್ತರಿಸಿ''[೮]

ಊರ್ಧ್ವಮುಖವಾಗಿದ್ದ ಪಿಂಡವು ತಿರುಗುತ್ತ ತಲೆಕೆಳಗಾಗಿ ಜನನಿಯ ಜಠರದಿಂದ, ಹೊರ ಬಂದ ದೃಶ್ಯ ಕಣ್ಕಟ್ಟುವಂತಿದೆ ಸೂಲಗಿತ್ತಿಯರು 'ಪುರುಷ ಶಿಶು'ವೆಂದು ತಿಳಿಸಲು ಸಂತೋಷಕ್ಕೆ ಮೇರೆಮೀರದಾಗುತ್ತದೆ. ಆ ಮಗುವಿನ ಹೊಕ್ಕುಳ ಬಳ್ಳಿಯನ್ನು ಕೊಯ್ದು, ಸ್ನಾನಮಾಡಿಸಿದರು. ಎಣ್ಣೆ ಅರಿಶಿನಹಚ್ಚಿ ಚೆನ್ನಾಗಿ ಕಾಯ್ದ ನೀರಿಗೆ ಪನ್ನೀರನ್ನು ಬೆರೆಸಿ ಸ್ನಾನ ಮಾಡಿಸಿದರು. ಶ್ರೀಕೃಷ್ಣರಾಯನು ಸದ್ಬುಧರನ್ನು ಕರೆಸಿಜಾತಕ ಬರೆಸಿದರು. ಮೂರು ದಿನಕ್ಕೆ ಯೀರಲ ಹಬ್ಬ ಮಾಡಿ, ನಂತರ ಸೂತಿಕಾ ನಿಲಯದ ಸಾರಣೆ ಕಾರಣೆಗೈಸಿ, ತೋರಣದಿಂದ ಶೃಂಗರಿಸಿ ರತಿದೇವಿಗೆ ಅಭ್ಯಂಗನ ಮೂಡಿಸುವರು.

ತರುಣಂಗೆ ತೈಲಮಂ ಪೂಸಿ ಕರಚರಣಗಳ
ನಿರದೆ ನೀವುತ್ತ ಘರ್ಮೋದಕದಿ ಮೈದೊಳೆದು
ಯರೆದುದ್ರಿಷ್ಟಿಯ ನೀರನಂಗುಳವನೋತ್ಯುಭಯಕರ್ನ ಮುಮನೂದುತ್ತಲೀ
ಪರದೃಷ್ಟಿಪೊರ್ದದೊಲು ಕಾಪಿನಮಸಿಯಬೊಟ್ಟ
ಹರುಷದಿಂದಿಟ್ಟು ಮಂಡಿಯಂ ಪೊದಿಸಿ....... " (೧೫-೩೦)

ಕರೆದೊಯ್ದು ತಾಯಿಯ ಮಗ್ಗುಲಿಗೆ ಮಲಗಿಸುವರು. ಶಿಶುವಿನಸ್ನಾನದ ರೀತಿ ದೃಷ್ಟಿಬೊಟ್ಟನ್ನಿಡುವುದು ಈಗಲೂ ಅದೇ ಪದ್ಧತಿಯಲ್ಲಿರುವುದನ್ನು ನಾವು ಕಾಣುತ್ತೇವೆ. ನಂತರ ತೊಟ್ಟಿಲಶಾಸ್ತ್ರ. ಮಣಿಖಚಿತ ಹೊಂದೊಟ್ಟಿಲನ್ನು ಅಷ್ಟವಿಧದಿಂದ ಪೂಜಿಸಿ ರನ್ನ ಸರಪಳಿಗೆ ಕೀಲಿಸಿ, ಮೃದುತಲ್ಪವನ್ನು ಹಾಸಿ-ಮಲಗಿಸಿ ನಾಮಕರಣ ಮಾಡಲು ಗುರುವರ್ಯರನ್ನು ಕರೆಸಿದರು. ಜೋಗಳು ಹಾಡಿದರು. ತೊಟ್ಟಿಲಹಬ್ಬಕ್ಕೆ ಬಂದ ಎಲ್ಲ ಬಂಧು-ಭಗಿನಿಯರಿಗೆ ಸಡಗರದಿಂದ ಭೋಜನವನೀಡಿ ತಾಂಬೂಲವಿತ್ತು ಬೀಳ್ಕೊಳ್ಳುವರು.

ಆ ಮಗುವಿಗೆ, ಅರಳೆಲೆ ಮಾಗಾಯಿ, ಬಿಂದಿಲುಂಗುರ, ನಾಗಮುರಿ, ದೃಷ್ಟಿಮಣಿಗಣದ ಮಧ್ಯೆ ಹುಲಿಯುಗುರು, ಸೊಂಟದ ಉಡುದಾರ, ಹಾಲ್ಗಡಗ, ಗೆಜ್ಜೆ ಮುಂತಾದ ಆಭರಣಗಳನ್ನು ಹಾಕಿ ಸಂತಸ ಪಡುವ ಚಿತ್ರದಲ್ಲಿ ಅಂದಿನ ಕಾಲದ ಮಕ್ಕಳ ಆಭರಣದ ಪರಿಚಯು ನಮಗಾಗುತ್ತದೆ. ಇಂದು ಅನೇಕ ಆಭರಣಗಳು ನಾಮಮಾತ್ರಕ್ಕೆ ಕೇಳಸಿಗುತ್ತವೆಯಷ್ಟೆ 'ಕುಂಚಿಗೆ ಕುಲಾಯ ಅಂಗಿ' ತೊಡಿಸುವ ಪ್ರಸ್ತಾಪವೂ ಇಲ್ಲದೆ. ಇಂದಿಗೂಮುತ್ತಿನ ಕುಂಚಿಗೆಗಳು ಪ್ರತಿಷ್ಠೆಯ ವಿಷಯವಾಗಿರುವುದು ಗಮನಾರ್ಹ.

ವೃಷೆಯ ಶೃಂಗಾರದ ವರ್ಣನೆಯಲ್ಲಿ ಅಂದಿನ ಆಭರಣಗಳ ಪ್ರಸ್ತಾಪ ವಿವರವಾಗಿ ಮೂಡಿಬಂದಿದೆ. ವೃಷಾದೇವಿಗೆ ಸ್ನಾನ ಮಾಡಿಸಿ, ಧೌತಾಂಬರವನ್ನು ನಿರಿವಿಡಿದುಡಿಸಿ ಮಣಿಗಿರಣ ಕಾಂತಿಯ ಕನಕಮಯ ಪಾದುಕೆಗಳನ್ನೇರಿಸಿ ಕರೆ ತಂದರು. ಕುಶಲದಿಂದ ಕೇಶಗಳಿಗೆ ಮುತ್ತು ಪೋಣಿಸಿ, ತರತರದ ಹೊಂಬಣ್ಣದ ಕೇದಿಗೆಯ ನಿಟ್ಟು ಜಡೆ ಹೆಣೆದರು. ಕಿವಿಗಳಿಗೆ ಓಲೆ, ಮೌಕ್ತಿಕದ ಪಟ್ಟಿ, ನಕ್ಷತ್ರ ಮಾಲೆಗಳನ್ನು ಕೊರಳಿಗೆ, ಮೌಕ್ತಿಕಧಾವಳಿಯ ಹಣೆಕಟ್ಟನ್ನು ಹಣೆಗೆ, ತೋಳುಗಳಿಗೆ ರತ್ನದ ತೋಳಭಾಪುರ, ಕೈಗಳಿಗೆ ವಜ್ರಕಂಕಣ, ಹೊನ್ನಿನಬಳೆಗಳನ್ನು, ಅಂಗುಲಿಗಳಿಗೆ ಮಣಿಮುದ್ರಿಕೆಯ ಉಂಗುರಗಳನ್ನು, ನಡುವಿಗೆ ಒಡ್ಯಾಣವನ್ನು, ಕಾಲ್ಗಳಿಗೆ ಹೊನ್ನಗೆಜ್ಜೆಗಳನ್ನು, ಕಾಲಿಗೆ ಪಿಲ್ಲೆಗಳನ್ನು ಮೂಗಿಗೆ ಮುತ್ತಿನ ಮೂಗುತಿಯನ್ನಿಟ್ಟು, ತಿಲಕವಿಟ್ಟು ಕೊನೆಗೆ ಭಸ್ಮಧರಿಸಿದರೆಂದು ವಿವರವಾಗಿ ತಿಳಿಸುತ್ತಾನೆ ಶಂಕರಕವಿ ಹೀಗೆ ಆಪಾದಮಸ್ತಕ ವೃಷಾದೇವಿಯನ್ನು ಆಭರಣಗಳಿಂದ ಶೃಂಗರಿಸಿದರು. ಇದು ರಾಜಕುಮಾರಿಯ ಶೃಂಗಾರವೆಂಬುದನ್ನು ಮರೆಯುವ ಹಾಗಿಲ್ಲ. ಆದರೂ ಇಲ್ಲಿ ಉಕ್ತಗೊಂಡ ಆಭರಣಗಳಲ್ಲಿ ಕೆಲವನ್ನು ಇಂದಿಗೂ ನೋಡಬಹುದು.

ರತಿ-ಕಾಮರ ವಿವಾಹ ಸಂದರ್ಭದಲ್ಲಿ ವಿವಾಹ ಮಂಟಪವನ್ನು ತಳಿರು ತೋರಣಗಳಿಂದಲಂಕರಿಸುವುದು ಪುರದ ಅಲಂಕಾರ, ತೆರೆವಿಡಿದು ಮಂತ್ರಾಕ್ಷತೆಯೊಂದಿಗೆ ಮಂಗಳ ಸೂತ್ರಧಾರಣೆಯಂದಿಗೆ ವಿವಾಹ ಮುಕ್ತಾಯಗೊಳ್ಳುವುದನ್ನು ವಿವರವಾಗಿ ತಿಳಿಸಲಾಗಿದೆ. ನಂತರ ಶ್ರೀಕೃಷ್ಣನು ಬ್ರಾಹ್ಮಣರಿಗೆ ವಿದ್ವಾಂಸರಿಗೆ, ದಿಗ್ವಾಚಕರಿಗೆ, ಯೋಗ್ಯತಾನುಸಾರ ಗಜ-ತುರಗ, ಭೂ, ಧನ, ವಸ್ತ್ರಗಳನ್ನು ಇತ್ತು ಬೀಳ್ಕೊಟ್ಟನೆಂಬ ಚಿತ್ರಣವಿದೆ.

ಬಾಣಾಸುರನ ಶೋಣಿತಪುರ ವರ್ಣನೆಯಲ್ಲಿ

> "ದಂತಿವಾಜಿವರೂಥಗಳನಡರಿಯಧಿಕಭೂ
> ಕಾಂತರಾತ್ಮಜರುವ್ವೆಯ್ಯಾಳಿ ಕೇಳಿ ಮೇಳ ದೊಡನೆ ಎಡೆಮಾಡುತಿಹರೂ
> ಮುಂತೆ ಸೊಕ್ಕಿನ ತಗರು, ತಾಂಬ್ರಚೂಡಂಗಳನು
> ಪಂಥದಿಂಕಾದ್ಯಾಡಿಸುವರುಂ ಮದಲ್ಲದೆಯು
> ತಂತಮಗೆ ಬಾರಗುತ್ತಾದಿ ಬಹುಜೂಜುಗಳನಾಡುತಿಹರಬ್ಜವದನೇ" (೨-೪೯)

ಎಂಬಲ್ಲಿ ಅಂದು ಪ್ರಚಲಿತವಿದ್ದ ಆಟಗಳಲ್ಲಿ ಟಗರು, ಕೋಳಿಗಳ ಕಾದಾಟಗಳು, ವಿಧವಿಧದ ಜೂಜಾಟಗಳು ಇಂದಿಗೂ ಹಬ್ಬ ಹರಿದಿನಗಳ ನೆಪದಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣುತ್ತೇವೆ. ಓಕುಳಿ, ಜಲಕ್ರೀಡೆ, ಉಯ್ಯಾಲೆ ಯಾಟಗಳನ್ನು ಕನಕದಾಸರಂತೆಯೇ ಶಂಕರಕವಿಯೂ ಚಿತ್ರಿಸಿದ್ದಾನೆ.

ಯಲ್ಲಗೋಪಾಂಗನೆಯರಂಕೂಡಿ ಶ್ರೀಕೃಷ್ಣ
ಸಲ್ಲೀಲೆಯಿಂದೆ ಕೊಳಲಿಳಿದು ಬಾರದೆ ನಿಂದ
ನಲ್ಲೆಯರ ಪಿಡಿದೆಳೆದು ನೀರೊಳದ್ದಲು ಭಯದಿತನ್ನನೆ ತರ್ಕೈಸಲೂ (೧೦-೪೮)

ಪುಲ್ಲನಾಭನು ಅಪ್ಪುಗೆಯನ್ನು ಬಿಡಿಸಿಕೊಂಡು ಮತ್ತೆ ನೀರೊಳಗದ್ದಿ ನಗುತ್ತಿದ್ದನು.

ವಾರಿಜಾಕ್ಷನು ಸಕಲನಾರಿಯರಮ್ಯಾಲೆಕರ
ವಾರಿ ಜಂಗಳಲಿ ನಿರ್ಭರದಿಚಲ್ಲಿದೊಡೆಯಾನೀರೆಯರು
ಕೆರಳೆವೊಬ್ಬುಳಿಯಾಗಿ ನೀರ್ಗರೆದರಾಹರಿಗೆ ವಿವಹದಲ್ಲೀ
ತೋರ ಮುತ್ತಿನಶಾಸೆ ಸುರಸಿದರೊಯೆಂಬಂತೆ'' (೧೦-೪೯)

ಹೀಗೆ ಜಲಕ್ರೀಡೆ ಮುಂದುವರಿಯುತ್ತದೆ.

ಕರೆದು ರುಕ್ಮಿಣಿ ಸತ್ಯಭಾಮೆಯರು ಮುಖ್ಯವಹ
ತರುಣಿಯರಿಗೊಂದೊಂದು ಪೊನ್ನಜೀರ್ಕೊಳವಿಗಳ
ನಿರದಿತ್ತು ಪರಿಮಳ ಕದಂಬದೋಕುಳಿಯ ತುಂಬಿರ್ದದಸುಕುಂಭಂಗಳಾ
ಸರಿಗೊಳಿಸಿ ಸಂಚಿತ್ತು ಸರ್ವನಾರಿಯರವ
ತ್ತರದಿ ನಿಲಿಸಿ ಕಪಟ ನಾಟಕನು ಶ್ರೀಕೃಷ್ಣಕರದಿಪೊನ್ನಂಡೆಯಂ
ವಿಡಿದು ಕಸ್ತುರಿವೆರದ ಪರಿಮಳೋದಕವತೀವೀ'' (೧೦-೫೯)

ಕೈಚಳಕದಿಂದ ಎಲ್ಲರೂ ತೋಯುವಂತೆ ಜೀರ್ಕೊಳವಿಯನ್ನು ಚಿಮ್ಮುತ್ತಿದ್ದನು. ಓಕುಳಿಯಾಟದ ನಂತರ 'ಉಯ್ಯಾಲೆ'ಯಾಟವನ್ನಾಡುವ ಪ್ರಸ್ತಾಪವೂ ಇಲ್ಲಿ ಕಾಣಸಿಗುತ್ತದೆ. ''ವಿದ್ವಾಂಸರು ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ವಸಂತೋತ್ಸವ ಮತ್ತು ಓಕುಳಿಯಾಟದ ಸಂಕೇತವೆಂದು ಕನಕದಾಸರ ಮೋಹನ ತರಂಗಿಣಿಯನ್ನು ಕುರಿತು ಹೇಳುತ್ತಾರೆ. ಮಾತ್ರವಲ್ಲ ದ್ವಾಪರದ ದ್ವಾರಾವತಿಯನ್ನು ಕಲಿಯುಗಕ್ಕೆ ತಂದ ಕನಕದಾಸರು ಮೋಹನತರಂಗಿಣಿಗೆ ಒಂದು ಶೋಭೆಯನ್ನು ತಂದಿದ್ದಾರೆ.''[೯] ಎಂದು ಆಡಿರುವ ಮಾತುಗಳನ್ನು ಶಂಕರಕವಿಯ 'ನವಮೋಹನ ತರಂಗಿಣಿ'ಯ ಸಂದರ್ಭದಲ್ಲೂ ಪುನರುಚ್ಚರಿಸಬಹುದು. ಆದರೆ ಇದು ಕನಕನ ಕಣ್ಣಿನಿಂದ ಶಂಕರಕವಿಯನ್ನು ನೋಡಿದಂತಾಗುತ್ತದೆಂಬುದು ಸುಳ್ಳಲ್ಲ. ಆದರೂ ಶಂಕರಕವಿಯು ಕಣ್ಕಟ್ಟುವ ದೃಶ್ಯಗಳನ್ನು ಚಿತ್ರಿಸುವಲ್ಲಿ 'ಅನುಕರಣೆ' ಎಂಬುದನ್ನು ಮರೆಸಿಬಿಡುತ್ತಾನೆ ಎಷ್ಟೋ ಕಡೆ, ಅದೇ ಅವನ ಹೆಗ್ಗಳಿಕೆ. ಅನಿರುದ್ಧನು ಬೇಟೆಗೆ ಹೋಗಿ ಹುಲಿಯನ್ನು ಕೊಂದು ಅಡವಿಗರಿಂದ ವರಹದಾಡೆಯಮುತ್ತು, 'ವೇಣುದಂಡದ ಮುತ್ತು, ಕರಿಯಮಸ್ತಕದ ಮುತ್ತು ಹರಿಶಿರದ ಮಣಿ, ವುರಗನ ಫಣಾರತ್ನಗಳನ್ನು ಕಾಣಿಕೆಯಾಗಿ ಪಡೆದು ಬರುವ ಪ್ರಸ್ತಾಪದಲ್ಲಿ ಕಣ್ಕಟ್ಟುವ ಬೇಟೆಯ ಚಿತ್ರಣವಿದೆ.

ಶಂಬರಾಸುರನ ಅರಮನೆಯಲ್ಲಿದ್ದ ರತಿದೇವಿಯು ಅಡಿಗೆಮನೆಯ ಮೇಲ್ವಿಚಾರಕಿಯಾಗಿ ಪಂಚಭಕ್ಷ್ಯ ಪರಮಾನ್ನ ರಸರಸಾಯನ ಪಾಕಗಳ ಜೊತೆಗೆ ಮಾಂಸದಡುಗೆಗಳನ್ನೂ ರುಚಿಕಟ್ಟಾಗಿ ಮಾಡುತ್ತಿದ್ದ ವಿವರಗಳಿವೆ.

ಉದಾಹರಣೆಗೆ

ಮೊಲದಡಗಯಡವಿ ಸೂಕರದ ಪಿಸಿ ತಮಹರಿಣ
ಗಳು ಮುಖ್ಯಮೃಗಕುಲದ ಕಂಡಗಳಂ ಕೊರೆದು
ವಲಿದು ಕರೆಗಳಲವಣಾದಿ ಸಂಬಾರಮಂ ಪಟ್ಟಿಬೇಯಿಸಿ ಬೇಯಿಸಿ
ಪಲಬಗೆಯ ಪಕ್ಷಿಗಳತರಿಸೀಯ್ಯಲವಕೊರೆದು
ಸಲುವ ಸಂಬಾರದೊಡನವನು ಪಾಕಂಗೈದು
ಜಲಚರಂಗಳ ಪೊಟ್ಟಿಸೀಳಿ ನೀರಿಂತೊಳೆದು ವಗ್ಗರಣೆಯಿತ್ತಾಂ ಬ್ರಮ್ಮಾ'' (೯-೬)

ಲೇಸಿನಿಂದ ಮಾಡಿನೀಡಲು ಕಣ್ಣಿಗೆ ಸಂತೋಷ, ಕೈಗತಿ ಮೃದು, ನಾಸಿಕಕೆ ಬಹುಕಂಪು ಜಿಹ್ವೆಗೆ ಬಲುರುಚಿಯಾಗಿ ಶಂಬರಾಸುರನು ಮತ್ತೆ ಮತ್ತೆ ನೀಡಿಸಿಕೊಂಡು ಸವಿಯುತ್ತಿದ್ದನಂತೆ. ಶಂಕರಕವಿಯು ಒಬ್ಬ ಉತ್ತಮ ಪಾಕ ಶಾಸ್ತ್ರಜ್ಞನಂತೆ ಇಲ್ಲಿ ವಿವರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಶೋಣಿತಪುರದ ಜನರೆಲ್ಲ ಆದರ್ಶ ಸಮಾಜದ ಪ್ರಜೆಗಳಂತೆ ಚಿತ್ರಿಸಲ್ಪಟ್ಟಿದ್ದಾರೆ. ಸರ್ವಜಾತಿಯ ಜನರು ತಮ್ಮ ತಮ್ಮ ಸ್ವಧರ್ಮವನ್ನು ಬಿಡದೆ ನಡೆಸುತ್ತಿದ್ದರು. ಪರಸ್ಪರ ಸೌಹಾರ್ದತೆಯಿಂದ ಬದುಕುತ್ತಿದ್ದರು.

ಉದಾಹರಣೆಗೆ

ದಾನದಯಧರ್ಮಕ್ಷಮೆ ದಮೆಶಾಂತಿಯುಕ್ತರುಂ
ಮಾನಮರಿಯಾದಿಯುಮನಾಥ ಜನ ಪೋಷಕರು
ಹೀನನಿಷ್ಠೂರ ಮತ್ಸರ ಮದವಿವರ್ಜಿತರು ಸತ್ಕೀರ್ತಿ ಪೂರ್ತಿಯುತರೂ
ಧ್ಯಾನಮನುಷ್ಟಾನ ಮತಿ ಶೀಲರುಂ ಲೋಲರುಂ
ಸಾನುರಾಗದಿ ಸಕಲಜನ ಸಮ್ಮತರು ನಿಜ
ಮಾನಿನಿಯರುಗಳು ಸಂಪರ್ಕವಲ್ಲದೆಯಿಲ್ಲಯನ್ಯ ವಧುವ್ಯವಹಾರವೂ'' (೨-೫೨)

ಪುರುಷರು ಇಂತಾದರೆ ಸ್ತ್ರೀಯರೂ ಕಡಿಮೆಯೇನಿರಲಿಲ್ಲ. ಅವರು ಪತಿವ್ರತೆಯರು, ಸರ್ವಸಮ್ಮತ ಸದಾ ಚಾರೆಯರು, ಸುಶೀಲೆಯರು, ರತಿಗೆ ಮಿಗೆ ಚೆಲ್ವೆಯರು ರಮಣೀಯ ಕಲೆಯವರೂ ಆಗಿದ್ದರೆಂದು ಚಿತ್ರಿಸುವ ಕವಿ ಅದರ ಬೆನ್ನಲ್ಲೇ ಸೂಳೆಗೇರಿಗಳ ಚಿತ್ರಣವನ್ನು ತರುವುದು ವಿರೋಧಾಭಾಸವೆನಿಸಿದರೂ ಅಷ್ಟಾದಶ ವರ್ಣನೆಗಳ ವ್ಯಾಮೋಹಕ್ಕೆ ಕಟ್ಟುಬಿದ್ದಿದ್ದರಿಂದಾಗಿ ಈ ತಪ್ಪು ಘಟಿಸಿದೆ ಎನ್ನಬಹುದೇನೋ ಅಥವಾ ವೇಶ್ಯಾವಾಟಿಕೆಯು ಅನಿವಾರ್ಯವಾಗಿದ್ದ ಸಂಗತಿಯೂ ಆಗಿರಬಹುದು. ಅಂದಿನ ಕಾಲದಲ್ಲಿ ಪುರುಷನಿಲ್ಲದ ಸ್ತ್ರೀಯು ಹೇಗಿರುತ್ತಿದ್ದಳೆಂಬ ಸಂಗತಿಯನ್ನು ಸೂಕ್ಷ್ಮವಾಗಿ ಶಂಕರಕವಿಯು ಹೀಗೆ ಚಿತ್ರಿಸಿದ್ದಾನೆ.

[illegible]

ಶಂಬರಾಸುರನ ಮನೆಯಲ್ಲಿ 'ರತಿದೇವಿ'ಯು ಅಡುಗೆ ಮನೆಯ ಮೇಲ್ವಿಚಾರಕಿಯಾಗಿ ರುಚಿಕಟ್ಟಾದ ಭಕ್ಷ್ಯ-ಭೋಜ್ಯಗಳನ್ನು ಮಾಡಿ ಉಣಬಡಿಸುತ್ತಿರುತ್ತಾಳೆ. ಶಂಬರಾಸುರ ದಂಪತಿಗಳು ರತಿದೇವಿಯ ಅಡುಗೆಯ ಕೈಚಳಕಕ್ಕೆ ಮಾರುಹೋಗಿ ಅವಳನ್ನು ಕರೆದು ಪ್ರೀತಿಯಿಂದ

"ಮಿಸುನಿ ಮಣಿದೊಡಗಳನು ದಿವ್ಯದುಕೂಲಮಂತರಿಸಿ ಕೈಕೊಂಬುದೆಂದು ಕೇಳಿಕೊಳ್ಳಲು ಆಕೆ
ನಸುನಗುತಲೆಲೆಯಯ್ಯ ಪುರುಷರಗಲಿದ ಬಳಿಕ
ಸಸಿನಮೆ ಮರಳಿ ಬರ್ಪನಕಮಾನುನಿಯರುಂ
ವಸೆದು ತಲೆಗೆರೆದು ದಿವ್ಯಾಂಬರಂಗಳನುಟ್ಟು ಬಾಯ್ಬಿಬೈತಲೆಯತೆಗದೂ" (೯-೮)

ಕುರುಳನತಿ ಕುಶಲದಿಂಮುಡಿ ಜಡೆಗಳಂಕಟ್ಟಿ
ಮರಿಸಿ ನವಗಂಧಕುಂಕುಮ ಪುಷ್ಪಮಂಧರಿಸಿ
ಪರಿಪರಿಯ ಮಿಸುನಿರತ್ನಾಭರಣಮುಮನಲಂಕರಿಸುತ್ತಸೊಬಗಿನಿಂದೇ
ತಿರುಗುವರ ಬಣಗು ಜಾರೆಯರಲ್ಲದೆ ಯೇಕ
"ಪುರುಷಭಕ್ತಿಯೆಸರ್ವಮಾಭರಣಗರತಿಯಹ
ತರುಣಿಯರಿಗೆನ್ನಯಭಿಮಾನ ದಾಭರಣಮುಮನಿನ್ನಂ ರಕ್ಷಿಸುವೊಲಿದೊಡೆ" (೯-೯)

ಎಂದು ನಿರಾಕರಿಸುತ್ತಾಳೆ. ಇದು ಭಾರತೀಯ ಸಮಾಜದ, ಅದರಲ್ಲೂ ಕನ್ನಡ ಸಮಾಜದ ಸಂಸ್ಕೃತಿಯ ಒಂದು ಗುಣಸೂಚಕವಾಗಿ ನಿಲ್ಲುತ್ತದೆ. ಪುರುಷನಿಲ್ಲದ ಅಥವಾ ವಿಧವೆಯಾದ ಮಹಿಳೆ ಅಲಂಕಾರ ರಹಿತಳಾಗಿರಬೇಕೆಂಬ ಕಟ್ಟುಪಾಡು ಈ ಸಮಾಜದ್ದು, ಪ್ರಸ್ತುತ ಕಾವ್ಯದಲ್ಲಿ ತನ್ನೊಡೆಯ ಮನ್ಮಥ ಬರುವವರೆಗೆ ಸನ್ಯಾಸಿನಿಯಂತೆ ಕಾಲಕಳೆಯುವ ರತಿದೇವಿಯು ಅಪ್ಪಟ ಕನ್ನಡ ಸಂಸ್ಕೃತಿಯ ಹೆಣ್ಣಾಗಿ ತೋರುತ್ತಾಳೆ.

ಸಾಮಾಜಿಕ ಮೌಲ್ಯಗಳು

"ಯಾವುದೇ ದೇಶದ, ಕಾಲದ, ಭಾಷೆಯ ಸಾಹಿತ್ಯ, ಒಂದು ರೀತಿಯಲ್ಲಿ ತಲೆಮಾರುಗಳ ನಡುವಣ ಸಾಂಸ್ಕೃತಿಕ ಕೊಂಡಿಯಾಗಿರುತ್ತದೆ. ಶತಮಾನಗಳಿಂದ ಬೆಳೆದುಬಂದ ರೀತಿ ರಿವಾಜುಗಳ ದಾಖಲೆಯೂ ಆಗಿರುತ್ತದೆ. ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ವೇದಶಾಸ್ತ್ರ ಪುರಾಣ ಇತಿಹಾಸಗಳಲ್ಲಿ ಪ್ರತಿಪಾದಿತವಾದ ಮೌಲ್ಯಗಳು ಆಯಾ ಪ್ರಾಂತ್ಯದ ಸಾಹಿತ್ಯದಲ್ಲಿ ಒಡಮೂಡಿವೆ. ಕನ್ನಡ ಸಾಹಿತ್ಯವೂ ಇದಕ್ಕೆ ಹೊರತಲ್ಲ"[೧೦] ನವಮೋಹನ ತರಂಗಿಣಿಯಲ್ಲಿ ಈ ಕುರಿತು ಒಂದೆರಡು ಪ್ರಸಂಗಗಳನ್ನು ಅವಲೋಕಿಸಬಹುದು.

ಕನಕದಾಸರ 'ಮೋಹನತರಂಗಿಣಿ'ಯಂತೆ ನವಮೋಹನ ತರಂಗಿಣಿಯಲ್ಲಿಯೂ ವಿಷ್ಣುಭಕ್ತಿ ಶಿವಭಕ್ತಿಗಳ ಸಮಾವೇಶವಾಗಿದೆ.

ಕೃಷ್ಣ ಮತ್ತು ಪರಶಿವರ ಮಧ್ಯದಲ್ಲಿ ಯುದ್ಧ ನಡೆಯುತ್ತಲಿದೆ. ಕೊನೆಯ ಹಂತದಲ್ಲಿ ಶಿವನುತನ್ನ ತ್ರಿಶೂಲವನ್ನು, ಕೃಷ್ಣನು ತನ್ನ ಚಕ್ರವನ್ನು ಕೈಗೆತ್ತಿಕೊಳ್ಳಲು

.... ಶೂಲದಾ

ಮೊನೆಗಾಂಪರಾರು ಚಕ್ರವುಮಾರ ಶಂಕಿಪುದು

ಸನುಮತವೆ ಹೋ ಹೋ ನಿಲ್ಲಿರಿಯನುತಲೀರ್ವರಿಗೆ ಸಾಕ್ಷಿ ಬಯಲಂ ನುಡಿದುದೂ"

(೩೧-೨೧)

ಆಗ ದೇವದುಂದುಭಿಗಳು ಮೊಳಗಿದವು. ಪರಶಿವ ಶ್ರೀಕೃಷ್ಣರೀರ್ವರೂ ರಣಾಂಗಣವನ್ನು ತೊರೆದು ಅತಿ ಸಲುಗೆಯಿಂದ ಅಲಸಿದ ಹಾಗೆ ತಮ್ಮ ತಮ್ಮ ಸ್ಥಳಗಳಿಗೆ ತೆರಳುತ್ತಾರೆ. ಇಲ್ಲಿ ಕೇವಲ ಸ್ನೇಹದಿಂದ ಕಾದಿದರೆಂಬ ಅಂಶ ಶಿವವಿಷ್ಣುವಿನ ಸಾಮರಸ್ಯದ ದ್ಯೋತಕ. ಬಾಣಾಸುರನ ಶಿವಸ್ತುತಿಯಲ್ಲಿ ಹರಹರ ಮಹಾದೇವ ಎನ್ನುತ್ತಲೇ ಹರಿಮಿತ್ರ ಮಹಾದೇವ, ಹರಿನೇತ್ರ ಮಹಾದೇವ ಎಂದು ಸ್ತುತಿಸುವಲ್ಲಿಯೂ ಹರಿ-ಹರಸಾಮ್ಯತೆಯನ್ನು ಗುರುತಿಸುತ್ತೇವೆ. ಪರಸ್ಪರ ಭಿನ್ನಧರ್ಮೀಯರು ಸೌಹಾರ್ದಯುತವಾಗಿ ಅಂದು ಬದುಕುತ್ತಿದ್ದರೆಂಬ ಸಾಮಾಜಿಕ ಮೌಲ್ಯವನ್ನಿದು ಸಂಕೇತಿಸುತ್ತದೆ.

'ಲೋಕೋಪಕಾರವೇ ಕೈವಲ್ಯ' ಎಂಬ ಮಾತನ್ನು ಮನ್ಮಥನ ಪ್ರಸಂಗ ಚೆನ್ನಾಗಿ ಚಿತ್ರಿಸುತ್ತದೆ. ಗುರು ಬೃಹಸ್ಪತಿಯು ಮನ್ಮಥನಿದ್ದಲ್ಲಿಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ಬಹಳ ಜಾಣತನದಿಂದ ತಮ್ಮ ಕಾರ್ಯ ಸಾಧನೆಗೆ ಪೀಠಿಕೆ ಹಾಕುತ್ತಾರೆ.

.... ಶತಮಳಿದೊಡೋರ್ವನುಳಿವುದೆ

ಮೇಧಿನಿಯೊಳಂಲೇಸೆ ವಬ್ಬನಳಿದನಿಬ್ಬರನುಕಾಯ್ದುಕೊಂಬುದ

ವಳಿತೋ..." (೫-೮) ಎಂದು ಕೇಳಲು ಮನ್ಮಥನು

"... ಅಳಿದೋರ್ವನನಿಬರನು ವುಳುಹುವದೆ ಧರ್ಮ"

ಎಂದುತ್ತರಿಸುತ್ತಾನೆ. ಇಲ್ಲಿ ವ್ಯಷ್ಟಿಗಿಂತ ಸಮಷ್ಟಿಮುಖ್ಯ, ವ್ಯಕ್ತಿಯ ಹಿತಕ್ಕಿಂತ ಸಮಾಜದ ಹಿತಮುಖ್ಯ ಎಂಬ ಮೌಲ್ಯ ಅಡಗಿದೆ.

ಗುರುವು ತಾನು ಬಂದ ಉದ್ದೇಶವನ್ನು ತಿಳಿಸಿ, ಶಿವನತಪೋಭಂಗಕ್ಕೆ ಅಣಿಯಾಗಲು ಮನ್ಮಥನಿಗೆ ಸೂಚಿಸುತ್ತಾನೆ. ಆತನು ಪರಶಿವನು ತಪವ ಕೆಡಿಸಲು ಆತ ನನ್ನನ್ನು ದಹಿಸದೇ ಇರಲಾರ. ದೇವತೆಗಳ ಉಳುವಿಗಾಗಿ ಬ್ರಹ್ಮ ವಿಷ್ಣುಗಳು ನನ್ನನ್ನು ಸಾಯ ಹೇಳಿದರೇ ಎಂದು ಮರುಕದಿಂದ ಉತ್ತರಿಸುತ್ತಾನೆ. ಆಗ ಗುರುವು ಈ ದೇಹ ಅನಿತ್ಯವೆಂದೂ, ಸತ್ಕೀರ್ತಿ ಶಾಶ್ವತವೆಂದೂ ತಿಳಿಸಿ, ಮಾಂಧಾತ, ಶ್ರೀಜಿತರ ಉದಾಹರಣೆಗಳನ್ನಿತ್ತು,

"ಕ್ಷಿತಿಯೊಳಗೆ ಸತ್ಯದಿಂ ಪರಹಿತಾರ್ಥಮ ಮಾಡಿ

ಅತಿಶಯದಿ ಸುಸ್ಥಿರದ ಸತ್ಕೀರ್ತಿವಧುವ ಸಂಪಾದಿಪನೆಧನ್ಯನೂ" (೧-೧೫)

ಎಂದು ಪರಹಿತವೇ ನಿಜವಾದ ಮೋಕ್ಷವೆಂದು ತಿಳಿಸುತ್ತಾನೆ. ಏನಾದರಾಗಲಿ, ಗುರುವಾಜ್ಞೆ ಮೀರಲಾರೆನೆಂದು ಶಿವನ ತಪೋಭಂಗಕ್ಕೆ ಹೊರಡುತ್ತಾನೆ. ಪಾಪಾಯ ಪರಪೀಡನಂ ಪರಪೀಡೆಯೇ ಪಾಪ ಎನ್ನುವ ಮಾತಿಗೆ ನಿದರ್ಶನವಾಗಿ ಶಂಬರಾಸುರನು ತನ್ನ ಜೀವದ ಮೇಲಿನ ಆಶೆಯಿಂದ ಹತ್ತುದಿನದ ಮಗುವನ್ನು ಶಿಶು ವಧೆ ಪಾಪದ ಕೆಲಸವೆಂದು ಬಗೆದು ಸಮುದ್ರಕ್ಕೆಸೆಯುತ್ತಾನೆ. ಆಮಗು ಮುಂದೆ ಅವನ ಮನೆಯಲ್ಲಿಯೇ ಬೆಳೆದು ದೊಡ್ಡವನಾಗಿ ಶಂಬರಾಸುರನನ್ನು ವಧಿಸುತ್ತಾನೆ.

ಉಪಕಾರಸ್ಮರಣೆ ಸಾಮಾಜಿಕ ಮೌಲ್ಯಗಳಲ್ಲಿಒಂದು. ಮೋಹನ ತರಂಗಿಣಿಯನ್ನೇ ಅನುಸರಿಸಿ ಶಂಕರ ಕವಿಯು ಪ್ರಸ್ತುತ ಕಾವ್ಯದಲ್ಲಿ ಈ ಸಂಗತಿಯನ್ನು ಪ್ರತಿಪಾದಿಸುತ್ತಾನೆ. ತಾನು ಬಯಸಿದ ಅನಿರುದ್ಧನನ್ನು ತನಗಾಗಿ ಹೊತ್ತುತಂದ ಚಿತ್ರಲೇಖೆಯನ್ನು ಕುರಿತುವೃಷೆಯು

> "........ಆತ್ಮ ಸಖಿಯೇ ನಿನಗೇನನಿತ್ತೊಡೆನಿನ್ನರಿಣ ತೀರಗಡೆಯಪ್ಪುದೇ" (೨೬-೫೫)
> ಪೆತ್ತವಳು ನಿಜಸಹೋದರಿಯರುಂ ಯನ್ನದು
> ಷ್ಕೃತ್ತಮಂ ಸೈರಿಪರೆನಿನ್ನಂತೆ ಕೇವಲಾ
> ಪತ್ತಿಗರುಯಿನ್ನಾವ ಲೋಕದೊಳಗಿಹರೆ" ....

ಎಂದು ಹೇಳಿ ಚಿತ್ರಲೇಖೆಯ ಎರಡೂ ಕೈಗಳನ್ನು ಪ್ರೀತಿಯಿಂದ ಹಿಡಿದು ಮುದ್ದಿಸಿ ಕೃತಜ್ಞತೆ ವ್ಯಕ್ತಪಡಿಸುತ್ತಾಳೆ. ಹೀಗೆ ಅನೇಕ ಮೌಲ್ಯತುಂಬಿದ ಮಾತುಗಳನ್ನು ಈ ಕೃತಿಯು ಸಾರುತ್ತ ಸಾಗುತ್ತದೆ. "ಒಟ್ಟಿನಲ್ಲಿ ಈಕಾವ್ಯದ ಮೂಲಭೂತ ಪ್ರೇರಣೆ ಮತ್ತು ಆಶಯ ಒಂದು ನಾಡಿನ ಅಖಂಡ ಸಂಸ್ಕೃತಿಯನ್ನು ಕುರಿತ ಹಿತಚಿಂತನೆ ಮತ್ತು ಆ ಸಂಸ್ಕೃತಿಯ ಕಳಕಳಿಯ ಜವಾಬ್ದಾರಿಗೆ ಸಂಬಂಧಿಸಿದ್ದು"[೧೧] ಎಂದು ಮೋಹನ ತರಂಗಿಣಿಯ ಕುರಿತು ಆಡಿರುವ ಮಾತುಗಳು ನವಮೋಹನ ತರಂಗಿಣಿಗೂ ಅನ್ವಯಿಸುತ್ತದೆ.

ತಾತ್ವಿಕ ವಿವೇಚನೆ

ಶಂಕರಕವಿಯ ಎಲ್ಲ ಕೃತಿಗಳಲ್ಲಿ ವೀರಶೈವತತ್ವ ನಿರೂಪಣೆ ಸಾಮಾನ್ಯವಾಗಿ ಕಾಣಸಿಗುತ್ತದೆ. ನವಮೋಹನ ತರಂಗಿಣಿಯೂ ಇದಕ್ಕೆ ಹೊರತಾಗಿಲ್ಲ. ಉಳಿದ ಕೃತಿಗಳಲ್ಲಿ ಸುದೀರ್ಘ ವಿವರಣೆಗಳು ಬಂದರೆ ಇಲ್ಲಿ ಸಂಕ್ಷಿಪ್ತ ವಾಗಿ ಕಾಣಿಸಿಕೊಂಡಿದೆ.

ಒಂದು ದಿನ ಬಾಣಾಸುರನು ಒಡ್ಡೋಲಗದಲ್ಲಿರುವ ದಾನವ ಕುಲಾರಾಧ್ಯರಾದ ಶ್ರೀಗುರು ಭಾರ್ಗವಾ ಚಾರ್ಯರು ಆಗಮಿಸುತ್ತಾರೆ. ಬಾಣಾಖ್ಯನು ಆನಂದತುಂದಿಲನಾಗಿ ಗುರುಗಳಡಿದಾವರೆಗಳಿಗೆ ಮಣಿದು, ಯೋಗ್ಯೋಪಚಾರಗಳನ್ನಿತ್ತು ಸತ್ಕರಿಸಿ, ತನಗೆ ನಿತ್ಯತ್ವವನ್ನು ನೀಡುವಜ್ಞಾನೋಪದೇಶವನ್ನು ನೀಡಿರೆಂದು ಬೇಡಿಕೊಳ್ಳುತ್ತಾನೆ. ಶ್ರೀಗುರುವು ''ಯಲೆಕುವರ, ನೀನು ಅಸುರ ಕುಲಜಾತ, ಮೇಲಾಗಿ ಯೌವ್ವನ, ವಿದ್ಯೆ, ಪರಾಕ್ರಮ, ರೂಪು, ಸೌಭಾಗ್ಯ, ಮಾನಿನಿಯರ ವ್ಯಸನ ಮುಂತಾಗಿ ಅಷ್ಟಮದಗಳು ನಿನ್ನನ್ನಾವರಿಸಿರುವಾಗ ಸದ್ಭಕ್ತಿಯಿಂದ ಶಿವನೊಲಿಪ ದೃಢತೆ ಎಲ್ಲಿಂದ ಬರುವುದೆಂದು ಅನುಮಾನಿಸುತ್ತಾರೆ. ಹುಲುದನುಜನೆಂದು

[illegible]

ಹೆದರಿಸದಿರಿ ಪರುಷ ಸೋಂಕಿದ ಲೋಹ ಕಲದೌತವಾಗದೆ? ನರಪಶು ಪ್ರಾಣಿಗಳಿಗೆ ಸುಜ್ಞಾನ ದೀಕ್ಷೆಯನ್ನಿತ್ತು ಅವರ ಪೂರ್ವಗುಣಗಳನ್ನು ನೀಗಿ ಪುನರ್ಜಾತರನ್ನಾಗಿಸುವ ಸಾಮರ್ಥ್ಯ ನಿಮಗಿರುವುದನ್ನು ನಾನು ಬಲ್ಲೆನು. ನಿರುತ ಶಿವಪೂಜೆಯಂಗೈದು ವಲಿಸುವ ಕ್ರಮವದೆಂತಿಹುದು ತ್ವರಿತದಿಂದೆನಗೆ ಬೋಧಿಸಿ ರಕ್ಷಿಸುವುದು ಎಂದು ಪ್ರಾರ್ಥಿಸುತ್ತಾನೆ.

"...... ಶ್ರೀವೀರಶೈವ ಮತ

ವೆಲ್ಲ ಶೈವಂಗಳ ಶಿರೋವ್ರತಂಮದನುಯಾಚರಿಸುವರೆ ನಿತ್ಯರಹರೂ" (೧೮-೨೧)

ಅಂಥವರು ಅನೇಕರಿದ್ದಾರೆ. ಸದ್ಭಕ್ತಿಯಿಂದ ನಡೆಸುವವರಿಗೆ ಅಂತಕನ ಪುರವೇ ಸಂಪ್ರಾಪ್ತಿಯಪ್ಪುದು ಎಂದು ತಿಳಿಸಿ ತನ್ನ ಶಿಷ್ಯೋತ್ತಮನನ್ನು ಕರುಣೆಯಿಂದ ಕಂಡು ಸ್ನಾನಮಾಡಿಸಿ, ಅರಿವಿನ ವಸ್ತ್ರವನ್ನು ಹೊದಿಸಿ ಸ್ವಾಸ್ತೀಕ ಪೀಠದ ಮೇಲೆ ಕುಳ್ಳಿರಿಸಿ ಭಸಿತವನ್ನು ಧರಿಸಿ

"ತನ್ನ ವರಕರವನ ಮಸ್ತಕ ಸ್ತಿತ ಮಾದ

ವುನ್ನತ ಸತ್ಪ್ರಾಣಜ್ಯೋತಿಲಿಂಗದ ಕಳೆಯನಾಕರ್ಷಂಗೊಳಿಸುತೇ" (೧೮-೨೪)

ಅದಕ್ಕೆ ಅನಾದಿ ಶಿವನಚಿತ್ಕಳೆಯನ್ನು ತನ್ನ ಸದ್ಭಾವಮನೋದೃಷ್ಟಿಗೆ ತಂದುಕೊಂಡು ಮುದದಿಂದ ಶಿವಶಕ್ತಿ ಸ್ವರೂಪದ "ಇಷ್ಟಲಿಂಗಕ್ಕೆ" ಸಂಪೂರಿಸುತ್ತ ಇದು ನಿನ್ನ ಚಿತ್ಪ್ರಾಣಲಿಂಗ, ಇದುವೆ ಪರತರ ಪರಂಜ್ಯೋತಿ ಪರಶಿವಲಿಂಗ, ಇದನ್ನು ಭಜಿಸುವವನಿಗೆ ಇಷ್ಟಸಿದ್ಧಿ ಲಭಿಸುವುದು. ಅಂಗಭೋಗಗಳನ್ನೆಲ್ಲ ಲಿಂಗ ಮುಖವರಿದು ಅರ್ಪಿಸುತ್ತ ತತ್ಶೇಷವನ್ನು ಸವಿಯಬೇಕು ಎಂದು ಇಷ್ಟಲಿಂಗದ ಮಹಾತ್ಮೆಯನ್ನು ತಿಳಿಸಿ, ಈ ಮುನ್ನ ಹರಿ-ಬ್ರಹ್ಮ, ಇಂದ್ರಾದಿಗಳು ಸುರಾಸುರಮುನಿ ಜನರು ಭಜಿಸಿ ಅಖಿಲ ಇಷ್ಟಾರ್ಥಗಳನ್ನು ಪಡೆದರು. ಸಕಲ ಮಂತ್ರಗಳಿಗೆ ಮಾತೆಯಾದ ಪ್ರಣಮೋಕ್ತ ಪಂಚಾಕ್ಷರವನ್ನುಪದೇಶಿಸಿದರು. ಶಿವಭಕ್ತರಿಗೆ ನದಿ, ತಟಾಕ, ಕೂಪ, ಜಲಧಿಸುಸ್ನಾನ ಯೋಗ್ಯವಾದುದು. ಭಸ್ಮ-ರುದ್ರಾಕ್ಷಿಗಳನ್ನು ಧರಿಸಿ, ಅಂಗಶುದ್ಧಿ, ಆತ್ಮಶುದ್ಧಿ, ಭಾವಶುದ್ಧಿಯಿಂದ ಜಲ,ಪುಷ್ಪಾದಿಗಳನ್ನು ಶುದ್ಧಿಗೈದು "ಮಸ್ತಕಸ್ತಿತಮಹಾಲಿಂಗಮುವನು ವೊಲಿದು | ಓಂಗದೆ ವಾಮಕರಕಮಲಕ್ಕೆ ಆಹ್ವಾನಿಸುತ್ತ ಸಾಂಗವಾಗಿ ಜಲಗಂಧಪುಷ್ಪಧೂಪ, ಮಂಗಳಾರತಿ, ತಾಂಬೂ ಸಹಿತ ಅಷ್ಟವಿಧದ ಪೂಜೆಯಿಂದ ಅರ್ಚಿಸಬೇಕು. ವೇದಮಂತ್ರೋಕ್ತದಿಂದ ಕ್ರಮತಪ್ಪದಂತೆ ಅರ್ಚಿಸುತ್ತ ಬಳಿಕ ಅಂತರಂಗದಲ್ಲಿ ಇಷ್ಟ-ಭಾವ-ಪ್ರಾಣ ಲಿಂಗತ್ರಯಗಳನ್ನು ಒಂದುಗೊಳಿಸಿ ಆತ್ಮಜ್ಯೋತಿರ್ಲಿಂಗ ದೊಳೊಂದುಗೊಳಿಸುತ್ತ ನಿಶ್ಚಲನೆಯಿಂದ ಪರಮ ಸಾನಂದದಿಂದ ಏಕಚಿತ್ತದಲ್ಲಿ ಧ್ಯಾನಿಸಬೇಕು. ಆಗ ಈಶ್ವರನು ಪ್ರತ್ಯಕ್ಷನಾಗುವನು ಎಂದು ಮಾರ್ಮಿಕವಾಗಿ ಬೋಧಿಸುವನು.

ಇಲ್ಲಿ ಶೈವನಿಷ್ಠ ಶಂಕರಕವಿಯು ಮುಂದೆ ಬಾಣಾಸುರನ ಲಿಂಗಪೂಜಾ ಸಂದರ್ಭದಲ್ಲಿನ ಶಿವಸ್ತುತಿಯಲ್ಲಿ 'ಹರಹರ ಮಹಾದೇವ ಹರಿಮಿತ್ರ ಮಹಾದೇವ, ಹರಿನೇತ್ರ ಮಹಾದೇವ' ಎಂದು ಭಜಿಸುವಲ್ಲಿ ವೀರಶೈವ

[illegible]

ಮತ ಮತ್ತು ವೈಷ್ಣವ ಮತಗಳ ಸಾಮರಸ್ಯದೆಡೆಗೆ ಬೆರಳು ಮಾಡಿ ತೋರಿಸುತ್ತಾನೆ. ಇದು ಹರಿ-ಹರಸಾಮ್ಯತೆಯ ಭಾಗವತ ದೃಷ್ಟಿಕೋನದ ಕಥೆಯಾಗಿರುವುದೇ ಕಾರಣ.

ಸಾಹಿತ್ಯಿಕ ವಿವೇಚನೆ

ವರ್ಣನೆಗಳು : ''ಸ್ಥೂಲವೂ ಸೂಕ್ಷ್ಮವೂ ಆದ ವಸ್ತುವಿಗೆ ವರ್ಣನೆಗಳನ್ನು ಅಳವಡಿಸಿ ಕಾವ್ಯಗಳನ್ನು ರಚಿಸುವುದು ಲೋಕರೂಢಿ. ವರ್ಣನೆಗಳಲ್ಲಿ ಕವಿಕಲ್ಪನೆಯ ವರ್ಣನೆಗಳು, ಕವಿಸಮಯಾದಿಗಳಿಂದ ರೂಪುಗೊಂಡ ಪರಂಪರಾಗತ ವರ್ಣನೆಗಳು ಕಂಡು ಬರುತ್ತವೆ.''[೨] ಈ ಎಲ್ಲ ವರ್ಣನೆಗಳನ್ನು ಲಾಕ್ಷಣಿಕರು 'ಅಷ್ಟಾದಶ ವರ್ಣನೆ'ಗಳಲ್ಲಿ ಅಡಕಗೊಳಿಸಿದ್ದು ಮಹಾಕಾವ್ಯ ರಚನೆಗೆ ಅವುಗಳು ಅನಿವಾರ್ಯವಾಗಿವೆ ಯೆಂಬುದು ಸುರ್ವಶ್ರುತ, ಮೋಹನ ತರಂಗಿಣಿಯಲ್ಲಿಯಂತೆಯೇ ನವಮೋಹನ ತರಂಗಿಣಿಯಲ್ಲಿಯೂ ಕತೆ ಕಡಿಮೆ ವರ್ಣನೆ ಹೆಚ್ಚು. ಶಂಬರಾಸುರನ ವಧೆಯಿಂದ ವೃಷೆಯ ಶೃಂಗಾರದವರೆಗೆ ವರ್ಣನೆಗಳ ಮೆರವಣಿಗೆಯೇ ನಡೆದಂತಿದೆ. ಅಲ್ಲಿ ಕೇವಲ ರತಿಯ ವಿವಾಹ, ಜಲಕ್ರೀಡೆ, ಮನೆತುಂಬಿಸುವುದು, ಗರ್ಭದಾನ, ಅನಿರುದ್ಧನ ಜನನ, ಅನಿರುದ್ಧ ಬೇಟೆಯಾಡಿದ್ದು; ಅನಿರುದ್ಧನು ತನ್ನ ಸಖರೊಡನೆ ಸೂಳೆಗೇರಿಯಲ್ಲಿ ವಿಹರಿಸಿದ್ದು, ಶೋಣಿತಪುರ ವರ್ಣನೆ, ಬಾಣಾಸುರನ ಶಿವಪೂಜೆ, ವೃಷೆಯ ಶೃಂಗಾರದ ಘಟನೆಗಳಲ್ಲಿ ಕತೆಯು ತುಂಬ ತೆಳುವಾಗಿದ್ದು ಹೆಜ್ಜೆ ಹೆಜ್ಜೆಗೆ ವರ್ಣನೆಗಳು ಗೆಜ್ಜೆ ಕಟ್ಟಿ ಕುಣಿದಂತೆ ಭಾಸವಾಗುತ್ತದೆ. ವರ್ಣನೆಗಳಲ್ಲಿ ಸಾಮಯಕತೆ ಇದ್ದರೂ ಕೆಲವೆಡೆ ಶಂಕರಕವಿಯ ಪ್ರತಿಭೆಯ ಮಿಂಚಿನಿಂದ ಹೃದಯತಟ್ಟುವಂತಿವೆ.

ಶಂಕರಕವಿಯು ಅಷ್ಟಾದಶವರ್ಣನೆಗಳ ಹಂಗಿನಲ್ಲಿ ಸಿಲುಕಿ ಕನಕರಂತೆಯೇ ಪುರಗಿರಿ, ಋತು, ನಂದನ, ರವಿಶಶಿ, ಸಾಗರಾದಿಗಳ ವರ್ಣನೆಗಳನ್ನಿಲ್ಲಿ ಅಳವಡಿಸಿದ್ದಾನೆ. ಕನಕರಂತೆಯೇ ಸಮುದ್ರವರ್ಣನೆಯೊಂದಿಗೇ ಈ ಕೃತಿಯನ್ನು ಪ್ರಾರಂಭಿಸುತ್ತಾನೆ. ಭೂ ದೇವಿಯುಟ್ಟ ದಿವ್ಯಾಂಬರದ ಬಿಣ್ಪಿನಂತೆ ಭೂದೇವಿಯ ಸೊಂಟದ ಒಡ್ಯಾಣದ ಹಾಗೆ ಸಮುದ್ರ ಕಂಗೊಳಿಸುತ್ತಿತ್ತು. ಬಹುತೇಕ ಇಂಥವರ್ಣನೆಗಳಲ್ಲಿ ಶಂಕರಕವಿಯು ಕನಕರಿಗೇ ಋಣಿಯಾಗಿದ್ದಾನೆ.

> "..... ಮತ್ತಮಾಸುರಶೈಲ ತೆಂಕಣದೊಳು ಗುರುವು
> ಇತ್ತ ಶಾಪವಕಳೆವೆನೆಂದು ಹಿಮಕರನೈದಿ
> ಚಿತ್ತಜಾರಿಯ ಕೂರ್ತುತಪಿಸುತಿರೆ ಕ್ಷೀರವಾರಾಸಿ ಪತಿತನ್ನ ಸುತಗೆ
> ಮಿತ್ರನೂಷ್ಣಂ ಸೋಂಕದಂತೆ ಧವಲಾಂಬರದ
> ಬಿತ್ತರದ ಪೇರ್ಗುಡಾರವನುರಚಿಸಿದವೊಲು
> ಮೃತ್ಯುಂಜಯನವಾಸರಜತಾದ್ರಿವೊಪ್ಪಿ ರಾಜಿಸುತಿರ್ದುದಬಲೇ" (೨-೧೬)

ಎಂಬಲ್ಲಿ ವಿನೂತನ ಕಲ್ಪಕತೆಯಿಂದ ಗಮನಸೆಳೆಯುತ್ತಾನೆ. ದ್ವಾರಕಾಪುರ ಶೋಣಿತಪುರದ ವರ್ಣನೆಗಳು ಸಮೃದ್ಧ ಜನಜೀವನದ ದರ್ಶನ ಮಾಡಿಸುತ್ತವೆ.

[illegible]

[illegible]

[illegible]

[illegible]

ದೇವಗುರುಬೃಹಸ್ಪತಿಯು ಮಾರನೆಡೆಗೆ ಬರುವಾಗ ಕುಸುಮಾವತಿಪಟ್ಟಣದ ವರ್ಣನೆಯಲ್ಲಿ ಶಂಕರಕವಿಯ ವಿಶಿಷ್ಟತೆ ಎದ್ದುತೋರುತ್ತದೆ. ಹಚ್ಚಹಸುರಿನಿಂದ ಸಮೃದ್ಧವಾದ ಆ ಪಟ್ಟಣದ ಕೃಷಿಕ ಸ್ತ್ರೀಯರ ಚಿತ್ರ ನಂಜುಂಡ ಕವಿಯ ಕನ್ನಡ ನಾಡಿನವರ್ಣನೆಯನ್ನು ನೆನಪಿಗೆ ತರುತ್ತದೆ. ಸನ್ನಿವೇಶವನ್ನು ಪುಷ್ಟೀಕರಿಸುವ ಹೋಲಿಕೆಗಳು, ವರ್ಣನೆಗಳು, ಕವಿಯ ಕಲ್ಪನಾ ಚಮತ್ಕೃತಿಗೆ, ಸ್ವೋಪಜ್ಞತೆ ಸಾಕ್ಷಿಯಾಗಿ ನಿಲ್ಲುತ್ತವೆ.

ಉದಾಹರಣೆಗೆ:

"ಕುಸುಮಾಸ್ತ್ರನೊಂದು ಕಬಿನಬ್ಬಿಲ್ಲಿನಿಂ ಲೋಕ
ವಿಸರಮಂ ಕೊಂದು ಕೂಗುತಲಿಹನುಮಾತನತಿ
ಯಸಮಬಳನೆತಿಜತಿತಪೊನ್ಯೆಷೆವಂತರನುಭ್ರಷ್ಟಂಮಾಡುತ್ತಲಿಹನೂ
ರಸಗೋಲ್ಲಳಿಂನ್ನು ವೆಗ್ಗಳಮಿರಲು ಮಾರಗ
ರ್ವಿಸಯೆಂತುಮಾಳ್ಪನೊಯೆನುತೊಡಿದಿಟ್ಟು
ರಸದಾಳೆಗಾಣಂಗಳಾಡುತಿರ್ದರು ನೋಡೆಯಿಕ್ಕೆಲದೊಳಂಬುಜಾಕ್ಷೀ" (೪-೨೪)

ತನ್ನ ಅನುಭವದ ಸಿರಿಯನ್ನು, ಲೋಕದ ಗತಿಯನ್ನು ಕವಿಯು ಹೀಗೆ ವರ್ಣಿಸುತ್ತಾನೆ.

"ಹಲವು ಜಾತಿಯ ಕುಸುಮ ಚಯಗಳೊಳುವುಂಡುಂಡು
ಬಳಿಕಲಾರಡಿಗರೆಂಬಭಿಧಾನದಿಂದ್ಯೆದಿ
ಸಲೆಸುವಾಸಿನಿಯ ಸಂಗವಮಾಡಲವರ್ಗೆ ದುರ್ಮರಣಮಪ್ಪುದುತಪ್ಪದೂ
ಯಿಳೆಯೊಳಗೆ ಪುಣ್ಯ ಪುರುಷರಿಗೆ ಯೋಗ್ಯರು ನಮ್ಮ
ಚೆಲುವಿಕೆಯ ನೋಡಿ ಭ್ರಮಿಸಲಿಬ್ಯಾಡಿ ನಿಮಗೀಗ
ಲಳಿವಕ್ಕುಮೆನುತಯಳಿಕುಳಕೆ ಭೀಕರಮಾಗಿಚಂಪಕಂಫ್ರಿಕ ಮೆರೆದವೂ || (೪-೩೦)

ಮೋಹಕ್ಕೆ ಬಲಿಯಾಗುವ ಸಾಮಾನ್ಯ ಮನುಷ್ಯರ ಸ್ಥಿತಿಯನ್ನಿಲ್ಲಿ ಮಾರ್ಮಿಕವಾಗಿ ವರ್ಣಿಸುತ್ತಾನೆ. ಶೃಂಗಾರ ಮತ್ತು ತತ್ವಗಳೆರಡನ್ನೂ ಸಮೀಕರಿಸುವ ಶಂಕರನ ರೀತಿ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಆ ಕುಸುಮಾವತಿಯ ಎಳೆವೆಣ್ಣುಗಳಂತೂ ಮದನ ಮೋಹನನ ಅಂಕದಾನೆಗಳಂತೆ ಮಾರನಮಳ ಮಂತ್ರದ ಮೂರ್ತಿಯಂತೆ, ವಿರಹಾಗ್ನಿಯುರಿಗಳೋ ಎಂಬಂತಿದ್ದರಂತೆ! ಅನಿರುದ್ಧನ ರಾತ್ರಿವಿಹಾರ ಸಂದರ್ಭದಲ್ಲಿ ವೇಶ್ಯಾವಾಟಿಕೆ, ಪಹರೆಯವರ, ತಳವಾರರ ಚಟುವಟಿಕೆಗಳು, ದ್ವಾರಕೆಯ ಬೀದಿಯಲ್ಲಿನ ಸುಗಂಧದಂಗಡಿಗಳು, ಹೂ ಹಣ್ಣಿನಂಗಡಿಗಳು, ವಸ್ತ್ರಾಲಯಗಳ ವರ್ಣನೆಯಲ್ಲಿ ಕನಕರ ಪ್ರಭಾವವೇ ಅಚ್ಚೊತ್ತಿ ನಿಂತಿರುವುದನ್ನು ಗುರುತಿಸಬಹುದು. ನವಮೋಹನ ತರಂಗಿಣಿಯಲ್ಲಿ ಋತುವರ್ಣನೆ, ಅದಕ್ಕೆ ಪೂರಕವಾಗಿ ಪ್ರಕೃತಿವರ್ಣನೆಗಳು ಮೇಲಿಂದ ಮೇಲೆ ಬರುತ್ತವೆ.

ಕಾಂತಾರದ ವರ್ಣನೆಯಲ್ಲಿ ಮೂಲಕ್ಕಿಂತ ಭಿನ್ನವಾದ ವಿಶಿಷ್ಟ ಸರಸಮಯ ಹೃದ್ಯ ಚಿತ್ರಗಳು ಮೂಡಿಬಂದಿವೆ. ಉದಾ: ಅಂಚೆಯು ತನ್ನದೇ ಪ್ರತಿಬಿಂಬಿವೆಂಬುದನ್ನರಿಯದೇ ಕುಪಿತಗೊಂಡ ಪ್ರಸಂಗದ ಚಿತ್ರಣವು ಸೊಗಸೇ ಸೊಗಸು.

"ಕೊಳಜಲದೊಳುಯಾಳಿಮುಳುಗಿ ಕ್ರೀಡಿಸಿ ದಣಿದು
ಘಳಿಲನೆ ಸೋಪಾನಮಡರ್ದೇರುತಿರಲು ಮಾರ್ಪೊಳೆಯೆ
ತಮ್ಮ ಪ್ರತಿಬಿಂಬಮೆಂಬುದನು ತಿಳಿಯದೆ ಯಿದಿರ್ಬರ್ಪುದೆಂದೂ
ಕಲಹಕ್ಕೆ ಕಾಲ್ಕೆದರಿ ಗರಿಯ ಪಸರಿಸಿ ತಮ್ಮ
ತಲೆಯ ಬಿದಿರಿಸಿ ಕಣ್ಣು ಕೆಂಪೇರಿ ಚಂಚುವಿಂ
ದಲಿಕುರ್ಕಿವಣಸರಸದಿಂದಲಸಿಬಳಲ್ವಕಳಹಂಸಕಂಗೆಸೆದಿರ್ದವೂ" (೮-೨೨)

ಮಹಾತಪಸ್ವಿಯ ಶಾಂತತೆಯನ್ನು ಹೋಲುವ ವಟವೃಕ್ಷದ ಗಂಭೀರ ಚಿತ್ರ ಮನಸೆಳೆಯುವಂತಿದೆ. ಮನ್ಮಥದಹನ, ರತಿಪ್ರಲಾಪ, ಶಂಬರಾಸುರ ಮನ್ಮಥರ ಯುದ್ಧ, ರತಿ ಮನ್ಮಥರವಿವಾಹ, ಅನಿರುದ್ಧ ಜನನ. ವೃಷೆಯ ಶೃಂಗಾರ ಚಿತ್ರಲೇಖೆಯ ದೌತ್ಯ ಅನಿರುದ್ಧ-ವೃಷೆಯ ಮಿಲನ, ಅನಿರುದ್ಧ-ಕುಂಭಾಂಡರಕಾಳಗ, ಅನಿರುದ್ಧ-ಬಾಣಾಸುರರ ಕಾಳಗ, ಶಿವ-ವಿಷ್ಣುವಿನ ಯುದ್ಧ ಮುಂತಾದವು ವರ್ಣನೆಗೆ ಎಡೆಮಾಡಿಕೊಡುವಂತಹ ಸಂದರ್ಭಗಳು. ಇಲ್ಲಿನ ವರ್ಣನೆಗಳಲ್ಲಿ ಶೃಂಗಾರ, ಕರುಣೆ, ವೀರ, ಭಕ್ತಿ ಹಾಸ್ಯಗಳು ತಾನೇ ತಾನಾಗಿ ಮೆರೆದಿರುವುದನ್ನು ಗುರುತಿಸಬಹುದು.

ಕನಕದಾಸರಂತೆಯೇ ಶಂಕರಕವಿಯ ವರ್ಣನೆಯ ರೀತಿ ಸಾಂಪ್ರದಾಯಿಕವಾದುದು. ಸುದೀರ್ಘ ವರ್ಣನೆಗಳಲ್ಲಿ ವಿವರಗಳನ್ನು ನೀಡುವ ಸಂದರ್ಭದಲ್ಲಿ ಎಷ್ಟೋಸಲ ಸುಂದರವಾದ ಕಲ್ಪನೆಯ ಚಿತ್ರಗಳು ಬರುವುದುಂಟು. ಮೂಲ ಆಕರಕಾವ್ಯವನ್ನನುಸರಿಸಿ ಎಷ್ಟೋಕಡೆ ಕತೆಯ ಓಟಕ್ಕೆ ಆತಂಕವೊಡ್ಡುವ ಮತ್ತು ಅನೌಚಿತ್ಯಯುಕ್ತ ವರ್ಣನೆಗಳು ಕೃತಿಯ ಹಿರಿಮೆಯನ್ನು ಕಿರಿದಾಗಿಸುತ್ತವೆ. ಆದಾಗ್ಯೂ ಮೋಹನ ತರಂಗಿಣಿಯ ವರ್ಣನೆಗಳನ್ನು ಕುರಿತು ಜಿ.ಜಿ. ಮಂಜುನಾಥನ್ ಅವರು ''ಮೋಹನ ತರಂಗಿಣಿಯ ವರ್ಣನೆಗಳು ಕೇವಲ ವರ್ಣನೆಗಾಗಿ ಬಂದಿಲ್ಲ ಇದರಲ್ಲಿ ಕನಕದಾಸರ ಲೋಕ ನಿರೀಕ್ಷಣ ಶಕ್ತಿ ಮತ್ತು ಅದರ ಅಭಿವ್ಯಕ್ತಿ ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿ ಕಲ್ಪನೆಗಳು ಕವಿಕಲ್ಪನೆಯ ನೆಲೆಯಲ್ಲಿ ನಿಲ್ಲದೆ ಕವಿಸಮಯದಲ್ಲಿ ಮುಳುಗಿ ಹೋಗದೆ ಸಮಕಾಲೀನ ಸಮಾಜದ ಚಿತ್ರಣಕ್ಕೆ ಅವಕಾಶ ಮಾಡಿಕೊಟ್ಟಿರುವುದು ವಿಶೇಷವಾಗಿದೆ.''[೧೯] ಎಂದು ಹೇಳಿರುವ ಮಾತುಗಳನ್ನು ಶಂಕರಕವಿಯ ನವಮೋಹನ ತರಂಗಿಣಿಗೂ ಯಥಾವತ್ತಾಗಿ ಅನ್ವಯಿಸಬಹುದು.

ಅಲಂಕಾರಗಳು: ''ಒಂದು ದೃಷ್ಟಿಯಲ್ಲಿ ಕಾವ್ಯವೆಂದರೆ ಅಲಂಕಾರ. ವ್ಯಾಘ್ರಕ್ಕೆ ಅದರ ಚರ್ಮಪಟ್ಟಿಕೆ ಗಳೆಷ್ಟು ಅವಶ್ಯವೋ ಅಷ್ಟುಕಾವ್ಯಕ್ಕೆ ಅಲಂಕಾರ ಅವಶ್ಯ. ''ಕಿವಿಯಿಂ ಬಗೆವುಗುವೊಡೆಕೊಂಕು ವೆತ್ತ ನುಡಿಯೆ ಪೋಕುಂ'' ಎಂದು ಹೇಳುವಲ್ಲಿ ನಾವು ಹೇಳುವ ಮಾತು ಹೃದಯ ಸ್ಪರ್ಶಿಯಾಗಬೇಕಾದರೆ ಅದು

[illegible]

[illegible]

[illegible]

[illegible]

[illegible]

ಕೊಂಕುನುಡಿಯಾಗಿರಬೇಕು. ಕೊಂಕುನುಡಿಯೆಂದರೆ ವಕ್ರೋಕ್ತಿ, ಅಂದರೆ ಸಾಮಾನ್ಯ ಮಾತಿನ ರೀತಿಯಲ್ಲಿ ವಿಶಿಷ್ಟವಾಗಿ ಅಂದರೆ ಅಲಂಕಾರಯುತವಾಗಿ ಹೇಳುವುದು, ಧ್ವನಿಪೂರ್ಣವಾಗಿ ಹೇಳುವುದು''[೧೪] ಅಲಂಕಾರಗಳನ್ನು ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳೆಂದು ಎರಡು ವಿಧದಲ್ಲಿ ವರ್ಗೀಕರಿಸಲಾಗುತ್ತದೆ. ''ಶಬ್ದಾಲಂಕಾರಗಳು ಕಾವ್ಯಶರೀರಕ್ಕೆ ಉಡುಗೆ ತೊಡುಗೆಗಳಂತೆ ಬಾಹ್ಯಶೋಭೆಯನ್ನು ಮಾಡುವುವು. ಅರ್ಥಾಲಂಕಾರಗಳು ಧೈರ್ಯ ಶೌರ್ಯ ಶೀಲ ಸದ್ಗುಣಗಳಂತೆ ಅಂತಃಶೋಭೆಯನ್ನು ಬೀರುವುವು''[೧೫] ಶಂಕರಕವಿಯ ನವಮೋಹನ ತರಂಗಿಣಿಯಲ್ಲಿ ಈ ಎರಡೂ ಬಗೆಯ ಅಲಂಕಾರಗಳು ಸಂದರ್ಭೋಚಿತವಾಗಿ ಬಳಕೆಗೊಂಡಿದ್ದು ಸೊಗಸನ್ನುಂಟುಮಾಡಿದೆ. ಸಾಮಾನ್ಯವಾಗಿ ಈ ಕಾವ್ಯದಲ್ಲಿ ಪ್ರಧಾನವಾಗಿ ಉಪಮೆ, ಸ್ವಭಾವೋಕ್ತಿಗಳು ಬಳಕೆಗೊಂಡರೆ ತದನಂತರದ ಸ್ಥಾನದಲ್ಲಿ ಅತಿಶಯೋಕ್ತಿ ಉತ್ಪ್ರೇಕ್ಷೆ, ದೃಷ್ಟಾಂತ ರೂಪಕಗಳು ಬಳಕೆಯಾಗಿವೆ. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಪ್ರಸ್ತಾಪಿಸಲಾಗುವುದು. ಬಾಣಾಸುರನು ಒಡ್ಡೋಲಗದಲ್ಲಿ ಸಿಂಹಾಸನಾವಿರಾಜಮಾನನಾದ ಚಿತ್ರ ಹೀಗೆ ವರ್ಣಿಸಲ್ಪಟ್ಟಿದೆ.

''ಮುಂತೆಯುದಯಾದ್ರಿ ಶಿಖರಾಗ್ರಬಾಲಾರ್ಕ ತಾ
ನೆಂತು ಪೋಂಬಿಸಿಲಿನಿಂ ಪ್ರಜ್ವಲಿಪನವನಂತೆ ಯೊಪ್ಪಿರ್ದನಾಸ್ಥಾನದೀ'' (೩-೨೩)

''ಚಿತ್ತಜನ ಸೂತ್ರಬೊಂಬೆಗಳಂತೆ ನಾರಿಯರು ವೂಳಿಗಮನಾಂತಿರ್ದರೂ'' (೩-೨೪)
ಗುರುಬೃಹಸ್ಪತಿಯು ಸುಮಶರನಲ್ಲಿಗೆ ಬರುವಾಗ
''ಶಶಿಯೆಡೆಗೆ ಅಷ್ಟನಿಗ್ರಹಂ ಬರ್ಪಂತೆ'' (೪-೧೮)

ಬರುತ್ತಿದ್ದನಂತೆ ಮನ್ಮಥನು ಶಿವನ ತಪೋಭಂಗಕ್ಕೆ ಹೊರಡಬೇಕೆಂಬ ವಿಷಯವನ್ನು ಕೇಳಿ ಕಾಂತೆ ರತಿದೇವಿ ಚಿಂತಿಸುತ್ತಿರಲು

''ಮೊಗ ಚಂದ್ರಮನ ರಾಹುಗ್ರಾಸಗೊಂಡಂತೆ ಕಳೆಗುಂದಿ ಕಂಬನಿ''(೫-೧೯)ಯ ಮಿಡಿಯುತ್ತಾಳೆ. ಇಲ್ಲಿ 'ಮೊಗಚಂದ್ರಮ'ನೆಂಬಲ್ಲಿ ರೂಪಕವೂ ಬೆರೆತಿರುವುದನ್ನು ಕಾಣಬಹುದು. ತಪೋನಿರತನಾದ ಶಿವನೆಡೆಗೆ ತನ್ನ ಬಲದೊಂದಿಗೆ ಮುತ್ತಿಗೆ ಹಾಕಲು ಮಾರನು ಬರುತ್ತಿದ್ದಾನೆ. ಹೇಗೆಂದರೆ

''ಮುಮ್ಮೂರ್ತಿ ಮುಸುಗಿತ್ತು ಮಾರನಬಲಂರವಿಯ ಮುತ್ತುವತಮದೊಲೂ''(೬-೩೧) ಶಿವ ತನ್ನ ಹಣೆಗಣ್ಣನ್ನು ತೆರೆಯಲು

''ಸುಳಿಸುಳಿದು ತುಲಾರಾಶಿಯ ಸುಡುವ ಜ್ವಾಲೆಯೊಳು
ನಳಿನಾಸ್ತ್ರನಮಳತರಕಳೇವರವನಿಮುಷಾರ್ಧ
ದೊಳು ಚಿತ್ರಪಟವದಹಿಪಂತೆ ದಹನಂಗೊಳಿಶಿ ಭಸ್ಮೀಕೃತಂಗೆಯ್ಯಲೂ'' (೬-೫೧)

ಮಂದಾನಿಲನಿಂದ ಈ ಸುದ್ದಿ ತಿಳಿದ ರತಿಗೆ

''ಅವಳೆರಡು ಕರ್ಣರಂಧ್ರದಿ ತಪ್ತಸರಲುಯುಗಳಸೂರ್ಚಿದಂತೆ

ಕಾಮಾಗ್ನಿ ದುಃಖಾಗ್ನಿ ತಾಂ ತವೆಪೆರ್ಚಿವಡಲೊಳಂವುರಿದುದು ಸರ್ವಾಂಗವಾವರಿಸಿ ಸಿಡಿಮಿಡಿಯೊಳೂ

ನವಕದಳಿ ಮೂಲಮಂಭೇದಿಸಲುಕೆಡೆವಂತೆ''

ಅವನಿಯೊಳುಧೊಪ್ಪನೆ ಬೀಳುತ್ತಾಳೆ. ಇಲ್ಲಿ 'ಕಾಮಾಗ್ನಿ-ದುಃಖಾಗ್ನಿ' ಎಂಬಲ್ಲಿ ರೂಪಕ ಬೆರೆತಿರುವುದನ್ನು ಕಾಣಬಹುದು. ಶೈಲಜೆಯು ರತಿಯನ್ನು ಸಂತೈಸುತ್ತ

''ಬರಿದೆಯಡವಿಗೆ ಕಾಯ್ದ ತಿಳಿಜೊನ್ನದಂತ್ತೆ ಬಯಲಳಲಿದೇಕೆ'' ಎನ್ನುವಲ್ಲಿ ಅರ್ಥಾಂತರನ್ಯಾಸವನ್ನೂ ಗುರುತಿಸಬಹುದು. ಶಂಬರಾಸುರನು ಪ್ರದ್ಯುಮ್ನನ ಅಪಹರಣಕ್ಕೆ ಬರುವಾಗ ರಾತ್ರಿಯ ವರ್ಣನೆ ಹೀಗಿದೆ.

''ಖಳಗೆ ಬೆಂಬಲಮಾಗಿ ಸಂಧ್ಯಾಸುರಕ್ಕಸಿಯು

ಚಲುವ ಚಂಗಾವಿ ಸೀರೆಯನುಟ್ಟುಬಂದಂತೆ'' ಪಶ್ಚಿಮಾಗಸದಲ್ಲಿ ಸಂಜೆಗೆಂಪಡರುತ್ತದೆ.

''ಶಿಶುಚೋರಕನ ಶೌರ್ಯಮಂಪೊಲಿದು ನೋಡಲ್ಕೆಯಾಗಸವೆಣ್ಣು ಮೈಗಣ್ಣ ಳಾಂತಂತೆ ಭಗಣ ಮೆರೆಯೆ'' ಎಂಬ ವರ್ಣನೆಯಲ್ಲಿ 'ಆಗಸವೆಣ್ಣು' ಎಂಬ ರೂಪಕ ಚಿತ್ರವಿದೆ. ಅನಿರುದ್ಧನ ಜನನದ ಚಿತ್ರ ಹೀಗಿದೆ

ಸುರಚಿರದಕ್ಷೀರಾಬ್ಧಿಯಿಂದೊಗೆದ ಪೂರ್ಣಹಿಮಕರನಂತೆ ಪೂರ್ವಾದ್ರಿ

ಶಿಖರಮುಮನೊಡೆದು ಪೊಂಬಿಸಿಲ್ಗರೆವ ಭಾಸ್ಕರನೊಲೂ- ಹೀಗೆ ಇಲ್ಲಿ ಉಪಮೆಗಳ ಮೇಲೆ ಉಪಮೆಗಳನ್ನು ನೋಡಬಹುದು.

ರೂಪಕಾಲಂಕಾರಗಳೂ ಹದವರಿತು ಬಳಕೆಯಾಗಿವೆ.

ಉದಾಹರಣೆಗೆ: ರತಿದೇವಿಯು ಮನ್ಮಥನನ್ನು ಶಿವನ ತಪೋಭಂಗಕ್ಕೆ ಬೀಳ್ಕೊಡುತ್ತ ''ಸನ್ಮುಕ್ತಿಕನ್ನೆಯಳ ಸಂಪರ್ಕದಿಂಸುಖಿಪುದೆಂದು ಪತಿಯ ಪದಯುಗಳಕ್ಕೆರಗುತ್ತಾಳೆ'' (೫-೨೪) ಮೂರ್ಛಿತಳಾದ ರತಿಯನ್ನು ಗೆಳತಿಯರು

''ಘುಳಿಲನೆಪಿಡಿದೆತ್ತಿಕುಳ್ಳಿರಿಸಿ ತಮ್ಮ ತೊಡೆ

ತಲೆಗಿಂಬನಿತ್ತುನೆಲಳ್ಗೊಳಿಸುತ್ತೆನಿಂದು''

ಗಾಳಿಯನ್ನು ಬೀಸುವರು.

ಹೃದ್ಯವಾದ ಸ್ವಭಾವೋಕ್ತಿಗಳು ಈ ಕಾವ್ಯಕ್ಕೆ ವಿಶೇಷಕಳೆಯನ್ನೊದಗಿಸಿವೆ.

ಉದಾ: ಅನಿರುದ್ಧನ ಬಾಲಲೀಲೆಯ ಚಿತ್ರಣ ದೃಶ್ಯವತ್ತಾಗಿದೆ.

"ಮೆಲ್ಲನೆ ತತ್ತರಿಸೆದ್ದು ಭಿತ್ತಿಯಪಿಡಿದು
ನಿಲ್ಲುತ್ತೆ ತಪ್ಪಡಿಗಳಿಡುತಿಡುತೆ ಕೆಡವುತ್ತೆ
ಅಲ್ಲಿಂದಲೆದ್ದೆದ್ದು ಗಹಗಹಿಸಿ ನಗುತೆಕರಮೆತ್ತಿ ಜಡೆದೆಲೆಯೋಲವುತೇ
ಘುಲಿಘುಲಿರೆಂಬ ಕಳೆಲ್ದೊಡರುಲಿಯೊಳಂಪರಿದು
ತಲ್ಲಣಿಸುತ್ತೈದಿಯವ್ವಬ್ಬೆಬೇಯಂಬ ತೊದ
ಲ್ದೊಲ್ಲಿಸುತೆ ಮಾತೆಯಡಗಂಪರಿದು ಬಂದು ತೊಡೆಯಡರೆಗರ್ಭಕನ ಪಿಡಿದೂ"(೧೫-೫೪)

"ವರಮಾತೆ ಮಮಕರದಿ ಪಿಡಿದೆತ್ತಿ ಲಾಲಾಜಲ
ಸುರಿದು ಸೂಸುವ ಬಾಯ ಚುಂಬಿಸುತ ಸಾಲದೆ ಮರ
ಮರಳಿ ಮೋಹದಿಂ ಜೊಲ್ಲ ಬೆಲ್ಲವಸುರಿದುಯದೆಗವಚಿಬಿಗಿದಪ್ಪ
ಲೂರುಣ ತವಕಿಸುತೆ ಮೊಲೆಗಲವುತಿರೆ ಕಂಚುಕವ
ತೆರದುಣಿಸಿ ಯಿಳುಹಿಕರ ಬೆರಳಿತ್ತು ನಡೆಗಲಿಸೆ
ಚರಣದೊಡರುಲಿಯ ಘುತ್ಕಾರದಿಂನಡೆವುತ್ತೆ ತಪ್ಪ ಹೆಜ್ಜೆಯ ನಿಕ್ಕುತೇ ||" (೧೫-೫೫)

ಮಾನುಷ, ಅತಿಮಾನುಷ, ರಾಕ್ಷಸ ಪಾತ್ರಗಳಿಂದ ತುಂಬಿರುವ ಈ ಕಾವ್ಯದಲ್ಲಿ ಅತಿಶಯೋಕ್ತಿಗಳಿಗೆ ಬರವಿಲ್ಲ. ಕುಸುಮಾವತಿ ಪಟ್ಟಣದ ವರ್ಣನೆಯಲ್ಲಿ ಚಿತ್ರಿತವಾಗಿರುವ ಪ್ರಕೃತಿ ಶಂಕರಕವಿಯ ಕಾವ್ಯಶಕ್ತಿ ಮತ್ತು ತಾದಾತ್ಮ್ಯತೆಗೆ ಸಂಕೇತವಾಗಿ ನಿಲ್ಲುತ್ತದೆ.

ಉದಾಹರಣೆಗೆ

ಪೀತಿಮಿಗೆ ಬಾಲ್ಯದಿಂ ನೀರೆರದು ಸಲಹಿದ
ದಾತರಿಗೆ ಮಗುಳೆ ವಿಮಲೋದಕ ಪೊಂಗೊಡಗ
ಳೋಳ್ತುಂಬಿ ಪೊತ್ತುನಿಂದಿರ್ಪಂತೆ ತೆಂಗು ಕಂಗೊಳಿಸಿರ್ದವಾವನದೊಳೂ (೪-೨೬)

ಕುಸುಮ ಸೌರುಭ ಕಂಪಿಗೆಳಸುತ್ತೆಷಟ್ಚರಣ
ಬಿಸರವೈತಂದು ಮುಂತ್ಯಾಳದೆಮವನಮೋ
ಹಿಸುತಿರಲು ನೋಟಕರ ಕಣ್ಗೆವಿಸ್ಮಯಮಾಗಲವರುಯಿಂತೆನುತಿರ್ದರೂ
ಪೊಸತಿದು ರಸಾಲಭೂಜದೊಳು ನೀಲದ ಪಣ್ಗ
ಳೆಸೆವುತಿವೆ ನೋಡಿರೆಂದೆನಿಪರ್ಗೆಸಂದೇಹ
ಪೊಸೆದಿತ್ತು ಮಾಕಂದ ಕುಜಕುಲಂತದ್ವನದೊಳಿರ್ದವೆಲೆಪದ್ಮಗಂಧೀ (೪-೨೮)

ವಿರಹತಾಪದಿಂದಿದ್ದ ರತಿಯನ್ನು ಗೆಳತಿಯರು ಉಪಚರಿಸುವ ಪರಿ ಇದು
ಲಲನೆಯರು ತಮತಮಗೆಯದೆಗುಂದಿ ಚಿಂತಿಸುತ

ಘುಳಿಲನೇ ಪಿಡಿದೊಯ್ದು ತಂಗೊಳಲಿನಿಂದುರ್ಕಿ
ಛಳಿರ್ಗಲ್ಲ ಕಾಲುವೆಯೊಳಂ ಪರಿವಶೀತಳೋದಕದಿಕಾಲ್ಗಳನೆರಡನೂ
ಯಿಳುಹಿಯದ್ದಲ್ಕೆಕಾರ್ಬೊನ್ನ ತಿಳಿಗಾಸುತ್ತೆ
ಜಲದೊಲೆದ್ದುವತೆರದಿ ಚೂಯಿಚರ್ರೆಂದೆನುತ
ಬಲುಗಾಯ್ದ ತಜ್ಜಲಂಯಳವಾಳಿಗವರಿಸಲವುವಣಗಿತರಗಾಗಲೂ (೬-೫೯)

ಅತಿಶಯೋಕ್ತಿಯನ್ನನುಸರಿಸಿಕೊಂಡೇ ಉತ್ಪ್ರೇಕ್ಷೆಗಳೂ ಕಾಣಸಿಗುತ್ತವೆ. ಉದಾ: ಶೋಣಿತಪುರ ವರ್ಣನೆಯ ಸಂದರ್ಭ, ವೃಷೆಯ ಅಲಂಕಾರ, ಜಲಕ್ರೀಡೆ ಸನ್ನಿವೇಶ, ಸೂಳೆಗೇರಿಯ ವರ್ಣನೆಯ ಸಂದರ್ಭ ಇತ್ಯಾದಿ.

ಉದಾಹರಣೆಗೆ:

ಶೋಣಿತಪುರದ ಕೋಟೆಯ ಚಿತ್ರಣ
ನೇತ್ರ ಶ್ರವಣನು ಕುಂಡಲಾಕೃತಿಯಗೊಂಡಂತೆ ಪಳುಕಿನಸುಕೋಂಟೆಯಸೆಗೂ (೨-೨೪)

ಖೇಚರಿಯರಮಳ ಮಣಿಮಯದಪುಷ್ಪಕವೇರಿ
ಯಾಚರಿಸಿ ಸಕಲಲೋಕವದಣಿದು ಬಂದುಮೈ
ರೋಚಿ ಬೆಳಗಿಂಕೊಂಟೆ ಸುತ್ತುವಳಯದಿ ಕುಳಿತತೆರದಿ ಪೊಂದೆನೆಗಳೆಸೆಯೇ (೨-೨೫)

ದೃಷ್ಟಾಂತಗಳು ಉಳಿದ ಕಾವ್ಯಗಳಿಗೆ ಹೋಲಿಸಿದರೆ ಇಲ್ಲಿ ಕಡಿಮೆ ಎಂದೇ ಹೇಳಬೇಕು.

ಉದಾಹರಣೆಗೆ:

ಮೃಗರಾಜನೆಡೆಗೆ ಮದಕರಿಯಿರದೆ ಪೋಪಂ
ಖಗಪತಿಯಸರಸಕ್ಕೆ ವುರಗೇಂದ್ರ ನೈದಿದೊಲು
ಪೊಗೆ ದ್ವಜನಟಾವಿಗೆ ತೃಣದಪರ್ವತವುಬರ್ಪಂದದಿಂದೀಪ ಮುಮನೂ
ಸೊಗಸಿಂದೆ ನೋಡಿಗಮಿಸುವಶಲಭನಂದದಲಿ (೬-೩೨)

ಮಾರಸುಕುಮಾರನು ಅಗ್ನಿನೇತ್ರನನ್ನು ಮುತ್ತಲು ಬರುತ್ತಿದ್ದನೆಂಬ ಹೋಲಿಕೆ ತುಂಬ ಅರ್ಥಪೂರ್ಣವಾಗಿದೆ. ಶಬ್ದಾಲಂಕಾರಗಳಂತೂ ಒಂದಕ್ಕಿಂತ ಒಂದು ಮಿಗಿಲೆನ್ನುವಂತಿವೆ. ಉದಾಹರಣೆಗೆ ಒಂದನ್ನು ಗಮನಿಸಬಹುದು. ದೇವಗುರು ಬೃಹಸ್ಪತಿಯು ಕುಸುಮಾವತಿ ಪಟ್ಟಣಕ್ಕೆ ಬಂದ ಸಂದರ್ಭ

''ಬರಬರಲು ಕೊಳಲತಳದಂಪುಷ್ಪಚಯ
ಮರಳ್ದ ಪರಿಮಳಗಂಪು ಶಶಿವಸಂತರ ಸೊಂಪು ಮಂದ ಮಾರುತನಕೂಡೇ
ಸ್ಮರನೃಪನುಳುಕಂಪು
ಯಿರದೆ ಘ್ರಾಣೇಂದ್ರಿಗಂಕಂಪುಮನಕತಿಸೊಂಪು ತೋರೆ ಸಂತಸದೊಳೈದಿ'' (೪-೪೩)

ಇಲ್ಲಿ ತಂಪು ಕಂಪು, ಸೊಂಪು, ಎಂಬ ಶಬ್ದಗಳ ಆವರ್ತನ ಮನಕ್ಕೆ ಸೊಗಸನ್ನುಂಟು ಮಾಡುತ್ತದೆ. ಇಡೀ ಕಾವ್ಯದಲ್ಲಿ ಆದಿಪ್ರಾಸನಿಯತವಾಗಿ ಕಾಣಿಸಿಕೊಂಡಿದೆ.

ಹೀಗೆ ಪ್ರಸ್ತುತ ಕಾವ್ಯದಲ್ಲಿ ನವನವೀನವಾದ ಪ್ರೌಢಿಮೆಯಿಂದ ತುಂಬಿದ ಅಲಂಕಾರಗಳು ಕಾಣಿಸದಿದ್ದರೂ ಪರಿಣತ ಮನಸ್ಸಿನ ಹಾಗೂ ಪರಿಪಕ್ವ ಭಾವನೆಯ ಸಹಜ ಅಭಿವ್ಯಕ್ತಿ, ಶಬ್ದಾಲಂಕಾರ, ಅರ್ಥಾಲಂಕಾರಗಳು ಸಂದರ್ಭ, ಸನ್ನಿವೇಶಗಳಿಗೆ ಅರ್ಥಪುಷ್ಟಿಯನ್ನು ನೀಡಿವೆ. ಹೃದಯರಮ್ಯವಾಗಿವೆ.

ರಸವಿವೇಚನೆ

''ಕನ್ನಡ ಸಾಹಿತ್ಯ ಚರಿತ್ರೆಯ ಮಧ್ಯಭಾಗವನ್ನು ಭಕ್ತಿಯುಗ ಎಂದೇ ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಹರಿಹರ ರಾಘವಾಂಕರಿಂದ ಮೊದಲ್ಗೊಂಡು ಷಡಕ್ಷರದೇವ ಲಕ್ಷ್ಮೀಶನವರೆಗೆ ಬರುವ ಹಲವಾರು ಕವಿಗಳು ಇಷ್ಟದೇವಾತಾಸ್ತುತಿಗಾಗಿ, ಸ್ವಮತದ ಮೇಲಿನ ಪ್ರಿತಿಗಾಗಿ ಭಕ್ತಿಯ ಕೃತಿಗಳನ್ನು ರಚಿಸಿದ್ದಾರೆ. ವಿಚಿತ್ರವೆಂದರೆ ಈ ಕಾವ್ಯಗಳಲ್ಲಿ ಇನ್ನಿಲ್ಲದಂತೆ ಶೃಂಗಾರ ರಸ ಸೂರೆಯಾಗಿದೆ. ಚಾಮರಸ ಕವಿ ಮುಂದಿನ ವೈರಾಗ್ಯ ಭಕ್ತಿ ಭಾವಗಳಿಗೆ ಶೃಂಗಾರವನ್ನು ಹಿನ್ನೆಲೆಯ ದೃಶ್ಯದಂತೆ ಬಳಸಿಕೊಂಡಿದ್ದರೆ, ಷಡಕ್ಷರದೇವ ಶೃಂಗಾರದ ಹೆದ್ದೊರೆಯ ನಂತರ ಮಂತ್ರಮಹಿಮೆಯ ಯಥಾರ್ಥತೆಯನ್ನು ಬಿಂಬಿಸಿದ್ದಾನೆ. ಇದೇ ಸಾಲಿನಲ್ಲಿ ಬೇರೊಂದು ರೀತಿಯಲ್ಲಿ ಮೋಹನ ತರಂಗಿಣಿಯೂ ಸೇರಿಕೊಳ್ಳುತ್ತವೆ.''[೧೬] ಈ ಮೋಹನ ತರಂಗಿಣಿಯ ಪಡಿನೆಳಲಿನಂತೆ ರಚನೆಗೊಂಡಿರುವ ನವಮೋಹನ ತರಂಗಿಣಿಯೂ ಶೃಂಗಾರದ ಸಾಗರದಲ್ಲಿ ಮುಳುಗಿ ಭಕ್ತಿಯ ಮುತ್ತನ್ನು ಎತ್ತಿಕೊಡುವ ಪ್ರಯತ್ನದಲ್ಲಿ ನಿರತವಾಗಿದೆ.

ಶಂಕರಕವಿಯು ತನ್ನ ಕಾವ್ಯವನ್ನು ''ಶಿವನೊಲವ ಪಡೆದವರ ಸತ್ಕಥೆ ಶಿವಕೃಪೆವಡೆದ ಅವಿರಳಾತ್ಮಕರ ಚಾರಿತ್ರಾಮೃತ'' ಎಂದೆಲ್ಲಾ ಹೇಳಿಕೊಂಡಿದ್ದಾನೆ. ಆದರೆ ಕನಕದಾಸರಂತೆಯೇ ಕಾವ್ಯದ ಕಥಾನಕ, ವೃತ್ತಾಂತ ವರ್ಣನೆ, ಅಲಂಕಾರ ಸ್ತುತಿಗಳಲ್ಲಿ ಶೃಂಗಾರರಸವನ್ನು ಧಾರೆಯಾಗಿ ಹರಿಸಿಬಿಟ್ಟಿದ್ದಾನೆ.

ಈ ಕಾವ್ಯವನ್ನು ಕವಿಯು ತನ್ನ ಪ್ರೀತಿಯ ಪತ್ನಿಗೆ ಹೇಳುವ ಕಾವ್ಯತಂತ್ರದಲ್ಲಿಯೇ ಶೃಂಗಾರದ ಕುಡಿಯೊಡೆಯುತ್ತದೆ. ತನ್ನ ಮಡದಿಯೇ ಈ ಕಾವ್ಯದ ಮೊದಲ ಕೇಳುಗಳು, ಕವಿಯು ಅವಳನ್ನು ಸಂಬೋಧಿಸುವುದರಲ್ಲಿಯೇ ಮೋಹಕ ಶೃಂಗಾರವಡಗಿದೆ.

''ಕಾಂತೆ, ಮನ್ಮೋನವಸಂತೆ ಕೇಳು''

''ಚೆಲ್ವೆಗಂಗಳೇ ಕೇಳು''

ಕುಂಭಿಕುಂಭಸ್ತನಾನ್ವಿತೆ ಕೇಳು

''ಕಾದಲೆಯರಮಳ ಮಸ್ತಕ ಚೂಡಾಮಣಿಯೇ ಕೇಳಾ ನೂತನರತಿಯೇ ಕೇಳು,''

ಚಿಕ್ಕಪ್ರಾಯದ ಚೆನ್ನೆ, ಸೊಕ್ಕು ಜವ್ವನರನ್ನೆ ಮುಂತಾದ ಇನಿ ಮಾತುಗಳಿಂದ ಕತೆಯನ್ನು ಮುಂದುವರಿಸುತ್ತಾನೆ. ಅವಳೂ ಪುರುಷರಲಲಾಮ, ಸದ್ಗುಣಧಾಮ ಮತ್ಪ್ರೇಮ, ಚಿತ್ಕಾಂತ ಎಂಬ ಮಧುರ

ಮಾತುಗಳಿಂದ ಅವನಿಗೆ ಪ್ರೇರಣೆ ನೀಡುತ್ತ ಕಾವ್ಯ ರಚನೆಗೆ ಸ್ಫೂರ್ತಿಯ ಸೆಲೆಯಾಗುತ್ತಾಳೆ. ಶ್ರೀಕೃಷ್ಣನ ಆಸ್ಥಾನ ವೇದಾಗಮ, ಶಾಸ್ತ್ರ, ಪುರಾಣ, ಇತಿಹಾಸಜ್ಞರೊಂದಿಗೇ ಕವಿಗಳು ಗಮಕಿಗಳು ಸದ್ವಾದಿವಾಗ್ಮೀಕರು, ನಾದಗಾನಂಗೀತ ಸಾಹಿತ್ಯ ಸರ್ವಜ್ಞನಾಟಕಮುಖ್ಯರೂ ವೇದಾಂತ ಸಿದ್ಧಾಂತ ಜ್ಯೋತಿಶಕನು ಕವಿ ವಿನೋದದಿಂ ಪರಿಹಾಸಗೈವವರಿಂದ ಶೋಭಿಸುತ್ತಿತ್ತು. ಕೃಷ್ಣನೊಡನೆ ಸತ್ಯಭಾಮೆ ರುಕ್ಮಿಣಿಯರು

''ಸರಗೂಡಿ ತಾಳತಾಂಬೂರಿಮದ್ದಳೆಗಳೊಡನೆ
ಮೆರದು ಭಾಜಿಪಗತಿಗೆ ನಾನಾಭಿನಯಂಗಳನು
ಯಿರದೆ ತೋರುತ್ತನರ್ತಿಪ ನಾಯಕಿಯರ ನೋಡುತ್ತೆ ಲೀಲೆಯೊಳೊಪ್ಪಿರೇ'' (೧೦-೧೯)

ಎಂಬಲ್ಲಿ ಶುದ್ಧ ಸಾತ್ವಿಕ ಶೃಂಗಾರದ ಚಿತ್ರಣವಿದೆ.

ಸಾಮಾನ್ಯ ವೇಶ್ಯಾಸ್ತ್ರೀಯರೂ, ವಿಟಪುರುಷರೂ ಗಾನ, ನರ್ತನ, ಪಗಡೆ, ಚದುರಂಗಗಳಲ್ಲಿ ಪರಿಣತರಾಗಿದ್ದ ಚಿತ್ರಣ ಇಲ್ಲಿದೆ. ಹೆಣ್ಣುಗಳೆಲ್ಲ ಸ್ಮರನ ಪರಿಚಾರಿಯರೆಂಬಂತೆಯೇ ಚಿತ್ರಿಸಲ್ಪಟ್ಟಿದ್ದಾರೆ. ವೃಷೆಯ ಶೃಂಗಾರದ ಸಂದರ್ಭವಂತೂ ಶೃಂಗಾರಕ್ಕೇ ಕಳಸವಿಟ್ಟಂತಿದೆ. ಒಂದೊಂದೂ ರಮ್ಯತರ ಚಿತ್ರಗಳು, ಹೃದಯ ಹೊಕ್ಕು ಬಿಡುವ ವರ್ಣನೆಗಳು ಇಲ್ಲಿ ವಿಶೇಷ. ವೃಷೆಯೊಡನೆ ಶಿವ ದರ್ಶನಕ್ಕೆ ಹೊರಟ ಹೆಂಗಳೆಯರ ವರ್ಣನೆಯನ್ನು ನೋಡಬೇಕು, ತೀರವಾಚ್ಯವಾದ ಶೃಂಗಾರ ನಿರೂಪಣೆ ಅಗತ್ಯವಿತ್ತೇ ಎಂಬ ಭಾವನೆ ಹುಟ್ಟಿಸುವಂತಿದೆ.

ಉದಾಹರಣೆಗೆ:

ಕರಿಹರಿಯು ಹರಿಣಾತುರಂಗಚಮರಿಯು ಹಂಸೆ
ಸುರಚಿರಂಯಣೆವಕ್ಕಿಶುಕ ಪಿಕಂಕೇಕಿಬಂ
ಧುರಪದ್ಮಕೇತಕಿಯು ಮಲ್ಲಿಗೆಯು ಚಂಪಕಂ ಬಿಂಬದಾಡಿಂಬಮಾವೂ
ತರುಣಿಯರ ಅಂಗದೊಳು ಮೃಗವೈದು ಖಗವೈದು
ವರಪುಷ್ಪನಾಲ್ಕು ಫಲಮೂರುಯಿಂತಿವರಿಂದೆ
ಪರಿವಿರಾಜಿಸುತಿರಲು ಬಾಣಜೆಯಂದಣದಿಯಿಕ್ಕೆಲದಿಬರುತಿರ್ದರೂ'' (೨೪-೧೩)

ಎಂಬ ಚಿತ್ರಣ ಗೌರವಾನ್ವಿತವಾಗಿದೆ. ಆದರೆ ಕವಿಯು ಮುಂದುವರೆದು ಅವರನ್ನು ಹೀಗೆ ಬಣ್ಣಿಸುತ್ತಾನೆ.

''ಮೊಳೆಯಮೊಲೆ ಯಡಿಕೆಮೊಲೆಯಮಳಕಾಮೊಲೆನಿಂಬೆ
ಮೊಲೆಯು ಬೆಳುಗಾಯಮೊಲೆ ಬೊಗರಿಮೊಲೆ ಬಿಗಿದ ಮೊಲೆ'' (೨೪-೧೪)

ನಳಿನ ಮೊಗ್ಗೆ ಚೆಂಡು, ದುಂಡು, ತೆಂಗಾಯಿ, ಕಲಶಗಳಿತ್ಯಾದಿಗೆ ಹೋಲಿಸುತ್ತಾ

''ಪುರುಷಮೃಗ ಕುಲಗಳಿಗೆ ವಡ್ಡಿದಂತಾಬಲೆಯ ಮೊಲೆವರುವಪ್ಪಿರ್ದರೂ''

ಎಂದು ಹೇಳಿ ಓದುಗರಲ್ಲಿ ಮುಜುಗರವನ್ನುಂಟುಮಾಡುವದು ಮಾತ್ರವಲ್ಲ ಕಾವ್ಯದ ಘನತೆಯನ್ನು ಕೆಳಕ್ಕಿಳಿಸುತ್ತಾನೆನಿಸುತ್ತದೆ. ರುಕ್ಮಿಣಿ ಕೃಷ್ಣ ಸತ್ಯಭಾಮೆಯರ ಜಲಕ್ರೀಡೆ, ಓಕುಳಿ, ಉಯ್ಯಾಲೆಯ ಚಿತ್ರಣಗಳು

ಕವಿಯ ರಸಿಕತೆಗೆ ಸಾಕ್ಷಿಯಾಗಿವೆ. ಉಷಾ ಅನಿರುದ್ಧರ ಪ್ರಣಯ ಪ್ರಸಂಗವನ್ನು ಡಾ. ದೇವೇಂದ್ರಕುಮಾರ ಹಕಾರಿಯವರು ಅಪ್ಪಟ ಜನಪದ ಕಥೆಯೊಂದರಲ್ಲಿ ನೆರವೇರಬಹುದಾದ ಪ್ರಣಯ[೧೭] ಎಂದಿರುವುದು ಸಾರ್ಥಕವಾಗಿದೆ. ಅನಿರುದ್ಧನು ರಾತ್ರಿ ವಿಹಾರದಲ್ಲಿ ಕಾಣುವ ದೃಶ್ಯಗಳು ಜನರ ಶೃಂಗಾರಾಭಿರುಚಿಗೆ ಕನ್ನಡಿ ಹಿಡಿಯುತ್ತದೆ. ವೇಶ್ಯಾವಾಟಿಕೆಯ ವರ್ಣನೆಯಲ್ಲಿ ದಂಪತಿಗಳ ಸುರತ ಕ್ರೀಡೆಯಲ್ಲಿ ಹಸಿ ಹಸಿಯಾದ ಶೃಂಗಾರ ಬರುತ್ತದೆ.

ರತಿ-ಮನ್ಮಥರವಿವಾಹಾನಂತರದ ಶೃಂಗಾರ ವೃಷೆ-ಅನಿರುದ್ಧರ ಸಂಯೋಗದ ಶೃಂಗಾರ ಸನ್ನಿವೇಶಗಳಲ್ಲಿ ಸಂಭೋಗಶೃಂಗಾರದ ವಾಚ್ಯ ಚಿತ್ರಣವಿದ್ದರೆ ವೃಷೆಯ ವಿರಹದಲ್ಲಿ ವಿಪ್ರಲಂಭ ಶೃಂಗಾರವಿದೆ. ಮೋಹನತರಂಗಿಣಿಯ ಶೃಂಗಾರವನ್ನು ಕುರಿತು ಡಾ. ಎ.ಎಸ್.ವೇಣುಗೋಪಾಲರಾವ್ ಅವರು ಹೀಗೆ ಹೇಳುತ್ತಾರೆ: ''ಮೋಹನತರಂಗಿಣಿಯಲ್ಲಿ ಶೃಂಗಾರವೇ ಪ್ರಧಾನರಸ. ಪಡ್ಡೆ ಹುಡುಗ-ಹುಡುಗಿಯರ ಹುಡುಗಾಟದ, ಚೆಲ್ಲಾಟದ ಚಾಂಚಲ್ಯ ಬಹುಮಟ್ಟಿಗೆ ಜಘನಸ್ತನ ನಿಷ್ಠವಾದ ದೋರೆಗಾಯಿ ಅದು. ವೀರರಸದ ನೆರವು ಪಡೆದ ಉನ್ಮತ್ತ ಶೃಂಗಾರ. ಉಷಾ ಅನಿರುದ್ಧರದು ಚಿತ್ರಲೇಖೆಯ ಕುಂಟಣಿತನದಿಂದ ನಡೆದ ಕದ್ದುಮುಚ್ಚಿ ನಡೆದ ಕಳ್ಳ ವಿವಾಹದ ರತಿ ಮುಖ್ಯವಾಗಿ ತರಂಗಿಣಿಯಲ್ಲಿ ಹಲ್ಲಿಗೆ ಹುಚ್ಚು ಹಿಡಿಸುವ ಮಾವಿನ ದೋರೆಗಾಮಿ.[೧೮] ಈ ಎಲ್ಲ ಮಾತುಗಳು ಶಂಕರಕವಿಯ ನವಮೋಹನ ತರಂಗಿಣಿಯಲ್ಲೂ ಸತ್ಯವಾಗಿವೆ. ಮೋಹನ ತರಂಗಿಣಿಯಂತೆ ನವಮೋಹನ ತರಂಗಿಣಿಯೂ ಹಲವು ಶೃಂಗಾರ ತೀರ್ಥಗಳನ್ನೊಳಗೊಂಡ ರಸಕಾವ್ಯವೆಂದರೆ ಅತಿಶಯೋಕ್ತಿಯಾಗದು.

ಮಹಾಕಾವ್ಯ ಪದ್ಧತಿಗೆ ಅನುಗುಣವಾಗಿ ವಿವಿಧ ರಸಭಾವಗಳ ಓಕುಳಿಯಾಟವೇ ಈ ಕಾವ್ಯದಲ್ಲಿ ಕಂಡು ಬರುತ್ತದೆ. ಶೃಂಗಾರದಲ್ಲೇ ಅಂತರ್ಗತವಾಗಬಹುದಾದ ವಾತ್ಸಲ್ಯಗಳನ್ನು ಇಲ್ಲಿ ಗಮನಿಸಬಹುದು. ಉದಾಹರಣೆಗೆ ಮಗ್ಗುಲಲ್ಲಿ ಮಲಗಿದ್ದ ಮಗು ಇದ್ದಕ್ಕಿದ್ದಂತೆ ಕಾಣೆಯಾದಾಗ ರುಕ್ಮಿಣಿಯು ಪ್ರಲಾಪಿಸುವ ಪ್ರಸಂಗ ವಾತ್ಸಲ್ಯ ಕರುಣೆಗಳ ಸಂಗಮ ಅವಳ ಆತಂಕ ದುಗುಡ ರೋದನದಲ್ಲಿ ಓದುಗರೂ ಅರಿವಿಲ್ಲದೆ ಭಾಗಿಗಳಾಗುತ್ತಾರೆ.

ಯೆಲ್ಲಿ ಪೊದುದು ತನಯ ಯಾರು ವೈದಿರಿ ನಿದ್ರೆ
ಯೆಲ್ಲಿನಾಂ ಮರದು ಮಲಗಿರಲಣುಗನಳಲು ಮೊಲೆ
ಯೆಲ್ಲಿ ಪಾಲುಳ್ಳವರುಯೆನ್ನ ನಿದ್ರೆಯ ಭಂಗಮಾಡದೆ.. (೧೧-೪೫)

ತೆಗೆದುಕೊಂಡು ಹೋದಿರೋ ಮುಚ್ಚಿದ ಬಾಗಿಲು ಮುಚ್ಚಿದಂತಿದೆ. ಏನು ಮಾಯವೊ ಸವತಿಯರೊಳಿದು ವೆನೆಗೆ ನಗೆಗೇಡಾದುದೆ ಖುಲ್ಲನಾ ರಿಯರು ಶಾರದಲಿಂತು ಗೈದಪರೋ ಎಂದು ರೋದಿಸುತ್ತಾಳೆ. ಕನಕರಷ್ಟು ಸಹಜತೆ ಇಲ್ಲಿಲ್ಲವೆಂಬುದು ಶಂಕರಕವಿಯ ಕೊರತೆ ಎನ್ನಬಹುದು. ಕಾವ್ಯ ಪ್ರಪಂಚದಲ್ಲಿ ತೀರ ಅಪರೂಪವಾದ ಒಂದು ಸನ್ನಿವೇಶವೆಂದರೆ ಶಿಶುವಾತ್ಸಲ್ಯ ಹಾಗೂ ಪ್ರಣಯದುತ್ಕಟತೆ ಒಂದೇ ಎಡೆಗೆ ಬೆರೆತ ವಿಚಿತ್ರಸನ್ನಿವೇಶ.

[illegible]

[illegible]

[illegible]

[illegible]

[illegible]

ಈ ರೋಮಾಂಚಕ ಪ್ರಸಂಗ ಕಾವ್ಯಪ್ರಪಂಚದಲ್ಲಿಯೇ ಅಪೂರ್ವ.[೯] ಶಂಬರಾಸುರನ ಅಡಿಗೆ ಮನೆಯಲ್ಲಿದ್ದ ರತಿಗೆ ಬೆಸ್ತರವನು ತಂದಿತ್ತ ಮೀನಗರ್ಭದಲ್ಲಿ ಪುರುಷ ಶಿಶು ಗೋಚರಿಸುತ್ತದೆ. ಒಡನೆಯೇ ರತಿದೇವಿ ಮೂರ್ಛಿತಳಾಗುತ್ತಾಳೆ. ರೋಮಾಂಚನವಾವರಿಸಿ ವಿರಹಾಗ್ನಿ ವಡಲಿಗಾವರಿಸುತ್ತದೆ. ಎಚ್ಚರಾದಾಗ, ತಾನು ಪತಿವ್ರತೆ, ಅನ್ಯಪುರುಷರೆನಗೆ ಜನಕ ಸಮಾನ. ಇಂದು ಆ ಭಾವಕ್ಕೆ ಹಾನಿಯಾಯ್ತು ಎಂದು ಚಿಂತಿಸುತ್ತಿರಲು ನಿನ್ನ ಪತಿತರಳ ವೇಷದಿಂ ಬಂದಹನ ಸುಯಿಧಾನದೀ ನಿನ್ನಯಧರಾಮೃತವನುಣಿಸಿ ಪಾಲಿಸು, ಈಶನಿತ್ತ ಹರಕೆ ಕೈಗೂಡುವುದು (೧೧-೧೩) ಎಂದು ನಭೋವಾಣಿ ಮೊಳಗುತ್ತದೆ. ನಂತರ ದಾಸಿಯ ಮಗುವೆಂದು ಖಳನ ಅಪ್ಪಣೆ ಪಡೆದು ಪೋಷಿಸುತ್ತಾಳೆ. ಮಗುವಿಗೆ ಸಹಜವಾದ ಶೃಂಗಾರಗೈದು ಸಂತಸಪಡುತ್ತಾಳೆ. ಬಾಲಲೀಲೆಗಳನ್ನು ಕಂಡು ರೋಮಾಂಚಿತಳಾಗುತ್ತಾಳೆ. ಇಲ್ಲಿಯೂ ಪತಿಯನ್ನೇ ಶಿಶುವೆಂದು ಪಾಲಿಸಬೇಕಾದ ಸಂದರ್ಭದ ಸಂಮಿಶ್ರಭಾವದ ಉತ್ಕಟತೆಯನ್ನು ಕನಕರಂತೆ ನಿಭಾಯಿಸುವಲ್ಲಿ ಶಂಕರಕವಿಯು ಸೋತಿದ್ದಾನೆಂದೇ ಹೇಳಬೇಕಾಗುತ್ತದೆ. ಅಥವ ಶಿಶುವನ್ನು ಪತಿ ಭಾವದಲ್ಲಿ ಕಾಣುವುದು ಕವಿಯ ಕಣ್ಣಿಗೆ ಅನೌಚಿತ್ಯವೆಂದು ಕಂಡಿರಬಹುದೇನೋ. ಕಾಮದಹನದ ಸಂದರ್ಭದಲ್ಲಿ ಸ್ವಯಂಶೈಲಜೆಯೇ ರತಿಯನ್ನು ಸಂತೈಸುವ ಪ್ರಸಂಗ, ಶಂಬರಾಸುನ ಪತ್ನಿ ರತಿಯನ್ನು ತಾಯ್ತನದ ಅಕ್ಕರೆಯಿಂದ ಉಪಚರಿಸುವ ಪ್ರಸಂಗಗಳಲ್ಲಿ ಶಂಕರನಿಗಿಂತ ಕನಕರೇ ಮೇಲುಗೈ ಸಾಧಿಸಿದ್ದನ್ನು ಗುರುತಿಸಬಹುದು. ರತಿಯ ಪ್ರಲಾಪದ ಪ್ರಸಂಗ ಮಾತ್ರ ನಿಜಕ್ಕೂ ಕರುಣರಸದ ಮಡುವಾಗಿದೆ. ಇಲ್ಲಿ ಕಾಮದಹನದ ಸುದ್ದಿಕೇಳಿ ರತಿದೇವಿಯ ಕಿವಿಗಳಲ್ಲಿಕೂರ್ದಸೆ ಬಡಿದಂತಾಗಿ ಕಾಮಾಗ್ನಿ ದುಃಖಾಗ್ನಿ ಹೆಚ್ಚಿ ನವಕದಳಿಮೂಲಮಂ ಭೇದಿಸಲು ಕೆಡೆವಂತೆ ಧೊಪ್ಪನೆ ಅವನಿಯೊಳು ಮೂರ್ಛಿತಳಾಗಿ ಬೀಳುತ್ತಾಳೆ. ಅವಳ ನರಳಾಟ ಹೊರಳಾಟ ಎಂಥ ಕಲ್ಲೆದೆಯವರನ್ನೂ ಕರಗಿಸುವಂತಹದ್ದು. ಪುಷ್ಪ ಬಾಣನಾದರೋ ಶಿವನ ಉರಿಗಣ್ಣಿಂದ ನಿಮಿಷಾರ್ಧದಲ್ಲಿ ಬೆಂದು ಹೋದ, ಆದರೆ ಈ ರತಿಯು ಅತುಳದುಃಖದಿಂದ ಜೀವಂತ ಬೇಯುತ್ತಿದ್ದಾಳೆಂಬ ಚಿತ್ರ ಕರುಳು ಮಿಡಿಯುತ್ತದೆ. ಮೂಲ ಆಕರಕಾವ್ಯದಷ್ಟೇ ಪರಿಣಾಮಕಾರಿಯಾಗಿ ಮೂಡಿಬಂದಿದೆ.

> ವನಿತೆಯಳಿಗಾವರಿಶಿದತುಳದುಃಖಾನಲನುಕೊಲ್ಲದೆ ಜೀವದೊಡನೆ
> ಘನತಾಪದಿಂದಲಿ ಸಾಯಲಿಗೊಡದೆ ಬೇಯಿಸುತಿರೆನೆ
> ನೆನೆನದುಯೆದೆ ಬಸುರ ಹೊೖಕೊಳುತ ಚೀರ್ದುದೋ
> ದನೆಯಿಂದೆ ಶೋಕಾಬ್ಧಿಯೊಳು ಮುಳುಗಿ ಕಂಬನಿಗಳಂ ತೋಯ್ದು ಭೋರ್ಗರೆವುತಾ (೬-೫೩)

ರೋದಿಸುತ್ತಿದ್ದಳೆಂಬ ಚಿತ್ರ ರಾಘವಾಂಕನ ಹರಿಶ್ಚಂದ್ರಕಾವ್ಯದ ಚಂದ್ರಮತಿಯು ಮಗನಿಗಾಗಿ ಪ್ರಲಾಪಿಸುವ ಸನ್ನಿವೇಶದ ನೆನಪು ತರುತ್ತದೆ. ಒಂದೇ ವ್ಯತ್ಯಾಸವೆಂದರೆ ರತಿ ಪತಿಗಾಗಿ ಪ್ರಲಾಪಿಸಿದರೆ ಚಂದ್ರಮತಿ ಸುತನಿಗಾಗಿ ಪ್ರಲಾಪಿಸುವುದು ಅಷ್ಟೆ. ತನಗೆ ಎದುರಾದ ನಂದಿ, ಶಿವನ ಜಡೆಯಲ್ಲಿರುವ ಗಂಗೆ, ಕೊನೆಗೆ ಶಿವನನ್ನೂ

ಶಾಂತಶಂಕರನೆಂಬ ಬಿರುದು ನಿನಗೇಕೆ ಅತಿಕೋಪಿ ನೀನು ನನ್ನ ಪತಿಯ ಕಾರ್ಯದ ಉದ್ದೇಶವನ್ನರಿಯದೇ ಉರಿಸಿಬಿಟ್ಟೆಯಲ್ಲ. ಎಂದು ದೂಷಿಸಿ ರೋದಿಸುವ ದೃಶ್ಯ ಓದುಗರ ಸಹಾನುಭೂತಿಯನ್ನು ಸೂರೆಗೊಳ್ಳುತ್ತದೆ.

ಈ ಕಾವ್ಯದಲ್ಲಿ ವೀರರಸ ಮತ್ತು ಅದರ ಅಂಗವಾಗಿ ಹಾಸ್ಯದ ಪ್ರಸಂಗಗಳೂ ಎಡೆಪಡೆದಿವೆ. ಶಿವನ ತಪೋಭಂಗಕ್ಕೆ ಅಣಿಯಾಗಿ ಬರುತ್ತಿದ್ದ ಮನ್ಮಥನನ್ನು ಕಂಡು ಕಣ್ಣುಕೆಕ್ಕರಿಸಿಕೊಂಡು ಮೇಲ್ವಾಯ್ದು ಬರುತ್ತಿದ್ದ ನಂದಿಯನ್ನು ಕಂಡು ಮನ್ಮಥನು ಮರವನ್ನೇರಿ ಕುಳಿತ ದೃಶ್ಯ ಓದುಗರಲ್ಲಿ ಸಹಜ ನಗುವನ್ನುಕ್ಕಿಸಿ ಬಿಡುತ್ತದೆ. ನಂದಿಯ ಆರ್ಭಟದಲ್ಲಿ ರೌದ್ರರಸದ ದರ್ಶನ ಮಾಡಿಸುವ ಕವಿಯ ಕಾವ್ಯಶಕ್ತಿ ತಲೆದೂಗುವಂತೆ ಮಾಡುತ್ತದೆ. ಇಂಥ ಸಂದರ್ಭಗಳಲ್ಲಿ ಶಂಕರಕವಿಯು ಕನಕದಾಸರಿಂಗಿಂತ ಮಿಗಿಲಾಗಿ ನಿಲ್ಲುತ್ತಾನೆನ್ನಬಹುದು. ನವಿಲು-ಗರುಡ, ಗರುಡ-ನಂದಿ, ಬಲರಾಮ-ಗಣಪತಿಯರ ಹೋರಾಟ ರಂಜನೀಯವಾಗಿದ್ದು ಮತ್ತೆ ಮತ್ತೆ ಓದಿಸಿಕೊಳ್ಳುವಂತಿವೆ. ಅದರಲ್ಲೂ ಗಣಪ ಬಲರಾಮರ ಯುದ್ಧ ಮೂದಲಿಕೆಗಳು ಹಾಸ್ಯಕ್ಕೆ ಪೋಷಕವಾಗಿದ್ದು ಯುದ್ಧರಂಗವನ್ನು ನಾಟಕರಂಗವನ್ನಾಗಿಸಿ ಬಿಡುತ್ತವೆ.

ಉದಾಹರಣೆಗೆ ಬಲರಾಮನು ಗಣಪತಿಯನ್ನು ಕುರಿತು ಪರಿಹಾಸದಿಂದ -

ಸಕಲ ಸುರಾಸುರರಿಂದಲಾರ್ಚನೆಗೊಂಡು ಭಕ್ಷಾದಿ
ನಿಖಿಳಕಜ್ಜಾಯವುಂಡಲಿಗೆ ಪಂಫಲತತಯ
ಪ್ರಕಟದಿಂದುಂಡು ಪಾನಕಕುಡಿದು ಸಂತೃಪ್ತಿಗೊಂಡು ಡರ್‍ರನೆ ತೇಗೀ
ಸುಖಿಸಿ ಸರ್ವರಿಗೆ ಬಹಯೆಡರುಕಂಟಕವಿಘ್ನ
ನಿಕರಮಂ ಪರಿಹರಿಸುತ್ತೆಲ್ಲಕ್ರೂರ ಸಾ
ಯಕದ ಪಾಯಸ ನಿನ್ನ ಗಂಟಲಿಗೆ ಯಿಳಿವುದಲ್ಲ ಮರಳಿ ಪೋಗೆನಲ್ಕೇ (೩೦-೬೦)

ಕೇಳಿ ಗಣನಾಥ ಕೋಪವನಾಂತು ರಣರಂಗ
ದೊಳೆನ್ನ ಕೈಗಾರಿಕೆಯ ವಿಚಾರಿಸದೆ
ಆಳಿಗಳವುತ್ತಮೂದಲಿಸುವರೆ ನೇಗಿಲಯ ಮೇಳಿಪಿಡಿವಂತಲ್ಲವೂ
ಬಾಳ ಪೌರುಷವನಾಡುವವನಲನೊಡೆನ್ನ
ತೋಳಬಲುಮೆಯನೆನುತಧನುವಿಗೆ ಸರಲೂಡಿಕಿವಿ
ಯಾಲೆ ಪರಿಯಾಂತರಂ ಶಳೆದಿಡಲು ಬಲರಾಮನೆದೆಯ ನಿಬ್ಬಗಿ ಮಾಡುವಾ (ಅದೇ ೩೦-೬೭)

ಹೀಗೆ ಮೂಲ ಆಕರ ಕಾವ್ಯದ ಯಥಾರ್ಥ ಭಾವವನ್ನೇ ಪ್ರಕಟಪಡಿಸಿದರೂ ವಾರ್ಧಕಷಟ್ಪದಿಯ ಹರಹುಕಾರಣವಾಗಿ ಮೂಲಕ್ಕಿಂತ ಪರಿಣಾಮಕಾರಿಯಾಗಿ ಮೂಡಿ ಬಂದಿರುವುದನ್ನು ಗಮನಿಸಬಹುದು. ಮನ್ಮಥನ ದಂಡಯಾತ್ರೆ, ಆಕ್ರಮಣಗಳ ಸೊಗಸು ಒಂದು ಬಗೆಯಾದರೆ. ಶಂಬರಾಸುರ ಪ್ರದ್ಯುಮ್ನರ ಹೋರಾಟ ಮತ್ತೊಂದು ಬಗೆಯದು. ಇವುಗಳಿಗೆ ಭಿನ್ನವಾಗಿ ಶಿವ ಕೃಷ್ಣರಕಾದಾಟ, ಕೃಷ್ಣ-ಬಾಣಾಸುರರ

ಕಾದಾಟಗಳು ಮೂಡಿಬಂದಿವೆ. ಯುದ್ಧೋಚಿತವಾದ ಉತ್ಸಾಹ, ಆವೇಶ, ಆಕ್ರೋಶಗಳು ಎದ್ದು ತೋರಿದರೂ ಅವು ಪ್ರಬಲವಾಗಿ ಕಲಾತ್ಮಕವಾಗಿ ವ್ಯಕ್ತಗೊಂಡು ವೀರರಸದ ನಿಜವಾದ ಅನುಭವವನ್ನು ನೀಡುವಲ್ಲಿ ಸೋತುಬಿಡುತ್ತವೆ. ಕಾರಣವೇನೆಂದರೆ ಇಲ್ಲಿ ಎಲ್ಲರೂ ಸಮಬಲರೇ. ಕಾದಾಟವೇನೋ ತುರುಸಿನಿಂದಲೇ ನಡೆಯುತ್ತದೆ. ಆದರೆ ಯಾರೂ ಸೋಲರು. ಶಿವ, ವಿಷ್ಣು ಈರ್ವರೂ ಮೆಚ್ಚುವಂತಹ ಹೋರಾಟವದು, ಕೊನೆಗೆ ಪುಷ್ಪವೃಷ್ಟಿಯಾಗುತ್ತದೆ. ಪರಸ್ಪರರು ಮೆಚ್ಚುಗೆ ಸೂಚಿಸುತ್ತಾರೆ. ಶಿವ-ವಿಷ್ಣುವಿನ ಕಾಳಗವಂತೂ ಲೀಲೆಯಾಗಿ ಬಿಡುತ್ತದೆ. ಶಸ್ತ್ರಾಸ್ತ್ರಗಳ ತಾಕಲಾಟದಲ್ಲಿ, ದೇವ-ದಾನವರ ಹೋರಾಟದಲ್ಲಿ ಸಾಂಪ್ರದಾಯಿಕ ಯುದ್ಧದ ಸ್ಥಿತಿಯು ಚಿತ್ರಿತವಾಗಿದೆ ನಿಜ. ಆದರೆ ಹರಿ-ಹರ ಸಾಮ್ಯತೆಯ ಸಂದೇಶದಲ್ಲಿ ಎಲ್ಲವೂ ಶಾಂತವಾಗುತ್ತದೆ. ಕೃಷ್ಣ-ಶಿವಸ್ತುತಿಯ ಸಂದರ್ಭದಲ್ಲಿ ಭಕ್ತಿರಸ ಧಾರೆಯಾಗಿ ಹರಿದಿದೆ. ಭಕ್ತಿಯ ಉತ್ಕಟತೆಗೆ ಭಾವಾವೇಶಕ್ಕೆ ಬಾಣನ ಶಿವಲಿಂಗಪೂಜೆ ಒಂದು ಉಜ್ವಲ ಉದಾಹರಣೆಯಾಗಿ ನಿಲ್ಲುತ್ತದೆ.

> ಬಾಣನು ಪರಿಪೂರ್ಣಭಾವದಿಂದ
> ಬೆರೆದು ಲಿಂಗದಿ ತಾನು ತಾನೆ ಲಿಂಗಮುಮಾಗಿ
> ಮೆರೆವ ಸಜ್ಯೋತಿಚಿಜ್ಯೋತಿಸಮರಸಮಾಗಿ
> ಪರಮನಾದುರ್ಮಯ ಮಹಾಜ್ಯೋತಿ ಲಿಂಗದೊಳು ಕೂಡಿತನ್ನುವನು ಮರಧೂ
> ಕರಣೇಂದ್ರಿ ಕಾಲಾಟಗಳು ನಿಂದು ಮನೋವಾಯು
> ಚರಚಲನೆಯಡಗಿಹಸುತೃಪೆಯರತುಬಾಣಾಖ್ಯ
> ಪರವಶಾಬ್ಧಿಯ ಮುಳುಗಿಯಾತ್ಮ ಜ್ಯೋತಿರ್ಲಿಂಗಮುಮನುಧ್ಯಾನಿಸುತಿರ್ದನೂ (೧೯-೪೭)

ಹೀಗೆ ಶೃಂಗಾರದ ಪ್ರಧಾನರಸಕ್ಕೆ ಭಕ್ತಿ ವೀರ ಕರುಣೆಗಳು ಪೋಷಕವಾಗಿ, ಸಾಂದರ್ಭಿಕವಾಗಿ ಹಾಸ್ಯ ರೌದ್ರ ರಸಗಳು ಇಲ್ಲಿ ಎಡೆಪಡೆದಿರುವುದನ್ನು ಗುರುತಿಸಬಹುದು.

ಪಾತ್ರಪೋಷಣೆ: ಮೋಹನ ತರಂಗಿಣಿಯಂತೆಯೇ ದೇವತೆಗಳು ಮಾನವರು ರಾಕ್ಷಸರಿಂದ ಮುಪ್ಪುರಿಗೊಂಡಕಾವ್ಯ ನವಮೋಹನ ತರಂಗಿಣಿ. ಪಾತ್ರಗಳ ದೃಷ್ಟಿಯಿಂದ ನೋಡಿದಾಗ ಇಲ್ಲಿ ಪ್ರಧಾನ ಪಾತ್ರಗಳು ಕಡಿಮೆ. ಹರಿಹರರು, ರತಿಪ್ರದ್ಯುಮ್ನರು, ವೃಷೆ ಅನಿರುದ್ಧರು, ಶಂಬರಾಸುರ-ಬಾಣಾಸುರರು ಮಾತ್ರವಲ್ಲದೇ ಕುಂಬಾಂಡನಂಥ ಮಂತ್ರಿ, ಚಿತ್ರಲೇಖೆಯಂಥ ಸಖಿ ಇವರೆಲ್ಲರೂ ಮಹತ್ವಪಡೆದಿದ್ದು, ತಮ್ಮ ತಮ್ಮ ಪಾತ್ರಗಳನ್ನು ತುಂಬ ಪರಿಣಾಮಕಾರಿಯಾಗಿಯೇ ನಿಭಾಯಿಸಿದ್ದಾರೆ.

ಪೂರ್ವಾಗ್ರಹ ಪೀಡಿತ ರಕ್ಕಸಗುಣಗಳಿಗೆ ವಿರುದ್ಧವಾಗಿ ಆದರ್ಶ ವ್ಯಕ್ತಿತ್ವದ ಶಿವಭಕ್ತ ಪಾತ್ರವಾಗಿ ಬಾಣಾಸುರ. ರಾವಣನಂತೆ ಪರಸ್ತ್ರೀ ವ್ಯಾಮೋಹಕ್ಕಾಗಿ ದುರಂತ ಸಾವನ್ನು ತಂದುಕೊಂಡ ಶಂಬರಾಸುರ, ಆದರ್ಶ ಮಂತ್ರಿಗಳ ಸ್ಥಾನದಲ್ಲಿ ನಿಲ್ಲುವ ಅಪ್ಪಟ ಮಾನವೀಯ ಭಾವಗಳ ಪ್ರತಿಮೂರ್ತಿಯಾಗಿ ನಿಲ್ಲುವ ಶಂಬರಾಸುರನ ಮಂತ್ರಿ ಮತ್ತು ಬಾಣಾಸುರನ ಮಂತ್ರಿ ಕುಂಬಾಂಢರು, ನಿಷ್ಠಾವಂತ ಬಂಟನಾಗಿ ನಿಲ್ಲುವ

ಮೂಲ ಆಕರ ಕಾವ್ಯಕ್ಕಿಂತ ವಿಶೇಷಕಳೆಯಿಂದ ಶೋಭಿಸುವ ನಂದೀಶನ ಪಾತ್ರ, ಆದರ್ಶ ದಾಂಪತ್ಯದ ಚಿರಂತನ ಪ್ರೇಮಗೀತೆಯನ್ನು ಹಾಡುವ ರತಿ ಪ್ರದ್ಯುಮ್ನರು, ನವಪ್ರಣಯಿನಿಗಳ ರೂಪಕವಾಗಿ ಚಿತ್ರಿಸಲ್ಪಟ್ಟಿರುವ ವೃಷೆ ಅನಿರುದ್ಧರು, ಲವಲೇಶವೂ ಸ್ವಾರ್ಥದ ಸೋಂಕಿಲ್ಲದ ಶುದ್ಧ ಸ್ನೇಹದ ಆದರ್ಶ ಪಾತ್ರವಾಗಿ ಚಿತ್ರಲೇಖೆ ಇವರೆಲ್ಲರನ್ನೂ ಶಂಕರಕವಿಯು ಕಣ್ಣಿಗೆ ಕಟ್ಟುವಂತೆ ಕಟೆದು ನಿಲ್ಲಿಸುವಲ್ಲಿ ಗೆಲುವು ಸಾಧಿಸಿದ್ದಾರೆ. ಇಲ್ಲಿನ ಎಲ್ಲ ಪಾತ್ರಗಳೂ ಮಾನವ ಸಹಜ ಗುಣದೋಷಗಳಿಂದ ಕೂಡಿದ ವಾಸ್ತವದ ಪಾತಳಿಯಲ್ಲಿ ನಿರ್ಮಿಸಲ್ಪಟ್ಟ ಪಾತ್ರಗಳೆಂಬುದು ಗಮನಾರ್ಹ. ದೇವತೆಗಳೇ ಇರಲಿ, ರಕ್ಕಸರೇ ಇರಲಿ, ಮಾನವರೇ ಇರಲಿ, ಕೊನೆಗೆ ಯುದ್ಧಸಂದರ್ಭದಲ್ಲಿ ಕಾಣಿಸಿಕೊಳ್ಳುವ ದೇವವಾಹನಗಳು. ನಂದೀಶ, ಗರುಡ, ನವಿಲು ಮತ್ತು ಷಣ್ಮುಖ, ಗಣಪತಿ, ಬಲರಾಮರನ್ನು ಅವರ ಪರಿಸರವನ್ನು ಹೊರತು ಪಡಿಸಿ ನೋಡಿದರೆ ಅವರೆಲ್ಲ ಅಪ್ಪಟ ಮಾನವೀಯ ಸ್ವಭಾವದ ಪಾತ್ರಗಳಾಗಿ ಕಾಣಿಸಿಕೊಂಡಿದ್ದಾರೆ. ಕನಕದಾಸರು ಚಿತ್ರಿಸಿರುವಂತೆಯೇ ಶಂಕರಕವಿಯು ದೇವತೆಗಳ ಪಾತ್ರಗಳಲ್ಲಿನಂತೆ ರಕ್ಕಸ ಪಾತ್ರಗಳಲ್ಲೂ ಮಾನವೀಯತೆ, ಧೀರಗಾಂಭೀರ್ಯತೆಯನ್ನು ಕಂಡರಿಸಿರುವುದು ಗಮನಾರ್ಹ.

ಛಂದಸ್ಸು ಮತ್ತು ಶೈಲಿ

> ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ
> ಚರಿಸುವ ಸುಲಲಿತ ಷಟ್ಪದಿಗಳೆಡೆವಿಡದೆ ಝೀಂ
> ಕರಿಸದಿರ್ಪವೆ ಬಂದುನೆರೆದ ವಿದ್ವತ್ಸಭಾನೀರೇರು ಹಾಕರದೊಳು”[೨೦]

ಎಂದು ಲಕ್ಷ್ಮೀಶನು ತನ್ನ ಷಟ್ಪದಿಗಳ ಬಗೆಗೆ ಹೇಳಿದ ಈ ಮಾತು ಸಾಮಾನ್ಯವಾಗಿ ಷಟ್ಪದಿಗಳಿಗೆಲ್ಲ ಅನ್ವಯಿಸುವಂತಿದೆ.

“ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟು ಮಾಡಿದ ಶ್ರೇಯಸ್ಸು ಷಟ್ಪದಿಗೆ ಸಲ್ಲುತ್ತದೆ. ಸಂಸ್ಕೃತ ವೃತ್ತಗಳ ವಜ್ರಬಂಧನದಿಂದ ಕನ್ನಡದ ಜೀವಸ್ವರವನ್ನು ಬಿಡಿಸಿ ಅದನ್ನು ಕನ್ನಡ ಕಾವ್ಯಗಳ ನಾಡಿ ನಾಡಿಗಳಲ್ಲಿ ನುಡಿಸಿದ ಶ್ರೇಯಸ್ಸು ಸಣ್ಣದಲ್ಲ.”[೨೧] ಸುಮಾರು ೧೨ನೆಯ ಶತಮಾನದಿಂದ ಹಿಡಿದುಕೊಂಡು ಇಂದಿನವರೆಗೆ ಷಟ್ಪದಿಯ ಮಂಜುಳನಾದ ಝೀಂಕರಿಸುತ್ತಲೇ ಬಂದಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. ಕನ್ನಡ ಕವಿಗಳ ಮನಸ್ಸನ್ನು ಸಂಮೋಹನಗೊಳಿಸಿದ ಷಟ್ಪದಿಗಳು ಎರಡು. ಒಂದು ವಾರ್ಧಕ ಮತ್ತೊಂದು ಭಾಮಿನಿ. ಷಟ್ಪದಿಯನ್ನು ಸಮರ್ಥವಾಗಿ ಬಳಸಿಕೊಂಡ ರಾಘವಾಂಕನು ಸುಸಂಸ್ಕೃತವಾದ ವಾರ್ಧಕದ ಪ್ರೌಢಶೈಲಿ ಮತ್ತು ದೇಶಿನಿಷ್ಠ ಭಾಮಿನಿಶೈಲಿಗಳೆರಡನ್ನೂ ಸಮನ್ವಯ ಮಾಡಿಕೊಂಡ ಮಹಾಕವಿ. ಅವನ ತರುವಾಯದ ಸುಸಂಸ್ಕೃತವಾದ ಪ್ರೌಢ ವಾರ್ಧಕ ಷಟ್ಪದಿಯ ಶೈಲಿಗೆ ಪದ್ಮಣಾಂಕನೇ ಮೊದಲಿಗನೆನ್ನಬೇಕು.”[೨೨]

ಕೋಳೂರು ಶಂಕರ ಕವಿಯೂ ಸಹ ವಾರ್ಧಕ ಷಟ್ಪದಿಯ ಸಂಮೋಹನಕ್ಕೆ ಒಳಗಾಗಿರುವಾತ. ಚೋರಬಸವೇಶ್ವರ ಕಾವ್ಯ, ಮಾಧವಾಂಕ ಕಾವ್ಯಗಳಂತೆ ನವಮೋಹನ ತರಂಗಿಣಿಯನ್ನೂ ವಾರ್ಧಕ ಷಟ್ಪದಿಯಲ್ಲಿಯೇ ರಚಿಸಿದ್ದಾನೆ.

ಷಟ್ಪದಿಗಳು ಹಾಡುಗಬ್ಬಗಳಾಗಿದ್ದು, ವಾರ್ಧಕ ಷಟ್ಪದಿಯ ಐದೈದು ಮಾತ್ರೆಗಳ ತಾಳಗಳು ಕಿವಿಗೆ ಹಿತವನ್ನು ನೀಡುತ್ತವೆ. "ಷಟ್ಪದಿ ಮೂಲತತ್ವವೆಂದರೆ ಅದನ್ನು ತಾಳಬದ್ಧವಾಗಿ ಹಾಡಲಿಕ್ಕೆ ಬರುವುದು. ತಾಳಬದ್ಧವಾಗಿ ಹಾಡಲಿಕ್ಕೆ ಈ ಷಟ್ಪದಿ, ಮಾತ್ರೆಗಳ ನಿಯಮವನ್ನು ಅನುಸರಿಸಿದ್ದರೂ ಅದರ ತಳಹದಿಯಲ್ಲಿ ಅಂಶಗಣಗಗಳು ಹುದುಗಿ ಕುಳಿತಿರುವುದು ಒಂದು ವೈಶಿಷ್ಟ್ಯ. ಷಟ್ಪದಿ ಲಯದಲ್ಲಿ ಸಿದ್ಧಿ ಪಡೆದ ಕವಿ ಅಂಶಗಣ ಮತ್ತು ಮಾತ್ರಾಗಣಗಳನ್ನು ಸಮನ್ವಯಗೊಳಿಸುವ ಕಲೆಯನ್ನರಿತಿರಬೇಕಾಗುತ್ತದೆ. ಈ ಲಯಕ್ಕೆ ಅನುಗುಣವಾದ ಶಬ್ದಗಳು ಹೊಂದಿಕೆಯಿರಬೇಕಾಗುತ್ತದೆ. ಅಂದರೆ ಷಟ್ಪದಿ ಶೈಲಿಯಲ್ಲಿ ಕಾವ್ಯ ಬರೆದ ಕವಿಯ ಶಬ್ದಗಳು ಅಂಶಗಣ ಮತ್ತು ಮಾತ್ರಗಣಗಳ ತಾಳಕ್ಕೆ ಕುಣಿಯಬೇಕಾಗುತ್ತದೆ. ಲಯಕ್ಕಾಗಿ ಶಬ್ದಗಳನ್ನು ಸಿಕ್ಕಂತೆ ಒಡೆಯುವುದೂ ಶಬ್ದಗಳಲ್ಲಿ ಅಂಶಗಣ ಮಾತ್ರಗಣಗಳನ್ನು ಸಮನ್ವಯಿಸಿಕೊಳ್ಳುವ ಶಕ್ತಿಯಿಲ್ಲದಿರುವುದೂ ಷಟ್ಪದಿಯ ಗತಿಗೆ ಸ್ಖಾಲಿತ್ಯವನ್ನು ತರುತ್ತದೆ. ಇವು ಮುಪ್ಪುರಿವಡೆದಲ್ಲಿ ಷಟ್ಪದಿಗೆ ಕಳೆ ಬರುತ್ತದೆ. ಪ್ರಾಸಾದಿಕ ಕವಿಗಳ ಷಟ್ಪದಿಯಲ್ಲಿ ಈ ತ್ರಿಕೂಟವನ್ನು ಕಾಣುತ್ತೇವೆ."[೨೩] ಈ ತತ್ವಗಳಿಗನುಸಾರವಾಗಿ ಶಂಕರಕವಿಯ ಷಟ್ಪದಿಯನ್ನು ಪರಿಶೀಲಿಸಬಹುದು.

"ನವಮೋಹನ ತರಂಗಿಣಿ"ಯು ಶೃಂಗಾರರಸ ಪ್ರಧಾನವಾದ ಕಾವ್ಯ. ಜೊತೆಗೆ ವೀರ ಭಕ್ತಿ, ಕರುಣ ರಸಗಳು ಪೋಷಕವಾಗಿರುವುದರಿಂದ ಕೋಮಲಭಾವಗಳಿಗೆ ಪ್ರಧಾನ ಆದ್ಯತೆ ದೊರೆತಿದ್ದರೆ, ವೀರ, ರೌದ್ರಗಳಂತಹ ಗಂಭೀರ ಭಾವಗಳಿಗೆ ತದನಂತರದ ಸ್ಥಾನ ಲಭಿಸಿದೆ. ಮೃಧುಮಧುರಭಾವಗಳ ಅಭಿವ್ಯಕ್ತಿಗೆ ಹೇರಳವಾದ ಉದಾಹರಣೆಗಳುಈ ಕಾವ್ಯದಲ್ಲಿ ಸಿಗುತ್ತವೆ. ಉದಾಹರಣೆಗೆ

"ಯಲೆಕಾಂತ ನಿನ್ನ ಸವಿನುಡಿಯು ಸೊಬಗಿನ ಜೆಡಿಯು
ಯಲೆ ಪ್ರಿಯ್ಯ ನಿನ್ನಮಳಕವನಸವೆಯದ ಧನಂ
ಯಲೆರಮಣ ನಿನ್ನಯಿನಿಗಬ್ಬಮತ್ಕರ್ನಗಳ ಹಬ್ಬಮನದುಬ್ಬುಗೊಬ್ಬು
ಝಳಝಳಿಪದಂತ ಪಂಕ್ತಿಯ ಬೆಳಗಪೊಂಬಿಸಿಲಿ
ನೊಳುಯನ್ನ ಹೃತ್ಕಮಲವರಳಿಯಾನಂದದಿ ಪೋಲ್
ಚಲುವಪ್ಪ ಮೇಲ್ಗಥೆಯ ಬಿತ್ತರಿಸು ಚಿತ್ತವಿಪೆ ಮತ್ಕಾಂತ ಚಿತ್ಕಾಂತನೇ" (೧೧-೩)

ಇದು ಕೇಳುಗರ ಕರ್ಣಗಳಿಗೆ ಹಬ್ಬವನ್ನುಂಟು ಮಾಡುವ ಇನಿಗಬ್ಬ. ಇಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದರೆ, ಮೃದುಮಧುರ ಭಾವಗಳು ಹೃದ್ಯವಾಗಿ ಮೂಡಿರುವುದನ್ನು ಗಮನಿಸಬಹುದು.

ನವಿಲ್ಗಳಿಗೆ ನರ್ತನವ ರಾಜಹಂಸಗೆ ನಡೆಯ
ಸವಿನುಡಿಯ ಶುಕಚಯಕೆ ಕೋಗಿಲೆಗೆ ಸುಸ್ವರವ
ಯುವತಿಯರು ತಮ್ಮ ತಮ್ಮ ಮನೆಗಳಲಿ ಕಲಿಸುತಿರ್ದರು ನೋಡಿ ವಿಟಪುರುಷರೂ
(೧೭-೪೪)

ಇಲ್ಲಿನ ಅರ್ಥವಂತಿಕೆ, ಗೇಯತೆ ಮನಂಬುಗುವಂತಿದೆ.

"ಪರತರದ ತಪವ ಕೆಡಿಸುವೆನೆಂದು ಬರ್ಪನವ
ನಿರಿದು ಕೆಡಹುವೆನೆನುತ ಕೋಪಾಗ್ನಿ ವಡಲೊಳಂ
ಯಿರದೆ ಹೊತ್ತುತ್ತ ಹೊನಲೇರಿ ಭುಗಿಭುಗಿಸುತ್ತೆ ಪೊಗೆಸೂಸಿ
ವುರಿಯ ಮುಕ್ಕಳಿಸುತ್ತನೇತ್ರಯುಗಳಂಗಳಲಿ
ಕರೆವುತ್ತೆ ಕೆಂಗಿಡಿಗಳಂನೆದ್ದು ಚರದಿಂ
ಧರೆಯಗೆದರುತ್ತೆಬಾಲಮಮಿಡಿದುಭಯಕರ್ನಂಗಳಂ ನಿರ್ಮಿಚಿ ನೆಲನಾ (೬-೪೪)

ಇಲ್ಲಿನ ಯಮಕಾದಿ ಅಲಂಕಾರಗಳ ಬಳಕೆ ರೌದ್ರಭಾವವನ್ನು ದೃಶ್ಯವತ್ತಾಗಿಸುವ ಪದಗಳ ಶಬ್ದ ಸೌಂದರ್ಯ, ಅರ್ಥ ಸೌಂದರ್ಯಗಳು ಓದುಗನನ್ನು ಮತ್ತೆ ಮತ್ತೆ ಆಸ್ವಾದಿಸಲು ತೊಡಗಿಸುವಂತಿವೆ. ಶಂಕರಕವಿಯು ಉಭಯ ಭಾಷಾವಿಶಾರದ. ಹೀಗಾಗಿ ಈ ಕಾವ್ಯದಲ್ಲಿ ಸಹಜವಾಗಿ ಪ್ರೌಢತೆಯು ಕಾಣಿಸಿಕೊಂಡಿದೆ. ಸಂಸ್ಕೃತ ಕನ್ನಡ ಮಿಶ್ರಣ ಈ ಕಾವ್ಯದಲ್ಲಿ ವೆಗ್ಗಳವಾಗಿದೆ. ಪ್ರತಿಯೊಂದು ಸಂಧಿಯ ಆರಂಭದಲ್ಲೂ ಸ್ತುತಿ ಪದ್ಯಗಳು ಸಂಸ್ಕೃತಭೂಯಿಷ್ಠವಾಗಿರುವುದನ್ನು ಹೊರತುಪಡಿಸಿದರೂ ಸಂಸ್ಕೃತ ಭೂಯಿಷ್ಠ ಷಟ್ಪದಿಗಳ ಪ್ರಮಾಣ ಬಹಳವೆಂದೇ ಹೇಳಬೇಕು. ಉದಾಹರಣೆಗೆ

"ಕಾಲಭಟರುಂಪ್ರಳಯಕಾಲೋಗ್ರಶಿಂಹಾಶಾ
ರ್ದೂಲಾದಿ ದುಷ್ಟಮೃಗಕಾಳಾಹಿಸಂಕುಳಂ
ಮ್ಯಾಲೆಜಂಝಾನಿಲಂರವಿಕಿರಣಮಳೆಮಂಜು ಪೊಗಲಳ್ಕಿಹೆರೆಸಾರ್ದಿರೆ
ಫಾಲಲೋಚನನಿರ್ಪವಾಸದಮಹಾತ್ಮೆಯಂ
ಪೇಳಲೇನದುಶಂಕಿಸದೆಗರ್ವದಲಿ ಪೂಗೋಲನತ್ಯಧಟನಿಂ ಸಕಲಸೈನ್ಯಂಗೂಡಿ
ಮುತ್ತಿದ ತಪೋವನವನೂ" (ಅದೇ ೬-೩೩)

ಇಲ್ಲಿನ ಶೈಲಿ ಪ್ರೌಢವೆನಿಸಿದರೂ ಅರ್ಥವಂತಿಕೆಗೆ ಬಾಧೆಯಿಲ್ಲ. ಇದು ಶಂಕರಕವಿಯ ವೈಶಿಷ್ಟ್ಯ. ಭಾವೋತ್ಕಟತೆ ಶಂಕರಕವಿಯಶೈಲಿಯ ಲಕ್ಷಣಗಳಲ್ಲೊಂದು. ಉದಾಹರಣೆಗೆ,

ಉಮಾ ಸಮೇತನಾಗಿ ಪ್ರತ್ಯಕ್ಷಗೊಂಡ ಶಿವನನ್ನು ಕಂಡು ಬಾಣನು ರೋಮಾಂಚನಗೊಂಡಪರಿ ಹೀಗಿದೆ.

"ಕಂಡು ಕಡು ಪುಳಕ ಮೈಗೊಂಡುರೋಮಾಳಿಪುರಿ
ಗೊಂಡುರ್ಚಿ ಘುಳು ಘುಳಿಸಿಗುಡಿಗಟ್ಟಿ ಬಾಷ್ಪಾಂಬು
ದುಂಡು ಮೌಕ್ತಿಕಂಗಳಂತೆ ಸುರಿಸುತ್ತಲಾನಂದಮೃತರಸಕ ಬಳಮಾ
ವುಂಡುಂಡು ಪರವಶಾರ್ಣವದಿತೆಂಕಾಡಿಮುಂ

ಕೊಂಡು ಸದ್ಭಕ್ತಿಲಾಹರಿಯೇರಿಯತಿ ದೀರ್ಘ

ದಂಡದಂದದಿ ಪಾದಪುಂಡರೀಕದ್ವಯಗಳೆಡೆಯಬಾಣ ಪೊಡೆಗೆಡೆದೊಂದಿಸೀ" (೧೯-೫೫)

ನಾಣ್ಣುಡಿಗಳು, ಗಾದೆ ಮಾತುಗಳು, ಅರ್ಥಾಂತರನ್ಯಾಸಗಳು ಶಂಕರಕವಿಯ ಷಟ್ಪದಿಯಲ್ಲಿ ಹೇರಳವಾಗಿ ಬಳಸಲ್ಪಟ್ಟಿದ್ದು, ಪರಂಪರಾನುಗತವಾಗಿದ್ದರೂ ಅವು ಸ್ಫುರಿಸುವ ಅರ್ಥವೈಶಾಲ್ಯ, ಅನುಭವದ ಆಳಗಳು ಮನನೀಯವಾಗಿದ್ದು ಕವಿಯ ಮನೋಭಾವಕ್ಕೆ ಕನ್ನಡಿ ಹಿಡಿಯುತ್ತವೆ. ಅವುಗಳಲ್ಲಿ ಕೆಲವು ಇಂದಿಗೂ ಪ್ರಚಲಿತವಾಗಿರುವುದನ್ನು ಗುರುತಿಸಬಹುದು. ಉದಾಹರಣೆಗಾಗಿ ಕೆಲವೊಂದನ್ನು ಇಲ್ಲಿ ಗಮನಿಸೋಣ.

"ಹೆರರ ಮಕ್ಕಳ ಬಾವಿಯೊಳು ಕೆಡಹಿನೆಲೆನೋಳ್ಪಪರಿಯಾಯ್ತು" (೪-೨೦)

"ಅಳಿದೋರ್ವನನಿಬರನುವುಳುಹುವದೆ ಧರ್ಮ" (೫-೯)

"ಬಾಯಲಿ ನುಡಿಯೆ ಘಳಿಲನೆ ಬೆನ್ನಿಂಗೆಬಹುದು ಬಾಧೆಯು" (೫-೯)

"ಪತಂಗ ಪಣ್ಣೆಂದೆರಗಿ ದೀಪಕ್ಕೆಳಿಯವುದು" (೫-೧೨)

"ಸತ್ಸತಿಯರಿಂದ ಸನ್ಮುಕ್ತಿ ಪತಿಗಹುದು" (೫-೨೦)

"ಸನುಮತವೆ ಬಲವಂತರೊಳು ಕಲಹ" (೫-೨೧)

"ತಲೆಯು ತಾಂಬಲಿದೊಡಂ ಕಲ್ಲಹಾಯ್ವುವರು" (೫-೨೨)

"ತುಲಾರಾಸಿಯು ಸಿಖಿಯ ಕೆಣಕಿದಂತೆ" (೫-೨೨)

"ಶಕ್ತಿರಹಿತರ್ಗೆ ಸಂಸಾರಮ್ಯಾಕೆ" (೬-೧೬)

"ಅರಸು ಕಟ್ಟಲುಯಾಟ ಮುಗಿಯಿತೆಂದೆನುತಿರ್ಪಪರಿಯಂತೆ" (೭-೨)

"ಪನ್ನಗಾಭರಣ ಮುನಿದೊಡೆ ಕೊಲ್ವ ಶರಣುಪೊಕ್ಕರಕಾಯ್ವ" (೭-೩೫)

"ಅಪುತ್ರಸ್ಯಗತಿರ್ನಾಸ್ತಿ" (೧೧-೧೧)

"ಶಶಿಜೊನ್ನಯಡವಿಯೊಳು ಕಾಳುಕಾಯ್ದು ಬಯಲಾದಂತೆ" (೧೧-೧೧)

"ಜೀವಕ್ಕೆ ಜೀರಿಗೆಯರೆಯ ಬಂದನೆಂಬಂತೆ" (೧೧-೧೪)

"ಕಳಿಲೆಯೆನ್ನಖಿದಿ ಚಿವುಟಲು ಸುಲಭಮದುಬಲಿದು

ಲಳಿಗೆಯಾದೊಡೆಯುಗುರ್ಗಳಿಗೆ ಸಾಧ್ಯಮೆ..." (೧೧-೧೬)

"ಕೊಲಲೆಳಸಿದವಂಗೆ ಕೊಲೆಯದು ತಪ್ಪುವದೆ" (೧೧-೩೭)

"ಮೋಸಗಾರಗೆ ಗಂಧಪೂಡಿಸಿದಡುತ್ತಮನಹನೆ" (೧೧-೪೦)

"ಕಣ್ಣರಿಯದಿರೆ ಕರುಳರಿಯವೆ" (೧೩-೧೨)

"ಕೋಳಿಯನುಳಿಹಿಕೊಂಬುದಕೆ ಮದಗಜವ ಪಿಡಿದು ತಂದು ಬಲಿಯ ಕೊಟ್ಟಂತೆ"(೨೮-೭)

"ಕಳುವಿನುರೆಕೂಟ ಯಾದಿಯಲಿಸುಖವಂತ್ಯಕ್ಕೆಬಲುದುಃಖ" (೨೮-೭)

"ಪ್ರಾರಬ್ಧ ಪ್ರಾಪ್ತಿ ತಪ್ಪದು" (೨೮-೮)

ಹೀಗೆ ನವಮೋಹನತರಂಗಿಣಿಯಲ್ಲಿ ಸಾಹಿತ್ಯಿಕ ಅಂಶಗಳು ಹದವರಿತು ಬೆರೆತಿದ್ದು, ಇದನ್ನು ಉತ್ತಮ ಷಟ್ಪದಿ ಗ್ರಂಥಗಳ ಸಾಲಿನಲ್ಲಿ ನಿಲ್ಲಿಸುವುದಕ್ಕೆ ಪೋಷಕವಾಗಿರುವುದನ್ನು ಗುರುತಿಸಬಹುದು.

೬.೪. ಕೃತಿಯ ವೈಶಿಷ್ಟ್ಯ

ಅದ್ವಿತೀಯ ಶ್ರೇಷ್ಠ ಕಾವ್ಯವೆಂದು ಹೆಸರಾದ ಕನಕದಾಸರ ಮೋಹನತರಂಗಿಣಿಯನ್ನು ಆಧರಿಸಿ ರಚಿಸಲ್ಪಟ್ಟಿರುವ ಕಾವ್ಯ ನವಮೋಹನತರಂಗಿಣಿ ದ್ವಾಪರಯುಗದ ಕಥಾವಸ್ತುವನ್ನೆತ್ತಿಕೊಂಡು ಪುರಾಣ ಪಾತ್ರಗಳ ಮೂಲಕ ತಾವು ಬಾಳಿದ ದೇಶ ಕಾಲಗಳ ಇರಸರಿಕೆಯನ್ನು ದಾಖಲಿಸಿರುವುದು ಮೋಹನತರಂಗಿಣಿಯ ವೈಶಿಷ್ಟ್ಯ.[೨೪] ಅದನ್ನೇ ಅನುಸರಿಸಲೆತ್ನಿಸಿರುವ ನವಮೋಹನತರಂಗಿಣಿಯು ಅಂದಿನ ಕಾಲದ ಜನಜೀವನದ ನಿರೂಪಣೆಯ ದೃಷ್ಟಿಯಿಂದ ಗಮನ ಸೆಳೆಯುವುದು ಮಾತ್ರವಲ್ಲ, ಒಟ್ಟು ಕಾವ್ಯವೇ ಸಮಕಾಲೀನ ಸಂಸ್ಕೃತಿಯ ಸಮೃದ್ಧ ದಾಖಲೆಯಾಗಿ ನಿಲ್ಲುತ್ತದೆ. ಕನಕದಾಸರಂತೆಯೇ ಶಂಕರಕವಿಯೂ ಹರಿಹರ ಸಾಮ್ಯತೆಯ ಭಾಗವತ ದೃಷ್ಟಿಕೋನವನ್ನು ಇಲ್ಲಿ ಪ್ರತಿಪಾದಿಸಿದ್ದಾನೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಶಿರದ ಮೇಲೆ ಲಿಂಗ ಧರಿಸುತ್ತಿದ್ದ ಪದ್ಧತಿಯನ್ನು ಬಾಣಾಸುರನ ಲಿಂಗ ಪೂಜೆಯ ಸಂದರ್ಭದಲ್ಲಿ ಚಿತ್ರಿಸಿರುವ ಕವಿಯು ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಶೈವ ಮತ್ತು ವೀರಶೈವ ಸಂಸ್ಕೃತಿಯ ಸಮ್ಮಿಶ್ರರೂಪಕ್ಕೆ ಸಾಕ್ಷಿಯೊದಗಿಸುತ್ತಾನೆ. ಐತಿಹಾಸಿಕವಾಗಿ, ರಾಜಕೀಯವಾಗಿ, ಪೌರಾಣಿಕವಾಗಿ, ಸಾಮಾಜಿಕವಾಗಿ, ಕನಕರ ದರ್ಶನವನ್ನೇ ಎರಕ ಹೊಯ್ಯಲು ಪ್ರಯತ್ನಿಸಿದ್ದಾನೆನಿಸಿದರೂ ಸ್ವೋಪಜ್ಞತೆಯನ್ನು ಮೆರೆದಿರುವ ಅನೇಕ ಸಂದರ್ಭಗಳನ್ನಿಲ್ಲಿ ಗುರುತಿಸಬಹುದು. ಛಂದಸ್ಸಿನ ದೃಷ್ಟಿಯಿಂದ ವಾರ್ಧಕ ಷಟ್ಪದಿಯಲ್ಲಿ ಕಾವ್ಯ ರಚಿಸಿರುವ ಶಂಕರ ಕವಿಯು ಕನಕರಂತೆ ವರ್ಣನಾಬಾಹುಳ್ಯವನ್ನು ತೋರಿದ್ದರೂ ಉತ್ತಮ ಷಟ್ಪದಿಕಾರನ ಸ್ಥಾನದಲ್ಲಿ ನಿಲ್ಲುವಷ್ಟು ಕಾವ್ಯಶಕ್ತಿ, ಶಬ್ದಶಕ್ತಿ, ನಾಟಕೀಯತೆ, ಸಂವಾದ ಕೌಶಲ್ಯವನ್ನು ಮೆರೆದಿದ್ದಾನೆಂದು ನಿಸ್ಸಂಶಯವಾಗಿ ಹೇಳಬಹುದು. ಪಿಂಡೋತ್ಪತ್ತಿ ಲಕ್ಷಣಗಳನ್ನು ಹೇಳಿರುವಲ್ಲಿ, ವೀರಶೈವ ದೀಕ್ಷೆಯ ವಿಧಾನವನ್ನು ತಿಳಿಸಿರುವಲ್ಲಿ ಶಂಕರಕವಿಯು ಭಿನ್ನನಾಗಿ ನಿಲ್ಲುತ್ತಾನೆಂಬುದು ಗಮನಾರ್ಹ. ಒಟ್ಟಿನಲ್ಲಿ ಶಂಕರಕವಿಯ ಉಭಯ ಭಾಷಾಪ್ರಭುತ್ವ, ವೀರಶೈವ ತತ್ವಗಳ ಸಂಕ್ಷಿಪ್ತದರ್ಶನ, ಅಪಾರವಾದ ಸಾಮಾಜಿಕತುಡಿತ ಮತ್ತು ಉತ್ತಮ ಷಟ್ಪದಿ ರಚನಾಸಾಮರ್ಥ್ಯಗಳಿಂದ ನಿಜಕ್ಕೂ ನವಮೋಹನ ತರಂಗಿಣಿಯು ನವೋನವವೆನ್ನುವ ರೀತಿಯಲ್ಲಿ ಮೋಹನಗೊಳಿಸುವ ಶೃಂಗಾರಕಾವ್ಯ.

೬.೫. ತೌಲನಿಕ ವಿವೇಚನೆ

ದಾಸಶ್ರೇಷ್ಠರಲ್ಲೊಬ್ಬರಾದ ಕನಕದಾಸರ ಪ್ರಸಿದ್ಧ ಸಾಂಗತ್ಯ ಕೃತಿ. 'ಮೋಹನ ತರಂಗಿಣಿ'ಯು ಶಂಕರಕವಿಯ ನವಮೋಹನ ತರಂಗಿಣಿ ಕೃತಿಯ ಮೂಲ ಆಕರ ಕಾವ್ಯ. ಮಹಾಕಾವ್ಯ ಮಾದರಿಯ 'ಮೋಹನ ತರಂಗಿಣಿ'ಯು "ಕನಕದಾಸರು ತಮ್ಮ ಅನುಭವದ ಮೂಸೆಯಲ್ಲಿ ಪರಂಪರಾಗತವಾದ ಪೌರಾಣಿಕ ಕಥೆಯನ್ನು ಕರಗಿಸಿ ನಿರ್ಮಿಸಿದ ಹೊನ್ನ ಪುತ್ಥಳಿಯಾಗಿದೆ. ಸ್ಕಂದ ಮಹಾಪುರಾಣ, ಮಹಾಭಾರತ, ಭಾಗವತ, ಹರಿವಂಶ, ವಿಷ್ಣುಪುರಾಣಗಳಲ್ಲಿ ಬರುವ ಮನ್ಮಥ ರತಿಯರ ಬದುಕಿನಲ್ಲಿ ಎದ್ದ ಬಿರುಗಾಳಿ ಮತ್ತು ಅದರಿಂದ ಅವರು ಹೊರಬಂದ ಕತೆಯನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಪಳಗಿಸಿದ್ದಾರೆ. ಶಿವನಿಂದ ಸುಟ್ಟುಹೋದ ಮನ್ಮಥ ಮರುಹುಟ್ಟನ್ನು ಪಡೆದು ರತಿಯನ್ನು ಮರಳಿ ಪಡೆಯುವ ಘಟನೆಯನ್ನು ಹಿನ್ನೆಲೆಯಾಗುಳ್ಳ ಈ ಕಾವ್ಯ ಮೂಲಕತೆಯಲ್ಲಿ ಇಲ್ಲದ ಅನೇಕ ಅಂಶಗಳನ್ನು ಒಳಗೊಂಡು ಒಮ್ಮೆಗೆ ಪುರಾತನ ಮತ್ತು ನೂತನಗಳನ್ನು ಹೊಯ್ ಕಯ್ಯಾಗಿಸಿದವಿನೂತನ ಕೃತಿಯಾಗಿದೆ."[೨೫] ಕಥಾವಸ್ತುವಿನ ದೃಷ್ಟಿಯಿಂದ ಶಂಕರಕವಿಯು ಮೋಹನ ತರಂಗಿಣಿಯನ್ನು ಮಕ್ಕೀಕಾಮಕ್ಕಿ ಎನ್ನುವಷ್ಟು ಯಥಾವತ್ತಾಗಿ ಅನುಸರಿಸಿದ್ದಾನೆ. ಆದರೂ ಕೆಲವು ಅಂಶಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಮೆರೆದಿದ್ದಾನೆ. ಕನಕದಾಸರು ಅಚ್ಚಗನ್ನಡ ದೇಸೀ ಛಂದಸ್ಸಾದ 'ಸಾಂಗತ್ಯ ಛಂದಸ್ಸ'ನ್ನು ಬಳಸಿದರೆ, ಶಂಕರಕವಿಯು 'ವಾರ್ಧಕ ಷಟ್ಪದಿ' ಛಂದಸ್ಸಿನಲ್ಲಿ ಕಾವ್ಯರಚನೆ ಮಾಡಿದ್ದಾನೆ.

> "ಪೂಸರ ದಹನ ಕಾಮೋತ್ಪತ್ತಿವರಶಂಬ
> ರಾಸುರವಧೆ ಕಂತುಸುತನ ಭಾಸುರಲೀಲೆ
> ಬಾಣನಗೆದ್ದ ಜವಯಲಕ್ಷ್ಮೀಶನ ಕಥೆಯ ವಿಸ್ತರಿಪೆ" (೧-೩೩)

ಎಂದು ಪೀಠಿಕಾಸಂಧಿಯಲ್ಲಿ ಹೇಳಿರುವ ಹಾಗೆ ಕನಕದಾಸರಿಗೆ ಅದು ಕೃಷ್ಣಚರಿತೆ. ವೈಷ್ಣವಧರ್ಮದ ಮಹತ್ವವನ್ನು ಸಾರುವ ಕಥೆ.

ಶಂಕರಕವಿಯ 'ನವಮೋಹನ ತರಂಗಿಣಿ'ಯು

> "ಶಿವನನರ್ಚಿಸುತ ಶಿವನೊಲಿಸಿ ಶಿವಕೃಪೆವಡೆದ
> ಅವಿರಳಾತ್ಮಕರ ಚಾರಿತ್ರಾಮೃತವನೆನ್ನ
> ಕಿವಿಗೆ ರತ್ನಾಭರಣ ಮಮರ್ದುಶೋಭಿಸುವಂತೆ ಬಿತ್ತರಿಸು ಚಿತ್ಕಾಂತನೇ"
>
> (೨ನೆಯ ಆಶ್ವಾಸ ಪಲ್ಲವಿ)

ಎಂದು ಕವಿಪತ್ನಿ ಹಂಬಲಿಸುವಲ್ಲಿ ಅಭಿವ್ಯಕ್ತವಾಗುವಂತೆ ಶಿವನೊಲವ ಪಡೆದವರ ಸತ್ಕಥೆ, ವೀರಶೈವ ಧರ್ಮದ ಮಹತ್ವವನ್ನು ಸಾರುವಕಥೆ ಹೀಗೆ ಮೇಲ್ನೋಟಕ್ಕೆ ಈರ್ವರ ಕಾವ್ಯಧೋರಣೆ ಬೇರೆ ಬೇರೆ ಎನಿಸಿದರೂ,

ಅವರೆಡರ ಆಂತರ್ಯದಲ್ಲಿ ಹರಿ-ಹರಸಾಮ್ಯತೆಯ ದೃಷ್ಟಿಕೋನವು ಮೂಲಶ್ರೋತಸ್ವಿನಿಯಾಗಿ ಹರಿಯುತ್ತಿರುವುದನ್ನು ಗುರುತಿಸಬಹುದು. ಶಂಕರಕವಿಯು ಬಹುತೇಕ ಕಡೆ ದಟ್ಟವಾಗಿ ಕನಕದಾಸರನ್ನು ಅನುಸರಿಸಿದ್ದರೂ ಅಲ್ಲಲ್ಲಿ ಸ್ವಂತಿಕೆಯನ್ನು ತೋರ್ಪಡಿಸಿದ್ದಾನೆ. ಸೋದಾಹರಣವಾಗಿ ಈ ಮುಂದಿನಂತೆ ವಿಶದಪಡಿಸುವ ಪ್ರಯತ್ನ ಇಲ್ಲಿದೆ.

ಕನಕದಾಸರು ಮೋಹನ ತರಂಗಿಣಿಯನ್ನು ತಮ್ಮ ಪತ್ನಿಗೆ ಹೇಳಿರುವಂತೆಯೇ ಶಂಕರಕವಿಯೂ ತಮ್ಮ ಹೆಂಡತಿಗೆ ಹೇಳಿಕೊಂಡಿರುವುದು ಕಂಡುಬರುತ್ತದೆ. ಕವಿ ನಿರೂಪಕನಾದರೆ ಆತನ ಪತ್ನಿ ಶ್ರೋತೃವಿನ ಸ್ಥಾನದಲ್ಲಿ ನಿಂತು ಮುದ್ದಣ ಮನೋರಮೆಯರ ಸರಸ ಸಲ್ಲಾಪದ ನೆನಪುತರುತ್ತಾರೆ.

ಉದಾಹರಣೆಗೆ:

> ''ಗುಟ್ಟಡರದೆ ಕಾದಚಿಲುಪಾಲು ಮಕ್ಷಿಕೋ
> ಚ್ಛಿಷ್ಟವಲ್ಲದ ಜೇನುತುಪ್ಪ
> ಕಟ್ಟುಬೀಳದ ಸಕ್ಕರೆ ಗಿಂದೆ ಸವಿವಾತ
> ನೆಟ್ಟನೆಪೇಳ್ವುದೆನ್ನೊಡನೆ'' (ಮೋ.ತ. ೨೩-೧)

ಎಂದು ಪತ್ನಿ ಕೇಳುತ್ತಾಳೆ. ಶಂಕರಕವಿಯ 'ನವಮೋಹನ ತರಂಗಿಣಿ'ಯಲ್ಲಿ ಕವಿಯು

> "ಸಕ್ಕರೆಯ ಜೇನಸವಿಗಿಮ್ಮಿಗಿಲು ಕೆನೆಗಟ್ಟಿವು
> ಕುಕ್ಕಿಕಾಯಚಿನಿಪಾಲರುಚಿಗಿಂದಧಿಕ
> ಅಕ್ಕರಿಮ್ಮಧುರಮಾವಿನರಸಾವಳಿಯೆಯಿನಿದಿಂಗೆದಶಮಡಿವಿಶೇಷಾ
> ಚಿಕ್ಕಪ್ರಾಯದ ಚೆಲುವೆಯಧರಾಮೃತವ ಪೀರ್ದು
> ಕಕ್ಕಸಕುಚಮನೆರ್ದೆಗಮರ್ಚುತ್ತೆ ಪೆರ್ಚೆವಳ
> ಸೊಕ್ಕದೆಕ್ಕೆಯ ಸುರತ ಸಾರಾಯರಸಭರಿತ ಸವಿಗಥೆಯ ಪೇಳ್ವೆಕೇಳಾ'' (೧-೨)

ಎಂದು ಶೃಂಗಾರಮಯವಾಗಿ ಸಂಬೋಧಿಸುತ್ತಾನೆ.

ಪ್ರಾರಂಭದಲ್ಲಿ ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ 'ಸೌರಾಷ್ಟ್ರವರ್ಣನೆ ಮತ್ತು ಶೋಣೀತಪುರ ವರ್ಣನೆ'ಗಳ ಸಂದರ್ಭದಲ್ಲಿ ಬರುವ ವರ್ಣನೆಗಳ ರೀತಿಯಲ್ಲಿಯೇ ನವಮೋಹನ ತರಂಗಿಣಿಯ 'ಶೋಣಿತ ಪುರವರ್ಣನೆ'ಗಳಲ್ಲೂ ಸಾದೃಶ್ಯತೆ ಕಂಡುಬರುತ್ತದೆ. ಕನಕರಂತೆಯೇ ಅಷ್ಟಾದಶವರ್ಣನೆಗಳ ನಿಯಮಕ್ಕೆ ಕಟ್ಟುಬಿದ್ದು ಇಲ್ಲಿಯೂ ಸಮುದ್ರ, ಹೇಮಾದ್ರಿಗಳ ವರ್ಣನೆ ಕಾಣಸಿಗುತ್ತದೆ. ಅದರ ದಕ್ಷಿಣಕ್ಕೆ ಭರತಖಂಡ, ಅಲ್ಲಿನ ಛಪ್ಪನ್ನ ದೇಶಗಳಲ್ಲಿನ ಪುಣ್ಯ ತೀರ್ಥಕ್ಷೇತ್ರಗಳಲ್ಲಿ ಗೋಮತಿ ತೀರದಲ್ಲಿರುವುದು ಶೋಣಿತಪುರ. ಅಲ್ಲಿ ನಿಷ್ಠಾವಂತ ಶಿವಭಕ್ತರಿದ್ದರು. ವೈಶ್ಯರು, ಶೂದ್ರರು, ಬ್ರಾಹ್ಮಣರಾದಿಯಾಗಿ ಎಲ್ಲರೂ ತಮ್ಮ ತಮ್ಮ

ಸ್ವಜಾತಿ ಧರ್ಮವನ್ನು ಬಿಡದೆ ಪರಿಪಾಲಿಸುತ್ತಿದ್ದರು. ಸಕಲವ್ಯವಹಾರಿಗಳ ಆಶ್ರಯ ಸ್ಥಾನವಾಗಿದ್ದ ಶೋಣಿತಪುರದಲ್ಲಿ

''ಪ್ರೀತಿಯಿಂ ಪರದೇಶದಿಂ ಬಂದ ಹರದಕುಲ
ಜಾತರೊಡಗೂಡಿ ಮಂಡಿಸಿಯವರು ತಂದಯತಿ
ನೂತನ ಸುವಸ್ತುಗಳನೆಲ್ಲ ಕ್ರಯಗೈವ ವರ್ತಕರು ಇಕ್ಕೆಲದೊಳೂ'' (೨-೪೫)
''ರನ್ನ ಪೊನ್ನುಗಳ ರಾಸಿಯಗುಡಿಸಿಕೊಂಡು ಸಂ
ಪನ್ನರಮ್ಮಣಿಗಣದ ಬೆಳಗಿನೊಳುಮುಳುಗಿ ಬಹು
ನಾಣ್ಯಗಳು ಕೊಳುತ ಕೊಡುತತರಿಸುವ ಬಲಾಢ್ಯರು'' (೨-೪೬)

ಇದ್ದರೆಂಬ ಚಿತ್ರಣವಿದ್ದರೆ ಅದೇ ಭಾವದ ಚಿತ್ರಣವನ್ನು ಕನಕರಲ್ಲಿ ಗುರುತಿಸುತ್ತೇವೆ.

ಉದಾಹರಣೆಗೆ: ದ್ವಾರಕಾಪುರದಲ್ಲಿ-

''ಚಪ್ಪನ್ನದೇಶದ ನಾಣೆಯಂಗಳ ನೋಟ
ತಪ್ಪದ ಚಪಲ ಸೆಟ್ಟಿಗಳು
ಒಪ್ಪವಡೆದು ಕುಳಿತಿರ್ದರು ಹಣ ಹೊನ್ನ
ಕುಪ್ಪೆಯ ಮುಂದಿಟ್ಟುಕೊಂಡು'' (ಮೋ.ತ. ೩-೨೭)

ವ್ಯವಹರಿಸುವವರಿದ್ದರು. ಆ ಪುರದ ಜನರು ವಿರಾಮ ಕಾಲದಲ್ಲಿ ಆನೆ, ಕುದುರೆ ರಥಗಳನ್ನೇರಿ ಭೂಕಾಂತರುಗಳು ವೈಹಾಳಿ ಕೇಳಿ ಮೇಳಗಳೊಡನೆ ಪ್ರವರ್ತಿಸುತ್ತಿದ್ದರು. ಸೊಕ್ಕಿದ ಟಗರು, ಕೋಳಿಗಳನ್ನು ಪಂಥಕಟ್ಟಿ ಕಾದಾಡಿಸುತ್ತಿದ್ದರಲ್ಲದೆ ತಮ್ಮ ತಮ್ಮಲ್ಲಿಯೇ ಬಾರಗುತ್ತಾದಿ ಬಹಜೂಜುಗಳನ್ನಾಡುತ್ತಿರೆಂಬುದನ್ನು ಶಂಕರಕವಿಯು ಯಥಾವತ್ತಾಗಿ ಸ್ವೀಕರಿಸಿದ್ದಾನೆ. ಕನಕದಾಸರದು ವೈಷ್ಣವಪರ ದೃಷ್ಟಿಕೋನವಾದರೆ ಶಂಕರಕವಿಯದು ಸರ್ವಂಶಿವಮಯಂ ದೃಷ್ಟಿಕೋನ, ಸುಸಂಸ್ಕೃತರಾದ ಅಲ್ಲಿನ ಜನರು

''ಶಿವಶಾಸ್ತ್ರ ಶ್ರವಣರುಂ ನಾಮೋಶ್ಚರಣರುಂ
ಶಿವಸದಾಚಾರರುಂಶಿವಮತೋದ್ಧಾರರುಂ
ಶಿವನಪದ ಪೂಜ್ಯರುಂದುರಿತ ಭಯತೇಜರುಂಶಿವಭಕ್ತಿಯುಕ್ತೀ
ಶಿವಯೋಗಸಾರರುಂ ಭವವೃಜಿನದೂರರುಂ
ಶಿವಜ್ಞಾನವಂತರುಂ ಪರಮನಿಶ್ಚಿಂತರುಂ
ಶಿವಶರಣಸಂಗಿಗಳು ಯಮಳಲಿಂಗಾಂಗಿಗಳು ಶಿವಸಮಯ ಸಾರಗುಣಿಗಳ್'' (೨-೫೧)

ಎಂದು ಕೀರ್ತಿಸುತ್ತಾನೆ. ಸ್ತ್ರೀಯರೂ ಕಡಿಮೆಯೇನಲ್ಲ .... ಅತಿನೀತಿ ಸರ್ವಸಮ್ಮತ ಸದಾಚಾರಿಯರು .... ಪತಿಯುತೆಯರಲ್ಲದಾ ಪಟ್ಟಣದೊಳಿಲ್ಲದುಸ್ತ್ರೀಯ್ಯರೆಲೆಕಂಬು ಕಂಠೀ" (೨-೫೩) ಎಂದು ತುಂಬ ಗೌರವಾನ್ವಿತವಾಗಿ ಚಿತ್ರಿಸುತ್ತಾನೆ. ನಂತರ ಬರುವ ವೇಶ್ಯಾಗೃಹಗಳ ಚಿತ್ರಣದಲ್ಲಿ ಮೂಲ ಆಕರ ಕಾವ್ಯವನ್ನು ಅನುಸರಿಸುವ ಕವಿ ಅಷ್ಟಾದಶವರ್ಣನೆಗಳ ಮೋಹಕ್ಕೆ ಕಟ್ಟುಬಿದ್ದಿರುವುದು ಸ್ಪಷ್ಟವಾಗುತ್ತದೆ.

> ''ಬಾಣಾಸುರನ ವರ್ಣನೆ ಮಾಡುತ್ತ ಶಂಕರಕವಿಯು
> ಬಾಣನುಂ ಸಕಲಪ್ರವೀಣನುಂ ಗುರುಭಕ್ತಿ
> ಪ್ರಾಣನುಂ ಶಿವಮಂತ್ರ ತ್ರಾಣನುಂ ಪರಸಮಯ
> ಕ್ಷೀಣನುಂ ಶಿವಮತಾಕ್ಷೀಣನುನ್ನತಮಿತಗೀರ್ವಾಣನುಂ" (೩-೧೨)

ಎಂದು ಹೇಳುವಲ್ಲಿ ಆತನ ಶೈವನಿಷ್ಠೆ ಮತ್ತು ಪರಧರ್ಮಗಳು ತದನಂತರದ ಪ್ರಾಶಸ್ತ್ಯ ಪಡೆದಿದ್ದವೆಂದು ಹೇಳುವುದು ಮೂಲದಲ್ಲಿಲ್ಲ. ಹಾಗೆಯೇ ಕುಲಗುರು ಸುಭಾರ್ಗವಾಚಾರ್ಯರನ್ನು ಅತಿಶಯ ಸುಸದ್ಭಕ್ತಿಯಿಂದೊಲಿಸಿ ಆತನಿಂದ ವೀರಶೈವದೀಕ್ಷೆ, ಉಪದೇಶ, ಇಷ್ಟಲಿಂಗ ಪಡೆದು ತ್ರಿಕಾಲಗಳಲ್ಲಿ ಶಿವಲಿಂಗವನ್ನು ಪೂಜಿಸುತ್ತಿದ್ದ ಪ್ರಸ್ತಾಪವು ಶಂಕರಕವಿಯ ಸ್ವಂತ ಸೃಷ್ಟಿ.

ಸುರರ ಉಳಿವಿಗಾಗಿ ಬೃಹಸ್ಪತಿಯು ಅವರ ನಿರೂಪ ಹೊತ್ತು ಬರುವ ಸನ್ನಿವೇಶದ ನಂತರಸುರಗುರು ಬೃಹಸ್ಪತಿಯ ಮಾನಸಿಕ ಹೊಯ್ದಾಟ ಮೂಲದಲ್ಲಿಲ್ಲ. ಶಂಕರಕವಿಯ ಲೋಕಜ್ಞಾನ. ಮಾನವೀಯ ಭಾವಗಳು ಇಲ್ಲಿ ತುಂಬ ಚೆನ್ನಾಗಿ ಮೂಡಿಬಂದಿವೆ. ಇಲ್ಲಿ ಪ್ರಕಟವಾಗುವ ಅಂತರಂಗ ನಿರೀಕ್ಷಣಾ ಪ್ರಜ್ಞೆ, ಔಚಿತ್ಯ ಪರಿಜ್ಞಾನ ಶಂಕರಕವಿಯನ್ನು ಕನಕರಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ ಮಾತ್ರವಲ್ಲ. ಮೂಲ ಆಕರಕಾವ್ಯಕ್ಕಿಂತ ಈ ಭಾಗದಲ್ಲಿ ಶಂಕರಕವಿಯು ಮಾಡಿಕೊಂಡಿರುವ ಮಾರ್ಪಾಟು ಕವಿಯ ಬಗೆಗೆ ಗೌರವ ಹುಟ್ಟಿಸುತ್ತದೆ.

''ಶಶಿಯೆಡೆಗೆ ಅಷ್ಟನಿಗ್ರಹ ಬರ್ಪಂತೆ" (೪-೧೯) ಬ್ರಹ್ಮಾದಿಗಳಿಂದ ಬೀಳ್ಕೊಂಡು ಮನ್ಮಥನಿದ್ದೆಡೆಗೆ ಹೋಗುತ್ತ ತನ್ನೊಳಗೆ ನೆನೆದುಕೊಂಡು ಈ ರೀತಿ ದುಃಖಿಸುತ್ತಾನೆ.

> ''ಹೆರರಮಕ್ಕಳ ಭಾವಿಯೊಳುಕೆಡಹಿ ನೆಲೆನೋಳ್ಪ
> ಪರಿಯಾಯ್ತು ಮೂರುಲೋಕವ ಮೋಹಿಸುವ ಚಲ್ವ
> ಸ್ಮರಕುಮಾರಕನ ಯೀಶನತಪೊ ಭ್ರಷ್ಟನಂಮಾಡಕಳುಹವುಳಿವನೇ
> ಹರಿಯಜೇಂದ್ರಾದಿಗಳು ತಮ್ಮ ವುಳುಮಿಗೆ ಯಿವನು
> ಮರಣವಾದನೆಂಬುದರಿಯರೆ ಯೀಗೊನ್ನಗುರಿಯ ಮಾಡಿ
> ದರು ಪರಹಿಂಸೆಯಪಕೀರ್ತಿಗೆಂದೆನುತ ಮನದೊಳು ನೆನವುತಾ" (೪-೨೦)

ಸಂಕಟಪಡುತ್ತ, ಮೋಸದಿಂದ ಕಳುಹಬೇಕಲ್ಲಾ ಅಯ್ಯೋ! ಕಳುಹದೆ ಇದ್ದರೆ ''ತಾರಕನ ಉಪದ್ರವವದು ನೀಗಲರಿಯದು, ಸಕಲ ಸುರಗಣಕ್ಕೆ ಅಳಿವಾಗುವುದು, ಆಗಬರುವ ಅಪಕೀರ್ತಿ ಈಗಲೇ ಬರಲೆಂದು ನಿಶ್ಚಯಿಸಿಕೊಂಡು ಬರುತ್ತಿದ್ದನು. ಆಗ ಕಂಡುಬರುವ ಕುಸುಮಾವತಿಯ ಪಟ್ಟಣದ ವರ್ಣನೆಗಳಲ್ಲಿಯೂ ಶಂಕರಕವಿಯು ತನ್ನ ವಿಶಿಷ್ಟತೆಯನ್ನು ಮೆರೆದಿದ್ದಾನೆ. ಆ ಪಟ್ಟಣದ ಎಳೆವೆಣ್ಣುಗಳು ಮದನಮೋಹನನ ಅಂಕದಾನೆಗಳಂತೆ, ಮಾರನಮಳಮಂತ್ರದ ಮೂರ್ತಿಯಂತೆ, ವಿರಹಾಗ್ನಿಯುರಿಗಳೋ ಎಂಬಂತೆ ಗುರುವರನ ಕಟ್ಟೆದಿರಿನಲ್ಲಿ ಬರುತ್ತಿದ್ದಾರೆ. ಅವರನ್ನು ನೋಡುತ್ತ ತನ್ನ ಮನದಲ್ಲಿ ಮಾರನ ಮೋಹದ ಬೀಜ ಅಂಕುರಿಸದಂತೆ ಮಂತ್ರೋಚ್ಚಾರಣೆ ಮಾಡುತ್ತ ನಿಶ್ಶಂಕೆಯಿಂದ ಬರುತ್ತಿದ್ದನೆಂಬುದು ಮೂಲಕ್ಕಿಂತ ಸೊಗಸಾದ ಗಂಭೀರ ಸಹಜ ಚಿತ್ರಣ! ಶಂಕರಕವಿಯ ಮನೋವ್ಯಾಪಾರಗಳ ಕುರಿತಾದ ಅರಿವಿನ ಕುಶಲತೆ ಓದುಗನಲ್ಲಿ ಹೆಮ್ಮೆಯುಂಟುಮಾಡುತ್ತದೆ. ಮುಂದಿನ ಹಂತದಲ್ಲಿ ಕಾಮ ಮತ್ತು ಬೃಹಸ್ಪತಿಗಳ ಮಧ್ಯೆದಲ್ಲಿನ ಸಂಭಾಷಣೆ ಮೂಲಕ್ಕಿಂತ ಮಾರ್ಮಿಕವಾಗಿದೆ. ವಿಸ್ತಾರವಾಗಿದೆ. ಕಾಮನಿಗೆ ಬೋಧಿಸುವ ಗುರುವಿನ ಮಾತುಗಳನ್ನು ಮಾತ್ರ ಯಥಾವತ್ತಾಗಿಯೇ ಸ್ವೀಕರಿಸಿದಂತಿದೆ.

ಉದಾಹರಣೆಗೆ : ಮೋಹನ ತರಂಗಿಣಿಯಲ್ಲಿ

ಯೋಚಿಸಿ ಮಾತಾಡು ಪರಹಿತಕಾಗಿದ
ಧೀಚಿ ತನ್ನೊಡಲಮಾಂಸವನು
ಚಾಚಿದ ಸುರಪಶುವಿಂಗೆ ಬೆನ್ನಸ್ಥಿಯ
ಸೂಚಿಸಿ ಸುರಪಂಗೆ ಕುಡನೆ'' (೫-೫೨)

''ಹೋಗಲದೇನು ದೊಡ್ಡಿತು ಮಾಂಧಾತಸು
ತ್ಯಾಗವಬೇಡ ಬಂದವಗೆ
ರಾಗದಿಂದೊಡಲಧಿಕ್ಕನೆ ಸೀಳ್ದುದಕ್ಷಿಣ
ಭಾಗವ ಕೊಟ್ಟುದನರಿಯ'' (೫-೫೪)

''ರಾರಾಜಿಪ ಯೌವನ ಮೇಘದೊಡ್ಡಣೆ
ನೀರಬೊಬ್ಬುಳಿಕೆಯಂ ತೊಡಲ
ಆರಿದನಚ್ಚಿದುದಿಲ್ಲವು ಲೋಕೋಪ
ಕಾರವೆ ಕೈವಲ್ಯವಹುದು'' (೫-೫೫)

''ನವಮೋಹನ ತರಂಗಿಣಿಯಲ್ಲಿ
ನಿತ್ಯವೇಯೀದೇಹ ನೀರಬೊಬ್ಬುಳಿಗುಳ್ಕೆ

ಬಿತ್ತರದಿ ತೋರಿಯಡಗುವತೆರನು ಯೀತನುವು
ಯೆಂದಿರ್ದರಳಿವುತಿಹುದೂ'' (೫-೧೩)

''ಬಂದಯಾಚಿಕಗೆ ತನುಕೊರದಿತ್ತ ಮಹಂಧಾತ
ಬಂಧುರದ ಶ್ರೀಜಿತನು ಮಾಂಸಸುರಭಿಗೆಯಿತ್ತ ಯಿಂದ್ರಂಗೆ
ತನ್ನ ಬೆನ್ನಸ್ತಿಯನು ಹಿರಿದಿತ್ತಮವರ ಜಸಮೂಲೋಕದೀ'' (೫-೧೪)

''ಅಳಿದೋರ್ವನನಿಬರನುಳುವುಹುದೆ ಧರ್ಮ'' (೫-೮)

ಎಂದು ನಂಬಿದ ಕಾಮನು ಏನಾದರಾಗಲೆಂದು ನಿಶ್ಚಯಿಸಿ ತನ್ನ ಪರಿವಾರದೊಡನೆ ಶಿವನ ತಪೋಭಂಗಕ್ಕೆ ಸಿದ್ಧನಾಗುತ್ತಾನೆ.

ಮನ್ಮಥನ 'ದಂಡಯಾತ್ರೆ'ಯ ಸಂದರ್ಭದಲ್ಲಿನ ರತಿಯ ಚಿತ್ರಣ ಗಮನಾರ್ಹವಾಗಿದೆ.

ಮೋಹನ ತರಂಗಿಣಿಯಲ್ಲಿ ರತಿಯು ವಿನೀತಭಾವದಿಂದ ಪತಿಕಾಮನೊಡನೆ ಚರ್ಚಿಸುವಳು.

ಪತಿವಚನಕೆ ಮಾರ್ನುಡಿವುದುಂಟಾದೊಡಾ
ಸತಿಗೆ ನಿಷ್ಕೃತಿಯಿಲ್ಲೆಂಬ
ಶ್ರುತಿಯಿದೆ ನಿಮಗೆ ನಾನುಸಿರಲಮ್ಮೆನುಯೆಂದು
ರತಿ ಬಿನ್ನಹವಮಾಡಿದಳು'' (೬-೭)

''ಮೂಡರಂದದೊಳೂರ ಗುದ್ದಲಿಯನು
ಕೊಂಡು ನಾಡಕಾಲುವೆಯ ತಿದ್ದುವರೆ
ಬೇಡ ಲಲಾಟನೇತ್ರನ ಕೂಡೆಕಲಹಕ್ಕೈ
ಗೂಡದೆಂದೊಲಿದು ಪೇಳಿದಳು'' (೬-೮)

ಎಂದು ಚುಟುಕಾಗಿ ಮೂಡಿಬಂದಿದೆ. ಆದರೆ 'ನವಮೋಹನ ತರಂಗಿಣಿ'ಯಲ್ಲಿ 'ರತಿ'ಯ ಪ್ರತಿಭಟನೆಯ ಧ್ವನಿಯು ಮೂಲಕ್ಕಿಂತ ವಿಶಿಷ್ಟವಾಗಿದೆ. ಮಾತ್ರವಲ್ಲ ತುಂಬವಿಸ್ತಾರವಾಗಿದೆ. ಪರಿಪರಿಯಾಗಿ ತನ್ನ ಪತಿಗೆ ತಿಳಿ ಹೇಳುವ ಆರ್ತ ಚಿತ್ರಣವಿದೆ. ಅನಿವಾರ್ಯವಾಗಿ ಪತಿಯನ್ನು ಬೀಳ್ಕೊಳ್ಳುವಾಗ ಗದ್ಗದಕಂಠಿ ತಳಾಗುವ ಚಿತ್ರ ಎಂಥ ನಿಷ್ಕರುಣಿಯೂ ಕರುಣಾರ್ದ್ರನಾಗುವಂತೆ ಮಾಡುತ್ತದೆ. ಅಂತಹ ಮಾರ್ಮಿಕ ಚಿತ್ರಣ ಶಂಕರ ಕವಿಯದು. ಮೂಲಕ್ಕಿಂತ ಪರಿಣಾಮಕಾರಿಯಾದ ಸೊಗಸಾದ ವರ್ಣನೆಗಳು, ಸನ್ನಿವೇಶಗಳು ಇಲ್ಲಿ ಕಾಣಸಿಗುತ್ತವೆ. ಉದಾ: ಶಿವನ ತಪೋಭಂಗಕ್ಕೆ ನಿಶ್ಚಯಿಸಿ ಹೊರಡಲುನುವಾದ ತನ್ನ ಪತಿಯ ವಿಷಯ ಕೇಳಿ ರತಿ

"…. ತನ್ಮನದಿ ಚಿಂತಿಸುತೆ ಮೊಗ
ಚಂದ್ರಮನರಾಹುಗ್ರಾಸಗೊಂಡಂತೆ ಕಳೆಗುಂದಿಕಂಬನಿಯ
ಮುಂಬನಿಯಾಂತು ಹಸ್ತಾಬ್ಜಮುಕುಳದಿಂದೇ" (೫-೧೯)

'ನಿಂದು ತೇಲ್ನೋಟದಿಂದಾಸ್ಯಮನೀಕ್ಷಿಸಲು' (೫-೨೦)

ಇದೊಂದೇ ಸಾಲು ಸಾಕು, ರತಿಯ ಆತಂಕವನ್ನೆಲ್ಲ ಓದುಗನಿಗೆ ಪರಿಚಯಿಸಲು.

ಆಗ ಕಾಮನು ಹಗಲಲ್ಲಿ ಮೆರೆವ ಇಂದು ಮಂಡಲದಂತಾದ ತನ್ನಂಗಿಯಳಮೊಗವನ್ನು ಕಂಡು ಅಪ್ಪಿ

"………………. ಸತ್ಸತಿಯ
ರಿಂದ ಸನ್ಮುಕ್ತಿ ಪತಿಗಹುದೆಂದು ನಿಗಮಾರ್ಥ
ಸಂದೋಹ ಮುಸುರುತಿರಲೆನ್ನನುಮಧೋಗತಿಗೆ ಸಾರ್ಚದಿರು…" (೫-೨೦)

ಎಂದು ಸಂಕಟ ನಸುಕೋಪದಿಂದ ತನ್ನ ಧರ್ಮ ಸಂಕಟವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದಾಗ

"ಸನುಮತವೆ ಬಲವಂತರೊಳು ಕಲಹ ಮುನ್ನಜೈಸಿದರಾರುಶಿವನಕೆಣಕೀ" (೫-೨೧)

"……..ನಿಮಗುತ್ತರವನಿತ್ತೊಡೆಮಗೆ ದೋಷವು
ತುಲಾರಾಸಿಯು ಸಿಖಿಯಕೆಣಕಿದಂತೆ" (೫-೨೨)

ಎಂಬಿತ್ಯಾದಿಯಾಗಿ ತಿಳಿ ಹೇಳುತ್ತಾಳೆ. ಆದರೂ ಮನ್ಮಥನು ಗುರುಗಳ ಮಾತಿಗೆ ತಪ್ಪೆನು, ತಪ್ಪಿದರೆ ಇಹಪರ ದೊಳ್ ಅಪಕೀರ್ತಿ, ದುರ್ಗತಿ ಎಂದು ಹೊರಡಲನುವಾಗುತ್ತಾನೆ.

ನೀನು ಸನ್ಮುಕ್ತಿ ಕನ್ನೆಯಳ ಸಂಪರ್ಕದಿಂದ ಸುಖಿಪುದು" (೫-೨೪)

ಎಂದು ಪತಿಯ ಪಾದಗಳಿಗೆರಗಿ ಮಂಡೆಯಂ ಸಾರ್ಚಿವಂದಿಸಲು ಚಿಪ್ಪೊಡೆದುದಿರ್ವ ದುಂಡುಮುತ್ತುಗಳ ಕಾಣ್ಕೆಸುರಿವಂದದಲಿ ಕಂಬನಿಗಳುದುರಿದವಂತೆ. ಗುರುವಾಜ್ಞೆಯಂ ನಡೆಸುವೆನು,ಒಂದೇ ಮನದಿಂದ ಕಳುಹೆನಲು ಪತಿಗೆರಗಿ ಮಗುಳೆರಗಿ ಪೋಪುದೆನಲು.. ಎಷ್ಟುಸಹಜವಿದು, ಎಂಥ ಕಠೋರ ಹೃದಯಿಗಳ ಕಣ್ಣೂ ತುಂಬಿ ಬರುವ ಆರ್ದ್ರದೃಶ್ಯ! ಕವಿಯು ಸುಂದರಶಿಲ್ಪಿಯಂತೆ ಕೆಲವೇ ಸಾಲುಗಳಲ್ಲಿ ಕಣ್ಕುಟ್ಟುವ ಚಿತ್ರವನ್ನು ಕಟೆದಿದ್ದಾನೆ.

ಕಾಮನು ತನ್ನ ಸೈನ್ಯದೊಡನೆ ಬರುತ್ತಿರುವಾಗ ಅಪಶಕುನಗಳಾದವು, ಆದರೂ ಅಂಜದೆ ಅಳುಕದೆ ಮುನ್ನಡೆದ ಎಂದು ಮೂಲದಲ್ಲಿ ಕಾಣಸಿಗುವ ಚಿತ್ರಣ ಇಲ್ಲಿಲ್ಲ.

ಕಾಮನ ಸೈನ್ಯದ ಆಗಮನದ ಪರಿಣಾಮದ ವಿವರಣೆಯಲ್ಲಿ ಕನಕದಾಸರು ಹಾಸ್ಯವನ್ನು ತಂದಿದ್ದಾರೆ.

ಉದಾಹರಣೆಗೆ:

''ದಂಡ ಕೃಷ್ಣಾಜಿನ ಜಪಮಾಲೆ ಧೋತ್ರಕ
ಮಂಡಲ ಕೂಡೆ ಸಂಪುಟವ
ಕೊಂಡುಯ್ಯದೆ ಮರೆದೋಡಿತು
ಮುನಿಗಳ ತಂಡ ಮನ್ಮಥನಬ್ಬರಕೆ'' (೬-೨೯)

ಆದರೆ 'ನವಮೋಹನ ತರಂಗಿಣಿ'ಯಲ್ಲಿ ತುಂಬ ಗಂಭೀರವಾದ ಶೈಲಿಯ ಚಿತ್ರಣ ಕಂಡುಬರುತ್ತದೆಯಲ್ಲದೆ ಕನಕದಾಸರ ವರ್ಣನೆಗಳನ್ನೇ ಅಲ್ಲಲ್ಲಿ ಯಥಾವತ್ತಾಗಿ ಸ್ವೀಕರಿಸಿರುವುದು ಕಂಡು ಬರುತ್ತದೆ. ಹೀಗೆ ಅನುಕರಣೆ ಮತ್ತು ಸ್ವೋಪಜ್ಞತೆಗಳೆರಡೂ ಇಲ್ಲಿ ಮೇಳೈಸಿವೆ.

ಯಥಾವತ್ತಾದ ಅನುಕರಣೆಗೆ ಉದಾ:
.... ಕಾತರಿಸುತೆದ್ದು ಜಪಸರಯೋಗದಂಡಶ್ರೀ
ಭೂತಿಘುಟಿಕೆಯ ಕಮಂಡಲಮವ್ಯಾಘ್ರಾಸನ
ವ್ರಾತಗಳನುಳಿದು ಮುಡಿಗೆದರಿ ನಿಡುಜಡೆಗಳೆಳೆವುತ್ತೆ ಯತಿಭಯದಿಪರಿದೂ''(೬-೨೪)

ತಪೋಮಗ್ನನಾದ ಶಿವನ ಚಿತ್ರಣವು ಇಲ್ಲಿ ತುಂಬ ಗಂಭೀರವಾಗಿ, ತಾತ್ತ್ವಿಕ ವಿವರಣೆಯೊಂದಿಗೆ ಮೂಡಿಬಂದಿದೆ (೬-೨೬) ಪ್ರಳಯಕಾರಕ ಉತ್ಪಾತಗಳನ್ನುಂಟು ಮಾಡುತ್ತಿದ್ದ ಮಾರನಿಗೆ ''ನಂದೀಶನು ಎದುರಾದ ಪ್ರಸಂಗ'' ಮೂಲದಲ್ಲಿ ನಾಮ ಮಾತ್ರಕ್ಕೆ ಬಂದಿದೆ. ಆದರೆ ನವಮೋಹನ ತರಂಗಿಣಿಯಲ್ಲಿ ತುಂಬ ಸೊಗಸಾಗಿ ನಾಟ್ಯವತ್ತಾಗಿ ಚಿತ್ರಿಸಲ್ಪಟ್ಟಿದೆ. ಕೆಲವು ಸೂಕ್ಷ್ಮವಾದ ಒಪ್ಪಲರ್ಹವಾದ ವ್ಯತ್ಯಾಸಗಳನ್ನು ಶಂಕರಕವಿಯು ಇಲ್ಲಿ ಮಾಡಿಕೊಂಡಿದ್ದಾನೆ.

ಮೋಹನ ತರಂಗಿಣಿಯಲ್ಲಿ

''ಸಂದಿಸಿ ಹೊಗುವೆನೆಂದೆನಲು ಬಾಗಿಲೊಳಿರ್ದ
ನಂದೀಶ ಮುರಿಯಲಿಕ್ಕಿದನು
ಕಂದಿದವದನದೊಳೆಸೆವಕಂದರ್ಪಗೆ
ಬಂದಿದಿರಾದಳಾಗಿರಿಜೆ'' (೭-೨೧)

ಎಂದು ತುಂಬ ಚುಟುಕಾಗಿದೆ. ನವಮೋಹನ ತರಂಗಿಣಿಯಲ್ಲಿ

''ಪರತರದ ತಪವಕೆಡಿಸುವೆನೆಂದು ಬರ್ಪನವ
ನಿರಿದುಕೆಡಹುವೆನೆನುತ ಕೋಪಾಗ್ನಿ ವಡಲೊಳಂ
ಯಿರದೆ ಹೊತ್ತುತ್ತ ಹೊನಲೇರಿಭುಗಿಭುಗಿಸುತ್ತೆ ಪೊಗೆಸೂಸಿ ನಾಸಿಕದೊಳೂ

ವುರಿಯ ಮುಕ್ಕುಳಿಸುತ್ತೆ ನೇತ್ರಯುಗಳಂಗಳಲಿ
ಕರೆವುತ್ತೆ ಕೆಂಗಿಡಿಗಳಂನೆದ್ದು ಚರದಿಂ
ಧರೆಯಗೆದರುತ್ತೆ ಬಾಲಮಮಿಡಿದುಭಯಕರ್ನಂಗಳಂ ನಿಮಿರ್ಚಿನೆಲನಾ'' (೬-೪೪)

''ವಡೆನೆಘ್ರಾಣಿಸುತ ಡುರುಕಿಡಲಜಾಂಡದಘುಟಂ
ನಡುಗಿತ್ತು ಪೊಡವಿನಗ್ಗಿದುದುಯಹಿಪತಿಸಹಸ್ರ
ಪೆಡೆಗಳಂಕುಸಿಯೆ ಕೂರ್ಮನಬೆನ್ನುಬಿರಿವೊಲಾ ಯಷ್ಟದಿಕ್ಪಾಲಶೈಲಂಗಳೂ
ಗಡಗಡನೆ ವುರುಳಿದವು ಸಪ್ತಸಾಗರಮಿರದೆ
ಸಿಡಿಮಿಡಿಯೊಬ್ಬುಳಿಯುಮಾಗಿ ಪರಿಯಲ್‌ಸ್ಮರನ
ಪಡೆಬೆದರ್ದುಗಗನ ಪಥಮನಡರ್ದು ಗಮನಿಸಿ ಮಾರಧನು ಬತ್ತಳಿಕೆಯಾ'' (೬-೪೫)

''ಬಿಸುಟುಯದೆತಲ್ಲಣಗೊಂಡು ಹೃದಯಕಂ
ಪಿಸುತಲೋರ್ವನಿಂದು ಕಂಗೆಟ್ಟು ನೋಡುತಿರೆ
ವೃಷಭ ಕೆಕ್ಕರಿಸಿ ಕತ್ತಮ ಕೊಡಹಿಶೃಂಗಗಳ ಸಾರ್ಚಿಶಳಿವೆನೆನುತೇ
ಬಿಸಿಗೋಪದಿಂದಲುರವಣಿಸಿ ಬರುತಿರಲಿರದೆ
ಕುಸುಮಾಸ್ತ್ರ ನೆರ್ದಗೆಟ್ಟೋಡಿ ವೃಕ್ಷಮನಡರೆ
ಶೆಸಿವದನೆ ಗಿರಿಜಾತೆಯೀಕ್ಷಿಸುತಲಿ''..... (೬-೪೬)

ಇದು ರೌದ್ರ-ಭಯಾನಕ-ಹಾಸ್ಯಗಳು ಮುಪ್ಪುರಿಗೊಂಡ ಸನ್ನಿವೇಶ! ಇಲ್ಲಿ ನಂದೀಶನ ಶಿವನಿಷ್ಠೆ ಮೂಲಕ್ಕಿಂತ ಸೊಗಸಾಗಿ ಚಿತ್ರಣಗೊಂಡಿದೆ.

ಮೂಲಕಾವ್ಯದಲ್ಲಿ ಶೈಲಜೆಯು ನಂದೀಶನಿಂದಾಗಿ ಮುಖಬಾಡಿಸಿಕೊಂಡು ಬರುತ್ತಿದ್ದ ಮನ್ಮಥನ ಆಗಮನದ ಕಾರಣವನ್ನು ತಿಳಿದು ''ತಲೆಬಲ್ಲಿತೆಂದು ಕಲ್ಲನೆಹಾಯಬೇಡ'' (೭-೨೩) ಎಂದು ವಾತ್ಸಲ್ಯಭಾವ ಉಕ್ಕಿ ತಡೆಯುವ ಪ್ರಯತ್ನ ಮಾಡುತ್ತಾಳೆ. ಕೊನೆಗೆ ಸ್ಮರನು ತನ್ನ ಕಾರ್ಯದ ಘನೋದ್ದೇಶವನ್ನು ಹೇಳಲು ನಂದೀಶನಿಗೆ ಕಾಣದಂತೆ ಮನ್ಮಥನು ಶಿವನಲ್ಲಿಗೆ ಹೋಗಲು ಸಹಕರಿಸುವಳು, ಆದರೆ 'ನವಮೋಹನ ತರಂಗಿಣಿ'ಯಲ್ಲಿ ಶಂಕರಕವಿಯು ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾನೆ.

''ನಂದೀಶನಿಗೆ ಹೆದರಿ ವೃಕ್ಷವನ್ನಡರಿದ ಸ್ಮರನನ್ನು ಕಂಡ ತಕ್ಷಣವೇ
ಇವನಿಂದಲೇ ಈಶನು ಉಗ್ರತಪವುಳಿದು
ತನ್ನ ಕಂಡಮಾತ್ರವೊಲಿದಪನೆನುತ ಬೇಗನೆ'' (೬-೪೭)

ನಂದೀಶನೆಡೆಗೈದಿ ಶ್ರೀಹಸ್ತಂಗಳಿಂದ ತಡೆದು ಆದ್ಯಂತ ತಿಳಿಸಿಕೋಪವನ್ನು ಬಿಡಿಸಿ ಮಾರನಿಗೆ ನೀಬಂದ ಕಾರ್ಯವನ್ನು ನೆರವೇರಿಸು ಎಂದು ಬೋಧಿಸುವಳು

ಮೂಲದಲ್ಲಿ ಧ್ಯಾನಾಸಕ್ತನಾದ ಶಿವನ ಚಿತ್ರಮೊಟುಕಾಗಿ ಬಂದಿದ್ದರೆ, ಇಲ್ಲಿ ಸ್ವಲ್ಪ ವಿವರವಾಗಿರುವುದು ಶಿವಕವಿಯಾದ ಶಂಕರಕವಿಯ ಶೈವಭಕ್ತ ಪ್ರಕೃತಿಗೆ ಸಹಜವೆನಿಸುತ್ತದೆ.

'ರತಿಯ ಪ್ರಲಾಪ'ದ ಸಂದರ್ಭದಲ್ಲಿ ಮೂಲದ ಅನೇಕ ಭಾಗಗಳು ಯಥಾವತ್ತಾಗಿ ಬಂದಿದ್ದರೂ ಸಂದರ್ಭಸಿಕ್ಕಾಗಲೆಲ್ಲ ಸಮರ್ಥವಾಗಿ ಬದಲಾವಣೆ ಮಾಡಿಕೊಂಡಿರುವ ಶಂಕರಕವಿಯು ಸ್ವೋಪಜ್ಞತೆಯನ್ನು ಮೆರೆಯುತ್ತಾನೆ. ರತಿಯ ಗೆಳತಿಯರು ಆಕೆಯನ್ನು ಶಿವನಲ್ಲಿಗೆ ಕರೆತರುತ್ತಾರೆ. ಪರಿಪರಿಯಾಗಿ ರತಿದೇವಿಯು ತನ್ನ ಕಾಂತಕಾಮನನ್ನು ಬಣ್ಣಿಸುತ್ತ, ಕರೆಕರೆದು ಅಳುತ್ತ ಬರುತ್ತಿರಲು 'ವೃಷಭರಾಜ'ನನ್ನು ಕಂಡು ಆರ್ತಳಾಗಿ ಪ್ರಶ್ನಿಸುವಭಾಗ ಶಂಕರಕವಿಯ ಸ್ವಂತ ಸೃಷ್ಟಿ ವೃಷಭರಾಜನಿಗೆ ಕರಮುಗಿದು ಪೊಡಮಟ್ಟು

''ಧರ್ಮಸ್ವರೂಪಿ ನೀನಿರ್ದುಗರ್ವದಿಯಿಕ್ಷು
ಧರ್ಮಯೀಶಂಗವಿಸಿಕಂಗಳ ಪ್ರಯೋಗಿಸಲು
ದುರ್ಮರಣಮಪ್ಪುದೆಂದರುಹಬಾರದೆ ಸುಮ್ಮನಿಹರೆ ಸರ್ವಜ್ಞರುಗಳೂ''
''ಘರ್ಮಾಂಶುಕೃತಕೋಟಿಸುಪ್ರಕಾಶನುದಹ
ಧರ್ಮಾಂಬಕಮ ತೆರೆವ ಸಮಯ ತಪಸಿಗೆ ಹಿಂಸೆ
ಕರ್ಮತರವಲ್ಲೆಂದುಯತಿಶಾಂತಿಯಿಂ ತಿಳುಪಿಬಿಡಸದಾದಿರಿಯಕ್ಕಟಾ'' (೭-೨೬)

ಎಂದು ತಿಳಿಸಿ ಹೇಳುವ ಅವಕಾಶವಿದ್ದರೂ ತಿಳಿಸದೇ ತನ್ನ ಪತಿಯನ್ನು ಬಲಿಯಾಗಿಸಿದಿರಲ್ಲಾ ಆತನೇನು ನಿಮಗೆ ಹಗೆಯೆ ಎಂದು ರೋದಿಸುವ ದೃಶ್ಯಕರುಳು ಹಿಂಡುತ್ತದೆ. ಪರಶಿವನ ಶಿರದಲ್ಲಿರುವ 'ಗಂಗೆಯನ್ನು ದೂಷಿಸುವ ಸನ್ನಿವೇಶವಂತೂ ತಂಬಮಾರ್ಮಿಕ |

''ಯಲ್ಲ ಸತ್ಪುರುಷರನು ಬಿಡದೆ ಕಾಡುತಲಿಹನು
ಫುಲ್ಲಶರನೆಂದವರು ಸುಮ್ಮನಿರ್ದೊಡೆಯಿರಲಿ
ಯಲ್ಲ ಪೆಂಣುಗಳ ಸುಖದುಃಖವಂದಲ್ಲವೆ ಯನ್ನ ಪುರುಷನ ಯಿಶನೂ
ಕೊಲ್ಲಲಿಚ್ಛೈಸೈ ಕಣ್ದೆರೆವಾಗ ನೀನು ಶಿರ
ದಲ್ಲಿರ್ದು ಸರಸರಿಯಪರಿಸಿನಿಟಿಲಾಗ್ನಿಯನು
ಮಲ್ಲೆನಿಲ್ಲಿಸದಾದೆಯನುತಗಂಗಾದೇವಿಯನ್ನು ಬೈದಳಲ್ವತ್ತಳೂ'' (೭-೨೮)

ಹಾಗೆಯೇ ಮೃಡನು ಕಿಡಿಗಣ್ಣ ತೆರೆವಾಗ ಅವನ ಮುಡಿಯಲ್ಲಿದ್ದ ಚಂದಿರನಿಗೆ

''.......... ಜಾಮಾತ ತಾಂ
ಮಡಿಯೆ ಮಗಳೆಂತು ಬಾಳುವಳೆಂದು ಮನದಿಯತಃಕರುಣಪುಟ್ಟದಾಯ್ಕೆ..
.... ಶಾಂತಿಕರದಿಂ ನಯನ ಮುಚ್ಚುತ್ತ
ಜಡಜನಾರಾಚನವುಳುಹಿಕೊಳದಾದೆಯ'' (೭-೨೯)

ಎಂದು ಉಡುಪತಿಯನ್ನು ಶಪಿಸುವಳು. ಒಡಲಕಿಚ್ಚನ್ನು ತಾಳಲಾರದೇ ಶಿವನನ್ನೂ ಅತಿಕೋಪಿ, ನಿನಗೆ ಶಾಂತ ಶಂಕರನೆಂಬ ಹೆಸರೇಕೆ? ಎಂದು ದೂಷಿಸುವಲ್ಲಿ ಅವಳ ರೋಷ, ಆವೇಶ, ಆಕ್ರೋಶ, ದುಃಖ ಅಸಹಾಯಕತೆಗಳಲ್ಲಿ ತೀವ್ರತರ ಶೋಕಮಡುಗಟ್ಟಿ ನಿಂತಿದೆ. ತನ್ನ ಪಾದಾರವಿಂದಗಳಲ್ಲಿ ಬಿದ್ದುರೋದಿಸುತ್ತಿರುವ 'ರತಿ'ಯನ್ನು ಶೈಲಜೆಯು ಸಂತೈಸುವ ಚಿತ್ರಮೂಲವನ್ನು ಯಥಾವತ್ತಾಗಿ ಅನುಸರಿಸಿದ್ದು, ಮಾತೃ ಸಹಜ ಪ್ರೀತಿಯನ್ನು ಸಂಕೇತಿಸುತ್ತದೆ. ಹರನಿಂದ ಮಾರನನ್ನು ಮರಳಿ ಪಡೆಯುವ ಅಭಯವನ್ನು, ಹರಕೆಯನ್ನು ಹೊತ್ತು ರತಿಯು ಗಿರಿಸುತೆಗೆ ಮಣಿದು ಕೃತಜ್ಞತೆಸಲ್ಲಿಸಲು ಆಡುವ ಮಾತು, ಸನ್ನಿವೇಶ, ಕವಿಯ ಸ್ವಂತ ಸೃಷ್ಟಿಯಾಗಿದ್ದು, ಕವಿಯ ಲೋಕಾನುಭವಕ್ಕೆ ಕನ್ನಡಿ ಹಿಡಿಯುತ್ತದೆ.

''ಯನ್ನ ಜನನಿಯೆ ಯನ್ನ
ಘನದುಃಖ ಬೇಗೆಯನ್ನಿಮ್ಮದಯಾವರುಷಗರಿಸಿ ನಂದಿಸಿದೆ ತಾಯೆ
ವುಣಲುಡಲು ಸುಖಿಪಾಗ ಸಕಲಬಂಧುಗಳೆಲ್ಲ
ತನಗೆಡರು ಬಂದಾಗಯಡಹಿ ಕಾಣರು ಜನರು
ನಿಮಗಿಂದಹಿತವರಕಾಣೆನೆನ್ನುತ ಬೀಳ್ಕೊಂಡು ಹೋಗುವಳು'' (೭-೪೬)

ಕಾಂತ ಕೈವಶವಾಗುವ ತನಕ ನಾನು ಮನೆಗೆ ಬರಲಾರೆನು. ಅರಣ್ಯದೊಳು ಹೋಗುವವರಿಗೆ ಆಭರಣಗಳೇಕೆಂದು ಎಲ್ಲವನ್ನೂ ತೆಗೆದು ಯುವತಿ ಸುಗುಣೆಯ ಕೈಗಿತ್ತು. ಅವರಿಗೆ ಬುದ್ಧಿಹೇಳಿ ಮನೆಗೆ ಕಳುಹಿಸಿ ತಾನುಅವಿರಲ ವೈರಾಗ್ಯದಿಂದ ಅಡವಿ ಪಥವಿಡಿದು ನಡೆದಳು ಎಂದು ಶಂಕರಕವಿ ಚಿತ್ರಿಸುತ್ತಾನೆ. ಆದರೆ ಮೂಲ ಆಕಾರಕಾವ್ಯದಲ್ಲಿ ದುಃಖದಿಂದ ಆಯಾಸಗೊಂಡ ರತಿಯು ಕುಸುಮಾವತಿ ಪಟ್ಟಣಕ್ಕೆ ಬರುತ್ತಾಳೆ. ಅಲ್ಲಿ ತನ್ನ ಪತಿಸುಮಶರನ ಚಿತ್ರಪಟವನ್ನು ಪತಿಯೆಂದೇ ಭ್ರಮಿಸಿ ನೆನೆನೆನೆದು ದುಃಖಿಸುತ್ತಾಳೆ. ಆಗ ಆಕೆಯ ಕೆಳದಿಯರು ಸಂತೈಸುತ್ತಾರೆ. ಆದರೂ ಅಲ್ಲಿರಲಾಗದೆ ಅಡವಿಗೆ ಬಂದಳೆಂದು ಕನಕದಾಸರು ವಾಸ್ತವಕ್ಕೆ ಹತ್ತಿರವಾದ ಚಿತ್ರಣ ನೀಡುತ್ತಾರೆ. ಹಾಗೆ ಅಡವಿಯ ಮಾರ್ಗದಲ್ಲಿ ಬರುತ್ತಿರುವಾಗ ತನಗೆ ಇದಿರಾಗುವ ಪ್ರಕೃತಿಯ ಚರಾಚರ ವಸ್ತುಗಳಲ್ಲಿ ತನ್ನ ಪತಿಯನ್ನು ಕಂಡರೆ ತೋರಿರೆಂದು ಬೇಡಿಕೊಳ್ಳುವ ಸನ್ನಿವೇಶವು ಅಕ್ಕಮಹಾದೇವಿಯು ಚನ್ನಮಲ್ಲಿಕಾರ್ಜುನನನ್ನು ಅರಸುತ್ತಾ

ಚಿಲಿಮಿಲಿ ಎಂದೋದುವ ಗಿಳಿಗಳಿರಾ
ಸರವೆತ್ತಿ ಪಾಡುವ ತುಂಬಿಗಳಿರಾ ನೀವು
ಕಾಣಿರೇ, ನೀವು ಕಾಣಿರೇ, ಎಂದು ಬೇಡುವ ಚಿತ್ರ ನೆನಪಿಗೆ ಬರುತ್ತದೆ.
ಉದಾ: ''ಅಲ್ಲಿಗಲ್ಲಿಗೆ ಸಾಲುಸಾಲಾಗಿನಿಂದಿಹ
ಜಲ್ಲಿಯ ಮೃಗಪಕ್ಷಿಗಳಿರ
ಮಲ್ಲಿಗೆಗೋಲನಕಂಡರೆ ತೋರೆಂದು
ಸೊಲ್ಲಿಸಿದಳು ದೈನ್ಯವೆರಸಿ'' (೯-೩೫)

ಶಂಕರಕವಿಯು ಈ ಸಂದರ್ಭದಲ್ಲಿ ಮಾರ್ಪಟು ಮಾಡಿಕೊಂಡಿದ್ದಾನೆ. ನಿರ್ಜನಕಾಂತಾರದಲ್ಲಿ ಬಳಲಿ ಬಸವಳಿದು ಬರುತ್ತಿದ್ದ ರತಿದೇವಿಯನ್ನು ಕಂಡು ಶುಕ, ಪಿಕ, ನವಿಲು, ಅಂಚೆ, ಕೊಂಚೆ, ಮುಂತಾದ ಪಕ್ಷಿಗಳೆಲ್ಲ ಅವಳನ್ನು ತವಕದಿಂದ ಬಲಗೊಳ್ಳಲು ಬಯಸಿ ಬರುತ್ತವೆ. ಅವುಗಳಿಗೆ ಕೋಪದಿಂದ ರತಿಯು ತನ್ನ

''ಪತಿ ನಿಮ್ಮ ಬಲಬಲುಮೆಯಿಂದೀಶನಂ ಕೆಣಕಿ
ಮಥನಿಸಲು ಪೋರ್ವನೊಪ್ಪಿಸಿ ಬಹರೆ ನಿಮಗಿಂದಹಿತ ಶತೃಗಳ ಕಾಣೆನೂ'' (೮-೨೦)

ಸ್ವಾಮಿದ್ರೋಹಿಗಳು, ಈಮುನ್ನಿನಂತೆ ನನ್ನ ಪತಿಯನ್ನು ಕರೆತರುವಿರಾದರೆ ನನಗೆ ನೀವು ಬಾಂಧವರು ಎಂಬಿತ್ಯಾದಿಯಾಗಿ ಗೋಗರೆಯುವುದು ರತಿಯಿದ್ದ ಮನಃ ಸ್ಥಿತಿಯಲ್ಲಿ ತುಂಬ ಸಹಜ ಪ್ರತಿಕ್ರಿಯೆಯಾಗಿದೆ. ಮೋಹನ ತರಂಗಿಣಿಯ 'ಕಾಮದಹನ' ಪ್ರಸಂಗದ ರತಿಪ್ರಲಾಪದಲ್ಲಿ ಇದೇ ಭಾವದ ಮಾತುಗಳು ಕೇಳಿಸುತ್ತವೆ. ಇಲ್ಲಿ ಶಂಕರಕವಿಯು ಸಂದರ್ಭೋಚಿತವಾಗಿ ಮಾತ್ರ ಭಾವಗಳ ಸ್ಥಾನಪಲ್ಲಟ ಮಾಡಿದ್ದನ್ನು ಗುರುತಿಸಬಹುದು.

ಉಪವನದಲ್ಲಿದ್ದ ರತಿಯನ್ನು ಕಂಡ ತೋಟಿಗನು ಶಂಬರಾಸುರನಿಗೆ ತಿಳಿಸಲು ಅವನ ಮಂತ್ರಿಯು ಅವಳನ್ನು ಅರಮನೆಗೆ ಕರೆತರುವನೆಂದು ಮೋಹನ ತರಂಗಿಣಿಯಲ್ಲಿ ಚುಟುಕಾಗಿ ತಿಳಿಸಲಾಗಿದೆ. ನವಮೋಹನ ತರಂಗಿಣಿಯಲ್ಲಿ ಸುಲಭಕ್ಕೆ ಬರಲೊಪ್ಪದ ರತಿಯು ಕೆಲವು ಕಟ್ಟುಪಾಡುಗಳನ್ನು ಹಾಕುತ್ತಾಳೆಂದು ಶಂಕರಕವಿಯು ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದು, ಇಲ್ಲಿ ಕವಿಯ ಲೋಕ ನಿರೀಕ್ಷಣಾಪ್ರಜ್ಞೆ, ಸ್ವೋಪಜ್ಞತೆ ಅಚ್ಚೊತ್ತಿ ನಿಂತಿದೆ.

ರತಿಯ ರೂಪಕ್ಕೆ ಮೋಹಗೊಂಡ ಶಂಬರಾಸುರನಿಗೆ ಆತುರಸಲ್ಲದೆಂದು ಆತನು ಮಂತ್ರೀಶ್ವರನು ರತಿಯಿದ್ದಲ್ಲಿಗೆ ಒಬ್ಬನೇ ಬಂದು ತಿಳಿಸಿ ಕರೆದೊಯ್ಯುವ ಪ್ರಸಂಗ ಕವಿಯ ಸ್ವಂತ ಸೃಷ್ಟಿ.

''ಯಲೆತಾಯೆ ನೀನು ನಾಡಾಡಿ ಪೆಣ್ಣಲ್ಲ ಭೂ
ವಳಯದೊಳುನಿನ್ನ ಪೋಲುವರಿಲ್ಲ ಯವ್ವನದಿ
ಲಲನೆಯರು ಏಕಾಕಿಯಾಗಿ ಸುಳಿದೊಡೆ ನೋಡಿ
ಯಳಸಿ ವ್ರತಗೆಡಿಸುವರು ಕಾಮುಕರು ನೀನಿನ್ನ
ನೆಲೆಯ ಮಾಜದೆ ಪೇಳುನಾಥಳಾದೊಡೆ ತವೆಮನದಂತೆ ನಡೆಸಿದಪೆವೂ''(೮-೫೨)

ನಿಮ್ಮಯ ಸಹೋದರನೆಂದು ಭಾವಿಸು ತಾಯಿ ಎಂದು ಕೇಳಿದ ಶಂಬರಾಸುರನ ಮಂತ್ರೀಶ್ವರನಿಗೆ ತನ್ನೆಲ್ಲ ವೃತ್ತಾಂತವನ್ನು ತಿಳಿಸುತ್ತಾಳೆ.

''..... ದೊರೆಗಳ ಮನೆಯೊಳೆನ್ನನುಳುಹಲು
ಯವರು ಯಳುಪಿದೊಡೆ ಬಿಡಿಸುವರೆ
ನಿನ್ನಿಂದಲಹುದೆ ಯಾನಬಲೆಯತಿಪತಿವ್ರತ...'' (೮-೬೨)

ಪರಪುರುಷರೆನಗೆ ಅಣ್ಣಂದಿರ ಸಮ. ಎಂಬಿತ್ಯಾದಿಯಾಗಿ ತನ್ನ ನಿಲುವನ್ನರುಹಿ ಪತಿಬರುವತನಕ ತಾನು ಸನ್ಯಾಸಿಯಾಗಿ ಫಲಾಹಾರ ಸೇವಿಸುತ್ತಲಿರುವೆನೆಂದು ವೈರಾಗ್ಯಭಾವವನ್ನು ಪ್ರಕಟಿಸುತ್ತಾಳೆ. ಅದನ್ನು ಕೇಳಿ ಮಂತ್ರೀಶನು ಶಂಬರನಿದ್ದೆಡೆಗೆ ಬಂದು 'ತಜ್ಜನನಿಸಮ'ವೆಂದು ಭಾವಿಸಿ ಕರೆದೊಯ್ದು ಪೋಷಿಸಲು ಸತ್ಫಲ ಬರುವುದೆಂದು ತಿಳಿಸುತ್ತಾನೆ. ಅಂತೆಯೇ ಆಗಲೆಂದು ಒಡಂಬಟ್ಟ ಶಂಬರಾಸುರನು ಅಬಲೆಯಾದ ನೀನೆಂತು ದೇಶಾಂತರ ಹೋಗುವೆ, ಅನುಮಾನಿಸದೆ ಬಾರೆಂದು ಕರೆಯುತ್ತಾನೆ. ಆಗ ರತಿದೇವಿಯು ಅಯ್ಯಾ,

''ನಾನುಪೆಣ್ಣತಿಯ ನಾಥಳು
ಯೆಂದು ಮನದೊಳಳುಪಿದೊಡಾಯ ಕ್ಷೀಣಮಹುದೂ
ಸೂನುವೆಂದೆನ್ನ ಬಗೆದೊಡೆ ಪರಮೈಶ್ವರ್ಯ ಮಾ
ನುನಿಯು ನಿಮಗೆ ಕೈವಶವಹಳು ಸಹಜದಿಂಭೂನಾಥ
ನೀನಿದ ಕೊಡಂಬಡಲು ಬಂದಪೆ ತಪ್ಪಿದೊಡೆ ಬಾರೆನೆನಲೂ'' (೮-೭೦)

ಒಪ್ಪಿಕೊಂಡು ''ಕಾಲಮೃತ್ಯುವಿನ ಪೊತ್ತಂದದೀ'' ಆಕೆಯನ್ನು ಪಲ್ಲಕ್ಕಿಯಲ್ಲಿ ಹೊತ್ತೊಯ್ಯುತ್ತಾರೆ. ಅರಮನೆಗೆ ಕರೆತಂದು ತನ್ನ ಸತಿಯಾದಿಯಾಗಿ ಎಲ್ಲರಿಗೆ ಪರಿಚಯಿಸಿ ಅಡುಗೆ ಮನೆಯ 'ಹೆಗ್ಗಡೆ'ಯೆಂದು ನೇಮಿಸುತ್ತಾನೆ. ಹೀಗೆ ರತಿಯು ತನ್ನ ಆತಂಕವನ್ನು ಅಭಿವ್ಯಕ್ತಿಸಿ, ಅರಸನಮಾತುಗಳನ್ನು ಷರತ್ತಿನ ಮೇಲೆ ಒಡಂಬಡುವ ಪ್ರಸಂಗಗಳು ಮೂಲ ಆಕರಕಾವ್ಯದಲ್ಲಿ ಕಾಣಸಿಗುವುದಿಲ್ಲ.

ಬಹುಕಾಲದವರೆಗೆ ತಾಳಲಾಗದೆ ತಾನಿತ್ತ ಮಾತನ್ನು ಕಡೆಗೆ ನೂಕಿ 'ರತಿ'ಯನ್ನು ತನಗೆ ವಶಮಾಡೆಂದು ಸತಿಯನ್ನು ಕೇಳುತ್ತಾನೆ. ಆಗ ಮರುಮಾತನಾಡದೆ ತನ್ನ ಪತಿಗಾಗಿ ರತಿಯನ್ನು ಒಲಿಸಲು ಬರುತ್ತಾಳೆಂದು ಮೂಲ ಆಕರ ಕಾವ್ಯದಲ್ಲಿ ಚಿತ್ರಿತವಾಗಿದೆ.

ಉದಾಹರಣೆಗೆ :

ಮಡದಿ ಮನೋನಾಥನ ವಾಕ್ಯವ ಕೇಳಿ
ಯೊಡಗೊಂಡು ಬಂದಳಾಲಯಕೆ
ಸಡಗರದಿಂದುಪಚರಿಸುತೆ ಮೆಲ್ಲನೆ
ಪಡೆದಳಾ ರತಿಯ ಚಿತ್ತವನು'' (೧೦-೧೯)

'ನವಮೋಹನ ತರಂಗಿಣಿ'ಯಲ್ಲಿ ಶಂಕರಕವಿಯು ತುಂಬ ಸೂಕ್ತವಾಗಿ ಮಾರ್ಪಾಡು ಮಾಡಿಕೊಂಡಿದ್ದಾನೆ. ಸತಿಯರ ಮನದ ಕೆಲವು ಸೂಕ್ಷ್ಮಸಂವೇದನೆಗಳನ್ನು ಅರ್ಥೈಸಿಕೊಂಡಂತೆ ತೋರುವ ಕವಿಯು ಹೀಗೆ ಚಿತ್ರಿಸುತ್ತಾನೆ. ಶಂಬರಾಸುರನು ರತಿದೇವಿಯನ್ನು ತನಗೆ ವಶಮಾಡು ಎನ್ನಲು ಆತನ ಪತ್ನಿಯು ಮಂತ್ರಿಯಾದವನು ಅರಸನಿಗೆ ತಿಳಿ ಹೇಳುವಂತೆ ಹೇಳುವಳು. 'ನಿಜವಾದ ಪತ್ನಿ'ಯು ಸಂಕಟದ ಕಾಲದಲ್ಲಿ ತನ್ನ ಪತಿಗೆ ಆಪ್ತ ಸಚಿವೆಯಾಗಿರುತ್ತಾಳೆಂಬುದು ಪತಿವ್ರತೆಯ ಧರ್ಮದ ಲಕ್ಷಣ.

[illegible]

''ಘನಪತಿವ್ರತೆ ಸೀತೆ ಪುಣ್ಯದೇವತೆಯದು

ರ್ಮನದಿ ಭ್ರಮಿಸಲಿಬ್ಬುಹುದೆ ಮನೆಯ ದೀಪಕ್ಕೆ ಮುದ್ದಿಡುವರೆ ಪ್ರೌಢರುಗಳೂ''

(೯-೧೨)

ಪರನಾರಿಯರಿಗೆಳಸಿ ದೇವೇಂದ್ರ, ಚಂದ್ರ, ವಾಲಿ, ನಹುಷ, ರಾವಣಾದಿಗಳು ಭ್ರಷ್ಟರಾದರು. ಆಕೆ ನಾಡಾಡಿಯಲ್ಲವೆಂಬುದನ್ನು ನೀನು ಬಲ್ಲೆ.

''ಆಪೆಣ್ಣಿಗಿತ್ತ ಭಾಷೆಯುಯೇನುಯಪ್ರಮಾಣ ಕುಲನಾಶಮೆಂಬಶ್ರುತಿಯೂ'' (೯-೧೪) ಎಂದರಿತೂ ಭ್ರಮಿಸುವರೆ, ಎದುರುತ್ತರ ಕೊಡುತ್ತಿರುವಳೆಂದು ನನ್ನ ಬಗ್ಗೆ ಕೋಪಿಸಿಕೊಳ್ಳಬೇಡ ಎಂಬಿತ್ಯಾದಿಯಾಗಿ ವಿಸ್ತೃತವಾಗಿ ತಿಳಿಸಿ ಹೇಳುತ್ತಾಳೆ. ಆದರೂ ಕೇಳದಾದಾಗ 'ಮದನ ಗ್ರಹವ್ಯಾಧಿಗಂಮಂತ್ರೌಷಧಿಲ್ಲಮೆಂಬುದು ಸಹಜಮಾಯ್ತು' ಎಂದುಕೊಂಡು, ಯಲೆಕಾಂತ, ಆಯುವತಿಯಳನ್ನು ಕೇಳಲು ನಾನಂಜುವೆ. ಒಂದು ನೆವದಿಂದ ನಿನ್ನೆಡೆಗೆ ಕಳುಹಿಸುವೆ ನೀನು ಅವಳನ್ನು ವಿನಯದಿಂದ ಒಡಂಬಡಿಸು ಬಲಾತ್ಕರಿಸಿದರೆ ವಿರಸವಾಗುವುದೆಂದು ಎಚ್ಚರಿಸಿ ತನ್ನ ಪತಿ ಶಂಬರಾಸುರನಿಗೆ ಕಡುಜ್ವರ, ಕಷಾಯವನ್ನು ನೀಡಿಬಾ ಎಂಬ 'ನೆಪಹೂಡಿ' ರತಿದೇವಿಯನ್ನು ಅವನ ಶಯ್ಯಾಗೃಹಕ್ಕೆ ಕಳುಹಿಸಲು ಅನುವಾಗುತ್ತಾಳೆ. ಆಗ ರತಿಯು ನಿರಾಕರಿಸುತ್ತ ಕೊಡುವ ಉತ್ತರ ರೂಪದ ಮಾತುಗಳುಕವಿಯ ಲೋಕಜ್ಞಾನ, ಅನುಭವ ಸಂಪತ್ತಿಗೆ ಜೀವಂತ ಸಾಕ್ಷಿಯಾಗಿ ನಿಲ್ಲುತ್ತವೆ.

ರತಿಯು ಶಂಬರಾಸುರನ ಪತ್ನಿಗೆ ಬಂಗಾಳದೇಶದ ಅರಸು ಮಗಳನ್ನೇ ಬಯಸಿದ ಉದಾಹರಣೆಯನ್ನಿತ್ತು

''ಜನನಿಯಾಗ್ರಜೆಯನುಜೆ, ಮಗಳು, ಸೊಸೆ ನಾದುನಿಯ

ರನುಯತ್ತೆಯತ್ತಿಗೆಯು ಗುರುಪತ್ನಿಯರು ಮಾಗೆ

ಮನುಮಥನು ಯೇಕಾಂತವಾಸದೊಳುಮವರ ಮನಮಂಪೊಕ್ಕು ಭ್ರಮೆಗೊಳಿಪನೂ''

(೯-೨೯)

ಆದ್ದರಿಂದ ನಾನು ಹೋಗಲಾರೆನೆಂದು ನಿರಾಕರಿಸುತ್ತಾಳೆ. ಇದು ತುಂಬ ಸಹಜವಾದದ್ದು. ಆದರೆ ಕನಕದಾಸರ ಮೋಹನ ತರಂಗಿಣಿಯಲ್ಲಿ ಶಂಬರಾಸುರನ ಪತ್ನಿಯು

''ಸತ್ತವರೊಡನೆ ಸತ್ತವರುಂಟೆ ಮಗುಳೊಂದು

ಚಿತ್ತೈಸುವೊಡಕ್ಕ ತನವ

ವೃತ್ತ ಕುಚಾನ್ವಿತೆನಿನಗೆ ತನ್ನಾಳ್ದನ

ಇತ್ತಪೆನೆಂದಳಾಕಾಂತೆ'' (೧೦-೨೨)

ಹದಿಬದೆಯರು ನಿಜಪತಿಯನ್ನುಳಿದು ಬೇರೆಯವರೊಡನೆ ಅನುಭೋಗ ಬಯಸಲಾರರೆಂದ ರತಿದೇವಿಗೆ

ಮೀನಾಂಕ ಮೃತವನೊಂದಿದ ಮೇಲೆನನ್ನಮ್ಮ
ನೀನಾರಿಗೊಗೆತನವಗೈವೆ
ನಾನಾಕಲೆವಂತ ನೆನ್ನಯ ಪುರುಷನಿ
ಧಾನವನೋಡೆಂದೆಳೊಲಿದು'' (೧೦-೨೪)

ಎಂದು ಆಹ್ವಾನವೀಯುತ್ತಾಳೆಂಬುದು ತೀರ ಅಸಹಜವೆನಿಸುತ್ತದೆ. ಸ್ತ್ರೀ ಸಹಜ ಮನೋಭಾವಗಳ ಮಿತಿಯನ್ನು ಮೀರಿದೆ ಎಂಬ ದೃಷ್ಟಿಯಿಂದ ಶಂಕರಕವಿಯು ಮಾಡಿಕೊಂಡ ಬದಲಾವಣೆಯು ರೂಢಿಸಮ್ಮತವೆನಿಸುತ್ತದೆ. ಆದರೂ ಕನಕದಾಸರೇ ಆಗಲಿ, ಶಂಕರಕವಿಯೇ ಆಗಲಿ, ತನ್ನ ಪತಿಗಾಗಿ ಬೇರೊಂದು ಹೆಣ್ಣನ್ನುಪತ್ನಿಯಾದವಳು ಒಲಿಸಿಕೊಡ ಬಹುದಾದ ಪ್ರಸಂಗಗಳಲ್ಲಿ, ಸ್ತ್ರೀಸಹಜ ನೋವು, ಹೊಯ್ದಾಟಗಳನ್ನು ಮರೆತೇ ಬಿಟ್ಟಿದ್ದಾರೆ. ಬಹುಶಃ ಅರಸನಾದವನು 'ಬಹುಪತ್ನಿವಲ್ಲಭ'ನೆಂಬ ಲೋಕರೂಢಿಯನ್ನು ಒಪ್ಪಿಕೊಂಡ ಅಸಹಾಯಕ ಪಾತ್ರವಾಗಿ ಶಂಬರನಪತ್ನಿಯನ್ನು ಹೀಗೆ ಕಂಡರಿಸಿದ್ದಿರಬಹುದು.

ತನಗೊಲಿಯದ ರತಿಯನ್ನು ತನ್ನ ಅರಮನೆಯ ಅಡಿಗೆಮನೆಯ ತೊತ್ತಾಗಿರಲೆಂದು ಶಂಬರಾಸುರನು ಆಜ್ಞಾಪಿಸುತ್ತಾನೆಂದು ಕನಕದಾಸ'ರು ಹೇಳಿದರೆ, ಶಂಕರಕವಿಯು ಶಂಬರನು ರತಿದೇವಿಯನ್ನು ಕುರಿತು ನನ್ನನ್ನು ನಿನ್ನ ಶಿಶುವೆಂದು ಮನ್ನಿಸು, ನಿನ್ನ ಪತಿವ್ರತಾ ಧರ್ಮವನ್ನು ಪರೀಕ್ಷಿಸಲೋಸುಗ ಹಾಗೆ ವರ್ತಿಸಿದೆನೆಂದು ಕ್ಷಮೆಬೇಡುತ್ತಾನೆಂದು, ತುಂಬ ವಿಸ್ತೃತವಾದ ಸನ್ನಿವೇಶವನ್ನು ಸೃಷ್ಟಿಸಿದ್ದಾನೆ. ರಾಕ್ಷಸರಲ್ಲೂ ಆದರ್ಶ ದೈವತ್ವಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಶಂಕರಕವಿ ಮಾಡಿದ್ದಾನೆ. ಜಲಕ್ರೀಡೆಯ ಸನ್ನಿವೇಶ. ರುಕ್ಮಿಣಿಗೆ ಮಗುವಿನ ಬಯಕೆಯುಂಟಾಗುವುದು, ನಾರದನು ಶಂಬರಾಸುರನ ಆಸ್ಥಾನಕ್ಕೆ ಆಗಮಿಸಿ ಮಾರಜನನದ ಪರಿಣಾಮವನ್ನು ತಿಳಿಸುವ ಬಹುಪಾಲು ಭಾಗವು ಯಥಾವತ್ತಾಗಿ ಮೂಡಿಬಂದಿದೆ.

ಉದಾಹರಣೆಗೆ: 'ಮೋಹನತರಂಗಿಣಿ'ಯಲ್ಲಿ ರುಕ್ಮಿಣಿಯ ಉದರದಲ್ಲಿ ಜನಿಸುವ ಮಾರನು 'ಶಂಬರಾಸುರ'ನಿಗೆ ಕಂಟಕ ಪ್ರಾಯನೆಂದು ತಿಳಿಸುತ್ತಾ ನಾರದನು,

''ಕಳಿಲೆಯ ನಖದಲಿ ಚಿವುಟಲಹುದು ಮುಂದೆ
ಬಳಿಗೆ ಕೂರುಗುರಿಗಂಜುವದೆ
ಉಳಿದಮಾತೇನು ಆಲಸ್ಯದಿಂದ ಮೃತವು
ಗಳಿಲನೆ ವಿಷವಾಗದಿಹುದೆ'' (೧೧-೧೩)

ನವಮೋಹನ ತರಂಗಿಣಿಯಲ್ಲಿ -

''ಕುಳಿಲೆಯನ್ನಖಿದಿ ಚಿವುಟಲು

ಶುಲಭಮದು ಬಲಿದು

ಲಳಿಗೆ ಯಾದೊಡೆಯಗುರ್ಗಳಿಗೆ ಸಾಧ್ಯಮೆ'' (೧೧-೧೬)

ಅವನ ಜನನದಿಂದ ನಿನ್ನ ಕುಲನಾಶವಾಗುವುದೆಂದು ಎಚ್ಚರಿಸುವನು. ಶಂಬರನು ಶಿಶುವನ್ನು ಅಪಹರಿಸಿ ತರುವ ಸನ್ನಿವೇಶ, ಅದನ್ನು ಸಮುದ್ರಕ್ಕೆಸೆಯುವುದು, ಒಂದು ಹೆಣ್ಣು ಮೀನು ಅದನ್ನು ನುಂಗಿ, ಅದು ಮತ್ತೆ ಬೆಸ್ತರವನ ಮೂಲಕ ಶಂಬರನ ಮನೆಗೇ ಬರುವುದು. ಆ ಮಗು ರತಿಯ ಪತಿಯೆಂದು ನಭೋವಾಣಿ ಮೊಳಗುವುದು, ಆ ಮಗುವಿನ ಬಾಲಲೀಲೆಗಳು, ಅತ್ತ ಮಗುವನ್ನು ಕಾಣದೇ ಪ್ರಲಾಪಿಸುವ ರುಕ್ಮಿಣಿಯ ಸನ್ನಿವೇಶ ಇತ್ಯಾದಿಗಳೆಲ್ಲ ಮೇಲ್ನೋಟಕ್ಕೆ ಇದ್ದಕ್ಕಿದ್ದಂತೆಯೇ ಸ್ವೀಕರಿಸಿದ್ದಾನೆಂಬ ಭಾವಹುಟ್ಟಿಸಿದರೂ, ಚಿತ್ರಿಸುವ ರೀತಿಯಲ್ಲಿ ಸಂದರ್ಭೋಚಿತವಾಗಿ ತರುವ ವರ್ಣನೆಗಳಲ್ಲಿ ನಿಜಕ್ಕೂ ಶಂಕರಕವಿಯು ತೋರುವ ತಾದಾತ್ಮ್ಯತೆ, ಪ್ರಕಟಿಸುವ ಅಪಾರವಾದ ಲೋಕಾನುಭವ, ಲೋಕಸತ್ಯಗಳು ಮೆಚ್ಚುಗೆಗೆ ಅರ್ಹವಾಗುತ್ತವೆ. ಕಥೆಯೊಡಲು ಕನಕದಾಸರದ್ದಾದರೂ ಶಂಕರಕವಿಯು ಹೊಸ ಜೀವ ತುಂಬಿದ್ದಾನೆಂದರೆ ಅತಿಶಯೋಕ್ತಿಯಾಗದೆನಿಸುತ್ತದೆ.

ಮಾರನಿಗೂ ಶಂಬರಾಸುರನಿಗೂ ನಡೆದ ಯುದ್ಧದ ವಿವರಗಳು ವೀರರಸದಮಡು, ಇಲ್ಲಿಯೂ ಮೂಲ ಆಕರಕಾವ್ಯವನ್ನೇ ಯಥಾವತ್ತಾಗಿ ಅನುಸರಿಸಿದ್ದರೂ, 'ಮಾರ'ನ ಯುದ್ಧಚಾತುರ್ಯ, ಸಂಭಾಷಣೆಗಳು, ಮೂಲಕ್ಕಿಂತಲೂ ಪರಿಣಾಮಕಾರಿಯಾಗಿದ್ದು ಮೇಲುಗೈ ಪಡೆಯುತ್ತವೆ. ಶಂಬರಾಸುರವಧೆ, ತರುವಾಯ ಆತನ ಮಂತ್ರಿಗೆ ಆ ದೇಶದ ಆಧಿಪತ್ಯವಹಿಸಿ ದ್ವಾರಕೆಗೆ ರತಿಯೊಡನೆ ತೆರಳುವುದು, ರತಿ-ಕಾಮರ ವಿವಾಹ ಸಂದರ್ಭ, ಅವರೀರ್ವರ ಸಂಯೋಗ ಸನ್ನಿವೇಶಗಳನ್ನು ಮೂಲದಂತೆಯೇ ಚಿತ್ರಿಸಿದ್ದರೂ, ನಿರ್ವಹಣೆಯಲ್ಲಿ ವಿಶಿಷ್ಟತೆಯನ್ನು ಕಾಣುತ್ತೇವೆ. ಕನಕದಾಸರಂತೆಯೇ ರತಿ-ಕಾಮರ ಸಮ್ಮಿಲನವನ್ನು ವಿವರವಾಗಿ ಚಿತ್ರಿಸುವ ಶಂಕರಕವಿಯು ರಸಿಕ ಚಿತ್ರಣಗಳಿಂದ ಶೃಂಗಾರದ ಮಡುವಾಗಿಸಿದ್ದಾನೆ. ಇಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಶಂಕರಕವಿಯು 'ರತಿದೇವಿ'ಯ ಗರ್ಭದಲ್ಲಿ ಜೀವನಬಿಂದು 'ಪಿಂಡರೂಪಿ'ಯಾಗಿ ಬೆಳೆಯತೊಡಗಿ, ಶಿಶುವಾಗುವ ಪರಿ ಎಂಥದೆಂಬುದನ್ನು ತನ್ನ ಪತ್ನಿಗಾಗಿ ವಿಸ್ತರಿಸಿ ಹೇಳುವಂತೆ ಶಾಸ್ತ್ರಸಮ್ಮತವಾಗಿ ಪಿಂಡೋತ್ಪತ್ತಿ ಲಕ್ಷಣಗಳನ್ನು ವಿವರಿಸುತ್ತಾನೆ. ಇದು ಕವಿಯ ಸ್ವಂತಸೃಷ್ಟಿ ಇಲ್ಲಿ ವೈಜ್ಞಾನಿಕವಾದ ವಿವರಗಳನ್ನು ಒಂದೊಂದಾಗಿ ನೀಡುತ್ತಾ ಹೋಗುತ್ತಾನೆ.

ಉದಾಹರಣೆಗೆ:

''ಆ ಶ್ರೋಣಿತಂಮಾಂಸಮಹುದು ಮತ್ತಿಪ್ಪತ್ತು

ವಾಸರದಿ ತನ್ಮಾಂಸಗಟ್ಟೆಗೊಂಬುದು ಕೇಳುಲೇಸಿಲಿಪ್ಪತ್ತೈ

ದುದಿನಕೆ ಸರ್ವಾವಯಂಗಳಂಕುರಿಸುತಿಹವು ಮಿರದೇ

.... ಮುದದಿಂದ ಲೆಂಟುತಿಂಗಳಿಗಷ್ಟತನುಗಳು

[illegible]

[illegible]

[illegible]

[illegible]

[illegible]

ವದಗಿ ಸನ್ಮೂರ್ತಿಗೊಂಬವವು ನವದ್ವಾರಸಹ

ಸುದತಿ ನೀಂಕೇಳು ವೊಂಭತ್ತು ತಿಂಗಳಿಗೆ ಜಾತಿಸ್ಮರಣೆ ಶಿಶುವಿಗಹುದೂ'' (೧೪-೫೧)

ಯಾವ ಸಮಯ, ಎಷ್ಟನೇ ದಿನದ ಸಂಯೋಗದಿಂದ ಎಂತಹ ಮಕ್ಕಳ ಜನನವಾಗುವುದು ಎಂಬ ವಿವರಗಳೆಲ್ಲವನ್ನೂ ಚಾಚೂ ತಪ್ಪದೇ ನೀಡಿರುವುದು ಕವಿಯ ಅಪಾರ ಜ್ಞಾನದ ಕುರಿತು ಹೆಮ್ಮೆ ಅಚ್ಚರಿಗಳೆರಡನ್ನೂ ಮೂಡಿಸುತ್ತದೆ. ಅನಿರುದ್ಧನ ಜನನ, ಯೀರಲಹಬ್ಬ, ಶಿಶುಸ್ನಾನ, ನಾಮಕರಣ ಶಾಸ್ತ್ರಗಳನ್ನು ಮೂಲಕ್ಕಿಂತ ಚೆನ್ನಾಗಿ ಚಿತ್ರಿಸಿದಂತೆನಿಸುತ್ತದೆ. ಅನಿರುದ್ಧನ ಬೇಟೆವರ್ಣನೆಯಲ್ಲೂ ಈ ಮಾತು ಸತ್ಯವಾಗುತ್ತದೆ.

ಬಾಣನು ಗುರೂಪದೇಶ ಪಡೆಯುವ ಸನ್ನಿವೇಶವು ಶಂಕರಕವಿಯ ಸ್ವಂತಸೃಷ್ಟಿ ಆತನ ಶೈವಪರ ನಿಲುವನ್ನು ಸಮರ್ಥಿಸುತ್ತದೆ. ಮೂಲ ಆಕರಕಾವ್ಯದಲ್ಲಿ 'ಬಾಣನ ಶಿವಪೂಜಾ ಸಂದರ್ಭ'ವು ನೇರವಾಗಿ ವರ್ಣಿಸಲ್ಪಟ್ಟಿದೆ. ಆದರೆ ಇಲ್ಲಿ ಶಿವಪೂಜೆಗೆ ತೊಡಗುವ ಮುನ್ನ ಅದರ ವಿಧಿ-ವಿಧಾನಗಳನ್ನು ಅರಿತುಕೊಳ್ಳಬೇಕೆಂಬುದು ಸರ್ವಸಮ್ಮತ ಅದಕ್ಕೆಂದೇ ಶಿವಪೂಜೆಯ ವಿಧಾನ, ಶಿವನನ್ನು ಒಲಿಸುವ ಕ್ರಮವನ್ನು ಬೋಧಿಸಿ ತನ್ನನ್ನು ರಕ್ಷಿಸಬೇಕೆಂದು ಪರಮ ಸದ್ಭಕ್ತಿಯಿಂದ ಬಾಣನು ಗುರುಗಳಲ್ಲಿ ಪ್ರಾರ್ಥಿಸುತ್ತಾನೆ. ಇದರ ವಿವರಣೆಗೆಂದೇ ಒಂದು ಆಶ್ವಾಸವನ್ನು ಶಂಕರಕವಿಯು ಮೀಸಲಾಗಿಟ್ಟಿರುವುದು ಸಮಯೋಚಿತವಾಗಿದೆ.

ಯಲ್ಲರುಷಿಶ್ರೇಷ್ಠರೊಳು ಶ್ರೇಷ್ಠನೆನಿಸುತ ನಿತ್ಯ

ದಲ್ಲಿ ಸುಖಿಸುತ್ತಿರ್ಪ ಶ್ರೀವೀರಶೈವಮತ

ವೆಲ್ಲ ಶೈವಂಗಳ ಶಿರೋವ್ರತಂಮದನುಯಾಚರಿಸುವರೆನಿತ್ಯರಹರೂ'' (೧೮-೨೧)

ಇಂತಹ ವೀರಶೈವ ಮತವನ್ನು ಹಿಡಿಯಲು ನಿನಗೆ 'ಅಂತಕನಪುರವೆ ಸಂಪ್ರಾಪ್ತಿಯಪ್ಪುದು ಎಂದು ಏಕಾಂತದಲ್ಲಿ ವೀರಶೈವದೀಕ್ಷೆ'ಯನ್ನಿತ್ತು, ಪೂಜಾವಿಧಿಗಳನ್ನು ಕ್ರಮಾನುಗತವಾಗಿ ಅರುಹುತ್ತ 'ಶಿವಪಂಚಾಕ್ಷರಿ ಮಂತ್ರ'ವನ್ನು 'ಭಾರ್ಗವಾಚಾರ್ಯರು' ಬೋಧಿಸುತ್ತಾರೆ. ಇಲ್ಲೆಲ್ಲ ಕವಿಯ ವೀರಶೈವನಿಷ್ಠೆ ಅಭಿವ್ಯಕ್ತವಾಗುತ್ತದೆ.

ಬಾಣಾಸುರನು ಸಾಸಿರ ತೋಳು, ಐನೂರು ತಲೆಗಳನ್ನು ಪಡೆದವಿವರ ಮೂಲಕಾವ್ಯದಲ್ಲಿ ಪ್ರತ್ಯೇಕವಾಗಿಲ್ಲ, ಆದರೆ ಇಲ್ಲಿ ಶಂಕರಕವಿಯು ಅದಕ್ಕಾಗಿ ಒಂದು ಸಂಧಿಯನ್ನೇ ಮಿಸಲಾಟ್ಟಿದ್ದಾನೆ. ಏಕೆಂದರೂ ಆತನೇ ಹೇಳಿದಂತೆ 'ಇದುವೆ ಬಾಣಾಖ್ಯ ಸಾಯುಜ್ಯ'ವಲ್ಲವೇ? ಶಿವನು ತನಗೆ ವರವಿತ್ತಂತೆ ಒಂದು ಬಾರಿ ಶಿವದರ್ಶನಕ್ಕೆಳಸಿ ಕೈಲಾಸಕ್ಕೆ ಹೋಗಿ ದ್ವಾರಪಾಲಕನಾಗಿದ್ದ ಘೋರ ಭೈರವಾಕೃತಿಯ ಲಕ್ಷಿಸದೆ ಪ್ರವೇಶಮಾಡಲು ಅನುವಾದಾಗ ಆದ್ವಾರಪಾಲನು ಇವನ ಎರಡೂ ರಟ್ಟೆಗಳನ್ನು ಹಿಡಿದು ಕೋಪದಿಂದ ಬೀಸಿ ಗಗನಕ್ಕೆಸೆಯುವನು. ಆಗ ಮೂರ್ಛಾಗತನಾಗಿ ಬಿದ್ದಿದ್ದ ಬಾಣನು ಶುಚಿರ್ಭೂತನಾಗಿ ಗೋಮತೀ ತೀರದಲ್ಲಿ ಇಷ್ಟಲಿಂಗಾರ್ಚನೆ ಮಾಡುತ್ತಾನೆ. ಆಗ ಪರಶಿವನು ಪ್ರತ್ಯಕ್ಷನಾಗಲು

''ಪೃಥ್ವಿಜನರೆಲ್ಲ ಪೊಸತೆಂಬಂತೆ ಪುರದ್ವಾರ
ದೊತ್ತಿನಲೆಮೆರವವುಪವನದೆ ಸತ್ರಮಥಗಣ
ದೊತ್ತೊತ್ತೆಯಿಂದೆ ಸನ್ಮೂರ್ತಿಗೊಂಡಿರ್ದು ಪದದರ್ಶನಮನೀವದೊಂದೂ
ಮತ್ತೆ ನೆಲಮುಗಿಲನೊಳಕೊಂಡಿರ್ಪಯಮಳ
ಸನ್ಮೂರ್ತಿನಿಮ್ಮಂ ನೋಡಿ ಪಾಡಿ ಪೂಜಿಪೆನೊಲಿದು
ಯಿತ್ತಪದುಸಹಸ್ರಕರನಯನ ವೈನೂರುಬಾಯ್ವಲಿದುದೆಂದಿಟಮಾದೊಡೇ'' (೨೦-೩೬)

ಎಂದು ಬೇಡುತ್ತಾನೆ. ಕನಕರು ಬಾಣನ ಭೋಗಲೀಲೆಗೆ ಹೆಚ್ಚು ಒತ್ತುಕೊಟ್ಟಿದ್ದರೆ,ಶಂಕರಕವಿಯು ಭೋಗ ಪ್ರಸಂಗವನ್ನು ಮೊಟುಕುಗೊಳಿಸಿ ಬಾಣನಲಿಂಗಪೂಜೆಗೆ ಹೆಚ್ಚು ಒತ್ತು ಕೊಟ್ಟಿದ್ದಾನೆ. ಬಾಣನ ಪುತ್ರಿ ವೃಷೆ ಮತ್ತು ಕುಂಭಾಂಡಮಂತ್ರಿಸುತೆ ಚಿತ್ರಲೇಖೆಯರ ಜನನ. ಬಾಲ್ಯ, ಯೌವ್ವನ, ವೃಷೆಯ ಪುರುಷಾಪೇಕ್ಷೆ ಯಿಂದಾಗಿ ಸಖಿ ಚಿತ್ರಲೇಖೆಯು ಈಶ್ವರನ ದರ್ಶನಕ್ಕೆ ಹೋಗಿಬರಲು ಬಾಣನಿಂದ ಅಪ್ಪಣೆಪಡೆದು ಬರುವುದು ಮುಂತಾದ ಪ್ರಸಂಗಗಳಲ್ಲಿ ವರ್ಣನೆಗಳಲ್ಲಿನ ಕೆಲವು ವಿಶಿಷ್ಟತೆಗಳನ್ನು ಹೊರತುಪಡಿಸಿ ಶಂಕರಕವಿಯು ಮೂಲವನ್ನು ಯಥಾವತ್ತಾಗಿ ಅನುಸರಿಸಿದ್ದಾನೆ.

ಶಿವಾಲಯಕ್ಕೆ ತೆರಳಲು ಉಷಾದೇವಿ ಶೃಂಗಾರವಾದ ವಿವರಗಳನ್ನು ತಿಳಿಸಲು ಕನಕದಾಸರಂತೆ ಶಂಕರಕವಿಯೂ ಒಂದು ಆಶ್ವಾಸವನ್ನೇ ಮೀಸಲಾಗಿಟ್ಟಿದ್ದಾನೆ. ಮೂಲಕ್ಕಿಂತ ತುಸು ವಿಶೇಷ ಎನ್ನಿಸಬಹುದಾದ, ಹೃದ್ಯವಾದ ವರ್ಣನೆಗಳು ಇಲ್ಲಿ ಗಮನ ಸೆಳೆಯುತ್ತವೆ.

ಉದಾಹರಣೆಗೆ: ಗೆಳತಿಯರು ಉಷೆಯ ಕೇಶಶೃಂಗಾರ ಮಾಡಿದ ರೀತಿ ಹೀಗೆ ಬರುತ್ತದೆ ಮೋಹನ ತರಂಗಿಣಿಯಲ್ಲಿ:

''ಕಿರುವೆರಲುಗುರಿಂದೆ ಬೈತಲೆ ತೆಗೆದಾಗ
ಮರಿದುಂಬಿಗುರುಳ ಮಾನಿನಿಗೆ
ತುರುಬನಿಕ್ಕಿದರು ನೋಳ್ಪರದೃಷ್ಟಿಕಣ್ಣಿಗೆ
ಕರುಬನಿಕ್ಕಿದರೆಂಬಂತೆ'' (೨೩-೨೯)

ಇದೇ ಚಿತ್ರ ನವಮೋಹನ ತರಂಗಿಣಿಯಲ್ಲಿ ಹೀಗೆ ಬರುತ್ತದೆ.

''ಶ್ರೀತಳೋದರಿಯ ಕೇಶವಬಗದು ಬಾಸಣಿಸಿ
ಬೈತಲೆಯ ತೆಗದುತಿದ್ದಿದರು ಮನ್ಮಥನು
ಪ್ರೀತಿಯಿಂದಾವಾಗಸಂಚರಿಪ ಸನ್ಮಾರ್ಗಬೀದಿಯಿದೆಯೆಂಬಂದದೀ'' (೨೩-೧೨)

ಚಿತ್ರಲೇಖೆಯು ಅನಿರುದ್ಧನನ್ನು ಕರೆತಂದ ಸಂದರ್ಭದಲ್ಲಿ ಕಥಾವಿವರಗಳು ಯಥಾವತ್ತಾಗಿದ್ದರೂ ವರ್ಣನೆಗಳು, ಹೋಲಿಕೆಗಳು ವಿಭಿನ್ನವಾಗಿದ್ದು ಮೂಲಕ್ಕಿಂತಲೂ ಬೇರೆಯದೇ ಆದ ಕಳೆಯಿಂದ ಶೋಭಿಸುತ್ತವೆ.

ಮೂಲಕಾವ್ಯದಲ್ಲಿ ಅನಿರುದ್ಧನನ್ನು ತನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಪವನವೇಗದಿಂದ ಬರುವಾಗ

''ಕುವರ ಕಂಗೆಟ್ಟು ಬಿದ್ದಪೆನೆಂದು ತಕ್ಕೆಗೊಂ
ಡವಳ ಬಿಣ್ಮೊಲೆಯ ಬಲ್ಪಿಡಿದ'' (೩೧-೨೭)

''ಮುಟ್ಟಿದಾಕ್ಷಣ ತನುರೋಮಗಳು ಗುಡಿ
ಗಟ್ಟಿ ಮೆಯ್ಯೊಳಗೆ ಕಾತುರವ
ಮುಟ್ಟಿದರೆದೆ ಹದಿರ್ಗೊಳ್ಳದೆ ಕರಣದ
ಗಟ್ಟಿವಾಳದೆ ತೆರಳಿದಳು'' (೩೧-೨೮) ಎಂದು ಚಿತ್ರಿಸಲ್ಪಟ್ಟಿದೆ.

ನವಮೋಹನ ತರಂಗಿಣಿಯಲ್ಲಿ

''.......... ತನ್ನ ಮನದೋಳ್ಬೆದರಿಯರಡು ಕುಚಕಂಕರಗಳಂನ
ಮರ್ಚಿಪಿಡಿಯೆ ಮೈಝುಂಮೆನಲು ಝುಂಪಿಸದೆ
ಚಿಣ್ಣನೆಂದವನ ಭಾವಿಸೆಯಭಯವಿತ್ತು ಪೊತ್ತೊಯ್ದು'' (೨೬-೪೯)

ಎಂಬಲ್ಲಿ ಚಿತ್ರಲೇಖೆಯ ಶಿಶುಭಾವ ಗೌರವವನ್ನು ಇಮ್ಮಡಿಗೊಳಿಸುತ್ತದೆ. ಅನಿರುದ್ಧನು ಬಂದಾಗ ಚಿತ್ರಲೇಖೆಯು

''ಶಿವಭಕ್ತರಾತ್ಮಸುತೆಯರು ನಾವು ನಮ್ಮೊಡನೆ
ಸವಿನಯದಿ ಸಂಪರ್ಕಮಂ ಮಾಳ್ಪಪುರುಷರಿಗೆ
ಶಿವಲಿಂಗಪೂಜೆ ಮಾಡದೊಡೆ ಸಮರಸ ಸೌಖ್ಯಮೆಂತಹುದು ಭಾಗವತರೂ
ಶಿವ-ವಿಷ್ಣುರುಗಳ ಪೂಜಿಪರುಸಮ್ಮತಮಾಗಿ'' (೨೬-೫೮)

ಎಂಬಿತ್ಯಾದಿಯಾಗಿ ಅನುನಯದಿಂದ ತಿಳಿಸಿ ಲಿಂಗಪೂಜೆಯ ಫಲಗಳನ್ನುಸೂಚಿಸಿ ತಾನೇ ಗುರುವಾಗಿನಿಂತು 'ಲಿಂಗಪೂಜೆ' ಮಾಡಿಸುವ ಸಂದರ್ಭ, ಶಂಕರಕವಿಯು ಮಾಡಿಕೊಂಡ ಬದಲಾವಣೆಯು ಆತನ ಉದ್ದೇಶಕ್ಕೆ ಉಚಿತವಾಗಿ ಕಂಡು ಬರುತ್ತದೆ. ಮತ್ತು ಶೈವ ವೈಷ್ಣವ ಧರ್ಮಗಳ ಸಾಮರಸ್ಯವನ್ನು ಪ್ರಸ್ತುತಪಡಿಸುತ್ತದೆ.

ಕುಂಭಾಂಡಮಂತ್ರಿಯು ತನ್ನ ಅಸುರಬಲದೊಂದಿಗೆ ಅನಿರುದ್ಧನನ್ನು ಹಿಡಿಯಲು ಬಂದ ಸನ್ನಿವೇಶದ ಚಿತ್ರಣದಲ್ಲಿ ಅನಿರುದ್ಧನು ಕುಂಭಾಂಡನೊಂದಿಗೆ ಯುದ್ಧಕ್ಕೆ ಹೊರಡುವ ಮುನ್ನ ಶಿವಪೂಜೆ ಮಾಡುವುದು ಮೂಲದಲ್ಲಿ ಕಂಡುಬರುವುದಿಲ್ಲ. ಆದರೆ ಯುದ್ಧದ ಪ್ರಸಂಗದ ದೂಷಣೆಗಳು ಕೂಡ ಮೂಲವನ್ನು ಯಥಾವತ್ತಾಗಿ ಅನುಸರಿಸಿವೆ.

ಶಿವನಲ್ಲಿಗೆ ಕೃಷ್ಣನು ನಾರದನನ್ನು ಸಂಧಾನಕ್ಕೆ ಕಳುಹಿಸಿದ್ದು ಕೊನೆಗೆ ಈಶ್ವನಿಗೂ ವಿಷ್ಣುವಿಗೂ ಯುದ್ಧ ನಡೆದದ್ದು, ಕೃಷ್ಣನೊಡನೆ ಸೆಣಸುವಾಗ ಬಾಣನು ತನ್ನ ತೋಳುಗಳನ್ನು ಕಳೆದುಕೊಂಡಾಗ ಭಕ್ತವತ್ಸಲನಾದ ಪರಶಿವನು ಬಂದು ಸಂತೈಸಿ ತನ್ನಾಶ್ರಮಕ್ಕೆ ಕರೆದುಕೊಂಡು ಹೋದದ್ದು ಬಾಣನು ಪಶ್ಚಾತ್ತಾಪ ವ್ಯಕ್ತಪಡಿಸಿದ್ದು, ಶಿವ-ವಿಷ್ಣುವಿನ ಸ್ನೇಹ ಮುಂತಾದ ಭಾಗಗಳೆಲ್ಲ ಮೂಲವನ್ನು ಯಥಾವತ್ತಾಗಿ ಅನುಸರಿಸಿಕೊಂಡೇ ಚಿತ್ರಿಸಲ್ಪಟ್ಟಿವೆ. ಅನಿರುದ್ಧನೊಡನೆ ವೃಷಾದೇವಿಯ ವಿವಾಹ ಜರುಗಿದನಂತರ ಸಂಭ್ರಮದಿಂದ ವಿಷ್ಣುವಿನೊಂದಿಗೆ ಅವರನ್ನು ಕಳುಹಿಸಿಕೊಟ್ಟು, ಈಶ್ವರನು ಬಾಣನಿಗೆ ಗಣಪದವಿಯನ್ನು ನೀಡುವಕೊನೆಯ ಭಾಗದಲ್ಲಿ 'ಮೋಹನ ತರಂಗಿಣಿ'ಯಲ್ಲಿ ಕೃಷ್ಣಸ್ತುತಿಗೆ ಪ್ರಾಶಸ್ತ್ಯವಿದೆ. ನವಮೋಹನ ತರಂಗಿಣಿಯಲ್ಲಿ ಶಿವಸ್ತುತಿಗೆ, ಶಿವಸಾಯುಜ್ಯ ಪಡೆದ ಬಾಣಾಸುರನ ಸಿದ್ಧಿ ಸಾಧನೆಯ ಪ್ರವರಗಳ ವಿವರಕ್ಕೆ ಪ್ರಾಶಸ್ತ್ಯ ಸಿಕ್ಕಿರುವುದರಲ್ಲಿ ಈರ್ವರೂ ಕವಿಗಳ ಕಾವ್ಯಧೋರಣೆಯು ಸ್ಪಷ್ಟವಾಗಿ ಅಭಿವ್ಯಕ್ತಗೊಳ್ಳುತ್ತದೆ. ಮೋಹನ ತರಂಗಿಣಿಯು ಕೃಷ್ಣಚರಿತೆಯನ್ನು ಬಿತ್ತರಿಸುವ ಉದ್ದೇಶವನ್ನಿಟ್ಟುಕೊಂಡ ಶೃಂಗಾರ ಪ್ರಧಾನ ಕಾವ್ಯವಾದರೆ, ನವಮೋಹನ ತರಂಗಿಣಿಯು ಶಿವನೊಲವ ಪಡೆದವರ ಸತ್ಕಥೆಯನ್ನು ಬಿತ್ತರಿಸುವ ಉದ್ದೇಶವನ್ನಿಟ್ಟುಕೊಂಡ ಶೃಂಗಾರಪ್ರಧಾನಕಾವ್ಯ ಒಟ್ಟಿನಲ್ಲಿ ಕನಕದಾಸರ ನಳಚರಿತ್ರೆಯ ಕುರಿತಾಗಿ ವಿಮರ್ಶಿಸುತ್ತ ''ಕನಕದಾಸರ ಕೈಕುಮಾರವ್ಯಾಸನ ಬೊಕ್ಕಣದಲ್ಲಿ''[೬] ಎಂದು ಹೇಳಿರುವಂತೆ ನವಮೋಹನ ತರಂಗಿಣಿಯನ್ನು ಕುರಿತಂತೆ 'ಶಂಕರಕವಿಯ ಕೈ ಕನಕದಾಸರ ಬೊಕ್ಕಣ'ದಲ್ಲಿ ಎಂದು ಹೇಳಬಹುದು. ಇಷ್ಟೆಲ್ಲ ಋಣವನ್ನು ಒಪ್ಪಿಕೊಂಡೂ 'ನವಮೋಹನ ತರಂಗಿಣಿ'ಯು ಒಂದು ಸ್ವತಂತ್ರ ಕೃತಿಯಂತೆ ನಮ್ಮ ಮನಸೆಳೆಯುವುದು ಅಲ್ಲಲ್ಲಿ ಮೂಡಿನಿಂತಿರುವ ಸ್ವೋಪಜ್ಞತೆ, ವರ್ಣನೆಗಳ ವಿಶಿಷ್ಟತೆ, ಅಪಾರ ಲೋಕಾನುಭವ, ಪಾತ್ರಗಳ ಅಂತರಂಗವನ್ನು ಒಳಹೊಕ್ಕು ನೋಡುವ ಸೂಕ್ಷ್ಮದೃಷ್ಟಿಕೋನ ಇತ್ಯಾದಿಗಳಿಂದ. ಈ ದೃಷ್ಟಿಯಿಂದ ಶಂಕರಕವಿಯದು ನವ ರಚನೆಯೇ ಸರಿ.

ಕೊನೆಟಿಪ್ಪಣಿಗಳು

೧. ಎನ್.ಅನಂತರಂಗಾಚಾರ್, ಪ್ರಭುದ್ಧಕರ್ನಾಟಕ ೨೧.೪.೧೯೪೦, ಪು. ಸಂ. ೭೮

೨. ಎನ್.ಅನಂತರಂಗಾಚಾರ್, ನವಮೋಹನ ತರಂಗಿಣಿ, ಪ್ರಬುದ್ಧ ಕರ್ನಾಟಕ ೨೧.೪.೧೯೪೦ ಪು. ಸಂ. ೭೯

೩. ತ.ಸು.ಶಾಮರಾವ್ ಕನ್ನಡ ಸಾಹಿತ್ಯ ತರಿತ್ರೆ ಒಂದು ಸಮೀಕ್ಷೆ ಪು. ೧೮೯

೪. ಕೆ. ಸಚ್ಚಿದಾನಂದಯ್ಯ ಕನಕ ಸಾಹಿತ್ಯ ದರ್ಶನ ಸಂಪುಟ ೧, ಪು. ೨೮೨

೫. Selected prose : T.S. Eliot.

೬. ಡಾ. ಎಫ್.ಟಿ. ಹಳ್ಳಿಕೇರಿ, ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಪು. ೨೨೫, ಮೂಲ ಲಿಟರೇಚರ್ ಅಂಡ್ ಲೈಫ್ ಎ ಸೆಲೆಕ್ಷನ್ ಫ್ರಮ್ ದಿರೈಟಿಂಗ್ ಆಫ್ ಮ್ಯಾಕ್ಸಿಮ್‌ಗಾರ್ಕಿ ಪು. ೫೩

೭. ಸಂ: ಜಿ.ಜಿ.ಮಂಜುನಾಥನ್, ಮೋಹನ ತರಂಗಿಣಿ,ಪೀಠಿಕೆ, ಪು.ಸಂ.೮೪

೮. ನವಮೋಹನ ತರಂಗಿಣಿ ೧೫-೧೫

೯. ಸಂ: ಜಿ.ಜಿ.ಮಂಜುನಾಥನ್, ಮೋಹನ ತರಂಗಿಣಿ. ಪೀಠಿಕೆ ಪು. ೮೭

೧೦. ಸಂ: ಜಿ.ಜಿ. ಮಂಜುನಾಥನ್, ಮೋಹನ ತರಂಗಿಣಿ, ಪೀಠಿಕೆ, ಪು.ಸಂ.೮೯

೧೧. ಡಾ.ಎಸ್.ಎಸ್. ಕೋತಿನ, ಕನಕದಾಸರ ಕೃತಿಗಳಲ್ಲಿ ಸಾಮಾಜಿಕ ನೆಲೆ ಕನಕಸಾಹಿತ್ಯ ದರ್ಶನ ಸಂ.೧, ಪು.ಸಂ. ೬೯೧

೧೨. ಸಂ: ಜಿ.ಜಿ. ಮಂಜುನಾಥನ್ ಮೋಹನತರಂಗಿಣಿ, ಪೀಠಿಕೆ, ಪು. ೭೦

೧೩. ಸಂ: ಜಿ.ಜಿ. ಮಂಜುನಾಥನ್ ಮೋಹನ ತರಂಗಿಣಿ, ಪೀಠಿಕೆ. ಪು.ಸಂ.೭೬

೧೪. ಡಾ. ಆರ್.ಸಿ.ಹಿರೇಮಠ, ಕನಕಸಾಹಿತ್ಯದರ್ಶನ ಸಂಪುಟ-೧, ಪು. ೧೮೭

೧೫. ಟಿ.ಕೇಶವಭಟ್ಟ, ಕನಕಸಾಹಿತ್ಯ ದರ್ಶನ, ಸಂ-೧, ಪು. ೨೨೬

೧೬. ಡಾ. ಗುರುಪಾದ ಮರಿಗುದ್ದಿ, ಕನಕ ಸಾಹಿತ್ಯ ದರ್ಶನ, ಸಂಪುಟ ೧, ಪು. ೩೯೧

೧೭. ಡಾ. ದೇವೇಂದ್ರಕುಮಾರ ಹಕಾರಿ, ಕನಕಸಾಹಿತ್ಯ ದರ್ಶನ, ಸಂಪುಟ-೧ ಪು. ೩೭೮

೧೮. ವಿವರಗಳಿಗೆ : ಡಾ. ಎ.ಎಸ್.ವೇಣುಗೋಪಾಲರಾವ್ ಕನಕ ಸಾಹಿತ್ಯ ದರ್ಶನ, ಸಂಪುಟ-೧, ಪು. ೨೦೬

೧೯. ಡಾ. ಎಸ್. ವೇಣುಗೋಪಾಲರಾವ್, ಕನಕಸಾಹಿತ್ಯ ದರ್ಶನ ಸಂಪುಟ-೧ ಪು. ೨೧೦

೨೦. ಡಾ. ಎಸ್.ಕರ್ಕಿ, ಛಂದೋವಿಕಾಸ, ಪು. ೧೬೭, ಮೂಲ ಲಕ್ಷ್ಮೀಶ

೨೧. ಅದೇ, ಪು. ೧೯೦

೨೩. ಡಾ. ಎಫ್.ಟಿ. ಹಳ್ಳಿಕೇರಿ, ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ ಪು. ೨೫೧

೨೪. ಡಾ. ಟಿ.ಎನ್. ನಾಗರತ್ನ, ಕನಕ ಸಾಹಿತ್ಯ ದರ್ಶನ, ಪು.ಸಂ. ೧೫೬

೨೫. ಎಂ.ವಿ.ಶ್ರೀನಿವಾಸಮೂರ್ತಿ ಕನಕದಾಸರ ಸಾಹಿತ್ಯದ ಮೇಲೆ ಅವರ ಹಿಂದಿನ ಮತ್ತು ಅವರ ಸಮಕಾಲೀನ ಕವಿಗಳ ಪ್ರಭಾವ, ಕನಕ ಸಾಹಿತ್ಯ ದರ್ಶನ-೧, ಪು. ೫೫೮

೨೬. ಎಂ.ವಿ.ಶ್ರೀನಿವಾಸಮೂರ್ತಿ, ಕನಕ ಸಾಹಿತ್ಯ ದರ್ಶನ, ಸಂ-೧, ಪು. ೫೬೩

ಅಧ್ಯಾಯ ೭

ಇತರೆ ಸಾಹಿತ್ಯ

ಅಧ್ಯಾಯ ೭

ಇತರೆ ಸಾಹಿತ್ಯ

ಕೋಳೂರು ಶಂಕರಕವಿಯು ಒಂದು ಸಾಂಗತ್ಯ ಕಾವ್ಯ ಮತ್ತು ಮೂರು ಷಟ್ಪದಿ ಕಾವ್ಯಗಳನ್ನಲ್ಲದೇ ಸುಜ್ಞಾನಸುಧಾಕರ ಪಂಚವಿಂಶತಿ ಎಂಬ ಕಿರುಕೃತಿಯನ್ನೂ, ಕೆಲವು ಸ್ವರವಚನಗಳನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ.[೧] ಅವುಗಳನ್ನಿಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಬಹುದು.

೭. ೧. ಸುಜ್ಞಾನಸುಧಾಕರ ಪಂಚವಿಂಶತಿ

೭.೧.೧. ಸ್ವರೂಪ

ಇದು ೨೫ ಪದ್ಯಗಳನ್ನೊಳಗೊಂಡ ಒಂದು ಚಿಕ್ಕಕೃತಿ. 'ಶಂಕರಕವಿಯೇ ಇದನ್ನು ರಚಿಸಿದ ಬಗೆಗೆ ಸ್ಪಷ್ಟವಾದ ಉಲ್ಲೇಖವಿಲ್ಲ, ಕೋಳೂರೇಶ' ಎಂಬ ಅಂಕಿತದಿಂದ ಕಾವ್ಯವನ್ನು ಪೂರ್ಣಗೊಳಿಸಿದ್ದರಿಂದ ಬಹುಶಃ ಶಂಕರಕವಿ ಇದರ ಕರ್ತೃವೆಂದು ಊಹಿಸಬಹುದೇ ಹೊರತು ಇದಕ್ಕೆ ಇನ್ನೂ ಆಧಾರ ಸಾಲದು[೨] ಎಂದು ಡಾ. ಎಫ್.ಟಿ.ಹಳ್ಳಿಕೇರಿಯವರು ಹೇಳಿದ್ದಾರೆ. ಆದರೆ ಅವರ ಊಹೆ ಸತ್ಯವಾಗಿದೆ ಎಂಬುದಕ್ಕೆ ಶಂಕರಕವಿಯ ಮೊದಲಕೃತಿ, ''ಶರಣಮೋನಪ್ಪಯ್ಯ ಚರಿತ್ರೆ''ಯಲ್ಲಿ ಆಧಾರ ದೊರೆಯುತ್ತದೆ. ಅದನ್ನು ಹೀಗೆ ಸಂಗ್ರಹಿಸಬಹುದು.

ಶರಣ ಮೋನಪ್ಪಯ್ಯನಿಗೆ ಪ್ರಭುವು ದೀಕ್ಷೆ ನೀಡುವ ಸಂದರ್ಭದಲ್ಲಿ ಬರುವ ಹಿತೋಪದೇಶದ ಮಾತುಗಳ ಭಾವವೇ ಸುಜ್ಞಾನಸುಧಾಕರ ಪಂಚವಿಂಶತಿಯಲ್ಲಿ ಅರಳಿನಿಂತಿರುವುದು

ಉದಾಹರಣೆಗೆ:

ಮಗನೆ ನಿನ್ನಯ ಮನಜಗದಮಾಯಿಯ ಕೂಡಿ
ನೆಗವದು ತನ್ನ ತಾಮರದು
ಮಿಗೆ ತನ್ನ ನಿಜವನು ಬಗದು ನೋಡಲು ಮಾಯಿ
ತೊರದೋಡುವುದು ತನ್ನ ದಳವ'' (ಶರಣ ಮೋನಪ್ಪಯ್ಯ ಚರಿತೆ ೩-೪)

''ನಿನ್ನೊಳಗಿಹ ನಿಜವಸ್ತುವನೀ ತಿಳಿಚಂದಮಾಮ

ನಿನ್ನ ನೀ ತಿಳಿದಾರೆ ನೀನೆ ನಿರ್ಮಯನು
ನಿನ್ನ ಮರವೆ ಮಾಯಾತನು ನಿನ್ನ ಮುಸುಕಿದೆ
ನಿನ್ನ ನೀನರಿವಡೆ ಮಾಯಾತಮವೆಜ್ಯೋತಿ"

(ಸುಜ್ಞಾನಸುಧಾಕರ ಪಂಚವಿಂಶತಿ ಪು.ಸಂ. ೩)

ಹೀಗೆಯೇ ಸುಮಾರು ಹದಿನಾರು ಪದ್ಯಗಳಲ್ಲಿ ಷಟ್ಚಕ್ರಗಳ ಕುರಿತಾಗಿ ಪಂಚಭೂತಗಳು ಜ್ಞಾನೇಂದ್ರಿಯ ಜೀವಗಳ ಕುರಿತಾಗಿ ವಿವರಿಸುತ್ತಾ ಕೊನೆಗೆ

"ಇಂತಿರ್ಪ ನಿನ್ನ ನಿಜವಾನಾರು ಬಲ್ಲರು
ಅಂತಕಾಲಾರ್ಚನ ಶೀಲರಿಗೆ ಸದಳ
ಶಾಂತಸದ್ಗುರು ಪಾದಸೇವಿಸಿದವರಿಗುಂಟು
ಇಂತಹ ನಿಜವಸ್ತು ನೀನೇ ಕೋಳೂರೇಶ" (ಅದೇ-೨೫)

ಎಂದು ಮುಕ್ತಾಯವಾಗುತ್ತದೆ.

"ಭ್ರಾಂತಿಸಿ ಬಾಹಿರದೊಳಾಂ ತೊಳಲುವ ಮನ
ಮುಂತೆತಾಮಾಯೆಯೆನಿಸುವದು
ಶಾಂತಸದ್ಗುರುವಿಂದ ಅಂತರಂಗದ ನಿಜ
ವಂತಿಳಿದವನೆ ನಿರ್ಮಾಯಿ" (ಶರಣಮೋನಪ್ಪಯ್ಯ ಚರಿತೆ ೩-೭)

ಎಂದು 'ಶಾಂತಸದ್ಗುರು'ವಿನ ಪ್ರಸ್ತಾಪ ಮಾಡುತ್ತಾನೆ. ಹೀಗೆ ಶರಣಮೋನಪ್ಪಯ್ಯ ಚರಿತೆಯಲ್ಲಿ ಕಾಣಸಿಗುವ ಆಂತರಿಕ ಆಧಾರದ ಮೇಲಿನಿಂದ ಡಾ. ಹಳ್ಳಿಕೇರಿಯವರ ಊಹೆಗೆ ಪುಷ್ಟಿ ದೊರೆಯುತ್ತಿದ್ದು. ಕೋಳೂರು ಶಂಕರ ಕವಿಯೇ 'ಸುಜ್ಞಾನಸುಧಾಕರ ಪಂಚವಿಂಶತಿ'ಯ ಕರ್ತೃ ಎಂದು ಹೇಳಬಹುದು.

ಶ್ರೀಗುರುವಿನ ಪಾದವರಾಗದಿ ನೆರೆನಂಬುಚಂದಮಾಮ
ಭವಸಾಗರದಾಂಟಿಸಿ ನಿಜಪದವಿತ್ತನು

ಎಂಬ ಪಲ್ಲವಿಯೊಂದಿಗೆ ಈ ಕೃತಿ ಆರಂಭವಾಗುತ್ತದೆ. ಮುಂದೆ ಇಪ್ಪತ್ತೈದು ಪದ್ಯಗಳಲ್ಲಿ 'ಜೀವ'ವು ಸ್ವಸ್ವರೂಪವನ್ನು ಅರಿಯುವ ಕುರಿತಾಗಿ ತಾತ್ವಿಕ ವಿವರಗಳು ಬರುತ್ತವೆ.

೭.೧.೨. ಸಾರ

ಗುರುವಿನ ಮಹಿಮೆಯನ್ನು ವರ್ಣಿಸುವಲ್ಲಿ ಪಲ್ಲವಿಯಲ್ಲಿ ಪ್ರೀತಿಯಿಂದ ಗುರುವಿನ ಪಾದವನ್ನು ನಂಬಿದರೆ ಭವಸಾಗರವನ್ನು ದಾಟಿಸಿ ಲೌಕಿಕದ ಹಂಗನ್ನು ಬಿಡಿಸಿ ಶಾಶ್ವತ ಪದವಿಯನ್ನು ನೀಡುತ್ತಾನೆ.

ನಿಜಕ್ಕೂ ನೀನಾರು, ನಿನ್ನ ಹೆತ್ತವರಾರು, ಹೆಸರೇನು ಎಂದು ತಿಳಿದುಕೊಳ್ಳದೆ ವ್ಯರ್ಥವಾಗಿ ಬದುಕದಿರು, ಮಾನವನಾಗಿ ಹುಟ್ಟಿದ ಮೇಲೆ 'ನೀ ನಿನ್ನ ನಿಜವನರಿಯದಿಂತು ಮರವಾರೆ' (ಸುಜ್ಞಾನ ಸುಧಾಕರ ಪಂಚವಿಂಶತಿ, ಪು. ೧)

> ಬಹುಶಾಸ್ತ್ರಗಳ ಕೇಳಿ ಬ್ರಾಂತನಾಗಿರಬ್ಯಾಡ
> ಬಹುಕರ್ಮಗಳು ನಿನ್ನ ಬ್ರಷ್ಟಮಾಡುತ ತಾನೆ
> ಮಹಿಜನಮಾಡುವ ವ್ರತನೇಮ ನಿಷ್ಫಲ (ಪು.೨)

ಎಂದು ಎಚ್ಚರಿಸುತ್ತ ನಿನ್ನೊಳಗಿರುವ ನಿಜವಸ್ತುವನ್ನು ನೀ ತಿಳಿದುಕೋ, ನಿನ್ನನ್ನು ನೀನು ಅರಿತರೆ ನೀನೆ ನಿರ್ಮಾಯ, ನಿನ್ನ ಮರವೆಯೇ ಮಾಯೆ, ನಿನ್ನನ್ನು ನೀನು ಅರಿತುಕೊಳ್ಳುವುದಾದರೆ 'ಮಾಯಾತಮವೇ ಜ್ಯೋತಿ'ಯಾಗಿ ಮಾರ್ಪಡುತ್ತದೆ. ಎಲ್ಲ ಬಲ್ಲವರ ಸಂಗಮಾಡು ನಿನ್ನ ಮೂಲಾಧಾರದಲ್ಲಿ ಮೂಲ ಅಗ್ನಿ ಅಪ್ಪುತತ್ವದಿಂದ ಬಡವಾಗ್ನಿ, ನಾಭಿಯ ಮಣಿಪೂರದಲ್ಲಿ ಪಂಚಾಗ್ನಿಗಳು ತನ್ನ ಹೃದಯವಾಯುವನ್ನು ಕೂಡಲು ಪಟುವಾಗಿ ಉರಿದೆದ್ದು ಗಗನದಲ್ಲಿ ಚಿದಾಗ್ನಿ ಪ್ರಕಾಶದಿಂದ ಸಪ್ತಸಮುದ್ರ ಘೋಷವನ್ನು ಮೀರಿಸುವಂತೆ ಮೊರೆಯುತ್ತ ಹತ್ತುವುದು, ಮೂಲ ಪ್ರಣವನಾದ, ಇದೇ ಬ್ರಹ್ಮವಲ್ಲವೇ? ಇದುವೆ ಚಿತ್ಪ್ರಭೆ, ಪರಮಾತ್ಮ, ಪರಂಜ್ಯೋತಿ, ಇದೇ ಸಾಕ್ಷಾತ್‌ವಸ್ತು. ಇದು ತೆರಹಿಲ್ಲದಂತೆ ಕುರುಹಿಲ್ಲದಂತೆ ಬ್ರಹ್ಮಾಂಡವನ್ನು ವ್ಯಾಪಿಸಿದೆ. ಇದು ಆತ್ಮದಲ್ಲಿ ಬೆರೆಯಲು ಆ ನಾದ ಬಿಂದು ಚಿತ್ಕಳೆಗೂಡಿ ಪ್ರಣಮಪರಂಜ್ಯೋತಿ ಸಾಕಾರವಾಗುತ್ತದೆ. ಆ ಪ್ರಣಮನೇ ನೀನು ಎಂದು ತಿಳಿಹೇಳಿ ವಿವರವಾಗಿ ಅದರ ಸ್ವರೂಪವನ್ನು ವಿವರಿಸುತ್ತಾನೆ.

ಸ್ಥೂಲಾಂಗದಲ್ಲಿ ಜೀವಾತ್ಮ, ಸೂಕ್ಷ್ಮಾಂಗದಲ್ಲಿ ಅಂತರಾತ್ಮ, ಕಾರಣಾಂಗದಲ್ಲಿ ಪರಮಾತ್ಮರಿರುತ್ತಾರೆ. ಈ ಆಲಯದೊಳಿದ್ದೂ ಅವರು ನಿನ್ನನ್ನರಿಯದೆ, ನೀನೇ ಎಲ್ಲವೂ, ಎಲ್ಲರೊಳಗಿದ್ದೂ ಇಲ್ಲದಂತಿರುವೆ ಸರ್ವಾತ್ಮ, ಸರ್ವೇಶ, ಸರ್ವಸಾಕ್ಷಿಕನೀನೆ (ಪ ೨೩) ಅರಿವು ನೀನಾಗಿದ್ದುಕೊಂಡು, ಎಲ್ಲಕ್ಕೂ ಕುರುಹು ತೋರಿ, ಅರಿಯದಂತೆ ಬೆರೆತು ಬೇರು ಬಿಟ್ಟಿರುವ ಅರುಹಿನ ತಿರುಳು ನೀನೇ ನಿಶ್ಚಿತ. ಅರಿತವರ ಹೃದಯದಲ್ಲಿ ಪರಿಪೂರ್ಣನಾಗಿರುವೆ ಹೀಗಿರುವ ನಿನ್ನ ನಿಜವನ್ನು ಬಲ್ಲವರಾರು? ಎಂದು ಕಳಕಳಿಯಿಂದ ಪ್ರಶ್ನಿಸುತ್ತಾನೆ. ಶಾಂತಸದ್ಗುರು ಪಾದನೇ, ಸೇವೆಗೈದವರಿಗೆ ನೀನುಂಟು ಇಂಥ ನಿಜವಸ್ತು ನೀನೇ ಕೋಳೂರೇಶ (ಪ. ೨೫) ಎಂದು ಮುಕ್ತಾಯವಾಗುತ್ತದೆ.

೭.೧.೩. ಕೃತಿ ವಿಮರ್ಶೆ

ಅಂತಃಕರಣ ಚತುಷ್ಟಯ, ಪಂಚಪ್ರಾಣವಾಯುಗಳು, ಪಂಚಭೂತಗಳು ಪಂಚಜ್ಞಾನೇಂದ್ರಿಯಗಳು ಮತ್ತು ಜೀವ ಈ ಇಪ್ಪತ್ತೈದು ತತ್ವಗಳ ಸಂಕ್ಷಿಪ್ತ ನಿರೂಪಣೆ ಈ ಕೃತಿಯ ಮುಖ್ಯವಸ್ತು. ಸೂಕ್ಷ್ಮವಾಗಿ ಸಾಮಾಜಿಕ ವಿಡಂಬನೆಯೊಂದಿಗೆ ತಾತ್ವಿಕ ವಿವೇಚನೆಯನ್ನು ಒಳಗೊಂಡಿರುವ ಈಕೃತಿಯ ಹೆಸರೇ ಸೂಚಿಸುವಂತೆ ಮಾನವ ಜೀವಿಗಳಿಗೆ 'ಸುಜ್ಞಾನಸುಧೆ'ಯನ್ನು ಉಣಬಡಿಸುತ್ತದೆ.

ಸಾಮಾಜಿಕ ವಿಡಂಬನೆ : ಮಾನವ ಸಂಘಜೀವಿ ಆತನು ತನ್ನ ಸುತ್ತ ಕಟ್ಟಿಕೊಂಡಿರುವ ಸಮಾಜ ಅವನ ಏಳು ಬೀಳುಗಳಿಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಾರಣವಾಗುತ್ತಿರುತ್ತದೆ. ಹಲವಾರು ಧರ್ಮಗಳು, ಶಾಸ್ತ್ರಗಳು ಮಾನವನನ್ನು ಗೊಂದಲಕ್ಕೀಡು ಮಾಡುವುದು ಸಹಜ ಅದಕ್ಕೆಂದೇ ಕವಿಯು

ಬಹುಶಾಸ್ತ್ರಗಳ ಕೇಳಿ ಭ್ರಾಂತನಾಗಿರಬ್ಯಾಡ
ಬಹುಕರ್ಮಗಳು ನಿನ್ನ ಬ್ರಷ್ಟಮಾಡುತೆತಾನೆ
ಮಹಿಜನ ಮಾಡುವ ವ್ರತ ನೇಮ ನಿಷ್ಫಲ (ಸು.ಸು.ಪಂ.ವಿ.ಪ-೨)

ಎಂದು ಸೂಕ್ಷ್ಮವಾಗಿ ಹತ್ತು ಹಲವು ಧರ್ಮ ಕರ್ಮಗಳು ಮನುಷ್ಯನನ್ನು ಭ್ರಷ್ಟನನ್ನಾಗಿಸುತ್ತವೆ. ಲೌಕಿಕರು ಮಾಡುವ ವ್ರತನೇಮಗಳೆಲ್ಲ ನಿಷ್ಫಲ ಎಂಬಲ್ಲಿ ದಾಸರು ಶರಣರ ಪ್ರಭಾವವನ್ನು ಗುರುತಿಸುತ್ತೇವೆ.

"ಎಲ್ಲವ ತಿಳಿದುಳಿದವರ ಸಂಗವಮಾಡು" (ಪ-೪)
"ನಿನ್ನೊಳಗಿಹ ನಿಜವಸ್ತುವ ನೀ ತಿಳಿ ಚಂದಮಾಮ
ನಿನ್ನ ನೀ ತಿಳಿದಾರೆ ನೀನೆ ನಿರ್ಮಯನು ಚಂದಮಾಮ
ನಿನ್ನ ಮರೆವೆಮಾಯತನು ನಿನ್ನ ಮುಸುಕಿದೆ ಚಂದಮಾಮ
ನಿನ್ನ ನೀನರಿವಡೆ ಮಾಯಾತಮವೇ ಜ್ಯೋತಿಚಂದಮಾಮ" (ಪ-೩)

ಎಂದು ಮಾರ್ಮಿಕವಾಗಿ ಬೋಧಿಸುತ್ತ ಮನುಷ್ಯನು ತನ್ನ ಅಂತರಗದಲ್ಲಿರುವ ಪರಮಾತ್ಮನನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತಾನೆ. "ಅರಿತರೆ ಶರಣ, ಮರೆತರೆ ಮಾನವ" ಎಂಬಂತೆ ನಿನ್ನನ್ನು ನೀನು ಅರಿತುಕೊಳ್ಳುವುದಾದರೆ ಮಾಯಾತಮವೇ ಜ್ಯೋತಿಯಾಗಿ ಮಾರ್ಪಡುತ್ತದೆಂದು ಅರ್ಥಗರ್ಭಿತವಾಗಿ ತಿಳಿಸುತ್ತಾನೆ. ಸಜ್ಜನರ ಸಂಗದಲ್ಲಿದ್ದುಕೊಂಡು ಪೂರ್ಣ ಸಮರ್ಪಣ ಭಾವತಳೆದರೆ ಪರವಸ್ತುವನ್ನರಿಯಬಹುದು ಎನ್ನುತ್ತಾನೆ.

ತಾತ್ವಿಕ ವಿವೇಚನೆ

ಜೀವಿಯು ತನ್ನ ಸ್ವಸ್ವರೂಪವನ್ನು ಅರಿತುಕೊಂಡರೆ ಪರವಸ್ತುವಿನ ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆಂಬ ಅಂಶವನ್ನು ಶಾಸ್ತ್ರೀಯವಾಗಿ ಅಷ್ಟೇ ಸರಳವಾಗಿ ತಿಳಿಸಿಕೊಡುತ್ತಾನೆ.

"ನೀನಾರು? ಎಂಬುದನ್ನು ಅರಿಯದೆ ಹೋದರೆ
ಮಾನವನಾಗಿ ಮರ್ತ್ಯಕೆ ಬಂದ ಫಲವೇನು
ನಿನ್ನ ಮೂಲಾಧರದಲ್ಲಿ ಮೂಲಾಗ್ನಿಯು
ಚೆನ್ನಾಗಿ ಅಪ್ಪುತತ್ವದಿ ಬಡಬಾಗ್ನಿಯು
ಇನ್ನು ನಾಭಿಯ ಮಣಿಪೂರದಿ ಪಂಚಾಗ್ನಿ
ತನ್ನ ಹೃದಯ ವಾಯುವ ಕೂಡಿದವಾಗಿ" (ಪ. ೫)

ಪಟುವಾಗಿ ಉರಿದೆದ್ದು ಗಗನದಲ್ಲಿ ಚಿದಾಗ್ನಿ ಪ್ರಕಾಶದಿಂದ ಸಪ್ತಸಮುದ್ರ ಘೋಷವನ್ನು ಮೀರಿಸುವಂತೆ ಮೊರೆಯುತ್ತ ಹತ್ತುವುದು ಮೂಲ ಪ್ರಣವನಾದ ಇದೇ ಬ್ರಹ್ಮ ಇದುವೇ ಸಾಕ್ಷಾತ್ವಸ್ತು ಪರಮಾತ್ಮ ಇದು ಸರ್ವಾಂತರ್ಯಾಮಿ. ಇದು ಆತ್ಮನಲ್ಲಿಬೆರೆಯಲು ಆನಾದ ಬಿಂದು ಚಿತ್ಕಳೆಗೂಡಿ ಪ್ರಣಮ ಪರಂಜ್ಯೋತಿ ಸಾಕಾರವಾಗುತ್ತದೆ. ಆಪ್ರಣಮನೇ ನೀನು ಎಂದು ತಿಳಿಹೇಳಿ ಅದರ ಸ್ವರೂಪವನ್ನು ವಿವೇಚಿಸುತ್ತಾನೆ.

"ಪ್ರಣಮದಿಂದಲಿ ಪಂಚ ಪ್ರಣಮಂಗಳಾದವು
ಪ್ರಣಮವೈದರಿಂ ಪಂಚಬ್ರಹ್ಮರ ಜನಿತವು
ಜೆನಸಿದವವರಿಂದ ಪಂಚಭೂತಂಗಳು" (ಪ ೧೦)
"ಭೂತಂಗಳೊಂದ್ಯೆದು ಗುಣಗಳು ಪೆತ್ತವು
ಭೂತಂಗಳೊಂದ್ಯೆದು ಭುವನಂಗಳಾದವು
ನೊಸಲಗ್ನಿಯಲ್ಲಗ್ನಿಪಂಚಾಗ್ನಿವಾದವು" (ಪ. ೧೧)
"ಮಿಗೆ ವಾಯು ಗಗನಗಳೈದಾದವು
ಸೊಗಸಿಂದ ನಿನಗಿವು ಒಡಲಾದವು" (ಪ. ೧೨)

ಎಂದು ಪೃಥ್ವಿ ಅಪ್ಪು ಅಗ್ನಿ, ಅನಲ, ಪವನ, ಗಗನಾದಿಗಳಲ್ಲಿ ಬೆರೆತಿರುವ ತತ್ವಗಳನ್ನು ವಿವರವಾಗಿ ತಿಳಿಸಿ ಇವೆಲ್ಲ "ನಿನಗಂಗವಾದವು" (ಪ. ೧೯) ಎಂದು ಹೇಳುತ್ತಾನೆ. ಇವುಗಳನ್ನರಿಯದೆ ನೀನುಕೇವಲ ಜೀವಿಯಾಗಿರುವೆ, 'ಪರಮಾತ್ಮ' ನಿನ್ನೊಳಗೇ ಇರುವನು. (ಪ. ೨೧) ಮಾಯೆಯಿಂದಾಗಿ ನಿನಗೆ ಅರಿವಾಗುತ್ತಿಲ್ಲ. ಶಾಂತಸದ್ಗುರುವಿನ ಪಾದ ಸೇವೆ ಮಾಡಿದವನಿಗೆ ನಿಜವಸ್ತುವಿನ ಅರಿವಾಗುತ್ತದೆ. ಆ ನಿಜವಸ್ತುವೇ ಕೋಳೂರೇಶ ಎಂದು ಮಾನವ ಜನ್ಮದ ಆತ್ಯಂತಿಕ ಗುರಿ ಸ್ವಸ್ವರೂಪದರ್ಶನ ಎಂಬ ವಿಚಾರದ ಕಡೆಗೆ ಕವಿಯು ಬೆರಳು ಮಾಡಿ ತೋರಿಸುತ್ತಿದ್ದಾನೆ. ಹೀಗೆ ತಾತ್ವಿಕ ವಿವರಗಳಿಂದ ಸರಳವಾಗಿ ಪರಬ್ರಹ್ಮದ ಸ್ವರೂಪವನ್ನು ಚಿತ್ರಿಸುವ ಈ ಕೃತಿ ಪರಿಣತಮನಸ್ಸಿನ ಪ್ರತೀಕವಾಗಿದೆ. ಅಲ್ಲಲ್ಲಿ ವ್ಯಾಕರಣ ದೋಷಗಳು ಇಣುಕಿದರೂ ತನ್ನ ಅರ್ಥವಂತಿಕೆಯಿಂದ ಗಮನ ಸೆಳೆಯುತ್ತದೆ. ಮಾನವಜೀವನದ ಸಾರ್ಥಕತೆಯ ಅರಿವನ್ನು ಚಿಕ್ಕದಾಗಿ, ಚೊಕ್ಕದಾಗಿ ಮೂಡಿಸುವ ಈಕೃತಿ ಗಾತ್ರದಲ್ಲಿ ಕಿರಿದಾದರೂ ಸತ್ವದಲ್ಲಿ ನಿಜಕ್ಕೂ ಹಿರಿದೆನಿಸುತ್ತದೆ. ಕವಿಯ ದಟ್ಟವಾದ ಲೋಕಾನುಭವ ಪರಾನುಭೂತಿಗೆ ಮುಖಮಾಡಿರುವುದನ್ನಿಲ್ಲಿ ಗುರುತಿಸುತ್ತೇವೆ.

೭.೨. ಸ್ವರವಚನಗಳು

ಶಂಕರಕವಿಯು ಸ್ವರವಚನಗಳನ್ನೂ ರಚಿಸಿರುವ ಕುರಿತಾಗಿ ಡಾ. ಹಳ್ಳಿಕೇರಿಯವರು ಹೀಗೆ ಹೇಳುತ್ತಾರೆ. ಕೋಳೂರೇಶ ಅಂಕಿತವನ್ನೊಳಗೊಂಡ ಸ್ವರವಚನಗಳು ಮೌಖಿಕಪರಂಪರೆಯಲ್ಲಿ ಬಳ್ಳಾರಿ ಪ್ರದೇಶದ ಸುತ್ತಮುತ್ತ ಸಿಗುತ್ತವೆ. 'ಶಿವನ ನಿಜವು ಸಿಕ್ಕುವುದಿಲ್ಲಲ್ಲ' ಎಂದು ಆರಂಭವಾಗುವ ಸ್ವರವಚನವೊಂದು ಮಾತ್ರ ಇತ್ತೀಚೆಗೆ ಪ್ರಕಟಗೊಂಡಿದೆ."ಹೊತ್ತಿಸಿ ಹೋಮವ ಮಾಡಿದರೇನು. ಹಲವು ಮಂತ್ರವ ಜಪಿಸಿದರೇನು,

ಸತ್ಯಶರಣನ ನೆನೆಸಿದರೇನು ಶೀಲವನು ತಿರುಗಿ ಮಾಡಿದರೇನು ಗುರುವಿನಪಾದವ ಪರಮೇಶ್ವರನೆಂದು ನಂಬು ಎಂದು ಹೇಳುವಲ್ಲಿ ಕವಿ ಗುರುವಿನ ಮಹತ್ವವನ್ನು ಲೋಕಕ್ಕೆ ಸಾರಿದ್ದಾನೆ.[೫] ಈ ಮೂಲಕ ವೀರಶೈವ ತಾತ್ವಿಕ ಅಂಶಗಳ ನಿರೂಪಣೆಯೊಂದಿಗೆ ನೀತಿ ಬೋಧೆಯನ್ನು ಮಾಡುವ ಆಶಯ ಹೊಂದಿದ ಸ್ವರವಚನಗಳನ್ನು ಶಂಕರಕವಿಯು ರಚಿಸಿದ್ದಾನೆಂಬುದನ್ನು ತಿಳಿಯಬಹುದು.

ಕೊನೆಟಿಪ್ಪಣಿಗಳು

೧. ಡಾ. ಎಫ್.ಟಿ.ಹಳ್ಳಿಕೇರಿ ಕಂಠಪತ್ರ, ೨, ಪು.ಸಂ. ೫೫ ಮತ್ತು ೫೬

೨. ಅದೇ ಪು. ೫೫

೩. ಅದೇ ಪು. ೫೬

೪. ಎಂ.ಎಂ.ಕಲಬುರ್ಗಿ (ಸಂ) ಸ್ವರವಚನ ವಿಚಾರ ಸಂಕಿಣ ಸಂಪುಟ ಪು. ೧೯೭

೫. ಅದೇ ಪು. ೫೬

ಅಧ್ಯಾಯ ೮

ಸಮಾರೋಪ

ಅಧ್ಯಾಯ ೮

ಸಮಾರೋಪ

ಇಲ್ಲಿಯವರೆಗೆ ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯವನ್ನು ಕುರಿತು ಲಭ್ಯವಿದ್ದ ಆಕರಸಾಮಗ್ರಿಗಳ ಹಿನ್ನೆಲೆಯಲ್ಲಿ ವಿವೇಚಿಸಲಾಯಿತು. ಈ ಅಧ್ಯಾಯದಲ್ಲಿ ಒಟ್ಟಾಗಿ ಶಂಕರಕವಿಯ ವಿಶಿಷ್ಟತೆಯನ್ನು ಕುರಿತು ಅವಲೋಕಿಸಲಾಗಿದೆ.

ಕೋಳೂರು ಶಂಕರಕವಿ, ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿದ್ದ ಒಬ್ಬ ವಿಶಿಷ್ಟ ಸಮನ್ವಯ ಕವಿ. ಈತನ ಸ್ಥಳ ಬಳ್ಳಾರಿ ಜಿಲ್ಲೆಯ ಕೋಳೂರು. ರಾಮಲಿಂಗೇಶ್ವರ ಈತನ ಆರಾಧ್ಯ ದೈವ. ತನ್ನ ಪ್ರತಿಯೊಂದು ಕೃತಿಯಲ್ಲಿಯೂ ಶ್ರೀ ಕೋಳೂರು ರಾಮೇಶ ನುಡಿಸಿದೊಡೆ ಪೇಳ್ದ ಶಂಕರನು ಒಲಿದು, ಈ ಧರೆಯೊಳಧಿಕ ಶ್ರೀಕೋಳೂರವಾಸ ಶ್ರೀರಾಮೇಶನಾ ಸಾರಿದೇ ಎಂದು ಅತ್ಯಂತ ಭಕ್ತಿ ಗೌರವಗಳಿಂದ ಸ್ತುತಿಸಿದ್ದಾನೆ. ಕುಪ್ಪಸ ಕಂಥೆ ಗುರುವರ್ಯರ ಅಮಳಕರಸರಸಿರುಭವನಾದ ಈತ ಗುರು ಬಸವನಿಂದ ಲಿಂಗ ದೀಕ್ಷೆ ಪಡೆದವನು. ಉರವಕೊಂಡದ ಜಗದ್ಗುರುಗಳಾದ ಕೊಂಡಕುಂದೆ ಕರಿಬಸವರಾಜ ಯೋಗೀಂದ್ರರನ್ನು ಭಕ್ತಿಪೂರ್ವಕವಾಗಿ ತನ್ನ ಕಾವ್ಯಗಳಲ್ಲಿ ಸ್ತುತಿಸಿದ್ದಾನೆ. "ಶಿವನಂ ತದೀಯ ಶರಣವ್ರಜಮಂ" ಕುರಿತು ಕಾವ್ಯರಚನೆ ಮಾಡಿದ ಹರಿಹರನನ್ನೇ ತನ್ನ ಕಾವ್ಯ ಗುರುವನ್ನಾಗಿ ಸ್ವೀಕರಿಸಿದ ನಿಷ್ಠಾವಂತ ವೀರಶೈವ ಕವಿಗಳ ಸಾಲಿಗೆ ಶಂಕರಕವಿ ಹೊಸಸೇರ್ಪಡೆಯಾಗಿದ್ದಾನೆ. ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲೂ ಪರಿಣತನಾದ ಉಭಯ ಭಾಷಾ ವಿಶಾರದ. ತನ್ನ ಪ್ರತಿಯೊಂದು ಕೃತಿರಚನೆಯ ಕಾಲವನ್ನು ತಪ್ಪದೇ ಸೂಚಿಸಿದ್ದಾನೆ. ಆದ್ದರಿಂದ ಈತನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿಗೆ ಅವಕಾಶವೇ ಇಲ್ಲ. ಸಾಂಗತ್ಯ ಛಂದಸ್ಸಿನಲ್ಲಿ ಶರಣ ಮೋನಪ್ಪಯ್ಯ ಚರಿತೆಯನ್ನು ಶಾಲಿವಾಹನ ಶಕ ೧೬೭೬ರಲ್ಲಿ, ವಾರ್ಧಕ ಷಟ್ಪದಿಯಲ್ಲಿ 'ಬೆಜ್ಜವಾಡಿ ಮಾಧಾವಂಕಕಾವ್ಯ'ವನ್ನು ೧೬೭೯ರಲ್ಲಿ ವಾರ್ಧಕ ಷಟ್ಪದಿಯಲ್ಲಿ 'ಚೋರಬಸವೇಶ್ವರ ಕಾವ್ಯ'ವನ್ನು ೧೬೮೫ರಲ್ಲಿ, ವಾರ್ಧಕ ಷಟ್ಪದಿಯಲ್ಲಿ 'ನವಮೋಹನ ತರಂಗಿಣಿ'ಯನ್ನು ೧೬೯೬, ಹೀಗೆ ಎರಡು ದಶಕಗಳ ಕಾಲಾವಧಿಯಲ್ಲಿ ಇವುಗಳನ್ನು ರಚಿಸಿದ್ದಾನೆ. ಕೆಲವು ಸ್ವರವಚನಗಳನ್ನೂ, ಸುಜ್ಞಾನಸುಧಾಕರ ಪಂಚವಿಂಶತಿ ಎಂಬ ಕಿರುಕೃತಿಯನ್ನೂ ರಚಿಸಿ ವಸ್ತು ವೈವಿಧ್ಯ ಮತ್ತು ಛಂದೋ ವೈವಿಧ್ಯವನ್ನು ಮೆರೆದಿದ್ದಾನೆ.

[illegible]

[illegible]

[illegible]

'ಶರಣ ಮೋನಪ್ಪಯ್ಯ ಚಾರಿತ್ರ'ವು ಮೋನಪ್ಪಯ್ಯನನ್ನು ಕುರಿತು ರಚನೆಗೊಂಡ ಮೊಟ್ಟಮೊದಲ ಶಿಷ್ಟಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದಲ್ಲದೆ, ಅಂದಿನ ಯುಗಮಾನದ ಅಗತ್ಯವಾಗಿ ತಲೆದೋರಿದ ಹಿಂದೂ-ಮುಸ್ಲಿಂ ಸಮನ್ವಯವನ್ನು ಸಾರುವ ಕೃತಿ. ಕನ್ನಡ ಸಾಹಿತ್ಯದಲ್ಲಿ ಮಹತ್ವದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ದಾಖಲೆಯಾಗಿ ನಿಲ್ಲುವ ಕೃತಿ. ಹರಿಹರ ಮತ್ತು ಚಾಮರಸರು ಕಂಡರಿಸಿದ ಅಲ್ಲಮ ಪ್ರಭುವಿನ ವ್ಯಕ್ತಿತ್ವದ ಪ್ರಭಾವವನ್ನು ಎರಕ ಹೊಯ್ದಂತೆ ಮೋನಪ್ಪಯ್ಯನನ್ನು ಚಿತ್ರಿಸಿರುವ ಈ ಕಾವ್ಯ ನಿಜವಾದ ಶರಣತ್ವಕ್ಕೆ ತಕ್ಕಮಾದರಿಯನ್ನು ರೂಪಿಸಿಕೊಟ್ಟಿದೆ. ಕನ್ನಡದ ವೀರಶೈವ ಪುರಾಣಗಳ ಹಿನ್ನೆಲೆಯಲ್ಲಿ ನೋಡಿದಾಗ 'ಶರಣ ಮೋನಪ್ಪಯ್ಯ ಚಾರಿತ್ರ'ವು ಸಾಧಿಸಿರುವ ಅನನ್ಯತೆ ಸ್ವಂತಿಕೆಗಳು ಪ್ರಶಂಸಾರ್ಹವಾಗಿವೆ. ಕವಿತ್ವದ ದೃಷ್ಟಿಯಿಂದ ಸಾಮಾನ್ಯವಾಗಿದ್ದರೂ ಸಂಸ್ಕೃತಿಯ ದೃಷ್ಟಿಯಿಂದ ವಿಶಿಷ್ಟ ಕೃತಿಯಾಗಿದೆ.

'ಬೆಜ್ಜವಾಡಿ ಮಾಧವಾಂಕಕಾವ್ಯ'ವು ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನವನ್ನು ಮೂಲ ಆಕರವಾಗಿಟ್ಟುಕೊಂಡು ರಚಿತವಾದ ಷಟ್ಪದಿಕಾವ್ಯ. ಷಡಕ್ಷರದೇವನ ರಾಜಶೇಖರ ವಿಳಾಸದಂತೆ ಅಷ್ಟಾದಶ ವರ್ಣನೆಗಳ ವ್ಯಾಮೋಹದಲ್ಲಿ ಸಿಲುಕಿದ್ದರೂ ತನ್ನದೇ ಆದ ಸ್ವಂತಿಕೆಯನ್ನು ಮೈಗೂಡಿಸಿಕೊಂಡಿರುವ ಕಾವ್ಯ. ರಾಜನೀತಿಯನ್ನು ತಮ್ಮ ಕಾವ್ಯದಲ್ಲಿ ವಿಸ್ತಾರವಾಗಿ ತಂದ ಕೆಲವೇ ಕೆಲವು ವೀರಶೈವ ಪುರಾಣ ಮತ್ತು ಪುರಾಣ ಛಾಯಾ ಕೃತಿಗಳಲ್ಲಿ ಮಾಧವಾಂಕ ಕಾವ್ಯವೂ ಒಂದು.ವಿಸ್ತೃತವಾದ ವೀರಶೈವ ತತ್ವನಿರೂಪಣೆ ಮತ್ತು ಸೂಕ್ಷ್ಮವಾದ ಸಮಾಜ ದರ್ಶನದ ನಿರೂಪಣೆ ಕಾರಣವಾಗಿ ಪ್ರಸ್ತುತ ಕಾವ್ಯವು ಒಂದು ಪುಟ್ಟ ವೀರಶೈವತತ್ವದ ಕೈಪಿಡಿಯಾಗಿಯೂ ಜಾನಪದ ಆಕರಕೋಶವಾಗಿಯೂ ಸ್ಥಾನಪಡೆಯಲು ಅರ್ಹವಾಗಿದೆ.

'ಚೋರಬಸವೇಶ್ವರಕಾವ್ಯ'ವು ಕನ್ನಡದ ಮೇಲ್ತರಗತಿಯ ಸತ್ಕಾವ್ಯಗಳಲ್ಲಿ ಒಂದು. ನಿಜಕ್ಕೂ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ ಕಾವ್ಯವಾಗಿದೆ. ಶಿವಶರಣರ ಕಥೆಯ ಜೊತೆಗೆ ಶಿವಕವಿಚಾಮರಸನ ಕಥೆಯನ್ನೂ ಒರೆಯುವ ಈ ಕಾವ್ಯವು ತನ್ನ ಕಥನಕ್ರಮದಿಂದಾಗಿ ವಿಶಿಷ್ಟ ನಿರ್ಮಿತಿಯಾಗಿ ತನ್ನತನವನ್ನು ಛಾಪಿಸಿದೆ. ತನ್ನ ಸರಳ ಭಾಷಾಶೈಲಿ, ಬಿಗುವಾದ ಬಂಧ, ಮತ್ತು ಕಥನ ತಂತ್ರಗಳಿಂದಾಗಿ ತನ್ನ ಮುಂದಿನವರ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಉದಾ: ಜೋಳದರಾಶಿ ದೊಡ್ಡನ ಗೌಡರು, ನಾಟಕಕಾರ ಚಂದ್ರಯ್ಯ ಇತ್ಯಾದಿ.

'ನವಮೋಹನ ತರಂಗಿಣಿ'ಯು ಕನಕದಾಸರ 'ಮೋಹನತ ರಂಗಿಣಿ'ಯನ್ನು ಆಧರಿಸಿ ರಚಿತವಾಗಿದ್ದರೂ ವೀರಶೈವ ತತ್ವಗಳ ಸಂಕ್ಷಿಪ್ತದರ್ಶನ, ಪಿಂಡೋತ್ಪತ್ತಿ ಲಕ್ಷಣ ವಿವರಣೆ ಹಾಗೂ ಅಪಾರ ಸಾಮಾಜಿಕ ತುಡಿತಗಳ ಕಾರಣವಾಗಿ ಸಮಕಾಲೀನ ಸಂಸ್ಕೃತಿಯ ಸಮೃದ್ಧದಾಖಲೆಯಾಗಿ ನಿಲ್ಲುತ್ತದೆ. ಕನಕದಾಸರಂತೆ ಹರಿ-ಹರ ಸಮನ್ವಯತೆಯ ಭಾಗವತ ದೃಷ್ಟಿಕೋನವನ್ನು ಸಾರುವ ಈ ಕೃತಿ ಶಂಕರಕವಿಗೆ 'ಸಮನ್ವಯ ಕವಿ'ಯ ಪಟ್ಟ ದೊರಕಿಸಿ ಕೊಡುವಲ್ಲಿ ಬಲವಾದ ಒತ್ತಾಸೆಯಾಗಿ ನಿಲ್ಲುತ್ತದೆ. ಕನಕದಾಸರ ವರ್ಣನಾಚಾಪಲ್ಯಕ್ಕೆ ಒಳಗಾದ ಸನ್ನಿವೇಶಗಳನ್ನು ಹೊರತುಪಡಿಸಿದರೆ ಉತ್ತಮ ಷಟ್ಪದಿಕಾವ್ಯವಾಗಿ ಈ ಕೃತಿಯು ಗಮನ ಸೆಳೆಯುತ್ತದೆ. ಗುರುವಿನ ಮಹತಿಯನ್ನು ಸಾರುವ ಸ್ವರವಚನ, ಪರಿಣತ ಪ್ರಜ್ಞೆಯ ಪ್ರತೀಕವಾಗಿ ನಿಲ್ಲುವ 'ಸುಜ್ಞಾನಸುಧಾಕರ

ಪಂಚವಿಂಶತಿ' ಕೃತಿಗಳು ಕವಿಯ ಮಾಗಿದ ವ್ಯಕ್ತಿತ್ವಕ್ಕೆ ಸಾಕ್ಷ್ಯ ನುಡಿವುದಲ್ಲದೇ ಆತನನ್ನು ಅನುಭಾವಿ ವೀರಶೈವ ಸಂತನ ಸ್ಥಾನದಲ್ಲಿ ನಿಲ್ಲಿಸುತ್ತವೆ.

ಪ್ರಧಾನವಾಗಿ ಮತದಿಂದ ವೀರಶೈವನಾಗಿರುವ ಶಂಕರಕವಿಯು ತನ್ನ ಎಲ್ಲ ಕೃತಿಗಳಲ್ಲೂ ಕಥಾನಾಯಕನು ವೀರಶೈವ ತತ್ವಗಳೊಂದಿಗೆ ಅನುಸಂಧಾನ ನಡೆಸುವ ಚಿತ್ರಣ ಮಾಡಿದ್ದಾನೆ. ಈತನ ಎಲ್ಲ ಕೃತಿಗಳೂ ಅಂದಿನ ಕಾಲದಲ್ಲಿ ಪ್ರಚಲಿತವಾಗಿದ್ದ ಶೈವ ಮತ್ತು ವೀರಶೈವ ಸಮ್ಮಿಶ್ರರೂಪಕ್ಕೆ ಸಾಕ್ಷಿ ನುಡಿಯುತ್ತವೆ.

ವೇದ, ಆಗಮ, ಪುರಾಣ, ಭಾರತ, ರಾಮಾಯಣ, ಭಾಗವತಗಳ ಜ್ಞಾನವುಳ್ಳ ಶಂಕರಕವಿಯ ಬಹುಶ್ರುತತ್ವ ದಂತೆಯೇ ಆತನ ಸಾಮಾಜಿಕ ಕಳಕಳಿ ತುಂಬ ಗಮನಸೆಳೆಯುತ್ತದೆ. ಸ್ತ್ರೀಸ್ವಾತಂತ್ರ್ಯ, ಸಮಾನತೆ, ಬಹು ದೇವತೋಪಾಸನೆಯ ಖಂಡನೆ. ಏಕೇಶ್ವರವಾದ, ಡಾಂಭಿಕರ, ಧೂರ್ತರ ಕುರಿತಾದ ವಿಡಂಬನೆ, ಸಮಾಜ ವಿಮರ್ಶೆ, ಶೀಲಚಾರಿತ್ರ್ಯದ ಕುರಿತಾದ ವ್ಯಾಖ್ಯಾನ ಸರ್ವಧರ್ಮ ಸಮನ್ವಯತೆ, ಅರ್ಹರಿಗೆ ಅಧಿಕಾರ ದೊರೆಯಬೇಕೆಂಬ ಚಿಂತನೆಗಳು ಕವಿಯ ಕ್ರಾಂತಿಕಾರಿ ಮನೋಭಾವಕ್ಕೆ ಕನ್ನಡಿ ಹಿಡಿಯುತ್ತವೆ. ಶಿವಶರಣರ, ದಾಸರ ಸೂಫಿಸಂತರ ಪ್ರಭಾವಕ್ಕೆ ಒಳಗಾಗಿರುವ ಶಂಕರಕವಿಯ ಕೃತಿಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಚಾರಿತ್ರಿಕವಾಗಿ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಅಂದಿನ ಸಮಾಜದಲ್ಲಿದ್ದ ಮತ ಮತಗಳ ನಡುವಣ ಸೂಕ್ಷ್ಮ ಸಂಘರ್ಷದ ಸಂಧಿಕಾಲದಲ್ಲಿ 'ಸಮನ್ವಯತೆ'ಯ ಸಂಕೇತವಾಗಿ ಈತನ ಕೃತಿಗಳು ಗುರುತರ ಹೊಣೆಗಾರಿಕೆಯನ್ನು ನಿಭಾಯಿಸಿದಂತಿದೆ. ಈ ಮೂಲಕ ೧೮ ಮತ್ತು ೧೯ನೆಯ ಶತಮಾನದ ನಿಸ್ತೇಜ ಕಾಲದ ಬೆಳ್ಳಿಕಿರಣವಾಗಿ ಶಂಕರಕವಿ ಗೋಚರಿಸುತ್ತಾನೆಂದು ಹೇಳಬಹುದು. ಒಟ್ಟಿನಲ್ಲಿ ಉತ್ತಮ ಷಟ್ಪದಿಕಾರನಾಗಿ, ಪುರಾಣ ಕಾವ್ಯ ರಚನಾಕಾರನಾಗಿ, ನಿಷ್ಠಾವಂತ ವೀರಶೈವ ಕವಿಯಾಗಿ ವೀರಶೈವ ಧರ್ಮ, ಸಮಾಜ-ಸಾಹಿತ್ಯ-ಸಂಸ್ಕೃತಿಗಳಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾನೆ ಶಂಕರಕವಿ.

[illegible]

ಅನುಬಂಧ

ಗ್ರಂಥಋಣ

೧. ಅವಲೋಕನ, ಎಚ್ಚೆಸ್ಕೆ, (ಸಂ) ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೨. ಕನ್ನಡ ಆಧುನಿಕ ನಾಟಕಗಳಲ್ಲಿ ಬಸವಪುರಾಣ, ಡಾ. ಬಿ.ವಾಯ್.ಪಾಟೀಲ, ಹಿಮಪೂರ್ಣ ವಿದ್ಯಾನಗರ, ಹರಿಹರ, ೨೦೦೧.

೩. ಕಂಠಪತ್ರ-೨, ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪.

೪. ಕನಕ ಸಾಹಿತ್ಯ ದರ್ಶನ ಸಂಪುಟ-೩, ಮೋಹನ ತರಂಗಿಣಿ, (ಸಂ) ಜಿ.ಬಿ.ಮಂಜುನಾಥನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೯.

೫. ಕನ್ನಡ ಸಾಂಗತ್ಯ ಸಾಹಿತ್ಯ, ಡಾ. ರಾಜೂರ ವ್ಹಿ.ಬಿ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೬. ಕನಕ ಸಾಹಿತ್ಯ ದರ್ಶನ, ಸಂಪುಟ-೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, (ಸಂ) ಡಾ. ದೇ.ಜವರೇಗೌಡ, ೧೯೯೦.

೭. ಕನ್ನಡ ಕೈಪಿಡಿ. ಸಂಪುಟ-೧, (ಪ್ರ.ಸಂ) ಡಾ. ಕೆ.ವಿ.ಪುಟ್ಟಪ್ಪ, ಎಂ.ಎ. ಡಿ.ಲಿಡ್., ಮೈ.ವಿ.ವಿ. ಕನ್ನಡ ಗ್ರಂಥಮಾಲೆ-೩೮, ೧೯೮೮.

೮. ಕನ್ನಡ ಛಂದಃಸ್ವರೂಪ, ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, ಮೈಸೂರು, ೧೯೭೮.

೯. ಕರ್ನಾಟಕ ಚರಿತ್ರೆ, ಸಂಪುಟ-೩, (ಪ್ರ.ಸಂ) ಪ್ರೊ. ಬಿ.ಷೇಕ್‌ಅಲಿ, ಸಂ. ಪ್ರೊ. ಕೆ.ಎಸ್. ಶಿವಣ್ಣ, ಪ್ರಸಾರಾಂಗ ಕ.ವಿ.ವಿ., ಹಂಪಿ, ೧೯೯೭.

೧೦. ಕರ್ನಾಟಕ ಸಂಗಾತಿ, (ಪ್ರ.ಸಂ) ಪ್ರೊ. ಬರಗೂರು ರಾಮಚಂದ್ರಪ್ಪ, (ಸಂ) ಪ್ರೊ. ಡಾ. ಬಸವರಾಜ ಕಲ್ಗುಡಿ, ೨೦೦೨.

೧೧. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ, ಮೊದಲನೆಯ ಸಂಪುಟ, ಮೈಸೂರು ವಿಶ್ವವಿದ್ಯಾನಿಲಯ, (ಪ್ರ.ಸಂ) ಡಾ. ಹಾ.ಮಾ.ನಾಯಕ, ೧೯೭೪.

೧೨. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ, ೫ನೆಯ ಸಂಪುಟ, ಮೈಸೂರು ವಿಶ್ವವಿದ್ಯಾನಿಲಯ, (ಪ್ರ.ಸಂ) ಡಾ. ಹಾ.ಮಾ.ನಾಯಕ, ೧೯೮೧.

೧೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು-೪, ೧೯೯೭.

೧೪. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಸಿ.ವೀರಣ್ಣ, ನವಕರ್ನಾಟಕ ಪಬ್ಲಿಕೇಷನ್ಸ್, ೧೯೮೬.

೧೫. ಕನ್ನಡ ಸಾಹಿತ್ಯ ಚರಿತ್ರೆ, ಡಾ. ರಂ.ಶ್ರೀ.ಮುಗಳಿ, ಕಿರಿಯ ಆವೃತ್ತಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೨೦೦೦.

೧೬. ಕೋಳೂರು ಶಂಕರ ಕವಿಯ ಶರಣ ಮೋನಪ್ಪಯ್ಯನ ಚಾರಿತ್ರ, (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೨೦೦೭.

೧೭. ಕನ್ನಡ ಸಂಶೋಧನ ಶಾಸ್ತ್ರ, ಡಾ ಎಂ.ಎಂ. ಕಲಬುರ್ಗಿ, ಸೌಜನ್ಯ ಪ್ರಕಾಶನ, ಕಲ್ಯಾಣನಗರ, ಧಾರವಾಡ, ೧೯೯೨.

೧೮. ಕರ್ನಾಟಕ ಚರಿತ್ರೆ ಸಂಪುಟ-೪, ಪ್ರಧಾನ ಸಂಪಾದಕರು ಹಾಗೂ ಲೇಖಕರು ಪ್ರೊ.ಬಿ. ಷೇಕ್‌ಅಲಿ ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೭.

೧೯. ಕನ್ನಡ ಛಂದೋವಿಕಾಸ, ಡಾ. ಡಿ.ಎಸ್.ಕರ್ಕಿ, ಭಾರತ ಬುಕ್ ಡಿಪೋ ಮತ್ತು ಪ್ರಕಾಶನ, ಧಾರವಾಡ, ೧೯೯೭.

೨೦. ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೨೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ.ಚಿದಾನಂದಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

೨೨. ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಕಮಲಾಪುರ, ೫೮೩೨೨೧, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ, ಪ್ರ.ಮು., ೧೯೯೬.

೨೩. ಗುಬ್ಬಿ ಮಲ್ಲಣಾರ್ಯ ವಿರಚಿತ ಭಾವ ಚಿಂತಾರತ್ನಂ, ದಾವಣಗೆರೆ ಸಾಹಿತ್ಯ ಸಂಘ, ದಾವಣಗೆರೆ, ಎಂ.ಜಿ.ನರಸಿಂಹಾಚಾರ್.ಬಿ.ಎ., ಕಥವಾಡಿಪುರ, ಅಗ್ರಹಾರ, ಮೈಸೂರು, ೧೯೩೩.

೨೪. ಗೂಳೂರು ಸಿದ್ಧವೀರಣ್ಣೊಡೆಯ ವಿರಚಿತ ಪ್ರಭುದೇವರ ಶೂನ್ಯ ಸಂಪಾದನೆಯ ಸಂಗ್ರಹ, ಸಂ. ಶ್ರೀಮತಿ ಜಿ.ವಿ.ಉಮಾರಾಜಶೇಖರ್, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೯೮.

೨೫. ಚಾಮರಸನ ಪ್ರಭುಲಿಂಗಲೀಲೆ, ಗದ್ಯಾನುವಾದ, ಡಾ. ಎಸ್.ವಿದ್ಯಾಶಂಕರ, ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೨೬. ಚಾಮರಸ ಭಾಗ-೧ ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು, (ಸಂ) ದಿ ವಿ.ಸೀತಾರಾಮಯ್ಯ, ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, ೧೯೮೭.

೨೭. ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ, ಡಾ. ಎಂ.ಎಂ.ಪಡಶೆಟ್ಟಿ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೨.

೨೮. ತಿಂಥಿಣಿ ಮೌನೇಶ್ವರರ ವಚನಗಳು, (ಪ್ರ.ಸಂ) ಡಾ. ಎಂ.ಬಿ.ಕೊಟ್ರಶೆಟ್ಟಿ, ಕಾರ್ಯನಿರ್ವಾಹಕ ನಿರ್ದೇಶಕರು, (ಸಂ) ಸಿ.ಬಿ.ಕಡಕೋಳ್, ಕೆ.ಈರಣ್ಣ, ೧೯೮೫, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೯. ತೌಲನಿಕ ಕಾವ್ಯ ಮಿಮಾಂಸೆ, ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು ೮, ೧೯೯೦.

೩೦. ದಾರ್ಶನಿಕ ಕಾವ್ಯ ಮಿಮಾಂಸೆ, ಕುವೆಂಪು, (ಸಂ) ಹಾ.ಮಾ.ನಾಯಕ, ವಿಶ್ವ ಕನ್ನಡ ಸಮ್ಮೇಳನ, ೧೪೩, ಎ.ನೃಪತುಂಗರಸ್ತೆ, ಬೆಂಗಳೂರು, ೧೯೮೩.

೩೧. ಧೂಪದ ಶಾಂತೇಶ ಕವಿಯ ಸತ್ಯೇಂದ್ರ ಚೋಳ ಚಾರಿತ್ರ, (ಸಂ) ಮಂಜುನಾಥನ್ ಜಿ.ಜಿ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೮.

೩೨. ನಿರ್ವಚನ, (ಸಂ) ಪ್ರೊ. ಚಂದ್ರಶೇಖರ ವಸ್ತ್ರದ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೯.

೩೩. ನವಮೋಹನ ತರಂಗಿಣಿ, ಬಳ್ಳಾರಿ ಮಾಣಿಕ್ಯಂ ಪ್ರೆಸ್, ಬಳ್ಳಾರಿ.

೩೪. ಪುರಾಣ ಭಾರತ ಕೋಶ, ಯಜ್ಞನಾರಾಯಣ ಉಡುಪ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೩೫. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಚಿತ್ರಗಳು, ಡಾ. ಎಚ್.ಜಿ.ಶ್ರೀಧರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.

೩೬. ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಡಾ. ರಂ.ಶ್ರೀ ಮುಗಳಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೫.

೩೭. ಪ್ರಭುಲಿಂಗ ಲೀಲೆ, ಗದ್ಯಾನುವಾದ ಸಂಗ್ರಹ, ಡಾ. ಬಿ.ಕೆ.ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ೨೦೦೦.

೩೮. ಬಸವೇಶ್ವರನ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ೧೯೭೬.

೩೯. ಬಸವಣ್ಣ ಹಾಗೂ ಲಿಂಗಾಯತ ಧರ್ಮ, ಬಸಮಾರ್ಗ-೭ ಹಿರೇಮಲ್ಲೂರ ಈಶ್ವರನ್ ಯಾರ್ಕ ವಿಶ್ವವಿದ್ಯಾಲಯ ಟೊರಾಂಟೊ, ಕೆನಡಾ,. ಶ್ರೀ ಬಸವೇಶ್ವರಪೀಠ. ಕ.ಅ.ಪೀಠ, ಕ.ವಿ.ವಿ. ಧಾರವಾಡ, ೧೯೮೯.

೪೦. ಬಸವಪುರಾಣ ಪರಂಪರೆ, ಸಂ. ಡಾ. ವೀರಣ್ಣ ರಾಜೂರ ೧೯೯೪, ಬಸವೇಶ್ವರ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೪೧. ಭಾರತೀಯ ಕಾವ್ಯ ಮೀಮಾಂಸೆ, ತೀ.ನಂ.ಶ್ರೀ., ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೯೦.

೪೨. ಬಸವಮಾರ್ಗ, ಸಂ-೧. (ಸಂ) ಎಂ.ಎಂ.ಕಲಬುರ್ಗಿ, ಶ್ರೀ.ಮ.ನಿ.ಪ್ರ. ಮುರುಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ, ಶ್ರೀ ಬಸವೇಶ್ವರ ಪೀಠ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ, ೧೯೮೦.

೪೩. ಬಸವರಾಜ ವಿಜಯಂ, (ಸಂ) ಡಾ. ಆರ್.ಸಿ.ಹಿರೇಮಠ, ಕ.ವಿ.ವಿ., ಧಾರವಾಡ, ೧೯೭೮.

೪೪. ಭೀಮಕವಿ ರಚಿತ ಬಸವಪುರಾಣ, (ಸಂ) ಡಾ. ಆರ್.ಸಿ.ಹಿರೇಮಠ, (ಪ್ರ) ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ, ೧೯೭೧.

೪೫. ಬಸವಾದಿ ಪ್ರಮಥರ ಭಕ್ತಿ ಚಳವಳಿಯ ಭೌತಿಕವಾದೀ ಅಧ್ಯಯನಗಳು, ಪಿ.ಎಸ್.ಪಾಟೀಲ್, (ಪ್ರ) ದಿ. ಬಂಥನಾಳ ಶ್ರೀ ವೃಷಭಲಿಂಗೇಶ್ವವರ ವಿದ್ಯಾವರ್ಧಕ ಟ್ರಸ್ಟ್, ಲಚ್ಯಾಣ, ಜಿಲ್ಲಾ ವಿಜಾಪುರ, ೧೯೯೦.

೪೬. ಭಾವ ಚಿಂತಾರತ್ನ, (ಸಂ) ಸಿ.ಮಹಾದೇವಪ್ಪ, ಪ್ರಿನ್ಸಿಪಾಲ್, ಪ್ರಥಮ ದರ್ಜೆ ಕಾಲೇಜ್, ಚಿಕ್ಕಮಗಳೂರು, ೧೯೬೩.

೪೭. ಮೋಹನ ತರಂಗಿಣಿ, (ಸಂ) ಡಾ. ಆರ್.ಸಿ.ಹಿರೇಮಠ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ, ೧೯೭೩.

೪೮. ಮಹಾಕವಿ ಹಂಪೆಯ ಹರಿಹರದೇವ ಕೃತ ನೂತನ ಪುರಾತನರ ರಗಳೆಗಳು, (ಸಂ) ಡಾ. ಎಮ್.ಎಸ್. ಸುಂಕಾಪುರ, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ, ೧೯೭೬.

೪೯. ಮಹಾಯಾತ್ರೆ, ಡಾ. ಆರ್.ಸಿ.ಹಿರೇಮಠ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೭.

೫೦. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, (ಸಂ) ಶ್ರೀ ಎಸ್.ಬಸಪ್ಪ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೦.

೫೧. ಲಿಂಗಾಯತ ಅಧ್ಯಯನಗಳು, ಡಾ. ಎಂ.ಚಿದಾನಂದಮೂರ್ತಿ, ವಾಗ್ದೇವಿ ಪುಸ್ತಕಗಳು, ಮೈಸೂರು, ೧೯೮೯.

೫೨. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಅ.ನ.ಕೃಷ್ಣರಾಯ, ಪ್ರದೀಪ ಪ್ರಕಾಶನ, ಬೆಂಗಳೂರು, ೧೯೮೧.

[illegible]

೫೩. ವೀರಶೈವ ಸಾಹಿತ್ಯ ಸಮೀಕ್ಷೆ, (ಸಂ) ಸದಾನಂದ ಕನವಳ್ಳಿ, ಸಿ.ಬಿ.ಕೆರಿಮನಿ, ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ, ೧೯೭೬.

೫೪. ವೀರಶೈವ ಸಾಹಿತ್ಯ ಮತ್ತು ಇತಿಹಾಸ, ಬಿ.ಶಿವಮೂರ್ತಿ ಶಾಸ್ತ್ರಿಗಳು, ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು, ೧೯೭೨.

೫೫. ವೀರಶೈವಾಮೃತ ಮಹಾಪುರಾಣ, (ಸಂ) ಆರ್.ಸಿ.ಹಿರೇಮಠ. ಎನ್.ಎಸ್.ಎಸ್. ಕಲ್ಯಾಣ ಕೇಂದ್ರ, ಬೆಂಗಳೂರು, ೧೯೯೦.

೫೬. ವಚನ ಪರಿಭಾಷಾಕೋಶ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩.

೫೭. ವೀರೇಶ ಚರಿತೆ, (ಸಂ) ಬಿ.ಶಿವಮೂರ್ತಿಶಾಸ್ತ್ರಿ, ಶಾರದಾ ಮಂದಿರ, ಮೈಸೂರು, ೧೯೬೬.

೫೮. ವಿಮರ್ಶೆಯ ಪೂರ್ವ-ಪಶ್ಚಿಮ, (ಸಂ) ಡಾ. ಜಿ.ಎಸ್.ಶಿವರುದ್ರಪ್ಪ, ತ.ವೆ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು, ೧೯೭೨.

೫೯. ವೀರಶೈವ ಪುರಾಣಗಳು ಒಂದು ಅಧ್ಯಯನ, ಡಾ. ಎಸ್.ವಿದ್ಯಾಶಂಕರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೮೨.

೬೦. ಮಿಮರ್ಶೆಯ ಮಾರ್ಗ, (ಪ್ರ.ಸಂ) ಡಾ. ಹಾ.ಮಾ.ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

೬೧. ಶಂಕರ ಕವಿ ವಿರಚಿತ ಚೋರಬಸವೇಶ್ವರ ಕಾವ್ಯ, (ಸಂ) ಎಂ.ಎಸ್.ಸುಂಕಾಪುರ, ಪಂ. ನಾಗಭೂಷಣ ಶಾಸ್ತ್ರಿಗಳವರು, ಧಾರವಾಡ, ಪ್ರಕಾಶಕರು ಶ್ರೀ.ನಿ.ಪ್ರ.ಸ್ವ.ಮಹಾಂತಸ್ವಾಮಿಗಳು, ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ, ೧೯೭೧.

೬೨. ಶಾಸನಗಳಲ್ಲಿ ಶಿವಶರಣರು, ಡಾ. ಕಲಬುರ್ಗಿ ಎಂ.ಎಂ., ವೀರಶೈವ ಅಧ್ಯಯನ ಸಂಸ್ಥೆ. ತೋಂಟದಾರ್ಯ ಮಠ, ಡಂಬಳ, ಗದಗ, ೧೯೭೮.

೬೩. ಶ್ರೀ ಬಸವೇಶ್ವರರು, ದೇ.ಜ.ಗೌ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು, ೨೦೦೦.

೬೪. ಶೂನ್ಯ ಸಂಪಾದನೆಯ ವಿವರಣಾತ್ಮಕ ಪರಿಚಯ, ಹೆಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು, ೧೯೮೦.

೬೫. ಷಡಕ್ಷರಿದೇವ ವಿರಚಿತ ರಾಜಶೇಖರ ವಿಳಾಸಂ, (ಸಂ) ಡಾ. ಆರ್.ಸಿ.ಹಿರೇಮಠ, ಡಾ. ಎಂ.ಎಸ್. ಸುಂಕಾಪುರ, ಕ.ವಿ.ವಿ., ಧಾರವಾಡ, ೧೯೬೮.

೬೬. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೩, ೪, ಬೆಂ. ವಿ.ವಿ., (ಸಂ) ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು, ೧೯೭೬, ೧೯೭೭.

೬೭. ಸರಳ ಶೂನ್ಯ ಸಂಪಾದನೆ, ಡಾ. ಎಲ್.ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, ೧೯೯೭.

೬೮. ಸಾಮಾನ್ಯನಿಗಾಗಿ ಸಾಹಿತ್ಯ ಚರಿತ್ರೆ, ಸಂಪುಟ-೬, ಷಟ್ಪದಿ ಸಾಹಿತ್ಯ, ಕೆ.ಮರುಳಸಿದ್ದಪ್ಪ, ಬೆಂಗಳೂರು, ವಿಶ್ವವಿದ್ಯಾಲಯ, ೧೯೭೫.

೬೯. ಸಾಹಿತ್ಯ ತತ್ವ, ಮೂಲ: ರೆನೆವೆಲಕ್ ಆಸ್ಟಿನ್ವಾರೇನ್, ಭಾಷಾಂತರ: ಸಿ.ಪಿ.ಕೆ., ಪ್ರಕಾಶಕರು ಜಿ.ಕಲ್ಲಯ್ಯ ಮತ್ತು ಸನ್ಸ್. ಬೆಂಗಳೂರು, ೧೯೯೪.

೭೦. ಸಮಾಲೋಕನ, ತೀ.ನಂ.ಶ್ರೀ., ೧೯೫೮.

೭೧. ಸಾಹಿತ್ಯ ವಿಮರ್ಶೆ, ಪ್ರಸಾರಾಂಗ, ಕ.ವಿ.ವಿ., ೧೯೭೬.

೭೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೪, ಭಾಗ-೨, ಪ್ರಸಾರಾಂಗ, ಜ್ಞಾನಭಾರತಿ, (ಪ್ರ.ಸಂ) ಡಾ. ಜಿ.ಎಸ್.ಶಿವರುದ್ರಪ್ಪ, (ಸಂ) ಡಾ. ರಂ.ಶ್ರೀ.ಮುಗಳಿ, ೧೯೭೮.

೭೩. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, ಸಂಪುಟ-೧೦, (ಸಂ) ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಂ.ಚಿದಾನಂದಮೂರ್ತಿ, ೧೯೭೫.

೭೪. ಸಾಹಿತ್ಯ ವಿಹಾರ, ಡಾ. ಬೆಟಗೇರಿ ಕೃಷ್ಣಶರ್ಮ, ಕ.ಸಾ.ಪ., ಬೆಂಗಳೂರು, ೧೯೮೧.

೭೫. ಸಿಂಗಿರಾಜ ಕವಿಕೃತ ಬಸವರಾಜ ಚರಿತ್ರ, (ಸಂ) ಎಚ್.ದೇವೀರಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೦.

೭೬. ಸಂಶೋಧನ ಪಥ, (ಸಂ) ಡಾ. ಆರ್ವಿಯಸ್. ಸುಂದರಂ, ಡಾ. ಎನ್.ಎಸ್.ತಾರಾನಾಥ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೨೦೦೬.

೭೭. ಹಳಗನ್ನಡ ಕವಿಕಾವ್ಯ ಮಹೋನ್ನತಿ, ಪಂಡಿತ ಮ.ಪ್ರ.ಪೂಜಾರರ ಆಯ್ದ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (ಸಂ) ಡಾ. ಶ್ರೀನಿವಾಸ ಹಾವನೂರ, ೨೦೦೦.

೭೮. ಹರಿಹರನ ಕೃತಿಗಳು, ಹಿರೇಮಲ್ಲೂರ ಈಶ್ವರನ್, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೭೧.

೭೯. ನವೋದಯಪೂರ್ವ ಕನ್ನಡ ಸಾಹಿತ್ಯ ಘಟ್ಟ ಲೇ. ಪ್ರೊ. ಎಲ್.ಎಸ್. ಶೇಷಗಿರಿರಾವ್, ಮೂಲ: ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು, (ಸಂ) ಬಸವರಾಜ ಸಾದರ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೦೨.

೮೦. ಪ್ರಭುಲಿಂಗ ಲೀಲೆಯಲ್ಲಿ ಚಿತ್ರಿತಳಾದ ಮಾಯೆ, ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ, ೨೫.೦೪.೦೪.

೮೧. ಮಾಧವಾಂಕ ಕಾವ್ಯ

ಹಸ್ತಪ್ರತಿ ಭಂಡಾರ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ